ಸುವರ್ಣ ಸಂಪುಟ

ಸಂಪಾದಕರು

ಪು ತಿ ನರಸಿಂಹಾಚಾರ್– ದೇ ಜವರೇಗೌಡ–ಚೆನ್ನವೀರ ಕಣವಿ

ಹಾ ಮಾ ನಾಯಕ–ಪ್ರಧುಶಂಕರ

ಹತ್ತೊಂಬತ್ತನೆಯ ಶತಮಾನದ ಕೊನೆಯಿಂದ ಸುಮಾರು ನೂರು ವರ್ಷಗಳ ಕಾಲದಲ್ಲಿ ಕನ್ನಡ ಭಾವಗೀತೆ ಎಷ್ಟು ಹುಲುಸಾಗಿ ಬೆಳೆದಿದೆ, ಎಷ್ಟು ಹಸರಗೊಂಡು ಬೆಳೆದಿದೆ ಎಂಬುದರ ಸೂಚನೆಯನ್ನು ಈ ಸಂಕಲನದಲ್ಲಿ ಕಾಣಬಹುದು. ಪೂರ್ವ ನವೋದಯ ದಲ್ಲಿ ಇಂಗ್ಲಿಷ್ ಕಾವ್ಯದ ಅನುಸರಣೆ, ಅನುಕರಣೆ ಹಾಗೂ ಅನುವಾದ ಇವುಗಳಿಂದ ಹೊಸಗನ್ನಡಕ್ಕೆ ಭಾವಗೀತೆ ಬಂದಿತು. ಸುಮಾರು ನಲವತ್ತು ವರ್ಷಗಳ ಕಾಲ ತಪ್ಪುಹೆಜ್ಜೆಯನ್ನಿಟ್ಟು ಅನಂತರ ಆಚಾರ್ಯ ಬಿ ಎಂ ಶ್ರೀ ಅವರು ಕೈಹಿಡಿದು ನಡೆಸಿದಾಗ ಸರಿಯಾದ ದಾರಿಯಲ್ಲಿ ದಿಟ್ಟ ಹೆಜ್ಜೆಗಳನ್ನಿಟ್ಟು ನಡೆದ ಕನ್ನಡ ಭಾವಗೀತೆ ಈಚಿನ ಐವತ್ತು ವರ್ಷಗಳಲ್ಲಿ ದಾಂಗುಡಿ ಯಿಟ್ಟಿದೆ; ತನ್ನ ಸ್ವಂತಿಕೆಯನ್ನು ಬೆಳೆಸಿಕೊಂಡು ಭಾವಗೀತೆಯ ಎಲ್ಲ ಪ್ರಕಾರಗಳಲ್ಲಿಯೂ ತನ್ನದೇ ವಿಶಿಷ್ಟ ಗುಣವನ್ನು ಸಾರಿದೆ. ವಸ್ತುವೈವಿಧ್ಯ, ಛಂದಸ್ಸಿನ ವಿಲಾಸ, ಭಾಷೆಯ ನವೀಕರಣ, ಅರ್ಥವ್ಯಾಪ್ತಿಯ ಹರಹು, ಪ್ರಾಸಾನುಪ್ರಾಸಗಳ ಹಚ್ಚ ಹೊಸ ಪ್ರಯೋಗ ಗಳು–ಇವೆಲ್ಲ ಗುಣಗಳಿಂದ ತುಂಬಿದ ಕನ್ನಡ ಭಾವಗೀತೆ ಇಂದು ಯಾವ ಭಾಷೆಯ ಭಾವಗೀತೆಗೂ ತಗ್ಗಿಲ್ಲದಂತೆ ತನ್ನ ಕಣಜವನ್ನು ತುಂಬಿಕೊಂಡಿದೆ.

ಬೆಲೆ : 35 ರೂಪಾಯಿ

ಸುವರ್ಣ ಸಂಪುಟ

ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ—88

ಸುವರ್ಣ ಸಂಪುಟ

(ಆಧುನಿಕ ಕನ್ನಡ ಭಾವಗೀತೆಗಳ ಸಂಕಲನ)

ಸಂಪಾದಕ ಮಂಡಲಿ:

ಪು ತಿ ನರಸಿಂಹಾಚಾರ್ ದೇ ಜವರೇಗೌಡ ಚನ್ನವೀರ ಕಣವಿ
ಹಾ ಮಾ ನಾಯಕ ಪ್ರಭುಶಂಕರ

ಮೈಸೂರು
1980

SUVARṆA SAMPUṬA—an anthology of lyrics in Kannada, Editorial Board: P. T. Narasimhachar, D. Javare Gowda, Chennavira Kanavi, H. M. Nayak, and Prabhu Shankara; Published to Commemorate the Golden Jubilee of the University of Mysore; first edition 1980, Demy Octavo pp. xii+574 Price Rs. 35-00

ಮೊದಲನೆಯ ಆವೃತ್ತಿ 1980

ಬೆಲೆ : 35 ರೂಪಾಯಿ

ಪ್ರಕಾಶಕರು : ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು-570012

ಮುದ್ರಣ :
ವೆಸ್ಲಿ ಪ್ರೆಸ್, ಮೈಸೂರು

ಅರಿಕೆ

ಇಂಗ್ಲಿಷ್ ಸಾಹಿತ್ಯದ ಸ್ವಲ್ಪಮಟ್ಟಿನ ಪರಿಚಯ ಇರುವವರು ಕೂಡ ಫ್ರಾನ್ಸಿಸ್ ಟರ್ನರ್ ಪಾಲ್‌ಗ್ರೇವ್ ಅವರು ಸಂಪಾದಿಸಿರುವ "ದಿ ಗೋಲ್ಡನ್ ಟ್ರೆಜರಿ" ಎನ್ನುವ ಕವನ ಸಂಕಲನವನ್ನು ನೋಡಿರುತ್ತಾರೆ. ಗೋಲನ್ ಟ್ರೆಜರಿ ಎಂದರೆ ಚಿನ್ನದ ಭಂಡಾರ. ನಿಜವಾಗಿಯೂ ಇಂಗ್ಲಿಷ್ ಭಾಷೆಯಲ್ಲಿ ರಚಿತವಾಗಿರುವ ಶ್ರೇಷ್ಠವಾದ ಅನೇಕ ಕವನಗಳನ್ನು ಒಳಗೊಂಡ ಚಿನ್ನದ ಸಂಪುಟ ಅದು. ಆ ಸಂಕಲನದಲ್ಲಿ 280 ಕವನಗಳಿವೆ. ಅನಾಮಧೇಯರೂ, ಅಪ್ರಸಿದ್ಧರೂ ಆದ ಕವಿಗಳಿಂದ ಮೊದಲುಗೊಂಡು ಸುಪ್ರಸಿದ್ಧ ಕವಿಗಳ ಕವನಗಳ ಪೈಕಿ ತಮಗೆ ಉತ್ತಮವೆಂದು ತೋರಿದ ಕವನಗಳನ್ನು ಪಾಲ್‌ಗ್ರೇವ್ ಆರಿಸಿ ಇಲ್ಲಿ ಸಂಕಲಿಸಿದ್ದಾರೆ. 16 ನೇ ಶತಮಾನದ ಮಧ್ಯಭಾಗದಿಂದ ಹಿಡಿದು 19 ನೇ ಶತಮಾನದ ಮಧ್ಯಭಾಗದವರೆಗೆ ಇದ್ದ ಅನೇಕ ಕವಿಗಳ ಕವಿತೆಗಳನ್ನು ಅವರು ಇಲ್ಲಿ ಆರಿಸಿಕೊಂಡಿದ್ದಾರೆ. ಪಾಲ್‌ಗ್ರೇವ್ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ 1885ರಿಂದ 1895 ರವರೆಗೆ ಹತ್ತು ವರ್ಷಗಳ ಕಾಲ ಕಾವ್ಯದ ಪ್ರಾಧ್ಯಾಪಕರಾಗಿದ್ದರು. ಅವರ ಅಭಿರುಚಿ ಶುದ್ಧವಾದದ್ದು. ದೀರ್ಘ ಕಥನ ಕವನಗಳನ್ನೂ ದೀರ್ಘ ವರ್ಣನೆಯುನ್ನುಳ್ಳ ಕವನಗಳನ್ನೂ ಕೇವಲ ನೀತಿಬೋಧಕವಾದ ಕವನಗಳನ್ನೂ ಉದ್ದೇಶಪೂರ್ವಕವಾಗಿ ಅವರು ಕೈಬಿಟ್ಟಿದ್ದಾರೆ. ಒಂದು ಮಾತಿನಲ್ಲಿ ಸಂಕ್ಷೇಪಿಸಿ ಹೇಳುವುದಾದರೆ ಶುದ್ಧ ಭಾವಗೀತೆಗಳನ್ನು ಅವರು ಆರಿಸಿಕೊಟ್ಟಿದ್ದಾರೆ. ಸುಮಾರು ನೂರು ವರ್ಷಗಳಿಂದಲೂ ಅವರ ಈ ಸಂಕಲನ ಕಾವ್ಯಪ್ರಿಯರಿಗೆ ರಸದ ಬುತ್ತಿಯಾಗಿದೆ.

ಈ ಶತಮಾನದಲ್ಲಿ ರಚಿತವಾದ ಕನ್ನಡ ಕವನಗಳ ಸುಗ್ಗಿಯನ್ನು ಕಂಡು ಹೆಮ್ಮೆಯನ್ನೂ, ಸಂತೋಷವನ್ನೂ ಪಡುತ್ತಿರುವ ಅನೇಕ ರಸಾಸ್ವಾದಕರ ಹೆಬ್ಬಯಕೆ, ಕನ್ನಡದಲ್ಲೂ ಇಂಥದೊಂದು 'ಚಿನ್ನದ ಸಂಪುಟ'ವನ್ನು ಕಾಣಬೇಕು ಎನ್ನುವುದು. ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ನೆನಪಿಗಾಗಿ ಪ್ರಸಾರಾಂಗವು 1966ನೆಯ ಇಸವಿಯಲ್ಲಿ ಇಂಥದೊಂದು ಯೋಜನೆಯನ್ನು ರೂಪಿಸಿತು. ಆಧುನಿಕ ಕನ್ನಡ ಸಾಹಿತ್ಯ ಅದರಲ್ಲೂ ಕಾವ್ಯ ಉತ್ಕರ್ಷವನ್ನು ಮುಟ್ಟುವುದರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ವಹಿಸಿದ ಪಾತ್ರವು ಅತ್ಯಂತ ಮಹತ್ವದ್ದು. ಆದ್ದರಿಂದ ಈ ವಿಶ್ವವಿದ್ಯಾನಿಲಯದ ಐವತ್ತನೆಯ ಹುಟ್ಟುಹಬ್ಬದ ಹೊತ್ತಿಗೆ ಇಂಥದೊಂದು ಯೋಜನೆಯನ್ನು ಕೈಗೊಂಡದ್ದು ತುಂಬ ಉಚಿತವಾಗಿದೆ, ಅರ್ಥವತ್ತಾಗಿದೆ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಪ್ರಸಿದ್ಧ ಕವಿಗಳೂ ವಿಮರ್ಶಕರೂ ಸಾಹಿತಿಗಳೂ ಇರುವ ಒಂದು ಸಂಪಾದಕ ಮಂಡಳಿಯು ರಚಿತವಾಯಿತು. ಆ ಸಮಿತಿಯು ಅನೇಕ ಸಲ ಸಭೆ ಸೇರಿ ದೀರ್ಘವಾಗಿ ಸಮಾಲೋಚನೆ ನಡೆಸಿ ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಸಂಕಲನವನ್ನು ಸಿದ್ಧಪಡಿಸಬೇಕೆಂದು ತೀರ್ಮಾನಿಸಿತು:

1. ಸಂಕಲನವು ಸಂಪೂರ್ಣವಾಗಿ ಪ್ರಾತಿನಿಧಿಕವಾಗಿರಬೇಕು.
2. 1900 ರಿಂದ 1966 ರವರೆಗೆ ರಚಿತವಾದ ಕವನಗಳನ್ನು ಈ ಸಂಕಲನವು ಒಳಗೊಳ್ಳಬೇಕು.
3. ಸಂಕಲನವು ಸುಮಾರು 500 ರಿಂದ 600 ಪುಟ ಇರಬೇಕು.
4. ಸಾಧ್ಯವಾದಷ್ಟೂ ಮಟ್ಟಿಗೆ ದೀರ್ಘ ಕವನಗಳನ್ನು ಬಿಡಬೇಕು.
5. ಅನುವಾದಿತ ಕವನಗಳನ್ನು ಸೇರಿಸಬೇಕಿಲ್ಲ.

ಹೆಚ್ಚು ಕಡಮೆ ಈ ಚೌಕಟ್ಟಿನೊಳಗೆ "ಸುವರ್ಣ ಸಂಪುಟ" ಸಿದ್ಧವಾಗಿದೆ. 119 ಜನ ಕವಿಗಳ ಒಟ್ಟು 361 ಕವನಗಳು ಇಲ್ಲಿ ಸೇರಿವೆ. ಸಂಪಾದಕರ ತಿಳುವಳಿಕೆಗೆ ಬಂದಂತೆ ಸುಮಾರಾಗಿ ಕನ್ನಡದ ಎಲ್ಲಾ ಕವಿಗಳಿಗೂ ಪ್ರಾತಿನಿಧ್ಯ ದೊರಕುವಂತೆ ನೋಡಿಕೊಳ್ಳಲಾಗಿದೆ. ತಮ್ಮ ಆಯ್ಕೆ ದೋಷ ದೂರವಾದದ್ದೆಂದೂ, ಆಯ್ಕೆ ಮಾಡಿರುವ ಎಲ್ಲಾ ಕವನಗಳೂ ಆಯಾ ಕವಿಗಳ ಅತ್ಯುತ್ತಮ ಕವನಗಳೆಂದೂ ಸಂಪಾದಕರು ಖಂಡಿತವಾಗಿಯೂ ಭಾವಿಸಿಲ್ಲ. ಇಂಥದೊಂದು ಮಹತ್ತಾದ ಉದ್ಯಮದಲ್ಲಿ ತೊಡಗುವಾಗ ಸಂಭವಿಸಬಹುದಾದ ಅನೇಕ ಬಗೆಯ ದೋಷಗಳು ಇಲ್ಲಿಯೂ ಆಗಿರುವುದು ಸಾಧ್ಯ. ಸುಮಾರು ಹದಿನಾಲ್ಕು ವರ್ಷಗಳಷ್ಟು ದೀರ್ಘಕಾಲ ಈ ಸಂಕಲನದ ಪ್ರಕಟಣೆ ವಿಳಂಬಗೊಂಡಿದೆ. ಅದಕ್ಕೆ ಕಾರಣಗಳನ್ನೆಲ್ಲ ವಿವರಿಸುವುದರಿಂದ ಯಾವ ಪ್ರಯೋಜನವೂ ಸಾಧಿತವಾಗುವುದಿಲ್ಲ. ಇಷ್ಟು ದೀರ್ಘಕಾಲ ಕಾಯಿಸಿದ್ದಕ್ಕಾಗಿ ಕವಿಗಳ ಮತ್ತು ಸಹೃದಯರ ಕ್ಷಮೆಯನ್ನು ಕೋರುತ್ತೇವೆ.

ಕನ್ನಡ ಕಾವ್ಯದ ಪರಂಪರೆಯಲ್ಲಿ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಇತ್ಯಾದಿ ಪಂಥಗಳು ಇರುವುದರ ಅರಿವು ಸಂಪಾದಕರಿಗೆ ಇದೆ. ಪ್ರಕೃತ ಸಂಕಲನಕ್ಕೆ ಕವನಗಳನ್ನು ಆರಿಸುವಾಗ ಕವನಗಳ ಶ್ರೇಷ್ಠತೆಯನ್ನು ಗಮನದಲ್ಲಿಟ್ಟುಕೊಳ್ಳಲಾಯಿತೇ ಹೊರತು ಅವು ಯಾವ ಪಂಥಕ್ಕೆ ಸೇರಿವೆ ಎಂಬುದನ್ನಲ್ಲ. ಹೀಗಾಗಿ ಎಲ್ಲ ಪಂಥಗಳ ಕವನಗಳೂ ಈ ಸಂಕಲನದಲ್ಲಿ ಸೇರಿರುವುದನ್ನು ಸಹೃದಯರು ಗಮನಿಸುತ್ತಾರೆಂದು ಆಶಿಸಲಾಗಿದೆ. ಆದರೆ ಬಂಡಾಯ ಮತ್ತು ದಲಿತ ಪಂಥಗಳು 1966 ರ ಈಚಿನವು ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

1966 ರಿಂದ ಈಚೆಗೆ ಕನ್ನಡ ಕಾವ್ಯಮಾರ್ಗದಲ್ಲಿ ಗಣನೀಯವಾದ ಬದಲಾವಣೆಗಳಾಗಿವೆ. ಆದರೆ ಕವನಗಳ ಆಯ್ಕೆ ಯಾವುದೋ ಒಂದು ವರ್ಷಕ್ಕೆ ಸೀಮಿತವಾಗಬೇಕಾಗಿ ಬಂದುದರಿಂದ ಈಚಿನ ಅನೇಕ ಮಹತ್ವಪೂರ್ಣವಾದ ಕವನಗಳು ಈ ಸಂಕಲನದಲ್ಲಿ ಸೇರಿಲ್ಲ. ಈ ಹದಿನಾಲ್ಕು ವರ್ಷಗಳಲ್ಲಿ ರಚಿತವಾದ ಕವನಗಳ ಪ್ರಾತಿನಿಧಿಕ ಸಂಕಲನವೊಂದು ಪ್ರಕಟವಾಗುವ ಅಗತ್ಯವಿದೆ. ಅಂಥದೊಂದು ಸಂಕಲನವನ್ನು ಹೊರತರುವ ಆಸೆ ಮತ್ತು ಯೋಜನೆ ಪ್ರಸಾರಾಂಗಕ್ಕಿದೆ.

ತಮ್ಮ ಕವನಗಳನ್ನು 'ಸುವರ್ಣ ಸಂಪುಟ'ದಲ್ಲಿ ಸೇರಿಸಲು ಅನುಮತಿ ನೀಡಿದ ಎಲ್ಲ ಕವಿಗಳಿಗೂ ನಾವು ಕೃತಜ್ಞರಾಗಿದ್ದೇವೆ. ಸಂಪಾದಕ ಮಂಡಳಿಯ ಸದಸ್ಯರು ಪಟ್ಟ

ರುವ ಶ್ರಮ ಅಪಾರವಾದದ್ದು. ಪ್ರತಿಯೊಬ್ಬರೂ ತಮಗೆ ವಹಿಸಿದ ಎಲ್ಲ ಕವಿಗಳ ಕವನ ಸಂಕಲನಗಳನ್ನೂ ಬಿಡಿಕವನಗಳನ್ನೂ ವಿಶದವಾಗಿ ನೋಡಿ ಸೂಕ್ತವಾದ ಕವನಗಳನ್ನು ಓದಿ ಒಪ್ಪಿಗೆ ನೀಡಿದ್ದಾರೆ. ಸಂಪಾದಕ ಮಂಡಲಿಯ ಗಣ್ಯರು ಅನೇಕ ಬಗೆಯ ಕೆಲಸಕಾರ್ಯ ಗಳಲ್ಲಿ ತೊಡಗಿರುವವರು. ಅವರು ಯಾವ ಶ್ರಮವನ್ನೂ ಲೆಕ್ಕಿಸದೆ ಈ ಸುವರ್ಣ ಸಂಪುಟವು ಅಚ್ಚುಕಟ್ಟಾಗಿ ಹೊರಬರಬೇಕು ಎಂಬ ಆಸೆಯಿಂದ ದುಡಿದಿದ್ದಾರೆ. ಅವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು. ಈ ಸಂಪುಟವನ್ನು ಇಷ್ಟು ಸುಂದರವಾಗಿ ಅಚ್ಚು ಮಾಡಿರುವ ಖ್ಯಾತ ಮುದ್ರಣಸಂಸ್ಥೆ ವೆಸ್ಲಿ ಪ್ರೆಸ್ ಅವರಿಗೂ, ಶ್ರೀಮಾನ್ ಎನ್. ಎಸ್. ನಾರಾಯಣರಾಯರಿಗೂ ಕಲಾವಿದ ಶ್ರೀ ಕೆ. ಎಲ್. ವೆಂಕಟೇಶ್ ಅವರಿಗೂ ವಂದನೆಗಳು.

ಇಂಥದೊಂದು ಸುವರ್ಣ ಸಂಪುಟವನ್ನು ತರಲು ಸ್ಫೂರ್ತಿ ನೀಡಿದ ಇಂಗ್ಲಿಷ್ ಕವನಗಳ 'ಚಿನ ದ ಭಂಡಾರ'ದ ಸಂಪಾದಕರಾದ ಪಾಲ್‌ಗ್ರೇವ್ ಅವರು ತಮ್ಮ ಪೀಠಿಕೆಯ ಕೊನೆಯಲ್ಲಿ ಹೇಳಿರುವ ಮಾತುಗಳೇ ಈ ಸಂಕಲನಕ್ಕೂ ಅನ್ವಯಿಸುತ್ತವೆ:

> ಎಳೆತನಕ್ಕೆ ಅನುಭವವನ್ನು, ಹಿರಿಹರಯಕ್ಕೆ ಶಾಂತಿಯನ್ನು, ಮುಪ್ಪಿಗೆ ತಾರುಣ್ಯವನ್ನು ನೀಡುವ ಆಜೋರ್ಸಿನ ಪುರಾಣ ಪ್ರಸಿದ್ಧವಾದ ಚಿಲುಮೆ ಯಂತೆ ದಿವ್ಯ ಶಕ್ತಿಯುಳ್ಳ, ಆದರೆ ಅದಕ್ಕಿಂತಲೂ ವೈವಿಧ್ಯಮಯವಾದ ಮಹಿಮೆಯುಳ್ಳ, ಕಾವ್ಯಕಲೆಯ ಮಂತ್ರಶಕ್ತಿಯು ಬಾಳಿನ ಒಂದೊಂದು ಹಂತಕ್ಕೂ ಅದದಕ್ಕೇ ತಕ್ಕುದಾದ ವರವನ್ನು ನೀಡಬಲ್ಲುದು. ಕಾವ್ಯ ದೇವಿಯು ನಮ್ಮನ್ನು ಈ ಲೋಕದ ಮಾರ್ಗಗಳಿಗಿಂತ ಉನ್ನತವೂ ಶ್ರೇಯಸ್ಕರವೂ ಆದ ಮಾರ್ಗಗಳಲ್ಲಿ ಮುನ್ನಡೆಸುತ್ತ, ನಿಸರ್ಗದ ಸಂದೇಶ ಗಳನ್ನು ನಮಗೆ ವಿವರಿಸುತ್ತ, 'ಹೊನ್ನಿಗಿಂತಲೂ ಹೊನ್ನಾದ' ನಿಧಿ ಗಳನ್ನು ನಮಗೆ ನೀಡುತ್ತಾಳೆ. ತನ್ನ ಸ್ವರೂಪ ಸೌಂದರ್ಯಗಳನ್ನು ಕುರಿತು ಅತ್ಯುತ್ತಮವಾಗಿ ಹೇಳಬಲ್ಲವಳು ಆಕೆಯೇ. ಈ ಸಂಕಲನ ಕಾರ್ಯವು ಯಶಸ್ವಿಯಾಗಿ ಕೈಗೂಡಿರುವ ಪಕ್ಷಕ್ಕೆ, ಆಕೆಯ ಸ್ವಂತವಾಣಿಯನ್ನು ಈ ಮುಂದಿನ ಪುಟಗಳಲ್ಲಿ ಕೇಳಬಹುದು.

ಕನ್ನಡದ ಕವಿಗೆ ಎಲ್ಲೆಲ್ಲಿ ಗೌರವ ಸಲ್ಲುವುದೋ, ಕನ್ನಡ ನುಡಿಯನ್ನು ಎಲ್ಲೆಲ್ಲಿ ಜನ ನುಡಿಯುತ್ತಾರೋ, ಅಲ್ಲೆಲ್ಲ ಆಕೆಯ ಈ ವಾಣಿಯನ್ನು ಕೇಳಲು ಅರ್ಹರಾದ ಶ್ರೋತೃ ಗಳು ದೊರಕಿಯೇ ತೀರುತ್ತಾರೆಂದು ಆಶಿಸಲಾಗಿದೆ.

ಪ್ರಸಾರಾಂಗ
ಮೈಸೂರು

ಪ್ರಭುಶಂಕರ
ನಿರ್ದೇಶಕ

ಪರಿವಿಡಿ

[ಪುಸ್ತಕದಲ್ಲಿ ಮುದ್ರಿತವಾಗಿರುವ ಕ್ರಮದಲ್ಲಿ ಕವಿಗಳ ಹೆಸರನ್ನೂ ಅವರ ಕವನಗಳು ಮುದ್ರಿತ ವಾಗಿರುವ ಪುಟಗಳನ್ನೂ ಇಲ್ಲಿ ನಮೂದಿಸಿದೆ. ಕವನಗಳ ಹೆಸರುಗಳ ಹಾಗೂ ಮೊದಲ ಸಾಲುಗಳ ಅಕಾರಾದಿಗಳನ್ನು ಅನುಬಂಧಗಳಲ್ಲಿ ನೋಡಬಹುದು.]

ಸುವರ್ಣ ಸಂಪುಟ

ಬಿ. ಎಂ. ಶ್ರೀಕಂಠಯ್ಯ

‘ ಕನ್ನಡತಾಯಿ ನೋಟ ’ದಿಂದ

(ವಿಜಯನಗರ ಸಾಮ್ರಾಜ್ಯದ ಆರುನೂರು ವರ್ಷದ ಹಬ್ಬದಲ್ಲಿ)

೧

ಹಿರಿಯರಿರ, ಕೆಳೆಯರಿರ, ಅಕ್ಕತಂಗಿಯರಾ, ಅಣ್ಣತಮ್ಮದಿರಾ,
ಒಸಗೆನುಡಿ ತಂದಿಹೆನು ನಾನೊಂದ, ತಾಯಿಂದ, ಸಿರಿಯ ತಾಯಿಂದ—
ಕೇಳುವಿರ ಕಿವಿಗೊಟ್ಟು, ತಾಳುವಿರ ಎದೆನೆಟ್ಟು, ತಾಳಿ ಬಾಳುವಿರಾ?
ಕಣ್ಣಾರ ಕಂಡೆನವಳನು—ಕಂಡು, ತಂದಿಹೆನು, ಕೇಳಿ.
ಅವಳೆನ್ನೊಳಾಡಿದುದನಾಡುವೆನು ನಿಮ್ಮಲ್ಲಿ, ಕೇಳಿ.

೨

ಬಳಸಿ ಬಂದೆನು ಸುತ್ತ ಕನ್ನಡದ ನಾಡುಗಳ ಸಿರಿಯ ನೋಡುತ್ತ,
ತಾಯುಡಿಯ ಹುಡಿಯ ತಲೆಗಾನುತ್ತ, ಹರಕೆಯ ಪವಿತ್ರ ಯಾತ್ರೆಯಲಿ.
ಏನು ಚೆಲುವಿನ ನಾಡು ! ಚೆಲುವು ಚೆಲ್ಲುವ ನಾಡು ! ಕನ್ನಡದ ನಾಡು !
ಏನು ಚಿನ್ನದ ನಾಡು ! ನಮ್ಮೊಲುಮೆಯಾ ನಾಡು ! ನಮ್ಮಿನಿಯ ನಾಡು !
ಕಾವೇರಿಯಿಂದಮಾ ಗೋದಾವರಿಯವರೆಗೆ ಚಾಚಿರುವ ನಾಡು !
ಬಳಸಿದೆನು, ಸುತ್ತಿದೆನು, ಕಣ್ದಣಿಯ ನೋಡಿದೆನು, ಕುಣಿದು ಹಾಡಿದೆನು:
ಕೆಳಗೆ ಬೆಳೆಹೊಲ ಕಪ್ಪು, ಮೇಲೆ ಬಾಂಬೊಲ ಕಪ್ಪು, ಬೆಟ್ಟಗಳು ಕಪ್ಪು,
ಕಾರ್ಮೋಡಗಳು ಕಪ್ಪು, ಹೊಳೆ ಕೆರೆಯ ಮಡು ಕಪ್ಪು, ತಾಯ ಕಾಲ್ ತೊಳೆವ
ಉಪ್ಪು ಕಡಲದು ಕಪ್ಪು, ಜನ ಕಪ್ಪು—ಏನೆಂದೆ? ತಪ್ಪು, ತಪ್ಪು !—
ಮೂಡ ಪಡುವಲು ತಿರುಗು, ಬಡಗ ತೆಂಕಲು ತಿರುಗು, ಕರ್ನಾಟದಲ್ಲಿ,
ನಿಮ್ಮೂರ ಹೆಣ್ಣುಗಳ ಕಣ್ನೋಟ, ತಣ್ನೋಟ ಕರ್ಪು, ಬಲು ಕರ್ಪು !
ಕರ್ಪೊ, ಬೆಳ್ಪೋ ಕಾಣೆ, ಕನ್ನಡದ ಕಣ್ಣೋಟ—ಕೂರ್ಪು, ಆರ್ಪು !
ಓ ತಾಯೆ, ಕನ್ನಡದ ಪೆರ್ತಾಯೆ, ನಮ್ಮಮ್ಮ, ದೇವಿ, ಸಮ್ರಾಜ್ಞಿ
ಸುಳಿಗುರುಳು, ನಗೆಗಣ್ಣು ಏನು ಕಪ್ಪೇ ನಿನಗೆ—ಮುತ್ತಿಡುವ ಕಪ್ಪು !
ನಿನ್ನ ಕಲಿಗಳ ಕೂರ್ಪು, ಕೆಚ್ಚೆದೆಯ ಕಟ್ಟಾಳ ಕೂರ್ಪು, ನೆಚ್ಚಾರ್ಪು,
ಆರು ತಡೆಯಲುಬಹುದು—ಪುಲಕೇಶಿ ಹರ್ಷರೇ ಹೊಯ್ದು ಸಾರುವರು.
ಕರ್ಪಿರಲಿ, ಕೂರ್ಪಿರಲಿ, ನಿನ್ನ ಬೆಳ್ಪನು ಹೇಳು—ಕೂರಸಿಯ ಮಿಂಚು,
ಕಾರ್ಮಿಂಚು, ಪೆಣ್ಮಣಿಗಳಾ ಕಣ್ಣ ನುಣ್ಮಿಂಚು, ಅರಿದರಾ ಕೂರ್ನೋಟ ಮಿಂಚು !
ಮೆಲ್ಲ ಮೆಲ್ಲನೆ ತೇಲಿ, ಆಳದಲಿ ಮಲೆಯೆಡೆಯೊಳಲುಗದೆಯೆ ಅಲುಗಿ,

ಕಡಿದು ಬಂಡೆಗೆ ಬಂದು, ನೆಗೆದು ಬೆಳ್ಳಂಗೆಡೆವ ನೀರ್‌ಬೀಳು ಬೆಳ್ಪು !
ಕಡೆದ ನೊರೆ, ಚಿಗಿವ ನೊರೆ, ತೂರು ನೊರೆ, ಕುದಿವ ನೊರೆ, ಬೆಳ್ಪಿನೊಳ್ ಬೆಳ್ಪು !
ಆ ಬೆಳ್ಪು, ಆ ತೆಳ್ಪು, ಆ ಮೆಲ್ಪು—ನಿನ್ನ ಮಕ್ಕಳ ಬಾಳಿನೊಳ್ಪು ;
ನೀರ್‌ಬೀಳ ಬೆಳ್ನೊರೆಯ ಬಿಸಿಲ ಬೆಳ್ದಿಂಗಳಾ ಮಳೆಬಿಲ್ಲ ತಳ್ಪು !
ಬೆಳ್ಗೊಳವೊ, ತೀರ್ಥಗಳೊ, ಧರ್ಮಧರ್ಮದ ತಿರುಳೊ, ಪಾಡುವರ ಪುರುಳೋ,
ಒಳ್ಗನ್ನಡದ ಕಲೆಯೊ, ಕುಸುರಿಗೆಲಸದ ಸಿಲೆಯೊ, ಆ ನಯುವೊ, ಮೆರುಗೋ !
ನಿನ್ನ ಚಿಣ್ಣರ ಸೊಬಗೊ, ಬೆಡಗೊ, ಮೆಲ್ಲೆದೆ ತಣ್ಪೊ, ಕೊಡುಗೈಯ ಬಿಣ್ಪೋ !
ಓ ಎನ್ನ ತಾಯಿ, ಕನ್ನಡ ತಾಯಿ, ನಮ್ಮವ್ವ, ದೇವಿ, ಸಮ್ರಾಜ್ಞಿ,
ನಿನ್ನನರಸುತ ಸುಳಿವ, ನೋಂಪಿಯೆನೆ ನಿನ್ನೊಲುಮೆನಾಡನೊಳಕೊಳುವ,
ನಿನ್ನ ಚೆಲುವನು ಸವಿವ ಮಗುವಾರು ತಣಿಯುದನು, ಹಾಡಿ ಕುಣಿಯುದನು,
        ಭಕ್ತಿಯಲಿ ತಲೆದೂಗಿ ಬಾಗಿ ಮಣಿಯುದನು !

೩

        ಚೆಲುವು ಕಣೆ ಕಾರ್ವಾರವೆದೆ ತುಂಬಿ, ಗೋಕರ್ಣದಲಿ ಮಿಂದು, ಸಂದು,
ಉಡುಪಿಯಲಿ ಕೃಷ್ಣಂಗೆ ಕೈಮುಗಿದು, ಮಂಗಳೂರಿನ ಹಿರಿಯ ನಂಟರಲಿ ನಿಂದು,
ಚಾರ್ಮಾಡಿ ಘಾಟಿಯನು ಬಳಬಳಸಿ ಮೇಲೇರಿ ಬಂದವನು ಕಂಡೆ, ಕಂಡೆ !
ಮೇಲೆ ತಿಳಿಯಾಕಾಶ, ಸುತ್ತಲೂ ಬೆಟ್ಟಸಾಲ್ ತೋಳ ತೆಕ್ಕೆಯಲಿ
ಕಣಿವೆಯೇರುವ ಕಾಡು, ದಟ್ಟಡವಿ, ಒಮ್ಮೊಮ್ಮೆ ಹಕ್ಕಿಗಳ ಹಾಡು,
ಮರದ ಮರೆಯಲಿ ದುಮುಕುವಬ್ಬಿಗಳ ಹಬ್ಬಿ ಹರಡಿದ ಕೂಗು ಕೊರಲು !
ಕಂಡೆನಾಕೆಯನಲ್ಲಿ, ದೂರದಲಿ, ಕಣ್‌ಪುಣ್ಯ ಮಿಂಚಿ ಮರೆಯಾಯ್ತು !
ಕನ್ನಡದ ಆ ನೋಟ, ದೇವಿಯಾ ದರ್ಶನಂ ಪೊಳೆದು ಬಯಲಾಯ್ತು !
ಎವೆ ಹೊತ್ತಿನಾ ನೋಟ, ಸವಿನೋಟ, ಸವೆಯದೆದೆಚಿಮ್ಮುತಿಹುದಿನ್ನೂ !
ಅಮೃತಲೋಕದ ಮಾತೆ, ಅಳಿಯದಳ್, ಬಾನ್‌ಬಾಳ ಪೆರ್ಮೆಗಳ ತಾಯಿ,
ತಲೆಯಲ್ಲಿ ಪೊನ್ನಮುಡಿ, ಪದಿದರಿಲ ಪೆಂಪು, ಬೇಡ್ವವರೆಯ ಪೊಂಗಯ್ !
ಸುತ್ತಲುಂ ಪೊನ್ನಾಡ ಕನ್ನಡದ ಪೆರ್ಮನಡಿಗಳ್, ಸಾವನೊದೆದು ಬೆಳಗಿ,
ಕನ್ನಡದ ಮಕ್ಕಳ್ಗೆ ಕನ್ನಡದ ಪಾಲೆರೆದು, ಬಾಳ್ಗೆ ಬಾಳ್ ಪೊಯ್ದು,
ಬಾಳ್ವವರು ಮೆರೆವವರು,—ಪೆರ್‌ನೋಟ ! ಪಿರಿಯ ತಾಯ್ ಪಿರಿಯ ಮಕ್ಕಳ್ !
ಕಪ್ಪು ಹೆಪ್ಪಿನ ಕುರುಳ ಕಮುಗಿಲ ಬಸಿರಿಂದ ತೊಟ್ಟನೊಡೆಹೊಮ್ಮಿ,
ಬಾನ ಈ ಕರೆಯಿಂದ ಆ ಕರೆಗೆ ಚಿಮ್ಮಿ ಒಡನಡಗುವುದೆ ತೇಜಂ,
ಆ ತೇಜದುರಿಯಂತೆ ಕಣ್ಣುಳ್ಕಿ, ಹೊರಗಡಗಿ, ಒಳಗಿರ್ಪುದಿನ್ನುಂ.
ಇದೊ ಬಂದೆನೀ ಹಾಳು ಹಂಪೆಗಿಂದರಸುತ್ತ,—ಒಳಗಿರ್ಪುದಿನ್ನುಂ—
ಒಳಗಿದ್ದು ಹೊರಗಣ್ಗೆ ಕಾಣಿಪುದು ಮತ್ತೊಮ್ಮೆ ಆ ತಾಯ ನೋಟಂ.
ತುಂಗಭದ್ರೆಯ ತಡಿಯ ಚೆದರಿರುವ ಮೊರಡಿಗಳ ಕೊರಕಲಿನ ಬಿಸಿಲ
ಬೇಗುದಿಯ ಬಿರುಕಿನಲಿ ಮುಳ್ಳೆಡೆಯ ಕಲ್ಲುಹೂಪಿಡಿವರೆಯ ಮೇಲೆ.
ಕುಳಿತಿದ್ದಳಾ ತಾಯಿ, ಕೈಮೇಲೆ ತಲೆಯೂರಿ, ಅಳಲಿನಾಳದಲಿ !—

"ಯಾರವ್ವ, ನೀ ತಾಯಿ? ಏತಕಿಂತೊಬ್ಬಳೇ ಕುಳಿತೆ ಕಾಡಿನಲಿ?
ಏಕೆ ಮೊಗ ಬಾಡಿಹುದು, ಕಂದಿಹುದು, ನೊಂದಿಹುದು, ಕಾಂತಿಗುಂದಿಹುದು?"
ಕಂಬನಿಗಳೂರುತಿಹ, ಕಳವಳದ, ಕೂರ್ಮೆ ನಡುಗಿಪ ನುಡಿಯ ಕೇಳಿ,
ಕತ್ತೆತ್ತಿ, ಪಳಮೆಯಾಳದ ಕಣ್ಣನೆನ್ನ ಕಣ್ಣಲಿ ನೆಟ್ಟು, ಕಯ್ಯ
ಕುಳ್ಳಿರಲು ಸನ್ನೆಗೈದೀ ಪರಿಯೊಳಾಡಿದಳು, ತೋಡಿದಳು ತೊಳಲ—
ಕಣ್ಣಾರ ಕಂಡುದನು, ತಾಯೆನ್ನೊಳಾಡಿದುದನಾಡುವೆನು, ಕೇಳಿ.
ಕಿವಿಗೊಟ್ಟು ಕೇಳಿ:
ಎದೆಗೊಟ್ಟು ಕೇಳಿ:
ಏಳಿ, ಎಚ್ಚರವಾಗಿ, ಅರಳಿ ಬಾಳಿ!

೪

"ಕೇಳಣ್ಣ, ನಾನೊಬ್ಬ ಹಳೆಯ ಮುತ್ತೈದೆ—ಹಿರಿದಾಗಿ ಬಾಳಿದವಳೊಮ್ಮೆ:
ಈಗ ಬಡತನ, ಬಡವೆ, ಬಡವಾದೆ: ಬಡವಾದ ಮಕ್ಕಳನು ನೋಡಿ,
ಬತ್ತಿ, ಮತ್ತಿಮ್ಮಡಿಯ ಸೊರಗಿನಲಿ ಬಡವಾದೆ—ಸಾವಿಲ್ಲ ನನಗೆ
ಸಾವಿಲ್ಲ—ಸಾಯುತಿಹೆ: ಹೊಸ ಮಳೆಗಳಾಗಿ, ನೆಲ ಹೊಸ ಹೊನಲು ಹರಿದು,
ಹೊಸ ಹಮ್ಮು ಹಮ್ಮೆತ್ತ, ಎಲ್ಲರೂ ನನ್ನಕ್ಕತಂಗಿಯರು ಚಿಗುರಿ
ಎಲ್ಲರೂ ಚೆಲುವಾದರೆಲ್ಲರೂ ಚಿನ್ನವಾದರು—ನೋಡು, ನೋಡು—
ಆ ಕಡೆಗೆ, ಈ ಕಡೆಗೆ ತೂಗುವರು ತೊನೆಯುವರು, ಆ ಪೊಂಕ, ಬಿಂಕ!
ಪೇರೊಕ್ಕಲಾಗಿ ಪಾಡುವರು;
ಅವರ ಮಕ್ಕಳು ಬೆಳೆದು ಕಳೆಗೂಡಿ ಮನೆ ಬೆಳಗಿ ಹಬ್ಬಮಾಡುವರು—
ತಾವ್ ಮೊದಲು ಬದುಕಿ,
ತಾಯ್ ಮೊದಲು ಬದುಕಿ,
ಹೆರರ ಹೊರೆಗಳನಿಳಿಸೆ, ಹೆರರ ಸೆರೆಗಳ ಬಿಡಿಸೆ ಕಯ್ಯ ನೀಡುವರು.
ಆ ಸಯ್ಪು, ಆ ಪುಣ್ಯ ನನಗಿಲ್ಲ: ನನ್ನ ಮಕ್ಕಳಿಗಿಲ್ಲ ಹಬ್ಬ—
ನನ್ನ ಮಕ್ಕಳಿಗಿಲ್ಲ ಹಬ್ಬ:
ಮಳೆ, ಸುಗ್ಗಿ: ಬೆಳೆ, ಬೆಳಕು; ಹಾಡು, ಹಸೆ; ಕೂಗಾಟ, ಕುಣಿದಾಟ, ಪಾಟ;
ಒಲೆದಾಟ, ನಲಿದಾಟ, ಒಲುಮೆ ಬೀರಾಟ,
ನನ್ನ ಮಕ್ಕಳಿಗಿಲ್ಲ—ನನಗಿಲ್ಲ—ಬಾಳ್ಗೆ ಆ ಅಕ್ಕತಂಗಿಯರು!
ನಮಗಿಲ್ಲ ಬಾಳು.
ಎಲ್ಲರೂ ಬಾಳುವೆಡೆ ನಮಗೆ ಸಾವೆ?
ಎಲ್ಲರೂ ನಲಿವ ಕಡೆ ನಮಗೆ ನೋವೆ?
ಏನು ಕವಿಯಿತೊ ಮಂಕು, ಮಕ್ಕಳಿಗೆ! ಯಾರೆರಚಿದರೊ ಬೂದಿ, ಕಾಣೆ,
ನನ್ನನೊಲ್ಲರು ನನ್ನ ಮಕ್ಕಳೇ! ತಾವ್ ಬಾಳಿ, ತಾಯ ಬಾಳಿಸರು.
ಹೆರರ ನುಡಿ, ಹೆರರ ನಡೆ,—ಹೆರರ ಕೂಗೇ ಕೂಗು; ಹೆರರದೇ ಹೆಮ್ಮೆ!
ನನ್ನ ಮನೆ ಹಾಳು!
ನನ್ನ ನುಡಿ ಬೀಳು!

ನನ್ನ ನಾಡಿನಲಿರುಳು: ನನ್ನ ತೋಟವನಗೆವ, ತೆಂಗಡಕೆಯಿಡುವ,
ತಾವರೆಯ ಕಾಪಿಡುವ, ಮೊಲ್ಲೆ ಮಲ್ಲಿಗೆ ನೆಡುವ, ಆನಂದ ಕೊಡುವ
ಮಕ್ಕಳೆಲ್ಲಿಹರೆನಗೆ—ಹೆರರೊತ್ತೆ ಗಡಿಬಿಡುತ ಹದುಗುತ್ತ, ನುಗ್ಗೆ ಕುಗ್ಗುತ್ತ
ಹೆರರ ಕೈ ಕಾಯುತ್ತ, ಸಾಯದೆಯೆ ಬದುಕದೆಯೆ ಬಾಳ ನೂಕುವೆನು.

೫

ಅರಿದೆನರಿದೆನು ಮಾತನಾಡುವಳದಾರೆಂದು: ಕನ್ನಡದ ತಾಯಿ!
ನಮ್ಮ ಕನ್ನಡ ತಾಯಿ, ತನ್ನ ಹೊಂಬಸಿರಿಂದ ನಮ್ಮನ್ನು ತಂದು,
ನಾವು ಬಿಟ್ಟೊಡೆ ಬಿಡದೆ, ಹಂಬಲಿಸಿ, ಮರುಹುಟ್ಟ ಹಾರೈಸುತಿಹಳು—
ನಾನೆಂದೆ, ಅಳಲನಾರಿಸಬಯಸಿ—"ಏಕಮ್ಮ, ಇನಿಸೊಂದು ಕೊರಗು?
ಬೇಡಮ್ಮ ಮಕ್ಕಳಲಿ ಇನಿಸೊಂದು ಕಡುಮುನಿಸು—ಬಾರಮ್ಮ, ಹರಸು.
ನಿನ್ನ ನಾಡಿನೊಳದೆಕೊ ಬೆಳಕು ಮೂಡಿಹುದು—ಜೀವ ಕೂಡಿಹುದು.
ನಿನ್ನ ಮಕ್ಕಳು ನಿದ್ದೆಗಳೆದೆದ್ದ ಸಿಂಹದಂತೇಳುತ್ತ, ಮೊಳಗಿ,
ಕಣಕಿಳಿದು ಪಂಪ ನೃಪತುಂಗರಾ ಮಾತುಗಳು ದಿಟವೆನಿಸುತಿಹರು.
ಸೆರೆಯನೊಕ್ಕಡೆಗೊಗೆದು, ಬಿಡುಗಡೆಯ ಕೈಕೊಂಡು. ಹಳ ನೆನಪು ನೆನೆದು,
ಹೊಸ ಕಾಣ್ಕೆಗಳ ಕಂಡು, ಸಾಮ್ರಾಜ್ಯಗಳ ಮತ್ತೆ ಕಟ್ಟುತಿಹರು.
ನಿನ್ನ ನಾಡೊಂದಾಗಿ, ನಿನ್ನ ನುಡಿ ಮೇಲಾಗಿ, ಮನೆ ಮಕ್ಕಳೆಲ್ಲ
ಪೇರೊಕ್ಕಲಾಗಿ ಪಾಡುವರು!
ತಾಯ್ ಬದುಕಿ, ತಾವ್ ಬದುಕಿ, ಹೆರರ ಬದುಕಿಪರು!
ಹಾಳು ಹಂಪೆಯ ನಡುವೆ, ನಡುಕಟ್ಟಿ ಮತ್ತೊಮ್ಮೆ ಮುಡಿಪಾಗಿ ತಾಯ್ಗೆ

ಕನ್ನಡಿಗರ ತಾಯಿ

ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ !
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ !
ನಮ್ಮ ತಪ್ಪನೆನಿತೊ ತಾಳ್ವೆ,
ಅಕ್ಕರೆಯಿಂದೆಮ್ಮನಾಳ್ವೆ;
ನೀನೆ ಕಣಾ ನಮ್ಮ ಬಾಳ್ವೆ,
ನಿನ್ನ ಮರೆಯಲಮ್ಮೆವು—
ತನು ಕನ್ನಡ, ಮನ ಕನ್ನಡ, ಧನ ಕನ್ನಡವೆಮ್ಮವು

ಹಣ್ಣನೀವ ಕಾಯನೀವ ಪರಿಪರಿಯ ಮರಂಗಳೊ,
ಪತ್ರಮೀವ ಪುಷ್ಪಮೀವ ಲತೆಯ ತರತರಂಗಳೊ,
ಅಲೆಯ ಮಲೆಯ ಗಾಳಿಯೊ,
ಖಗಮೃಗೋರಗಾಳಿಯೊ,
ನದಿನಗರ ನಗಾಳಿಯೊ !
ಇಲ್ಲಿಲ್ಲದುದುಳಿದುದೆ ?—
ಜೇನು ಸುರಿವ ಹಾಲು ಹರಿವ ದಿವಂ ಭೂಮಿಗಿಳಿದುದೆ ?

ಬುಗರಿ ಈಯೆ ಶಬರಿ ಕಾಯೆ ರಾಮನಲ್ಲಿ ಬಂದನೆ ?
ಕನ್ನಡ ದಳ ಕೂಡಿಸಿ ಖಳ ದಶಾಸ್ಯನಂ ಕೊಂದನೆ ?
ಪಾಂಡವರಜ್ಞಾತಮಿದ್ದ,
ವಲಲಂ ಕೀಚಕನ ಗೆದ್ದ,
ಕುರುಕುಲ ಮುಂಗದನಮೆದ್ದ
ನಾಡು ನೋಡಿದಲ್ಲವೆ ?
ನಂದನಂದನನಿಲ್ಲಿಂದ ಸಂಧಿಗಯ್ದುದಲ್ಲವೇ ?

ಶಕವಿಜೇತನಮರ ಶಾತವಾಹನಾಖ್ಯನೀ ಶಕಂ
ನಿನ್ನೊಳೆಂದು ತೊಡಗಿ ಸಂದುದರ್ಧ ಭರತದೇಶಕಂ !
ಚಳುಕ್ಯ ರಾಷ್ಟ್ರಕೂಟರೆಲ್ಲಿ,
ಗಂಗರಾ ಕದಂಬರೆಲ್ಲಿ,
ಹೊಯ್ಸಳ ಕಳಚುರ್ಯರೆಲ್ಲಿ,

ವಿಜಯನಗರ ಭೂಪರು
ಆಳ್ದರಿಲ್ಲಿಯಲ್ಲದೆಲ್ಲಿ ತಾಯೆ ಪೇಣಲೂಪರು?

ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ,
ಮಧ್ವಯತಿಯೆ ಬಸವಪತಿಯೆ ಮುಖ್ಯ ಮತಾಚಾರ್ಯರ,
ಶರ್ವ ಪಂಪ ರನ್ನರ,
ಲಕ್ಷ್ಮೀಪತಿ ಜನ್ನರ,
ಷಡಕ್ಷರಿ ಮುದ್ದಣ್ಣರ,
ಪುರಂದರ ವರೇಣ್ಯರ,
ತಾಯೆ, ನಿನ್ನ ಬಸಿರೆ ಹೊನ್ನ ಗನಿ ವಿದ್ಯಾರಣ್ಯರ!

ಹಳೆಯ ಬೀಡ ಬೇಲನಾಡ ಮಾಡಮೆನಿತೊ ಸುಂದರಂ!
ಬಿಳಿಯ ಕೊಳದ ಕಾರಕಳದ ನಿಡುಕರೆನಿತೊ ಬಂಧುರಂ!
ಇಲ್ಲಿಲ್ಲದ ಶಿಲ್ಪವಿಲ್ಲ;
ನಿನ್ನ ಕಲ್ಲೆ ನುಡಿವುದಲ್ಲ!
ಹಿಂಗತೆಯಿನಿವಾಲ ಸೊಲ್ಲ
ನೆಮ್ಮ ತೃಷೆಗೆ ದಕ್ಕಿಸು—
ಹೊಸತು ಕಿನ್ನರಿಯುಲಿ ನಿನ್ನ ಹಳೆಯ ಹಾಡನುಕ್ಕಿಸು!

ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ
ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ!
ಕನ್ನಡ ಕಸ್ತೂರಿಯನ್ನ
ಹೊಸತುಸಿರಿಂ ತೀಡದನ್ನ
ಸುರಭಿ ಎಲ್ಲಿ? ನೀನದನ್ನ
ನವಶಕ್ತಿಯಿನೆಬ್ಬಿಸು—
ಹೊಸ ಸುಗಂಧದೊಸಗೆಯಿಂದ ಜಗದಿ ಹೆಸರ ಹಬ್ಬಿಸು!

ನಿನ್ನ ಪಡೆಯ ಕತೆಯ ಕಡೆಯ ನುಡಿಯೆ ತಾಳಿಕೋಟೆಯು?
ಕಡಲಿನೊರತೆಗೊಳವೆ ಕೊರತೆ? ಬತ್ತದು ನಿನ್ನೂಟೆಯು!
ಸೋಲ ಗೆಲ್ಲವಾರಿಗಿಲ್ಲ?
ಸೋತು ನೀನೆ ಗೆದ್ದಿಯಲ್ಲ?
ನಿನ್ನನಳಿವು ತಟ್ಟಲೊಲ್ಲ!—
ತಾಳಿಕೋಟೆ ಸಾಸಿರಂ
ಬಾಹುಬಲದಿ ಮನೋಬಲದಿ ತಾಯೆ ಗೆಲುವೆ ಭಾಸುರಂ!

ಕುಗ್ಗದಂತೆ ಹಿಗ್ಗಿಪಂತೆ ನಿನ್ನ ಹೆಸರ ಟೆಕ್ಕೆಯುಂ,
ನೀಗದಂತೆ ಸಾಗಿಪಂತೆ ನಿನ್ನ ನುಡಿಯ ಢಕ್ಕೆಯು-
ನಮ್ಮೆದೆಯುಂ ತಾಯೆ ಬಲಿಸು,
ಎಲ್ಲರ ಬಾಯಲ್ಲಿ ನೆಲಸು,
ನಮ್ಮ ಮನಮನೊಂದೆ ಕಲಸು !
ಇದನೊಂದನೆ ಕೋರುವೆ—
ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ? ೬೩

ಯೇಸು—ಕೃಷ್ಣ

[ರಾಗ ಬೇಹಾಗ—ತಾಳ ತ್ರಿವಟ]

ಶ್ರೀ ಹರಿಯೇ ಬಳಲಿದೆ ಎಂತು
ನಮಗಾಗಿ ನರಲೀಲೆಯನಾಂತು ! ॥ ಪಲ್ಲ ॥

ಶುಭಜನನಕೆ ಸೆರೆಗತ್ತಲೆಯೊ ಹಿತ
ವಾದುದು ಮಂದೆಯ ಗೋದಲೆಯೊ?
ಮಿಸರಕೆ ನುಸುಳಲು ತಾಯುಡಿಯೊಂಟೆಯೊ?
ಯಮುನೆಯೀಸೆ ತಂದೆಯ ತಲೆಯೊ? ॥ ೧ ॥

ಕೊಳಲ ಸೂಸಿ ಹಸು ಮೇಸಿದೆ, ಕೊಡತಿಯ
ಬಡಿದು ಬಡಗಿಯಾ ಪಡಿದುಡಿದೆ;
ನಾಡನುಳಿದು ನಡುಗಡಲೊಳಗಡಗಿದೆ,
ಮುಡಿಯಿಡಲೆಡೆವಡೆಯದೆ ನಡೆದೆ. ॥ ೨ ॥

ರಾಧೆ ಬಿಗಿದ ಭುಜಬಂಧದ ಬಂದಿಯೊ?
ಮರಿಯಳ ಮುತ್ತುಗಳಂದುಗವೊ?
ಕುರುರಾಯನ ಹೆಡಮುರಿ ಕೇಯೂರವೊ?
ಮುಳ್ಳುಮುಕುಟ ಮುಡಿಸಿದ ಮೊಗವೊ? ॥ ೩ ॥

ಬಿಲ್ಲಿನ ಹಬ್ಬದ ಗೆಲ್ಲಿನ ಪಯಣಕೆ
ಮರಿಗತ್ತೆಯೆಂ ಮೆರತದ ರಥವೆ?
ಯಶೋದನ ಮುತ್ತಿನ ಸ್ವಾಗತವೆ? ಚೈ
ದ್ಯನ ಬಯ್ಯು ಸೇಸೆಯವಭೃಥವೆ? ॥ ೪ ॥

ದುರ್ಯೋಧನನಿಗೆ ಚಿತ್ರಶಾಲೆಯು
ಮನೆಗೆಲಸದಿ ಬಲು ಬೇಸರವೆ?
ಭೀಷ್ಮನ ಶರದಿಂ ಸೋರ್ವೆದೆಯೊರಸದೆ
ಶಿಷ್ಯರ ಕಾಲ್ತೊಳೆವವಸರವೆ? ॥ ೫ ॥

ನಲವತ್ತು ದಿನದುಪೋಷ್ಯಕೆ ಹಿಡಿ
ಯವಲಕ್ಕಿಯು ಪಾರಣೆ ಸಾಕೆ?
ವಿದುರನ ಕುಡುತೆಯು ಕುಡಿದ ತೇಗಿಗೆ ಸ
ಮಾರ್ಯಳು ಮೊಗದಾ ಜಲವೇಕೆ? ॥ ೬ ॥

ಹವೋನಲಿ ರೂಪಾಂತರವಾಂತಗೆ
ಮೂವತ್ತು ಬೆಳ್ಳಿಗಳ ಬೆಲೆಯೆ?
ಪಾರ್ಥನೀಕ್ಷಿಸಿದ ವಿಶ್ವಶರೀರಿಗೆ
ಜೋಡೆಲೆ ತುಳಸಿಯನಿತೆ ತೊಲೆಯೆ? ॥ ೭ ॥

ಪಾಪದ ಸಾಲಕೆ ನೀರೆರೆದುದ ನಿಜ
ನೆತ್ತರಿಂದ ನಿರವಿಪ ತೆರವೆ?
ನಂಬಿದರೂಳಿಗಿ ಎಂದು ಸಾರೆ, ಬಿಳಿ
ಕಂದುರೆಯು ಕಿಳಿರಿನ ಡಂಗುರವೆ? ॥ ೮ ॥

ಕಳ್ಳನೆಂಬ ಹಳಿ ಮೆರೆಸಲೇಂ ನೀ
ಕಳ್ಳರ ನಡು ತೂಗಾಡಿದೆಯಾ?
ಬೆರಳಲಿ ಬೇಡನ ಬಾಣ ಬೇಯುತಿರೆ,
ಸಿಲುವೆ ಮೊಳೆಗೆ ಕೆಯ್ನೀಡಿದೆಯಾ? ॥ ೯ ॥

ನಮ್ಮೊಳಗಣ ಸ್ವಾರಾಜ್ಯ ಸೇರಲೆಮ
ಗೂಡಿದೆ ಪ್ರೇಮದ ಮೆಲುನೊಗವ!
ತನ್ನನೆ ಮರೆವೊಂದೆನ್ನುವ ಬದುಕಿನ
ಸೆಲೆಹಾಡಿಗೆ ನುಡಿಸಿದೆ ಜಗವ! ॥ ೧೦ ॥

ಯದುನಾಥನೆ ಯೂದನಾಥನಲ್ಲವೆ ?
ಕಾಲಗಳಿವು, ನಿನಗಳಿವಿಹುದೆ ?
ದಿನವೆರಡರ ಭಾಸ್ಕರನೆರಡಹನೆ ?
ನಿನ್ನಲಿ ಭೇದ ಬಗೆಯಬಹುದೆ ? ॥ ೧೧ ॥

ಎಂದೆಂದಿಗೆ ಧರ್ಮ ಕುಂದಿ ಬಂದಪು
ದಧರ್ಮ ಮುಂದರಿವಂದಂದು
ಬಂದಪೆನೊಡಲಾಂತೆಂದಿಹೆ—ಮೆಯ್ಯೆನಿ
ತಾಂತು ಬಂದಪೆಯೊ ಇನುಮುಂದು ! ॥ ೧೨ ॥

ಪಂಜೆ ಮಂಗೇಶರಾಯರು

ತೆಂಕಣ ಗಾಳಿಯಾಟ

[ರಗಳೆಯ ಪ್ರಭೇದ]

ಬರಲಿದೆ! ಅಹಹಾ! ದೂರದಿ ಬರಲಿದೆ–
ಬುಸುಗುಟ್ಟುವ ಪಾತಾಳದ ಹಾವೊ?
ಹಸಿವಿನ ಭೂತವು ಕೂಯುವ ಕೂವೊ?
ಹೊಸತಿದು ಕಾಲನ ಕೋಣನ–ಓವೊ!
ಉಸಿರಿನ ಸುಯ್ಯೋ?–ಸೂಸೂಕರಿಸುತ, ॥ ೧ ॥

ಬರುವುದು! ಬರಬರ ಭರದಲಿ ಬರುವುದು–
ಬೊಬ್ಬೆಯ ಹಬ್ಬಿಸಿ, ಒಂದೇ ಬಾರಿಗೆ
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ,
ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ,
ಅಬ್ಬರದಲಿ ಭೋರ್ ಭೋರೆನೆ ಗುಮ್ಮಿಸಿ. ॥ ೨ ॥

ಬರುತದೆ! ಮೈ ತೋರದೆ ಬರುತದೆ! ಅದೆ–
ನಡುಮುರಿಯುತ ನಗನಾವೆಗೆ, ಕೂವೆಗೆ
ಉಡಿಸಿದ ಹಾಯಿಯು ಹರಿಯುತ ಬಿರಿಯುತ,
ಹಡಗನು ಕೀಲಿಸಿ, ತುಮುರೆನು ತೇಲಿಸಿ,
ದಡದಲಿ ಝಾಡಿಸಿ, ದೋಣಿಯನಾಡಿಸಿ, ॥ ೩ ॥

ಇದೆ! ಇದೆ! ಬರುತಿದೆ! ಇದೆ! ಇದೆ! ಬರುತಿದೆ–
ಹಕ್ಕಿಯು ಕಣ್ಣಿಗೆ ಧೂಳಿನ ಕಾಡಿಗೆ
ಇಕ್ಕುತ, ಹೊಲದೆತ್ತಿಗೆ ದನಕಾಡಿಗೆ
ಫಕ್ಕನೆ ಹಟ್ಟಿಗೆ ಅಟ್ಟಿಸಿ, ಕಾಡಿಗೆ
ಸಿಕ್ಕಿದ ಕಿಚ್ಚನು ಊದಲು ಹಾರುತ, ॥ ೪ ॥

ಬರುತಿದೆ! ಇದೆ! ಇದೆ! ಇದೆ! ಇದೆ! ಬರುತಿದೆ–
ಸಡಲಿಸಿ ಮಡದಿಯರುಡಿಯನು ಮುಡಿಯನು,
ಬಡಮುದುಕರ ಕೊಡೆಗರಿ ಹರಿವಾಡಿಸಿ,
ಹುಡುಗರ ತಲೆ ತಲೆ ಟೊಪ್ಪಿಯ ಆಟವ

ದಡಬಡನಾಡಿಸಿ, ಮನೆಮನೆತೋಟವ
ಅಡಿಮೇಲಾಗಿಸಿ, ತೆಂಗನು ಲಾಗಿಸಿ,
ಅಡಿಕೆಯ ಬಾಗಿಸಿ, ಪನೆ ಇಬ್ಬಾಗಿಸಿ,
ಬುಡದೂಟಾಡಿಸಿ, ತಲೆ ತಾಟಾಡಿಸಿ,
ಗುಡಿಸಲ ಮಾಡನು ಹುಲುಹುಲು ಮಾಡಿಸಿ, ॥ ೫ ॥

ಬಂತೈ ! ಬಂತೈ ! ಇದೆ ! ಇದೆ ! ಬಂತೈ !—
ಗಿಡಗಿಡದಿಂ—ಚೆಲು ಗೊಂಚಲು ಮಿಂಚಲು—
ಮಿಡಿಯನು ಹಣ್ಣನು, ಉದುರಿಸಿ ಕೆದರಿಸಿ
ಎಡದಲಿ ಬಲದಲಿ ಕೆಲದಲಿ ನೆಲದಲಿ,
ಪಡುವಣ ಮೋಡವ ಬೆಟ್ಟಕೆ ಗಟ್ಟಕೆ
ಹೊಡೆದಟ್ಟುತ, ಕೋಲ್ ಮಿಂಚನು ಮಿರುಗಿಸಿ,
ಗುಡುಗನು ಗುಡುಗಿಸಿ, ನೆಲವನು ನಡುಗಿಸಿ,
ಸಿಡಿಲನು ತಾಳೆಗೆ ಬಾಳೆಗೆ ಎರಗಿಸಿ,
ಜಡಿಮಳೆ ಸುರಿವೋಲ್, ಬಿರುಮಳೆ ಬರುವೋಲ್,
ಕುಡಿ ನೀರನು ಒಣಗಿದ ನೆಲಕೆರೆವೋಲ್.
ಬಂತೈ ಬೀಸುತ ! ಬೀಸುತ ಬಂತೈ !
ತೆಂಕಣ ಗಾಳಿಯು ಕೊಂಕಣ ಸೀಮೆಗೆ
ಬಂತೈ ! ಬಂತೈ ! ಬಂತೈ ! ಬಂತೈ !

ಹುತ್ತರಿ ಹಾಡು

ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ ?
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ ?
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ ?
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆ ಕಳೆ ಕಳೆವಳೋ ?

ಅಲ್ಲೆ ಆ ಕಡೆ ನೋಡಲಾ !
ಅಲ್ಲೆ ಕೊಡಗರ ನಾಡಲಾ !
ಅಲ್ಲೆ ಕೊಡಗರ ಬೀಡಲಾ !

ಸವಿದು ಮೆದ್ದರೊ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು?
ಕವಣೆ ತಿರಿ ಕಲ್ಲಾಟ ಹಗ್ಗಕೆ ಸೆಳೆದರೋ ಹೆಬ್ಬಾವನು?
ಸವರಿ ಆನೆಯ ಸೊಂಡಿಲಲಿ ರಣಕೊಂಬನಾರ್ ಭೋರ್ಗರೆದರೋ?
ಸವೆದು ಸವೆಯದ ಸಾಹಸತ್ವದ ಕ್ಷಾತ್ರ ಬೇಟೆಯ ಮೆರೆದರೋ?

ಅವರೆ ಸೋಲ್ ಸಾವರಿಯರು!
ಅವರೆ ಕಡುಗಲಿ ಗರಿಯರು!
ಅವರೆ ಕೊಡಗಿನ ಹಿರಿಯರು!

ತಮ್ಮ ನಾಡಿನ ಕೊರಳು ದಾಸ್ಯದ ನೊಗದ ಭಾರಕೆ ಬಗ್ಗದೊಲ್,
ಹೆಮ್ಮೆಹಗೆಗಳ ಹೊಡೆದು ಹಿರಿಯರು ಹಸಿದು ಹಾರುವ ಬಗ್ಗದೊಲ್
ಬೊಮ್ಮಗಿರಿಯಿಂ ಪುಷ್ಪಗಿರಿಪರ್ಯಂತ ಬೆಳದೀ ದೇಶವು
ಧರ್ಮದಾನದ ಕಟ್ಟುಕಟ್ಟಳೆ ರೀತಿನೀತಿಯ ಕೋಶವು!

ನಮ್ಮ ಕೊಡಗಿದು ಜಮ್ಮದು;
ಜಮ್ಮ ಕೊಡಗಿದು ನಮ್ಮದು;
ನಮ್ಮೊಡಲ್ ಬಿಡಲಮ್ಮದು!

ಇದು ಅಗಸ್ತ್ಯನ ತಪದ ಮನೆ, ಕಾವೇರಿ ತಾಯ ತವರ್ಮನೆ,
ಕದನಸಿರಿಗುಯ್ಯಾಲೆ ತೂಗಿದನಿಲ್ಲಿ ಚಂದಿರವರ್ಮನೆ!
ಇದಕೊ! ಚೆಂಗಾಳ್ವರಸರಾಡಂಬರವು ಕುಣಿದ ಶ್ರೀರಂಗವು!
ಇದೊ! ಇದೊ! ಇಲ್ಲುರುಳ್ದ ಹಾಲೇರಿಯರ ಬಲಗಿರಿ ಶೃಂಗವು!

ವಿಧಿಯ ಮಾಟದ ಕೊಡಗಿದು!
ಮೊದಲೆ ನಮ್ಮದು, ಕಡೆಗಿದು!
ಕದಲದೆಮ್ಮನು; ಬೆಡಗಿದು!

ಒಮ್ಮತವು ಒಗ್ಗಟ್ಟು ಒಂದೇ ಮನವು ಎಲ್ಲಿದೆ ಹೇಳಿರಿ?
ಸುಮ್ಮನಿತ್ತರೊ ದಟ್ಟಿ ಕುಪ್ಪಸ! ಹಾಡು ಹುತ್ತರಿಗೇಳಿರಿ?
ಚಿಮ್ಮಿ ಪಾತುರೆಕೋಲ ಹೊಯ್ಲಿಗೆ ಕುಣಿವ ಪದ ಹೊರ ಹೊಮ್ಮಲಿ!
ಅಮ್ಮೆ ಹರಸಿದ ಸೀಮೆ ನಮಗಿದು ಇರಲಿ ನಮ್ಮದೆ ನಮ್ಮಲಿ!

ನೆಮ್ಮದಿಯನಿದು ತಾಳಲಿ!
ಅಮ್ಮೆಯಾ ಬಲ ತೋಳಲಿ
ನಮ್ಮ ಕೊಡಗಿದು ಬಾಳಲಿ!

ಸ. ಪ. ಗಾಂವಕರ

ಕವಿ

ಕವಿಯು ತಿಳಿಯಲು ಕವಿಗೆ ಹೊಳೆಯದು
ಹೊಳೆದುದಾರಿಗೆ ಕವಿಜನ
ಕವಿಗೆ ಹೊಳೆದುದು ಕವಿಗೆ ತಿಳಿಯದು
ತಿಳಿದುದಾರಿಗೆ ಕವಿಜನ
ಕವಿಯು ಕಾಣದ ಕವಿಯು ಕಂಡರು
ಭಲರೆ ಭಪ್ಪರೆ ಬಹುಜನ

ಕನಸು ನನಸಿನ ಕನಕ ಸೃಷ್ಟಿಯು
ಬೆನಕನಾಗಿಹೆ ಭವದಲಿ
ಘನತರದ ಸೌಂದರ್ಯಶಾಲಿನಿ-
ಗನುವುಗೊಂಡಿಹೆ ಜಗದಲಿ
ಚಣ ಚಣಕೆ ಕಣೆಗೊಂಬ ಕರುಳಿನ
ಖಣಿಯು ಖಣಿ ಖಟಿಲಾಗಿಹೆ

ಪದುಳದಲಿ ಪದ ಪದೆದು ನಾದದಿ
ವಿದಯು ಹೊಂದಿದೆ ಭಾವದಿ
ವಿದಿತ ವ್ಯಾಕರ್ಣಾದಿ ತೀರ್ಥರ
ವಿಧಿಬರಹ ಬದಿಗಿಟ್ಟಿಹೆ
ಮುದಿತ ಮಾತ್ರಾ ಮೈತ್ರಿ ಸಮುದಿತ
ಪದಗಳಾಗಿಹೆ ಹೃದಯದಿ

ಗುರುವು ಗತಿಗೊಡೆ ಪದಗಳೆಂಬವು
ಅರರೆ, ಬರುತಿವೆ ಭಾಗ್ಯದಿ
ಕರೆದು ಬರುತಿವೆ ಕವಿದು ಬರುತಿವ
ಮೊರೆದು ಬರುತಿವೆ ಮೋದದಿ
ಅರಿವಿಗರಿಯದ ಶಬ್ದ ಸೃಷ್ಟಿಯು
ಚಿತ್ರವನ ವೈಚಿತ್ರ್ಯದಿ

ಗುಡುಗಿನಾರ್ಭಟೆ ಸಿಡಿಲಿನಾರ್ಭಟೆ
ಕಡಲಿನಾರ್ಭಟೆಯಾಗಿಹೆ
ಪೊಡವಿ ಹರ್ಷೋತ್ಕರ್ಷ ವರ್ಷದ

ಮಿಡಿವ ಮಾರ್ದನಿ ನಾನಿಹೆ
ಕಡೆಗೆ ಯೌಗಿಕ ಸಾಮ್ಯವಾದವ
ಬೆಡಗ ಗೆಡೆಗೊಂಡಾಗಿಹೆ.

ಗಾನಗಂಗಾ ಮಂಗಳಾಂಗಿಯು
ಧ್ವಾನವೆದ್ದಿದೆ ಧ್ಯಾನದಿ
ಸಾನುರಾಗ ಸನಾತನಾದಿಯು
ವಾಣಿವೀಣಾ ಕ್ವಣಿತದಿ
ಕಾಣಲಾರೆನು ಕಾಣಲಾರೆನು
ವೇಣುವೊಂದನು ವಾಣಿಗೆ

ಚಿಂತೆಗರಿಯದನಂತ ಸೃಷ್ಟಿಯು—
ನಂತ ನಾದ ನಿನಾದದಿ
ಸಂತೆಯಾಗಿದೆ ಚಿಂತೆಯಾಗಿದೆ
ಅಂತವಂತ ಶರೀರದಿ
ಅಂತು ಇಂತಿದೆ ಇಂತು ಅಂತಿದೆ
ಎಂತೊ ಮುತ್ತಿದೆ ಮೋಹದಿ

ಶಬ್ದ ಸೃಷ್ಟಿಯು ಸ್ತಬ್ಧವಾಗಿದೆ
ಅಬ್ಧಿಗಳುಕದ ಹೃದಯದಿ
ಊರ್ವಿಯೂರ್ವಿಯು ಸಂಧಿ ಸಂಗರ
ಮರ್ಮವಡಗಿದೆ ಮಹಿಲದಿ
ಕರ್ಮಭೂಮಿಯು ಧರ್ಮ ಹರ್ಮ್ಯದ
ಮರ್ಮ ನೇಲೆಯೊಳಾಡಿದೆ

ವಿವೇಕಾನಂದಸ್ವಾಮಿ

ಪುಣ್ಯಭೂಮಿಯೆ, ನಿನ್ನ ಪುಣ್ಯಗಂಧವನಖಿಲ
ಭುವನದೊಳ್ ಪಸರಿಸುತ ನಲಿವುದೆಂದು |
ಆರ್ಯಕುಲಜರೆ, ನಿಮ್ಮ ನಿಜಧರ್ಮದೀಪಮಂ
ಮರಳಿ ಬೆಳಗಿಸಿ ಗುರುತೆವಡೆವುದೆಂದು |
ವೇದಜನನಿಯೆ, ನಿನ್ನ ದಿವ್ಯಗಾನವ ಕೇಳೆ
ಜಗವೆಲ್ಲ ತಲೆವಾಗಿ ಬರುವುದೆಂದು |
ವೇದಾಂತಕೇಸರಿಯೆ, ನಿದ್ರೆಯಂ ತೊರೆದು ನೀಂ
ಗುಹೆಯಿಂದ ಪೊರಮಟ್ಟು ಮೆರೆವುದೆಂದು ||

ಇಂತು ನಿಜ ಜನಪದವನೆಚ್ಚರಂಗೊಳಿಸುತನಿಶಂ |
ಭರತಮಾತೆಯು ಜೈತ್ರಯಾತ್ರೆಯೊಳ್ ಪ್ರಮುಖನೆನಿಸಿ |
ವಿಬುಧವಂದಿತನಾಗಿ ಲೋಕಸಂಮಾನ್ಯನಾಗಿ |
ಶ್ರೀ ವಿವೇಕಾನಂದನೆಸೆದನೆಂದು ||

ದಾರಿಗರ ಹಾಡು

[ಮೋಹನ ರಾಗ—ರೂಪಕ ತಾಳ]

ದಾರಿಹೋಕರು ನಾವು ಊರ ತೊಡಕಿಗೆ ನಮ್ಮ
ಸೇರಿಸದೆ ಬಿಡಿರಿ ಸಖರೇ || ಪ ||

ದೂರದಿಂದಲಿ ಬಂದು ಊರ ಸತ್ರದಿ ನಿಂದು
ಸಾರುವೆವು ಮುಂದಕಿಂದು—ಸಖರೇ || ಅ.ಪ ||

ಗುರುಗಳಾಣತಿಯಂತೆ ಚರಿಸುತಿರುವರು ನಾವು
ಇರಲಾಗದೆರಡುದಿನವೊಂದೆಡೆಯೊಳಂ

ಕೊರತೆ ಕನಲಿಕೆಗಳನು ಮರೆಯಿಪೆಮ್ಮಯ ಬಗೆಯು
ನೊರೆವೆವದನಾಲಿಪುದು ನೀಂ—ಸಖರೇ ॥ ೧ ॥

ಹೊರಟು ಮುಂಬೆಳಗಿನಲಿ ಶಿರದಿ ಭಾರವ ತಳೆದು
ಬಿರುಗಾಳಿ ಬೀಸುತಿರೆ ಭರದಿಂದೆ ನಡೆದು
ತರಣಿಯೊಲುಮೆಯ ಪಡೆದು ಹರುಷದಿಂ ಮುಂಬರಿದು
ತೊರೆಯೊಂದ ಕಂಡೆವತ್ತ—ಸಖರೇ ॥ ೨ ॥

ತೊರೆಯ ನೀರೊಳು ಮಿಂದು ಮರದ ನೆರಳಲಿ ಕುಳಿತು
ಶಿರದ ಬುತ್ತಿಯ ತಂಗಳೂಟವುಂಡು
ಬಳಿಯ ತರುಗಳ ಬಳಸಿ ದೊರೆತ ಫಲಗಳ ಭುಜಿಸಿ
ಬಳಲಿ ಮಲಗಿದೆವತ್ತಲೇ—ಸಖರೇ ॥ ೩ ॥

ಖಗಕುಲದ ಕಲರವಂ ಬಗೆಬಗೆಯ ಪರಿಮಳಂ
ಮಿಗೆ ಸಂತಸವ ಸೂಸೆ ಮೈಯ ಮರೆತು
ಸೊಗದಿ ನಿದ್ರಿಸಿ ಬಳಿಕಲೆಚ್ಚೆತ್ತು ನೀರ್ಗುಡಿದು
ಮಗುಳೆ ನಡೆದೆವು ಮುಂದಕೆ—ಸಖರೇ ॥ ೪ ॥

ತೆರಳಿ ಮುಂದಕೆ ಮುನ್ನ ಕರುಣಿಸಿದ ದಿನಪತಿಯು
ಕಿರಣಗಳು ಕನಲಿ ಬೇಯಿಸೆ ನಮ್ಮ ತನುವ
ಮರದ ನೆರಳನು ಬಯಸಿ ಮುಗಿಲ ರಾಶಿಯನರಸಿ
ನಿರುಕಿಸಿದೆವಾಗಸವನು—ಸಖರೇ ॥ ೫ ॥

ಮುಗಿಲು ತಾನೊಂದೊಗೆದು ತೆಂಬೆಲರುಗಳನೆಸೆದು
ಗಗನವೆಲ್ಲವ ಕವಿಯೆ ನಲಿದು ನಡೆದು
ಮಿಂಚೆಸೆದು ಸಿಡಿಲಿರಿದು ಮಳೆಗರೆಯೆ ನಾವಾಗ
ನಡುನಡುಗಿ ನಡೆನಡೆದೆವೈ—ಸಖರೇ ॥ ೬ ॥

ನಡೆದು ಬಂದೀಯೂರ ಗುಡಿಯ ಸತ್ರವ ಸೇರಿ
ಬಡದಾರಿಗರ ಹಲಬರನು ಕಂಡೆವು
ಕೂಡಿ ನಾವವರೊಡನೆ ಪಾಡಿ ಸುದ್ದಿಗಳಾಡಿ
ಬಿಡುವೆವಿಲ್ಲಿಯೆ ನಿಶಿಯನು—ಸಖರೇ ॥ ೭ ॥

ಹೊರಟು ನಾವಿಲ್ಲಿಂದಲರುಣೋದಯದಿ ಮರಳಿ
ಭರದಿಂದ ಕಾಲಿಡುತ ಮರೆತು ಬಳಲಿಕೆಯ

ಪರಿಪರಿಯ ನೋಟಗಳ ನೋಡಿ ರಾಗದಿ ಪಾಡಿ
ಸರಿವೆವಿನ್ನೊಂದೂರಿಗೈ—ಸಖರೇ ॥ ೮ ॥

ಪಯಣವನು ನಾವಿಂತು ಗೈಯುತಿಹೆವನುದಿನವು
ಬಯಕೆಗಳು ನಿಲವೆಮ್ಮೊಳೆರೆಗಳಿಗೆಯುಂ
ಭಯುವನರಿಯೆವು ಸಾಹಸಕ್ಕೆ ತೊಡಗೆವು ನಿಮ್ಮ
ದಯೆಯೊಂದೆ ಸಾಕು ನಮಗೈ—ಸಖರೇ ॥ ೯ ॥

ಊರುಗಳ ಸುತ್ತಿಹೆವು ಕೇರಿಗಳ ತಿರುಗಿಹೆವು
ಊರಿಗರ ಜಪ ತಪಂಗಳನರಿತೆವು
ಊರಿನಲ್ಲಿರುವೆಲ್ಲುದಾರತೆಯ ಸವಿದಿಹೆವು
ಊರು ಸಾಕಿನ್ನು ನಮಗೇ—ಸಖರೇ ॥ ೧೦ ॥

ಅಳುವವರ ಕಂಡಿಹೆವು ನಗುವವರ ಕಂಡಿಹೆವು
ಕಂಡಿರುವೆವಳುಕಿಪರನಳುಕದರನು
ದುರುಳರನು ಕಂಡಿಹೆವು ಮರುಳರನು ಕಂಡಿಹೆವು
ಕಂಡಿಹೆವು ಬಲ್ಲವರನು—ಸಖರೇ ॥ ೧೧ ॥

ನೋಡಿಹುದೆ ಸಾಕು ನಿಮ್ಮೊಡಾಟಗಳನಿನ್ನು
ಗೂಡ ಸೇರುವ ಹಕ್ಕಿಯಂತೆ ನಾವು
ಸಾರಿ ಮುಂದಕೆ ಜವದಿ ಸೇರಿ ನಮ್ಮಾಲಯುವ
ಭಾರಗಳನಿಳುಹಬೇಕೈ—ಸಖರೇ ॥ ೧೨ ॥

ಹಳ್ಳಗಳ ಮುಚ್ಚುತ್ತ ಮುಳ್ಳುಗಳ ಬಿಸುಡುತ್ತ
ಒಳ್ಳೆದಾರಿಯ ತೋರಿ ಯಾತ್ರಿಕರಿಗೆ
ಒಳ್ಳೊಳ್ಳೆ ಕಥೆಗಳನು ಪೇಳುತ್ತೆ ಕೇಳುತ್ತೆ
ತಳ್ಳುವೆವು ಚಿಂತೆಗಳನು—ಸಖರೇ ॥ ೧೩ ॥

ಇಂತೆಸಗಬೇಕೆಂಬ ಹಠದ ಬಂಧನವಿಲ್ಲ
ಪಂಥವಿದು ಕಡಿದೆಂಬ ಭೀತಿಯಿಲ್ಲ
ಅಂತರಂಗದೊಳು ನಾವಾಂತು ಗುರುಗಳ ಪದವ
ಸಂತಸಿಪೆವವರೆ ನುಡಿಯಿಂ—ಸಖರೇ ॥ ೧೪ ॥

ಬಿದಿಯುಣಿಕಿಪುದ ಕಂಡು ಹೆದರುವರು ನಾವಲ್ಲ
ಎದುರುಗೊಳ್ಳುವೆವದನು ವಿನಯದಿಂದೆ

ಎದೆಯೊಳಿಹುದೆಮಗೊಂದು ಸುಧೆಯು ಸಾರದ ಬಿಂದು
ಅದ ಸವಿಯುತ್ತಳುಕದಿಹೆವೈ—ಸಖಿರೇ ॥ ೧೫ ॥

ಕಂಡುಕಂಡುದನೆಲ್ಲ ಬೇಡುವರು ನಾವಲ್ಲ
ಉಂಡು ಸುಖಿಪೆವು ಕೈಗೆ ಬಂದ ಫಲವ
ಎಮ್ಮ ಸುಖವೆಮಗಿಹುದು ನಿಮ್ಮ ದುಗುಡವು ನಿಮಗೆ
ನಿಮ್ಮೊಮ್ಮರು ನಮಗೆ ಸಾಕ್ಕೈ—ಸಖಿರೇ ॥ ೧೬ ॥

ನಿವೇದನ

ಮೇಲೆ ನೋಡೆ ಕಣ್ಣ ತಣಿಪ
ನೀಲ ಪಟದಿ ವಿವಿಧ ರೂಪ
ಜಾಲಗಳನು ಬಣ್ಣಿಸಿರ್ಪ
ಚಿತ್ರ ಚತುರನಾರ್ ।
ಕಾಲದಿಂದೆ ಮಾಸದಾ ವಿ
ಚಿತ್ರವೆಸಪನಾರ್ ॥

ಸುತ್ತು ಪೊಳೆವ ಶೈಲಗಣದ
ಕೊತ್ತಲಂಗಳಿಟ್ಟು ಕಡಲ
ಸುತ್ತುಗಟ್ಟಿ ಕೋಟೆಯಿದನು
ಕಲ್ಪಿಸಿರ್ಪನಾರ್ ।
ವಸ್ತುಚಯವನಿಂತು ರಚಿಪ
ಶಿಲ್ಪಿವರ್ಯನಾರ್ ॥

ಗಿರಿಯ ತೊರೆಯ ಬನದ ಹೊಲದ
ಚೆರಗಿನಿಂದೆ ಮೃಗದ ಖಗದ
ಮೆರೆತದಿಂದಲೀ ವಿಹಾರ
ಭವನವೆಸಪನಾರ್ ।
ಮರೆಯಲಿರ್ದು ಸೊಗವನಿಂತು
ಕವಿಸುತಿರ್ಪನಾರ್ ॥

ಜ್ಯೋತಿಗಳನು ಗಗನ ತಲದಿ
ಗೀತೆಗಳನು ವಿಹಗ ಮುಖದಿ
ಪ್ರೀತಿಗಳನು ಜನದ ಮನದಿ
ತೋರುತಿರ್ಪನಾರ್ |
ಮಾತನುಳಿದ ಕವಿತೆಯಿಂತು
ಬೀರುತಿರ್ಪನಾರ್ ॥

ಅವನ ಕೃತಿಯು ನೋಡಿ ಮಣಿವೆ
ವವನ ದನಿಯು ಕೇಳಿ ನಲಿವೆ
ವವನ ಭಿಕ್ಷೆಯುಂಡು ಬೆಳೆವೆ
ವವನನರಿಯೆವು |
ಅವನ ಲೀಲೆಗಳನು ಕಾಣ್ಬೆ
ವವನ ಕಾಣೆವು ॥

ರವಿಗೆ ಬೆಳಕ ಭುವಿಗೆ ಬಲವ
ಜವವ ವಾಯುಗೀವ ತೆರದಿ
ಕವಿಯ ವಚನಕವನೆ ಸರಸ
ಭಾವವೀವನು |
ಅವನೆ ಶಿಲ್ಪ ಚಿತ್ರ ಕೃತಿಗೆ
ಜೀವವೀವನು ॥

ಪಿಡಿದು ಗುರುವೆನುತ್ತಲಾತ
ನಡಿಯು ಮನದೊಳವನ ಬಲದೆ
ನುಡಿಯುಲರಿತ ಕವಿಯೆ ಜಗದಿ
ಪರಮ ಧನ್ಯನು |
ಮುಡುಪನವಗೆ ಸಲಿಪ ಶಿಲ್ಪಿ
ವರೆನೆ ಗಣ್ಯನು ॥

ಮನಕೆ ತೋರ್ಪ ಸೊಬಗನೆಲ್ಲ
ತನಗೆ ತುಷ್ಟಿಯುಪ್ಪ ತೆರದಿ
ಜನಕೆ ನುಡಿಯುಲರಿವ ಸುಕವಿ
ತಿಲಕನಾತನು |
ಅನುವಿನಿಂದ ಬರೆವ ಕಲೆಯು
ಕಲಿತನಾತನು ॥

ಅನಿತು ಗುರುವಿನೊಲಮೆಯಿಲ್ಲ
ಎನಿತು ಮತಿಯೊಳೆಸಕವಿಲ್ಲ
ಏನಿಸು ಭಕುತಿ ಮಾತ್ರವೆನ್ನ
ನಂಡಿಸುತಿರ್ಪುದು |
ಜನುಮ ಭೂಮಿಯ ಮಮತೆ ಬಾಯ
ಬಿಡಿಸುತಿರ್ಪುದು ॥

ಉನ್ನತಾಚಲವನು ಮಸಕು
ಗನ್ನಡಿಯಲಿ ತೋರಲೆಳಸು
ಎನ್ನ ಕಜ್ಜವಿದನು ಬುಧರು
ಜರೆದು ನಗುವರೇಂ |
ಸನ್ನೆಯಿಂದೆ ಪಸುಳೆಯುಲಿಯೆ
ಪಿರಿಯರೊಲಿಯರೇಂ ॥

ಎನ್ನ ಮನೆಯೊಳೆಸೆದ ಬೆಳ್ಗೆ
ಎನ್ನ ಬದುಕಿನೊಂದು ಸಿರಿಯೆ
ನಿನ್ನನಿನಿಸು ಹರುಷಗೊಳಿಸೆ
ಬರೆದ ಬರಹವ |
ಇನ್ನದೆಂತು ನೋಡಿ ನಗುತ
ಲೊರೆವೆ ಸರಸವ ॥

ಕಿರಿಯ ಮಕ್ಕಳಳುವ ದನಿಗೆ
ಪಿರಿಯರಿಡುವ ಕಣ್ಣಪನಿಗೆ
ಕರಗದೆದೆಯ ಬಿದಿಯು ಬಣಗು
ಕವಿತೆಗೊಲಿವನೇಂ |
ಮರುಳು ನುಡಿಯನಿದನು ನಿನ್ನ
ಕಿವಿಯೊಳುಲಿವನೇಂ ॥

ಇರಲಿ,—ಜಗದ ಜನರು ಕಣ್ಗೆ
ದೊರೆಯದೊಂದ ನೆನೆದು ಕುಸುಮ
ಏರಿಸಿ ಪೂಜೆಗೈದೆವೆಂದು
ನಲವ ತಾಳ್ವವೊಲ್ |
ಕೊರಗಿ ನಿನ್ನ ನೆನಪಿಗಿದನು
ಸಲಿಪೆನಳ್ತಿಯೊಳ್ ॥

ನೆನಪು ನಿನ್ನ ಬಾಳ್ಕೆಯುಮಲ
ಗುಣದ ಸೊಬಗ ಪಡೆಯಲಾಗ
ಮಣಿಯುಃ ಮಿಸುನಿಯೊಡನೆ ಕೂಡಿ
ಮಿರುಗುವಂದವು ।
ವನದಿ ಸುರಭಿ ಕಲರವಂಗ
ಳಿರುವ ಚೆಂದವು ॥

ದೈವ ಕೃತಿಯು ಸೊಬಗ ಸರಸ
ಭಾವ ತೆರೆಯು ಸೊಬಗ ಸುಜನ
ಜೀವ ಕಥೆಯು ಸೊಬಗ ಬರಿಯು
ಕನಸದೆಂಬರೇಂ ।
ಬೇವ ಮನವ ಸೊಬಗಿನೊಂದು
ನೆನಪ ತಣಿಸದೇಂ ॥

ವನಸುಮ

(ಅಠಾಣ ರಾಗ-ರೂಪಕ ತಾಳ)

ವನಸುಮದೊಲೆನ್ನ ಜೀ
ವನವು ವಿಕಸಿಸುವಂತೆ
ಮನವನನುಗೊಳಿಸು ಗುರುವೇ—ಹೇ ದೇವ ॥ಪ॥

ಜನಕೆ ಸಂತಸವೀವ
ಘನನು ನಾನೆಂದೆಂಬ
ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ ಬಿಡದೆ ॥ಅ.ಪ.॥

ಕಾನನದಿ ಮಲ್ಲಿಗೆಯು
ಮೌನದಿಂ ಬಿರಿದು ನಿಜ
ಸೌರಭವ ಸೂಸಿ ನಲವಿಂ
ತಾನೆಲೆಯ ಪಿಂತಿರ್ದು
ದೀನತೆಯು ತೋರಿ ಅಭಿ
ಮಾನವನು ತೊರೆದು ಕೃತಕೃತ್ಯತೆಯು ಪಡೆವಂತೆ ೧

ಉಪಕಾರಿ ನಾನು ಎ
ನ್ನುಪಕೃತಿಯು ಜಗಕೆಂಬ
ವಿಪರೀತ ಮತಿಯನುಳಿದು
ವಿಪುಲಾಶ್ರಯವನೀವ
ಸುಫಲ ಸುಮ ಭರಿತ ಪಾ
ದಪದಂತೆ ನೈಜವಾದೊಳ್ಪಿನಿಂ ಬಾಳ್ವವೊಲು ೨

ಶಿವನ ಸಮುದ್ರ

ತರುಗುಲ್ಮಾವೃತ ಶೈಲವು।
ಮರಕತ ಶಿವಲಿಂಗವೆನುತೆ ಕಾವೇರಿಯದೇಂ॥
ಪರಿಚರಿಸಿ ಲೋಕಕೆಲ್ಲಂ।
ದೊರೆಯಿಪ ತೀರ್ಥಾಂಬುವಲ್ತೆ ಶಿವನ ಸಮುದ್ರಂ॥

ಒಂದೆಡೆಯೊಳಾದಿಶಕ್ತಿಯು।
ಸಂಧಾನಾದ್ಭುತ ವಿಶೇಷಮಾರ್ಭಟಿಸಲ್ ಮೇ॥
ಗೊಂದೆಡೆ ಮೆರೆವುದು ಮನುಜನ।
ಸಂಧಾನಾದ್ಭುತ ವಿಶೇಷಮಾ ಮಂಡಲದೊಳ್॥

ಮೊರೆಯುತೆ ಸರಿಯುತೆ ಭರದಿಂ।
ಪರಿದೋಡುತೆ ಜಾರಿ ಪಾರಿ ಮುಕ್ತಾಂಜಲಿಯಂ॥
ವಿರಚುತಲೆರಗುತೆ ರಭಸದಿ।
ಬರುತಿರ್ಪಾ ಜಲವಿಲಾಸಮೇನತಿಶಯಮೋ॥

ಶಿವನೊಡಲ ಹಾರಮೇಂ ನಿಜ।
ಭವನಕೆ ಸರಿವಾದಿಶೇಷ ಸಂತತಿಯೇನಾ॥
ಧವಳತರ ಧಾರೆ ಮಾಡುವು।
ದವಲೋಕನ ಕೊಂದು ಭೀಷ್ಮ ಸಂಮೋಹನಮಂ॥

ಒಲವೇಂ ಸಂಭ್ರಮವೇಂ ಪ್ರಿಯಾಭಿಸರಮೇಂ ಲಾವಣ್ಯಮೇಂ ಲೀಲೆಯೇಂ।
ಮುಳಿಸೇಂ ಸಾಹಸಮೇಂ ಮಹಾಗರುವಮೇಂ ಯಾತ್ರಾ ವ್ರತೋತ್ಸಾಹಮೇಂ॥
ಬಲಮಂ ತೋರುವ ರೀತಿಯೇಂ ಚಪಲಮೇಂ ಮಂದಾತ್ಮರಂ ನಿಂದಿಪಾ।
ಚಲಮೇನೀಪರಿ ಧಾವಿಸುತ್ತಲಿಹುದೇಂ ಕಾವೇರಿ ರಾಜ್ಯೇಶ್ವರೀ॥

ಧೂಮಸ್ತೋಮದ ಮೂಲದತ್ತ ಮೊರೆಗುಂ ಶೀತಾಂಬುಪಾತಂ ಸರಿ।
ದ್ರಾಮಾನೇತ್ರದಪಾಂಗಮೆತ್ತಲೆನೆ ವಿದ್ಯುಜ್ಜೃಂಭಿಕುಂ॥
ಈ ಮಾಚಿತ್ರದಿ ಕಾಣ್ಗುವಲ್ತೆ ದಿಟಮೆಲ್ಲಂ ತೋರ್ಕೆಯೆಂದೆಂಬುದಾ।
ಭೀಮಾಕಾರವ ತಾಳ್ದೊಡೇಂ ಸದಯೆ ನೀಂ ಕಾವೇರಿ ಭದ್ರಂಕರೀ॥

ಗತಿಯಿಂದದ್ಭುತಮಂ ಜನೋಪಕೃತಿಯಿಂದೌರ್ಯಮಂ ನಿತ್ಯ ಶು।
ದ್ಧತೆಯಿಂ ಶಾಂತಿಯನುಗ್ರಭಾವವ ಶಿಲಾನಿರ್ಭೇದದಿಂ ಪರ್ವತ॥
ಚ್ಯುತಿಯಿಂ ರೌದ್ರವ ತಣ್ಪಿನಿಂ ಪ್ರಿಯತೆಯಂ ಗಾಂಭೀರ್ಯಮಂ ಘೋಷದಿಂ।
ಸತತಂ ಬೋಧಿಸುತಿರ್ಪೆ ದೇವಿ ಸರಸೇ ಕಾವೇರಿ ಕಾವ್ಯಾಶ್ರಯೇ॥

ಗಿರಿಯ ಕೆಲದಿ ಬನದ ನಡುವೆ ಝರಿಯ ತೆರದಿ ಸುಳಿದು ಬರುತೆ।
ತಲದ ಶಿಲೆಯನಿರಿದು ಕೊರೆದು ಕೆಲದ ನೆಲವನರೆದು ಮುರಿದು॥
ವಿಮಲ ಜಲದ ವಿಪುಲ ಧಾರೆಯಮೃತ ಲಹರಿಯಂತೆ ತೋರೆ।
ದಣಿವ ಕಳೆಯುವೆಲರ ಬೀರಿ ಮೃದುಲರವದಿ ಮುಂದೆ ಸಾರಿ॥

ಅತ್ತಲಿತ್ತ ಸುಳಿದು ಸುತ್ತಿ ಇತ್ತಲಿತ್ತ ಮೆಲ್ಲನೊತ್ತಿ।
ಅಲ್ಲಿ ಬಳುಕುತಿಲ್ಲಿ ಬಾಗಿ ಅಲ್ಲಿ ಬಳಸುತಿಲ್ಲಿ ಸಾಗಿ॥
ನೊರೆಯ ಸೇಸೆಗಳನು ಸೂಸಿ ತೆರೆಯ ಚವರಗಳನೆ ಬೀಸಿ।
ಬಾಲೆಯಂತೆ ನಲಿದು ಕುಣಿದು ಕಾಳಿಯಂತೆ ಕನಲಿ ಮೊರೆದು॥

ಉರಗಿಯಂತೆಯುರುಗಿ ತಿರುಗಿ ಛಲದ ಭರದಿ ಸರಿದು ಮಸಗಿ।
ಬೆಟ್ಟದಿಂದಲುರುಳಿ ಹೊರಳಿ ದಿಟ್ಟತನದಿ ತೊಳಗಿ ಮೊಳಗಿ॥
ಘೋರ ವೇಗದಿಂದ ನೆಗೆದು ಭೋರೆನುತ್ತೆ ಮಂಜನೆಸೆದು।
ಪನಿಯ ಮುಗಿಲ ಕವಿಸಿ ಸರಿದು ಮನುಜ ಸೇವೆಯಿಂದಲೊಲಿದು॥

ಬಲವ ಬೆಳಕ ನೀಡುತುಂ ನಿಲದೆ ನಾಟ್ಯವಾಡುತುಂ।
ನುಗ್ಗಿ ಬೀಳುತೇಳುತುಂ ನೆಗೆದು ಪಾರುತೋಡುತುಂ॥
ಭುವನ ರಚನೆಯೆನಿತು ಕುತುಕಮೆನುತ ಜನಕೆ ಸಾರುತುಂ।
ಭವನ ಜನನಿಯೆನಿತು ಚತುರಳೆನುತ ಕಣ್ಗೆ ತೋರುತಂ॥

ಪುರುಷ ಬಲವ ಬೆಳಗಿರೆನುತ ಜಡರ ಪಳಿದು ಮೊಳಗುತುಂ।
ಪರಿವಳೀ ಕವೇರ ತನಯೆ ಧೀರ ಜನನಿಯೆನಿಸುತುಂ॥

ಕನ್ನಡ ನಾಡಿನ ಕುತುಕಂ
ಕನ್ನಡಿಗರ ಸಾಹಸಕ್ಕೆ ಕನ್ನಡಿ ಮೇಣೇ॥
ಕನ್ನಡಿಗರ ಭಾಗ್ಯದ ನಿಧಿ।
ಯುನ್ನತಿಯಂ ಪಡೆದು ಬಾಳ್ಗೆ ಶಿವನ ಸಮುದ್ರಂ॥

ನರನ ಮೃತ್ಯುಂಜಯತೆ

ಬಿದ್ದುದನು ನಿಲ್ಲಿಪುದೆ ನರನ ಮೃತ್ಯುಂಜಯತೆ।
ಶುದ್ಧಿಸದೆ ನಭ ಧರೆಯ ಮರಮರಳಿ ಮಳೆಯಿಂ?॥
ಗದ್ದೆಕೊಯ್ಲಾಗೆ ಮಗುಳ್ದದು ಬೆಳೆಯು ಕುಡದಿಹುದೆ?।
ಬಿದ್ದಮನೆಯನು ಕಟ್ಟೊ—ಮಂಕುತಿಮ್ಮ॥ ೧

ಗೌರವಿಸು ಜೀವನವ, ಗೌರವಿಸು ಚೇತನವ।
ಆರದೋ ಜಗವೆಂದು ಭೇದವೆಣಿಸದಿರು॥
ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ।
ದಾರಿಯಾತ್ಮೋನ್ನತಿಗೆ—ಮಂಕುತಿಮ್ಮ॥ ೨

ಜೀವನೋದ್ಯಮವೆಲ್ಲ ತೋಟದುದ್ಯೋಗವೆನು।
ಭಾವಬುದ್ಧಿಗಳ ಕೃಷಿಯಿಂದೊಗೆದ ಫಲದಿಂ॥
ತೀವುತಿರೆ ನಗೆ ಹೊಳಪು ಮೊಗಮೊಗದೊಳಂ ಜಗದಿ।
ಸೇವೆಯದು ಬೊಮ್ಮಂಗೆ—ಮಂಕುತಿಮ್ಮ॥ ೩

ಹೂವ ತಳೆದ ಗುಲಾಬಿಯಿಂದ ಮನಕಹುದೇನು?
ನೋವೊ? ಸಂತಸವೊ? ನೋಡಾ ಮುಳ್ಳುಬಾಳ್ಗೆ॥
ಹೂವೆ ದಿವ್ಯಕಿರೀಟವದುವೆ ಕಾಲಕಟಾಕ್ಷ।
ಜೀವನದ ತಿರುಳಷ್ಟೆ—ಮಂಕುತಿಮ್ಮ॥ ೪

ಅಗೆದು ಗೊಬ್ಬರವಿಕ್ಕಿ ನೀರೆರೆದು ತೋಟಿಗನು।
ಜಗಿವ ಮುಳ್ಳಿರಿತಗಳ ಸೈರಿಸೆ ಗುಲಾಬಿ॥
ನಗುವುದೊಂದರೆನಿಮಿಷ; ನಗಲು ಬಾಳ್ಮುಗಿಯುವುದು।
ಮುಗುಳು ದುಡಿತಕೆ ತಣಿಸು—ಮಂಕುತಿಮ್ಮ॥ ೫

ಸತ್ಯವೆಂಬುದದೇನು ಸೈನಿಕನ ಜೀವನದಿ?।
ಕತ್ತಿಯುವನಿಗೆ ಸತ್ಯವದರಿಂದೆ ಧರ್ಮ॥
ಭುಕ್ತಿಸುಪ್ತಿಗಳ ವಿಭವಂಗಳವನಿಗೆ ಮಿಥ್ಯೆ।
ಸಾರ್ಥಕತೆಯಿಂ ಸತ್ಯ-ಮಂಕುತಿಮ್ಮ॥ ೬

ಕ್ಲೇಶ ನೂರಾಗಿರೆಯುಮಾಶೆಗಳ ಪುನರುದಯ।
ಬೇಸರದ ನುಡಿಯೊಳಂ ಲೇಸುಗಳ ನೆನಪು॥
ಆಶೆ ಸಾಯ್ತೆಂದೊಡಂ ಚೆಲುವೆನಲು ಕಣ್ಣಲೆತ।
ಮಾಸವೀ ಜೀವಗುಣ—ಮಂಕುತಿಮ್ಮ॥ ೭

ನಿಶಿ ಹಿಂದೆ, ನಿಶಿ ಮುಂದೆ, ನಡುವೆ ಮಿಸುಕಾಟ ಬಾಳ್।
ನಿಶಿ ಕೆಲವರಿಗೆ ಸೊನ್ನೆ, ಕೆಲವರಿಗೆ ಗುಟ್ಟು॥
ಮಸಕಿನಲಿ ಭೂತವೊಂದಿಹುದು ದಿಟವಾದೊಡದ।
ರುಸಿರು ಸೋಕದೆ ನಿನ್ನ?—ಮಂಕುತಿಮ್ಮ॥ ೮

ಗುಹೆಯೆಡಕೆ, ಗುಹೆ ಬಲಕೆ, ನಡುವೆ ಮಲೆ; ಕಣಿವೆಯಲಿ।
ವಿಹರಿಪೆಯ ಹುಲಿ ಬಾರದೆಂದು ನೀಂ ನಚ್ಚಿ?॥
ರಹಸಿಯದ ಭೂತ ಪಿಡಿಯದ ತೆರದಿ ಬದುಕ ನಿ।
ರ್ವಹಿಸುವುದೆ ಜಾಣ್ಮೆಯಲ—ಮಂಕುತಿಮ್ಮ॥ ೯

ಗಾಳಿಯನು ಗುದ್ದಿದರೆ ಮೈನೊಯ್ವುದೊಂದೆ ಫಲ।
ಮೂಲಸತ್ತ್ವವ ಮರೆತ ಸಾಹಸಗಳಂತು॥
ಮೇಳವಿಸೆ ಪೌರುಷಕೆ ದೈವಕೃಪೆಯಂದು ಫಲ।
ತಾಳಿ ಬಾಳಾವರೆಗೆ—ಮಂಕುತಿಮ್ಮ॥ ೧೦

ಬ್ರಹ್ಮಸ್ಪಂದನ

ಬಾಂದಳದ ಬಾಗು, ರವಿಕಿರಣಗಳ ನೀಳ್ಕೋಲು।
ಇಂದುಮಣಿ ನುಣ್ಪು, ತಾರೆಗಳ ಕಣ್ಮಿನಿಗು॥
ಚೆಂದದಂಗಾಂಗ ಭಾವದಿ ಮೊದಲ ಪಾಠವಿವು।
ಸೌಂದರ್ಯಗುರು ಪ್ರಕೃತಿ—ಮಂಕುತಿಮ್ಮ॥ ೧

ಕ್ಷಣವದೊಂದೆ ಅನಂತಕಾಲ ತಾನಾಗುವುದು।
ಅನುಭವಕೆ ಸತ್ತ್ವ ಶಿವ ಸುಂದರಗಳ ಮರೆ॥
ಮನ ತುಂಬುಶಶಿಯಾಗಿ, ನೆನಪಮೃತವಾಗುವುದು।
ಕ್ಷಣದೊಳಕ್ಷಯ ಕಾಣೋ—ಮಂಕುತಿಮ್ಮ॥ ೨

ಸುಂದರತೆಯೆನುವುದೇಂ? ಜನಕೆ ಮೈಮರೆಯಿಪಾ।
ನಂದದೊಳೆ ಮರುಮವೇಂ? ವಿಶ್ವಚೇತನದಾ॥
ಸ್ಪಂದನವೆ ಸೌಂದರ್ಯಮದುವೆ ಜೀವನ ಮೂಲ।
ಬಂಧುರತೆ ಬೊಮ್ಮನದು—ಮಂಕುತಿಮ್ಮ॥ ೩

ದೃಷ್ಟಿಚುಕ್ಕೆಯದೊಂದನೆಲ್ಲ ಚೆಂದಂಗಳ್ಗ—।
ಮಿಟ್ಟಿಹನು ಪರಮೇಷ್ಠಿ, ಶಶಿಗೆ ಮಶಿಯುವೊಲು॥
ಗುಟ್ಟೇನೊ? ರಕ್ಷೆಯೋ? ಸಿಂಗರವೊ? ಹೇಳನವೋ?।
ಮಷ್ಟು ಸೃಷ್ಟಿಗೆ ಬೊಟ್ಟು—ಮಂಕುತಿಮ್ಮ॥ ೪

ಬಿಂದು ವಿಸರಗಳನುವು, ವಂಕು ಸರಲಗಳನುವು।
ಚೆಂದ ಕಣ್ಣಿಗೆ ವರ್ಣ ವಿವಿಧಂಗಳನುವು॥
ಚೆಂದ ವೇಗ ಸ್ತಿಮಿತದನುವು, ಹುಳಿಯುಪ್ಪನುವು।
ದ್ವಂದ್ವದನುವುಗಳಂದ—ಮಂಕುತಿಮ್ಮ ೫

ಸೌಂದರ್ಯದಾಲಯ ಬರಿ ದ್ವಂದ್ವವೇನಲ್ಲ।
ದ್ವಂದ್ವದೊಳಗನುವು; ಅದು ಪರಿಮಾಣದುಚಿತ॥
ಸಂಧಾನರೀತಿಯದು, ಸಹಕಾರ ನೀತಿಯದು।
ಸಂದರ್ಭಸಹಜತೆಯೊ—ಮಂಕುತಿಮ್ಮ॥ ೬

ಸೌಂದರ್ಯದೊಳ್ ದ್ವಂದ್ವ, ಬಾಂಧವ್ಯದೊಳ್ ದ್ವಂದ್ವ।
ದ್ವಂದ್ವವೀ ಲೋಕ ಸಹವಾಸಗಳೊಳೆಲ್ಲ॥
ಮುಂದೆ ನೀನಾವುಭಯಗಳ ದಾಟಿ ಸಾಗುತಿರೆ।
ಬಂಧಮೋಚನ ನಿನಗೆ—ಮಂಕುತಿಮ್ಮ॥ ೭

ನೀಲವಿಸ್ತರವಿರಲು ನಕ್ಷತ್ರ ಬಿಂದು ಸೊಗ।
ಶೈಲದಚಲತೆಯಿರಲು ಝುರಿಯ ವೇಗ ಸೊಗ॥
ಬಾಳು ಬಯಲಂತಿರಲು ಮನೆಯಚ್ಚುಕಟ್ಟೆಂಬು।
ವೈ ಲಕ್ಷಣದೆ ಚೆಂದ—ಮಂಕುತಿಮ್ಮ॥ ೮

ನೀಳುಗೆರೆ ಬಳುಬಳುಕೆ ಕಡಲತೆರೆಯೊಯ್ಯಾರ।
ತಾಳಲಯ ಸೇರೆ ರಾಗದ ನಾಟ್ಯ ಧಾಟಿ॥
ಗೋಳದ ಜ್ವಾಲೆಯಿಂ ಗಗನಪಟ ಸಿಂಗಾರ।
ವೈ ಲಕ್ಷಣದೊಳಿಂಬು—ಮಂಕುತಿಮ್ಮ॥ ೯

ತಾಯೊ ತಂಗಿಯೊ ಎನಿಪ ಶುಚಿಯು ಸೌಮ್ಯದ ಸೊಬಗು।
ಪ್ರೇಯಸಿಯು ಕರೆವೊಲಾತುರವಡಿಪ ಬೆಡಗು॥
ಈಯೆರಡು ಸಮದ ರುಚಿ ನಿನ್ನನಿಬ್ಬಗೆಗೊಳಿಸೆ।
ಧ್ಯೇಯ ನಿನಗಾವುದೆಲೊ?—ಮಂಕುತಿಮ್ಮ॥ ೧೦

ಬಾಗಿಸದಿರಾತ್ಮವನು

ಜಗವೆನ್ನ ಮುದ್ದಿಸದದೇಕೆಂದು ಕೊರಗದಿರು।
ಮಗುವು ನೀಂ ಪೆತ್ತರ್ಗೆ, ಲೋಕಕೆ ಸ್ಪರ್ಧಿ॥
ಹೆಗಲಹೊರೆ ಹುಟ್ಟಿದರ್ಗೆಲ್ಲಮಿರುತಿರೆ, ನಿನ್ನ।
ರಗಳೆಗಾರಿಗೆ ಬಿಡುವೊ?—ಮಂಕುತಿಮ್ಮ॥ ೧

ರಾಗಿಮುದ್ದೆಯ ನುಂಗಿ ನಲಿದು ಬಾಳ್ವಾತಂಗೆ।
ಕಾಗೆಕದ್ದುಣುವ ಭಕ್ಷ್ಯವ ಕಂಡು ಕರುಬೆ?॥
ನೀಗುವುದು ಹಸಿವನ್ ಉಣಿಸೆಂತಪ್ಪುದಾದೊಡಂ।
ಬಾಗಿಸದಿರಾತ್ಮವನು—ಮಂಕುತಿಮ್ಮ॥ ೨

ಮೌನದಿಂದಂಬಲಿಯನುಂಡು ತಣಿಯುವ ಮಾನಿ।
ಶ್ವಾನನುಣುವೆಂಜಲೋಗರಕೆ ಕರುಬುವನೆ?॥
ಜ್ಞಾನಿ ನಡೆವಂ ವಿಷಯ ತರತಮ ವಿವೇಕದಲಿ।
ಮಾಣು ನೀಂ ತಲ್ಲಣವ—ಮಂಕುತಿಮ್ಮ॥ ೩

ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ।
ಚಿನ್ನದಾತುರಕಿಂತ ಹೆಣ್ಣುಗಂಡೊಲವು॥
ಮನ್ನಣೆಯ ದಾಹವೀಯೆಲ್ಲಕಂ ತೀಕ್ಷ್ಣತಮ।
ತಿನ್ನುವುದದಾತ್ಮವನೆ—ಮಂಕುತಿಮ್ಮ॥ ೪

ಮನೆಯೊಳೋ ಮಠದೊಳೋ ಸಭೆಯೊಳೋ ಸಂತೆಯೊಳೊ?
ಕೊನೆಗೆ ಕಾಡೊಳೊ ಮಸಾಣದೊಳೊ ಮತ್ತೆಲ್ಲೋ॥
ಗಣನೆಗೇರಲಿಕೆಂದು ಜನ ತಪಿಸಿ ತೊಳಲುವುದು।
ನೆನೆಯದಾತ್ಮದ ಸುಖವ—ಮಂಕುತಿಮ್ಮ॥ ೫

ಮುಗಿವೇ ಭಾಗ್ಯ

ಹಾಗೆಯೋ ಹೀಗೆಯೋ ಹೇಗೆ ಹೇಗೆಯೊ ಜನುಮ।
ಸಾಗಿ ಮುಗಿವುದು; ಮುಗಿದು ಮರೆವುದದೆ ಸುಕೃತ॥
ಈಗಲೋ ಆಗಲೋ ಎಂದೊ ಮುಗಿವುಂಟೆಂಬ।
ಭಾಗ್ಯವನು ನೆನೆದು ನಲಿ—ಮಂಕುತಿಮ್ಮ॥ ೧

ಬರುವೆಲ್ಲ ಬೇನೆಗಂ ಮದ್ದನಾರಿರಿಸಿಹರು?।
ನರರ ಕೀಳ್ತನಕೆಲ್ಲ ಪರಿಹಾರವೆಂತು?॥
ಕಿರಿದು ಪಲ್ಲನು ತಾಳಿಕೊಳಲೆಬೇಕಷ್ಟಿಷ್ಟು।
ಧರೆಯಂತರುಷ್ಣವನು—ಮಂಕುತಿಮ್ಮ॥ ೨

ತಿರಿದನ್ನವುಂಬಂಗೆ ಹುರುಡೇನು, ಹಟವೇನು।
ತಿರುಪೆಯಿಡುವರು ಕುಪಿಸಿ ಬಿರುನುಡಿಯ ನುಡಿಯೆ॥
ದುರದುರನೆ ನೋಡಿ ನೀನೆದುರುನುಡಿ ನುಡಿಯುವುದೆ?।
ಗರುವವೇತಕೆ ನಿನಗೆ?—ಮಂಕುತಿಮ್ಮ॥ ೩

ಯಾತ್ರಿಕರು ನಾವು, ದಿವ್ಯಕ್ಷೇತ್ರವೀ ಲೋಕ।
ಸತ್ರದಲಿ ನೇಮದಿಂದಿರಲಿಕೆಡೆಯುಂಟು॥
ರಾತ್ರಿ ಮೂರಾಯ್ತು ಹೊರಡೆನೆ ತೆರಳಿದೊಡೆ, ಪಾರು।
ಪತ್ಯದವ ಮೆಚ್ಚುವನು—ಮಂಕುತಿಮ್ಮ॥ ೪

ಒಂದಗಳು ಹೆಚ್ಚಿರದು, ಒಂದಗಳು ಕೊರೆಯಿರದು।
ತಿಂದು ನಿನ್ನನ್ನಋಣ ತೀರುತಲೆ ಪಯಣ॥
ಹಿಂದಾಗದೊಂದು ಚಣ, ಮುಂದಕುಂ ಕಾದಿರದು।
ಸಂದ ಲೆಕ್ಕವದೆಲ್ಲ—ಮಂಕುತಿಮ್ಮ ೫

ಹೆಸರಿನ ಹಂಬಲ

ಹೆಸರು ಹೆಸರೆಂದು ನೀಂ ಬಸವಳಿವುದೇಕಯ್ಯ?
ಕಸದೊಳಗೆ ಕಸವಾಗಿ ಹೋಹನಲೆ ನೀನು?॥
ಮುಸುಕಲೀ ಧರೆಯು ಮರೆವೆನ್ನನ್, ಎನ್ನುತ ಬೇಡು।
ಮಿಸುಕದಿರು ಮಣ್ಣಿನಲಿ—ಮಂಕುತಿಮ್ಮ॥ ೧

ಅಕ್ಕಿಯೊಳಗನ್ನವನು ಮೊದಲಾರು ಕಂಡವನು?
ಅಕ್ಕರದ ಬರಹಕ್ಕೆ ಮೊದಲಿಗನದಾರು?॥
ಲೆಕ್ಕವಿರಿಸಿಲ್ಲ ಜಗ ತನ್ನಾದಿಬಂಧುಗಳ।
ದಕ್ಕುವುದೆ ನಿನಗೆ ಜಸ?—ಮಂಕುತಿಮ್ಮ॥ ೨

ಹೆಸರು ಹೆಸರೆಂಬುದೇಂ? ಕಸುರು ಬೀಸುವ ಗಾಳಿ।
ಹಸೆಯೊಂದು ನಿನಗೇಕೆ ಬ್ರಹ್ಮಪುರಿಯೊಳಗೆ?॥
ಶಿಶುವಾಗು ನೀಂ ಮನದಿ, ಹಸುವಾಗು, ಸಸಿಯಾಗು।
ಕಸಬೊರಕೆಯಾಗಿಳೆಗೆ—ಮಂಕುತಿಮ್ಮ॥ ೩

ಸಿರಿಮಾತ್ರಕೇನಲ್ಲ, ಪೆಣ್ ಮಾತ್ರಕೇನಲ್ಲ।
ಕರುಬಿ ಜನ ಕೆಸರುದಾರಿಯಲಿ ಸಾಗುವುದು॥
ಬಿರುದು ಗಳಿಸಲಿಕೆಸಪ, ಹೆಸರ ಪಸರಿಸಲೆಸಪ।
ದುರಿತಗಳ್ಗೆಣೆಯುಂಟೆ?—ಮಂಕುತಿಮ್ಮ॥ ೪

ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ।
ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ॥
ಉದ್ಧರಿಸುವೆನು ಜಗವನೆನ್ನುತಿಹ ಸಖನೆ, ನಿ।
ನ್ನುದ್ಧಾರವೆಷ್ಟಾಯ್ತೊ?—ಮಂಕುತಿಮ್ಮ॥ ೫

ಎಂದೊ ನಿನಗೊಂದುದಿನ ಮೂಗು ಮುರಿಯುವುದು ದಿಟ।
ವೃಂದಾರಕರು ಮತ್ಸರಿಸರೆ ಗರ್ವಿತರ?॥
ಸಂದರ್ಭಗಳನದಕೆ ಜೋಡಿಪನು ವಿಧಿರಾಯ।
ಅಂದಿಕೊಳ್ಳನೆ ನಿನ್ನ?—ಮಂಕುತಿಮ್ಮ॥ ೬

ಗುರುವಭಂಗವನಾಗಿಸಿದನು ಗರುಡಂಗೆ ಹರಿ।
ಮುರಿಯಿಸಿದನಂತೆ ಫಲುಗುಣನ ಹೆಮ್ಮೆಯನು॥
ಕರುಬುವಂ ವಿಧಿ ಸೈಸನಾರೊಳಂ ದರ್ಪವನು।
ಶಿರವ ಬಾಗಿಹುದೆ ಸರಿ—ಮಂಕುತಿಮ್ಮ॥ ೭

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ।
ಫಲ ಮಾಗುವಂದು ತುತ್ತೂರಿ ದನಿಯಿಲ್ಲ॥
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ।
ಹೊಲಿ ನಿನ್ನ ತುಟಿಗಳನು—ಮಂಕುತಿಮ್ಮ॥ ೮

ಖದ್ಯೋತನಂತೆ ಬಿಡುಗೊಳದೆ ಧರ್ಮವ ಚರಿಸು।
ವಿದ್ಯುಲ್ಲತೆಯ ತೆರದಿ ತೇಜಗಳ ಸೂಸು॥
ಗೆದ್ದುದೇನೆಂದು ಕೇಳದೆ, ನಿನ್ನ ಕೈಮೀರೆ।
ಸದ್ದುಮಾಡದೆ ಮುಡುಗು—ಮಂಕುತಿಮ್ಮ॥ ೯

ಎರಡು–ತೆರ ಮೌಲ್ಯಂಗಳೆಲ್ಲಕಂ ಲೋಕದಲಿ।
ಪರಮಾರ್ಥಕೊಂದು, ಸಾಂಪ್ರತದರ್ಥಕೊಂದು॥
ಪರಿಕಿಸೆರಡಂ ನೀನು; ಹೊರಬೆಲೆಯ ಗುಣಿಪಂದು।
ಮರೆಯಬೇಡೊಳಬೆಲೆಯು—ಮಂಕುತಿಮ್ಮ॥ ೧೦

ಜಯ ನಿಷಾದಿ

ರಾಗ-ಸಾಂಗತ್ಯ ಲಾವಣಿ] [ತಾಳ-ಏಕ

ಲೀಲಾನಿಷಾದಿಯೆ ಏನೇನ ಗೆಲ್ದೆಯೆ
ಏನೇನ ತಂದಿಹೆಯೇ।
ಕಾಳಿದುರ್ಗಿಯರ ಕರಾಳಸಾಹಸಿಕೆಯ
ಪೋಲುತ ನಿಂದಿಹೆಯೇ॥ ॥ಪ॥

ಕಾಡು ಮೇಡುಗಳೊಳಗೋಡಾಡಿ ಮೃಗಗಳ
ನೀಡಾಡಿ ಮೆರೆಯುತಿಹೇ।
ಗೂಡೆಯ ಹೊತ್ತಿಹ ಬೇಡಿತಿ ಬಳಲಿರೆ
ನೋಡಿ ನೀಂ ನಗುತಲಿಹೇ॥ ೧

ಅಡಿಯಲಿ ಮುಳ್ಳಿಂದಾ ಪುಡುಗಿಯಳುತ್ತಿರೆ
ಕುಡಿನೋಟ ನೋಡುತಿಹೇ।
ಕಡುಗಲಿ ನಾನೆಂದು ಸೆಡೆದು ಗರ್ವದೆ ಮೆಯ್ಯ
ಬೆಡಗಿಂದೆ ಬಳುಕುತಿಹೇ॥ ೨

ಹುಲ್ಲೆಗಣ್ಣಿಂದಲೆ ಕೊಲ್ಲುವೆ ಪುರುಷರ
ಬಿಲ್ಲಿನ್ನು ನಿನಗೇತಕೆ।
ಭಿಲ್ಲಿತಿವೊಲು ನೀನು ಕ್ಷುಲ್ಲಜಂತುಗಳನ್ನು
ಕೊಳ್ಳೆಗೊಳ್ಳುವುದೇತಕೆ॥ ೩

ಬೇಟೆಗಾರಳ ವೇಷದಾಟವನಾಡುವೀ
ಹೂಟದರ್ಥವದೇನೆ।
ಪೋಟಿಗಾರಳೆ ನೀನಂ ಚೆನ್ನಕೇಶವನಿಗೆ
ಬೇಟದಾಟದಿ ಜಾಣೆ॥ ೪

ಮಾಸ್ತಿ ವೆಂಕಟೇಶ ಅಯ್ಯಂಗಾರ್

ತೆಂಗಾಳಿ

ಬಾರ ಮುಂಬೇಸಗೆಯ ಮೆಲುನಡೆಯ ಮಾರುತ
ಬಾರಯ್ಯ ಮಧುಮಾಸದೈತರವ ಸಾರುತ
ಬಾರ ಲೋಕಕೆ ಹರಿಸದೈಸಿರಿಯ ಬೀರುತ
ಬಾರ ಸೊಗಸಿನ ತೆರನ ಜನಕೆಲ್ಲ ತೋರುತ॥

ಮೊದಲ ವತ್ಸರದ ಹಣ್ಣೆಲೆ ಬಣ್ಣ ಮಾಸಿ
ಉದುರ್ವದಿನ ಬಹುದನರೆಭಯದಿ ಹಾರೈಸಿ
ಇದಿನೊರ್ೞಳ್ಪುದರ ಮೇಲೆ ಮೆಲು ಮೆಲನೆ ಬೀಸಿ
ಸದಯ ಬೆಸುಗೆಯ ಬಿಡಿಸಿ ಅದನು ಕಡೆಹಾಯ್ಸು॥

ತರುಲತಾರಾಜಿಗಳ ಬಾಡಿರುವ ಮೆಯ್ಯ
ಕರುಣಿ ಕೂರ್ಮೆಯ ತೋರುವೀ ನಿನ್ನ ಕೈಯ
ಸರಸಸಂಪರ್ಕದಿಂ ನಲಿಸುತಕ್ಷಯ್ಯ
ಪರಸತ್ವವಲ್ಲಿ ತಳಿರ್ವಂತೆ ಹರಸಯ್ಯ॥

ಎಲ್ಲ ಲತೆಗಳ ನೋಳ್ಪ ಮೊದಲಿಲ್ಲಿ ಬಂದು
ನಲ್ಲ ನೀ ಮರೆದಿರಲು ವಿರಹದಲಿ ನೊಂದು
ತಲ್ಲಣಿಸುವೀ ಮಲ್ಲಿಗೆಯನು ತರಿಸಂದು
ಎಲ್ಲೆಯಿಂ ಸಂತೈಸಿ ಪೊರೆ ದೀನಬಂಧು॥

ಎನ್ನ ಜೀವವ ನಿನ್ನ ಸೊಗದಿನಾವರಿಸು
ಹಣ್ಣೆಲೆವೊಲೆನ್ನ ಹಳೆಗನಸುಗಳ ಹರಿಸು
ಚೆನ್ನ ಹೊಸಬಾಳೆ ಹೊಸರಸಗಳನೊಸರಿಸು
ಚೆನ್ನ ಹೊಸ ತಳಿರು ಸುಮುಫಲಗಳನು ತರಿಸು॥

ಅರಿಯದವರಾವು ಎಮ್ಮಯ ಮನದ ನೂರು
ವಿರಸತೆಯ ತೊಟ್ಟುಗಳ ಕಳಚಿ ಅವ ತೂರು
ಮರಣದಲಿ ಜೀವನದ ಮೊಳೆಯಿಹುದು ತೋರು
ಪರಮಾತ್ಮನುಂಟು ಸುಖದೊಳವೆಂದು ಸಾರು.

ಮೆಲು ಮೆಲನೆ ಪಸರಿಸುತೆ ತೆಂಕಣಿಂ ಬಾರ
ಪಲವಿಧದ ಸಿಂಗರವ ವನಗಳಿಗೆ ತಾರ
ನಲವಿನಂಕೆಯ ನಿತ್ಯತೆಯ ತೋರು ಧೀರ
ಚೆಲುವು ದೊರೆಯಾಳ್ವುದನು ಸಾರ್ೈ ಸಮೀರ॥

ನಿರೀಕ್ಷೆ

[ಹಿಂದೂಸ್ತಾನಿ ತೋಡಿ]

ನಿನ್ನನಿದುರು-ನೋಡುತಾ ಇನ್ನೂ ಇಲ್ಲಿ ಕಾದಿಹೆವು
ಚೆನ್ನ ನೀನು ಬರದೆ ಇರಲು ಕಾರಣವ ಕಾಣೆವು

ಮಾಮರನ ಎಳೆದಳಿರಿನ ಮರೆಯಿಂದಲಿ ಮೊರೆಯುತಾ
ಭಾಮೆಯರಾ ಬನ್ನಿರೆಂದು ಕರೆಯುತಿಹುದು ಕೋಕಿಲಾ;
ಕಾಮಸೂತ್ರವೆಲ್ಲವನೂ ಒಂದೇ ಸ್ವರದಿ ಪೇಳ್ವುದಂತೆ,
ಪಾಮರೆಯರನೊಂದು ಕ್ಷಣದಿ ಪಂಡಿತೆಯರ ಮಾಳ್ಪುದಂತೆ॥

ದೂರದಿಂದ ಬೀಸಿ ಬರುತ ತೆಂಗಾಳಿ ಪ್ರೇಮದಿಂ
ದಾರಿಯೊಳಿಹ ವನವ ತೂರಿ ಜಲಪಾತವ ಸೇರುತಂ
ಸಾರಿತಂದು ಶೀಕರವನು ಪುಷ್ಪಗಳೊಡನಾಡುತಂ
ಸೂರೆಗೊಂಡು ಸೌಗಂಧವ ಸೂಸುತಿಹುದು ಸುಖವನಿಲ್ಲಿ॥

ಸುರಯಿಯು ಪಾದರಿಯು ನಾಗಲಿಂಗ ನಾಗಸಂಪಿಗೆಯ
ಅರೆಯರಳಿದ ಇರವಂತಿಯ ಬಿರಿಮುಗುಳಿನ ಮಲ್ಲಿಗೆಯ
ತಿರಿದು ತಂದು ಸೊರಗಿ ನಿಂದು ಬರುವೆಯೆಂದು ಕಾದೆವು;
ಬರದೆ ನೀನು ನಿಲಲು ಹೂವು ಮನದವೋಲು ಮರುಗಿತು॥

ಕಾಳರಕ್ಕಸಿಯರ ಕರಿಯಸೇಲೆಯಂತೆ ಕಳ್ತಲು
ಬೀಳುತಿಹುದು ವನದಮೇಲೆ; ಮನವನಂತೆ ಮುಸುಕಿತು;
ಆಳವಾಯ್ತು ಕಾಳಿಂದಿಯ ಕರಿಯನೀರ ಮಡುವಿನಂತೆ;
ತಾಳ್ವೆವೆಂದು ಈ ವಿರಹವ? ಬಾಳು ಬರಿದು ನಿನ್ನನುಳಿದು॥

ಗಾಂಧಿಯುವರ ದರ್ಶನ

ಇಂದು ನಮ್ಮ ಮಹಾತ್ಮ
  ಗಾಂಧಿಯನು ನೋಡಲಿಕೆ
ಬಂದೆವಿಲ್ಲಿಗೆ ಲೋಕ
  ಬಾಂಧವನ ದರುಶನಕೆ.

ಜನದ ಸೇವೆಯಲಿ ಮೆಯ್
  ಸೋತವನೆಂದರು.
ಅನುಮಾನ ಬರಿದು ಇದು,
  ಭೀತಿ ಬಹುಬರಿದು.

ಸೋತವನ ಮೆಯ್ಯೆ ಇದು?
  ಅಲಸಿದನೆ ಇವನು?
ಈತ ಸೋತಿಹನೆನಲು
  ಗೆಲಿದವರು ಎಲ್ಲಿ?

ಎಳೆಯ ಮಗುವಿನ ಮೊಗದ
  ನಗೆಯಿಹುದು ಮೊಗದೆ;
ಇಳೆಯರಸರಿಗೆ ಬರದ
  ಬಗೆಯ ಗಾಂಭೀರ್ಯ;

ಅನುಜರೊಡನಾಡುತಿಹ
  ಹಿರಿಯನುರುಸರಸ;
ಮನುಜರಾಟವ ನೋಡಿ
  ಕರಗಿರುವ ಕರುಣೆ;

ತಾಪಸ ವೃತ್ತಿಯಲಿ
  ಘನಿಸಿರಲು ತೇಜ
ದೀಪವೋ ದೇಹವೋ
  ಎನಿಸುತಿಹ ಒಡಲು.

ಸೋಲೆಂಬ ಮಾತುಂಟೆ
ಕರುಮವೀರನಿಗೆ?
ಮೇಲಮೇಲ್ಮೇಲಲ್ಲೆ
ಹರಿಯ ದಾಸರಿಗೆ?

ಹರಿಯ ಹಿರಿಯಾಳಿವನು
ಗಾಂಧೀ ಮಹಾತ್ಮ.
ಕರುಣಿಪನು ಹರಿ ತನ್ನ
ಬಾಂಧವಗೆ ಶುಭವ.

ಸಾಕು ಸದ್ಯಕೆ ಸೇವೆ
ಎಂದು ಹರಿ ಇವನ
ಬೇಕೆಂದೆ ಕುಳ್ಳಿರಿಸಿ
ನಿಂದಿಹನು ಕೆಲದೆ.

ಬಿಡುವ ಕೇಡೆಂದೆನುವ
ಮರುಳುತನ ಒಂದು
ಕಡೆಗಿರಲಿ; ಬಂದೆಲ್ಲ
ಎರಗಿ ಹಿರಿಯನಿಗೆ.

ಭರತಮಾತೆಯ ಹಿರಿಯ
ಕುವರನಿಗೆ, ಹರಿಯ
ಹಿರಿಯ ದಾಸಗೆ, ಬಂದು
ಇವನಿಗಿಂದೆರಗಿ.

ಇವನ ಧರಿಸಿದ ಭೂಮಿ
ಪುಣ್ಯಭೂಮಿ ಇದು;
ಇವನ ನೋಡಿದ ನಾವು
ಧನ್ಯರಾವಿಂದು.

ಕಾಡುಹೂಗಳು

೧

ಕಲ್ಲು ಮಣ್ಣು ಹೆಂಟೆ ಮುಳ್ಳು;
ಅವುಗಳ ನಡುವೆ ಇದೆಕೊ ರತ್ನ;
ಮುಳ್ಳು ಮಣ್ಣುನೊರಜಿನ ನಡುವೆ
ಇಕೊ ಹೊಚ್ಚ ಹೊಸ ಹೊನ್ನಕ್ಷತ್ರ.

ಇದೆಕೊ ದಾರಿಯ ಬದಿಯಲಿ ಹುಲ್ಲಲಿ
ವಿಷ್ಣುಕ್ರಾಂತಿಯ ಪರಿಮಿತ ನೀಲ;
ಇಲ್ಲಿ ಬೇರೆ ಯಾವುದೊ ಬಹು ನೀಲದ
ಮಡಿಲಲಿ ಹಳದಿಯ ಕುಸುರಿಯ ಲೋಲ.

ರಾಗಿಯ ಪೈರಿನ ಮಧ್ಯದಿ ಮುಳ್ಳಲಿ
ಕೊಂಬಿನ ಸುಂದರ ಇಕೊ ಗುಬ್ಬಚ್ಚಿ;
ಬದುವಿನ ಗಿಡದಲಿ ಊದಾ ಬಣ್ಣದ
ಚಳತುಂಬಿನ ಚೆಲುಹೂವಿನ ಕುಚ್ಚು.

ಹೊಲದಲಿ ಹೊಂಬಣ್ಣದ ಹೊಳೆ ಹರಿಸಿ
ದತ್ತೂರಿ; ಆರಂಬದ ಕರೆಕರೆ;
ನನ್ನವೊಲಲೆಯುವ ಸೋಂಬರ ಮೆಚ್ಚು;
ಇಲ್ಲೆ ಇದರ ಸೋದರ ನೇಸರ ಮರಿ;

ಹತ್ತೋ ನೂರೋ ದಳಗಳ ನಡುವೆ
ಮಿನು ಮಿನುಗುವ ಈ ಬಟ್ಟನೆ ಪೀತ;
ಅಲೆವೆಲರಿಗೆ ತಲೆಯೊಲೆಯದ ನಿಲುವು;
ಚೆಂದ ಇದೆಸಗುವ ಸೂರ್ಯನ ಬೂಟ.

ಇಲ್ಲಿದೊ ಬೊಂತೆಯ ಕಳ್ಳಿ ಪಿಂಗಳ
ವರ್ಣದ ಹೂವಲಿ ತೋರಿದೆ ನಚ್ಚ;
ಎಲ್ಲರ ಜೊತೆಯಲಿ ರೋಜಿ ಹೂತು
ಹರಡಿದೆ ತನ್ನ ಬಣ್ಣದ ಹುಚ್ಚ.

ಏನಿದು ಚುಕ್ಕಿ? ಅದೆ? ಕಣ್ಣಿಕ್ಕಿ
ನೋಡು; ಅದು ದಳ ನಾಲ್ಕರ ಮೋಸ;
ಹೂಮನೆತನದಲಿ ಮರಿಮಗ; ಇದ್ದೂ
ಕಾಣದ ತಾರೆಯು ಕೂಸಿನ ಕೂಸು.

ಹೂ ದಳವಿಂತು ವಿಗಡಿಸೆ ನಿಂತು
ಹಂಬಿನೇಣಿಯಲಿ ಮರವನು ಏರಿ,
ಕಾಡಿನ ಹೂಗಳು ಜಗವನು ಗೆಲಿದೆವು,
ಎಂದು ಕೂಗುತಿದೆ ಇಲ್ಲಿ ತುತೂರಿ.

೨

ತಿರೆಯಲಿ ಮನುಜರು ನೋಡುವ ನೋಡದ
ಎಲ್ಲೆಡೆ ಅರಳಿದೆ ಯಾವುದೊ ಚಂದ;
ಬರಿ ನಗೆಯಾಟದಿ ಸಂತಸವಾಂತು
ಅದು ಯಾವುದೊ ನಲವಿನ ಚಕ್ಕಂದ.

ಮರೆಯಲಿ ಅಡಗಿಹ ಹೂಗಳೆ ನೀವು
ಕಣ್ಮುಚ್ಚಾಲೆಯನಾಡುತಲಿಹಿರೋ?
ಎದುರಿಗಿದ್ದು ಕಾಣದ ಕಿರಿಚುಕ್ಕಿಯೆ
ಇಂದ್ರಜಾಲವನು ಮಾಡುತಲಿಹೆಯೊ?

ನಿಮ್ಮಾನಂದದಿ ಆಡುತ ಕೂಗುತ
ನೀವಿರೆ ನೋಡದೆ ನಡೆವೆವು ನಾವು;
ನೋಡರು ಎಂದು ಮುನಿಯುತೆ ಮರೆದಿರೊ
ಉಳಿವುದೇನು? ಕೊಳೆ ಕಸಗಳ ರೇವು.

ನೀವಿರೆ ನೆಲ ಚೆಲುವಿನ ಆಟದ ಹೊಲ;
ಮರೆದಿರೊ ಚೆಲುವಿಗೆ ಅದೆ ಹಿರಿಮಸಣ.
ನಗುತಿರೆ ನೀವು ನಗುತಿಹೆವಾವು;
ಮರೆದರೆ ಮಸಗದೆ ಲೋಕದ ವ್ಯಸನ?

ನೋಡಲಿ ಬಿಡಲಿ, ಮುನಿಯದೆ ಇಂತೇ
ಬಾಳಿರಿ ಬೆಳೆಯಿರಿ ಬಹುಬಹು ಕಾಲ;
ಎಂದಿಗು ಅರಿಯದೆ ಇರಿ ಜನ ನಿಮ್ಮನು
ನೋಡರು ಎಂಬ ಅತೃಪ್ತಿಯ ಸೋಲ.

ಬಾಳ್ವಿರಿ, ಬಲ್ಲೆನು, ವಿಶ್ವವಿಧಾತನು
ನಿಮಗೀಯದ ಐಸಿರಿ ಒಂದಿಲ್ಲ;
ಗಾತ್ರವು ಹರಕೆಯು ನುಡಿಸಿತು ಮನ್ನಿಸಿ;
ಇದರಿಂದ ನಿಮಗೆ ಕುಂದಿನಿಸಿಲ್ಲ.

ಕಾಣುವ ಸೃಷ್ಟಿಯು ಕಾಣದೆ ಸುತ್ತಿಹ
ಆನಂದಾಬ್ಧಿಯ ಅಮೃತದ ತುಂತುರು
ನೆಲ ಮೊಗ ನಭದಲಿ ಹೂ ನಗೆ ತಾರೆಯ
ರೂಪಾಂತಿಹವು, ಅನಂತ ನಿರಂತರ.

ಆ ಅಬ್ಧಿಯೊಳಾಳ್ವಾತ್ಮದ ಪುಣ್ಯ
ಎಂದಿಗೆ ಬಹುದೋ ಬಾರದೊ ಕಾಣೆನು;
ಬೆಳೆಯಲಿ ನಿಮ್ಮನು ನೋಡುತೆ ನಲಿವೀ
ಕಣ್ಣ ಪುಣ್ಯ, ಇದನೆಂದಿಗು ಮಾಣೆನು.

ಕೊಂಬು

ಅರಳುಮಲ್ಲಿಗೆ, ಮಲ್ಲಿಗೆವಾಳು,
ಮಲ್ಲಿಗೇನಹಳ್ಳಿ;
ಸಿರಸಿ, ಸಂಪಗೆ, ಕೂಡುಮಲ್ಲಿಗೆ,
ಹುಲ್ಲೆಹಳ್ಳಿ, ಹರವು.

ಮೇಲು ಹುಲುವತಿ, ಕೀಳು ಹುಲುವತಿ,
ಮಾದಲ, ಮುತ್ತೋಣಿ;
ಕಾಳಕುಂಟಿ, ತಾವರೆಕೆರೆ, ಹಿಪ್ಪಲ,
ಕೂದವಳ್ಳಿ, ಕೊಪ್ಪ,

ಸಿರಿಯೂರು, ಸಿರಿಯಂಗಳ, ಬೆಳವಲ,
ಸೊಗದವಾಣಿ, ತೆರವಿ;
ಮರಳವಾಡಿ, ಮಧುಗಿರಿ, ಬನವಾಸಿ,
ಅಗಳಿ, ಅಮೃತೂರು.

ಬೆಳಧರ, ಬೆಳ್ಳಿಯುಬಟ್ಟಲು, ಬೆಳವಿ,
ನೆಲಮಾವು, ಹಗರಿ,
ತಳಕು, ಬೆಳುಗೊಳ, ಕಿರಿಜಾಜಿಯೂರು,
ಬಿಳಿಗೆರೆ, ಹೆಬ್ಬಾಲೆ;

ಪೂನಾಡು, ಸಿರಿವಾಸಿ, ಸಕ್ಕರೆ,
ನಿಶನ, ತಿಂಗಳೂರು;
ಮಾಣಿಕಧರ, ಮಂಜೇಶ್ವರ, ಕೋಗಿಲೆ,
ಎಸಳೂರು, ಕಳಸ.

ಏನು ಹೆಸರು ಇವು, ನಮ್ಮ ತಾತದಿರು
ನಾಡೊಳಿಟ್ಟ ಹೆಸರು;
ಜೇನ ಸರಿಯುವೊಲು ಇನಿದು, ಬಲ್ಲವರ
ಹಾಡಿನವೊಲು ಮೆಲಿತು.

ಕೇಳುವ ಕಿವಿ ನಲಿಯುತಲಿದೆ, ನುಡಿಯುವ
ನಾಲಿಗೆ ನಲಿಯುತಿದೆ;
ಬಾಳೆಂತಿರೆ ಹೆಸರಿಂತಾಯ್ತೆಂಬೆನೆ
ಸೋಲುತಲಿದೆ ನೆನಸು.

ನಾಡೊಳಂದೊಗೆದ ಸೊಗದರವಿಂದದ
ಮಾಧುರ ಮಕರಂದ
ಕೋಡಿಯಿಂದುದುರಿ ಹನಿ ಹರಳಾಯಿತು
ಮೋದವೀಯಲಿಂದು.

ಅಣ್ಣತಮ್ಮದಿರೆ, ಅಕ್ಕತಂಗಿಯರೆ,
ಹೇಳುವಿರೀ ಹೆಸರ;
ಚೆನ್ನವಾಗಿಹುದು ಈಗಳು ಹೆಸರು;
ಬಾಳು ಅಂತೆ ಇಹುದೇ?

ಚೆಲುವ ಹೆಸರುಗಳ ನುಡಿವ ನಾಲಗೆಯ
ಬಾಳುವೆ ಬರಿದಾಯ್ತೋ.
ಕಳೆದುಕೊಂಡೆವೇ ಹಿರಿಮೆಯ ಚಂದ್ರನ
ಮೂಳವಾಯ್ತೆ ಬದುಕು.

ಬನ್ನಿ ಅಣ್ಣದಿರೆ ಬನ್ನಿ ತಮ್ಮದಿರೆ
ಬನ್ನಿ ಸೋದರಿಯರೆ;
ಬನ್ನಿರಿ ಎಲ್ಲರು ಆಣೆ ಇಟ್ಟುಕೊಳ್ಳಿ
ಚೆನ್ನಮಾಡಿ ಬಾಳ.

ಹೆಸರಿನ ಚೆಲುವನು ನಾಡಿನ ಬದುಕಲಿ
ಮರಳಿ ಮೊಳೆಯಿಸಿರಿ;
ಒಸಗೆಯ ತನ್ನಿರಿ ತಾಯ್ನಾಡಿರವಿಗೆ,
ತರಿಸಿ ನಗೆಯ ಮೊಗಕೆ.

ದುಡಿಯುವೆವೆನ್ನಿರಿ ದುಡಿಯಿರಿ ಬನ್ನಿರಿ
ನಾಡಿಗೆ ನುಡಿಗಾಗಿ;
ಕೊಡಿರಿ ಹಟವನು ಕೊಡಿ ಕೈಯಾಣೆಯ;
ಆಡುವ ನುಡಿ ನಡೆಸಿ.

ಕತ್ತಲು ಮುಚ್ಚಿಹ ಬಾಳಿರುಳಾಳಕೆ
ಆಸೆಯ ಚಂದ್ರನನು
ಮತ್ತೆ ತನ್ನಿರಿ, ಬೆಳಕಲಿ ನಡೆಯಿರಿ;
ಹೇಸಿ ಸೋಂಬತನವ.

ಮುತ್ತು ಮಾಣಿಕವ ಜೋಳದ ತೆರದಲಿ
ಹರಿಯಿಸಿ ನಾಡಿನಲಿ;
ಉತ್ತಮ ಚರಿತೆಯ ಚಿತ್ರಪತಾಕೆಯ
ಮೆರೆಯಿಸಿ ಬಾನಿನಲಿ.

ವಾಮನ

ಅರಿಯದೊಲು ಬಾರಯ್ಯ ಮನ ತನ್ನ ನಿನ್ನೊಳಗೆ
ಮರೆವುದನು ಕಲಿವ ಮುನ್ನ

ಮೊದಮೊದಲು ಬರುವಂದು ಮೆದುಗಮನದಲಿ ಬಂದು
ಎದೆವುಗುವ ಸೊಬಗಿಂದೆ ಇನಿದನಿಯ ನಗೆಯಿಂದೆ

ಎದುರಿನಲಿ ನಿಂದಿರುತೆ ಎದೆಯ ಕುಂದಿಸದಂತೆ
ಮೊದಲು ಸ್ವಲ್ಪವನು ಕೇಳು ಹರಿಯೇ
ಮೊದಲು ಸ್ವಲ್ಪವನು ಕೇಳು

ಮೊದಲು ಸ್ವಲ್ಪವನು ಕೊಡಲು ಮನವು ತಾನೊಪ್ಪುವುದು
ಅದನು ಸ್ವೀಕರಿಸಿ ಹಿರಿದಾಗು ಅಲ್ಲಿಯೆ ದೊರೆಯೆ
ಹೃದಯದಾಗಸವನೆಲ್ಲವ ನೀನೆ ತುಂಬು ದೊರೆ
ಇದಕೆ ಮನ ಒಪ್ಪಬಹುದು ಹರಿಯೇ
ಇದಕೆ ಮನ ಒಪ್ಪಬಹುದು

ಒಮ್ಮೆಯೇ ಹಿರಿದಾಗಿ ಬಂದು ಎಲ್ಲವನೆನಗೆ
ಸುಮ್ಮನೆಯೆ ಕೊಡು ಎನಲು ಹೆದರಿ ಮನ ಚೆದುರುವುದು
ತಮ್ಮ ನೀನಾರು ಇರು ತುಸು ಎಂದು ತಡೆಯುವುದು
ನೆಮ್ಮಲಾರದು ನಿನ್ನನು ಹರಿಯೇ
ನೆಮ್ಮಲಾರದು ನಿನ್ನನು

ಒಂದು ಸಂಜೆ

ಸಂಜೆಯಾಗಸದಾಳವನು ಚೆಲ್ವ ಲೇಪದೊಲು
ತಿಳಿಯ ನೀಲದ ವರ್ಣ ಸವರಿರುವುದು;
ರಂಜಿಸುತಲಿಹುದು ನೀಲದ ಪಟದಿ ಚಿತ್ರವೆನೆ
ಎಲೆಯಲುಗದೊಲು ನಿಂತ ಮರದ ಸಾಲು.

ಜೀಯೆಂದು ಚಿಟ್ಟೆ ಬೇಲಿಯಲಿ ಮೊರೆಯುತಲಿಹುದು:
ಮಳೆರಾಯ ಬಾ ಎಂಬ ಊರ ಕೂಗು .
ಗಾಯನದಿ ಕಳವಳವ ಮರೆಸಿ ಕೇಳುತಲಿಹುದು;
ಇಳಿಯುತಿಹುದಿಳೆಗೆ ಹುಣ್ಣಿಮೆಯ ಇರುಳು.

ದೇವಾಲಯದ ಒಲಗದ ಮಂಜುಳಾರಾವ
ತೇಲುತಿಹುದೆಲರಿನಲಿ; ನಭವ ನೀಲ,
ಆವೇಶ ಕವಿಯ ಗೆಲುವಂತೆ ಗೆಲುತಿರೆ, ಇನಿಸು
ನೀಲಿಮೆಯನಾಂತುದು ಶರಚ್ಚಂದ್ರಿಕೆ.

ಅನಂತಪುರದಲ್ಲಿ ಮಾರ್ಗಶಿರದ ಹುಣ್ಣಿಮೆ

ನನ್ನ ತಾಯ್ನಾಡ ಮೂಗುತಿಯೊ ಸೆರಗಿನ ಮುತ್ತೊ
ಹೆರಳ ಮಲ್ಲಿಗೆಯೊ ಎಂಬಂತಿಹುದನಂತಪುರ,
ಹುಣ್ಣಿಮೆಯು ಸಂಜೆಯಿಾ ಬೆಳಕಿನಲಿ. ಎಂತವರ
ಮನವನಾದರು ಗೆಲುವ ಚೆಲುವಾಂತುದೀ ಹೊತ್ತು.
ದೂರದಲಿ ಮೂಡಿ ಮೆಲು ಮೆಲನೆ ಮೇಲೇರುತ್ತೆ
ಬುಕ್ಕರಾಯ ಸಮುದ್ರವನು ತನ್ನ ತಾಯ್ ಎಂದೆ
ನೆನೆದು ನಗುವೆಳೆಯನೆಂತೆಸೆಯುತಿಹನೀ ಚಂದ್ರ.
ಅಕೊ ಬೆಳ್ಳಿ ಪಡುಗಡೆಗೆ ಮೆಲುಮೆಲನೆ ಸಾಗುತ್ತ
ಅಂತೆ ನೊಡಲು, ಕಾಂಬರಿತ್ತ ಕುಳಿತಿರುವ ಹೆರೆ
ಇತ್ತೆ ಕುಳಿತಿಹ ತಾರೆ, ಕೆರೆಯ ರಚಿಸಿದುದಾರಿ
ವೀರ ಬುಕ್ಕರಸ, ಜೀವವ ಧಾರೆಯೆರೆದೊಮ್ಮೆ
ಇದನು ಉಳಿಸಿದ ವೀರಮಾತೆ ಸಿರಿ ಮುಸಿಲಮ್ಮ,
ಇದ ನೋಡ ಬಂದರೆಂಬಂತೆ. ಸಂತಸ ಮಿಾರಿ
ಬಂಧುಗಳ ನುಡಿಸುವಂತಿವೆ ನಗುವ ಹೊಳಲುಕೆರೆ.

ವಿಶ್ವೇಂದ್ರಜಾಲ

ನೋಡಿಹೆನು ಇಂದ್ರಜಾಲಿಕನಾಡುತಿರುವಾಟ.
ಅವನು ಮೇಲಕೆ ಎಸೆವುದೆಂಟು ಗಾಜಿನ ಬುರುಡೆ:
ಯಾವುದೋಕ್ಷಣ ಅವನ ಕೈಯೊಳಿರುವುದು ಎರಡೆ.
ಯಾವುದೂ ನೆಲಕೆ ಬೀಳದು. ನೋಡುತಿಹ ನೋಟ
ಯಾವೊಂದು ಹೊತ್ತಿನಲಿ ಯಾವ ಬುರುಡೆಯ ಓಟ
ವಿತ್ತೆ ಎಂಬುದು ಗ್ರಹಿಸಲಾರದಿರೆ, ಎಂಟನೂ
ಬಿಡದೆ ನಡಸುವ ಒಂದು ಚಲನದ ನಿಘಂಟನು
ಕಲ್ಪಿಸಿದೆ ಆಡುವನ ಕೈ ಮನದ ಪರಿಪಾಠ.
ಲಕ್ಷೋಪಲಕ್ಷ ಸಂಖ್ಯಾಕ ನೀಹಾರಿಕಾ

ಶತಲಕ್ಷ ಸಾಹಸ್ರ ಸೂರ್ಯೇಂದು ತಾರಕಾ
ನಿವಹವನು ಶತಕೋಟಿ ಯೋಜನದ ನಭಕೆಸೆದು
ಎಲ್ಲವೂ ಅಲ್ಲಿಯೇ ಆಡುತಿರುವಂತೊಸೆದು
ನಲಿಯುತಿಹ ಇಂದ್ರಜಾಲವನರಿಯಬಲ್ಲುದೆ
ಈ ಮನಸು ಈ ಬುದ್ಧಿ ಈ ನನ್ನ ಹುಲ್ಲೆದೆ?

ಬೆಟ್ಟದಪುರದ ಬೆಟ್ಟವನ್ನು ನೋಡು

ಅದೆಕೊ, ಬೆಟ್ಟದಪುರದ ಬೆಟ್ಟ ತಲೆಯನು ಎತ್ತಿ,
ಸಾರ್ವಭೌಮನ ತೆರದೆ, ತನ್ನಾಶ್ರಯದ ದೇಶ
ಎಂತಿರುವುದೆಂದು ನೋಡುತಲಿಹುದು. ಆಕಾಶ
ಕೊಡೆಯಾಯ್ತುದಕೆ. ತನ್ನ ರಾಜಮುದ್ರೆಯನೊತ್ತಿ,
ನಾ ನೋಳ್ಪ ಈ ಎಲ್ಲ ನಾಡು ನನ್ನದು; ಸೊತ್ತು;
ಎಂದುಸುರುತಿದೆ ಗಂಡುಗಲ್ಲಿನೀ ಗಿರಿರಾಶಿ.
ಆಹ! ಏನಿದು? ಮರಳಿ ನೋಡೆ ಬೇರೆಯ ದೇಸಿ
ಕಾಣುತಿದೆ ಇದರ ಭಾವದಲಿ. ಅಂದಾಹೊತ್ತು
ನನ್ನ ನೆರಳಲಿ ಬೆಳೆದು ಬೆಳುಗೊಡೆಯ ಹಿಡಿದೆತ್ತಿ,
ನಾಡನೆಲ್ಲವ ವೀರತನದಿಂದ ಪೊರೆದಾಳಿ,
ಹಗೆಯಾಗಿ ಬಂದವರ ಹೃದಯಗಳ ಹುಲುಸೀಳಿ
ಬಾಳ್ದರಸರೇನಾದರು? ಹೋದರೆಲ್ಲೆತ್ತ?
ಎನುತು ನೋಡುವುದೊ ಗಿರಿ ತುದಿಗಾಲಿನಲಿ ನಿಂದು?
ನೆನೆದು ಮಳೆಯಲಿ, ಬೇಗೆಯಲಿ ಬೆಂದು ನೊಂದು?

ಎಂ. ಆರ್. ಶ್ರೀನಿವಾಸಮೂರ್ತಿ

ಒಂದು ಕಾಗದ

ನಿಮ್ಮ ಪತ್ರ ಬಂದು ಸೇರಿ
ಎರಡು ಮೂರು ಬಾರಿಯೋದಿ
ಎಲ್ಲ ತಿಳಿದೆನು.

ನೀವು ನನಗೆ ಗಂಡನಲ್ಲ
ನಾನು ನಿಮಗೆ ಹೆಂಡಿರಲ್ಲ
ನೀವು ತಿಳಿವುದು.

ಕುಂಟು ಕಾಲು ಬಚ್ಚು ಬಾಯಿ
ಮೆಳ್ಳುಗಣ್ಣು, ನಿಮ್ಮ ಸೇವೆ
ಮಾಡಲಾರೆನು.

ಬ್ರಹ್ಮಹಿಂದೆ ಗಂಟು ಹಾಕಿ
ಗಂಡಹೆಂಡಿರಾದೆವೆಂದು
ನೀವು ಬರೆವಿರಿ.

ಬ್ರಹ್ಮಗಿಮ್ಮ ಹಾಕಲಿಲ್ಲ
ಅಪ್ಪ ತಂದು ನನಗೆ ನಿಮಗೆ
ಗಂಟುಹಾಕಿದ

ಹೆತ್ತ ತಂದೆ ಮಾರಿಕೊಂಡು
ಮೃತ್ಯುವಾಗಿ ಕೊಲ್ಲಲಿಂತು
ಮಾಡಲೇನಿದೆ.

ಶಾಸ್ತ್ರ ಗೀಸ್ತ್ರ ತಿಳಿಯೆ ನಾನು
ಬರೆದ ಜನರು ಹೆಂಡಿರಾಗಿ
ಸೇವೆಮಾಡಲಿ.

ನೋಟ ಬೇಟ ಗಂಡಿಗೆಂದು
ಧರ್ಮಶಾಸ್ತ್ರ ಹೆಣ್ಣಿಗೆಂದು
ನುಡಿವರೆಲ್ಲರು

ಕೋರ್ಟು ಗೀರ್ಟು ಆಡಬೇಡ
ಜಡ್ಜಿ ಧರ್ಮವೇನು ಬಲ್ಲ
ನಾನು ತಿಳಿಸುವೆ.

ಕುರ್ಚಿಮೇಲೆ ಕುಳಿತುಕೊಂಡು
ಏನೊ ಗೀಚಿ ಎದ್ದು ಬರುವ
ಮಾತಿದಲ್ಲವು.

ತನ್ನ ಮಗಳ ನಿಮಗೆ ಕೊಟ್ಟು
ತನ್ನ ಮಗನ ಎನಗೆ ಕೊಟ್ಟು
ಮದುವೆಮಾಡಲಿ.

ಎನ್ನ ದುಃಖ ಆರಿಗುಂಟು
ಬಾಳಬೇಕು, ಬಾಳಲಾರೆ
ಹಾಳು ಲೋಕವು.

ಬಯ್ವ ಜನರು ಜರಿವ ಜನರು
ಅವರಿಗೇನು, ಬಾಯಿ ಕೊಬ್ಬು
ನೋವು ತೆಗೆವರೆ?

ಬಲ್ಲೆನವರ ಮನದ ಭಾವ
ಇಂದು ನಾನು ಸೂಳೆಯಾಗೆ
ಸುಖಿಪರೆಲ್ಲರು.

ಭೂಮಿ ಮೇಲೆ ಇರುವಳಲ್ಲ
ಇಂದೆ ನಾನು ಕೆರೆಗೆ ಬಿದ್ದು
ಜನ್ಮ ನೀಗುವೆ.

ಶಾಸ್ತ್ರ ಧರ್ಮ ತಣ್ಣಗಾಗಿ
ಬಯ್ವ ಜನರು ಉರಿದು ಹೋಗಿ
ಲೋಕವಡಗಲಿ.

ಪಾತರಗಿತ್ತಿ ಪಕ್ಕ

ಪಾತರಗಿತ್ತೀ ಪಕ್ಕಾ
ನೋಡೀದೇನ ಅಕ್ಕಾ!

ಹಸಿರು ಹಚ್ಚಿ ಚುಚ್ಚಿ
ಮೇಲ್ಯ ಕರಿಸಿಣ ಹಚ್ಚಿ,

ಹೊನ್ನ ಚಿಕ್ಕಿ ಚಿಕ್ಕಿ
ಇಟ್ಟು ಬೆಳ್ಳೀ ಅಕ್ಕಿ,

ಸುತ್ತೂ ಕುಂಕುಮದೆಳಿ
ಎಳೆದು ಕಾಡಿಗೆ ಸುಳಿ,

ಗಾಳೀ ಕೇನೀಲೇನ್ಯ
ಮಾಡಿದ್ದಾರ ತಾನ!

ನೂರು ಆರು ಪಾರು
ಯಾರು ಮಾಡಿದ್ದಾರು!

ಏನು ಬಣ್ಣ ಬಣ್ಣ
ನಡುವೆ ನವಿಲಗಣ್ಣ!

ರೇಶಿಮೆ ಪಕ್ಕ ನಯ
ಮುಟ್ಟಲಾರೆ ಭಯ!

ಹೂವಿನ ಪಕಳಿಗಿಂತ
ತಿಳಿವು ತಿಳಿವು ಅಂತ?

ಹೂವಿಗೆ ಹೋಗಿ ತಾವ
ಗಲ್ಲಾ ತಿವಿತಾವ.

ಬನ ಬನದಾಗ ಆಡಿ
ಪಕ್ಕಾ ಹುಡಿ ಹುಡಿ;

ಹುಲ್ಲುಗಾವುಲದಾಗ
ಹಳ್ಳೀ ಹುಡುಗೀ ಹಾಂಗ—

ಹುಡದೀ ಹುಡದೀ ಭಾಳ
ಆಟಕ್ಕಿಲ್ಲ ತಾಳ.

ಕಿರೇ ಸೊರೇ ಪಾನ—
ದಲ್ಲಿ ಧೂಳಿಸ್ನಾನ.

ತುರುಬಿ ತುಂಬಿ ತೋಟ
ದಲ್ಲಿ ದಿನದ ಊಟ.

ಕಳ್ಳಿ ಹೂವ ಕಡಿದು
ಹೂತುಟಿನೀರ ಕುಡಿದು;

ನಾಯಿ ಛತ್ತರಿಗ್ಯಾಗ
ಕೂತು ಮೋಜಿನಾಗ,

ರುದ್ರಗಂಟೆ ಮೂಸಿ
ವಿಷ್ಣುಗಂಟೆ ಹಾಸಿ,

ಹೇಸಿಗೆ ಹೂವ ಬಳಿಗೆ
ಹೋಗಿ ಒಂದ್ಯಗಳಿಗೆ,

ಮದಗುಣಿಕಿಯ ಮದ್ದು
ಹುರುಪಿಗಿಷ್ಟು ಮೆದ್ದು,

ಕಾಡ ಗಿಡ ಗಂಟಿ
ಅಂಚಿಗಂಟಿ ಗಿಂಟಿ,

ನೀಗಿ ಬಳ್ಳಿ ತಾಗಿ
ಪಕ್ಕಾ ಬೆಳ್ಳಗಾಗಿ,

ಗೊರಟಿಗೆಗೆ ಶರಣ
ಮಾಡಿ ದೂರಿಂದ್ಯನ

ಮಾಲಿಂಗನ ಬಳ್ಳಿ
ತೂಗೂ ಮಂಚದಲ್ಲಿ,

ತೂಗಿ ತೂಗಿ ತೂಗಿ
ದಣಿದಾಂಗ ಆಗಿ,

ಬೇಲೀ ಬಳ್ಳಿಯೊಳಗ
ಅದರ ನೆರಳ ತೆಳಗ

ನಿದ್ದಿಗುಳ್ಯಾಡಿ
ಪಗಡಿ ಪಕ್ಕಾ ಆಡಿ,

ಗುಲಬಾಕ್ಷಿಯು ಹೂವ
ಕುಶಲ ಕೇಳತಾವ;

ಹುಡಿಯು ನೀರಿನ್ಯಾಗ
ತುಳುಕಿಸುತ್ತ ಬ್ಯಾಗ

ಹಡಿಯೆ ಬೀಜ ಗಂಡು
ಹಾರ ಹರಿಕಿ ಅಂದು,

ಅಡವಿ ಮಲ್ಲಿಗಿ ಕಂಡು
ಅದರ ಕಂಪನುಂಡು;

ಹುಲ್ಲು ಹೊಲಕ ಬಂದು
ಗುಬ್ಬಿ ಬೆಳಸಿರೆಂದು,

ಇಷ್ಟು ಎಲ್ಲಾ ಮಾಡಿ
ಸಪ್ಪಳಿಲ್ಲದಾಡಿ,

ತಾಳ ಚವ್ವ ಚಕ್ಕ
ಕುಣಿತ ತಕ್ಕ ತಕ್ಕ;

ಆಸಿ ಹಚ್ಚಿ ಹ್ಯಾಂಗ
ಕಂಡು ಸಿಕ್ಕಧಾಂಗ

ಸಿಕ್ಕಲ್ಹೋಡತಾವ
ಅಲ್ಯೂ ಇಲ್ಯೂ ಅವ್ವ

ಕಾಣದೆಲ್ಹೊ ಮೂಡಿ
ಬಂದು ಗಾಳಿಗೂಡಿ,

ಇನ್ನು ಎಲ್ಲಿಗೋಟ?
ನಂದನದ ತೋಟ!

ಬೆಳಕು

ಮೂಡಲ ಮನೆಯಾ ಮುತ್ತಿನ ನೀರಿನ
ಎರಕ್ಯಾವ ಹೊಯ್ದಾ
ನುಣ್ಣ-ನ್ನೆರಕ್ಯಾವ ಹೊಯ್ದಾ
ಬಾಗಿಲ ತೆರೆದೂ ಬೆಳಕು ಹರಿದೂ
ಜಗವೆಲ್ಲಾ ತೊಯ್ದಾ
ಹೋಯ್ತೊ—ಜಗವೆಲ್ಲಾ ತೊಯ್ದಾ.

ರತ್ನದ ಕಸದಾ ಕಾರಂಜೀಯೂ
ಪುಟಪುಟನೇ ಪುಟಿದು
ತಾನೇ—ಪುಟಪುಟನೇ ಪುಟಿದು
ಮಘಮಘಿಸುವಾ ಮುಗಿದ ಮೊಗ್ಗೀ
ಪಟಪಟನೇ ಒಡೆದು
ತಾನೇ—ಪಟಪಟನೇ ಒಡೆದು.

ಎಲೆಗಳ ಮೇಲೆ ಹೂಗಳ ಒಳಗೇ
ಅಮೃತ್ಯದ ಬಿಂದು
ಕಂಡವು—ಅಮೃತ್ಯದ ಬಿಂದು
ಯಾರಿರಿಸಿರುವರು ಮುಗಿಲ್ಯಮೇಲಿಂ
ದಿಲ್ಲಿಗೇ ತಂದು
ಈಗ ಇಲ್ಲಿಗೇ ತಂದು.

ತಂಗಾಳೀಯಾ ಕೈಯೊಳಗಿರಿಸೀ
ಎಸಳೀನಾ ಚವರಿ
ಹೂವಿನ—ಎಸಳೀನಾ ಚವರಿ
ಹಾರಿಸಿಬಿಟ್ಟರು ತುಂಬಿಯ ದಂಡು
ಮೈಯೆಲ್ಲಾ ಸವರಿ
ಗಂಧಾ-ಮೈಯೆಲ್ಲಾ ಸವರಿ.

ಗಿಡಗಂಟೆಯಾ ಕೊರಳೊಳಗಿಂದ
ಹಕ್ಕಿಗಳಾ ಹಾಡು
ಹೊರಟಿತು—ಹಕ್ಕಿಗಳಾ ಹಾಡು.
ಗಂಧರ್ವರಾ ಸೀಮೆಯಾಯಿತು
ಕಾಡಿನಾ ನಾಡು
ಕ್ಷಣದೊಳು-ಕಾಡಿನಾ ನಾಡು.

ಕಂಡಿತು ಕಣ್ಣು ಸವಿದಿತು ನಾಲಗೆ
ಪಡೆದೀತೀ ದೇಹ
ಸ್ಪರ್ಶಾ—ಪಡೆದೀತೀ ದೇಹ.
ಕೇಳಿತು ಕಿವಿಯು ಮೂಸಿತು ಮೂಗು
ತನ್ಮಯವೀ ಗೇಹಾ
ದೇವರ-ದೀ ಮನಸಿನ ಗೇಹಾ.

ಅರಿಯದು ಅಳವು ತಿಳಿಯದು ಮನವು
ಕಾಣ್ಯದೋ ಬಣ್ಣಾ
ಕಣ್ಣಿಗೆ—ಕಾಣದೋ ಬಣ್ಣಾ
ಶಾಂತಿರಸವೇ ಪ್ರೀತಿಯಿಂದಾ
ಮೈದೋರೀತಣ್ಣಾ
ಇದು ಬರಿ-ಬೆಳಗಲ್ಲೋ ಅಣ್ಣಾ.

ಹಕ್ಕಿ ಹಾರುತಿದೆ ನೋಡಿದಿರಾ?

ಇರುಳಿರುಳಳಿದು ದಿನ ದಿನ ಬೆಳಗೆ
ಸುತ್ತಮುತ್ತಲೂ ಮೇಲಕೆ ಕೆಳಗೆ
ಗಾವುದ ಗಾವುದ ಗಾವುದ ಮುಂದೆ
ಎವೆತೆರೆದಿಕ್ಕುವ ಹೊತ್ತಿನ ಒಳಗೆ
ಹಕ್ಕಿ ಹಾರುತಿದೆ ನೋಡಿದಿರಾ?

ಕರಿನರೆ ಬಣ್ಣದ ಪುಚ್ಚಗಳುಂಟು
ಬಿಳಿ–ಹೊಳೆ ಬಣ್ಣದ ಗರಿ–ಗರಿಯುಂಟು
ಕೆನ್ನನ ಹೊನ್ನನ ಬಣ್ಣ–ಬಣ್ಣಗಳ

ರೆಕ್ಕೆಗಳೆರಡೂ ಪಕ್ಕದಲುಂಟು
ಹಕ್ಕಿ ಹಾರುತಿದೆ ನೋಡಿದಿರಾ?

ನೀಲ ಮೇಘ ಮಂಡಲ–ಸಮ ಬಣ್ಣ!
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ!
ಚಿಕ್ಕೆಯ ಮಾಲೆಯು ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ–ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ–ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ?

ಯುಗ–ಯುಗಗಳ ಹಣೆಬರಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ?

ಮುಟ್ಟಿದೆ ದಿಗ್ಮಂಡಲಗಳ ಅಂಚ
ಆಚೆಗೆ ಚಾಚಿದೆ ತನ್ನಯ ಚುಂಚ
ಬ್ರಹ್ಮಾಂಡಗಳನು ಒಡೆಯಲು ಎಂದೋ
ಬಲ್ಲರು ಯಾರಾ ಹಾಕಿದ ಹೊಂಚ
ಹಕ್ಕಿ ಹಾರುತಿದೆ ನೋಡಿದಿರಾ?

ಜನುಮದ ಜಾತ್ರಿ

ನೇತ್ರಪಲ್ಲವಿಯಿಂದ ಸೂತ್ರಗೊಂಬೀ ಹಾಂಗ
ಪಾತ್ರ ಕುಣಿಸ್ಯಾನ ಒಲುಮಿಗೆ ದಿನದಿನ
ಜಾತ್ರಿಯೆನಿಸಿತ್ತ ಜನುಮವು ೧

ಹುಬ್ಬು ಹಾರಿಸಿದಾಗ ಹಬ್ಬ ಎನಿಸಿತು ನನಗ
'ಅಬ್ಬ' ಎನಬೇಡ ನನ್ನಗೆಣತಿಸಾವಿರಕ
ಒಬ್ಬ ನೋಡವ್ವ ನನ ನಲ್ಲ ೨

ಕಣ್ಣೆವಿ ಎತ್ತಿದರ ಹುಣ್ಣೀವಿ ತೆರಧಾಂಗ
ಕಣ್ಣಿ ಏನಂತ ಬಣ್ಣಿಸಲೆ ಚಿತ್ತಕ್ಕ
ಕಣ್ಣು ಬರೆಧಾಂಗ ಕಂಡಿತ್ತು ೩

ಹೇಸಿರಲು ಈ ಜೀವ ಆಸಿ ಹುಟ್ಟಿಸುತಿತ್ತು
ಮಿಾಸಿ ಮೇಲೆಳೆದ ಕಿರಿಬೆರಳು ಕೆಂಗಯ್ಯ
ಬೀಸಿ ಕರೆದಾನ ನನಗಂತ ೪

ತಂಬುಲ ತುಟಿ ನಗಿ ಹೊಂಬಿಸಿಲೆಂಬಂತೆ
ಬಿಂಬಿಸಿತವ್ವಾ ಎದಿಯಾಗ ನಂಬೀಸಿ
ರಂಬೀಸಿತವ್ವಾ ಜೀವವ. ೫

ಪುಟ್ಟ ವಿಧವೆ

ಆಕೆಯಿದ್ದಳು ಕೂಸು, ಈತನಿನ್ನೂ ಹುಡುಗ
ಅವರ ತಾಯ್ತಂದೆಗಳ ಹಿಗ್ಗು ಎಷ್ಟು!
ಧರ್ಮದಾ ಹೆಸರಿನಲಿ ಅವರ ಕೈಕೂಡಿಸಲು
ಇವರಿಗೆನಿಸಿತು ಹರ್ಷ ಹಬ್ಬದಷ್ಟು.

ಕೊರಳ ಕರಿಮಣಿ, ಗಲ್ಲದರಿಣಿಷಿಣವು ಮುಗಬೊಟ್ಟು
ಆ ಮೇಲೆ ಉದ್ದು ಕುಂಕುಮದ ಅಂದ !
ಆ ಪುಟ್ಟ ಮುತ್ತೈದೆ ಪುಟಪುಟನೆ ನೆಗದಾಡೆ
ಅಷ್ಟೆ ಕಂಡಿತು ಕಣ್ಣಿಗೆಷ್ಟೊ ಚಂದ.
ಆಕೆ ದೊಡ್ಡವಳಾಗಿ, ಈತ ಚಿಕ್ಕವನಿದ್ದು
ಶೋಭನವ ಮಾಡಿದ್ದು ಊರಿಗಾಟ !
ಪೆಚ್ಚುಮೋರೆಯ ಅಳಿಯ–ದೇವರಿದಿರಲಿ ಜನಕೆ
ಕಡಿಮೆ ಸಿಹಿಯೆನಿಸಿತ್ತೆ ಪ್ರಸ್ತದೂಟ ?

ವರ್ಷವೆಂಬುದರೊಳಗೆ ಚೊಚ್ಚಿಲದ ಸಂಭ್ರಮವು
ದೈವದಾಟವು ಎಂದಿತಿಡಿಯ ಊರು.
ಮಗನು ಬಂದಿರೆ ಇಹಕೆ, ತಂದೆ ಏರಿದ ಪರಕೆ;
ಕ್ಷೀರಸಾಗರವಾಯ್ತು ಉಪ್ಪುನೀರು.
ತಂದೆ ಹಿಡಿದಿಹ ಹಾದಿ ಒಂದೆರಡು ದಿನದಲ್ಲಿ
ಕೂಸು ಹಿಡಿದಿತು; ತಾಯಿಗುಳಿದಿತೇನು ?
ಮೈ–ಗೋರಿಯಲಿ ಮಡಗಿ ಜೀವ; ಜೀವನವಾಯ್ತು
ಜೇನುಹುಳ ಉಳಿದಂತೆ ಕಳೆದು ಜೇನು.

ಸತ್ತೆನೆಂದಳು ಕೂಸು-ತಾಯಿ ಅಯ್ಯೋ ಎಂದು
ಭೋರೆಂದು ಗೋಳಿಟ್ಟು ಹೊಟ್ಟೆಹೊಸೆದು
ಹುಚ್ಚೆದ್ದು ಹೌಹಾರಿ ಹುಯ್ಯಲಿಟ್ಟಳು ಆಕೆ
ತನ್ನ ತಾ ಶಪಿಸಿದಳು ಹಲ್ಲು ಮಸೆದು.
ಹತ್ತುದಿವಸಕೆ ಹಾಳುಮುತ್ತೈದೆತನ ಹೋಗಿ
ವೈಧವ್ಯಸಂಪತ್ತು ಪಡೆದಳಾಕೆ;
ಮನೆಯುವರು ವೈದಿಕರು, ಊರುಧರ್ಮದ ತವರು;
ಶಾಸ್ತ್ರವಿರೆ ಬೇರೆಯ ವಿಚಾರವೇಕೆ ?

ಹುಬ್ಬಳ್ಳಿಯಾಂವಾ

ಇನ್ನೂ ಯಾಕ ಬರಲಿಲ್ಲವ್ವಾ ಹುಬ್ಬಳ್ಳಿಯಾಂವಾ
ವಾರದಾಗ ಮೂರಸರತಿ ಬಂದು ಹೋದಾಂವಾ ॥ಪಲ್ಲ॥

ಭಾರಿ ಜರದ ವಾರಿರುಮ್ಮಾಲಾ ಸುತ್ತಿಕೊಂಡಾಂವಾ
ತುಂಬ–ಮಿಾಸಿ ತೀಡಿಕೋತ ಹುಬ್ಬ ಹಾರಸಾಂವಾ

ಮಾತುಮಾತಿಗೆ ನಕ್ಕ ನಗಿಸಿ ಆಡಿಸ್ಯಾಡಾಂವಾ
ಏನೊ ಅಂದರ ಏನೋ ಕಟ್ಟಿ ಹಾಡ ಹಾಡಾಂವಾ
ಇನ್ನೂ ಯಾಕ...

ತಾಳೀಮಣಿಗೆ ಬ್ಯಾಳಿಮಣಿ ನಿನಗೆ ಬೇಕೇನಂದಾಂವಾ
ಬಂಗಾರ–ಹುಡೀಲೇ ಭಂಡಾರಾನ ಬೆಳಸೇನಂದಾಂವಾ
ಕಸಬೇರ ಕಳೆದು ಬಸವೇರ ಬಿಟ್ಟು ದಾಟಿ ಬಂದಾಂವಾ
ಜೋಗತೇರಿಗೆ ಮೂಗುತಿ ಅಂತ ನನ್ಯಾಗ ಅಂದಾಂವಾ
ಇನ್ನೂ ಯಾಕ...

ಇರು ಅಂದರ ಬರತೇನಂತ ಎದ್ದು ಹೊರಟಾಂವಾ
ಮಾರೀ ತೆಳಗ ಹಾಕಿತೆಂದರೆ ಇದ್ದುಬಿಡಾಂವಾ
ಹಿಡಿಹಿಡೀಲೆ ರೊಕ್ಕಾ ತಗದು ಹಿಡಿ ಹಿಡಿ ಅನ್ನಾಂವಾ
ಖರೇ ಅಂತ ಕೈಮಾಡಿದರ ಹಿಡ್ಯದ ಬಿಡಾಂವಾ
ಇನ್ನೂ ಯಾಕ...

ಚಾಹಾದ ಜೋಡಿ ಚೂಡಾಥಾಂಗ ನೀ ನನಗಂದಾಂವಾ
ಚೌಡಿಯಲ್ಲ ನೀ ಚೂಡಾಮಣಿಯಂತ ರಮ್ಮಿಸ ಬಂದಾಂವಾ
ಬೆರಳಿಗುಂಗುರಾ ಮೂಗಿನಾಗ ಮೂಗಬಟ್ಟಿಟ್ಟಾಂವಾ
ಕಣ್ಣಿನಾಗಿನ ಗೊಂಬೀಹಾಂಗ ಎದ್ಯಾಗ ನಟ್ಟಾಂವಾ
ಇನ್ನೂ ಯಾಕ...

ಹುಟ್ಟಾ ಯಾಂವಾ ನಗೀಕ್ಯಾದಿಗೀ ಮುಡಿಸಿಕೊಂಡಾಂವಾ
ಕಂಡ ಹೆಣ್ಣಿಲೇ ಪ್ರೀತಿ ವೀಳ್ಯೇ ಮಡಿಚಿಕೊಂಡಾಂವಾ
ಜಲ್ಮಜಲ್ಮಕ ಗೆಣ್ಯಾ ಆಗಿ ಬರತೇನಂದಾಂವಾ
ಎದಿಮ್ಯಾಗಿನ ಗೆಣತಿನ ಮಾಡಿ ಇಟ್ಟಕೊಂಡಾಂವಾ
ಇನ್ನೂ ಯಾಕ...

ಯಲ್ಲಿ! ಮಲ್ಲಿ! ಪಾರೀ! ತಾರೀ! ನೋಡಿರೇನವ್ವಾ?
ನಿಂಗೀ! ಸಂಗೀ! ಸಾವಂತರೀ! ಎಲ್ಲ್ಯಾನ ನನ್ನಾಂವಾ?
ಸೆಟ್ಟರ ಹುಡುಗ ಸೆಟಗೊಂಡ್ಹೋದ ಅಂತ ನನ್ನ ಜೀಂವಾ
ಹಾದೀಬೀದಿ ಹುಡುಕತೈತ್ರೀ ಬಿಟ್ಟು ಎಲ್ಲಾ ಹ್ಯಾಂವಾ
ಇನ್ನೂ ಯಾಕ...

ಹೂತಽದ ಹುಣಸಿ

ಹೂತ್ಯದ ಹುಣಸಿಯಾ ಚಿಗುರು
ಮದರಂಗಿ ಬಣ್ಣದುಗುರು
ರುಚಿಗೆ ಹುಳಿಯೊಗರು
ನೋಡ್ಯೆ ಜೀವಕ್ಕನಿಸಿತ್ಯ ಹಗುರು॥ಹೂತ್ಯದ॥

ಉಗುರ್ಗೆಂಪು ಹಸಿರು ಬಿಳಿನೀಬಿ
ಹುಣಸಿಯಾ ರೆಂಬಿ
ಚಿಗತೀತೇನೊ ಎಂಬಿ
ಕಾಮ್ಯನ ಬಿಲ್ಲಿನ ಕೊಂಬಿ॥ಹೂತ್ಯದ॥

ಬ್ಯಾಸಿಗಿ ಹೊಡೆದ್ಯದ ಬಿಸಿಲಿನ ಡೇರೆ
ಮಧ್ಯಾಹ್ನದ ಪಾಹರೆ
ಯಾರಿಗಿಲ್ಲ ಹ್ವಾರೆ
ಸದ್ದು ಸುಳಿವು ಇಲ್ಲ ಬ್ಯಾರೆ॥ಹೂತ್ಯದ॥

ಸುಳ್ಳ ಸುಳ್ಳ ಗಾಳಿ ಹಾಕಿತ ಸಿಳ್ಳು,
ಕಾಗಿ ಚುಂಚಿನ ಹಳ್ಳು,
ಬಿದ್ದು ಅಂತ್ಯು 'ಹೊಳ್ಳು'
ಮೈ ಚಾಚ್ಯ ದ ಹುಣಸಿಯ ನೆಳ್ಳು॥ಹೂತ್ಯದ॥

ಅಡ್ಡಾಗತೇನಿ ನೆಳ್ಳಾಗ ಹೀಂಗ
ಹೂವು ಚಿಗುರು ಹ್ಯಾಂಗ
ಅವ್ವ ಹಾಸಿಧಾಂಗ
ಹುಳಿ ಚಿಗುರು ಸುರಿಸಿ ನಾ ದಂಗ॥ಹೂತ್ಯದ॥

ಬಿಸಿಲ್ಗುದರಿ ಕುಣಿಯಲಿ ದೂರ
ಯಾರಿಗೆ ಬೇಕು ನೀರ
ಹೀಂಗ ನನ್ನಿದಿರ
ಕಣ್ಣಳತಿಯೊಳಗೆ ನೀ ಬಾರ ॥ಹೂತ್ಯದ॥

ಹಾರತಿರಲಿ ಗಾಳಿಗೆ ಬಿಚ್ಚಿದ್ದೆರಳು
ಪಾರಿಯಲಿ ಕೊರಳು
ಚಾಚತಿರಲಿ ಬೆರಳು
ನೋಡ್ತೇನೆ ನಿನ್ನ ಕವಿನೆರಳು॥ಹೂತ್ಯದ॥

ಕಣ್ಣುಕಣ್ಣು ಚಕಮಕಿ ಇತ್ತ
ಕುಡಿಗಣ್ಣಿನತ್ತ
ತಾಕಿ ಹಾರಿತ್ತ
ಗಾಳಿ ಸವಾರಿಗ್ಹೊರಟಿತು ಚಿತ್ತ॥ಹೂತ್ಯದ॥

ಅಗೊ ಗಾಳಿ ಧೂಳಿಯಾ ಬಂಬಾ
ನಿಂತಾಂಗ ಅದ ಖಂಬಾ
ಅಲ್ಲೀ ರೌದಿ ತುಂಬಾ
ಗಣಿ ಕುಣಿಧಾಂಗ ಡೊಂಬರ ರಂಭಾ॥ಹೂತ್ಯದ॥

ಮ್ಯಾಲೆ ಅಲ್ಲಿ ಪಾರಿವಾಳ ಜೋಡಿ
ಒಂದಕ್ಕೊಂದ ನೋಡಿ
ಬಿಸಿಲ ತೆರೆದೂಡಿ
ಹಾರ್ತ್ಯದ ನೀಲಿಮುಗಿಲ್ಕ್ಯಾಡಿ॥ಹೂತ್ಯದ॥

ಕಂಡಂಗಾತು ನೀರಿನ ಕೊಳ
ನೀಲಿ ಮುಗಿಲ ಜಳಾ
ಎಂಥ ಝಳ ಝಳಾ
ಮುಳುಮುಳುಗಿ ಹೋತು ಮನದ ಧೂಳಾ॥ಹೂತ್ಯದ॥

ಕಾಲ ಹೋಗುತಿತ್ತ ಹಿಂದ ಸರಿದು
ಮನಸು ಆತ ಬರಿದು
ಮಧ್ಯಾನ್ ಬ್ಯಾಸರ ಮುರಿದು
ಬಿಸಿಲ ತಾನ್ಯ ಹೋಗುತಿತ್ತ ಹರಿದು॥ಹೂತ್ಯದ॥

ಕವಿ ಜೀವದ ಬ್ಯಾಸರ ಹರಿಸಾಕ
ಹಾಡ ನುಡಿಸಾಕ
ಹೆಚ್ಚಿಗೇನು ಬೇಕ?
ಒಂದು ಹೂತ ಹುಣಸಿಮರ ಸಾಕ॥ಹೂತ್ಯದ॥

ಅರ್ಧನಾರಿ-ನಟೇಶ್ವರ

ಕಂದಾ ! ನಿನ್ನ ಮುಖದ ಮುದ್ರಾಕೃತಿಯು ನನ್ನಂತಿದೆ;
ಆದರೆ ದೇಹದ ಭದ್ರಾಕೃತಿಯು ಅವರಂತಿದೆ.

ಕಂದಾ ! ನಿನ್ನ ಕಣ್ಣೊಳಗಿನ ಕರುಣೆ ನನ್ನಂತಿದೆ;
ಆದರೆ ನೋಟದೊಳಗಿನ ಸರಣಿ ಅವರಂತಿದೆ.

ಕಂದಾ ! ನಿನ್ನ ಗದ್ದದ ಮೇಲಣ ಕುಣಿಯು ನನ್ನಂತಿದೆ;
ಆದರೆ ಮೂಗಿನ ಕೆಳಗಣ ಮಣಿಯು ಅವರಂತಿದೆ.

ಕಂದಾ ! ನಿನ್ನ ಹುಬ್ಬಿನ ಕೊನೆಯು ನನ್ನಂತಿದೆ;
ಆದರೆ ಮೂಗಿನ ತೆನೆಯು ಅವರಂತಿದೆ.

ಅಹಹ ! ಹುಟ್ಟಾ ಗೆಲ್ಲಬಲ್ಲ. ಸೋಲದ ಸೊಬಗುಗಾರ !
ಗಂಡುಗಾಡಿಯಲ್ಲಿ ಹೆಣ್ಣಮೋಡಿ ಬೆರೆತು
ಅರ್ಧನಾರಿ–ನಟೇಶ್ವರನ ಅಭಿನವ ಸೃಷ್ಟಿಯಾದೆಯಲ್ಲ !

ಕಂಬನಿ

ಅಲ್ಲೋಲಕಲ್ಲೋಲವಾದ ಸಾಗರದಲ್ಲು
ನಾನು ಸಾಗರಬಿದ್ದು ಸಾಗಬಲ್ಲೆ.
ಹಾಳುಹಂಪೆಯು ಮಣ್ಣಿನಂಥ ಕಣ್‍ಗಳ ಕಂಡು,
ನನ್ನ ಚೈತನ್ಯವೂ ನಿಂತ ಕಲ್ಲೆ !

ಸಿಡಿಲ ಸೈರಿಸುವೆ, ಕಂಬನಿಯ ಸೈರಿಸಲಾರೆ,
ನಂಜುಂಡ ಶಿವ ನುಂಗದಂಥ ನಂಜು;
ಭವಭವಾಂತರದಲ್ಲಿ ತೊಳಲಾಡಿಸುತ್ತಿರುವ
ಆ ಭವಾನಿಗೆ ಹಿಡಿದ ಹಗಲಪಂಜು !

ಎಲೆಜೀವ, ನರಜನ್ಮವೊಂದೆಯಲ್ಲ;
ಹಲವು ಲೋಕಗಳುಂಟು, ಒಂದೆ ಇಲ್ಲ;
ಜೀವಪಾಂಥನಿಗಾಗಿ ದೇಹನೌಕೆ;
ಸಾವೆಂಬುದೊಂದಿರಲು, ಅಂಜಲೇಕೆ?

ದಶಾವತಾರ

ನೆಲದ ಮೇಲೆ ಈಸುವುದು
ನೋಡಿದಿರಾ ಮೀನಾವತಾರ!
ಮನುಕುಲೋದ್ಧಾರಕ ನನ್ನ ಕುವರ!

ಬಯಲನ್ನೆಲ್ಲ ಬೆನ್ನಲಿ ಹೊತ್ತಿರುವುದು,
ನೋಡಿದಿರಾ ಕೂರ್ಮಾವತಾರ!
ವಂಶಾಧಾರಸ್ತಂಭ ನನ್ನ ಕುವರ!

ಮುಗಿಲನ್ನೆ ಮೊಗದಿಂದೆತ್ತಲು ಹವಣಿಸುವುದು,
ನೋಡಿದಿರಾ ವರಾಹಸ್ವಾಮಿ!
ಹೂಂಕರಿಸುವ ನನ್ನ ಕುವರ!

ತನ್ನ ತಾಯ ಬಸಿರನ್ನೆ ಬಗೆದು ಅವಳ ಕರುಳ ಮಾಲೆಯನ್ನು
ಧರಿಸುವ ವಿಚಿತ್ರ ನೃಸಿಂಹಸ್ವಾಮಿ!
ನೋಡಿದಿರಾ ಬಾಲ ಪ್ರಲ್ಹಾದ ನನ್ನಕುವರ!

ತಾಯಿಯ ಮೇಲೆ ಕೈಯೆತ್ತಲು ಬಂದ
ದಿಟ್ಟ ಪರಶುರಾಮನ ಕಂಡಿರಾ!
ಶಾಪಚಾಪ ಸವ್ಯಸಾಚಿ ನನ್ನ ಕುವರ!

ಬೈರಾಗಿಗಳಲ್ಲಿ ರಾಗ ಹುಟ್ಟಿಸುವ!
ಭೋಗಿಗಳಿಗೆ ತ್ಯಾಗ ಬೋಧಿಸುವ!
ಕಂಡಿರಾ ನವೋನವ ಸುಂದರ ನನ್ನ ಕುವರ!

ತಾಯಿ ತಂದೆಗಳ ಸೆರೆ ಬಿಡಿಸಿ ಗೀತೆಯ ಹಾಡುವ
ಶ್ರೀಕೃಷ್ಣನ ಕಂಡಿರಾ!
ಲೀಲಾವತಾರಿ ನನ್ನ ಕುವರ!

ಕಂಡಿರಾ ದಿಗಂಬರ ಮೂರ್ತಿ! ಬಾಲ ಬುದ್ಧದೇವ!
ಕೋಲ ಕುದುರೆಯನೇರುವ ಕಲ್ಕಿ!
ಮ್ಲೇಛ ಮೋಹವ ಕೊಂದು ಪ್ರೇಮಧರ್ಮವ
ಪ್ರತಿಷ್ಠಾಪಿಸುವ ನನ್ನ ಕುವರ.

ನಾನು ಬಡವಿ

ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು.

ಹತ್ತಿರಿರಲಿ ದೂರವಿರಲಿ
ಅವನೆ ರಂಗಸಾಲೆ
ಕಣ್ಣುಕಟ್ಟುವಂಥ ಮೂರ್ತಿ
ಕಿವಿಗೆ ಮೆಚ್ಚಿನೋಲೆ.

ಚಳಿಗೆ ಬಿಸಿಲಿನೊಂದು ಹದನ
ಅವನ ಮೈಯ ಮುಟ್ಟೆ
ಅದೇ ಗಳಿಗೆ ಮೈಯ ತುಂಬ
ನನಗೆ ನವಿರು ಬಟ್ಟೆ.

ಆತ ಕೊಟ್ಟ ವಸ್ತು ಒಡವೆ
ನನಗೆ ಅವಗೆ ಗೊತ್ತು
ತೋಳುಗಳಿಗೆ ತೋಳಬಂದಿ
ಕೆನ್ನೆತುಂಬ ಮುತ್ತು.

ಕುಂದು ಕೊರತೆ ತೋರಲಿಲ್ಲ
ಬೇಕು ಹೆಚ್ಚಿಗೇನು?
ಹೊಟ್ಟೆಗಿತ್ತ ಜೀವ ಫಲವ
ತುಟಿಗೆ ಹಾಲು ಜೇನು.

ಬೆಳುದಿಂಗಳ ನೋಡs

ಬೆಳುದಿಂಗಳ ನೋಡ್ಯ
ಬೆಳುದಿಂಗಳ ನೋಡ ॥ಪ॥

ದನಕರದ ಕಾಲಿನ ಧೂಳಿ
ಸಂಜೆಯು ಹೂಳಿ
ಮುಗಿಲ ಮುಟ್ಯದ
ಮುಗಿಲ ಮುಟ್ಯದ॥

ಗೋಧೂಳಿಲಗ್ನಕ ಇತ್ತ
ಕೈಯ ಹಿಡಿದಿತ್ತ
ಕೈಯ ಹಿಡಿದೆತ್ತ್ಯ

ಚಂದ್ರಿಕೀ ಚಂದ್ರಮರ ಜೋಡ್ಯ
ಬೆಳುದಿಂಗಳ ನೋಡ ॥

ಕಲಿ ಕಪ್ಪು ಎಲ್ಲಿನೂ ಇಲ್ಲ
ಒಂದೆ ಸವನೆಲ್ಲ

ಎಲ್ಲನೂ ನುಣುಪ್ಯ
ಎಲ್ಲನೂ ನುಣುಪು

ಇದು ಹಾಲುಗಡಲಿನ್ಯಸೀಮಿ
ಚಂದ್ರಮನೆ ಸ್ವಾಮಿ
ಚಂದ್ರಮನೆ ಸ್ವಾಮ್ಯಿ

ಏನೆಂಥ ಹಂದರದ ಈ್ಯಡ್ಯ
ಬೆಳುದಿಂಗಳ ನೋಡ್ಯ ॥

ರೋಹಿಣಿಯು ಎದೆಯು ಕೆಂಪೆಳ್ಳು
ಗೆಳತಿ ಅವನವಳು

ನಲೀತಾಳ ಮುಂದs
ನಲೀತಾಳ ಮುಂದ॥

ಹಾಕ್ಯಾರ ಚಿಕ್ಕಿ ಗೆಳತ್ಯಾರ
ಕೃತ್ತಿಕೀ ಹಾರ
ಕೃತ್ತಿಕೀ ಹ್ವಾರs

ಕಳಿಲಾಕ ಇದ್ದ ಬಿದ್ದ. ಕೇsಡs
ಬೆಳುದಿಂಗಳ ನೋಡs॥

ನೆರೆದವರು ಹರುಹಿದರು ಊದಿ
ಮಂತ್ರಿಸಿದ ಬೂದಿ
ಮೆಚ್ಚು ಮಾಟಕ್ಕs
ಮೆಚ್ಚು ಮಾಟಕ್ಕ॥

ನೆಲದವರು ನಿದ್ದಿಯ್ಯಾs ಪಾಲು
ಮೂರು ಮುಕ್ಕಾಲು
ಮೂರು ಮುಕ್ಕ್ಯಾಲುs
ಅರಹುಚ್ಚು ಎಚ್ಚತ್ತರು ಕ್ವೊಡs
ಬೆಳುದಿಂಗಳ ನೋಡ॥

ಮದುಮಗಳ ಕಣ್ಣೀನs ಬಗೀ
ಚಂದಿರನ ನಗಿ
ಸುತ್ತ ಹರಿದ್ವದs
ಸುತ್ತ ಹರ್‍ಯಿದ॥

ಕಂಡವರ ಬಾಳು ಮರಿಸ್ಯದ
ತಣ್ಣಗಿರಿಸ್ಯದ
ತಣ್ಣಗಿರಿಸ್ಯದs
ಇದು ಮಾಯಕಾರರ ಬೀsಡs
ಬೆಳುದಿಂಗಳ ನೋಡs॥

ಸೂಸಿರುವ ನಗಿಯು ಬಗಿಹೀರಿ
ಮದಾ ತಲಿಗೇರಿ—
ಧಾಂಗ ಟೆಂಹಕ್ಕಿs
ಹಾಂಗ ಟೆಂಹಕ್ಕಿ॥

ಚೀರ್ರ್ಯದ ಗಿಡಾ ಬಿಟ್ಟೋಡಿ
ಗಿಡಕ ಸುತ್ತಾಡಿ
ಗಿಡಕ ಸುತ್ತ್ಯಾ ಡ್ಯಿ
    ಬೆಪ್ಪಾಗೆದ ಕಾಡೂಮ್ಯೇಡ್ಯ
    ಬೆಳುದಿಂಗಳ ನೋಡ್ಯ॥

ಮರ ಮರದ ಗೊವೀಗೆ ಕೂತು
ಹಾರಿ ಮ್ಯೈ ಸೋತು
    ತೆಪ್ಪಗ್ಯಗ್ಯಾಳ್ಯೀ
    ತೆಪ್ಪಗ್ಯಗಾಳೀ॥

ತೂಕಡಸತ್ಯದ ತಾನೀಗ
ಜಂಪು ಬಂಧಾಗ
ಜಂಪು ಬಂಧಾಂಗ
    ಇದು ಅದರ ತುಪ್ಪಳದ ಗ್ಯೂಡ್ಯ
    ಬೆಳುದಿಂಗಳ ನೋಡ್ಯ॥

ಹೂತ್ಯದ ಸುಗಂಧೀ ಜಾಲಿ
ಗಮು ಗಮಾ ಬೇಲಿ
    ತುಳುಕತದ ಗಂಧ್ಯ
    ತುಳುಕತದ ಗಂಧ॥

ಶ್ಯಾವಂತಿ ಹೂವಿನ ಕಂಪು
ಇಡಿಗಿಸಿತು ತಂಪು
ಇಡಿಗಿಸಿತು ತಂಪ್ಯು
    ಇದು ಸಾಕು ಬೇರೆ ಏನು ಬ್ಯಾಡ್ಯ
    ಬೆಳುದಿಂಗಳ ನೋಡ್ಯ॥

ದಣಿಸಿದಾ ಹಗಲು ಹಿಂಗ್ಯ್ಯದ
ಕತ್ತಲಿಂಗ್ಯ್ಯದ
    ಬೇರೆ ಈ ಕ್ಯಾಲ್ಯ
    ಬೇರೆ ಈ ಕಾಲ॥

ನಡು ನಿದ್ದಿಯೊಳಗ ಇದ್ದಾಂಗ
ಕನಸು ಬಿದ್ದಾಂಗ

ಕನಸು ಬಿದ್ಧಾಂಗs
ತೆರೆದ್ಯದ ತಣವಿಕೀ ನ್ಯಾಡs
ಬೆಳುದಿಂಗಳ ನೋಡs

ಜಗ ಧವಳ ಗಂಗ್ಯಾಗ ಮುಳುಗಿ
ಮೈ ಮನಾ ಬೆಳಗಿ
ಸಮಾಧಿಯು ಹತ್ತಿs
ಸಮಾಧಿಯು ಹತ್ತಿ॥

ಮೋಡನೂ ಬೆಳ್ಳಗಾಗ್ಯಾವ
ತೆನೀ ಮಾಗ್ಯಾವ
ತೆನೀ ಮಾಗ್ಯಾವ
ಹಾಲುಣಿಸು ಎಲ್ಲಕೂ ಪ್ಯಾಡs
ಬೆಳುದಿಂಗಳ ನೋಡs॥

ಅರೆ ಮರವು ಮಾಡುವೀ ಬಂಧ
ಯಾವುದೀ ಛಂಧ
ಯಾವುದೀ ಧ್ಯಾಟೀs
ಯಾವುದೀ ಧಾಟೀ॥

ಸವಿರಾಗ ಬೆರಸಿದ್ಯಉಸಿರು
ಇದಕ ಯಾ ಹೆಸರು
ಇದಕ ಯಾ ಹೆಸ್ಯರs ?
ಅಂಬಿಕಾತನಯನ ಹ್ಯಾಡs
ಬೆಳುದಿಂಗಳ ನೋಡ ॥

ಮೊದಲಗಿತ್ತಿ

ಮೊದಲಗಿತ್ತಿಯಂತೆ ಮೆರೆಯುವಿಯೇ ತಾಯಿ !
ಮೊದಲಗಿತ್ತಿಯಂತೆ ಮೆರೆಯುತಿಹೆ ॥ಪ॥

ಹಿಂಡಾಗಿ ಪುಂಡರು ಅಂಡಲೆಯಲು ನಿನ್ನ
ನೆತ್ತರು ಒರೆಹಚ್ಚಿ ನೋಡಿರುವೆ

ಪಾತಾಳ ಕಂಡರು ಕೆಲ ತಾಯಿಗ್ಗಂಡರು
ಅವರನ್ನೂ ಮಡಿಲಾಗ ಮಡಗಿಸಿಹೆ
ಹದಿನಾರು ರಾಜರು ತಲೆಕೆಳಗಾದರು
ಆದರು ತಲೆಯೆತ್ತಿ ನಿಂತಿರುವೆ
ನಿನ್ನ ತೇಜದ ಮುಂದೆ ರಾಜ ತೇಜವು ಕೂಸು
ಮೊದಲಗಿತ್ತಿಯು ನೀನು ಮೆರೆಯುತಿಹೆ.

ಒಕ್ಕುಡಿತೆ ಅರೆಮುಕ್ಕು ಎನುತೆನುತೆ ಹಲಕೆಲವು
ಪಾನಿಪತ್ತುಗಳನ್ನು ಮುಕ್ಕುಳಿಸುವೆ
ಕೊಡಲಿ ರಾಮನು ಎರೆದ ಕೆನ್ನೀರ ಜಳಕಕ್ಕೆ
ಕೂದಲು ನನೆಯಲಿಲ್ಲೆನ್ನುತಿಹೆ
ಅವತಾರಕ್ಕೊಂದೊಂದು ಅಭಿಷೇಕ ಮಾಡಿದರು
ಎಣ್ಣೆಮಜ್ಜನ ಬೇರೆ ಬೇಕೆನುವೆ
ನೆತ್ತರ ಮಿಾಯಿಸುವ ಕೆಂಚರ ಕೈಯಿಳಿಸಿ
ಮೊದಲಗಿತ್ತಿಯೆ ನೀನು ಮೆರೆಯುತಿಹೆ.

ಹಾಲಿನ ಹೃದಯಕ್ಕೆ ಕುಬ್ಬುಸವನು ತೊಡಿಸಿ
ಹೂ ಮುಡಿಸಿಕೊಂಡೆಂದು ನೀ ನಲಿವೆ?
ಬಸಿರು ತುಂಬಲು ಹಸಿರುಡಿಗೆಯನುಟ್ಟೆಂದು
ವನವಾಸ ನವಮಾಸ ತೀರಿಸುವೆ?
ಮುನ್ನಿಲ್ಲ ಇನ್ನಾರೆ ಮಕ್ಕಳ ದಿನವೆಂದು
ಮೂಡೀತು ಹೇಳವ್ವ ಬಿನ್ನವಿಸುವೆ
ಎಂದು ಮಂಗಲ ನಿನ್ನ ದೇವಗರ್ಭಕೆ?—ಇನ್ನೂ
ಮೊದಲಗಿತ್ತಿಯಂತೆ ಮೆರೆಯುತಿಹೆ!

ಜೀವಲೋಕದಲ್ಲಿ ಕಾಮ

ಭಿನ್ನದೇಹದಲಿ ಏಕಜೀವ ಕಾಣುವರು ಕರಗಿ ಮಾಗಿ
ಯಾರೊ ಮೋಹದಲಿ, ಯಾರೊ ಊಹೆಯಲಿ, ಯಾರೊ ಯೋಗಿಯಾಗಿ॥
ಸವಿಯನುಣ್ಣುವರು ಬಾಳಸೆಲೆಯ ಬಗೆಬಗೆಯ ಜಾವದಲ್ಲಿ
ಕಾಮಿ ನೋವಿನಲಿ, ಕವಿಯು ಭಾವದಲಿ, ಭಕ್ತ ಜೀವದಲ್ಲಿ॥

ಕಾಮತೃಪ್ತಿಯಲಿ, ಸ್ನೇಹಸುಪ್ತಿಯಲಿ ಒಬ್ಬ ಮೈಯನುಣಿಸೆ
ಭಾವದೀಪ್ತಿಯಲಿ, ಛಂದಮಾಯೆಯಲಿ ಒಬ್ಬ ಮಾತ ಕುಣಿಸೆ॥

ತನ್ನ ಜೀವತಾದಾತ್ಮ್ಯ ಪೊಂದದೇ ತಣಿಸಲಾರನೊಬ್ಬ
ಯಾರಿಗೇತರಲಿ ಜೀವ ಅದುವೆ ಸವಿ; ಅವರಿಗದುವೆ ಹಬ್ಬ॥

ಕಾಮಿ ಬಗ್ಗುವನು ದೇಹಿ ಎಂದು ಮೋಹದಲಿ ಕಾಲಿಗಡಿಸಿ
ಕವಿಯು ಬಗ್ಗುವನು ತನ್ನನಂಗ ಭಾವಕ್ಕೆ ಮಾತುತೊಡಿಸಿ॥
ಭಕ್ತ ಹಿಗ್ಗುವನು ತನ್ನ ಜೀವ ಹಸಮಾಡಿ ದೇವನಾಗಿ
ಒಬ್ಬನೊಲಿಸುತಿಹ ಒಂದೆ ನೂಲಿನಲಿ ಎಲ್ಲ ಕಾವನಾಗಿ॥

ಅನ್ನಯಜ್ಞ

ಕೂಸುಗಳಿಗೆ ಹಾಲು ಇಲ್ಲ, ಪಶುಬಲಿಯೇ ನಡೆದಿದೆ
ಕಾಳು ಇದೆ ಕೂಳು ಇಲ್ಲ, ಹಣದ ಹುಚ್ಚು ಹಿಡಿದಿದೆ.
ಕತ್ತಲಲ್ಲಿ ಬೆಳಕೆ ಇಲ್ಲ, ಜಗಕೆ ಬೆಂಕಿ ಹತ್ತಿದೆ.
ಎಲ್ಲ ಇದೆ ಎಲ್ಲ ಇಲ್ಲ, ಇಲ್ಲೆ ಸುತ್ತುಮುತ್ತಿದೆ.
ಸಾಕು ಎಂಬುವಂತೆ ನೀಡು, ಬೇಕು ಎಂಬ ಹೊತ್ತಿಗೆ
ಬೆಣ್ಣೆ ಎಣ್ಣೆ ಎರೆಯಬನ್ನಿ ಹಸಿದ ಹೊಟ್ಟೆ–ನೆತ್ತಿಗೆ.

ಬರುವ ಸಾವ ನೆನೆದು ಕೆಲವು ತಿನ್ನುತಿಹವು ಹೆಚ್ಚಿಗೆ
ಕಾಳು ಸಾಲದೀಗ ಜನದ ಇರುವ ಹೊಟ್ಟೆಕಿಚ್ಚಿಗೆ.
ಇದ ಕಂಡೂ ಕಂಡು ಕೂಡ ಏಳಬೇಡ ರೊಚ್ಚಿಗೆ
ಇದರ ಹೊಟ್ಟೆಯಲ್ಲಿ ಹುಟ್ಟಿತೀ ಪಿಶಾಚಿ ಹುಚ್ಚಿಗೆ
ಬಾಳ್ಮೆಯಲ್ಲಿ ತಾಳ್ಮೆ ಬೇಕು ಬದುಕಬೇಕು ಎಂದರೆ
ಜೀವವೆ ಸಾವಾಗಬಹುದು ಬಚ್ಚಬರಿಯೆ ನೊಂದರೆ.

ಖಣವು ರಣವು, ಜನವು ಹೆಣವು ಸಾವಿಗಾಗಿ ದುಡಿವರೇ ?
ಯಾರ ಬಾಳಿಗಾಗಿ ಯಾರೊ ಯಾವೊ ಕೈಗೆ ಮಡಿವರೇ ?
ಕಾವ ಕೈಯ್ಯೆ ಕೊಲ್ಲುತಿಹವು ! ಮರಣದತ್ತ ನಡೆವರೇ ?
ಸಾವಿಗಾಗಿ ತಪಿಸುವವರು ಬಾಳ-ಬೀಜ ಹಿಡಿವರೇ ?
ಕಣ್ಣೀರಿನ ಕಡಲ ನಡುವೆ ತೇಲುತಿಹವು ನೆಲಗಳು
ತಾಯಿ–ಹಾಲು ಕುದಿಯುತಿಹುದು ಕೆಂಪೇರಲು ಜಲಗಳು.

ಸುವರ್ಣಸಂಪುಟ/೬೧

ಗಮಗಮಾ ಗಮಾಡಸತಾವ ಮಲ್ಲಿಗಿ

ಗಮಗಮಾ ಗಮಾಡಸತಾವ ಮಲ್ಲಿಗಿ ! ನೀ ಹೊರಟಿದ್ದೀಗ ಎಲ್ಲಿಗಿ ?
ತುಳುಕ್ಯಾಡತಾವ ತೂಕಡಿಕಿ
ಎವಿ ಅಪ್ಪತಾವ ಕಣ್ಣ ಹುಡುಕಿ
ಕನಸು ತೇಲಿ ಬರತಾವ ಹುಡುಕಿ॥
ನೀ ಹೊರಟಿದ್ದೀಗ ಎಲ್ಲಿಗಿ ?

ಚಿಕ್ಕಿ ತೋರಸ್ತಾವ ಬಾಚಿ ಬೆರಳ
ಚಂದ್ರಾಮ ಕನ್ನಡೀಹರಳ
ಮನಸೋತು ಆಯಿತು ಮರುಳ॥
ನೀ ಹೊರಟಿದ್ದೀಗ ಎಲ್ಲಿಗಿ ?

ಗಾಳಿ ತಬ್ಬತಾವ ಹೂಗಂಪ
ಚಂದ್ರನ ತೆಕ್ಕಿಗಿದೆ ತಂಪ
ನಿನ ಕಂಡರ ಕವದಾವ ಜೊಂಪ॥
ನೀ ಹೊರಟಿದ್ದೀಗ ಎಲ್ಲಿಗಿ ?

ನೆರಳಲ್ಲಾಡತಾವ ಮರದ ಬುಡ್ಯಕ
ಕೆರಿ ತೆರಿ ನೂಗತಾವ ದಡ್ಯಕ
ಹೀಂಗ ಬಿಟ್ಟು ಇಲ್ಲಿ ನನ್ನ ನಡ್ಯಕ
ನೀ ಹೊರಟಿದ್ದೀಗ ಎಲ್ಲಿಗಿ ?

ನನ್ನ ನಿನ್ನ ಒಂದತನದಾಗ
ಹಾಡು ಹುಟ್ಟಿ ಒಂದು ಮನದಾಗ
ಬೆಳದಿಂಗಳಾತು ಬನದಾಗ ॥
ನೀ ಹೊರಟಿದ್ದೀಗ ಎಲ್ಲಿಗಿ ?

ನಾವು ಬಂದೆವಲ್ಲಿದಿಲ್ಲಿಗಿ
ಬಾಯಿ ಬಿಟ್ಟವಲ್ಲ ಮಲ್ಲಿಗಿ
ನೀರೊಡೆದಿತಲ್ಲ ಕಲ್ಲಿಗಿ॥
ನೀ ಹೊರಟಿದ್ದೀಗ ಎಲ್ಲಿಗಿ ?

ಬಂತ್ಯಾಕ ನಿನಗ ಇಂದ ಮುನಿಸು
ಬೀಳಲಿಲ್ಲ ನನಗೆ ಇದರ ಕನಸು
ರಾಯಾ ತಿಳಿಯಲಿಲ್ಲ ನಿನ್ನ ಮನಸು॥
ನೀ ಹೊರಟಿದ್ದೀಗ ಎಲ್ಲಿಗಿ?

ಮೌನ

ಸದ್ದಿಲ್ಲ ಸುಳಿವಿಲ್ಲ; ರವಿರಾಜ ಮೂಡುವನು
ಬೆಳಗುವನು ಅಡಗುವನು ಬೇಸರೆಲ್ಲವ ದೂಡಿ
ಮೌನ ಮೊರೆಯಿಡುವಂತೆ ಕಡಲು ತೆರೆ ತೆರೆದಾಡಿ
ಮರ್ಯಾದೆ ಮೀರದಿದೆ. ಅಗೊ ಅಲ್ಲಿ ಮೋಡವನು
ಎಲ್ಲೊ ಸುಮ್ಮನೆ ಸುರಿದು ಇಹುದು ಬಿಲ್ಲನು ಕೂಡಿ,

ನಿಶೆಯ ಕೌಮುದಿ; ಬಾನಬಯಲಗಡಲಿನ ನೌಕೆ
ಆರು ಕಾಲಕು ತೇಲಿ; ಮಲೆಯ ಜಡೆಯಲಿ ಮೂಡಿ
ಸೂಸಿ ಸೌಸವ; ಇರವೆ? ಮಾತು ಬೇಕೇ ಏಕೆ?

ಹುಸಿನಗೆಯು, ಕುಡಿನೋಟ, ಹಿಗ್ಗುಹಿಗ್ಗಿನ ಕೇಕೆ
ಮರುಳಾಟ, ಅಳುವು ಹಸಿವಿನ ಕೂಗು, ದನಿಮೋಡಿ
ಒಂದೆ ಬಸಿರಿನ ಬದುಕು ಒಂದೆ ಹೃದಯವ ನೀಡಿ
ತಣಿಯುವೇ? ಶ್ರುತಿಯಾಗು—ನಾದಮಾತೃಕೆ ಆಕೆ;
ಕೂಸು—ಮಾತಿಗೆ ಮೌನ ತಾಯಿ ಮಡಿಲು ಸುದೈವ;
ಮಾತು ಮೌನದ ಪ್ರತಿಮೆ, ಮೌನ ಮಾತಿನ ದೈವ.

ಟೊಂಕದ ಮೇಲೆ ಕೈಇಟ್ಟುಗೊಂಡು

ಟೊಂಕದ ಮೇಲೆ ಕೈ ಇಟಗೊಂಡು
ಬಿಂಕದಾಕಿ ಯಾರ ಈಕಿ
ಒಂಕೀತೋಳ ತೋರಸತಾಳ
ಸುಂಕದ ಕಟ್ಟ್ಯವಗ

ಯಣ್ಣಾ, ಮಾವಾ ಅಂತ ರಮಿಸಿ
ಬಣ್ಣದ ಮಾತ ಆಡಿಕೋತ
ಕಣ್ಣಾಗ ಮಣ್ಣ ತೂರುವಾಕಿ
ಸಣ್ಣನ್ನ ನಡದಾಕಿ

ಕಮ್ಮಗ ನಾಲಿಗಿ ಚಾಚತಾಳ
ಸುಮ್ಮಸುಮ್ಮಗ ನಾಚತಾಳ
ದಮ್ಮಡಿ ಕೂಡ ಕೊಡದ ಹಾಂಗ್ಯ
ಬಿಮ್ಮಗ ಹೊಂಟಾಕಿ

ಮೆಂತದ ಸಿವುಡು ಕಟ್ಟಿಕೊಂಡು
ಸಂತಿ ಪ್ಯಾಟಿ ಮಾಡಲಿಕ್ಕೆ
ಅಂತೂ ಇಂತು ಎಲ್ಲರಕಿಂತ
ಮುಂಚಿಗಿ ಬಂದಾಕಿ.

ಕರಡಿ—ಕುಣಿತ

ಕಬ್ಬಿಣ ಕೈಕಡಗ, ಕುಣಿಕೋಲು, ಕೂದಲು
ಕಂಬಳಿ ಹೊದ್ದಾಂವ ಬಂದಾನ—
ಗುಣುಗುಣುಗುಟ್ಟುತ ಕಡಗವ ಕುಟ್ಟುತ
ಕರಡಿಯನಾಡಿಸುತ ನಿಂದಾನ !

ಯಾವ ಕಾಡಡವಿಯಲಿ ಜೇನುಂಡು ಬೆಳೆದಿದ್ದ
ಜಾಂಬವಂತನ ಹಿಡಿದು ತಂದಾನ?
" ಧಣಿಯರ ಮನಿಮುಂದ ಕಾವಲು ಮಾಡಣ್ಣ
ಧಣಿ ದಾನ ಕೊಡುವನು" ಅಂದಾನ.

ತ್ರೇತಾಯುಗ ರಾಮನ್ನ ದ್ವಾಪರದ ಕೃಷ್ಣನ್ನ
ಕಲಿಯುಗದ ಕಲ್ಕೀನ ಕಂಡಾನ
ಜಾಂಬು ನದಿ ದಂಡೆಯ ಜಂಬು ನೀರಲ ಹಣ್ಣು
ಕೃತಯುಗದ ಕೊನೆಗೀಂವಾ ಉಂಡಾನ.

ಬಂದಾರೆ ಬರ್ರೆವ್ವ, ಕಂದನ್ನ ತರ್ರೆವ್ವ.
ಅಂಜೀಕಿ ಗಿಂಜೀಕಿ ಕೊಂದಾನ.
ರೋಮ ರೋಮಗಳಲ್ಲಿ ಭೀಮರಕ್ಷೆಯ ಬಲ
ಕೊರಳಾಗ ಕಟ್ಟಿರಿ ಬಂದಾನ.

‘ಕುಣಿಯುತಿ ಮಗನೆ’ ನೀ ಅನ್ನೊದೊಂದೇ ತಡ
ತನ್ನ್ಯಾನ ತಾನ್ಯನ ತಂದ್ಯಾನ
ಮುದುಕೂಸಿನ ಹಾಗೆ ಮುಸುಮುಸು ಮಾಡುತ್ತ
ಕುಣಿದಾನ ಕುಣಿತ್ಯವ ಛಂದಾನ.

ಹೊಟ್ಟೆಗಿಲ್ಲದವರ ಹೊಟ್ಟೆಗೆ ಹಾಕಲು,
ನಡೆದಾನ ಪಡೆದಾನ ಬಂಧ್ಯಾನ.
‘ಕುಣಿಸುವವರ ಹೊಟ್ಟೆ ತಣ್ಣಗಾಗಲಿ’ ಎಂದು
ಮುಗಿಲಿಗೆ ಕೈಮುಗಿದು ನಿಂದಾನ.

ಮನಬಲ್ಲ ಮಾನವ ಕುಣಿದಾನ ಕುಣಿಸ್ಯಾನ
ಪ್ರಾಣದ ಈ ಪ್ರಾಣಿಹಿಂದ್ಯಾನ
ಕರಡಿಯ ಹೆಸರೀಲೆ ಚರಿತಾರ್ಥ ನಡಿಸ್ಯಾನ
ಪರಮಾರ್ಥ ಎಂಬಂತೆ ಬಂದಾನ.

ಈ ಮನುಷಾ ಎಂದಿಂದೊ ಕವಲೆತ್ತು ಕೋಡಗ
ತನಗಾಗಿ ಕುಣಿಸುತ್ತ ನಡದಾನ
ಕರಡೀ ಕುಣಿತಕ್ಕಿಂತ ನರರ ಬುದ್ಧಿಯ ಕುಣಿತ
ಮಿಗಿಲಹುದು ಕವಿ ಕಂಡು ನುಡಿದಾನ.

ಬೀದಿ ನಾಯಿ ರಾಧೆ

ಬೀದಿ ನಾಯಿ ರಾಧಿಗೆ
ಹೊಟ್ಟೆ ತುಂಬ ಮೊಲೆಗಳು.
ಹೊಟ್ಟೆ ತುಂಬ ಎದೆಯ ತುಂಬ
ಜೋಲು ಮೊಲೆಯ ಸಾಲ್ಗಳು.

ಬೀದಿ ನಾಯಿ ರಾಧಿಗೆ
ಊರ ತುಂಬ ಗೆಳೆಯರು
ಸರ್ವಸಾಕ್ಷಿ ಇವಳ ಪ್ರಣಯ
ನೋಡುವವರು ಎಳೆಯರು.

ಬೀದಿ ನಾಯಿ ರಾಧಿಗೆ
ಅಸರಂತವು ಮರಿಗಳು
ಹೊಟ್ಟೆಗೆಂಬ ಚಿಂತೆ ಇಲ್ಲ
ಇವಳೆ ಅವರ ಹೊರೆವಳು.

ಬೀದಿ ನಾಯಿ ರಾಧಿಗೆ
ಬೇಕು ಅವಳಿಗೆಲ್ಲರು
ಹರಕ ತಿರುಕ ಹಾದಿಹೋಕ
ಚೋರ ಪೋರ ನಲ್ಲರು.

ಬೀದಿ ನಾಯಿ ರಾಧಿಗೆ
ಇಲ್ಲ ಕೆಲಸ ಸಂಬಳ
ಊರ ತಿಪ್ಪೆ ಮಸಣ ಕುಪ್ಪೆ
ಅದೇ ಅವಳ ಉಂಬಳಿ.

ಬೀದಿ ನಾಯಿ ರಾಧಿಗೆ
ಮಳೆ ಬಿಸಿಲಿಗೆ ಸಾಧನ
ಹುಣಿಸೆ ಮರದ ನೆರಳು ಹೊದರು
ಎವ್ವನ ಆರಾಧನ.

ಬೀದಿ ನಾಯಿ ರಾಧಿಯು
ಮೊನ್ನೆ ಹೇಗೊ ಸತ್ತಳು.
ದುರುಳನೊಬ್ಬ ಏಕೊ ನಕ್ಕ
ಹೊಲಸೂಳೆಯು ಅತ್ತಳು.

ಸಪ್ತಕಲಾ

೧

ಸ್ಪಂದ್ಯ ಬಂಧಾ ಸ್ವಚ್ಛಂದಾ
ಸ್ವೈರಾ್ಯ ನಿರ್ವೈರಾ್ಯ ಸಹಜ್ಯ ಅಂದಾ್ಯ
ಆಡಲೂ ಬರದಾ್ಯ ಸುಮ್ಮನಿರದಾ್ಯ
ಕಾದ್ಯ ಕಾದ್ಯ ನಾದಾ್ಯ
ಭೇದಾ್ಯ ಅಭೇದಾ್ಯ, ಮಿಾರಿ್ಯ
ಭಾವ್ಯ ನೋವ್ಯ ತಾಳದೇ
ತನ್ಮ್ಯತಾ ನುಂಗೀ
ಎದೆಯೊಳಗಿಂಗೀ
ಸ್ವಾತಂತ್ರ್ಯ್ಯ ಪಡೆಯುವುದಣ್ಣ್ಯ
ಅರ್ಕ್ಯ ಚಂದ್ರ್ಯ ಸಾಂದ್ರವಾಗಿ್ಯ
ವಾಚಾತೀತ್ಯ ಗೀತ್ಯ
ಸ್ವರಮೇಳ್ಯ—ತಾಳ್ಯ—ರಾಗ್ಯ
ರೀತಿಯಲ್ಲಿ
ಆತ್ಮ್ಯ ಪ್ರೀತಿಯಲ್ಲಿ

೨

ಇದೋ ಅರೆವೋ ಮರೆವೋ
ಅವಳಿ್ಯ ಜವಳಿ್ಯ ತರವೋ
ಧ್ರುವಾಸ್ಮೃತಿಯಾ ಕರೆವೋ
ಆಕಾಶ ರೇಖಾ ಲೇಖಾ
ಹೃದಯಾಂತರ್ಕೇಕಾ
ಭಾವ್ಯ ನೋವ್ಯ ತಾಳದೇ
ಅದೃಶ್ಯ್ಯ ಹೊಳೆದೂ
ಕಾಣ್ಕೈ ರೂಪ್ಯ ತಳೆದು

ಸ್ವಾತಂತ್ರ್ಯ ಪಡೆಯುವುದಣ್ಣಽ
ಟಂಕಾಽ ಆತಂಕಾ ಸರಿಸೀಽ
ವ್ಯಂಗ್ಯಾಽ ವಕ್ರಽ ಬೆರೆಸಿ,
ಎಲ್ಲೂಽ ಕಲ್ಲೂಽ ಚಿತ್ರಽ
ಮೂರ್ತಿಯಲ್ಲಿ
ಕೀರ್ತಿಽ ಅರ್ತಿಯಲ್ಲಿ

೩

ತಂತ್ರಽ ಅರಿಯದೇಽ
ಮಂತ್ರಽ ಮಣಮಣಗುಟ್ಟೀ
ಕೆಟ್ಟಽ ಯಂತ್ರದಂತೇ
ಕೈತಪ್ಪಿಽ ಎತ್ತೆತ್ತೊ
ತತ್ತರಿಸುತ್ತಿರಲು
ಭಾವಽ ನೋವಽ ತಾಳದೆ,—
ಮೌನ ಕೂಡಿ
ಮೌನ—ಮೂಡಿಽ
ಸ್ವಾತಂತ್ರ್ಯಽ ಪಡೆಯುವುದಣ್ಣಽ
ಆವೇಶಽ—ಅಂಗಾಂಗಽ—ತುಂಬಿಽ
ನರನರಽ ನಲುಗಿಽ ಅಲುಗೀಽ
ಗೊಂದಣಽ—ತಾಂಡವಽ—ಲಾಸ್ಯಽ
ನೃತ್ಯದಲ್ಲೀ
ಇಲ್ಲೀಽ ಮರ್ತ್ಯದಲ್ಲೀ

೪

ಕರ್ಮಽ ಅಕರ್ಮದ ತಂತ್ರಽ
ಫಲವಿಫಲತೆಯೊಳತಂತ್ರಽ
ಈಶ್ವರೀ ಯಂತ್ರಽ
ಸ್ವರೂಪ ತೋರ್ಪ ದೀಪಽ
ಮಿಂಚಿಗೂ ಸಮೀಪಽ
ಭಾವ ನೋವ ತಾಳದೇಽ
ಪ್ರಕೃತಿಯೂ ದುಡಿದೂಽ
ದೈವಽ ತಡೆದೂಽ
ಸ್ವಾತಂತ್ರ್ಯ ಪಡೆಯುವುದಣ್ಣಽ
ಅವಿದಿತಽ ವಿದಿತಽ ಉದಿತಾಽ

ಸಾತ್ವಿಕಾ—ಭಾವಾ ಜೀವಾ
ಅಭಿನಯ ವಚನ—ನಾಟ್ಯಾ—
ಕೃತಿಯಲ್ಲಿ
ದೃಷ್ಟೀ ಶ್ರುತಿಯಲ್ಲಿ

೫

ಶಾಂತಾ ಶಿವಾ ಸೀಮಾತೀತಾ
ಸತ್‌ಶಕ್ತೀ ಸಹಿತಾ
ಚೇತಾ ಜಗನ್ನೇತಾ
ಸ್ವಾಲಿಂಗಿತ ದ್ವೈತಾ ಅದ್ವೈತಾ
ಸಂತತಾ ಅನಂತಾ
ಭಾವ ನೋವ ತಾಳದೇ
ಬಯಕೆ ಬೇನೆಗೆ ಬೆಂದು,
ತನ್ನೊಳು ತಾ ನಿಂದು
ಸ್ವಾತಂತ್ರ್ಯ ಪಡೆಯುವುದಣ್ಣ
ಬೀಜ ಬಿಂದೂದ್ಭೂತ
ಕಲಲಾ ಜಾತಾ
ಇದು ಅಕಲ ವಿಕಲ ಸಕಲ
ಸುಕಲೆಯಲ್ಲಿ
ಈ ಕಳೇವರದಲ್ಲಿ

೬

ಜನ್ಮಾ ಜನ್ಮಾಂತರ ತರತಮಭಾವ
ಪ್ರಕಟಸ್ವಭಾವಾ
ಪ್ರತಿಸರ್ಗೋತ್ಸುಕತಾ ಪ್ರತಿಭಾ
ನಿರಾಲಂಬಾ ಸ್ವಯಂಭಾ
ಕಲ್ಪನಾಗರ್ಭಿತ ಬಿಂಬಾ
ಭಾವ ನೋವ ತಾಳದೇ
ಅನನ್ಯಾ ಈಶ್ವರ ಪ್ರಭವಾ
ಕಲಾ ವಿಭವ
ಸ್ವಾತಂತ್ರ್ಯ ಪಡೆಯುವುದಣ್ಣ
ಲೋಕಾ ಲೋಕ ಪ್ರಕಾರಾ
ದೇವತಾಕಾರಾ
ಇದು ದರ್ಶನ ಮುಖರಾ ಶಿಖರಾ

ವಾಸ್ತುವಲ್ಲಿ
ಗುಡಿಗೋಪುರದಲ್ಲಿ

೭

ಸಕಲ್ಯಾ ಸಿದ್ಧ್ಯಾ ಸರಸ್ವತಿ ವೀಣಾಪಾಣ್ಯೆ
ಪಶ್ಯಂತಿಯ ವಾಣಿ
ಛಂದಾರೂಢಾ ನವೋಢಾ
ಮುಗ್ಧಾ, ರಸಿಕಾ, ಅನೂನಾ
ಧ್ವನಿತ ಪ್ರಾಣಾ
ಭಾವ್ಯ ನೋವ್ಯ ತಾಳದೇ
ಸ್ಫೂರ್ತಾ ಅಮೂರ್ತಾ, ಆವಿರ್ಭೂತಾ
ಭವಮಂಥನ ಮಂತ್ರಾ
ಸ್ವಾತಂತ್ರ್ಯ ಪಡೆಯುವುದಣ್ಣ್ಯ
ಅಕಾಮ್ಯಾ ರಮ್ಯಾ
ಶ್ರೋತ್ರಿಯಗಮ್ಯಾ
ಭವ್ಯ ನವ್ಯ ಹೃದಯದ್ರುವ್ಯ
ಕವಿಯಲ್ಲಿ
ದಿವ್ಯ ಕಾವ್ಯದಲ್ಲಿ

ಓ ತಾಯಿ-ಮಾಯಿ

"ಓ ತಾಯಿ, ಮಾಯಿ, ಶಿವಜಾಯಿ, ಕಾಯಿ ನನ! ಯಾಕ ತೆರೆವೆ ಬಾಯ್ಯಿ?
ಯಾ ಹಾದಿಲಿಂದ ನಾ ಹೋದರೇನು ಆಗ್ತೇನ ಅಲ್ಲೆ ನಾಯಿ.

ಪ್ರತಿರೋಮಕೂಪದಾಗ ಕಾಮ ತುಂಬಿ ತುಳಕ್ಯಾಡತ್ಯದ ಇಲ್ಲಿ
ನೀ ಜಪ್ಪಿಸಿರಲು ನಿನ್ನ ತಪ್ಪಿಸ್ಯಾರೆ ನಾ ಹೋಗಬಲ್ಲೆನೆಲ್ಲಿ?

"ಹಾಂಗಲ್ಲೊ ಮಗನ ನೀ ಭೋಗ ಬೇಡಿದಲ್ಲಲ್ಲು ಬಾಗಿಲಾಗಿ
ತೆರಿತಾವ ಹಾದಿ, ಅದಕಂತ ಕಾದಿ, ನಿನ್ನ ಮನಸೆ ಕನಸು ಆಗಿ.

ತೆರದೇನಿ ಯೋಗ ನಿನ ಹೃದಯದಾಗ, ಬರಲೊಲ್ಯೊ ಬ್ಯಾಗ ಒಳಗ.
ಈ ಕಲಕುಮಲಕು ಆದಾಗ ನಿನಗ ನಡದ್ಯದ ಮ್ಯಾಲ ಕೆಳಗ.

ಬಂದಾನ ಏನ ನನಕಂದ ಮನಿಗೆ ಇಂದಾರೆ ಅನತ ಮನಕ
ಎಂದಾರೆ ಬಾರೊ ಕಾದಿರುವೆ ಇಲ್ಲೆ ನೀನಾಗಿ ಬರುವ ತನಕ.

ಅಡ್ಡಡ್ಡ ಹಾದಿ ನೀ ಹೋದ ಮ್ಯಾಲೆ ನಾ ಕಾದೆನೆಷ್ಟೊ ನಿನಗs
ಹಾಲ್ ಹಸಿವು ಹುಟ್ಟಿದಾಗ ನೀನ ಬರತಿಯೋ ಚಿಂತಿ ಯಾಕ ನನಗs ?

ಓಡ್ಯೋಡಿ ಹೊರಟಿ ಎಲೆ ಬಾಲ !   ಕಾಲ ನಿನ ನೋಡಿ ನೋಡಿ ನಗನs
ನಿನ ಕಾಲ ನೂತು ಬರುವಾಗ ಬಾರೊ ನನಗೊಂದೆ ಹಾದ್ಯೊ ಮಗನs.

ನನ ಬಣ್ಣ ನಿನ್ನ ಕಣ್‌ಮ್ಯಾಲೆ ಎರಚಿ ಕಟ್ಟೇನೊ ಎಲ್ಲ ಹಾದಿ.
ನಿನ ಕಿವಿಗೆ ನನ್ನ ಸಿವಿದನೀ ಕಟ್ಟಿ ಬಿಟ್ಟೇನೊ ಎಲ್ಲಿ ಹೋದೀ

ಆ ಗಾಳಿ ಜತಿಗೆ ನೀ ಗೂಳಿ ಹಾಂಗ ಅಡ್ಡಾ್ಯಡಿ ಹೇಳು ಏಸು ?
ಮುಸುಗುಡುತ ಹೊರಟಿ ಬಯಲಾಗ–ನನ್ನ ಮುಗದಾಣ ಭಾಳ ಬೀಸು.

ನಾಡಾಡಿ ಹಕ್ಕಿ ನೀನಲ್ಲೊ ಮಗನ ಹೊಕ್ಕ್ಯಾಕ ಬೆಳ್ಳಕ್ಯಾಗs ?
ನಿನ ತಾಯಿ ಕಣ್–ಹನಿಮುತ್ತು ಸುರಸತಾಳ ಮಾನಸ ಕೊಳ್ಳದಾಗ.

ನಿನ ಹಸೀ ಹಸಿವಿಗೆ ಹೇಸಿ ನೀನೆ ಬಂದಾಗ ನನ್ನ ಮರಿಯೇ
ನನ ರುಚೀ ನಿನಗ ಶುಚಿ ಅನಿಸಿ ಹಸಿದು ಬಂದಾಗ ನಿನ್ನ ಮರೆಯೆ."

"ಓ ಮಾಯಿ ಬಂದೆ ಓ ತಾಯಿ ಬಂದೆ ಓ ತಾಯೆ ಕಾಯಿ ಬಂದೆ.
ನಿನ ಕಾಲ ನಾತ ಮೂಸಿಡುತ ಬಂದೆ ನಿನ ನಾಯಿಯಾಗಿ ಬಂದೆ.

ಬಳಬಳಕಿ ಬೆಳಸ ಹನಿದೇನ ತಾಯಿ ಸಣ್ಣಕ್ಕಿ ತಳಸಬೇಕs
ಮೈಗಡಸಿ ತೊಳದು ಒಳಗಡಸಿ ಮಾಡ, ಬಾ ಅಡಗಿ ಕೂತಿಯಾಕs ?

ಕೈತುತ್ತು ಮಾಡಿ ತುತ್ತುತ್ತ ಉಣಸುವಾಗ ಸುತ್ತ ಆಡಬೇಕು
ನಡುನಡುವೆ ನಕ್ಕು ಮತಮತ್ತ ಕದ್ದು ಕಣ್‌ಕುಡಿಲೆ ನೋಡಬೇಕs

ನೀನು ಕೂಡ ಕೈಮರಿಗೆ ನಕ್ಕು ಕಣ್‌ಕೆಂಪು ಮಾಡಬೇಕು.
ಏ ಸುಳ್ಳ ಅಂತ ಅಪ್ಪಿದರ ತೊರಿದು ನನ ತಂಪು ಮಾಡಬೇಕು.

ಓ ತಾಯಿ ಬಂದೆ, ಮಾಮಾಯಿ ಅಂದೆ, ಈ ಬಾಯಿ ತುಂಬು ಒಂದೇ
ಮಕರಂದ ಪಾನದಾ ಝರೀ
ತೆರಿತೆರೀ ನಿನ್ನ ತಾವರೀ
ಬಂದ್ಯದ ತುಂಬಿಯಾ ಮರೀ

ಅಂಬಿಕಾತನಯನ ನುಡೀ ನುಡಿತಾವ ತೆರಿ ತೆರೀ ಎಂದೇ
ಓ ತಾಯಿ ಮಾಯಿ ಶಿವಜಾಯಿ ಕಾಯಿ ಈ ಬಾಯಿ ತುಂಬು ಒಂದೇ

ಚೈತ್ರಾಲಯ

೧

ಶಿವನುಂಡ ನಂಜು ತಿಳಿಗೊಂಡು ಮಂಜು—
 ಮಂಜಾಗಿದೆ ಈ ಸಂಜೆಗೆ.
ಇದು ಉಷಾಮಿಷದ ಪೊಸನೇಹ ಸೇರಿ ಕಳೆ
 ಏರಿದೆ ಹುರಿಮಂಜಿಗೆ.
ಭೌಮಾತ್ಮಭೂತಿ ಚೈತನ್ಯದೂತಿ, ಊ
 ರ್ಜಿತದಾ ಸಿರಿವಂತಿಗೆ.
ಕಥಕ್ಕಳಿಯು ಪುತ್ಥಳಿಯೆ! ಪೃಥಕ್ ಥತ್
 ತಳಿಸಿದೆ ಜೀವಂತಿಗೆ.
ಜಡೆತುಂಬ ಕಣ್ಣು, ಇದು ಯಾವ ಹೆಣ್ಣು? ಮಾ—
 ಪ್ರಾಣದ ಸ್ಯಾವಂತಿಗೆ!

೨

ಯಾವ ಅಚ್ಚರಸಿ? ಯಾವ ಋಷಿಯರಸಿ?
 ಯಾವ ಭಾವಸರಸಿ?
ಯಾವ ಘಟ್ಟದಲಿ? ಯಾವ ಪಟ್ಟದಲಿ?
 ಯಾವ ಮುಹೂರ್ತವಿರಿಸಿ?
ಯಾವ ನಕ್ಷತ್ರ? ಯಾವ ಸುಕ್ಷೇತ್ರ?
 ಯಾವ ಪಾತ್ರ ಧರಿಸಿ?
ಝಂಝಣಣ ಝಣಣ, ಝಂಝಣತ್ ಝಣಣ, ಜೀ
 ವಾಣುವೃಂದ ಮೆರೆಸಿ,
ಛಂದ ಛಂದ ನವಬಂಧ ಪಡೆದು ಬಂ—
 ದಿಹವು ಹಳತ ಮರೆಸಿ.

೩

ಛಿಳಿಲ್ ಛಿಟಿಲೆಂದು ಭುಕ್ಕ್ಭುಗಿಲೆಂದು
 ತಟಿತ್ ತಟ್ಟಿತೆಂದೂ
ಕಣ್ಣ ಮುಚ್ಚಣಿಕೆ ಕಣ್ಣ ತೆರೆವಣಿಕೆ
 ಕಣ್ಣ ಕಟ್ಟಿತೆಂದೂ

ನವೋನವದ ಭವಭವದ ತವದ ವೈ—
      ಭವವ ಒಟ್ಟಿತಂದು
ಕುರುಡು ಬಯಲಿಗಿಗೊ ಕಣ್ಣು ಬರೆವ ಕೈ—
      ವಾಡ ಚಿಗುರ್ತಿಂದು
ದುಂ ದುದುಂ ದು ದುಂದುಭಿಸುತಿಹುದು ಇಕೊ!
      ಹಲವು ಮುಖದಲೊಂದು.

೪

ಬಾರೊ ಇಲ್ಲಿ ಬೈರಾಗಿ ಬಾರೊ, ಬಾ
      ಇಲ್ಲಿದೆ ತಂಗುವ ಸ್ಥಲಾ—
ತಣಿವನರಿಯದೇ ದಣಿದುಹೋದೆ, ಬಾ
      ಇಲ್ಲಿದೆ ಇಂಗದ ಜಲಾ—
ಏಕೆ ರೋಸಿ, ಭಯಗೊಂಡು ಹೇಸಿ, ನೀ
      ಆಕ್ರೋಶಿಸುತಿಹೆ ಎಲಾ!
ಶಿವದ ಭಕ್ತಿಗವತಾರಶಕ್ತಿಗಿಗೊ
      ಇದುವೇ ಇಂಗಿತವಲಾ!
ಬ್ರಹ್ಮಸ್ಫುರಣಕೆ ಮರಣವೆಂತು? ಅದು
      ಅದುವೇ ಅಮೃತದ ಬಲಾ.

ಕಥೆಯಾದಳು—ಹುಡುಗಿ

ಹಸಿಯಿದ್ದಳು ಬಿಸಿಯಾದಳು
ಸಸಿಯಿದ್ದಾ ಹುಡುಗಿ
ಹುಸಿಯರಿಯದ ಹುಡುಗಿ
ಕಣ್ಣೆದಿರಲ್ಲೇ ಬೆಳೆದಳು
ಹೊಸ ದೇಸಿಯ ಬೆಡಗಿ.

ಸೊಸೆಯಿದ್ದಳು ಚಿಗುರಿಟ್ಟಳು
ಉಗುರ್ಗೆಂಪಿನ ಹುಡುಗಿ
ಉಸಿರ್ಗಂಪಿನ ಹುಡುಗಿ
ಆಡುತ ನೋಡುತ ಬಿಟ್ಟಳು
ಊರೆಲ್ಲವನುಡುಗಿ.

ಚಿಗುರಿದ್ದಳು ಚಿಗರೆಯ ಮರಿ
ಹೂ ಬಿಟ್ಟಳು ಹುಡುಗಿ
ಮೊಗ್ಗಿದ್ದಾ ಹುಡುಗಿ
ಕಣ್ಣುಕಣಿತಕ್ಕೆ ನಗೆ ಭಣಿತಕೆ
ಮನೆ ಹೋಯಿತು ನಡುಗಿ.

ಹಾ ಹಾ ಎನ್ನುತ ಬೆಳೆದಳು
ಕೂಸೆನಿಸಿದ ಹುಡುಗಿ
ವಧುವಾದಳು ಹುಡುಗಿ
ಒಗರಳಿದಿತು ಹುಳಿಯಿಳಿದಿತು
ಬೆಡಗುಳಿದಿತು ಅಡಗಿ.

ಆ ಪಾಕವೊ ಆ ಪಾಡೋ
ತಾಯಾದಳು ಹುಡುಗಿ
ಹಾಯಾದಳು ಹುಡುಗಿ
ಪಡೆದವಷ್ಟೊ ಹಿಗ್ಗವಳಿಗೆ
ಮಮತೆಯ ಕೆಂಪಿಡುಗಿ.

ಪಾಡಾದಳು ಹೆಣ್ಣಾದಳು
ಮಣ್ಣಾದಳು ಹುಡುಗಿ
ನೆನಪಾದಳು ಹುಡುಗಿ
ವ್ಯಥೆಯಾದಳು ಕಥೆಯಾದಳು
ಎದೆಯಲ್ಲಿಯೆ ಮಡಗಿ !

'ಇಳೆ' ಎಂದರೆ ಬರಿ ಮಣ್ಣಲ್ಲ

ಇಳೆಯೆಂದರೆ ಬರಿ ಮಣ್ಣಲ್ಲ
ನಮಗೋ ನೋಡುವ ಕಣ್ಣಿಲ್ಲ ॥ಪ॥

ಏಸು ತಿಂದರೂ ತೀರದಿದೆ
ಏಸು ತುಂಬಿಯೂ ಮೀರದಿದೆ

ಅಮೃತವೆಂಬುದೂ ಅನಂತವೆಂಬುದು ಕಾಲಲ್ಲೇ ಇಲ್ಲೇ
ಮೈಯೊಳು ಮಲಗಿದ ಆ ಆಳದ್ದರೆ ಬಾನೇ ಮನೆಯಲ್ಲೇ

ಈ ನೆಲಕೆಲ್ಲಾ ನೀರೇ ಮೇರೆ
ನೀರುಗಾಳಿಗಳ ಹಾದಿಯೆ ಬೇರೆ.
ಅಣ್ಣತಮ್ಮದಿರು ತಮ್ಮತಮ್ಮೊಳಗೆ ಕಾದಾಡಲು ಬೇಕೆ?
ನಲುಮೆಯು ನೀರನು ಕೆನ್ನೀರೆನ್ನುತ ಚೆಲ್ಲಾಡುವಿರೇಕೆ?
ಮಣ್ಣಲಿ ನೀರಲಿ ಸೂರ್ಯನ ಕಿರಣ
ಚಿತ್ರಿತವಾಗಲಿ ಅಪಾರವರಣ
ಬಾನುಲಿಯಲಿ ಮಾತಾಡುವ ಬನ್ನಿ ಗಾಳಿದೇರನೇರಿ
ಈ ರಸ ಮಿಾರಿ ಆ ರಸವೇರಿ ರಸರಸಿಕರು ಸೇರಿ.
ಅಕಾಂಡ ತಾಂಡವವೇತಕ್ಕೆ
ಲಾಸ್ಯವೆ ಸಾಕು ಈತಕ್ಕೆ
ನಂದಾದೀಪದ ನಡೆಮಾಡಗಳೇ ಸಂಚರಿಸುವ ಹಾಗೆ
ಜೀವ ಜೀವಗಳ ಕಾರ್ತಿಕೋತ್ಸವವು ಮೊದಲಾಗಲಿ ಮೇಗೆ.
ಋತುಗಳು ನಡೆಸಲಿ ರಿಂಗಣಗುಣಿತ
ಜೀವ ನುಡಿಸುತಿರೆ ವೀಣಾಕ್ವಣಿತ
ಮಾಲೆಯು ಕೊರಳಿಗೆ ಜೋತಿರುವಂತೆ ಹೃದಯಕೆ ಬಂದಾತು
ಸುಗ್ಗಿಯು ನೆಲವನೆ ಸುತ್ತುತ್ತಿರಲಿ ಮಧುಲೀಲೆಗೆ ಸೋತು.

ಬದುಕಬೇಕು!

ಬೆಂಕಿ ಹೊತ್ತಿರಲು ಬೆಲೆ
ಹರಳು ಇದ್ದಿಲವು ಮುಂ
ದಿರುವುದಾವುದೊ ಎಂದು ಶಂಕೆಗೊಂಡೆ.

ಬಂಗಾರ ಸುಟ್ಟು ಸಿರಿ
ಸಿಂಗಾರ ಸೂಸೆ ಅದ-
ರಾಚೆಗೇನಿಹುದೆಂದು ಕಣ್ಣತೆರೆದೆ.

ಬೆಳಕಿನಾ ಬಯಲು, ಹಲ–
ವೆಂಕಿಯಾ ಮಡುವು ಅದ–
ರಂಚೆ ಮಿಾರಿದ ಮಿಂಚು ಮೂರ್ತಿಯಾಗಿ

ತುಂಬಿಸುವ ಅಲೆಗೆ ನೆರೆ
ನಂಬಿಸುವ ಗೀತ ಸೆಲೆ–
ಗೊಡುತಿರಲು ಅದನೊಂದೆ ನೋಡುತಿರುವೆ.

ಇದನುಳಿಸು ಅದನು ಅಳಿ–
ಸೆಂಬ ಧಾಳಾಧೂಳಿ
ಸುಟ್ಟು ಹೊಗೆ ಕಾಳ್ಕಿಚ್ಚು ಚಾಚುತಿರಲು.

ಆ ಆಳೆ ಆಳೀತು
ಆ ಬಾಳೆ ಬಾಳೀತು
ಬದುಕಬೇಕೆಂಬಾಸೆ ಯಾರಿಗಿಲ್ಲ?

ಭಾವದೀಪ

ನೆಲವು ಕಾದು, ಅಂಗಾಲು ಕಾದು, ಮೈ ಕಾದು ಉರಿದು ನೆತ್ತಿ
ಬಿಸಿಲ ಎಣ್ಣೆಯಲಿ ಹೊತ್ತಿ ಆದೆ ನಾ ಬೆಂಕಿಗೊಂಡ ಬತ್ತಿ
ಕಣ್ಣು ಉರಿದು ಕೆಂಗೆಂಡವಾಗಿ ಭಗ ಭಗನೆ ಬಾನ ಭಾಗ
ನೆತ್ತಿಯಲ್ಲಿ ಸುಡುತಿದ್ದ ಸೂರ್ಯ ಕತ್ತೆತ್ತಿ ನೋಡಿದಾಗ.

ಮಣ್ಣು ನೆಲದ ಈ ಅನ್ನಪಿಂಡ ಉರಿಯಾಗೆ ಉಸಿರ ತಿದಿಗೆ
ಬದಿಗೆ ಹರಿಯುತಿದೆ ತಣ್ಣನೀರು ಸುಖವಾಗಿ ಸುಖದ ನದಿಗೆ
ನೀರಿನಲ್ಲಿ ಕಾಲಿಟ್ಟೆ ಮಾತ್ರ ನಾನಂದಿ ನನಗೆ ಹೊರತು
ಜಲಕ್ರೀಡೆಯಾಡುತ್ತಲಿದ್ದ ರವಿ ಕೂಡ ತಾಪ ಮರೆತು.

ತಂಪು ಜೊಂಪು ಏರಿತ್ತು ತಲೆಗು ಹುಟ್ಟಿತ್ತು ಕುಸುಮ ಕಂಪ
ನಾಡಿ ನಾಡಿ ಜುಣುಗುಡುತ ಬಂತು ನಾನಾದೆನೋ ನಿಲಿಂಪ
ಯಾವ ನಾಡೊ ಇದು ಗಾಳಿ ತೀಡುತಿದೆ ಯಾರೊ ಹಾಡಿದಂತೆ
ಉಸಿರ ಪಂಜರವು ಭಗ್ನವಾಗಿ ನಾ ನಗ್ನನಾಗಿ ನಿಂತೆ.

ಏನು ದೇವ! ಓ ನಾನು ದೇವ ಈ ಭಾನು ದೇವ ಸುಡನೇ
ಬಯಲ ಹಾರಹೊಪೆದಿರಲು ಬಯಲು ಬಯಲಾಯ್ತು ಬಯಲಿನೊಡನೆ
ಸುತ್ತಲೆತ್ತಲೂ ಶಮವು ತಮವು. ಸಂದಿಸಿತು ಸಂಜು ನೋವ
ಗಾಜುಗೊಳವಿಯಲಿ ದೀಪ ಬೆಳಗಿದೊಲು ಬೆಳಗುತ್ತಿತ್ತು ಭಾವ.

ಶಿವಕರುಣೆ

ರುದ್ರವಿಲಾಸದ ಪರಿಯೇ ಬೇರೆ
ಶಿವಕರುಣೆಯು ಹಿರಿದು॥ಪಲ್ಲ॥

ತಾಂಡವ ಪಾದಾಹತಿಯಲಿ ನೋಡುವ
ಬೆನ್ನಕೆಚ್ಚ ತುಳಿದು;
ಭುಜದ ಭುಜಂಗನ ಕಚ್ಚಿಸಿ ನೋಡುವ
ರಸದಲಿ ವಿಷ ಹಿಳಿದು;

ಚಿತಾಭಸ್ಮದಲಿ ಹೊರಳಿಸಿ ನೋಡುವ
ಮೈಯ ಮಲವ ತೊಳೆದು;
ಕಣ್ಣ ಕಿಚ್ಚಿನಲಿ ಹೊತ್ತಿಸಿ ನೋಡುವ
ಜ್ಯೋತಿಯ ಎಳೆಯೆಳೆದು;

ಗಂಗಾಜಲದಲಿ ಮುಳುಗಿಸಿ ನೋಡುವ
ಎದೆಯಾಳವನಳೆದು,
ರುಂಡವ ಹೂವೊಲು ಉರದಲಿ ಧರಿಸುವ
ಕೊರಳಿಗೆ ಬರಸೆಳೆದು;

ಅಟ್ಟಹಾಸದಲಿ ಕೆರಳಿಸಿ ನೋಡುವ
ಬಗೆಯನು ಬಗೆಬಗೆದು;
ಬ್ರಹ್ಮಕಪಾಲದಲದ್ದಿ ನೋಡುವನು
ಆಸೆಯ ತೆರೆ ತೆಗೆದು;

ಅದಕೂ ನಗುತಲೆ ಬರಮಾಡಿದರೆ
ತೆರೆವನು ಹೃದಯವನು,
ಶಿವಕಾರುಣ್ಯದ ಘನತೆಯೆ ಮಿಗಿಲು
ತಿಳಿದವರಾರದನು ?

ಕೇಳಿ ನುಡಿ ಕಂಡು ನಡೆ ಓ ಕನ್ನಡ ಕಂದಾ

೧

ಕೇಳಿ ನುಡಿಯುವುದುಂಟು
ಈ ಕನ್ನಡಾ
ಕಂಡು ನಡೆಯುವುದುಂಟು
ಈ ಕನ್ನಡಾ.

ಕಿವುಡಾಗಿ ನುಡಿಯುವುದು
ಕುರುಡಾಗಿ ನಡೆಯುವುದು
ಮೊರೆಯಬೇಡೆನ್ನುವುದು
ಈ ಕನ್ನಡ.

ಬಾಯ್ಮುಚ್ಚಿ ಬದುಕುವದು
ಕಾಲ್ಕಟ್ಟಿ ಕೂಡುವುದು
ಯಾವ ಬಾಳೆಂಬುವದು
ಈ ಕನ್ನಡ.

ಬೈಯ್ಯುವದು ಕೃತ್ಯವೋ
ಗೊಂದಲವು ನೃತ್ಯವೋ
ತಲೆ ಹಾಕಿ ತಿನ್ನುವುದು
ಈ ಕನ್ನಡ.

ನಾಲಿಗೆಯಲೆರಡೊಂದು
ಎದೆಯಲ್ಲಿ ಬೇರೊಂದು
ಶೂಲಿ ಸಾಕೆನ್ನುವುದು
ಈ ಕನ್ನಡ.

ಯಾಕೇನೊ ಹುಟ್ಟಿದ್ದೆ
ಎಂದಾರೆ ಸಾವು ಇದೆ
ಅಳಿವುಳಿವು ಒಂದೆನದು
ಈ ಕನ್ನಡ

ಭೂತವನು ಮೆಟ್ಟುವುದು
ಭಾವವನು ಕುಟ್ಟುವುದು
    ಕಂಗಳರ ಕಣವಲ್ಲ
    ಈ ಕನ್ನಡ

'ತಮ ವಿಷಮ ತಿತ್ತಿಮುರು
ಕೈಲಿ ಡಾಮರ ಡಮರು'
    ಬರಲಿ–ಬೆದರುವದೇನು
    ಈ ಕನ್ನಡ?

ಚದುರಸೊಲ್ ಗುಲ್ಲಲ್ಲ—
ಎಚ್ಚರಿಸುವನು ಬಲ್ಲ
    ಗಳಪುವಾ ಗಿಳಿಯಲ್ಲ
    ಈ ಕನ್ನಡ.

ಎಣ್ಮೈಯ ಗುರುವಿಗೋ
ಅವನ ಕಣ್ಮೆರವಿಗೋ
    ನಮೋನಮೋ ನಮಿಸುವುದು
    ಈ ಕನ್ನಡ

ಕಣ್ತೆರೆಯದ ಜನ ಕನ್ನಡವೆಂತು?
ಒಂದಾಗದೆ ತಾ ಮುನ್ನಡೆ ಎಂತು? ॥ಪ॥

ಭೇದದ ಮೂಲಕೆ ಅಭೇದ ಉಂಟು
ವಿಶೇಷ ಸಾಮಾನ್ಯಕೆ ಇದೆ ಗಂಟು
ಹೆಣಿಗೆಯ ಕುಸುರಿಗೆ ಹೆಸರೇ ನಂಟು
ಮೊಳಕೆ ಒಡೆಯುವುದೆ ಮಲ್ಲಿಗೆಯುಂಟು
ಮಾಮರದಲಿ ಕೋಗಿಲ ಕೂಗುವದು
ಸುಗ್ಗಿಯ ತೊಟ್ಟಿಲವನು ತೂಗುವದು
ದೇವಮುಹೂರ್ತವು ಬಂದಿದೆ ತಮ್ಮಾ
ಹೃತ್ ಸಂಬಂಧವು ನಮ್ಮಾ ನಿಮ್ಮಾ.

    ಸತ್ಯೋದ್ಧಾರಕ ನಿತ್ಯಪ್ರತಿಷ್ಠ
    ವಿಜ್ಞಾನಿಯೆ ಉತ್ತಿಷ್ಠೋತ್ತಿಷ್ಠ
ನರಸಿಂಹಾಸನ ಒಡೆನುಡಿಯುವದು
ನವರತ್ನವು ಕಾಂತಿಯ ಕುಡಿಯುವದು
ಅನೇಕಾಂತ ಏಕಾಂತದ ಶೀಲ

ಕೀಲ ಕೀಲದಲಿ ನೀರದ ನೀಲ
ರಾಜ್ಯೋದಯ ದಿನ ಉದಿಸಿದೆ ಮತ್ತೆ
ನಿದ್ರಿಸುವೀಜನ ಕಣ್ಮುಚ್ಚುತ್ತೆ
ಕಾಣದ ಕನ್ನಡ ಕನವರಿಸುವದು
ಮಹಿಶೂರರ ಕಂಡೂ ಮರೆಸುವದು
ಇಲ್ಲದ ಮೇರೆಯನೇ ಮೆರೆಸುವದು
ಇದ್ದ ಗದ್ದಲಕೆ ಕಲೆ ಬೆರೆಸುವದು
ಕರ್ಣದ ನಾಟಕ ಕೇಳದ ಪಾತ್ರ
ಕಣ್ಣಿನ ಆಟವ ನೋಡಲು ಪಾತ್ರ.

ರವಿಗೂ ಸೋಮಗು ಜಗಳವ ಹಚ್ಚಿ
ಮಹಿತಲೆ ತಿರುಗುವವೊಲು ಕಣ್ಮುಚ್ಚಿ
ಕತ್ತಲೆ ಬೆತ್ತಲೆ ಎನುವಳು ಹುಚ್ಚಿ
ಬೆಳಕನು ಕಾಣಳು ತಾ ಎವೆ ಬಿಚ್ಚಿ
ಬೆಳಕಿನ ಮಾತಿಗೆ ಬೆಡಗೆನ್ನುವರೇ ?
ಬಿನ್ನಾಣಕೆ ಮೈ ಮಡಗೆನ್ನುವರೇ ?
ತನ್ನರಿವಿನ ಗುರುವಿನ ಮಾಲಿಂಗ
ಜಂಗಮವನೆ ಎರೆದಿದೆ ಸರ್ವಾಂಗ
ಜ್ಯೋತಿಜ್ಯೋತಿಗೂ ತನ್ನದೆ ಜಾತಿ
ಕೂಜಿಸುತಿದೆ ಪೂರ್ಣದ ಆಕೂತಿ.

ಶರತ್ಸಮಯದಲಿ ಶಾರದೆ ಬಂದು
ಕವಿಮಂಡಲವನು ಗೋಷ್ಠಿಗೆ ತಂದು:
ಧಾರವಾಡ ಹೂಬಳ್ಳಿಯ ಬೆಳೆಸಿ
ನವಕಾಲಕೆ ಆಮಂತ್ರಣ ಕಳಿಸಿ
'ಸಹನಾವವತು'ೈ ಪಠಿಸುವಳಣ್ಣಾ
ಬೆಳಕಿಗೆ ಕಂಡಿವೆ ಹೊಸಹೊಸ ಬಣ್ಣಾ.

ಕಲ್ಪವೃಕ್ಷ ವೃಂದಾವನಂಗಳಲಿ

ಕಲ್ಪವೃಕ್ಷ ವೃಂದಾವನಗಳಲಿ
ಹೇಗೊ ಹೊಕ್ಕು ಬಂದೆ।
ಅಲ್ಲಿ ಎಚ್ಚರವು ಅಲ್ಲಿ ನಿದ್ದೆಯೂ

ಏನೊ ಯೋಗದಿಂದೆ।
ಸುಳಿದೆ ಅಲ್ಲಿಯೂ ನನ್ನ ಸಹಜಸಖಿ
ನೀನು ಹಿಂದೆ ಮುಂದೆ॥

ಕೇಳು ಕಮಲ ಮುಖಿ ಏಳು ಜೀವ ಸಖಿ
ಕಂಡ ಸುಖದ ಕೀಲ।
ಬಾಲ ಸುತ್ತಿ ಹೆಡೆಯೆತ್ತಿ ತೂಗುತಿರೆ
ಭೋಗಸುಪ್ತಕಾಲ।
ಈತೋಳಿನಲಿ ಹೋಳುಮೈಯಿರಲು
ಬೀಸಿತಿಂದ್ರಜಾಲ॥

ಕತ್ತಲಲ್ಲಿ ಕಣ್ಣಾಗಿ ನೋಡುತಿದೆ
ನೂರು ಇಂದ್ರರಂತೆ।
ಬೆಳಕುನಾಯಿ ಮೈಮೂಸಿ ಬರುತಲಿದೆ
ಶುಕ್ರ ಚಂದ್ರರಂತೆ।
ಕಂಪೆ ಕಂಪಲ್ಲಿ ಗಾಳಿ ಹೂತಿತೋ
ಏನೊ ಎನ್ನುವಂತೆ॥

ಮನದ ಚಿತ್ರಗಳೆ ಮೈಯ ತಾಳಿದೊಲು
ಗೆಳತಿ ಗೆಳೆಯರಾಗಿ।
ಸರಸ ವಚನಗಳ ಕರಗಿಸುತ್ತಿರಲು
ಜೀವರಸಗಳಾಗಿ।
ಹೊಮ್ಮಿತದರ ಸವಿ ಪ್ರಣವನಾದದೊಳು
ಪ್ರಣಯನಾದವಾಗಿ॥

ಅಲ್ಲಿ ಎಲ್ಲರಿಗು ನಾಲ್ಕು ಕೈಗಳೇ
ಮಾಟ ತಪ್ಪದಿಹವು॥
ಎರಡು ಒಪ್ಪಿಸಿವೆ ಕುಶಲ ಕಲೆಗಳಲಿ
ಎರಡು ಅಪ್ಪಿ ಇಹವು।
ಎಲ್ಲರಲ್ಲಿ ತಲ್ಲೀನರಾಗಲೋ
ಜೀವ ಜಪ್ಪಿಸಿಹವು॥

ಕಾಮನ ಬಿಲ್ಲಿಗೆ ಬಾಣ ಹೂಡಿದೊಲು
ಕಂಗಳೆಸೆಯುತಿಹವು।
ತೋಳು ತೋಳಿನಲಿ ಕಸೆಯ ಮಾಡಿದೊಲು

ಎದೆಯ ಬೆಸೆಯುತಿಹವು।
ಪ್ರಾಣದುಕ್ಕಿನಲಿ ಪ್ರೀತಿಜ್ಯೋತಿಗಳು
ಮಿಂಚಿ ಮಸೆಯುತಿಹವು।

ಜೇನು ನೊಣಗಳೊಲು ಹಾವಭಾವಗಳು
ಇನಿದು ಜಿನುಗುತಿಹವು !
ಹೊನ್ನಿಹುಳಗಳೊಲು ಓರೆನೋಟಗಳು
ಹಾರಿ ಮಿನುಗುತಿಹವು।
ಬೆಳ್ಳಿ ಮೋಡಗಳು ಸನ್ನೆ ಮಾಡುತಿವೆ
ನನಗು ನಿನಗು ಬರಲು॥

ಪಾರಿಜಾತಗಳು ಮುದ್ದುಗರೆಯುವವು
ಹವಳದುಟಿಗಳಿಂದ।
ಕಂಪಸೂಸಿ ಮಂದಾರ ಉಸಿರ ಬೆರೆ–
ಯುವವು ಸುಮನದಿಂದ।
ಸ್ಪಂದಿಸುವದು ಹೃದ್ಬಂಧ ತುಂಬಿದಾ-
ನಂದನಾಡಿಯಿಂದ॥

ಬಯಕೆ ಮೂಡದಲೆ ಬಯಸಿದೊಡವೆಯೂ
ಕೈಗೂಡುತಿತ್ತು !
ಪಡೆದ ಬದುಕನೇ ಬಯಸುತ್ತಿದ್ದೆನೋ
ಎನ್ನುವಂತೆ ಇತ್ತು।
ಕೊಡುವ ಕೈಯೆ ತಾನಾಸೆ ಕೊಡುವದೋ
ಯಾರಿಗೇನು ಗೊತ್ತು॥

ರಕ್ತಕಣಗಳೂ ಜೀವದಣುಗಳೂ
ಕುಣಿಯೆ ಕೊಡುತ ಹೊಳಲು
ತನ್ನ ಉಸಿರನೇ ನನ್ನದಾಗಿಸುತ
ಮೆಲ್ಲನೊಲಿಸಿಕೊಳಲು !
ಎದೆಯಲಾವುದೋ ದನಿಯು ಮೂಡುತಿದೆ
ಊದಿದಂತೆ ಕೊಳಲು॥

ನೋಡುತಿರಲು ಒಳಗಣ್ಣೆನಿದಿರು ನೀ
ಹೇಗೊ ರಾಧೆಯಾದೆ।
ಕೇಳುತಿರಲು ಒಳಗಿವಿಯು ಕೊಳಲು ನ-

ನನ್ನೊಳಗೆ ಮಾಯವಾದೆ।
ನಾನು ನೀನೊ ನೀ ನಾನೊ ಏನೊ ಎನು-
ತೆನುತಲೆಚ್ಚರಾದೆ॥

ದವನದ ಹುಣ್ಣಿಮೆಯ ಜಾತ್ರೆಯ ರಾತ್ರಿ

ಇಗೋ ಬಂತು ದವನದ್ಹುಣ್ಣಿವಿ ಬಿಚ್ಚಿ ಕಣ್ಣಿವಿ ಕುಡಿದು ಅಮೃತಾ ಕಂಡವರಿಗುಣಿಸಿ
ಸಮತಾ ॥ಪ॥
ಹಿಂದೀನ ಹೊಳಲಗೊಡತಾವ ಹಾಡು ಆ ಹೇಮಕೂಟದಾಗ
ತುಂಗೀಯ ದಂಡಿಮ್ಯಾಗ॥
ಅಗೋ ಕಾಮಸತಿಯೋ ರಾಮಸೀತೆಯೋ ನರಳಿ ನಕ್ಕಹಾಂಗ
ಪತಿ ಸತಿಗೆ ಸಿಕ್ಕಹಾಂಗ॥
ಬಯಲಾಟದವರ ಹಿಮ್ಮೇಳದಿಂದ ದನಿ ತಾಳಗತ್ತಿನ್ನಾಗ
ಬರತ್ಯದ ಕುಣಿವುತೀಗ॥
ತಂಗಾಳಿ ಸುಳಿಗೆ ಸುಳಿಸುಳಿದು ಬಂದು ತುಳುತುಳುಕಿ ಮ್ಯಾಲಮ್ಯಾಲ
ಆಲೀಯ ಕಬ್ಬಿನ್ಹಾಲ॥
ಹರದಾರಿ ಹಬ್ಬಿದೆರಿಹೊಲದ ಎದಿಯಮ್ಯಾಲ ಕಟ್ಟಿತೇನೊ ಕವನ
ಒಡಮುರಿದು ಎದ್ದ ದವನ॥
ಹಣ್ಣಾದ ಬಿಸಿಲ ಬಣ್ಣನ್ಯ ಕಳತು ಬೆಳದಿಂಗಳಾತೊ ಏನೋ
ಹರದ್ಯದ ಬಾನಜೇನೋ॥
ದನಿಮ್ಯಾಲೆ ದನಿಯನೆತ್ತೆತ್ತಿ ಓಲಗಾ ಏರತಾವ ಹ್ಯಾಂಗ
ಗೋಪುರಾ ಕಟ್ಟಿಧಾಂಗ॥
ಆಕಾಶ ಆನಸತದ ಗುಡಿಯ ಹಾಂಗ ಪ್ರಕಾಶ ಮಹಾಲಿಂಗ
ನೆಲ ಅಗಲ ಪೀಠಧಾಂಗ॥

ನಾವು ಬರತೇವಿನ್ನ

(ಲಾವಣಿಯ ನಡಿಗೆ)

೧

ನಾವು ಬರುತೇವಿನ್ನ ನೆನಪಿರಲಿ ತಾಯಿ
ನಂ ನಮಸ್ಕಾರ ನಿಮಗ,
ಕಾಯ್ದಿರಿ-ಕೂಸಿನ್ಹಾಂಗ ನಮಗ
ನಾವು ಬರತೇವಿನ್ನ......

ಜಗದ ಕೂಡ ಬಂದೆವು ಜಗಳಾಡಿ,
ಕೊಟ್ಟಿರಿ ನಿಮ್ಮ ತೊಡಿ,
ಅಲ್ಲಿ ನಿದ್ದೆಮಾಡಿ-ಎದ್ದೆವೀಗ
ಯಾವುದೋ ಹೊಸಾ ನಸುಕಿನ್ಯಾಗs

ನೀವು-ತಾಯಿತನ ನಡಿಸಿದಿರಿ
ಹಾಲ ಕುಡಿಸಿದಿರಿ
ಮರಳು ಆಡಿಸಿದಿರಿ ಕನಸಿನ್ಯಾಗ
ಬೆಳಗು-ಆತು ಭಾಳ ಬ್ಯಾಗ

ಕಣ್ಣಮುಚ್ಚಿಕೊಳ್ಳತಾವ ಚಿಕ್ಕಿ
ಚಿವುಗುಡತಾವ ಹಕ್ಕಿ
ಕತ್ತಲ ತಲಿ ಕುಕ್ಕಿ-ಬಾನಮ್ಯಾಗ,
ಬೆಳಕು-ಹಾರ್‍ಯಾವ ಮೂಡಲದಾಗ।

ನಿಮ್ಮ ಸೆರಗ ಮರೀ ಮಾಡಿದಿರಿ,
ಲಾಲಿ ಹಾಡಿದಿರಿ
ಆಟ ಆಡಿದಿರಿ-ಏನೋ ಹಾಂಗs
ಮಲೆತೆವು-ಕಳೆದ ಜನ್ಮದ್ಹಾಂಗ।

ಜೋಲಿ–ಹೋದಾಗ ಆದಿರಿ ಕೋಲು
ಹಿಡಿದಿರಿ ನಮ್ಮ ತೋಲು
ಏನು ನಿಮ್ಮ ಮೋಲು-ಲೋಕದಾಗ?
ನಾವು-ಮರತೇವದನ ಹ್ಯಾಂಗ?

ಅಕ್ಕ–ತಂಗಿ–ಮಗಳು–ತಾಯಿ–ಹಡೆದ ತಾಯಿ...
ಕನ್ನಿ–ಗೆಳತಿ–ಮಡದಿ–ದಾಯಿ–ಸಾಕುದಾಯಿ...
ಜೋಡೆ–ಸೂಳೆ–ಮತ್ತೆ ಮಾಯಿ–ವಿಧೀಮಾಯಿ...

ನೂರಾರು ವೇಷ ಕಳಿಸಿದಿರಿ
ಮಡ್ಡ ಇಳಿಸಿದಿರಿ
ಮಾನ ಬೆಳೆಸಿದಿರಿ...
ಯಾಕೋ ಕರುಣಾ ಬಂತು ತಮಗs
ನಾ–ಶರಣು ಬರಲಿಲ್ಲ ಸುಮಗs
ನಾವು ಬರತೇವಿನ್ನ॥

೨

ಎಲ್ಲಿ ಹೋದಲ್ಲಿರಲಿ ನಮ್ಮ ಹತ್ರ
ನಿಮ್ಮ ಕೃಪಾ ಛತ್ರ
ಕಾರ್ಯ ಸುಸೂತ್ರ–ನಡೀತಿರಲಿ
ನಿಮ್ಮ–ಹೆಜ್ಜೆ ಜೋಡಿಗಿರಲಿ।

ಹಗಲಾಗಲಿ ಧುರಂಧುರಿ ಜಾತ್ರಿ
ನಿದ್ದಿಗಿರಲಿ ರಾತ್ರಿ
ಜೀವಕ್ಕ್ಯ ಖಾತ್ರಿ–ನಿಮ್ಮದಿರಲಿ,
ಜನ್ಮ ಮರಣ ಏನ್ಯ ಬರಲಿ।

ಮಾಡೀತೇನು ಮಣ್ಣಿನ್ಯ ಗೊಂಬಿ?
ನಿಮ್ಮ ಹೆಸರ ನಂಬಿ
ಹೊತ್ತುಕೊಂಡು ಕಂಬಿ-ಕುಣಿತಿರಲಿ
ಸ್ವರ್ಗ–ನರಕ ಯಾವುದೂ ಇರಲಿ।

ಮೂರೂ ಹೊತ್ತಿನ್ಯಾಗ ನಿಮ್ಮ ಧ್ಯಾನ
ಹೊತ್ತುತಿರಲಿ ಗ್ಯಾನ
ಸುಡಲಿ ಅಜ್ಞಾನ–ಪ್ರೇಮಮುರಲಿ
ಕಿವಿಗೆ ಅದೇ ಕೇಳಿಸತಿರಲಿ।

ನಿಮ್ಮ ಚಂದ್ರ ಜ್ಯೋತಿಯೂ ಬೆಳಕು
ಅದ್ಯ ನಮಗ ಬೇಕು.
ಸುಡ್ಡೋ ಸೂರ್ಯ ಸಾಕು–ಯಾಕ ತರಲಿ
ಹೊತ್ತಾರ ಯಾರು ಒಣಾ ಹರಲಿ।

ಕತ್ತಲೀ ಕೆಚ್ಚಿ ಕೆದರೀ–ಕೆಚ್ಚಿ ಕೆದರಿ!
ಬಣ್ಣಬಣ್ಣ ಬಂತು ಚೆದರಿ–ಸುತ್ತೆ ಚೆದರಿ
ಮಕ್ಕಳಾಟ ತೋರಿಸಿದಿರಿ–ಹಾರಿಸಿದಿರಿ

ನಿಮ್ಮ ಹೊಟ್ಟೀ ಕರುಳಿನಾ ತುಣುಕು
ಅಂತನ್ಯ ಚುಣುಕು
ತೋರಿಸಿದಿರಿ ಮಿಣುಕು

ಮಿಣು–ಮಿಣುಕು ದೀಪದಾಗ
ಚಿಕ್ಕಿಮಳೀ ಸುರಿಸಿದ್ಹಾಂಗ!

ನಾವು ಬರತೇವಿನ್ನ......

ಸುವರ್ಣಸಂಪುಟ/೮೫

ಎದೆಯ ಒಕ್ಕಲಿಗನ ಹಾಡು

ತತ್ ಎನ್ನು ತತ್ತಿಗೆ। ಬಿತ್ತೆನ್ನು ಬಿತ್ತಿಗೆ
ಸತ್ ಎನ್ನು ಕುತ್ತಿಗೆ–ಮುತ್ತಿಗೆ
ಮಿಂಚಾದ ಚಿತ್ತಿಗೆ। ಸ್ವಾತಿ ತುಟಿಮುತ್ತಿಗೆ
ನೇಸರು ಏರಿದನೊ! ನೆತ್ತಿಗೆ
ನೀರಿಗೆ ಬಿಡು ಹೋರಿ, ಎತ್ತಿಗೆ.

ಎದೆಯ ಕಮ್ಮಟದಾಗ, ಒಲುಮಿಯ ಕುಲುಮಿಯೋ
ಅಡಿಗಲ್ಲ ವ್ಯಾಲ್ಯೈತಿ ಸುತ್ತಿಗೆ
ಹೊತ್ತಿಗೆ ಹೊತ್ತಿಗೆ। ಢಣ ಢಣ ದೀಪಾ-ಗಂಟೆ
ಒಲವಿನ ಬಲ ಐತಿ ಜತ್ತಿಗೆ
ಬಾರಣ್ಣ ಬಾ ತಮ್ಮ ಒತ್ತಿಗೆ.

ಕಲ್ಲಾದ ದೇವರು ಮಣ್ಣಾದ ದೇವರು
ಬೂದ್ಯಾದ ದೇವರು ಹೋದಾರೋ
ಬಣ್ಣಾದ ದೇವರು ಸುಣ್ಣಾದ ದೇವರು
ಕಣ್ಣಾದ ದೇವರು ಬಂದಾರೋ
ವರ ಬೇಡೊ ವರ ಬೇಡೊ ಎಂದಾರೋ.

"ರವಿ ಚಂದ್ರ ಮನಿ ದೀಪ! ನೆಲಕೆ ನೀರು ಸಮೀಪ
ಮನುಷ್ಯಾರ ಕುಲಮೂಲ ಒಂದಾಗಿ
ಸತ್ಯವಂತರಾಗಿ ನಿತ್ಯವಂತರಾಗಿ
ಬಾಳುವೆ ಮಾಡಲಿ ಚೆಂದಾಗಿ
ದೇವರ ಬೆಳಕಾಗಿ ಮುಂದಾಗಿ."

ಸಣ್ಣ-ಸೋಮವಾರ

ಬಂತಣ್ಣ ಸಣ್ಣ ಸೋಮವಾರ
ಕಾಣಬೇಕಣ್ಣ ಸೋಮೇಶ್ವರ.

ಹಾದಿಗುಂಟ ಚೆಲ್ಲಾಟ
ದಾರಿ ಉದ್ದ ನೀರಿನೋಟ
ಹಸರಾಣೆ ಬನರಾಣೆ ತ್ವಾಟ;
ಅತ್ತ ಏರೀ ಇತ್ತ ವಾರಿ
ನಡುನಡುವೆ ಕೆರಿ, ಕೆರಿ
ಸುತ್ತು ಮುತ್ತು ಪಯಿರಿನ ಮಾಟ.

ಮುಗಿಲಾಗ ಮೋಡದ ಹಡಗು
ಎಲ್ಲೆಲ್ಲೊ ಮಿಂಚೂ ಗುಡುಗು
ಚಳಿಗ್ಯಾಳಿ ತಂದ್ಯರು ನಡುಗು
ಹುಡುಗ ಪಾಳ್ಯಕ್ಕ ಎಲ್ಲಾನು ಬೆಡಗು

ನಾ ಮುಂದ ನೀ ಮುಂದ
ನಡಗೀಯು ತರತರದಿಂದ
ಸಾಲ್ಯಿಗೆ ಸೂಟಿ ಎಂಥಹ್ವಾರೆ?
ಕಾಯಿಕಪ್ಪುರ ಕಟಿಕೊಂಡು
ಬೆಲಪತ್ರಿ ಹಿಡಕೊಂಡು
ಸಂಗಾಟ ಫರಾಳ ಬ್ಯಾರೇ.

ಧಾರವಾಡ ಸೀಮಿ ಛಂದ
ಏರು ಇಳಿವಿನ ಅಂದ
ಹಬ್ಬ! ಕುಣಿಕೋತ ಹೊರಟಾಂಗ ಕುದುರಿ.
ಮರದಿಂದ ಮರಕ ಹಾರಿ
ಟೊಂಗಿಯಿಂದ ಟೊಂಗಿಗೇರಿ
ಹುಬ್ಬ! ಹಾರ್‍ಯಸತಾವ ಮಂಗ ಬೆದರಿ,
ತಪತಪ ತೊಯ್ದು ಗಿಡ
ಅಲ್ಲಾಡಿ ಟಪಟ್ಯಪ
ಅಬ್ಬ! ಬೀಳ್ತಾವ ನೀರಲಹಣ್ಣು ಉದರಿ.

ಗುಡ್ಡ್ನ ದುಡು ದೂಡು ಬರುತ್ತಿತ್ತು ದೂಡಿ
ಸೀಟೀ ಹೊಡೆತಿತ್ತು ದೂರದಿಂದ ಗಾಡಿ
ಗೇಟಿನ ಫಜಾರಗಟ್ಟಿಗೋಡಿ ಓಡಿ
ಕೈಯೆ ಸಿಗ್ನಲು ಮಾಡಿ
ಒಬ್ಬರೊಬ್ಬರ್‍ನ ನೋಡಿ
ನಾವು! ನಿಲ್ತಿದ್ವಿ ಠೀಕು ಜೋಡಿ ಜೋಡಿ.

ತಗ್ಗಿನ್ಯಾಗ ಗಿಡದ ಗುಂಪು
ಹೊಂಡ್ಯದ ನೀರ ತಂಪು
ದೂರದಿಂದ ಕಂಡರೂ ಸೊಂಪು.

ಭಜನೀಯ ಮ್ಯಾಳದ ಧನಿ
ಅಲ್ಲಾ ದೂರಾ ಅಲ್ಲಾ ಸನಿ
ತುಳಕ್ಯಾಡತಾವ ದಿಕ್ಕುದಿಕ್ಕು.
ತಪ್ಪಿ ಉಳಿದ ಕೋಗಿಲಾ
ನಡುವೇನ್ಯ ಕೂಗ್ತದ
ಶ್ರಾವಣದ ಝಡಿಯೊಳಗ ಸಿಕ್ಕು.

ಹರಹರ ಮಹಾದೇವಾ
ಈಸಾಡತಾವ ಜೀವಾ.
ಮಾನಸಸರೋವರ ಹೊಕ್ಕು.

ಗರ್ಭಗುಡಿಯೊಳಗೆ ಲಿಂಗ
ನಿದ್ದಿಯೊಳಗ್ಯ ನೋಡಿಧಾಂಗ
ಕಣ್ಣು ಮುಚ್ಚತಾವ ನಮೋ ಎಂದು.
ಗವೀಯೊಳಗಿನ ದಾರಿ
ಹರದಾರಿ ಹರದಾರಿ
ಮಿಂಚಿತ್ತು ಚಂದ್ರಕ್ವಾರಿ ಒಂದು.
ನಿಂತ್ಯ ಮೈಯಾಗಿ ಖಂಬ
ಸೋರ್ಯಾವ ಜಂಬಗಿಂಬ
ಹಿಡಿದಾನ ಕೈಯ್ಯ ಶಿವನೆ ಬಂದು.

ಎಚ್ಚರ್‍ಯದಾಗ ಇದು
ಹುಚ್ಚುಚ್ಚಾರ ಅನಿಸಿ
ಎಲ್ಲಾರ ಕೂಡ ಕೈ ಮುಗಿದು
ಬೆಂಡೂ ಬೆತ್ತಾಸ ಅಂತ
ತಿಂತ್ಯನ ನುರಿಸಿಕೊಂತ
ಹೋಗತಿದ್ವಿ ಜಾತ್ರಿಗೆ ಜಿಗಿದು.

ಶಾಲ್ಮಲಿ ಸಣ್ಣ ಬಾಲಿ
ಕಿವಿಯಲ್ಲಿ ತಾಳೆವಾಲಿ
ಗರಿಗರಿ ಬನದಾಗ ಅಡಗಿ
ಗಂಗಾ ಹೊಳಿಯಾಗಿ

ಸಾಗರ ಬಿದ್ದು ಸಾಗರಕಾಗಿ
      ಹೊರಟಾಳ ಗೋಕರ್ಣಕಡಿಗಿ
ಬೂರಲ ದೀಪಮಾಲಿ
ನಂದಿಸಿ ಸೆಜ್ಜಿಸಾಲಿ
      ಗತ್ತಿನ ಸಪ್ಪಳಿಲ್ಲದ ನಡಿಗಿ

ಆ ರಾತ್ರಿ ಈ ರಾತ್ರಿ
ಯಾತರದು ಐತಿ ಖಾತ್ರಿ
ಶಿವರಾತ್ರಿ ಬೆಳಕೆ ಬೆಳ್ಳಬೆಳಗು.
ಒಟ್ಟಿತ್ತು ಏನೋ ಹಾಸ
ತಟ್ಟಿತ್ತು ಶಿವಾಭಾಸ
      ಕೈಲಾಸನೆ ಹೊರಗೂ ಒಳಗು.
ಜೀವದ ಜಾಗರಣೆ
ಶ್ರಾವಣದ ಶರಣ ಸರಣೆ
ಓಂಕಾರ ಕಹಳೆಯು ಮೊಳಗು.

ಭ್ಯಾವ್ಯಾ ಇದ್ದಾಂಗ ದೇವಾ
ಹೇಳಿದ್ರು ಹಿರಿಯರು
      ಅಲ್ಲೆ ! ಸುತ್ತಾಡತಾವ ನಮ್ಮ ಖ್ಯಾಲಾ
ಎಣಿಸಿದರ ಏನೋ ಕನಸ
ಕಂಡಾಂಗ ಅನಸ್ತೈದ
      ಕಣ್ಣು ! ಆಗ್ತಾವ ಹ್ಯಾಂಗೊ ತೇಲುಮೇಲಾ
ನೆನಪಿನ ಓರಿಯೊಳಗ
ಮಿಣುಕ್ತಾವ ಎಣ್ಣೀ ದೀಪ
      ಎಲ್ಲೆ ! ಹೋದಾವೊ ಗೆಳೆಯಾ ಆ ಕಾಲಾ.

ಬಂತಣ್ಣ ಸಣ್ಣ ಸೋಮವಾರ
ಕಾಣಬೇಕಣ್ಣ ಸೋಮೇಶ್ವರಾ.

ಕಾಲೂರ ಜೀವನ

ಯಾರಿಗ್ಹೇಳಲೇ ಮನದ ಉಮ್ಮಳಾ ಯಾರಿಗ್ಹೇಳಲೆವ್ವಾ ಗೆಳತೆ
ನೀನೆ ಕೇಳ ಸರುವಾ। ನನ್ನ ಮನ। ಕಹೀ ವಿಷಾ ಬೇವಾ
ಯಾರು ಹೇಳಿದರೆ ಯಾರು ಕೇಳತಾರ ನನ್ನ ದುಃಖ ದೇವಾ ॥ಪ॥

ಅತ್ತಿ ಭಡಭಡೀ ಗಂಡ ಸಿಡಿಮಿಡೀ ತಿನ್ನತಾರ ಜೀವಾ। ಹಸಿದ
ಹುಲಿಹಾಂಗ ನನ್ನ ಮಾವಾ! ನೆಗೆಣೆ ಗೆ ಬರೋದಿಲ್ಲ ಸಾವಾ॥
ನನ್ನ ಮಕ್ಕಳಿಗೆ ಬೈದೇ ಬೈಯತಾನ ಹಂದಿಯಂಥ ಭಾವಾ—
ಗೆಳತೆ—ಯಾರಿಗ್ಹೇಳಲೇ .. ೧

ನೀರ ತಂದ ತಂದು ನೆತ್ತಿ ಸೋಲತದ, ಕುಳ್ಳ ಬಡದ ರಟ್ಟೀ। ಹಸಿದ
ಮ್ಯಾಲ ಉರಿಯತದ ಹೊಟ್ಟೀ। ಬಡೆಯಬೇಕು ನಾನೇ
ಎಲ್ಲ ರೊಟ್ಟಿ। ಅಂದಗೇಡಿ ಗಂಡನ್ನ ಮಾಡಿಕೊಂಡ
ಹಡದೆ ಮೊಟ್ಟಿಮೊಟ್ಟಿ—ಯಾರಿಗ್ಹೇಳಲೇ ... ೨

ಕರಾ ಕಟ್ಟಬೇಕು, ದನಾ ಹಿಂಡಬೇಕು, ಹೊಲಾ ತುಳಿದು ಹರದಾರಿ
ಹತ್ತಬೇಕು ಬುತ್ತಿ ಕಟ್ಟಿ ಗುಡ್ಡದೇರಿ। ತಿನ್ನಬೇಕು ಬಿಸಿಲ—
ಹಣ್ಣಿನಾ ಉರೀ। ಗಂಡ ಕೇಳಿದರೆ ಹೇಳಿ ಹೇಳಬೇಕು
ತಿಂದೆ ಸಕ್ಕರಿ ಪುರೀ—ಯಾರಿಗ್ಹೇಳಲೇ ... ೩

ತಂದೆ ತಾಯಿ ಬಡತನದಿ ಬಗ್ಗಿದಾರು ತವರಿನೂರು ಬರಲು ದೂರ
ಹ್ಯಾಂಗ ನಾ ಬಿಡಲಿ ಭರದ ಸಂಸಾರ। ನನ್ನ ಮೊಲಿ ಕುಡಿವ
ಕೂಸು ಭಂಗಾರ। ಹೊಟ್ಟೆಯೊಳಗಾರು ತಿಂಗಳಿನ ಬಸರಾ॥
ಹಬ್ಬಹುಣ್ಣಿವೆಗೆ ಗಂಡನಾಡುವಾ ಪ್ರೀತಿ ಮಾತಿನಾಧಾರ—ಗೆಳತೆ ೪

ನನ್ನ ಕರ್ನಾಟಕ

ಕರ್ನಾಟಕವೆಂದೊಮ್ಮೆ ಕೂಗು, ಜಯ ಕರ್ನಾಟ
ಕರ್ನಾಟವೆಂದೊಮ್ಮೆ ಕೂಗು।
ಕರ್ನಾಟ ಶಬ್ದಗಳ ದಿವ್ಯ ಸಂಗೀತಕ್ಕೆ
ನೂರು ಸಲ ತಲೆಯ ತೂಗು ೧

ಕರ್ನಾಟವೆಂಬುದು ಮಂತ್ರ; ಸಿಂಹನ ಧೈರ್ಯ
ತುಂಬುವರು ಮೈಯಸೇರಿ !
ಭೋರಿಡುವ ಸಾಗರದ ತೆರೆಗಳೊಲು ತುಂಬುವದು
ಶಕ್ತಿತೆರೆ ಮೇರೆ ಮೀರಿ ೨

ಕರ್ನಾಟವೆಂಬುದಿದು ಗುಡುಗು; ಮುಗಿಲಿನ ಮಿಂಚು
ಹರವುವದು ವಿಶ್ವದೊಳಗೆ !
ಬೆಳಕು ಬೆಳಕಾಗುವದು, ಜಗವೆಲ್ಲ ಬೆಳಗುವದು,
ಸಾಟಿ ರವಿ ಕಿರಣಗಳಿಗೆ ೩

ಕರ್ನಾಟವೆಂಬುದಿದು ಹಲಗೆ,—ರಣಹಲಗೆಯಿದು,
ಬೀಸುವುದು ವೀರವೃತ್ತಿ !
ಕಣಕಣಿಪ ರವವನ್ನು ಕೇಳಿದೊಡೆ ಮೂಡುವದು
ಜನರೊಳಗೆ ದಿವ್ಯಶಕ್ತಿ ೪

ಕರ್ನಾಟವೆಂಬುದಿದು ಕಾಳಿ–ರಣಗಾಳಿಯಿದು, ಭೋಂಕಾರ
ರವವ ಕೇಳಿ !
ಮಡಿವ ರಣ ಹೇಡಿಗಳ ಹೃದಯದಲಿ ತುಂಬುವಳು
ಕಡದಾದ ವೀರ್ಯ ಕಾಳಿ ೫

ಭೋರ್ಗರೆಯುತಿರುವಂಥ ಕರ್ನಾಟಭೇರಿಯಿಂ ಹೊರ
ಹೊಮ್ಮುವಂಥ ಸ್ವರವ
ಕೇಳುತಲಿ ಮೈನವಿರು ಮುಳ್ಳಿನಂತಾಗುವುದು
ತುಂಡರಿಸುತೆಲ್ಲ ಭಯವ ೬

ಕರ್ನಾಟವಿದು ವೀಣೆ। ಸಕಲ ಕರ್ನಾಟಕದ
ಜನಮನವ ಹಿಡಿದು ಹೊಸೆದು।
ವಿಶ್ವಸಂಗೀತದೊಳು ಬೆರಸಿ ಒಂದಾಗುವದು
ಶ್ರೀಧರನ ಕವನ ನೆನೆದು ೭

ಮೊದಲ ಮಳೆ

ಬಾಂದಳ ಮುಖವನು ಬಾಸಣಿಸಿತು ಕರಿ
ಮೋಡದ ಹಿರಿ ಮುಸುಕು।
ನೇಸರನಾದನು ಬಲು ಮಸಕ॥
ಸಂಜೆಯುಸಮಯದಿ ಮಂದಸ್ಮಿತದಲಿ
ಹರಿದಿಹುದೊ ನಸುಕು।
ಅಡಗಿತು ಸೂರ್ಯನ ಬಿಳಿಬೆಳಕು ೧

ಚಳಚಳ ಮಿಂಚುವ ಕಿಡಿಮಿಂಚಿನ ಮಳೆ
ಸುರಿಯುವದೊ ಘೋರ
ಗಗನದಿ ಕೋಲ್ಮಿಂಚಿನ ಹಾರ॥
ಗುಡುಗಿನ ಅಬ್ಬರ ಸಿಡಿದಿತು ಗಗನದಿ
ಧನುವಿನ ಟಂಕಾರ!
ಇಂದ್ರನ ಮೈಮೆಯು ಭೋಂಕಾರ ೨

ಮೋಡದ ಪೊಡೆಯಿಂ ಸುರಿದವು ಸರಿಗಳು
ಭೂಮಿಗೆ ರಪರಪನೆ।
ತೊಯ್ದಿತು ಭುವನವೆ ತಪತಪನೆ॥
ಸುಗಂಧ ಸೌಸವ ಇಳೆಯೊಳು ಹರವಿತು
ಹರುಷದ ಸರಿಗಳನೆ।
ಅರಳಿತು ಭುವನವೆ ಕಳಕಳನೆ ೩

ಮಳೆಯಾಟಗಳನು ನೋಡುತಲಿದ್ದನು
ಸೂರ್ಯನು ಗಗನದಲಿ।
ಏರುತ ಮೋಡವ ಹಣಕುತಲಿ॥
ವಸಂತ ಸಮಯದ ಹೊಂಬಿಸಿಲಿನ ಸಿರಿ
ಹೊರಟಿತು ಗಗನದಲಿ।
ತೋರುತ ಹೊನ್ನಿನ ಹುಡಿ ಮರಳಿ ೪

ಸೌಂದರ್ಯದೇವಿ

ನಾರೀ ನಿನ್ನ ಮಾರೀ ನೋಡಿ
ಮಂಗ್ಯಾರಾಗತಾರ ಮನಶಾರೆಲ್ಲ
ಯಾವಲ್ಲಿದೆ ಮಾಟ ನಿನ್ನ ಮೈಯ್ಯ ಒಳಗ !
ಸಾದಾ ಸಿಂಪಿನಂತೆ ನಿನ್ನ ದೇಹ ಹೊರ ಒಳಗ !
ನಿನ್ನ ಲಾವಣ್ಯ ಮುತ್ತು ತೋರ್ಸ ನನಗ ಬಾಗ್ಯ॥
ಮೋಡದೊಳಗಿನ ಮಿಂಚಿನ್ಹಾಂಗ
ನಕ್ಷತ್ರದ ಸಂಚಿನ್ಹ್ಯಾಂಗ
ನಿಮಿಷ ನಿಮಿಷ ಹೊಸಾ ಹುಚ್ಚು ಹಿಡಿಸುವಂತ
ನಾರಿ ! ನಿನ್ನ ನೋಡಿ ಬಿಟ್ಟೆನಾನು ಧರ್ಮಪಂಥ ೧

ಕಾಳಿ ಚಂದ್ರಕಾಳಿ ಸೀರಿ
ಅಂಚಿನೊಳಗ ಜರದ ಹೂ
ಎಂದೂ ರೇಶ್ಮೆ ಎಳೆ ಇಲ್ಲ ಸೆರಗಿನ್ಯಾಗ।
ಇಷ್ಟು ಕರುಣವಿಲ್ಲ ಹಚ್ಚಿ ಬಿಗಿದ ಕುಬಸದಾಗ।
ಪೊನ್ನ ಮಂಗಳ ಸೂತ್ರ ಶೃಂಗಾರವೇ ಕೊರಳಿನ್ಯಾಗ।
ಹುಬ್ಬಿನ ಬಿಲ್ಲಿನ ಹಿಡಿಕೀಯೊಳಗ
ಮಾಣಿಕ್ಯದ ಹರಳಿನಂತೆ
ಕುಂಕುಮದ ಬಟ್ಟು ನಿನ್ನ ಪ್ರೀತಿಹಾಂಗ।
ನಿನ್ನ ನೋಡಿದ ಮ್ಯಾಲೆ ನಂಬಿಗೆಯು ದೇವರಾಗ ೨

ತುಂಬಿಯು ಬಂಬಲದ್ಹಾಂಗ ಕುರುಳು,
ಕೂಡಲದಾಗ ಕೃಷ್ಣಹೊಳೆಯ
ತೆರೆಯು ಮ್ಯಾಲೆ ತೇಲುವಂಥ ಹುಚ್ಚಮರುಳು।
ನಿನ್ನ ಬೈತಾಲದಾಗ ತುಂಬೇದ್ ತುಂಗಾನೊರೆಯು ತಿರುಳು॥
ನಿನ್ನ ನಯನದಾಗ ಮಾನವತೆಯು ಮತ್ತೆ ಕರುಳು।
ಸಂಪಿಗೆಯು ಮುಗುಳಿನಂತೆ
ಅರ್ಧಾ ಅರಳಿದ ಮೂಗಿನೊಳಗ
ತುಂಬೇದ ನೋಡ ನಂದನವನದ ನರುಗಂಪ
ನಿನ್ನ ಮೋರೆ ನಾರಿ ತಾವರೆಯಂತೆ ತಂಪ ತಂಪ॥ ೩

ಕಮಲದಂತೆ ಸರಸವಾದ ನಿನ್ನ
ಕರದ ಪಾಶ ನನ್ನ ಕೊರಳಿನೊಳಗ
ಬಿದ್ದಮ್ಯಾಲೆ ಎಲ್ಲಿ ಮರಣ। ಎದಿ ಮುಗುಳು
ನನ್ನ ಮುಟ್ಟಿದ ಚಣ ಜೀವ ಪೂರ್ಣ।
ಜೀವ ಜೀವದೊಳಗ ಕೂಡಿದ ಮ್ಯಾಗ ನಾನೇ ಶರಣ॥
ಗಟ್ಟಿಯಾದ ಅಪ್ಪಿಗೆಯನ್ನು
ನಾರಿ ನೀನು ಬಿಟ್ಟ ಮ್ಯಾಲೆ ಜೀವನದಾಗ
ಜೀವವಿಲ್ಲ, ಶೂನ್ಯ ಸದನಾ।
ನನ್ನ ಜನುಮವಾಗದು ನೋಡ ಜಾಲಿಯ ವನಾ ೪

ಯಾವ ಮೋಹ, ಯಾವ ಮಾಟ
ಯಾವ ಮೋಡಿ ನಿನ್ನ ಆತ್ಮದಾಗ
ದೇವರಿಟ್ಟಾನ್ ಹೇಳ ನನಗೆ। ದೇವಿ।
ದೇವರಿಲ್ಲ ನಿನ್ನ ಬಿಟ್ಟು ಧರಣಿಯೊಳಗ
ಮತ್ತೆ। ನಿನ್ನ ಬಿಟ್ಟು ಹೊನ್ನ ಇಲ್ಲ ಭುವನದೊಳಗ॥
ಮುತ್ತು ರತ್ನ ಹವಳ ಹೊನ್ನು ನೀತಿ ಧರ್ಮ
ಪ್ರೇಮ ಕಂಡೆ ಸುಂದರಿ ನಿನ್ನ
ಬಾಡದಂಥ ಮುಖದೊಳಗ
ನಿನ್ನ। ಪ್ರೇಮವೆಂದ್ರೆ ಮುಕ್ತಿ ಇದೇ ಮರ್ತ್ಯದಾಗ ೫

ಹಳ್ಳಿಯ ಜೀವನ

ಮಾಡಬ್ಯಾಡ ಕಿರಿಕಿರೀ ನನ್ನವ್ವ। ಮಾಡಬ್ಯಾಡಾ ಕಿರಿಕೀರಿ ॥ ಪ ॥

ಹಲವು ಬಣ್ಣಗಳ ಹುಡಿಯ ತೂರುತಲಿ ಸೂರ್ಯನಿಳಿದ
ಕಡಲಾಗ। ಚಿಕ್ಕೆಗಳು। ಮಿಂಚತಾವ ಮುಗಿಲಾಗ
ಚಿಲಿಪಿಲಿ। ಹಕ್ಕಿ ತಮ್ಮ ಗಿಡದಾಗ॥ ಮೇಯ್ದು ಬಂದ
ದನಗಂಟೆ ಹೊಡೆಯುತಾವ ಸಿಗವೆ ಇರುಳಿನ್ಯಾಗ ದಾರಿ
ನನ್ನವ್ವ ೧

ನರಿ ಬಂತು ನೋಡ, ತ್ವಾಳ ಬಂತು ನೋಡ, ನೋಡ ಬಂತು
ಹೆಬ್ಬುಲಿ ! ಅಂಜಿಕೆಯ ಸದ್ದೇ ಇಲ್ಲ ನಿನ್ನಲ್ಲಿ !
ನೋಡತೀದ ಕಣ್ಣು ತೆರೆದು ! ಯಾರಿಲ್ಲ?"

ಅವರು ಬಂದ ಮ್ಯಾಲೆ ದೂರು ಹೇಳತೀನಿ ಸುಮ್ಮ
ಮಲಗು ಹುಚ್ಚಮಲ್ಲಿ ಕಂದವ್ವ ೨

ತೂಗಿ ತೂಗಿ ಕೈ, ಹಾಡಿ ಹಾಡಿ ದನಿ, ನೋಡಿ ನೋಡಿ ನನ್ನ ಕಣ್ಣಾ।
ಸೋಲತಾವ ಮಲಗು ಮಲಗು; ನನ್ನ ಜಾಣ। ತಿನ್ನ
ಬ್ಯಾಡ ಈಗ ಮಗಳ, ನನ್ನ ಪ್ರಾಣ॥ ಹಸ್ತ ಹುಲೀ
ಹಾಂಗ ಅವರು ಬಂದರೆ ಏನು ಹೇಳಬೇಕು ನೆವನ ನನ್ನಕ್ಕ ೩

ಹ್ಯಾಂಗ ಹೋಗಲೆ ಒಳಗ

ಹ್ಯಾಂಗ ಹೋಗಲೆ ಒಳಗ್ಯ ಗೆಳತೆ। ಕಟ್ಟಿಯ ಮೇಲೆ ಯಾರು
ಕುಂತಾರು ನೋಡ ಗೆಳತೆ। ಹುಣ್ಣಿವೆ ಚಂದ್ರ ಬೆಳಗ ॥ ಪ ॥

ತಲೆಯ ರುಂಬಾಲದ ಜರತಾರಿ ಅಂಚ ನೋಡ।
ಸಂಜೆಗೆಂಪಿನ ತೆರದ ೧

ನೀರಲ ಹಣ್ಣಿನ್ಹಾಂಗ ಬಣ್ಣದ ಕಣ್ಣಿನ್ಯಾಗ
ಬೆಳ್ಳಿಯ ಜೋಡಿಯೇನ? ೨

ಮೇಲ್ದುಟಿಯಂಚಿನ್ಯಾಗ, ಮಕಮಿಾಸಿ ಮೂಡ್ಯಾವ ನೋಡ।
ಕಾಮನ ಬಿಲ್ಲಿನ್ಹಾಂಗ ೩

ಸುತ್ತಮುತ್ತಲೆ ಕುಂತ। ಗೆಳೆಯರ ಗಡಣ ನೋಡ।
ನಕ್ಷತ್ರಮಾಲೀ ಹಾಂಗ ೪

ಎಲೆಗೆ ಸುಣ್ಣವ ಹಚ್ಚಿ ಕವಳವ ಮೆಲ್ಲುವಾಗ।   ಹಲ್ಲೀನ
ಸಾಲ ನೋಡ। ಡಾಳಿಂಬ್ರಿ ಬೀಜದ್ಹಾಂಗ ೫

ಸವಿಸವಿ ನುಡಿಗಳನ್ನ ಕೈಮಾಡಿ–ನುಡಿಯುವಾಗ।
ಬೆರಳಿನ ಪರಿಯ ನೋಡ। ಜ್ವಾಳದಗೆಣ್ಣಿನ್ಹಾಂಗ ೬

ಬೆರಳಿನುಂಗುರದಾಗ ತಕತಕ ತೊಳಗುವ। ಹರಳೀನ
ಕುಡಿಯ ನೋಡ। ಬೆಂಡೀಯ ಬೀಜದ್ಹಾಂಗ ೭

ಕ್ಯಾವಿಯ ಕೊರಳಿನ್ಯಾಗ। ಜೋಲು ದಾರದಿ ನಿಂತ
ತಾಯ್ತುದಿ ತೋರುವಂಥ ಹೊನ್ನೀನ ಹನುಮನ್ಹಾಂಗ ೮

ನೆಗೆಗಾರರು

ಸಿಹಿ ನುಡಿಯ ನಗೆ ಗುಡಿಯ
ಕಟ್ಟುವರು ನಾವು !

ಜಂಭಿಗರ ಬಿಗಿಮುಡಿಯ
ಬಿಚ್ಚುವರು ನಾವು !

ತಾರೆ ಮರಿ ಮಿಂಚುಗಳ
ತಂಪು ಬೆಳುದಿಂಗಳಿನ
ಒಳಗುಟ್ಟುಗಳು ನಾವು !

ಪೊಡವಿಯನು ಗಲಿರೆನಿಪ
ಸೊಟ್ಟುಗಳು ನಾವು !

ಸೊನ್ನೆಯಲಿ ಚೆಕ್ಕುಗಳು
ಕುಕ್ಕು[1]ವರು ನಾವು !

ಸಾಲದಲಿ ಶಾಲ್ಯಾನ್ನ
ಮುಕ್ಕುವರು ನಾವು !

ನಿಮ್ಮ ಚಂದದ ತಳಕು
ನಮ್ಮ ಇಂದಿನ ಅಣಕು
ನಿಮ್ಮ ಹೆಮ್ಮೆಯು ಕೆಚ್ಚು
ನಮ್ಮ ಕಣ್ಣಿಗೆ ಪೆಚ್ಚು !

ಹಬ್ಬಿಗರು॥ ಹಾಸ್ಯೇಂದ್ರ
ಜಾಲಿಗರು ನಾವು
ನಮ್ಮ ಮಿದು ಬಾಮಿ[2]ನಿಂ
ತೊಲಗುವುದು ನೋವು !

ತಾರೆಯರ ನೃತ್ಯಗಳ
ಮಾರಕರ ಕೃತ್ಯಗಳ
ಒಳಚುಚ್ಚುಗಳು ನಾವು !

---

[1] Cook [2] Balm

ಓರೆಗಣ್ಣುಗಳನ್ನೆ
ಬೀರುವೆವು, ನಾವು !

ಅಷ್ಟತರ ವಕ್ರತೆಯೆ
ದೃಷ್ಟಿಪಥವೆಮಗೆ !

ಹುಳಿಮೋರೆಗೆಮ್ಮನುಡಿ
ಅಲ್‌ಕಲಿ[3]ಯು ! ನೋಡ !

ನಮ್ಮ ಲೇಖನಿಗಿಂತ
ಚೂರಸಿ[4]ಯು ಕಾಣೆ !

ನಮ್ಮ ಮಸಿಯೋ ತೀರ್ಥ
ಶುಂಡಲಿಗನಾಣೆ !

---

[3] Alkali [4] ಚೂರಾದ ಅಸಿ.

ವಿ. ಸೀತಾರಾಮಯ್ಯ

ಅಭೀಃ

ಕಾಡಮೌನವ ಸೀಳಿ ಹಬ್ಬುತಿದೆ ಕೇಳುತಿದೆ
ಬಿತ್ತರದ ದಿಕ್ತಟಗಳಡ್ಡ ದಾಟುತಿದೆ!
ಉಳಿದೆಲ್ಲ ನುಡಿಗಳನು ಮುಳುಗಿಸುತೆ ಮೊಳಗುತಿದೆ
ಬಾಳ ಹೆದ್ದಾರಿಯನು ಹಿಡಿದೆತ್ತಿ ತೋರುತಿದೆ
—ಅಭೀಃ! ಅಭೀಃ! ಅಭೀಃ! ಎಂಬಮೃತವಾಣಿಯಿದು
ಮೂವತ್ತು ಶತಮಾನಗಳ ಮೆಟ್ಟಿ ಕೇಳುತಿದೆ
ಕಾಲದಾ ಕರೆಯಂಚಿನಾಚೆಯಿಂದ.

ಯಜ್ಞಶಾಲೆಗಳಿಂದ ಬಲಿಯಿಂದ ಸೆರೆಯಿಂದ
ತೊಂಡು ಮಲೆತೆಲ್ಲವನು ತುಳಿದತ್ತಣಿಂದ
ಕಲ್ಲುಗಾಣಗಳಿಂದ ಸಿಲುಬೆಗಳ ನೋವಿಂದ
ವಿಷಪಾತ್ರೆಯೊಡಲಿಂದ ಸುಡುವುರಿಯ ಮಡಲಿಂದ
—ಅಭೀಃ! ಅಭೀಃ! ಅಭೀಃ! ಎಂಬ ನುಡಿ ಏಳುತಿದೆ
ಹೇಡಿತನದಳುಕುಗಳ ಓಡಿಸಿದೆ ಚೆದರಿಸಿದೆ
ವೀರ ಸಂಜೀವನವ ಊಡಿಸುತಿದೆ!

ಬಲಹೀನರೆಂದೆತ್ತಲಾತ್ಮವನು ಗಳಿಸಿದರು?
ಬಲಕಾಗಿ ಕಾಯ್ವುವರು ಏಗೈವರು?
ಚಲವೊತ್ತ ಅಧಿಕಾರದಂಡಲೆಗೆ ಬೆದರುವರು
ಎಂದೇನ ಸಾಧಿಸುವರೆಂದೆಮ್ಮ ಕೇಳುತಿದೆ.
—ಅಭೀಃ! ಅಭೀಃ! ಅಭೀಃ! ಎಂಬ ಸಗ್ಗದ ಬಿತ್ತು
ನರರ ಎದೆವೊಲಗಳಲಿ ಬೇರಿಟ್ಟು ಮೊಳೆಯುತಿದೆ!
ಬಲದ ತಿರುಳನು ಬಲಿಸಿ ಬೆಳೆಸುತ್ತಿದೆ!

ನಿಲ್ಲಿಸದು ಕೂಡಿಸದು ಮಲಗಿಸದು ಕೆರಳಿಪುದು
ಆಟವಾಟದ ನಡುವೆ ಕೂಟಗಳ ನಡುವೆ
ಆಸರಲಿ ಕಣ್ಣವೆಯು ಮುಚ್ಚಿ ಬರುತಿರಲತ್ತ
ಹೊಸ ತವಕದೊತ್ತಿನಲಿ ಮೇಲೆತ್ತಿದೆ!
—ಅಭೀಃ! ಅಭೀಃ! ಅಭೀಃ! ಇದೆ ಮಂತ್ರವೆನ್ನುತ್ತೆ.

ಎಂಟು ದಿಕ್ಕಿನ ಗಾಳಿಗುಸಿರೆತ್ತಿ ಊದುತಿದೆ !
ನೀಳ್ಗೊರಲ ತುತ್ತುರಿಯನೂದಿಸುತಿದೆ !

ಯುಗದಗಲ ಜಗದಗಲ ಎಡರೆದ್ದು ನಿಂತಾವು !
ಸಂರಾಜರಬ್ಬರವು ನಡುಗಿಸೀತು !
ಕುಲವೆಂಬ ಮತವೆಂಬ ಕೆಳೆಯೆಂಬ ನಾಡೆಂಬ
ಮಮತೆಗಳು ದಾರಿಯಲಿ ಕತ್ತಲಿಟ್ಟಾವು !
—ಅಭೀಃ ! ಅಭೀಃ ! ಅಭೀಃ ! ಎಂಬ ಧ್ರುವ ತಾರಗೆಯು
ಕತ್ತಲಲಿ ತವಿಲಲ್ಲಿ ದಿಕ್ಕನ್ನು ಕಾಣಿಪುದು
ನಿಜಕಿಟ್ಟ ಮುಸುಕೆತ್ತಿ ಮರೆ ತೆರೆವುದು.

ಮಣಿಯದಿಹ ಮನವೊಂದು ಸಾಧಿಸುವ ಹಟವೊಂದು
ನಿಜದ ನೇರಕೆ ನಡೆವ ನಿಶ್ಚಲತೆಯೊಂದು-
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು
—ಅಭೀಃ ! ಅಭೀಃ ! ಅಭೀಃ ! ಎಂಬ ತಾರಕ ವಾಕ್ಯ
ನಾಡಿಯನು ನಡೆಸುತಿರೆ, ಬಾಳನ್ನು ತಿದ್ದುತಿರೆ
ನಡೆ ಮುಂದಕೆನ್ನುತ್ತೆ ಕೂಗುತಿವೆ ನುಗ್ಗಿಸುತಿವೆ.

ಮನೆ ತುಂಬಿಸುವುದು

ಭೂಪಾಳಿ

ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು
ನಿಮ್ಮ ಮಡಿಲೊಳಗಿಡಲು ತಂದಿರುವೆವು;
ಕೊಳ್ಳಿರೀ ಮಗುವನ್ನು ಎಮ್ಮ ಮನೆ ಬೆಳಕನ್ನು
ನಿಮ್ಮ ಮನೆಯನು ತುಂಬಲೊಪ್ಪಿಸುವೆವು.

ಮರೆ ಮೋಸ ಕೊಂಕುಗಳನರಿಯಳಿವಳು;
ಇನಿಸವಿಶ್ವಾಸವನು ಕಂಡರಿಯಳು;
ಕಷ್ಟಗಳ ಸೈಸದೆಯೆ ಕಾಣದೆಯೆ ಬೆಳೆದವಳು
ಸಲಹಿಕೊಳಿರೀ ಮಗಳನೊಪ್ಪಿಸುವೆವು.

ಕಠಿಣಗಳ ಸೆಳಲ್ ಸುಳಿಯಲದುರಿ ಬಾಡುವಳು
ಹಿರಿ ಮಂಜು ಬಳಲಿಸಿದ ಹೂವಿನಂತೆ;

ಸುಖದಲ್ಲಿ ದುಃಖದಲಿ ಎಲ್ಲ ದೆಸೆಯಿರವಿನಲಿ
ನಿಮ್ಮ ಪಾಲಿಗೆ ನಿಲುವ ಕುವರಿಯಿವಳು.

ನಿಮಗಿವಳು ನೀಡುತಿಹ ಹಾಲು ಹಣ್ಣುಗಳ ಸವಿ
ಎಂದೆಂದು ಅವಳ ನಡೆ ನಿಮ್ಮ ಪರವಾಗಿ;
ಎಮ್ಮ ಕುಲ ಮನೆಗಳಿಗೆ ಹೊರಗಾಗಿ ಬಂದಿಹಳು
ನಿಮ್ಮ ಕುಲವನು ಬೆಳೆಸೆ ಬಂದಿರುವಳು.

ನಿನ್ನ ಮಡದಿಯು ಕೊಂಡು ಸುಖವಾಗಿರೌ, ಮಗುವೆ,
ನಿಮ್ಮ ಸೊಸೆ–ಸೋದರಿಯು–ಕೊಳ್ಳಿರಿವಳ;
ನಿಮ್ಮ ಕೀರುತಿ ಬೆಳೆಯಲಿವಳ ಸೌಜನ್ಯದಲಿ;
ನಿಮ್ಮ ಕುಲಶೀಲಗಳು ಪರಿಮಳಿಸಲಿ.

ಹೆತ್ತವರ ಮನೆಗಿಂದು ಹೊರಗಾದೆ, ನೀ ಮಗಳೆ,
ಈ ಮನೆಯು ಈ ಇವರೆ ನಿನ್ನವರು ಮುಂದೆ;
ಇವರೆ ತಾಯ್ಗಳು ಸಖರು ಭಾಗ್ಯವನು ಬೆಳೆಸುವರು;
ಇವರ ದೇವರೆ ನಿನ್ನ ದೇವರುಗಳು.

ನಿಲ್ಲು ಕಣ್ಣೊರಸಿಕೊಳು, ನಿಲ್ಲು ತಾಯ್, ಹೋಗುವೆವು;
ತಾಯ್ವಿರಾ, ತಂದೆಯಿರ, ಕೊಳ್ಳಿರಿವಳ;
ಎರಡು ಮನೆಗಳ ಹೆಸರು ಖ್ಯಾತಿಗಳು ಉಳಿವಂತೆ
ತುಂಬಿದಾಯುಷ್ಯದಲಿ ಬಾಳಿ ಬದುಕು.

ವಿಶ್ವಾಸ

ಮಾನವನೆತ್ತರ ಆಗಸದೇರಿಗೆ
ಏರುವವರೆಗೂ ಬೆಳೆದೇವು;
ಮಾನವ ಹೃದಯಕೆ ವಿಶ್ವ ವಿಶಾಲತೆ
ಹಾಯುವವರೆಗೂ ಹಾದೇವು.

ತತ್ತ್ವದ ಸಿದ್ಧಿಯ ಕಾಲಕೆ ಕಾವರೆ
ಯುಗಯುಗಗಳು ಸಾಕಾದಾವೆ?
ಸಖ್ಯಕೆ ಸಹನೆಗೆ ಕರುಣೆಗೆ ಒಲವಿಗೆ
ಗಡಿ ನುಡಿ ಅಡ್ಡಿಯು ತಂದಾವೆ?

ಒಡೆಯುವ ಮನಗಳ ಸುಡುವ ನಿರಾಸೆಯ
ವೇಗವ ಕಟ್ಟಲೆ ತಡೆದೀತೆ?
ಮೃದು ಸೌಹಾರ್ದವು ನೋವಿಗೆ ಕರಗದೆ
ಸಾಹ್ಯಕೆ ನುಗ್ಗದೆ ನಿಂತೀತೆ?

ಶತಶತಮಾನವು ತಾವೊಪ್ಪುವ ತೆರ
ನವ ವಿಶ್ವಾಸವ ತೊಟ್ಟಾವು;
ಹಿರಿಮೆಯ ಚೆಲುವಿನ ಕನಸನು ರೂಢಿಸಿ
ಪ್ರೇಮವ ಶ್ರೇಯವ ನಟ್ಟಾವು.

ಇಹದಲಿ ಒಪ್ಪಲು ಆಗದ ಪರವನು
ಬಯಕೆಯು ಕರೆವುದೆ ಕೈಚಾಚಿ?
ಬಾಳನು ಶೋಧಿಸಿ ಶುಚಿಯನು ಬೆಳೆದರೆ
ಇಹವೇ ಅರಳದೆ ಪರವಾಗಿ?

ವರುಷ ಹೋಯಿತು

ವರುಷ ಹೋಯಿತು ವರುಷ ಬಂದಿತು
ಹರುಷ ಬಾರದು ಬಾರದು;
ಬಯಕೆ, ಆಸೆಯೆ? ಒಂದು ಫಲಿಸದು
ಎದೆಯ ವೇದನೆ ತೀರದು.

ಇರುಳು ಬಂದಿತು ಇರುಳು ಹೋಯಿತು
ಮನದ ಇರುಳೇ ಕಳೆಯದು;
ಇರುಳ ಕತ್ತಲೆಗಿಂತ ನಿಬಿಡವು
ಬೆಳಕು ಅರಿವಿಗೆ ಹಾಯದು.

ಶಿಶಿರ ಕಳೆಯಿತು ಚೈತ್ರ ಸುಳಿಯಿತು
ಮನದ ಶಿಶಿರವು ಕಳೆಯದು;
ವನವು ಹೊಸ ಹೂ ತಳಿರನಿಟ್ಟರು
ಬಾಳ್ಗೆ ಬಾರದು ಚೈತ್ರವು.

ಹಳೆಯ ಚರ್ಮವು ಸುಲಿದು ಮರಗಳು
ಹೊಸತು ಚರ್ಮವನುಟ್ಟವು:

ಹೊರಗಿನೆಲ್ಲಕು ಹೊಸತು ಬಂದರು
ನಮ್ಮ ಹಳತನ ಹೋಗದು.

ಕೊಳಗಳಲ್ಲಿಯು ಕದಡು ತಿಳಿಯಿತು
ಚೆಲುವು ನೈದಿಲೆ ಅರಳ್ವವು
ಮನದ ಕೊಳಚೆಯ ಕದಡು ಮುರಿಯದು
ತಿಳಿಯು ಹೂಗಳು ಬಾರವು.

ಶಬರಿ

ಕಾದಿರುವಳು ಶಬರಿ,
ರಾಮ ಬರುವನೆಂದು,
ತನ್ನ ಪೂಜೆಗೊಳುವನೆಂದು.

ವನವನವ ಸುತ್ತಿ ಸುಳಿದು
ತರು ತರುವನಲೆದು ತಿರಿದು
ಬಿರಿವೂಗಳಾಯ್ದು ತಂದು
ತನಿವಣ್ಗಳಾಯ್ದು ತಂದು

ಕೊಳದಲ್ಲಿ ಮುಳುಗಿ ಮಿಂದು
ಬಿಳಿ ನಾರುಮಡಿಯನುಟ್ಟು
ತಲೆವಾಗಿಲಿಂಗೆ ಬಂದು
ಹೊಸತಿಲಲಿ ಕಾದು ನಿಂದು.

ಎಳಗಾಳಿ ತೀಡುತಿರಲು
ಕಿವಿಯೆತ್ತಿ ಆಲಿಸುವಳು
ಎಲೆಯಲುಗೆ ಗಾಳಿಯಲ್ಲಿ
ನಡೆ ಸಪ್ಪುಳೆಂದು ಬಗೆದು.

ದೂರಕ್ಕೆ ನೋಳ್ಪೆನೆಂದು
ಮರವೇರಿ ದಿಟ್ಟಿಸುವಳು
ಗಿರಿ ಮೇಲಕ್ಕೈದಿ ಕೈಯ
ಮರೆಮಾಡಿ ನೋಡುತಿಹಳು.

ಬಾ ರಾಮು, ರಾಮು ಎಂದು
ಬರುತಿಹನು, ಇಹನು ಎಂದು
ಹಗಲಿರುಳು ತವಕಿಸಿಹಳು
ಕಳೆದಿಹವು ವರುಷ ಹಲವು

*   *   *   *

ಶಬರಿವೊಲು ಜನವು, ದಿನವೂ
ಯುಗಯುಗವು ಕರೆಯುತಿಹುದು
ಕರೆ ಇಳೆಗಳೇಳಲರಸಿ
ತವಕದಲಿ ತಪಿಸುತಿಹುದು.

ಭರವಸೆಗಳಳಿಯುವಾಗಿ
ಮನವೆಲ್ಲ ಬಯಕೆಯಾಗಿ
ಹಗಲೆಲ್ಲ ಕಾದು ಕೂಗಿ
ಇರುಳೆಲ್ಲ ಜಾಗರಾಗಿ;

ಬಂದಾನೊ ಬಾರನೋ ಓ
ಕಂಡಾನೋ ಕಾಣನೋ ಓ
ಎಂದೆಂದು ಜಪಿಸಿ ತಪಿಸಿ
ಶಂಕಾತುರಂಗಳೂರಿ

ಬಾ ರಾಮು, ಬಾರ, ಬಾರಾ
ಬಡವರನು ಕಾಯು ಬಾರಾ
ಕಂಗಾಣದಿವರ ಪ್ರೇಮ
ನುಡಿ ಸೋತ ಮೂಕ ಪ್ರೇಮ.
—ಕಾದಿರುವುದು ಜನವು
ರಾಮು ಬರುವನೆಂದು
ತಮ್ಮ ಪೂಜೆಗೊಳುವನೆಂದು

ವಿರಹಿ

ಒಂದೆರಡೇ ನಾಲ್ಕಾರೇ ನೂರಾರಿವೆ ಮೈಲಿ
ಎಲ್ಲಿರುವಿರಿ, ಓ, ದೂರದಿ, ಚೆಲ್ಲಿಹ ಬೆಳುದಿಂಗಳಲಿ.

ಹೂವರಳಿವೆ ಕಂಪೆರಚಿದೆ ಕೆಂಪಾಳಿದೆ ಗಿಡದಿ
ಎಂದಿಲ್ಲದ ಸಿಂಗಾರವು ಮೈ ತುಂಬಿದೆ ಬಿಡದೆ.

ನಿಮಿನಿಮಿಷಕೆ ಏರುತಿದೆ ಮೀರುತ್ತಿದೆ ಬೇನೆ;
ಕೆಲದಲ್ಲಿಯೆ ನೀವಿಲ್ಲದ ಕಂಗಾಲಿನ ಸೋನೆ.

ನೆನೆನೆನೆಯುತೆ ತೋರೆನ್ನುತೆ ಹಟಮಾಡುತೆ ಅಳುತೆ
ಇದೆ ಈಗಲೆ ಎವೆಮುಚ್ಚಿದ ಎಮ್ಮೊಲವಿನ ಹಸುಳೆ.

ಉರಿಯುತ್ತಿದೆ ಉರಿಸುತ್ತಿದೆ ಬಿರುದಿಂಗಳ ಬೇಗೆ
ತೋಳ್ತೊಳಲಿಗೆ ಎದೆ ಹಂಬಲು ಇಂಬಿಲ್ಲದೆ ಕೂಗೆ

ಒಳ ಅಂಗಳದಲಿ ಕಿಂಡಿಲಿ ಮರದೆಲೆಯಲಿ ತೂರಿ
ಮೊನೆಮುಳ್ಗಳ ಚುಚ್ಚುತ್ತಿವೆ ತಾರಾಗಣ ತೋರಿ.

ಸಂದಿರುಳ್ಗಳ ಏಕಾಂತದ ಸವಿಮುದಗಳ ಒನಪು
ಕೆರಳುತ್ತಿವೆ ಉಕ್ಕುತ್ತಿವೆ ಕುಕ್ಕುತ್ತಿವೆ ನೆನಪು

ಏ ಗೆಯ್ಮೆಯೊ ಉಮ್ಮಳಗಳೊ ಏಂ ತೊಡರ್ಗಳೊ ಅಲ್ಲಿ
ನಿಮಗಾಗಿಯೆ ಹಾತೊರೆಯುತ ನಾವಿರುತಿರಲಿಲ್ಲಿ.

ಏ ಕಂಡರು ನೀವ್ಕಾಂಬಿರಿ ಏದನಿಯೊಳು ನೀವೇ
ಬಾಳೆಲ್ಲವನಾವರಿಸುತಲೆಂದೆಂದಿಗು ನೀವೇ.

ಸುಳಿಗಾಳಿಯು ಸುಯ್ಯುತಲಿರೆ ಎನ್ನುಸಿರಿನ ಕರೆಯೋ
ಮನೆಮಕ್ಕಳ ನೆರೆಬೀಡಿನ ನುಡಿಯೆಲ್ಲವು ಮೊರೆಯೋ.

ಏನಿದ್ದರೆ ಏಬಂಡವೊ ನೀವಿದ್ದರವೆಲ್ಲ
ನೀವಿಲ್ಲದ ಸೌಭಾಗ್ಯಗಳೇನಿದ್ದರು ಸಲ್ಲ.

ಒಡಲಾರದು ಕ್ಷಣ ತಾಳದು ನುಡಿ ಕೇಳದು ಇನಿಸು—
ನಿಮ್ಮುಸಿರಿಗೆ ಕೆಳೆತೋಳಿಗೆ ತವಕಿಸುತಿಹ ಮನಸು—

—ಎಲ್ಲಿರುವಿರೊ ಈ ತಿಂಗಳ ಕಾದೆಲರಿಗೆ ಸೊಕ್ಕಿ
ಇಲ್ಲೊರಲುವ ಎನ್ನಂತೆಯೆ ಕಾತರದಲಿ ಸಿಕ್ಕಿ ?

ಅದುವೆ ದಿಟ ದೀಪಾವಳಿ!

ಪಲ್ಲವಿ

ಉಲ್ಲಸದ ನಗೆಯುರಳಿಹುದೆ ಸಖಿ,
ಎಲ್ಲಿಹುದೆ ದೀಪಾವಳಿ?
ಎಲ್ಲಿ ನೋಡಿದರೆಲ್ಲ ಕಡೆ ಬರಿ
ಕಳ್ತಲೆಯದೇ ಹಾವಳಿ! ॥ಪ॥

ಮುಂದಿನಾ ಬಾಗಿಲೊಳು ಒಂದೇ–
ಒಂದು ದೀವಿಗೆ ಮಿಣಿಮಿಣಿನುತಿದೆ,
ಒಂದೆ ಸಲ ಮೆಲುಗಾಳಿಗೆ ಸುಳಿದರೆ
ನಂದಿ ಹೋಗುವ ದಾರಿಯಲ್ಲಿದೆ;
ಏಕೆ ಬಡತನ ನಲ್ಲೆ? . . .
ಏಕೆ ಬಡತನ? ಮನೆಯೊಳೇ ಚಿರ–
ದೀಪ ಸಾಧನವಿಲ್ಲೇ?

೨

ಮನೆಯೊಳಿರಿಸಿಹೆ ಹಲವು ಹಣತೆಯ;
ಹನಿ–ಹನಿಯು ನೇಹವನು ಕಾಣದೆ
ತಿನುತಲಿವೆ ಬರಿಬತ್ತಿಯನೆ; ನೀ—
ನೆನುವೆ; "ದೀಪಾವಳಿಯ ಮಾಡಿಹೆ!
ಕಂಗುರುಡು ನಿನಗೇನೇ?
ತುಂಬಿರಲು ಪಾತ್ರೆಯೊಳು ನೇಹವು
ಎರೆಯುದೇಕಿಹೆ ಜಾಣೆ?

೩

ಹಾರಿದರೆ ಹುಳು ಆರಿಹೋಗುವ
ಆರತಿಯ ಬೆಳಗಲಿಕೆ ತಂದಿಹೆ;
ಆರದಾರತಿ ಬಳಿಯಲಿರ್ದ್ದರು
ನೀರೆ, ಅದನರಿಯದೆಯೆ ನಿಂದಿಹೆ;

ಬೆಳಗು ಆ ಪ್ರಭೆಯಾರತಿ...
ಬೆಳಗಿದರೆ ಮುಡಿಪೀವೆ ನನ್ನೆದೆ
ಯೊಳಗನೇ ನಲ್ ಮೂರುತಿ!

೪

ಉಲ್ಲಸದಿ ಮೊಗವರಳಿಸಿದೆ, ಸಖಿ,
ಎಲ್ಲಿದೆಯೆ ದೀಪಾವಳಿ?
ಎಲ್ಲಿ ನೋಡಿದರಲ್ಲಿ ಬೇಕೆಲೆ
ಹಗಲು ಪಂಜಿನ ಗಾವಳಿ!
ಅದುವೆ ದಿಟ ದೀಪಾವಳಿ...!
ಅದುವೆ ದಿಟ ದೀಪಾವಳಿಯೆ ಸಖಿ,
ಬದುಕಿಗೊಸಗೆಯ ಓಕುಳಿ!

ಗೌಡರಮನಿ ಸೊಸಿ

ಒಬ್ಬಳು :

ಹೆಜ್ಜಿ–ಹೆಜ್ಜಿಗೂ ಘಿಲಿಘಿಲಿ, ಘಿಲಿಘಿಲಿ
  ಗೆಜ್ಜಿಯ ಕುಣಿಸುತ ಬರುವಾಕಿ-
ಉಜ್ವಳ ಬಣ್ಣಾ–ಕಾಡಿಗಿಗಣ್ಣಾ-
  ಹೊಸ ದರತಿಯು ಹೆಣ್ಣ್ಯಾರೀಕಿ?

ಇನ್ನೊಬ್ಬಳು :

ಗೊತ್ತಿಲ್ಲೇನ್ಯ ಗೌಡರ ಮನಿಸೊಸಿ
  ಮೊನ್ನೆಮೊನ್ನೆಯೇ ಬಂದಾಕಿ-
ಸುತ್ತಮುತ್ತಿನೀ ಹಳ್ಳ್ಯಾಗೆಲ್ಲಾ
  ಚೆಲಿವಿಯಂತ ಹೆಸರಾದಾಕಿ!

ಒಬ್ಬಳು:

ಅಯ್ ನನ ಶಿವನ! ಗೌಡರ ಸೊಸಿಯ?
ವೆರ್‍ತ ನೋಡಿವಳ ಚೆಲಿವ್ಯಿಕಿ!
ಮೊದಲ ಜನ್ಮದಾಗ ಮಾಡಿದ ಪಾಪ-
  ಬಿಟ್ಟೀತ್ಹ್ಯಾಂಗದು ಕಿಡಿಬೆಂಕಿ!

ಇನ್ನೊಬ್ಬಳು:

ಇದೇನ ಗೆಣತೀ, ಈ ನುಡಿಯಾಡ್ತೀ?
ಇವಳಿಗ್ಯಾವ ಮಾತಿನ ಕೊರತಿ?
ಬೆಳ್ಳಿ–ಬಂಗಾರಾ–ರೊಕ್ಕ–ರುಪಾಯಿಾ–
ಕಾಳು–ಕಡೀ ಮನಿ ತುಂಬೇತಿ!

ಒಬ್ಬಳು:

ಬೆಳ್ಳಿ–ಬಂಗಾರ–ರೊಕ್ಕ–ರೂಪಾಯಿ-
ಇದ್ದರೇನ–ಬಿದ್ದಿರತೈತಿ;
ಒಳ್ಳೆಯ ಒಗತನವೊಂದಿರದಿದ್ದರ
ಹೆಣ್ಣುಗಳಿಗೆ ಸುಖ ಏನೈತಿ?

ಇನ್ನೊಬ್ಬಳು:

ಗೌಡರ ಮಗನಿಗೆ ಏನಾಗೆಯ್ತೋ?
ಒಳ್ಳೇ ಒಗತನ ಅಲ್ಲಂತೀ-
ಮುದುಕ–ತದಕನ್ಯ ಬ್ಯಾನಿ–ಬ್ಯಾಸರ್‍ಯ
ಹೇಳಾತಗ ಏನಾಗೆಯ್ತಿ?

ಒಬ್ಬಳು:

ಏನಾಗೆಯ್ತೋ? ಹೇಳು ನಿನ್ನ ಪತಿ
ಅವನ್ಹಾಂಗಿದ್ದರ ಸುಮ್ಮಿರತಿ?
ಹತ್ತುಕಡಿಗೆ ಹರಿದ್ಹಂಚಿಬಿಟ್ಟಿದಾನ
ಗೌಡರ ಮಗ ತನ್ನಾ ಪ್ರೀತಿ!

ಇನ್ನೊಬ್ಬಳು:

ಹೀಂಗೈತೇನ್ಯ—ಹೆಣ್ಣ ಬದುಕು ಸುಡು!
ದೊಡ್ಡವರದು ಇಂಥಾ ನಡತಿ?
ಮೊರಿಯ ಪ್ರೀತಿ ಹೊರಗಾಡುತಿದ್ದರ-
ಗರತಿಯ ಜೀವಕ ಸಾವೆ ಗತಿ!

ಒಬ್ಬಳು:

ಅದಕ್ಯ ನಾ ಹೇಳಿದೆ ಗೆಣತವ್ವಾ
ಮೊದಲ ಬಾರಿ ಬಂದಾಳೀಕಿ-
ಎದಿಯ ಒಳಗ ಕುದಿಯೆದ್ದಿಲ್ಲಿನ್ನೂ
ಕುಣಿಸುತ ಬರತಾಳ ಗಿಲಗಿಲಿಕಿ!

ಹೆಜ್ಜಿಹೆಜ್ಜಿಗೂ ಘಿಲಿಘಿಲಿ ಘಿಲಿಘಿಲಿ
ಗೆಜ್ಜಿಯು ಕುಣಿಸುತ ಬರುವಾಕಿ-
ಉಜ್ವಳ ಬಣ್ಣಾ—ಎರಳಿಯು ಕಣ್ಣಾ
ಉಳಿಸಿಕೊಂಡಾಳೇನ ಈಕಿ?

ನಲ್-ವಾಡುಗಳು

೧

ಕಡಲಿ ಮಾರಾಟಕ್ಕ ಗೊಡಚಿ ಜಾತ್ರೆಗೆ ಹೋಗಿ
ಬೆಡಗಿಯೊಬ್ಬಳನ ಪ್ಯಾಟ್ಯಾಗ-
ಬೆಡಗಿಯೊಬ್ಬಳನ ಪ್ಯಾಟ್ಯಾಗ ಕಂಡಾಗ
ಹುಡದಿಹಾಕಿದಳೊ ಮನದಾಗ

೨

ಗೋದಿಬೀಜಕ್ಕಂತ ಗೋಕಾಂವಿಗ್ಹೋಗಿದ್ದೆ,
ಸಾದಗಪ್ಪಿನ ಸವಿಹೆಣ್ಣ-
ಸಾದಗಪ್ಪಿನ ಸವಿಹೆಣ್ಣ ನೋಡುತಲೆ
ಗೋದಿಬಿತ್ತಿಗಿಯ ಮರೆತೇನೊ!

೩

ನೀರು ತರಲಾಕಂತ ಮೂರು ಸಂಜಿಯು ಮುಂದ
ಭಾರಿ ಕೊಡ ಹೊತ್ತು ನಡದೀನೊ-
ಭಾರಿ ಕೊಡ ಹೊತ್ತು ನಡದೆ ಒರತಿಯು ಮ್ಯಾಗ
ಸೀರಿಚಿತ್ತಾರ ನೋಡಿದಿನೊ!

೪

ಸರಿಯು ದೂರಕ ನಾರಿ, ನಿನ್ನ ಹೂವಿನ ಸೀರಿ-
ಸೆರಗಿನಾ ಗಾಳಿ ಸೋಕ್ಯಾವ-
ಸೆರಗಿನಾ ಗಾಳಿ ಸೋಕ್ಯಾವ—ತಿಳಿಯಿದ್ದ
ಒರತಿಯ್ಯ ನೀರು ಕಲಿಕ್ಯಾವ್ಯ!

೫

ಸೇದುಬಾವಿಯು ಮ್ಯಾಗ ಸಿಂಬಿಸುತ್ತಪಳ್ಳಾರೊ!
ತೋದ ಪತ್ತಲವು ಮೆತ್ತೆಯ್ಯೊ-
ತೋದ ಪತ್ತಲವು ಮೆತ್ತೆಯ್ಯೊ, ಮೈನುಣುಪು
ಕ್ಯಾದಿಗಿಯ ನೆನಪ ತರತಯ್ಯೊ!

೭

ಕಿರಿಯ ನಿಲುವಿಕಿ ಹೆಣ್ಣ ತುರುಬಿಹೂವಿನ ಬಣ್ಣ
ಕೊರಳ ಕೊಂಕಿಸುತ ನಗಿಗಣ್ಣ-
ಕೊರಳ ಕೊಂಕಿಸುತ ನಗಿಗಣ್ಣ—ಎಲೆ ಚೆಲುವಿ
ಕರಿಯುತಾವ್ಹೇಳ ಯಾರನ್ನ?

೭

ನೀಳಗೂದಲ ನಾರಿ ಬಾಳಿಬನದಾಗ ನಿಂತು
ತೋಳಕುಪ್ಪಸವ ತೀಡುವಳೊ-
ತೋಳ ಕುಪ್ಪಸವ ತೀಡುವಳೊ—ಮತಮತ್ತ
ಮೇಲು ಮುಂಜೆರಗ ನೋಡುವಳೊ!

೮

ಹೊಸ ಪರೆಯ ಹಾದ್ಹಾವ ಪಸುರು ಕುಬಸದ ಬಾಲಿ,
ಬಿಸಿಯುಸುರನ್ಯಾಕ ಬಿಡತೀಯ-
ಬಿಸಿಯುಸುರನ್ಯಾಕ ಬಿಡತೀಯ—ನಿನ ಪ್ರೀತಿ
ಬೆಲಿಹೇಳ, ನನಗ ಕೊಡತೀಯ?

೯

ನೂರಾರು ನಾರಿಯರು ದಾರಿಯನ ನೋಡ್ತಾರ,
ಯಾರಿಗಿತ್ತಿಲ್ಲ ನನ ಪ್ರೀತಿ-
ಯಾರಿಗಿತ್ತಿಲ್ಲ ನನ ಪ್ರೀತಿ—ತಾನಾಗಿ
ಹಾರಿ ನಿನ ಬಳಿಗೆ ಬಂದೈತಿ!

೧೦

ಎಲ್ಲರ್ಹೋಗುವರಂತ ಎಲ್ಲಮನ ಜಾತರಿಗೆ
ಇಲ್ಲದಲೆ ಮನಸು ನಾ ಹೋದೆ-
ಇಲ್ಲದಲೆ ಮನಸು ನಾ ಹೋದೆ—ಪ್ರೀತಿಯ
ಬಳ್ಳಿ ತೊಡಕೀತೊ ಬದುಕ್ಕಿಗೆ!

೧೧

ಎಲ್ಲಮ್ಮನಂಥಾಕಿ ಎಲ್ಲಿ ಹುಡುಕಿದರಿಲ್ಲ,
ಕಲ್ಲಿಗೊಂಬ್ಯಾಗಿ ಗುಡಿಯಾಗ-
ಕಲ್ಲಿಗೊಂಬ್ಯಾಗಿ ಗುಡಿಯಾಗ—ಕುಂತ್ಯರು
ಬೆಲ್ಲ ತುಂಬಿದಳೊ ಬಾಳೊಳಗ!

೧೨

ಉಧೊ ಉಧೊ ಉಧೊ ಅಂತ ಒದರುವರು ಸುಮ್ಮನ
ಎದಿಯೊಲವಿನಾಟ ತಿಳಿಯ್ಯದೆ-
ಎದಿಯೊಲವಿನಾಟ ತಿಳಿದು ನಾ ನಡಕೊಂಡೆ,
ಹದಗಾತಿ ಕೈಯ ಹಿಡಕೊಂಡೆ!

ಸೀಗಿಹುಣ್ಣಿವಿ

ಪಲ್ಲವಿ

ಅನ್ನ ಕುಮಾರನ ಬಸುರಿಯದಾಳೌ ನಮ್ಮ ಭೂಮಿದೇವಿ-
ಬಯಕಿಯ ಊಟಾ ಉಣಿಸಬೇಕ್ಯ ಬಂದೈತಿ ಸೀಗಿ ಹುಣಿವಿ!

೧

ಮುಂಗಾರಿನ ನಿಲ ಹೊಂದೆನಿದಂಟಿನ ಹಂದರ ಹಾಕೆಯ್ತೆ-
ಹೆಸರು ಹುರುಳಿ ಅಲಸಂದಿ ಅವರಿಬಳ್ಳಿ ತ್ವಾರಣ ಬಿಗಿದಯ್ತೆ-
ಹುಚ್ಚೆಳ್ಳಿನ ಹೊಲ ಹೂಗಳ ಅರಳಿಸಿ ಕುಚ್ಚನು ಕಟ್ಟೆಯ್ತೆ-
ಉಡಿಯ ತುಂಬಲಾಕ ಮಾಗಿ ಬಾಗಿ ನಿಂತಾವ ನವಣಿ-ಸಾವಿ...
ಅನ್ನಕುಮಾರನ ಬಸುರಿಯದಾಳೌ ನಮ್ಮ ಭೂಮಿದೇವಿ!

೨

ಹತ್ತಿಯ ಎಳಿಬೆಳ್ಳಿ ಹಚ್ಚಹಸುರಿನಾ ಪತ್ತಲ ನೆಯ್ದ್ಯಾವ-
ಎಳ್ಳು ಪುಂಡಿಹೂ-ಮಗ್ಗಿ ಹೆಣೆದದಕ ಕಸೂತಿ ತಗದಾವ-
ಕುಸುಬಿ-ಗೋದಿಸಸಿ ಬಸುರಿಗೊಪ್ಪುಪವಾ ಕುಪ್ಪಸ ಹೊಲದಾವ-
ಸುತ್ತಿನ ಬನದಾಗ ಹಕ್ಕಿ ಹಸೆಯ ಹಾಡ್ಯಾವ ಟೂವಿಟೂವಿ...
ಅನ್ನಕುಮಾರನ ಬಸುರಿಯದಾಳೌ ನಮ್ಮ ಭೂಮಿದೇವಿ!

೩

ಮಳಿ-ಗುಡುಗಿಲ್ಲಾ-ಕೊಳಿ-ಕೆಸರಿಲ್ಲಾ-ಬಿಳಿಮೋಡದ ಬಾನ-
ಬೆಳಕಿನ ದೇವರು ಬಿಸಲಿಲ್ಲದ ಬಿಳಿಕಿರಣ ಹರಡತಾನ-
ಕಳಕಳ ಹರಿಯುವ ಹೊಳಿ-ಹಳ್ಳದ ನೀರ್ ತಿಳಿತಿಳಿ ಸವಿಜೇನ-
ಉಳಿದ ಹಬ್ಬಗಳ ಗೆಲವು ಹೇಳಬ್ಯಾಡಿಂದ ಸೀಗಿಹುಣಿವಿ-
ಅನ್ನಕುಮಾರನ ಬಸುರಿಯದಾಳೌ ನಮ್ಮ ಭೂಮಿದೇವಿ!

೪

ನಾನು ನನ್ನ ದೊರಿ ಹಗಲೂ ಇರುಳೂ ಪೂಜಿಯು ಸಲಿಸಿದೆವ್ವ-
ನಾನಾ ರೀತಿಯು ಕಾಯಕಷ್ಟ ಸೋಸಿ ತಾಯಿಯನೊಲಿಸಿದೆವ್ವ-
ಅನ್ನ ಕುಮಾರನ ಹೆತ್ತು ನಮಗ ಕೊಡು—ಅನ್ನುತ ಬೇಡಿದೆವ್ವ-
ನಮ್ಮ ಬೇಡಿಕೆಯು ನೀಡಲಾಕ ಮೈತುಂಬಿ ನಿಂತಾಳ ಚೆಲಿವಿ . . .
ಅನ್ನಕುಮಾರನ ಬಸುರಿ ಅದಾಳೌ ನಮ್ಮ ಭೂಮಿದೇವಿ !

೫

ಬಸುರಿಯು ಬಯಕೀ ಬಾಯಿಗಂತ ನಾ ಆಡಗಿ ಮಾಡಿದೀನ-
ಹೊಸತರದ್ಹೋಳಿಗಿ ಕಡಬು ಕರಜಿಕಾಯಿ ಸವಿಸವಿ ಸಾಮಾನ-
ಎಳ್ಳುಚಿಗಳಿ ತಂಬಿಟ್ಟು ಸೆಜ್ಜೆರೊಟ್ಟಿ ಪಲ್ಲೆ–ಪದಾರ್ಥಾನ-
ಹೆಡಗಿ ತುಂಬಿಕೊಂಡು ಹೊಲಕ್ಹೋಗುಣು, ಆಕಿ ನೋಡಲಿ ಇದರ ಸವಿ . . .
ಅನ್ನಕುಮಾರನ ಬಸುರಿ ಅದಾಳೌ ನಮ್ಮ ಭೂಮಿದೇವಿ !

೬

ತಾಯಿ ಬಸುರಿನಾ ಪಿಂಡ ಬೆಳಿಯಲಾಕ ಪಾಂಡವರನ್ನಿಟ್ಟ್ಯ
ಪೂಜಿಮಾಡಿ ನೇವದಿಯು ನೀಡಿ ಹಚ್ಚೋಣ ಗಂಧಚಟ್ಟ್ಯ-
ದಿಕ್ಕಿನ ದೇವರ ದಕ್ಕಿಸಿಕೊಳಬೇಕ ಚರಗದ ಬಲಿಕೊಟ್ಟ್ಯ-
ಕಪ್ಪುರದಾರತಿಯೆತ್ತಿ ಬೆಳಗಿ ಹೇಳೋಣ ಸುವ್ವಿಸುವ್ವಿ . . .
ಅನ್ನಕುಮಾರನ ಬಸುರಿ ಅದಾಳೌ ನಮ್ಮ ಭೂಮಿದೇವಿ !

೭

ಗಿರಿಜಿ ಗಂಗಿ ಸಂಗಾಯಿ ಶಾಂತಿಯುರ ಕರ–ಕರದೊಯ್ಯೋಣ-
ನೆರಿಯು ಹೊಲದ ನಾಗವ್ವ ಭಾಗಿರತಿ ಕೆಂಪಿನ ಕರಿಯೋಣ-
ಹಿರಿಯುರು ಬರಲೇ ಕಿರಿಯುರು ಬರಲೇ ಎಲ್ಲರು ಬೆರಿಯೋಣ-
ಭೂಮಿತಾಯಿ ಜೋಡಿ ನಾವೆಲ್ಲರು ಕೂಡಿ ಉಂಡರೆಷ್ಟು ಸವಿಸವಿ . . .
ಅನ್ನಕುಮಾರನ ಬಸುರಿ ಅದಾಳೌ ನಮ್ಮ ಭೂಮಿದೇವಿ !

೮

ದೇವಿಯು ತೇರಿನ ಹೊಂಗಳಸದ ಪರಿ ಚಂದ್ರ ಮೂಡಿ ಮ್ಯಾಲ್ಯ-
ಭೂಮಿತಾಯಿ ಮೈಗೆರಿಯು ತಾನ ಹೊಸ ಬೆಳುದಿಂಗಳ ಹಾಲ್ಯ-
ಹಾಡಿಹಾಡಿ ಕುಣಿಯೋಣ ನಾವು ಆಗ ಹಾಕಿ ಗೆಜ್ಜಿಕೋಲ್ಯ-
ಮ್ಯಾಗಿನ ದೇವರು ಕೇಳತಾರ ಕೊಟ್ಟು ನಮ್ಮ ಹಾಡಿಗೇ ಕಿವಿ . . .
ಅನ್ನಕುಮಾರನ ಬಸುರಿ ಅದಳೌ ನಮ್ಮ ಭೂಮಿದೇವಿ !

* * * *

ಅನ್ನಕುಮಾರನ ಬಸುರೊಳಗಿರಿಸ್ಯಾಳ ನಮ್ಮ ಭೂಮಿದೇವಿ !—
ಬಯಕಿಯು ಊಟಾ ಉಣಿಸಬೇಕ ಬಂದೈತಿ ಸೀಗಿಹುಣಿವಿ !

ಅನಂತಪದ್ಮನಾಭರಾವ್

ಕೃಷ್ಣಗಿರಿ ಕೃಷ್ಣರಾಯಗೆ

ಕುಮಾರವ್ಯಾಸನ ವಾಣಿಯು ನುಡಿಯುವ
ವೀಣೆಯು–ಗಮಕದ ಶಾಸ್ತ್ರಜ್ಞಾನ
ಆ ಕವಿಕಾವ್ಯದ ದಿವ್ಯ ಧ್ವನಿಯಿಾ
ಕೃಷ್ಣನ ಹೃದಯದ ಗಾನದ ತಾನ-

ಕುಮಾರವ್ಯಾಸನ ದೇಗುಲ ಕೃಷ್ಣನ
ಹಾಡುವ ಸೊಬಗಿನ ಹೃದಯ ನವೀನ
ಆ ಕವಿಯುಗ್ಗಳಿಕೆಗಳಂ ಸಾಧಿಸಿ
ಶೋಧಿಸುತುಣಿಸುವ ಮಧುರಸ ಪಾನ.

ಎಲ್ಲಿದೆ ಜೀವ ಎಲ್ಲಿದೆ ಭಾವ
ಮೌನದ ಮಾತನು ಕುಣಿಸುವನಾವ-
ಸಂಗೀತದ ದನಿಯಿಂದಲಿ ಕೂಡಿಸಿ
ರಸಕಳೆ ತುಂಬುವ ಶಬ್ದದ ಜೀವ.

ಆ ಕವಿಯಿತ್ತನು ಮಾತಿನ ಮುತ್ತು
ಕೃಷ್ಣನ ಕೊರಳಿನ ಗಾನದ ಬಿತ್ತು.
ಕೇಳುವ ಹೃದಯವ ಮಿಡಿಯುವ ಗತ್ತು
ಪ್ರಾಣವನಾಡಿಪ ಪರಿಣತಿಯಿತ್ತು.

ಎಲ್ಲರನೊಂದೇ ಹೃದಯದಿ ತೋರುವ
ಸರ್ವರ ದೃಷ್ಟಿಗೆ ನೈಜವ ತರುವ
ಕೃಷ್ಣನ ಲೀಲೆಗಳೆಲ್ಲವ ತುಂಬುವ
ಭಾರತ ಚರಿತೆಯ ಹಾಡುವನಾವ.

ಎಲ್. ಗುಂಡಪ್ಪ

ಚಟಾಕಿ

ಅಪ್ಪನ ಜೇಬಿನ ದುಡ್ಡುಗಳೆಲ್ಲ
ಚಟಪಟಗುಟ್ಟುತ ಸಿಡಿಯುವುವು.
ಒಪ್ಪದ ನೀತಿಯ ಮಾತುಗಳೆಲ್ಲ
ತಟ್ಟನೆ ದಾರಿಯ ಹಿಡಿಯುವುವು;

ಬಗೆಬಗೆ ಬಣ್ಣದ ಹೂಗಳ ರೂಪದಿ
ಹಾರುತ ಬಸುಬುಸುಗುಟ್ಟುವುವು

ಉರಿಯನು ಸುರಿಸುತ, ಮೊರೆಯುತ, ತಿರುಗುತ,
ಸರಸರನೆಲ್ಲೆಡೆ ಹರಿಯುವುವು,
ಸರುವರ ಕಿವಿಗಳ ಕೊರೆಯುವುವು;
ಮೂಗಿನ ಸೆಲೆಗಳನೊಡೆಯುವುವು;

ಸಾರವ ತೊರೆಯುತ ಕಡೆಯಲಿ ಕಪ್ಪಗೆ
ನೆಲದಲಿ ಧೊಪ್ಪನೆ ಕೆಡೆಯುವುವು;
ಅಜ್ಜನ ಮಡಿಯನು ತೊಡೆಯುವುವು
ಅಪ್ಪನ ಜೇಬುಗಳೊಡೆಯುವುವು
ಸಿಡಿಯುವುವು.

ಕರ್ಬೊಗೆಯ ಮೈವೊಗರ ಹಬ್ಬಿಸುತ ಜಗಕೆ
ಮಬ್ಬು ಕವಿಸುತ ಬರುವ ದೇವಿ ಯಾರಿವಳು?
ಕೆಂಜಡೆಯನಡಿಗಡಿಗೆ ಕೊಡಹುತ್ತಲಿಹಳು;
ಕಿಡಿಗಣ್ಣ ಬಿರುಬಿರನೆ ತಿರುಗಿಸುತಲಿಹಳು
ಉರಿಯ ನಾಲಗೆಗಳನು ಮುಂದೆ ಚಾಚಿಹಳು,
ತನಿಗೆಂಡದುಂಡೆಗಳ ತಾನುಗುಳುತಿಹಳು
ಸಿಡಿಲ ನಡುಗಿಸುವಂತೆ ಬೊಬ್ಬಿರಿಯುತಿಹಳು
ಕುಲಗಿರಿಗಳೊಡೆವಂತೆ ಅಡಿಯಿಡುತಲಿಹಳು
ಯುದ್ಧನರ್ತನದಿಂದ ಮತ್ತಳಾಗಿಹಳು—
ಘೋರರೂಪದ ಕಾಳೀದೇವಿಯಿವಳು

ಈ ಕರಾಳಿಯ ಕಂಡು ನಡುಗಿದೆನೊಡನೆ ನೆಲದಲಿ ಕೆಡೆದೆನು,
ಧೈರ್ಯವುಡುಗಲು ಸಣ್ಣದನಿಯೊಳಗಿಸಿತು ಬೇಡುತ ನುಡಿದೆನು—
"ತಾಯಿ ಕೃಪೆಯಲಿ ಕಾಯಿ ನಮ್ಮನು. ನಿನ್ನರೂಪವ ನೋಡಲು
ನಡುಗಿ ನಮ್ಮೆದೆ ತಡೆಯದೊಡೆವುದು; ಸೌಮ್ಯರೂಪವ ತೋರಿಸು.

ರುಂಡವಳಾಲೆಯ ರಕ್ತವಸ್ತ್ರವ ನೋಡುತಿರೆ ಮೈಮರೆವೆವು.
ಆ ಫಿರಂಗಿಯ ಗುಂಡಿನಬ್ಬರ ಕಿವಿಗೆ ಬೀಳಲು ಮಡಿವೆವು
ನಮ್ಮ ಹಿರಿಯರು ನಿನ್ನ ಭಕ್ತರು; ನಿನ್ನ ಪೂಜಿಸಿ ನಲಿದರು
ಅವರ ಮಕ್ಕಳು ನಾವು; ನಮ್ಮನು ಕರುಣೆಯಿಂದಲಿ ಪಾಲಿಸು.

ನಮ್ಮ ಹೆದರಿಕೆಯೋಡಿಸು;
ಸೌಮ್ಯರೂಪವ ತೋರಿಸು."

ನಾನಿಂತು ಕೈಮುಗಿದು ಹೊಗಳೆ,
ಕಣ್ಮುಚ್ಚಿ ಹೊಗಳುತಿರೆ ಮಗುಳೆ,
ಸಿಡಿಲಪರಿಯಬ್ಬರವು ಜಗುಳೆ
ಗುಡುಗ ದನಿಯನುಕರಿಸುವಂತು
ಮಾಕಾಳಿ ನುಡಿದಳಿಂತು

"ಬೆದರಬೇಡಿರಿ ಘೋರ ರೂಪವನು ತೋರಿಸೆನು. ಈ ಫಿರಂಗಿಯ ಗುಂಡ
ಸಿಡಿಸೆನಿಲ್ಲಿ
ಪಡುವದಿಕ್ಕಿಗೆ ನಡೆದು, ಕಡಲ ತೆರೆಗಳನೊಡೆದು, ನಡುಗಿಸುತ ಲೋಕವನು
ಕುಣಿವೆನಲ್ಲಿ
ಪಡುವನಾಡಿನ ಜನರ ಕಡೆಗಾಣದಸ್ತ್ರಗಳ ಹಿಡಿದು ಮೈ ಗುಡಿಗಟ್ಟಿ ಕುಣಿವೆನಲ್ಲಿ.
ಕಡುಮುದದಿ ಕುಣಿಕುಣಿದು ತಣಿವೆನಲ್ಲಿ.

ಕೆಂಡವನು ಕಾರುವ ಫಿರಂಗಿಗಳ ಗುಂಡುಗಳು ಗುಂಡಿಗೆಯನೊಡೆಯುವುವೆ?
ಪಡುವಣವರು
ಕೊಂಡು ಹೋಗಲಿ. ನಿಮಗೆ ತಕ್ಕುದಲ್ಲದು. ಪಾಪ! ಮಕ್ಕಳಿರ, ನೀವೆ ಮೃದು
ಹೃದಯದವರು
ಮೆಚ್ಚಿದೆನು, ಮೆಚ್ಚಿದೆನು ಹೆಚ್ಚಿ ಬರುವೀ ನಿಮ್ಮ ಧೈರ್ಯದುಬ್ಬರವ ನೋಡಿ!
ಮೆಚ್ಚನೀವೆನು ನಿಮಗೆ ಸಿಡಿವೀ ಚಟಾಕಿಯನು; ಹಿಡಿಯಿರಿದ ಕೈಯು ನೀಡಿ!
ಕಾರದಿದು ಕಿಡಿಗಳನು, ತೋರದಾರ್ಭಟಗಳನು; ಹಾರುವುದು ಬಣ್ಣಗೂಡಿ.
ಮೀರಿದುತ್ಸಾಹದಲಿ ಸುಡಿರೀ ಚಟಾಕಿಯನು: ಸುಡುತಾಡಿ ಮೋದಗೂಡಿ!
ಹಿಡಿಯಿರಿದ ಕೈಯು ನೀಡಿ!"

ಹರಿಯಿತು ಹರ್ಷದ ಹೊನಲೀ ದೇಶದಿ ಹಬ್ಬವು ಹತ್ತಿರ ಬರುತಿರಲು,
ಹರಡುತ ಕಾಳಿಯುವರದಾ ವಾರ್ತೆಯ ದೀಪಾವಳಿಯದು ಬರುತಿರಲು,
ಹೊರಲಾರದೆ ಸಾಹಸದಿ ಚಟಾಕಿಯ ಹೊರೆಗಳ ಮೆಲ್ಲನೆ ತರುತಿರಲು,
ಸಿಡಿವ ಚಟಾಕಿಯ ತರುತಿರಲು.

ಹುಡುಗರು ನಲಿಯುತ ಕುಣಿಕುಣಿದಾಡುತ ಹಿಡಿದು ಚಟಾಕಿಯ ಸುಡುತಿಹರು
ಸಿಡಿದು ಚಟಾಕಿಯು ಮೇಲಕೆ ಹಾರಲು ನಿಲ್ಲದೆ ಚಟ್ಟನೆ ತಟ್ಟುವರು.
ಸಡಗರಗೊಳ್ಳುತ ದೂರದಿ ನೋಡುತ ಲಲನೆಯರೆಲ್ಲರು ನಗುತಿಹರು.
ಸಿಡಿಯೆ ಚಟಾಕಿಯು ನಗುತಿಹರು.

ಮದ್ದಿನ ದೇವಿಯ ಮುದ್ದಿನ ಮಕ್ಕಳು ಗದ್ದಲ ಮಾಡುತ ಬರುತಿಹರು.
ಮುದ್ದಿನ ಮಕ್ಕಳ ನಿದ್ದೆಯನೋಡಿಸಿ ನಗಿಸುತ ಕುಣಿಸುತ ಬರುತಿಹರು.
ಚಟಪಟಗುಟ್ಟಿ ಚಟಾಕಿಯು ಮುಂಗಡೆ ಠೀವಿಯ ತೋರುತ ಬರುತಿರಲು,
ಪೆಟ್ಟಿಗೆ ಚಟ್ಟನೆ ಸಿಡಿವ ಪಟಾಸಿನ ಬಳಗವು ಹಿಂಬಾಲಿಸುತಿರಲು.
ಅರಳನು ಹುರಿಯುವ ಪರಿಯಲಿ ಮೊರೆಯುತ ಬರಲು ಚಿನುಕುರುಳಿಗಳೈತರಲು
ಸರಸರ ಗರಗರ ಶಬ್ದದಿ ಮೊರೆಯುತ ತಿರುಗುವ ಬಾಣಗಳೈತರಲು,
ಬೆಳಕನು ಬೀರಿ ಮತಾಪಿನ ಸಾಲ್ಗಳು ಪಂಜನು ಹಿಡಿಯುತ ಬರುತಿರಲು,
ಹೊಳೆಯುವ ಹೂಗಳ ಮಳೆಯನು ಸುರಿಸುತ ಹೂವಿನ ಬಾಣಗಳೈತರಲು,

ಒಡೆಯುವ ಚಟಾಕಿಯು ಬರುತಿರಲು,
ಕಡು ಹಿತದಿಂದಲಿ ಬರುತಿರಲು;

ಹರಿಯಿತು ಹರ್ಷದ ಹೊನಲು ಚಟಾಕಿಯ ಮೊಳಗದು ಹತ್ತಿರ ಬರುತಿರಲು,
ದೀಪಾವಳಿಯದು ಬರುತಿರಲು

ಅಪ್ಪನ ಜೇಬಿನ ದುಡ್ಡುಗಳೆಲ್ಲ ಚಟಪಟಗುಟ್ಟುತ ಸಿಡಿಯುವುವು
ಹಾರುತ ಬುಸುಬುಸುಗುಟ್ಟುವುವು
ಉರಿಯನು ಸುರಿಸುತ ಮೊರೆಯುವುವು,
ಸರಸರನೆಲ್ಲೆಡೆ ಹರಿಯುವುವು
ಒಪ್ಪದ ನೀತಿಯ ಮಾತುಗಳೆಲ್ಲ ತಟ್ಟನೆ ದಾರಿಯ ಹಿಡಿಯುವುವು.

ದೇವತಾ ಪೃಥಿವಿ

ಮೊಲೆಹಾಲು ಸಾಕವ್ವಾ ಸಪಿಲಾಲಿ ಬೇಕವ್ವಾ
ಮುದ್ದಾಡಿ ರಮಿಸಿ ಮೈದಡವ। ಏಳವ್ವಾ
ಮಲಗಿರುವ ತಾಯಿ ಪೃಥಿವೀ॥

ಹೊಟ್ಟೀಗಿ ಹಸಿವಿಲ್ಲ ಕರುಳೀಗೆ ಸೊಗಸಿಲ್ಲ
ಮೊಲೆ ಸಾಕು ಮುದ್ದುಕೊಡು ತಾಯಿ। ಏಳವ್ವಾ
ಮಲಗಿರುವ ತಾಯಿ ಪೃಥಿವೀ॥

ಹಸುವೀಗಿ ಮೊಲೆಯುಂಡೆ ಕಸವೀಸಿಗೇನುಳ್ಳೆ
ಹಾಲೊಲ್ಲೆ ಸಾಕು ಬಿಗಿದಪ್ಪ। ಏಳವ್ವಾ
ಮಲಗಿರುವ ತಾಯಿ ಪೃಥಿವೀ॥

ಮೊಲೆಹಾಲು ರುಚಿಗೊಂಡು ಮನದ್ವಾಲು ಬಯಸೀನ
ಗುಟುಗುಟುಕಿಗೊಮ್ಮೆ ಮಿಕಿಮಿಕಿ। ಏಳವ್ವಾ
ಮಲಗಿರುವ ತಾಯಿ ಪೃಥಿವೀ॥

ಹೂವಿನ ಮಕರಂದ ಹಣ್ಣಿನ ಮಾಧುರಿಯು
ಹಾಲ್ಹಿಂಗ ಇನ್ನ ಮನಹ್ಯಾಂಗ! ಏಳವ್ವಾ
ಮಲಗಿರುವ ತಾಯಿ ಪೃಥಿವೀ॥

ಚಂದರನ ಚೆಲುವೀಕಿ ಇಂದರನ ಹೋಲೀಕೀ
ಮೈಹೀಂಗ ನಿನ್ನ ಮನಹ್ಯಾಂಗ! ಏಳವ್ವಾ
ಮಲಗಿರುವ ತಾಯಿ ಪೃಥಿವೀ॥

ಹಿಂದಿತ್ತು ಕಾರಿರುಳೂ ಇಂದೀಗಿ ಹೂಬಿಸಿಲು
ಅಂದಿಗಿಂದೀಗಿ ಒಂದೇನ?। ಏಳವ್ವಾ
ಮಲಗಿರುವ ತಾಯಿ ಪೃಥಿವೀ॥

ಕಣ್ಣು ಅರಳದ ಕೂಸು ಮ್ಯಾಲೆ ಕತ್ತಲೆ ಗವಿಯು
ಆಗಲ್ಲ ಕಂಡೆ ನಾನೀಗ! ಏಳವ್ವಾ
ಮಲಗಿರುವ ತಾಯಿ ಪೃಥಿವೀ॥

ಮೊಲೆಹಾಲ ಧಾರೀಗಿ ಎಲ್ಲೀದೊ ಸೆಲೆಯಿಂವ
ಆಗೆಲ್ಲಿ ತಾಯಿ ಈ ನೆಲಿಯೆ। ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಏನಂತೊ ಅಂದಿದ್ದ ತಾಯಂತ ಈಗಂದ
ಕಣ್ಣೀಲೆ ಕಂಡು ಮನಗಂಡು। ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಉಂಡದ್ದು ಹೌದಮ್ಮಾ ಕಂಡದ್ದು ನಿಜವಮ್ಮಾ
ಉಂಡೇನು? ಈಗ ಕಂಡೇನು? ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಕತ್ತಲೆಯ ಆ ಸೊಂಕು ಹೂಬಿಸಿಲ ಈ ಮಂಕು
ಕಪ್ಪೇನು ಮತ್ತ ಬಿಳುಪೇನು। ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಕಾಣದ ಆ ಕುರುಡೂ ಕಾಣೂವ ಈ ಕುರುಡು
ಕಂಡೇನು ಕಾಣದಿದ್ದೇನು। ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಆರುವಲ್ಲ ಮರವಲ್ಲ ಅರಿತದ್ದು ಸ್ಥಿರವಿಲ್ಲ
ಅರಿತೇನು ಆಶೆತೀರದೆ! ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಇಲ್ಲಂಬು ಮರುಗಲ್ಲ ಅಲ್ಲಂಬು ಅಳುಕಲ್ಲ
ಇದ್ದಿಲ್ಲದಂಥ ಪರಿಹೊಲ್ಲ। ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಕಿಂಭೂತ ಕೊರಡೊಂದು ತುಂಬೀತು ಕೊನರಾಗಿ
ಹೂವಾಗಿ ಹಣ್ಣು ಬಿಡಲಿಲ್ಲ। ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಎಲ್ಲೀಯು ಈ ನಿದ್ದಿ ಕಾಳನ ಕರಿನಿದ್ದಿ
ಇದ್ದೇನು ಇಲ್ಲದಿದ್ದೇನು। ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ತಟ್ಟಿದರು ಮಿಸುಕಿಲ್ಲ ಹಲುಬಿದರು ಉಲುವಿಲ್ಲ
ತುಟಿಯಲ್ಲಿ ತಟಕು ಅಲುಗಿಲ್ಲ। ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಮರೆತು ಮಲಗುವಳಲ್ಲ ಅರಿತು ಆತುರಳಲ್ಲ
ನಿನಗಾಟ ನನಗ ಎದಿಗಿಚ್ಚ ! ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಅಂದು ಆಗಿಸಬಲ್ಲ ನೆನೆದು ನಾಟಿಸಬಲ್ಲ
ಮಾರೀಯ ಮುಸುಕು ತೆರದೇಳ ! ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಹಾಲುನಿದ್ದೀ ತೊರೆಯೆ ಜೇನುನಿದ್ದೀ ತೊರೆಯೆ
ಸಕ್ಕರಿಯು ನಿದ್ದಿ ತೊರೆದೇಳು। ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಕನಸೀನ ಕನ್ನಕ್ಕಿ ಮನಸೀನ ಮಾಯಮ್ಮಾ
ಎಚ್ಚತ್ತು ತಾಯಿ ಎಂವಬಿಚ್ಚ। ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಏಳಮ್ಮ ಏಳಮ್ಮಾ ಏಳೆನ್ನ ತಾಯಮ್ಮಾ
ಏಳದೆ ಜೀವ ಕೇಳದ। ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಈ ಗಾಳಿ ನಿನ್ನುಸಿರ ಈ ಬೆಂಕಿ ಮೈಗಾವ
ಮುದಡೀದ ಮೊಗ್ಗಿ ಅರಳೀಸ। ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ಮೊಲೆ ಹಾಲು ಸಾಕಮ್ಮ ಸವಿಲಾಲಿ ಬೇಕಮ್ಮಾ
ಮುದ್ದಾಡಿ ರಮಿಸಿ ಮೈದಡವ। ಏಳಮ್ಮಾ
ಮಲಗಿರುವ ತಾಯಿ ಪೃಥಿವೀ॥

ನೋಂಪಿ

ಹತ್ತೂ ನಿಟ್ಟಿಗೆ
ಹೊತ್ತಿಸಿ ಉರಿಯನು
ನಿತ್ತೆನು ನಾ ಕಿತ್ತಡಿಯಾಗಿ
ಹತ್ತು ನಿಟ್ಟಿಗೆ
ಹೊತ್ತಿಸಿ ಉರಿಯನು
ಕುತ್ತೆನು ನಾ ಮಹಾಸತಿಯಾಗಿ ೧

ಪಡೆದರೆ ಸರಿಯೇ
ಮಡಿದರು ಸರಿಯೇ
ಮುಡಿಸುವೆ ಹರಣವನೆಡೆಯಾಗಿ
ಪಡೆದರು ಸರಿಯೇ
ಮಡಿದರು ಸರಿಯೇ
ಮುಡಿಸುವೆ ಮೈ ಮಲ್ಲಿಗೆಯಾಗಿ ೨

ಮನಸಿನ ಮಾತಿದು
ಮನದಂತಾದರೆ
ಮನುವಿನ ಮಗ ನಾನಾಗುವೆನು
ಮನಸಿನ ಮಾತಿದು
ಮನದಂತಾದರೆ
ಪ್ರನವ ಸುಮಂಗಲೆಯಾಗುವೆನು ೩

ನೆನಸಿನ ಕೋರಿಕೆ
ಕನಸೇ ಆದರೆ
ತನು ನಿಸಿದಿಗೆಗಲ್ಲಾಗುವದು
ನೆನಸಿನ ಕೋರಿಕೆ
ಕನಸೇ ಆದರೆ
ಮನ ಮಾಸ್ತಿಯ ಕಲ್ಲಾಗುವದು ೪

ಕಲ್ಲಾದರು ಸರಿ
ಹುಲ್ಲಾದರು ಸರಿ
ಬಲ್ಲಂದದ ಬಳಲಿಕೆ ಸಾಕು

ಕಲ್ಲಾದರು ಸರಿ
ಹುಲ್ಲಾದರು ಸರಿ
ಎಲ್ಲಿಂದದ ಏಳಿಕೆ ಸಾಕು ೫

ರೋಹಿಣಿ

ಬಾರೇ ಗೆಳತಿ
ಒಳಗೇ ಕುಳಿತಿ
ಅಟ್ಟಾ ಏರಿ
ಮೇಲೆ ನಿಂತಿ.
ಕದಾಗಿದಾ ನೂಕಿಕೊಂಡು
ಚಿಲಕಾಗಿಲಕಾ ಹಾಕಿಕೊಂಡು
ಅಲ್ಲೇ ಕುಳಿತಿ
ಬಾರೆ ಗೆಳತಿ.

ಬಾರೇ ಜಾಣಿ
ಮಿಂಚಿನ ರಾಣಿ.
ಅಪ್ಸರ ನಾರಿ
ಮೈ ಜರತಾರಿ.
ಥಾಟಮಾಟ ಮಾಡಿಕೋತ
ಆಟಪಾಟ ಆಡಿಕೋತ
ಅಲ್ಲೆ ಕುಳಿತಿ
ಬಾರೆ ಗೆಳತಿ.

ಮುಗಿಲಾಗ್ ಹೊಳೆದಿ
ಮೇಲೆ ಇಳಿದಿ
ಒಳಗೇ ಉಳಿದಿ
ಅಲ್ಲೆ ಸುಳಿದಿ
ಏನೋ ಎಂತೋ ನೋಡಿಕೋತ
ತರನಾ ತರಲಾ ಹಾಡಿಕೋತ
ಅಲ್ಲೇ ಕುಳಿತಿ
ಬಾರೆ ಗೆಳತಿ

ಎಂದಿಗೊಮ್ಮೆ
ಹಾಕುತ ಹಣಿಕಿ
ಮಾರಿತೋರಿ
ತುಸುತುಸು ಇಣಕಿ
ಮಾಟ ಮೋಡೀ ಮಾಡಿಕೋತ
ಕಳ್ಳೀಲಆಟ ಆಡಿಕೋತ
ಅಲ್ಲೆ ಕುಳಿತಿ
ಬಾರೇ ಗೆಳತಿ

ನೀ ಕೂತಲ್ಲಿ
ಜ್ಯೋತಿಯು ಥಾಳ
ನಾ ಕೂತಲ್ಲಿ
ಕತ್ತಲೆ ಕಾಳ
ಕಂಡೂ ಕಂಡೂ ಕೂತೇ ಕೂತಿ
ತಿಳಿದೂ ತಿಳಿದೂ ಹಾಗೇ ಇರತಿ
ಅಲ್ಲೇ ಕುಳಿತಿ
ಬಾರೇ ಗೆಳತಿ.

ಏಸೋ ಕಾಲಕ್ಕೆ
ಅಟ್ಟಕೆ ಬಂದಿ
ಅಲ್ಲೀದಿಲ್ಲಿ
ಗೆಂದರೆ ಬಂದೀ
ಬರತೀ ಬರತೀ ಬಂದೇ ಬರತೀ
ಎಷ್ಟೋತ್ತಾರೆ ಅಲ್ಲೇ ಇರತಿ
ಅಲ್ಲೇ ಕುಳಿತಿ
ಬಾರೇ ಗೆಳತಿ.

ಸಿಡಿಲು

ಹಣ್ಣು ಬಿತ್ತು ಹಣ್ಣು ಬಿತ್ತು,
ಇಂದ್ರವನದ ಹಣ್ಣು ಬಿತ್ತು.
ಅಲ್ಲಿ ಬಿತ್ತು ಇಲ್ಲಿ ಬಿತ್ತು,
ಎಲ್ಲಿ ಬಿತ್ತು? ಇಲ್ಲೆ ಬಿತ್ತು.

ಆಚೆಗಿಡದ ಕೆಳಗೆ ಕೆಲರು,
ಈಚೆಗಿಡದ ಬುಡಕೆ ಕೆಲರು
ಅಲ್ಲಿ ಕೆಲರು ಇಲ್ಲಿ ಕೆಲರು,
ಅಲ್ಲಿಯಿಲ್ಲಿ ಎಲ್ಲೊ ಕೆಲರು.

ಗಾಳಿ ಉಕ್ಕಿ ಒದರಿತಾಗ
ಗಿಡದ ಸಾಲು ಅದುರಿತಾಗ
ಅತ್ತ ಇತ್ತ ಅಂಧಕಾರ,
ನೋಡಿದತ್ತ ದುಂದುಕಾರ.

ಲೋಕವೆಲ್ಲ ಮೊಬ್ಬುವರಿದು
ಸರುವ ಜನದ ಮಬ್ಬು ಹರಿದು
ದೊಡ್ಡದೊಂದು ಸಪ್ಪುಳಾಗಿ
ಜಗದ ಮೋರೆ ಸಪ್ಪಗಾಗಿ.

ಗಗನ ಪೃಥ್ವಿ ಏಕವಾಗಿ
ಲೋಕ ಕಕ್ಕವಿಕ್ಕಿಯಾಗಿ,
ಹಣ್ಣು ಬಿತ್ತು ಹಣ್ಣು ಬಿತ್ತು,
ಇಂದ್ರುವನದ ಹಣ್ಣುಬಿತ್ತು

ಬಿತ್ತು ಬಿತ್ತು ಇಲ್ಲೆ ಬಿತ್ತು,
ಲೋಕಕೆಲ್ಲ ದಿಗಿಲು ಬಿತ್ತು.
"ಇಲ್ಲೆ ಬಿತ್ತು" "ಇಲ್ಲೆ ಬಿತ್ತು !"
ಎಲ್ಲರಂದ "ರಿಲ್ಲೆ ಬಿತ್ತು ! !"

ಬೇಡದವರ ಮೇಲೆ ಬಿತ್ತು
ಬೇಡಿದರಿಗೆ ಇಲ್ಲ ತುತ್ತು
ಹಸಿಯುದವರು ಹಲವು ಮಂದಿ
ಹಸಿದ ಜನರು ಕೆಲವು ಮಂದಿ.

ಹಸಿಯುದರಿಗೆ ಅಮೃತ ವಿಷವು
ಹಸಿಯು ವಿಷವೆ ಅಮೃತರಸವು
ಬಯುಸಿದವಗೆ ಬೇವೆ ಬೆಲ್ಲ
ಬಯುಸದವಗೆ ಮೊದಲೆ ಹೊಲ್ಲ.

ಬೇಡದಲವರ ಮಗ್ಗಿಲಲ್ಲೆ
ಬೇಡಿಬಯುಸುವವರು ಅಲ್ಲೆ
ಬೇಡಿದಲ್ಲಿ ಬೀಳಲಿಲ್ಲ
ಬೇಡದಲ್ಲಿ ಬಿದ್ದಿತಲ್ಲ !

ಎಲ್ಲೊ ಬಿದ್ದು ಹೋಗಲಿಲ್ಲ
ಇಲ್ಲೆ ಬಿದ್ದು ತನಗೆ ಇಲ್ಲ ! ! !
ಹಣ್ಣು ಬಿತ್ತು ಹಣ್ಣು ಬಿತ್ತು
ಇಂದ್ರವನದ ಹಣ್ಣು ಬಿತ್ತು !

ಸುಖಜೀವನ

(೧)

ತಲಿಮ್ಯಾಲ ಹೊರಿಯೊಂದ। ಬಗಲಾಗ ಕೂಸೊಂದ
ಬಂದಾಳ ಬಾಲಿ ಬಂದಾಳ। ಹೊಲದಿಂದ ಬಂದಾಳ

೧

ಮಗಳೊಂದು ಮುಂದ ಮುಂದ। ಕೈಯಾಗ ಆಡೊಂದ

೨

ಮನಿಯಾಗ ಮರಿಯೊಂದ। ಮರಿಮ್ಯಾಲ ಮನಸೊಂದ

೩

ಮನಸೆಲ್ಲ ಮನಿಯಾಗ। ಕೆಲಸೆಲ್ಲ ಹೊಲದಾಗ

೪

ಲಗಬಗಿ ಬರುವುದಕ। ಮರಿ ಬಂದೂ ಬಾಗಿಲಕ

೫

ಕುರಿ ಹೋಗಿ ಮರಿನೆಕ್ಕಿ। ತಾ ಶಿಶುವ ಮುದ್ದಿಕ್ಕಿ

೬

ಕರಿಗೊಂಬಿ ಕಟಗೀದ। ಮಗಳೋಡಿ ಎತಗೊಂಡ

೭

ಕೈಯಾಗ ಕರಿಗೊಂಬಿ। ಮನದಾಗ ಖುಷಿ ತುಂಬಿ

೮

ಕುರಿಕಚ್ಚಿ ಎಳಿಹುಲ್ಲ! ಕಡಿದು ಮಲಿಹಾಲ

೯

ಸಂಜೀಯ ಹೊಟ್ಟೀಗಿ ಮುಂಜಾಳಿ ಮೂಡಿಹಳ

೧೦

ಮಕ್ಕಳು ಮರಿವುಂಡು ಚಕ್ಕನೆ ತಾವುಂಡು

೧೧

ಹಾಸೀಗಿ ಹಾಸಗೊಂಡು ಮೆತ್ತಗ ಮಲಕೊಂಡು

೧೨

ಗುರುವೀಗಿ ನೆನೆದಾಳ ಹರನೀಗಿ ನೆನಸ್ಯಾಳ

೧೩

ನೆನೆಯೂತ ನೆನಸೂತ ನಿದ್ದೀಯ ಮಾಡ್ಯಾಳ

೧೪

ನಿದ್ದ್ಯಾಗ ಹೊಲವಿಲ್ಲ ನಿದ್ದ್ಯಾಗ ಮನಿಯಿಲ್ಲ

೧೫

ಸುಖನಿದ್ದಿ ಬೆಳೆಯ್ಯಲಿ। ಸವಿಗನಸು ಬೀಳಲಿ

೧೬

ಕನಸು ಬಿತ್ತು ಬಾಲೆಗೆ। ಮನಸಿನೊಂದು ದೀವಿಗೆ
ಜಡೆಯ ಮುಡಿಯ ತಂದೆಯು। ನೋಡು ಮಗಳೆ ಎಂದನು
ಸ್ವಾಮಿ, ಶಿರವ ಬಾಗುವೆ। ಪ್ರೇಮಿ, ಕೈಯ ಮುಗಿಯುವೆ
ಹೊಲವು ಮನೆಯು ಯಾರದು। ನೆಲವು ಜಲವು ನಿನ್ನದು
ಸುಖದ ಶಿಶುವು ಯಾರದು। ಸಕಲ ಜೀವ ನನ್ನದು
ನಿನ್ನವಲ್ಲವೇತಕೆ। ನೀನೆ ತಂದೆ ಲೋಕಕೆ
ನೀನು ಒಡತಿಯಲ್ಲವೆ। ಪ್ರಾಣ ತೊತ್ತು ಅಲ್ಲವೆ?
ಕೆಲಸ ಗೈವುದಿಲ್ಲವೆ। ಚಲನವಲನ ಬೇಡವೆ?
ಸುಖಕೆ ನಲಿವುದಿಲ್ಲವೆ। ನಿಖಿಲ ಲೀಲೆ ಹೊಲ್ಲವೆ?
ನಾನು ನಿನಗೆ ಮೆಚ್ಚಿದೆ। ಏನು ಬೇಕು ಹೆಚ್ಚಿಗೆ

ಅದೊಂದು ತೆರ ಇದೊಂದು ತರ

ಅದೊಂದು ತೆರ !
ಇದೊಂದು ತರ !
ಆಕೆಯು ನಗೆ—
ಈಕೆಯು ಬಗೆ—
ಅವಳ ಮೋಡಿ—
ಇವಳ ಗಾಡಿ—
ಅದೊಂದು ತೆರ
ಇದೊಂದು ತರ॥

ಕದಡಿದೆ ನಗೆ,
ಮುದುಡಿದೆ ಬಗೆ;
ನಿಡುಸುಯ್ಲಲಿ
ಹಿಡಿದಿದೆ ಹೊಗೆ;
ಚೆಲುವಿನ ಬಗೆ
ಒಲವಿನ ಹಗೆ
ಇವಳ ದುಗುಡ
ಎನಿತು ವಿಗಡ?॥

ಸುಗ್ಗಿ ಹೂವ
ತೆರದೆ ನಗುವ
ಬಾಲೆಯಾಕೆ
ಬಿಂಕದಾಕೆ
ಎನಿತು ಸರಸ?
ಎನಿತು ಹಾಸ?
ಕಾಡಿ ಬೇಡಿ
ಕಣಿಪ ಮೋಸ?॥

ಕೊಂಕುಗುರುಳ
ಸಂಕುಗೊರಳ

ಹುರುಡುಗಾರ್ತಿ
ಇವಳ ಕೀರ್ತಿ,
ಮಾಯೆಯಂತೆ
ಮಸುಕು ಮಸುಕು !
ದೈವದಂತೆ
ಕೊಂಕುಕೊಂಕು !॥

ಆದಿಯಿಲ್ಲ;
ಅಂತವಿಲ್ಲ,
ತಿಳಿವೆನೆಂಬ
ಪಂಥವಿಲ್ಲ !
ಅವಳಹೆಮ್ಮೆ
ಇಳೆಯನೊಮ್ಮೆ
ಆಳದಿಹುದೆ
ಬಾಳದಿಹುದೆ ?॥

ಸೆಡವು ಬಹಳ !
ಒಲವು ವಿರಳ !
ಬೆಡಗು ಹೆಚ್ಚು
ಮುನಿಸು–ಕಿಚ್ಚು !
ಜ್ಯೇಷ್ಠೆಯೀಕೆ;
ಆದರೇಕೆ ?
ಜ್ಯೇಷ್ಠಮಾಸ
ದನಿತೆ ಬೆಂಕೆ॥

ಒಂದು ನಡೆಗೆ
ಹಲವು ಹಾವ !
ಒಂದು ನುಡಿಗೆ
ಹಲವು ಭಾವ !
ಆಶೆಗಳನು
ಭಾಷೆಗಳನು
ತುಳಿದು ತೊಡೆದು
ನಲಿವಳಿವಳು ॥

ಲಜ್ಜೆ ಮುಸುಕೆ
ಹಾವಸೆ ವೊಲು,
ಒಳಗೆ ಕೆಳಗೆ
ಹರಿವಳವಳು !
ಹಾವ ಭಾವ
ಹರ್ಷ ಕೋಪ
ಎಲ್ಲಗುಟ್ಟು
ನಮಗೆ ನಿಮಗೆ !॥

ರೂಪದರ್ಥ
ತಿಳಿಯದೆನಗೆ;
ಓದಿ ಕಲಿತು
ಬಾರದೆನಗೆ;
ನುಡಿವೆನೊಂದ—
ಇವರ ಚಂದ
ಅದೊಂದು ತೆರ !
ಇದೊಂದು ತೆರ !

ಮಂಗಲ ಗೀತ

ತನು ತುಂಬಿ ಮನ ತುಂಬಿ ಚಿತ್ತಚೇತನ ತುಂಬಿ
ಕನ್ನಡದ ಜೀವಕಳೆ ಹೊಮ್ಮುತಿದೆ ನೋಡು.
ಭಾವ ಕಳೆ-ಪೌರುಷದ ತುಂಬು ಹೊಳೆ ಹರಿಯುತಿರೆ
ಭಿನ್ನತೆಯ ನೋವ ಕಳೆ-ಮಂಗಲವ ಹಾಡು.

ಕೈಗೂಡಿ ಬಂದುವೋ ಮೈಮೂಡಿ ನಿಂದುವೋ
ಹಗಲುಗನಸಾಗಿದ್ದ ಹಳೆಯ ಬಯಕೆಗಳು
ಬಾದಾಮಿ ಬನವಾಸಿ ಹಂಪೆ ಹಳೆಬೀಡುಗಳ
ಮೂಕವಾಣಿಗಳ ಸುಸ್ವಾಗತವ ಕೇಳು.

ಮೂಡು ಪಡು ತೆಂಕುಬಡಗೊಂದಾಗಿ ಕೂಡುತಿದೆ
ತಾಯ ಮೈಗಾಯಗಳು ಮಾಯುತಿವೆ ನೋಡು
ನಿನ್ನ ಮೊಗವರಳದೇ ? ಮತಿ ಹಿಗ್ಗಿ ನಲಿಯದೇ ?
ಕಲ್ಲ ಕೆತ್ತನೆಯೇನೋ ನಿನ್ನೆದೆಯ ಗೂಡು ?

ಅಳಿದ ಸಾಮ್ರಾಜ್ಯಗಳ ಬಾಳದಿಪ ವೈಭವದ
ಕತೆ ಹೇಳಿ ಕಣ್ಣೊರಸಿ ಸವೆದುದಾಯುಷ್ಯ
ದಾರಿ ಕಂಡುದು ಬುದ್ಧಿ ; ಕೂಗಿ ಕರೆವುದು ಸಿದ್ಧಿ ;
ಒಸಗೆ ತೋರಣ ಕಟ್ಟಿ ತೆರೆದಿದೆ ಭವಿಷ್ಯ.

ಸಹ್ಯಗಿರಿಯುತ್ತುಂಗ ಹೃದಯ ಪೀಯೂಷರಸ
ವಾಹಿನಿಗಳೀ ಧರೆಯ ಜೀವನಾಳಗಳು
ಮಣ್ಣೆ ಹೊನ್ನಾಗಿರಲು ಕಲ್ಲೆ ಕಬ್ಬಿಣವಿರಲು
ವಜ್ರಕೆ ಸಮಾನಬಲ ಮಜ್ಜೆ ಮೂಳೆಗಳು.

ಎತ್ತರದ ಮಲೆಯು ಭುಜ, ಬಿತ್ತರದ ಬಯಲಿನೆದೆ
ಆರೋಗ್ಯ ಭಾಗ್ಯ ಧನಧಾನ್ಯ ಸಂಪತ್ತು.
ಏನಿಲ್ಲ ? ಏನಿರದು ? ಹೊಂಬಯಕೆ ಬಟ್ಟಲಿದು
ನಮ್ಮ ಪುಣ್ಯವ ತೂಗಿ ತೊನೆವ ತೊಟ್ಟಿಲಿದು.

ಕನ್ನಡದ ಕುಲವಿಲ್ಲಿ ಕುಲದ ದೇಗುಲವಿಲ್ಲಿ
ಪ್ರಾಣದೇವನ ಭವ್ಯ ಮೂರ್ತಿ ಪ್ರತಿಷ್ಠೆ
ಭಾರತವೆ ಸಾವಿತ್ರಿ ಕನ್ನಡವೆ ಗಾಯತ್ರಿ
ಇಲ್ಲಿಯೇ ಪೂಜಾಪುರಶ್ಚರಣ ನಿಷ್ಠೆ.

ದಿಕ್ಕುದೆಸೆ ಪುಳಕಿಸಲು ಧರ್ಮ ಘಂಟಾ ಧ್ವನಿಗೆ
ಎತ್ತು ಸೇವಾರತಿಯ ಮಂಗಲಾರತಿಯ.
ಕರ್ತವ್ಯ ಸಫಲತೆಯ ಪಾದಕಾಣಿಕೆಯಿಟ್ಟು
ಓಲೈಸು ರಾಷ್ಟ್ರಪೌರುಷದ ಮೂರುತಿಯ.

ಸ್ವಾತಂತ್ರ್ಯ ಸಮತೆ ಜನಜೀವನದ ಘನತೆಯಲಿ
ಭಾರತ ಮನೋರಥವ ಬೀದಿವರಿಯಿಸಲು
ಹೂಡಿ ಹೆಣೆದಿವೆ ನೊಗಕೆ ಎರಡು ಕೋಟಿಯ ಹೆಗಲು
ಕೂಡಿ ಘೋಷಿಪುದೆರಡು ಕೋಟಿಗಳ ಕೊರಳು

ಹಾರದೇ ಹಾರೈಕೆ ನಕ್ಷತ್ರಗಳ ನಡುವೆ ?
ಏರದೇ ನಮ್ಮ ಗುಡಿ ಗಗನದೆತ್ತರಕೆ ?
ಪುರುಷಾರ್ಥ-ಪರಮಾರ್ಥ ಸಹಯಾತ್ರೆ ಜರಗುತಿರೆ
ಆವುದಿನ್ನಾರೈಕೆ ಬೇರೇನೊ ಹರಕೆ ?

ಮಾನವರ ನಲವೆ ದೇವರಿಗೆ ಬಲವಾಗಿರಲು
ಕೊಡರೆ ಅಭಯುವ ನಮ್ಮ ದೇವದೇವಿಯರು?
ಭವನ ಭುವನೇಶ್ವರಿಯ ಭಿನ್ನ ಚಾಮುಂಡಿ ಪಡು—
ಗಡಲ ಪಾದೋದಕದ ಶೌರಿ ಪರಶಿವರು?

ಕನ್ನಡದ ಜೀವವೇ! ಧನ್ಯತೆಯ ಕೊಂಡಾಡು!
ಈ ನೆಲದಿ ಹುಟ್ಟಿರುವೆ! ಈ ದಿನವ ಕಂಡೆ!
ಭರತಮಾತೆಯ ಮುದ್ದುಗುವರಿ ಕನ್ನಡತಾಯ
ಕಿಂಕರನ–ಶಂಕರನ ಹಾಡನೆದೆಗೊಂಡೆ!

ಮಿಂಚುಹುಳು

ಎಲೆಲೆ ಬೆಳಕಿನ ಬಿತ್ತೆ, ಇರುಳ ಮೂಗಿನ ನತ್ತೆ!
ಹುಳುವೆಂದು ಹೆಸರಿಟ್ಟು ಹಳಿಯುವರೆ ನಿನ್ನ?
ಹುಳುವಾಗಿ ಹುಟ್ಟಿ ಲೋಕವ ಬೆಳಗುತಿರಲಿಂತು
ಒಳಮೆಯ್ಯೊಳಾವ ಮಾಯದ ರೂಪೊ ನಿನಗೆ?

ಆರ ಭಾವನೆಯೊಸರ ಬಿಂದುವಾಗಿಹೆ, ನೀನು?
ಆರೆದೆಯ ತಾರ ಹಾರದ ಬಿಳಿಯ ಮುತ್ತು?
ಆರ ದುಗುಡದ ಕಿಡಿಯು? ಆರ ಬಯಕೆಯ ಕುಡಿಯು
ಆರ ಎವೆಯಿಂ ಜಾರಿ ಬಿದ್ದ ಕಂಬನಿಯು?

ಭಾವಶುದ್ಧಿಗೆ ನೆಲೆವನಲೆವ ಭಾವಿಕನೇನು?
ಜೀವನಕೆ ಸೆರೆಬಿದ್ದ ದೇವನೇ ನೀನು?
ಸಾವಿನಲಿ ಕುಡಿಗೊಂಡ ಜೀವದಂಕುರವೇನು?
ಆವ ಹೆಸರದು ನಿನಗೆ? ನಿನ್ನ ಪರಿಯೇನು?

ಆವ ನಾಡಿಂದೆ ಚಿರಪಥಿಕನಾಗುತೆ ಬಂದೆ?
ಆವನಪ್ಪಣೆಗಿರುಳ ಕಾವಲಲಿ ನಿಂದೆ
ಆವ ಪರಿಧಿಯ ಸುತ್ತ, ಆರ ನೀನರಸುತಿಹೆ?
ಆವ ನೇಮವು ನಿನಗೆ ಕತ್ತಲೆಯ ಹಿಂದೆ?

ಮಾತಾಡೆ; ಸರಗೂಡೆ: ಉಸಿರಾಡೆ; ಮೌನದೊಳೆ
ಮಾತ ನೀ ಮೊಳಗಿಸುವೆ ಜಗವ ಬೆಳಗಿಸುವೆ.

ಸುವರ್ಣಸಂಪುಟ/೧೨೯

ಪ್ರೀತಿ ಭಾಷೆಯು ಬೇರೆ; ಮಾತಿನರ್ಥವು ಬೇರೆ;
ಹೂತಿಹುದು ನಿನ್ನ ನುಡಿ ನಿನ್ನ ಮಿಂಚಿನೊಳೆ.

ಮಿರುಗುತಿಹೆ; ಕೊರಗುತಿಹೆ; ನಾಚುತಿಹೆ; ನಗುತಲಿಹೆ;
ಪರಿಪರಿಯ ವಿಷಮ ಭಾವದೊಳೇಳ್ವೆ; ಬೀಳ್ವೆ;
ಬರೆವೆ ಹುಸಿ ಮಬ್ಬಿನಲಿ ನನ್ನಿಯಕ್ಕರಗಳನು
ಬರೆದುದನು ತೊಡೆವೆ; ನನ್ನಿಯ ಹುಸಿಯ ಮಾಳ್ಪೆ.

ಧರೆಯ ನಿದ್ದೆಯ ಬಲೆಗೆ ಬಿದ್ದ ಮೀನೆಲೆ ನೀನು !
ಇರುಳ ಕನಸಿನ ಸೀರೆ ನಿರಿಯ ಜರಿ ನೀನು !
ಮರವೆ ಚೆಲ್ಲಿದ ತಿಳಿವಿನೊಂದು ತುಂತುರು ನೀನು !
ಅರಿಕೆಯಲಿ ಹುಳು; ನಿಜದಿ ಮೇಲ್ನಾಡ ಹುರುಳು ! !

ಘೋರಾಂಧಕಾರದೊಳು

ಘೋರಾಂಧಕಾರದೊಳು ಕಾರ್ಮುಗಿಲನುಟ್ಟು
ಮಿಂಚೆಂಬ ತೇಜಸದ ಬಳೆಯ ತೊಟ್ಟು
ಭೈರವನ ತಂಬಟೆಯ ಗುಡುಗಿನೊಳಗಿಟ್ಟು
ಬಾ, ಎನ್ನನೆಚ್ಚರಿಸು, ಜನನಿ—ಹೇ ಜವನ ಜನನಿ.

ಬಳೆಯ ಮಿಂಚಿನೊಳೆನ್ನ ಕಣ್ಣ ಜಡತನವಳಿಸು,
ಕಿವಿಯ ನಿದ್ದೆಯ ಕೆಡಿಸು ಗುಡುಗಿನಿಂದ;
ಕಾರ್ಮುಗಿಲ ರೌದ್ರದಲಿ ಎದೆಯ ಭೀತಿಯ ಬಿಡಿಸು;
ಬಾ, ಎನ್ನನೆಚ್ಚರಿಸು, ಜನನಿ—ಹೇ ಜವನ ಜನನಿ.

ಆರತಿಯ ಬೆಳಕಿನಲಿ ಕಣ್ದೆರೆಯಲಿಲ್ಲ,
ಕೊಳಲ ನಾದವ ಕೇಳಿ ಕಿವಿಯೇಳಲಿಲ್ಲ.
ಮೂರುತಿಯ ಕಂಡೆದೆಯು ಕಲ್ಲಾಗಲಿಲ್ಲ;
ಬಾ, ಎನ್ನನೆಚ್ಚರಿಸು, ಜನನಿ—ಹೇ ಜವನ ಜನನಿ.

ಜಯ ಹೇ ಕರ್ಣಾಟಕ ಮಾತೆ!

ಜೈ! ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!
ಜೈ! ಸುಂದರ ನದಿವನಗಳ ನಾಡೆ,
ಜಯ ಹೇ ರಸ ಋಷಿಗಳ ಬೀಡೆ!

ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!

ಜನನಿಯ ಜೋಗುಳ ವೇದದ ಘೋಷ
ಜನನಿಗೆ ಜೀವವು ನಿನ್ನಾವೇಶ.
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯಹೇ ಕರ್ಣಾಟಕ ಮಾತೆ!

ಶಂಕರ ರಾಮಾನುಜ ವಿದ್ಯಾರಣ್ಯ
ಮೊದಲಹ ಋಷಿಗಳ ದಿವ್ಯಾರಣ್ಯ.
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕಬ್ಬಿಗರುದಿಸಿದ ಮಂಗಳಧಾಮ,
ಕವಿಕೋಗಿಲೆಗಳ ಪುಣ್ಯಾರಾಮ!
ನಾನಕ ರಾಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನಚ್ಚಿನ ಬೀಡೆ;
ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸರ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ,
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ!
ಕನ್ನಡ ನುಡಿ ಕುಣಿದಾಡುವ ಗೇಹ!
ಕನ್ನಡ ತಾಯಿಯ ಮಕ್ಕಳ ದೇಹ!

ಜೈ ! ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ !
ಜೈ ! ಸುಂದರ ನದಿವನಗಳ ನಾಡೆ,
ಜಯ ಹೇ ರಸ ಋಷಿಗಳ ಬೀಡೆ !

ನನ್ನ ಮನೆ

ಮನೇ ಮನೇ ಮುದ್ದು ಮನೇ
ಮನೇ ಮನೇ ನನ್ನ ಮನೇ !

ನನ್ನ ತಾಯಿಯೊಲಿದ ಮನೆ,
ನನ್ನ ತಂದೆ ಬೆಳೆದ ಮನೆ
ನನ್ನ ಗೆಳತಿಯರೊಡನೆ ಕೂಡಿ;
ಮುದ್ದು ಮಾತುಗಳನು ಆಡಿ,
ಮಕ್ಕಳಾಟಗಳನು ಹೂಡಿ
ನಾನು ನಲಿದ ನನ್ನ ಮನೆ !

ನನ್ನ ಗಿರಿಜೆಯಿದ್ದ ಮನೆ,
ನನ್ನ ವಾಸುವಿದ್ದ ಮನೆ;
ಮನೆಯ ಮುತ್ತಿ ಬರಲು ಚಳಿ,
ಆಳು ಮಂಜು ಒಲೆಯ ಬಳಿ
ನಮ್ಮನೆಲ್ಲ ಕತೆಗಳಲಿ
ಕರಗಿಸಿದ್ದ ನನ್ನ ಮನೆ !

ತಾಯಿ ಮುತ್ತುಕೊಟ್ಟ ಮನೆ,
ತಂದೆ ಎತ್ತಿಕೊಂಡ ಮನೆ;
ಮನೆಗೆ ಬಂದ ನೆಂಟರೆಲ್ಲ
ಕೂಗಿ ಕರೆದು ಕೊಬರಿ ಬೆಲ್ಲ
ಗಳನು ಕೊಟ್ಟು, ಸವಿಯ ಸೊಲ್ಲ
ನಾಡುತ್ತಿದ್ದ ನನ್ನ ಮನೆ !

ನಾನು ನುಡಿಯ ಕಲಿತ ಮನೆ,
ನಾನು ನಡಿಗೆಯರಿತ ಮನೆ;
ಹಕ್ಕಿ ಬಳಗ ಸುತ್ತ ಕೂಡಿ

ಬೈಗು ಬೆಳಗು ಹಾಡಿ ಹಾಡಿ
ಮಲೆಯ ನಾಡ ಸಗ್ಗಮಾಡಿ
ನಲಿಸುತ್ತಿದ್ದ ನನ್ನ ಮನೆ!

ನಾನು ಬಿದ್ದು ಎದ್ದ ಮನೆ,
ಮೊದಲು ಬೆಳಕು ಕಂಡ ಮನೆ;
ತಿಪ್ಪ ತಿಪ್ಪ ಹೆಜ್ಜೆಯಿಟ್ಟು,
ಬಿಸಿಲ ಕೋಲ ಹಿಡಿದು ಬಿಟ್ಟು,
ತಂಗಿ ತಮ್ಮರೊಡನೆ ಹಿಟ್ಟು
ತಿಂದು ಬೆಳೆದ ನನ್ನ ಮನೆ!

ಮೊದಲ ಮಿಂಚು ಹೊಳೆದ ಮನೆ
ಮೊದಲ ಗುಡುಗ ಕೇಳ್ದ ಮನೆ;
ಮೊದಲ ಮಳೆಯು ಕರೆದು ಕರೆದು,
ಹೆಂಚ ಮೇಲೆ ಸದ್ದು ಹರಿದು,
ಮಾಡಿನಿಂದ ನೀರು ಸುರಿದು,
ಬೆರಗನಿತ್ತ ನನ್ನ ಮನೆ

ನನ್ನ ಐಗಳಿದ್ದ ಮನೆ,
ಮರಳು ತಿದ್ದಿ ಬರೆದ ಮನೆ,
ಬುವಿಯು ಕೊಟ್ಟ ಸಗ್ಗದಂತೆ,
ಬಂಧ ಕೊಟ್ಟ ಮುಕ್ತಿಯಂತೆ,
ದುಃಖ ಹೆತ್ತ ಸುಖಗಳಂತೆ
ತಿರೆಯ ಸಿರಿಯು ನನ್ನ ಮನೆ!

ಹೆತ್ತ ತಾಯಿ ಸತ್ತ ಮನೆ,
ಮತ್ತೆ ತಂದೆ ಹೋದ ಮನೆ,
ಗಿರಿಜೆ ನರಳಿ ಬಿಟ್ಟ ಮನೆ,
ವಾಸು ಬೆಂದು ಸಂದ ಮನೆ,
ಬಾಲ್ಯ ಬಾಡಿ ಬಿದ್ದ ಮನೆ,
ಆದರೆನಗೆ ನನ್ನ ಮನೆ!

ಕಬ್ಬಗಳನು ಕಂಡ ಮನೆ,
ಹಬ್ಬದೂಟ ಉಂಡ ಮನೆ;
ಅಜ್ಜಿ ಅಜ್ಜರೆಲ್ಲರಿದ್ದು
ಬಾಳಿ ಬದುಕಿ ನರಳಿ ಬಿದ್ದು
ಮಾಯವಾದ ನನ್ನ ಮನೆ!

ನಾನು ಬಾಳುತಿರುವ ಮನೆ
ತಮ್ಮ ತಿಮ್ಮು ಇರುವ ಮನೆ;
ತಂಗಿ ಬಂದು ಹೋಗುತಿರುವ,
ಹಕ್ಕಿ ಬಳಗ ಹಾಡುತಿರುವ,
ಕಾಡ ಮುತ್ತು ಕೊಡುತಲಿರುವ
ಸೊಬಗವೀಡು ನನ್ನ ಮನೆ

ಹಳ್ಳಿ ರಂಗನಿರುವ ಮನೆ,
ಬಳ್ಳಿ ಸಿಂಗರಿಸುವ ಮನೆ;
ಬಾವಿಕಟ್ಟೆ ಬಳಿಯೊಳಂದು,
ತಾಯಿತಂದೆ ಬಳಗ ಮಿಂದು
ನಿಲಲು, ನೆಳಲ ನೀಡಿದೊಂದು
ತೆಂಗು ಇರುವ ನನ್ನ ಮನೆ!

ಹಿರಗ ಕೊಳಲ ನುಡಿದ ಮನೆ,
ಹೆಣ್ಣ ತಂದು ಕೊಟ್ಟ ಮನೆ;
ತುರುಗಳೆಲ್ಲ 'ಅಂಬ' ಎಂದು,
ಕರುಗಳನ್ನು ಕರೆದು ಬಂದು,
ಒಂದು ದಿನವು ಕಳೆಯಿತೆಂದು
ಎಚ್ಚರಿಸಿದ ನನ್ನ ಮನೆ!

ತಾಯಿ ಮಿಂದ ಕೆರೆಯ ಮನೆ,
ಬಟ್ಟೆಯೊಗೆದ ತೊರೆಯ ಮನೆ;
ತಾಯಿಯಡಿಯ ದೂಳಿನಿಂದ,
ತಂದೆಯಉತ್ತ ಮಣ್ಣಿನಿಂದ,
ಗಿರಿಜೆ ಬಿದ್ದ ಮಟ್ಟಿಯಿಂದ
ಮಂಗಳಾದ ನನ್ನ ಮನೆ!

ನಾನು ಬದುಕೊಳುಳಿವ ಮನೆ,
ನಾನು ಬಾಳಿಯುಳಿವ ಮನೆ;
ನನ್ನದಲ್ಲದಿಳೆಯೊಳಿಂದು,
ಹೆಮ್ಮೆಯಿಂದ ನನ್ನದೆಂದು,
ಬೆಂದು ಬಳಲಿದಾಗ ಬಂದು
ನೀರು ಕುಡಿವ ನನ್ನ ಮನೆ!

ಸುಗ್ಗಿ ಬರುತಿದೆ

ಅಡಿಯ ಗೆಜ್ಜೆ ನಡುಗೆ, ಹೆಜ್ಜೆಯಿಡುತ ಸುಗ್ಗಿ ಬರುತಿದೆ !
ಸುಗ್ಗಿ ಬರೆ ಹಿಗ್ಗಿ ತಿರೆ ಸಗ್ಗ ಸೊಗವ ತರುತಿದೆ !
ಕಣಿವೆಯಿಳಿದು ತೆಮರನೇರಿ,
ತರುಗಳಲ್ಲಿ ತಳಿರ ಹೇರಿ,
ಹೊಸತು ಜೀವಕಳೆಯ ಬೀರಿ
ಸುಗ್ಗಿ ಮೂಡುತಿರುವುದು !
ಬನದ ಬಿನದದಿನಿದು ನಿನದ ಮನದೊಳಾಡುತಿರುವುದು ! ೧

ಬಂಡನುಂಡು ದುಂಬಿವಿಂಡು ಹಾಡುತಿಹವು ಹಾರುತ,
ಮತ್ತ ಮಧುಮಾಸವಿದು ಬನ್ನಿರೆಂದು ಸಾರುತ.
ಜಾರುತಿಹುದು ಮಾಗಿ ಚಳಿ,
ಕುಸುಮಿಸಿರುವ ಲತೆಗಳಲಿ
ಮೊರೆಯುತಿಹವು ಸೊಕ್ಕಿದಳಿ
ಮುಕ್ತಜೀವರಂದದಿ !
ಉಲಿಯೆ ಪಿಕ, ಗಳಪೆ ಶುಕ, ಸುಗ್ಗಿ ಬಂದಿತಂದದಿ ! ೨

ಮಾಮರಂಗಳಲಿ ವಿಹಂಗ ತರೆಯ ನಿಸ್ವನಂಗಳಿಂ,
ತಳಿರ ಸೊಂಪನಲರ ಜೊಂಪನಾಂತ ಬನಬನಂಗಳಿಂ,
ನಲಿವ ಪಚ್ಚೆಯುಡೆಯನುಟ್ಟು,
ಅರಳಿದರಳುಗಳನು ತೊಟ್ಟು,
ಹಿಮದ ಮಣಿಯ ಮಾಲೆಯಿಟ್ಟು
ದಣಿದು ಸೋಲೆ ಕಣ್ಮನಂ
ಕರೆವಳೋವಿ ಬನದ ದೇವಿ ತನ್ನ ಸುಗ್ಗಿಯಾಣ್ಮನಂ ೩

ಹಾರಿ ಮೊರೆವ ಜಾರಿ ಹರಿವ ತೊರೆಯ ತಂಪು ದಡದೊಳು,
ಮೇಲೆ ಭಾನು ತೇಲೆ, ನಾನು ಕುಳಿತು ಮರದ ಬುಡದೊಳು
ತಿರೆಯ ಸಿರಿಯ ನೋಡುತಿರುವೆ;
ಕುರಿತು ಹಾಡ ಹಾಡುತಿರುವೆ;
ಸೊಬಗಿನೊಡನೆ ಕೂಡುತಿರುವೆ
ಕರಗಿ ಮುಳುಗಿ ತೇಲುತ !
ತೊರೆದ ಗಂಡನೆದುರುಗೊಂಡ ಕೋಮಲೆಯನು ಹೋಲುತ ! ೪

ತರುಗಳೆಲ್ಲ ಮೇಯೆ, ಗೊಲ್ಲ ಬಸಿರಿಮರದ ನೆಳಲಲಿ
ಮಲಗಿಸಿಹನು ಮಧುವನವನು ಮುದವನುಲಿವ ಕೊಳಲಲಿ !
ನಿಂತು ಮೇವ ಮರೆತು ಬಿಟ್ಟು,
ಕಿವಿಯಂನೆರಡ ನೆಟ್ಟಗಿಟ್ಟು,
ಗೊಲ್ಲನೆಡೆಗೆ ದಿಟ್ಟಿಯಿಟ್ಟು
ಬರೆದ ಚಿತ್ರದಂದದಿ ! ೫

ಗಿರಿಗಳಿರಾ, ತೊರೆಗಳಿರಾ, ಎಲೆ ವಿಹಂಗಮಗಳಿರಾ,
ತರುಗಳಿರಾ, ಬನಗಳಿರಾ, ಮಗಮಗಿಪ ಸುಮಗಳಿರಾ,
ಸೊಬಗ ನನ್ನಿ ಎಂದು ಸಾರಿ;
ನನ್ನಿಯೆ ಸೊಬಗೆಂದು ತೋರಿ;
ಸೊಗದ ಸೊದೆಯು ತಿರೆಗೆ ಬೀರಿ,
ಒಲ್ಮೆ ಸೊಬಗು ಸೊಗದಲಿ
ಪರಮ ಪುರುಷನಮಲ ಹರುಷವಿಹುದು ಸಾರಿ ಜಗದಲಿ ! ೬

ಮಧುವೆ ಬಾರ ! ಮುದವ ತಾರ ! ನೀನೆ ದೇವದೂತನು !
ಪರದ ಚಿಂತೆ ಮರೆಯದಂತೆ ಕಳುಹುವನು ವಿಧಾತನು !
ಬುವಿಯ ಸಿಂಗರಿಸುತ ಬಾರ !
ಪರದ ಬೆಳಕನಿಳೆಗೆ ತಾರ !
ಸೊಬಗೆ ಶಿವನು ಎಂದು ಸಾರ !
ಬಾರ ಶಕ್ತಿದಾಯಕ !
ಹಳತ ಕೂಡಿ ಹೊಸತು ಮಾಡಿ ಬಾರೆಲೆ ಋತುನಾಯಕ ! ೭

ಹುಣ್ಣಿಮೆ

ಹುಣ್ಣಿಮೆಯಿಂಪನು ನೀಡುತಿರೆ
ಕಣ್ಣಿಗೆ ಹಬ್ಬವ ಮಾಡುತಿರೆ
ಗಾಡಿಯ ಬಿಂಕದಿ ಮೆರೆಯೆ ತಿರೆ
ಬಾಳನು ಬೈಯುತ ಜರೆಯುವರೆ ?

ಬೆಟ್ಟದ ನೆತ್ತಿಯೊಳೊಬ್ಬನೆ ನಿಂತೆನು ದಿಟ್ಟಿಸಿ ದೆಸೆಗಳ ನೋಡುತ್ತ;
ರೆಕ್ಕೆಯ ರಸಿಕರು ಹಾರಿದರಿಕ್ಕೆಗೆ ಸಂಜೆಯ ಹಾಡನು ಹಾಡುತ್ತ.
ಪಡುವಣ ದೆಸೆಯೊಳು ಕೆಂಪನು ಚೆಲ್ಲುತ ಬೈಗಿನ ನೇಸರು ತೊಳಗಿದನು;
ತೊಳಗುತ ಬೆಳಗುತಲುರುಳುತಲಿಳಿಯುತ ನಾ ನೋಡುತಲಿರೆ ಮುಳುಗಿದನು !

ಸುವರ್ಣಸಂಪುಟ/೧೩೭

ತಳಿರೊಳು ಕುಳಿರೆಲರಾಡಿದುದು
ಬೈಗಿರುಳೆಲ್ಲಿಯು ತೀಡಿದುದು
ನೆಲವನು ಬಾಂದಳ ತಬ್ಬಿದುದು
ಮೌನತೆಯೆಲ್ಲಿಯು ಹಬ್ಬಿದುದು!

ನಭದೊಳು ಮೆಲ್ಲನೆ ಮಿಣಕುತಲಿಣಕುತ ಚುಕ್ಕಿಗಳೊಮ್ಮೆಯೆ ಮೂಡಿದುವು;
ಕನಸುಗಳಂದದಿ ಮೋಡಗಳೊಯ್ಯನೆ ಕಣ್ಣೆಲರೊಳು ತೇಲಾಡಿದುವು!
ಮೂಡಣ ದೆಸೆಯೊಳು ನಸುಗೆಂಪೆಸೆಯಲು ಕತ್ತಲೆ ಹಿಮ್ಮೆಟ್ಟೋಡಿದುದು;
ಜೊನ್ನಿನ ಬಣ್ಣದಿ ತುಂಬಿದ ಬಿಂಬದ ಹೊನ್ನಿನ ಸೊನ್ನೆಯು ಮೂಡಿದುದು!

ಚಿನ್ನದ ಬೆಂಕಿಯ ಕೊಂಡದೊಳೇಳುವ ಶಾಂತಿಯ ದೇವತೆಯುಂದದಲಿ,
ಕಬ್ಬಿಗನೆದೆಯೊಳು ಗಬ್ಬವನಾಂತಿಹ ಕಬ್ಬವು ಹೊರಗೊಗೆವಂದದಲಿ,
ನೀಲಾಂಬರದೊಳು ಮೆಲುಮೆಲನೇರುತ ತಿಂಗಳು ಮೂಡಿತು ಚಂದದಲಿ,
ಜೊನ್ನದ ಕಡಲೊಳು ಮುಳುಗುತ ಮೀಯುತ ನಲಿದುದು ತಿರೆ ಆನಂದದಲಿ!

ಗಿರಿಗಳು ಹೊಲಗಳು ಕಾಡುಗಳು
ತೊರೆಗಳು ನೀರಿನ ಬೀಡುಗಳು
ಮುದ್ದಿಡುವಿಂದುವಲಂಪಿನಲಿ
ಮೆರೆದುವು ನಲಿದುವು ಪೆಂಪಿನಲಿ!

ತಳಿರನು ಚುಂಬಿಸಿ, ಕೊಳದೊಳು ಬಿಂಬಿಸಿ, ಚೆಲುವಿನ ಚಂದ್ರಿಕೆ ಚೆನ್ನಾಯ್ತು!
ಬಾನೊಳು, ತಿರೆಯೊಳು, ಕುಣಿಯುವ ತೆರೆಯೊಳು ತಿಳಿ ಬೆಳುದಿಂಗಳು ಹೊನ್ನಾಯ್ತು!
ಮನದೊಳು ಬೆಳಗಿತು, ಎದೆಯೊಳು ತುಳುಕಿತು, ಜೊನ್ನಿನ ಬಿತ್ತರದಂಬುಧಿಯು!
ಸೊಬಗಿದು, ಸೊಗಸಿದು, ಮಾಯೆಯು ಬೆಡಗಿದು? ಚಾಗಕೆ ಮಾಡಿದನೇಂ ಬಿದಿಯು!

ಬಾನೊಳು ತಿಂಗಳು ಬೆಳಗುತಿರೆ
ಮೀನುಗಳಿಣಿಕುತ ತೊಳಗುತಿರೆ
ಶಾಂತಿಯ ಸೊಗದಲಿ ತುಂಬೆ ತಿರೆ
ಬಾಳಿದು ಹುಸಿಯೆಂದೆಂಬುವರೆ?

ಕಲ್ಕಿ

ನಿದ್ದೆಯ ಲೋಕದಿ ಕನಸಿನ ಬೀದಿ
ತಿರುಗಿದೆ, ತೊಳಲಿದೆ, ತಪ್ಪಿತು ಹಾದಿ!
ಮುಂದೆ ಕಾಣಿಸಿತೊಂದು ಅರಣ್ಯ,

ಅನಂತವಾದುದು ವನ ವಿಸ್ತೀರ್ಣ.
ಹೆಮ್ಮರಗಳು ಕಿಕ್ಕಿರಿದುವು ಅಲ್ಲಿ,
ಬಿಡುವಿಲ್ಲದೆ ಹೆಣೆದಿದ್ದುವು ಬಳ್ಳಿ,
ಮುಳ್ಳಿನ ಪೊದೆಗಳು, ಗರಗಸವಳ್ಳಿ,
ಪ್ರೇತದಂತೆ ಪಾಪಸಿನ ಕಳ್ಳಿ!
ನುಗ್ಗಿದೆ ನಾನಾ ಹಳುವಿನಲಿ;
ಆ ಕನಸಿನ ಹೆಗ್ಗಾಡಿನಲಿ.
ಅಲ್ಲಿದ್ದುದು ಬೆಳಕೆಂಬುವುದಲ್ಲ.
ಕತ್ತಲು ಅಲ್ಲ!
ಬೆಳಕೋ ಕತ್ತಲೊ ಶಿವನೇ ಬಲ್ಲ!
ಶಿವನೇ ಬಲ್ಲ!
ಪ್ರೇತಗಳಂದದಿ ಭೀತಿಯ ಛಾಯೆ
ಸುಳಿಸುಳಿದಾಡಿತು ಅಲ್ಲಿ,
ಆ ಘೋರ ಕಾನನದಲ್ಲಿ!
ನಡೆದೇ ನಡೆದೇ ನಡೆದೂ ನಡೆದೆ,
ಸಾಹಸ ಬಿಡದೆ, ಎದೆಗೆಡದೆ.
ಸುತ್ತಲು ಮೌನ!
ಶ್ಮಶಾನ ಮೌನ!
ಕಾಡನು ದಾಟಿದೆ: ಮುಂಗಡೆ ಬೆಟ್ಟ;
ಶಿಖರವೊ ನಿಂತಿದೆ ಮುಗಿಲಿನ ಮುಟ್ಟ!
ಹತ್ತೀ ಹತ್ತೀ ಹತ್ತೀ ಹತ್ತೀ
ಕಡೆಯಲಿ ಸಿಕ್ಕಿತು ನಡುನೆತ್ತಿ!—
ನೋಡಿದೆನಲ್ಲಿ
ನಡುನೆತ್ತಿಯಲಿ!
ಯಾವುದೊ ಊರು ಆ ಊರು?
ಬರಿ ಮಾಯದ ಊರು!
ಧನಿಕರ ಮನೆಗಳು ಒಂದೆಡೆ ನಿಂತಿವೆ,
ಬಡವರ ಗುಡಿಸಲು ಒಂದೆಡೆ ನಿಂತಿವೆ.
ಜ್ಯೋತಿಯ ಮಣಿದೀಪಗಳಲ್ಲಿ;
ಕತ್ತಲು ಕಗ್ಗತ್ತಲು ಇಲ್ಲಿ!
ಹಾಡಿನ ಸುಣ್ದನಿಯಿತ್ತ,
ಗೋಳಿನ ನೀಳ್ದನಿಯಿತ್ತ.
ಕೂಳನು ಹೆಮ್ಮೆಗೆ ಬಿಸುಡುವರಲ್ಲಿ,
ಹೊಟ್ಟೆಗೆ ಇಲ್ಲದೆ ಕೊರಗುವರಿಲ್ಲಿ!

ಆ ಕಡೆ ಉದ್ಯಾನ,
ಈ ಕಡೆ ಶ್ಮಶಾನ!
ಪೀತಾಂಬರಗಳ ಹೊದೆಯುವರಲ್ಲಿ
ಕೌಪೀನಕೆ ಚಿಂದಿಯು ಸಿಗದಿಲ್ಲಿ!
ನೋಡುತ ನೋಡುತ ನೋಡುತ್ತಿದ್ದೆ;
ನೋಡುತ್ತಿರೆಯಿರೆ ಬೆಚ್ಚಿ ಬಿದ್ದೆ:
ಬಡಬಗ್ಗರ ಜಠರಾಗ್ನಿಯು ಎದ್ದು
ಗುಡಿಸಿಲುಗಳಿಗೇ ಬೆಂಕಿಯು ಬಿದ್ದು
ಧಗಧಗ ಧಗಧಗ ಹೊತ್ತಿದುದು,
ಭುಗಿಭುಗಿಲೆನ್ನುತ ಮುತ್ತಿದುದು!
ಮುಗಿಲಿನವರೆಗೂ ಬಾನಿನವರೆಗೂ
ದಿಕ್ಕುದಿಕ್ಕುಗಳ ಜುಟ್ಟಿನವರೆಗೂ
ಬಡವರ ಬೆಂಕಿಯು ನಾಲಗೆ ಚಾಚಿ
ಶ್ರೀಮಂತರನಪ್ಪಿತು ಬಾಚಿ!
ಬಡವರ ಸಿಟ್ಟಿದು ಏನು ಪಿಶಾಚಿ!
ಬಡಬಾಗ್ನಿಯೆ ತಲೆತಗ್ಗಿತು ನಾಚಿ!
ಶ್ರೀಮಂತರ ಸೌಧಂಗಳ ನೆತ್ತಿ
ಸೀದುದು ಬಡಹೊಟ್ಟೆಯ ಉರಿ ಹೊತ್ತಿ!
ದೂರದ ಆ ಗಿರಿಶಿಖರದ ಮೇಲೆ
ನನಗೂ ತಟ್ಟಿತು ಬೆಂಕಿಯ ಜ್ವಾಲೆ!
ಕೇಳಿಸಿತೊಡನೆಯೆ ಹಾಹಾಕಾರ!
ಮಕ್ಕಳುಮರಿಗಳ ಚೀತ್ಕಾರ!
ಗರ್ಭಿಣಿ ಸ್ತ್ರೀಯರು, ಬಾಣಂತಿಯರು,
ನವ ವಧುಗಳು ಮೇಣ್ ಶ್ರೀಮಂತೆಯರು;
ಹುಡುಗರು, ಮುದುಕರು, ಕುಂಟರು, ಕಿವುಡರು;
ಬಡವರ ಗೋಳನು ಕೇಳದ ಕಿವುಡರು;
ಹೊಟ್ಟೆಯ ಪಾಡಿಗೆ ಕಾವಿಯನುಟ್ಟು
ಬಡವರ ಹಸಿವಿಗೆ ಮೌಢ್ಯವ ಕೊಟ್ಟು
ಸುಖಸಂಪತ್ತನು ಕೊಂಡವರು,
ಮೃಷ್ಟಾನ್ನವನೇ ಉಂಡವರು;
ಗುರುಗಳು ಶಿಷ್ಯರು ಮನೆಗಳು ಮಠಗಳು
ಎಲ್ಲರು ಬೆಂದರು ಬಡಬಾಗ್ನಿಯಲಿ,
ಬಡವರ ಬಗ್ಗರ ಜಠರಾಗ್ನಿಯಲಿ!
ಬಡವನ ಜಠರಾಗ್ನಿಯೆ ಬಡಬಾಗ್ನಿ!

ಬಡವನೆ ಕಲಿಯುಗದಂತ್ಯದ ಕಲ್ಕಿ !
ನೋಡುತಲಿದ್ದೆ;
ನೋಡುತಲಿದ್ದೆ !
ಕಣ್ಮರೆಯಾಯಿತು ಆ ದೃಶ್ಯ !
ಏನಿದು ಈ ದೃಶ್ಯ ?
ರಕ್ತದ ಜಲಪಾತ !
ನರಮಾಂಸದ ನಾತ !
ಧುಮು ಧುಮುಕುತಲಿದೆ ರಕ್ತದ ರಣಧುನಿ !
ಹೊರ ಹೊಮ್ಮುತ್ತಿದೆ ನರರಾರ್ತಧ್ವನಿ !
ಗಗನವು ರಕ್ತ ! ಭೂಮಿಯು ರಕ್ತ !
ನೋಡಿದರೆತ್ತಲು ರಕ್ತ ! ರಕ್ತ !
ಅಯ್ಯೋ ರಕ್ತ !
ಧುಮುಕುವ ಶೋಣಿತ ಗಿರಿಝರಿಯಲ್ಲಿ
ನರ ರುಂಡಗಳು
ನರ ಮುಂಡಗಳು
ಮುಂಗಾರ್ಗಾಲದ ಬಲ್ಸರಿಯಲ್ಲಿ
ಆಲಿಯ ಕಲ್ಲುಗಳುರುಳುರುಳ್ವಂತೆ
ಧುಮುಕುತಲಿರುವುವು ! ಬಂಡೆಗಳಂತೆ
ಧುಢುಂ ಧುಢುಂ ಧುಢುಮ್ಮನೆ ಬಿದ್ದು
ಹಾರುತಲಿವೆ ಬಿಸಿನೆತ್ತರು, ಸದ್ದು !
ಸುಂದರಿಯರ ತಲೆಮಂಡೆಗಳು,
ಶ್ರೀಮಂತರ ನೆಣದುಂಡೆಗಳು,
ಪಾಪದ ದೇಹ, ಪುಣ್ಯದ ದೇಹ,
ಗುಡಿಗೋಪುರಗಳು, ಧರ್ಮದ ಗೇಹ,
ತೇಲಿ, ತೇಲಿ, ತೇಲಿ, ತೇಲಿ
ನುಗ್ಗುತಲಿವೆ ಕಸಕಡ್ಡಿಯ ಹೋಲಿ !

ಯಾರವನಲ್ಲಿ? ದೂರದಲಿ,
ಧಾವಿಸಿ ಬರುವನು ಕ್ರೌರ್ಯದಲಿ !
ಅಸ್ಥಿಪಂಜರದಶ್ವವನೇರಿ,
ಬೆಳ್ಳಗೆ ಚಿಲಿಯುವ ದಾಡೆಯ ತೋರಿ.
ಅಸ್ಥಿಪಂಜರದಾಳವನು !
ಪ್ರೇತಸ್ವರೂಪಿ ಅದಾರವನು?
ಬಲಗಡೆ ಕೈಯಲಿ ಮಿಂಚಿನ ಕತ್ತಿ !

ಎಡಗಡೆ ಕೈಯಲಿ ಸಿಡಿಲಿನ ಬುತ್ತಿ !
ಎಲುಬಿನ ಕುದುರೆ ! ಎಲುಬಿನ ಆಳು !
ಇವನೆಯೆ ಕಲ್ಕಿ ? ಬಡವರ ಬಾಳು ?
ಮೂರ್ತಿವೆತ್ತಿಹ ಬಡವರ ಗೋಳು !
ನೋಡುತಲಿದ್ದೆ,
ಕೇಳುತಲಿದ್ದೆ !
"ಹಸಿವೇ ! ದಾಹಾ !" ಎನ್ನುತ ಬಂದು,
"ರಕ್ತಾ ! ರಕ್ತಾ ! ರಕ್ತಾ !" ಎಂದು
ನೆತ್ತರು ಹೊಳೆಯಲಿ ಧುಮುಕಿದನು,
ಕುದುರೆಯೊಡನೆ ಧುಮ್ಮಿಕ್ಕಿದನು !
ಕುಡಿದನು ರಕ್ತವ ಮೊಗೆಮೊಗೆದು,
ತಿಂದನು ತಲೆಗಳ ತೆಗೆತೆಗೆದು !
ಎಲುಬಿನ ಕುದುರೆಯು ಕೆನೆಯುತ್ತಿತ್ತು;
ನಾದವು ಬೊಮ್ಮವ ಬಿರಿವಂತಿತ್ತು !
ಎಲುಬಿನ ಮೂರ್ತಿಯು ಗಹಗಹಿಸಿತ್ತು,
ಗುಡುಗಿನ ಮಾಲೆಯೆ ಪೊರಮಡುತ್ತಿತ್ತು !
ಕುದುರೆಯು ಕುಡಿದೂ, ಆಳೂ ಕುಡಿದೂ !
ಬತ್ತಿತು ರಣಧುನಿ: ಇನ್ನೂ ದಾಹ !
ಮುಗಿದುವು ಹೆಣಗಳು: ಇನ್ನೂ ಹಸಿವೆ !
ಬಡವರ ಗಂಟಲ ಬೇಗೆಯ ದಾಹ !
ಬಡವರ ಹೊಟ್ಟೆಯ ಬೆಂಕಿಯ ಹಸಿವೆ !
ತುಂಬದು ಹೊಟ್ಟೆ;
ತುಂಬದೊ ಹೊಟ್ಟೆ ! . . .
ಕೆಟ್ಟೇ ! ಕೆಟ್ಟೇ !
ಅಯ್ಯೋ ಕೆಟ್ಟೇ !
ನೋಡಿದನೆನ್ನಂ ಬೆಟ್ಟದ ಮೇಲೆ !
ಬರುತಿಹನಯ್ಯೋ ! ಒಲ್ಲೇ ! ಒಲ್ಲೇ !
ನೋಡುತಲಿದ್ದೆ !
ಕಂಪಿಸಿ ಬಿದ್ದೆ !
"ಕಲ್ಕೀ ! ಕಲ್ಕೀ !" ಎನ್ನುತ ಚೀರಿ
ಕನಸೊಡೆದೆದ್ದೆ !
ಇನ್ನೆಲ್ಲಿಯ ನಿದ್ದೆ ?

ಕುಮಾರವ್ಯಾಸ

ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು!
ಭಾರತ ಕಣ್ಣಲಿ ಕುಣಿವುದು; ಮೆಯ್ಯಲಿ
ಮಿಂಚಿನ ಹೊಳೆ ತುಳುಕಾಡುವುದು!

ಆ ಕುರುಭೂಮಿಯು ತೋರುವುದು;
ಆ ರಣರಂಗದಲಿ
ಆ ಸಂಗ್ರಾಮದಲಿ
ಪಟುಭಟರಾರ್ಭಟ ಕೇಳುವುದು!
ಮೈ ನವಿರೇಳುವುದು!
ಹೊಳೆಯುವ ಕೈದುಗಳಾಟದಲಿ
ಕಲಿಗಳ ಕದನದ ಕೂಟದಲಿ
ತಾಗುವ ಗದೆಗಳ ಸಂಘಟ್ಟಣೆಯಲಿ
ರಥ ಚಕ್ರಧ್ವನಿ ಚೀತ್ಕಾರದಲಿ
ಸಾಯ್ವರ ಶಾಪದಲಿ
ಬೀಳ್ವರ ತಾಪದಲಿ
ನಸುಸೋತಿರುವರ ಕೋಪದಲಿ
ನೆರೆ ಗೆದ್ದಿಹರಾಟೋಪದಲಿ
ನುಗ್ಗುವ ಸೈನ್ಯದ ಹಾಹಾರವದಲಿ
ಕೆನೆಯುವ ಹಯುಗಳ ಹೇಷಾರವದಲಿ
ಕಿವಿ ಬಿರಿಯುವುದು!
ಎದೆ ಮುರಿಯುವುದು
ಬಸಿಯುವ ಮಜ್ಜೆಯ ಪಂಕದೊಳೂಡಿ
ಚಿಮ್ಮುವ ರಕ್ತದ ಬುಗ್ಗೆಯ ನೋಡಿ
ಕಣ್ಣೊಡೆಯುವುದು!
ಮೈ ನಡುಗುವುದು!

ಕೇಳಿರಿ! ಪಾರ್ಥನ ಸಾರಥಿಯು
ರಣ ಗೀತೆಯನು,
ರಣ ನೀತಿಯನು,

ಬೋಧಿಸುವನು ನಿರ್ಭೀತಿಯನು!
ಕುರುರಂಗದ ಶರಶಯ್ಯೆಯಲಿ
ಭೀಷ್ಮನು ಮಲಗಿಹನು!
ಹೆಣಗಳ ಬಣಬೆಯ ಮಂಚದಲಿ
ದ್ರೋಣನು ಬಿದ್ದಿಹನು!
ನೆತ್ತರವೀಂಟುತಲಿರುವನು ಭೀಮನು
ಅಯ್ಯೋ ನೋಡಲ್ಲಿ!
ರಥದಿಂದುರುಳುತಲಿರುವನು ಕರ್ಣನು,
ಹಾ! ಹಾ! ನೋಡಿಲ್ಲಿ!
ರಣ ಚಂಡಿಯು ಆ ಬೆಂಕಿಯ ಮಗಳು
ಹೆಣ್ಣಿನ ರೂಪದ ಬರಸಿಡಿಲವಳು!
ಮುಗುಳ್ನಗೆ ಬೀರುತ ನೋಡಲ್ಲಿ
ನಿಂತಿರುವಳು ರಣರಂಗದಲಿ
ದ್ರೌಪದಿ ಮುಡಿಗೆದರಿ!

ವೈಶಂಪಾಯನ ಸರಸಿಯ ತೀರದಿ,
ತೋರುವರಾರಲ್ಲಿ?
ಕೌರವದೇವನು ಸಿಡಿಲಾಗಿರುವನು
ಭೀಮನ ಸರಿಸದಲಿ!
ವೈರಿಯ ಎದೆಯನು
ಬಡಿಯುವ ಗದೆಯನು
ಮೇಲೆತ್ತಿರುವನು ನೋಡಲ್ಲಿ!
ಭೀಮನು ಬಿದ್ದನೆ?
ಕೌರವ ಗೆದ್ದನೆ?
ಮುಂದಾಗುವುದನು ಕಾಣಲ್ಲಿ!
ಇದಾವ ನ್ಯಾಯ?
ಏನನ್ಯಾಯ!
ಕೃಷ್ಣನ ಕುಹಕವ ನೋಡಲ್ಲಿ!
ಏನನು ನೋಡುವೆ? ತಡೆಯುವೆ ಏಕೆ?
ಕೌರವರಾಯನು ಮಡಿಯಲೆಬೇಕೆ?
ಯುವಕನೆ ತುಡುಕು ಕಠಾರಿಯನು!
ಹೊಡೆ ರಣಭೇರಿಯನು!
ನಡೆ, ನಡೆ! ಊದು ತುತೂರಿಯನು!
ಕರೆ ರಣಮಾರಿಯನು!

ಕುಮಾರವ್ಯಾಸನು ಹಾಡಿದನೆಂದರೆ,
ಕಲಿಯುಗ ದ್ವಾಪರವಾಗುವುದು !
ಭಾರತ ಕಣ್ಣಲಿ ಕುಣಿವುದು, ಮೈಯಲಿ
ಮಿಂಚಿನ ಹೊಳೆ ತುಳುಕಾಡುವುದು !
ಕಲಿ ಕೆಚ್ಚಾಗುವನು !
ಕವಿ ಹುಚ್ಚಾಗುವನು !

ಕುಕ್ಕನಳ್ಳಿ ಕೆರೆಯ ಮೇಲೆ

ಪಡುವಲೆಡೆಗೆ ಹೊರಳಿ ಹೊತ್ತು
ಕತ್ತಿ ಹೋಗಿದೆ;
ಸಂಜೆ ಮುಗಿಲ್ಗೆ ರಂಗನಿತ್ತು
ಮೂಕವಾಗಿದೆ;
ಮೊದಲಿನಿರುಳ ಕರಿಯ ಛಾಯೆ
ತಿರೆಗೆ ಬಿದ್ದಿದೆ;
ಭುವನ ಮನವ ಮೌನಮಾಯೆ
ಧ್ಯಾನಕದ್ದಿದೆ !
ಕುಕ್ಕನಳ್ಳಿ ಕೆರೆಯ ಮೇಲೆ
ಬೈಗುಗಪ್ಪು ಬಿಳ್ದ ವೇಳೆ
ಒಂಟಿಯಾಳು ಕುಳಿತಿಹೆನು
ಮಂದಿ ಬಿಟ್ಟ ದಡದಲಿ;
ಕಾಣುತಿರುವೆನೆಲ್ಲವನು,
ಹೊದರುಗಿಡದ ಬುಡದಲಿ.

ನೆತ್ತಿಮೇಲೆ ನೂರು ತಾರೆ
ತಾಣ ತಾಣದಿ
ಕೆತ್ತಿ ಮೆತ್ತಿದಂತೆ ತೋರೆ
ನಭ ವಿತಾನದಿ
ಷಷ್ಠಿ ಶಶಿ ಮರೀಚಿಧಾರೆ
ಹರಿದ ಹುಟ್ಟಿಯಿಂ
ಜೇನು ಸೋರುವಂತೆ ಸೋರೆ
ಜ್ಯೋತ್ಸ್ನ ವೃಷ್ಟಿಯಿಂ,

ಕಿರಿಯ ತೆರೆಯ ನಿರಿಯ ಸೀರೆ
ಧರಿಸಿ ಮೆರೆಯೆ ಕೊಳದ ನೀರೆ
ಚುಕ್ಕಿಯೊಡವೆಗಳನು ತೊಟ್ಟು
ಜೊನ್ನ ಹೊನ್ನ ಪೆಂಪಲಿ,
ಸಗ್ಗವೇತಕಾಚೆಯುಟ್ಟು
ಚೆನ್ನ ತಿಂಗಳಿಂಪಲಿ!

ಅಲ್ಲಿ ಬಳಿಯ ದಡದಮೇಲೆ
ರಂಜಿಸುತ್ತಿದೆ
ಬೀದಿಸಾಲು ದೀಪಮಾಲೆ;
ಮಿಂಚು ಹೆತ್ತಿದೆ!
ಇಲ್ಲಿ ಕೊಳದ ಹೃದಯದಲ್ಲಿ
ದಿವ್ಯಲೀಲೆ:
ಕಡೆದ ಉರಿಯ ಕೋಲುಗೊಳ್ಳಿ!
ಜ್ಯೋತಿಶಾಲೆ!
ಒಂದು ನಿಮಿಷಕೊಂದು ಪ್ರತಿ,
ನಿಮಿಷಕೊಂದು ಕಲೆಯ ಕೃತಿ;
ನೋಡೆ ನೋಡೆ ಬುಗ್ಗೆಯಂತೆ
ದೀಪ್ತಿ ಚಿಮ್ಮಿಬಿಟ್ಟಿದೆ!
ಕಾಣೆ ಕಾಣೆ ಕೋಲಿನಂತೆ
ಬೆಂಕಿ ಹೆಪ್ಪುಗಟ್ಟಿದೆ!

ನನಸಿಗಿಂತ ಕನಸೆ ಸವಿ!
ನೆರಳೆ ತಿರುಳನು
ಮೀರಿ ಮೆರೆಯುವಿದನು ಕವಿ
ಕಂಡು ಮರುಳನು!
ದೃಶ್ಯದಿ ತಲ್ಲೀನವಾಯ್ತು,
ದಿಟ್ಟಿ ಮರಳೆನು.
ಕತ್ತಲಾಯ್ತು; ಹೊತ್ತು ಹೋಯ್ತು;
ಮನೆಗೆ ತೆರಳೆನು.
ಗುಡಿಗೆ ಬರುವ ಭಕ್ತರಂತೆ
ಮನದಿ ಸುಳಿದು ನೂರು ಚಿಂತೆ
ಮಂಗಳಾರತಿಯನು ಬೆಳಗಿ
ಮಸುಳಿ ಮಾಯವಾದುವು

ಮೇಲೆ ದಿಟವದಿತ್ತು ತೊಳಗಿ,
ಕೆಳಗೆ ಸಟೆಯು ಮೋದವು!

ಎನಿತು ಸಾರಿ ಕುಳಿತು ಇಲ್ಲಿ
ಇದನು ನೋಡಿಹೆ?
ಎನಿತು ಸಾರಿ ಸೊಬಗನಿಲ್ಲಿ
ಪೂಜೆ ಮಾಡಿಹೆ?
ದಿನಕೆ ದಿನಕೆ ಬೆಳೆದು ಭಕ್ತಿ
ಮೋಹವಾಗಿದೆ;
ದೃಶ್ಯವಲ್ಲವಿದೂ ವ್ಯಕ್ತಿ
ಭಾವವಾಗಿದೆ!
ಸರೋವರದ ವೀಚಿಮಾಲೆ,
ಚಂದ್ರಸುಧಾರೋಚಿ ಲೀಲೆ,
ಪ್ರತಿಕೃತಿಗಳ ಕಲಾಶಾಲೆ,
ಕೆರೆಯು ಕಾವ್ಯ ಮನದಲಿ
ಬಹವು ಲಲಿತ ಭಾವದೋಲೆ
ಕ್ಷಣ ಕ್ಷಣ ಕ್ಷಣದಲಿ!

ಭುವನ ಕವಿಯು ಭವ್ಯಮನದಿ
ಮೂಡೆ ಮಂತ್ರವು
ತೋರ್ಪುದೆಮಗೆ ನಿಯಮ ಗುಣದಿ
ಪ್ರಕೃತಿ ಯಂತ್ರವು.
ನನ್ನ ಕಣ್ಣೊಳಿರುವವೋಲೆ
ಕೆರೆಯು ಕಣ್ಣಲಿ
ತಾರೆ ಶಶಿಯು ಮೇಘಮಾಲೆ!
ಜಡವಿದೆನ್ನಲಿ?
ಸರೋವರಕೆ ಜೀವವಿದೆ!
ರಸಾವೇಶ ಭಾವವಿದೆ!
ಪಡಿನೆಳಲ್ಗಳದರ ಚಿಂತೆ!
ಕೆರೆಯ ಹೃದಯಕುಸಿರಿದೆ!
ನನ್ನ ಬಾಳೊಳೆಂತುಟಂತೆ
ಹಳದಿ ಕೆಂಪು ಹಸುರಿದೆ!

ತಾವರೆಯ ತೇರು

ಭಾವನೆಯ ಬಾನಿನಲಿ ಇಂದ್ರಧನುರ್ಯಾನದಲಿ
ನಿನ್ನೊಡನೆ ಕುಳಿತು ನಾ ತೇಲುತಿರುವೆ;
ಮೋಹನದ ಮುಗುಳುನಗೆಯನು ಬೀರಿ, ಸುಂದರಿಯೆ,
ನೀನಗ್ನಿ ಮೇಘವನೆ ಹೋಲುತಿರುವೆ!
ನಾನೇರಿದೆತ್ತರವ ನೋಡಿ
ಚಿತ್ತ ಹಿಗ್ಗುತಿದೆ;
ಬೀಳುವೆನೊ ಎಂಬಳುಕು ಮೂಡಿ
ಮತ್ತೆ ಕುಗ್ಗುತಿದೆ.
ನಿನ್ನ ಮೊಗದಲಿ ಮಾಸದಿಹ ಮುಗುಳುನಗೆಯೊಂದು
ಸರ್ವದಾ ನವಿಲಂತೆ ನಲಿಯುತಿಹುದು.
ನಿನ್ನ ಮೌನದ ಅರ್ಥವೇನಿಹುದೊ ಅದನರಿಯೆ.
ನಮ್ಮ ತಾವರೆ ತೇರು ತೇಲುತಿಹುದು!

ನೀನಂದು ಕನಕ ರಥವನು ತಂದು ಬಾ ಎಂದು
ಕರೆದಂದು ನಾನು ದೂಳಾಡುತಿದ್ದೆ.
ಹೊಂಬಿಸಿಲು ಹೊಮ್ಮಿತ್ತು, ಖಗ ಗಾನ ಚಿಮ್ಮಿತ್ತು,
ಕಣ್ದೆರೆದುಕೊಂಡಿತ್ತು ಜಗದ ನಿದ್ದೆ!
ತೇರಿನಾ ಬಣ್ಣವನು ಕಂಡೆ
ಮೊದಲು ಮರುಳಾದೆ;
ಹುಡುಗಾಟ ಎಂದಂದುಕೊಂಡೆ
ಆದನೇರಿಹೋದೆ!
ಎಲ್ಲಿಗೊಯ್ಯುವೆ ಎಂದು ನಾ ಕೇಳಲಿಲ್ಲಂದು,
ಕೇಳಿದರೆ ನೀನು ನುಡಿಯದಿಹೆ ಇಂದು.
ಬರಿದೆ ಬೆರಳೆತ್ತಿ ತೋರುವೆ; ಮುಂದೆ ನೋಡಿದರೆ
ಹಬ್ಬಿಹುದು ನೀಲಿಮೆಯ ಶೂನ್ಯ ಸಿಂಧು!

ಶಶಿ ಸೂರ್ಯ ಗ್ರಹ ನಿಚಯ ತಾರಾಖಚಿತ ನಭದಿ
ಹಾರುತಿದೆ ನಮ್ಮಾ ಕಲಾವಿಮಾನ;
ಮುಂದೆನಿತು ದೂರಕೋ? ಎಂದಾವ ತೀರಕೋ?
ತೇಲುತಿಹುದೀ ನಿನ್ನ ಕಮಲಯಾನ!

ಸಂಶಯದಿ ಕಂಪಿಸುವುದೊಮ್ಮೆ
ನನ್ನಾತ್ಮಪಕ್ಷಿ;
ನಿನ್ನಯ ಮುಗುಳ್ನಗೆಯು ನೆಮ್ಮೆ
ನನಗೆ ಗುರುಸಾಕ್ಷಿ!
ಹಗಳಿರುಳು ಬೆಳಗು ಬೈಗುಗಳುರುಳಿ ಸಾಗುತಿವೆ
ಗಗನದಲಿ ರಂಗೆರಚಿ ಬಂದು ನಿಂದು!
ನಿನ್ನ ಸದ್ದಿಲಿ ಸನ್ನೆಯಲಿ ಮುಂದೆ ನೋಡಿದರೆ
ಹಬ್ಬಿಹುದು ನೀಲಿಮೆಯ ಶೂನ್ಯ ಸಿಂಧು!

ತೇನೆ ಹಕ್ಕಿ

ಜ್ಯೋತ್ಸ್ನ ತುಂಬಿ ತುಳುಕಿ ಹರಿಯೆ
ಸ್ನಿಗ್ಧ ಶರತ್ಕಾಲದಿ,
ಮುಗಿಲು ರಂಗವಲ್ಲಿ ಬರೆಯೆ
ವ್ಯೋಮ ಪಟದ ನೀಲದಿ,
ವಿಯತ್ತಳದಿ ಮೌನಮುದ್ರೆ
ಜಗನ್ಮುಖದಿ ಶಾಂತ ನಿದ್ರೆ
ಮೆರೆಯೆ ಕೂಗಿ ಕರೆವೆ ನೀನು,
ಮುದ್ದು ಜೊನ್ನವಕ್ಕಿಯೆ;
ಮೇಲೆ ನೋಡೆ ಬರಿಯ ಬಾನು;
ಕಾಣೆ ನೀನು ಹಕ್ಕಿಯೆ!

ದೂರ ಹಾರಿ ಕರೆವೆಯೊಮ್ಮೆ
ಸ್ವರ್ಗವಾಣಿಯಂದದಿ
ಬಳಿಗೆ ಸುಳಿದು ಉಲಿವೆಯೊಮ್ಮೆ
ಮರ್ತ್ಯವೀಣೆಯಂದದಿ.
ಏನು ಮೋಹ, ಏನು ಮಾಯೆ!
ನಿನ್ನ ಕಲೆಯು ನೆರಳ ಛಾಯೆ
ನನ್ನ ಕಲೆ, ತೇನೆ ಹಕ್ಕಿ!
ನಿನಗೆ ಮುಕ್ತಿಯಾಗಿದೆ.
ನುಡಿಯ ಬಲೆಯ ಸೆರೆಗೆ ಸಿಕ್ಕಿ
ನನಗೆ ದಾಸ್ಯವಾಗಿದೆ.

ತ್ಯಾಗಿಯಂತೆ ನೆಲವನುಳಿಯೆ:
    ಮಮತೆ ಮರಿಯ ಗೂಡಿದು.
ಭೋಗಿಯಂತೆ ನಭವ ಹಳಿಯೆ:
    ಸಿರಿಯು ತವರು ಬೀಡದು!
ಹಗಲಿನಲ್ಲಿ ನೆಲಕೆ ಸೇರಿ,
ಇರುಳಿನಲ್ಲಿ ಬಾನ್ಗೆ ಹಾರಿ,
ಬಿಸಿಲು ತಂಪುಗಳನು ಮೀರಿ
    ಸಮತೆಯಿಂದ ನಡೆವುದಂ
ಕಲಿಸು ನನಗೆ ಮೊದಲು; ಕೊನೆಗೆ
    ನೆಲ ಬಾನ್ಗಳ ಪಡೆವುದಂ!

ದೋಣಿ ಹಾಡು

ದೋಣಿ ಸಾಗಲಿ, ಮುಂದೆ ಹೋಗಲಿ, ದೂರ ತೀರವ ಸೇರಲಿ!
ಬೀಸು ಗಾಳಿಗೆ ಬೀಳುತೇಳುವ ತೆರೆಯ ಮೇಗಡೆ ಹಾರಲಿ!

ಹೊನ್ನ ಗಿಂಡಿಯ ಹಿಡಿದು ಕೈಯೊಳು ಹೇಮವಾರಿಯ ಚಿಮುಕಿಸಿ
ಮೇಘಮಾಲೆಗೆ ಬಣ್ಣವೀಯುತ ಯಕ್ಷಲೋಕವ ವಿರಚಿಸಿ,
ನೋಡಿ, ಮೂಡಣದಾ ದಿಗಂತದಿ ಮೂಡುವೆಣ್ಣಿನ ಮೈಸಿರಿ
ರಂಜಿಸುತ್ತಿದೆ! ಚೆಲುವೆಯಾಕೆಗೆ ಸುಪ್ರಭಾತವ ಬಯಸಿರಿ!

ಕೆರೆಯ ಅಂಚಿನ ಮೇಲೆ ಮಿಂಚಿನ ಹನಿಗಳಂದದಿ ಹಿಮಮಣಿ
ಮಿಂಚುತಿರ್ಪುವು ಮೂಡುತೈತರೆ ಬಾಲಕೋಮಲ ದಿನಮಣಿ!
ಹಸುರು ಜೋಳದ ಹೊಲದ ಗಾಳಿಯು ತೀಡಿ ತಣ್ಣಗೆ ಬರುತಿದೆ,
ಹುದುಗಿ ಹಾಡುವ ಮತ್ತಕೋಕಿಲ ಮಧುರವಾಣಿಯ ತರುತಿದೆ!

ದೂರ ಬೆಟ್ಟದ ಮೇಲೆ ತೇಲುವ ಬಿಳಿಯ ಮೋಡವ ನೋಡಿರಿ:
ಅದನೆ ಹೋಲುತ, ಅಂತೆ ತೇಲುತ ದೋಣಿಯಾಟವನಾಡಿರಿ!
ನಾವು ಲೀಲಾಮಾತ್ರ ಜೀವರು. ನಮ್ಮ ಜೀವನ ಲೀಲೆಗೆ!
ನಿನ್ನೆ ನಿನ್ನೆಗೆ. ಇಂದು ಇಂದಿಗೆ. ಇರಲಿ ನಾಳೆಯು ನಾಳೆಗೆ!

ಮರದ ನೆಳಲು

ಅದೋ ಮತ್ತೆ! ಆ ಮರದ ಛಾಯೆ!
ಎಂದಿನಂತೆಯೆ ಬಿದ್ದು ಸಾಯುತಿಹುದಲ್ಲಿ!
ಈ ನಿಯಮದಾಳ್ವಿಕೆಯು ನನ್ನ ಪೀಡಿಸುತಲಿದೆ
ಪೂರ್ವಜನ್ಮದ ಮಹಾ ಅಭಿಶಾಪದಂದದಲಿ.
ನಿಯಮಗಳ ನುಂಗಿ ಜೀರ್ಣಿಸಿ ಮಿೀರಲೆನ್ನೆದೆ
ಕಾತರದಿ ಕಾಯುತಿದೆ—

ಆ ಮರದ ಛಾಯೆ,
ಮಸಿಯು ಚೆಲ್ಲಿದ ತೆರದಿ ಹಸುರು ಬಯಲಿನ ಮೇಲೆ
ನೀಳವಾಗೊರಗಿಹುದು ಅಪಶಕುನ ರೂಪದಲಿ.
ಬಗೆಯ ಕದಡುವುದದರ ಮುಗ್ಧಮೌನದ ವಾಣಿ
ಮೊರೆಯುತೆನ್ನೆದೆಗಾವುದೋ ನಾನು ಮರೆತಿರುವ
ಸ್ವಾತಂತ್ರ್ಯ ಸಂದೇಶವನು ಸಾರಿ. ಬಿದ್ದಿಹುದು
ಬಯಲಿನಲಿ ವಿಕ್ರೀತ ದಾಸನೊಲು, ಬಿಡುಗಡೆಯ
ಪಡೆಯಲಾರದೆ ಬಯಸಿ! ದಿನದಿನವು ನೋಡುತಿಹೆ;
ದಿನದಿನವು ಬೆಳಗು ಹಗಲೆನ್ನದೆಯೆ, ಬಾನಿನಲಿ
ರವಿ ಹೊಳೆಯುವಾಗೆಲ್ಲ, ಮರದ ಕಾಲ್ಚೆಸೆಯಲ್ಲಿ
ಬಿದ್ದು ಬೇಸರದೆ ಸಾಯುತ್ತಿಹುದು. ಶಿವ ಶಿವಾ,
ಒಂದು ಕ್ಷಣವಾದರೂ ವೈವಿಧ್ಯಕಾದರೂ
ಬಿಸಿಲಿದ್ದು ಮರವಿದ್ದು ನೆಳಲಿರದೆ ಹೋಗದೆ!

ಎಲ್ಲಿ ನೋಡಿದರೆಲ್ಲರೂ ದಾಸರೆಯೆ. ಶಿವಾ
ಈಶರೊಬ್ಬರ ಕಾಣೆ! ಬೆಂಕಿಗಾವಾಗಲೂ
ಹೊಳೆವ ದಹಿಸುವ ದಾಸ್ಯ; ಗಾಳಿಗಾವಾಗಲೂ
ಬೀಸಿ ಚಲಿಸುವ ದಾಸ್ಯ; ನಿಂತ ನೀರಿಗೆ ಸದಾ
ದಡದ ವಸ್ತುಗಳ ಮರುಬಿಂಬಿಸುವ ದಾಸ್ಯ!
ದಾಸ್ಯದಾಲಯವೀ ಮಹಾವಿಶ್ವ! ಎಲ್ಲವೂ
ವಜ್ರಬಂಧನಗ್ರಸ್ತವಾಗಿಹುದು! ಒಂದು ದಿನ
ನೀರು ಸುಡಬಾರದೇ? ಒಂದು ಸಲವಾದರೂ
ಕಲ್ಲು ಹಕ್ಕಿಯ ತೆರದಿ ಹಾರಾಡಬಾರದೆ?

ಒಂದು ಕ್ಷಣಕಾದರೂ ದಾಸ್ಯ ನಿಯಮಗಳಳಿದು
ಸ್ವಾತಂತ್ರ್ಯ, ಸ್ವಾಚ್ಛಂದ್ಯ, ಹುಚ್ಚಾಟವಾಗದೇ?
ಎಲ್ಲ ಹಾಳಾದರೂ ಆಗಿ ಹೋಗಲಿ ಇಂದೆ!
ಬೇಕಾದುದೆನಗೆ ಆ ಸ್ವಾತಂತ್ರ್ಯಶ್ರೀಯೊಂದೆ!

ಭರತ ಭೂಮಿ ನನ್ನ ತಾಯಿ

ಭರತ ಭೂಮಿ ನನ್ನ ತಾಯಿ,
ನನ್ನ ಪೊರೆವ ತೊಟ್ಟಿಲು,
ಜೀವನವನೆ ದೇವಿಗೆರೆವೆ
ಬಿಡುತೆ ಗುಡಿಯು ಕಟ್ಟಲು.

ತುಹಿನ ಗಿರಿಯು ನಿರಿಯು ಮುಡಿಯ
ಹಿಡಿಯು ಕಡಲು ತೊಳೆಯುವಡಿಯ
ಪೈರು ಪಚ್ಚೆ ಪಸುರಿನುಡೆಯ
ಭರತ ಭೂಮಿ ನನ್ನ ತಾಯಿ,
ನನ್ನ ಪೊರೆವ ತೊಟ್ಟಿಲು.
ಜೀವನವನೆ ದೇವಿಗೆರೆವೆ
ಬಿಡುತೆ ಗುಡಿಯು ಕಟ್ಟಲು.

ಸಿಂಧು, ಯಮುನೆ, ದೇವಗಂಗೆ,
ತಪತಿ, ಕೃಷ್ಣೆ, ಭದ್ರೆ, ತುಂಗೆ,
ಸಲಿಲ ತೀರ್ಥ ಪುಣ್ಯರಂಗೆ
ಭರತ ಭೂಮಿ ನನ್ನ ತಾಯಿ
ನನ್ನ ಹೊರೆವ ತೊಟ್ಟಿಲು.
ಜೀವನವನೆ ದೇವಿಗೆರೆವೆ
ಬಿಡುತೆ ಗುಡಿಯು ಕಟ್ಟಲು.

ಮತದ ಬಿರುಕುಗಳನು ತೊರೆವೆ,
ನುಡಿಗಳೊಡಕುಗಳನು ಮರೆವೆ:
ತೊತ್ತ ತೊಡಕುಗಳನು ಬಿರಿವೆ;
ಜೀವನವನೆ ದೇವಿಗೆರೆವೆ
ಬಿಡುತೆ ಗುಡಿಯು ಕಟ್ಟಲು.

ಭರತಭೂಮಿ ನನ್ನ ತಾಯಿ
ನನ್ನ ಪೊರೆವ ತೊಟ್ಟಿಲು;
ಸ್ವಾತಂತ್ರ್ಯದ ಸ್ವರ್ಗಕೇರೆ
ಪುಣ್ಯದೇಣಿ ಮೆಟ್ಟಿಲು !

ಮೆಟ್ಟುವ ನೆಲ ಕರ್ಣಾಟಕ

ಎಲ್ಲಾದರು ಇರು; ಎಂತಾದರು ಇರು;
ಎಂದೆಂದಿಗು ನೀ ಕನ್ನಡವಾಗಿರು.
ಕನ್ನಡ ಗೋವಿನ ಓ ಮುದ್ದಿನ ಕರು,
ಕನ್ನಡ ತನವೊಂದಿದ್ದರೆ ನೀನಮ್ಮಗೆ ಕಲ್ಪತರು !

ನೀ ಮೆಟ್ಟುವ ನೆಲ-ಅದೆ ಕರ್ನಾಟಕ;
ನೀನೇರುವ ಮಲೆ-ಸಹ್ಯಾದ್ರಿ.
ನೀ ಮುಟ್ಟುವ ಮರ-ಶ್ರೀ ಗಂಧದ ಮರ;
ನೀ ಕುಡಿಯುವ ನೀರ್-ಕಾವೇರಿ.

ಪಂಪನ ನೋದುವ ನಿನ್ನಾ ನಾಲಗೆ
ಕನ್ನಡವೇ ಸತ್ಯ.
ಕುಮಾರವ್ಯಾಸನನಾಲಿಪ ಕಿವಿಯದು
ಕನ್ನಡವೇ ನಿತ್ಯ.

ಹರಿಹರ ರಾಘವರಿಗೆ ಎರಗುವ ಮನ,
ಹಾಳಾಗಿಹ ಹಂಪೆಗೆ ಕೊರಗುವ ಮನ,
ಪೆಂಪಿನ ಬನವಾಸಿಗೆ ಕರಗುವ ಮನ;

ಬೆಳ್ಗೊಳ ಬೇಲೂರ್ಗಳ ನೆನೆಯುವ ಮನ,
ಜೋಗದ ಜಲಪಾತದಿ ಧುಮುಕುವ ಮನ,
ಮಲೆನಾಡಿಗೆ ಹೊಂಪುಳಿವೋಗುವ ಮನ;

ಕಾಜಾಣಕೆ ಗಿಳಿ ಕೋಗಿಲೆಯಿಂಪಿಗೆ,
ಮಲ್ಲಿಗೆ ಸಂಪಗೆ ಕೇದಗೆ ಸೊಂಪಿಗೆ,
ಮಾವಿನ ಹೊಂಗೆಯ ತಳಿರಿನ ತಂಪಿಗೆ

ರಸರೋಮಾಂಚನಗೊಳುವಾತನ ಮನ
ಎಲ್ಲಿದ್ದರೆ ಏನ್? ಎಂತಿದ್ದರೆ ಏನ್?
ಎಂದಿಂದಿಗು ತಾನ್—
ಕನ್ನಡವೇ ಸತ್ಯ
ಕನ್ನಡವೇ ನಿತ್ಯ!
ಅನ್ಯವೆನಲದೆ ಮಿಥ್ಯಾ!

ಅಂತರತಮ ನೀ ಗುರು

ಅಂತರತಮ ನೀ ಗುರು,
ಹೇ ಆತ್ಮತಮೋಹಾರಿ!
ಜಟಿಲ ಕುಟಿಲತಮ ಅಂತರಂಗ ಬಹು
ಭಾವ ವಿಪಿನ ಸಂಚಾರಿ,

ಅಂತರತಮ ನೀ ಗುರು,
ಹೇ ಆತ್ಮತಮೋಹಾರಿ!
ಜನುಮ ಜನುಮ ಶತಕೋಟಿ ಸಂಸ್ಕಾರ
ಪರಮ ಚರಮ ಸಂಸ್ಕಾರಿ,

ಅಂತರತಮ ನೀ ಗುರು,
ಹೇ ಆತ್ಮತಮೋಹಾರಿ!
ಪಾಪ ಪುಣ್ಯ ನಾನಾ ಲಲಿತ ರುದ್ರ ಲೀಲಾ
ರೂಪ ಅರೂಪ ವಿಹಾರಿ,
ಅಂತರತಮ ನೀ ಗುರು,
ಹೇ ಆತ್ಮತಮೋಹಾರಿ!

ಶ್ರವಣಬೆಳ್ಗೊಳದ ಗೋಮಟೇಶ್ವರನ ಸಾನ್ನಿಧ್ಯದಲ್ಲಿ

ಆರೊ ತೆಕ್ಕನೆ ತುಡುಕಿ ಬಾಯ್ ಮುಚ್ಚಿ ಹಿಡಿದಂತೆ
ಮೌನಭಾರದಿ ಮಾತು ಮೂರ್ಛೆ ಹೋಗಿಹುದಿಲ್ಲಿ
ಶ್ರೀ ಗೋಮಟೇಶ್ವರನ ಭವ್ಯ ಸನ್ನಿಧಿಯಲ್ಲಿ!

ಗಾಂಭೀರ್ಯ ಗೌರವದ ಹೊನಲು ಚಿತ್ತವನೊತ್ತಿ
ತುಳುಕುತಿದೆ ಹೃದಯದಲಿ. ಮಣಿಯುತಿದೆ ದೈನ್ಯದಲಿ
ನನ್ನಾತ್ಮವಲರಿನ ಹೊರೆಗೆ ಬಳ್ಳಿ ಮಣಿವಂತೆ
ತಿರೆಯಡಿಗೆ. ಧ್ಯಾನ ಮೂರ್ತಿಯ ಮೊಗದಿ ಕಣ್ದಿಟ್ಟಿ
ನಟ್ಟು ನಿಷ್ಪಂದವಾಗುತಿದೆ. ಮುಗಿಲನು ತಿವಿದು
ಬಾನನು ಮುಟ್ಟಿ ನಿಲುವ ಹೆಬ್ಬೆಟ್ಟದೆಡೆಯಲ್ಲಿ,
ಮುಸುಗಿ ಬಹ ಬೈಗುಮಬ್ಬಿನಲಿ, ತಾನೊಬ್ಬನೆಯೆ
ನಿಂತದರ ನೆತ್ತಿಯ ಕಡೆಗೆ ನೋಡುತಿರುವಂತೆ;
ಕಣ್ಗೆ ದಿಟ್ಟಿಯ ಹೊಟ್ಟೆ ಡೊಳ್ಳಾಗಿ ಬಿರಿವುದೆನೆ
ಹಬ್ಬಿ ಹಸರಿಸಿ ಮೇರೆ ಮೀರುವಾ ಕಡಲಿನೆಡೆ
ನಿಂತೊಬ್ಬನೆಯೆ ನೋಡುವಂತೆ; ಕದ್ದಿಂಗಳಲಿ
ಕಲ್ಗತ್ತಲೆಯ ರುಂದ್ರ ರಾತ್ರಿಯಲಿ ಶತಕೋಟಿ
ಕೋಟಿ ಪ್ರಯುತ ನಿಯುತ ಸಂಖ್ಯೋಪಸಂಖ್ಯೆಯಾ
ನಕ್ಷತ್ರಸಾಂದ್ರ ವಿಸ್ತೃತ ನಭವನೇಕಾಂಗಿ
ನೋಳ್ಪಂತೆ-ಭವ್ಯತೆಯ ಭಾವದಾವೇಶದಿಂ
ರೋಮಾಂಚವಾಗುತಿಹುದೆನ್ನ ಮೈ! ಅಮೃತದಲಿ
ಮುಳುಗಿ ಮೃತವಾಗುತಿದೆ ನಾನೆಂಬ ವ್ಯಕ್ತಿಕ್ರಿಮಿ!

ದೈತ್ಯ ಕಲೆಯಿದು; ದಿವ್ಯ ದೈತ್ಯಕಲೆ! ಕಲ್ಲಿನಲಿ,
ನಿರ್ಜೀವ ಜಡತೆಯಲಿ, ನಗೆಗೆಡೆಯ ನಗ್ನತೆಗೆ,
ಇಂಥ ಭೀಮಾಕೃತಿಗೆ, ಚಿರಜೀವಗಾಂಭೀರ್ಯ
ಭವ್ಯತಾ ಮುದ್ರೆಯನ್ನೊತ್ತಿದೀ ದಿವ್ಯಕಲೆ
ದೈತ್ಯಕಲೆ! ಎದೆಯಿದ್ದರಿಲ್ಲಿ ನಗು ನೋಡುವಂ,
ಬತ್ತಲೆಗೆ ಕಿಲಕಿಲನೆ ನಗುವ ಓ ಲಘು ಹೃದಯಿ!
ಎಳ್ಳುನೀರಹುದಿಲ್ಲಿ ಹೀನತೆಗೆ ನೀಚತೆಗೆ;
ಬೆಳೆನೀರು ಭವ್ಯತೆಗೆ, ದಿವ್ಯತೆಗೆ, ಶಿಶುಮುಖದ
ಮುಗ್ಧತೆ, ಸಮಾಧಿಸ್ಥನಾನಂದ ಗಾಂಭೀರ್ಯ,
ವಜ್ರದ ಕಠೋರತೆ, ಕುಸುಮ ಕೋಮಲತೆ, ಮೇಣ್
ಸತ್ಯದ ರಹಸ್ಯ, ಬ್ರಹ್ಮನ ಅನಿರ್ವಚನೀಯತೆ
ಎಲ್ಲ ಮೈವೆತ್ತಿರುವುವೀ ದಿಗಂಬರ ಮಹಾ
ನಿರ್ವಾಣ ಮೂರ್ತಿಯಲಿ: ಇಲ್ಲಿ ಬಾಯಿಗೆ ಬೀಗ!
ನುಡಿಗೆ ಮೌನದ ಸಿಡಿಲು ಹೊಡೆದಂತಿರುವುದೀಗ!
ಅರ್ಹಂತ ಗುರುದೇವ, ಓ ಗೋಮಟೇಶ್ವರನೆ,
ನಗ್ನತೆಗೆ ನಾಚದಿಹೆ; ಬತ್ತಲೆಗೆ ಬೆದರದಿಹೆ.

ಸುವರ್ಣಸಂಪುಟ/೧೫೫

ಹುಸಿ ನಾಗರಿಕ ವೇಷದಿಂದಲ್ಪತೆಯ ಮುಚ್ಚಿ
ಮೆರಗು ಬೆರಗಿನ ಮೋಸಗೈಯದಿಹೆ. ಮುಚ್ಚು ಮರೆ
ತಾನೇಕೆ ಅಲ್ಪತಾ ಲವಲೇಶವಿಲ್ಲದೆಯೆ
ಸರ್ವತ್ರ ಸರ್ವದರೊಳಂ ಭೂಮನಾಗಿರುವ
ಮಹತೋ ಮಹೀಯನಿಗೆ ನಿನಗೆ? ಗುಟ್ಟಿನ ರಟ್ಟು
ಕೇಡು ನೀಚತೆ ಹೀನತೆಯ ಹೊತ್ತಗೆಗೆ ಬೇಕು;
ಗಗನ ವಿಸ್ತಾರದೌದಾರ್ಯಕದು ಬೇಕೆ? ಸಾಕೆ?
ನಿಜ ಮಹಿಮೆ ನಗ್ನತೆಗೆ ಅಳುಕಬೇಕಾಗಿಲ್ಲ.
ಬಡಕಲಿಗುಡುಗೆ ಬೇಕು, ಕಲಿಯ ಮೈಗೇತಕದು?
ಕೀಳ್ಗಳಿಗೆ ವೇಷವಿಲ್ಲದೆಯೆ ಗೌರವವಿಲ್ಲ;
ದೊರೆಯನೆಳೆತಂದು ಬಟ್ಟೆಯ ಬಿಚ್ಚಿ ಮುಡಿಗಳಚಿ
ನೋಡಿದರೆ ತಿಳಿಯುವುದು ವೇಷಕೋ ವ್ಯಕ್ತಿಗೋ
ಆರ್ಗೆ ಗೌರವವೆಂದು! ಉಡುಗೆ ತೊಡುಗೆಯೊ ಆಳೊ
ದಿಟದರಸು ಯಾರೆಂದು! ಎನಿಬರೆಮ್ಮೊಳಗಿಹರ್
ಬತ್ತಲಾಗಿಯುಮಿಳೆಯ ಗೌರವಂಬಡೆವವರ್
ಕಾವಿಯಿಂ ಗುರುವಾಗಿ, ಹೊನ್ನಿನಿಂ ದೊರೆಯಾಗಿ,
ರಣದುಡುಗೆ ದೆಸೆಯಿಂದೆ ರಣಧೀರನೆಂದಾಗಿ,
ಜನಿವಾರದಿಂದೆ ಬ್ರಾಹ್ಮಣನಾಗಿ, ಬೂದಿಯಿಂ
ಶಿವಭಕ್ತನಾಗಿ, ವೈಷ್ಣವನಾಗಿ ನಾಮದಿಂ
ಮೆರೆದುರಿವರೆಲ್ಲರೂ ಬಂದು ಕಲಿಯಲಿ ಇಲ್ಲಿ
ನಗ್ನತೆಯ ಮಹಿಮೆಯಂ ನಿನ್ನ ಸಾನ್ನಿಧ್ಯದಲ್ಲಿ!
ಬೋಳ್, ಕಾವಿ, ರುದ್ರಾಕ್ಷಿ, ವೈರಮುಡಿ, ಜರಿಯಮಡಿ,
ಕತ್ತಲೆಯ ಗರ್ಭಗುಡಿ ಮೊದಲಾದುವೆಲ್ಲವಂ
ತೊರೆದು, ಸತ್ಯದ ದಿಗಂಬರತೆಯೊಂದನೆ ಒಲಿದು,
ಭೂಮ್ಯಂತರಿಕ್ಷಗಳ ಸಂಧಿಸುತ ನಿಂತಿರುವ,
ಸೌಂದರ್ಯದಾಚೆಯಾ ಭವ್ಯತಾ ಸೀಮೆಯಲಿ
ನೆಲೆಸಿರುವ, ಓ ಎನ್ನ ನಗ್ನ ಗುರುದೇವ, ನಮೋ!
ನಿನ್ನ ಈ ದಿವ್ಯ ನಿರ್ಲಕ್ಷತಾ ಸ್ಥಿರತೆಯಂ,
ಭೂಮತೆಯ ಭವ್ಯತೆಯ ಬ್ರಹ್ಮಗಾಂಭೀರ್ಯಮಂ
ದಯಪಾಲಿಸೆನಗೆಂದಿಗೂ ಮಾಸದಂದದಲಿ,
ಮೇಣನವರತ ಬೆಳಗುವ್ವೋಲ್, ಶ್ರೀ ಗೋಮಟೇಶ!

ಶ್ರೀ ಗುರು ಚರಣಕೆ

ತುಳಿ! ತುಳಿ! ಹತ್ತಿತುಳಿ!
ಮತ್ತೆ ತುಳಿ, ಒತ್ತಿ ತುಳಿ,
ಅಹಂಕಾರವಳಿಯಲಿ!
ನಾನು ಎಂಬುದೆಲ್ಲ ಉದುರಿ
ನೀನು ಮಾತ್ರ ಉಳಿಯಲಿ!

ಹೆಡೆಹೆಡೆಗಳನೆಡೆಬಿಡದೆಯೆ
ಕಾಳೀಯನ ತುಳಿದಂದದಿ
ಗೋವಿಂದನ ಚರಣ
ತನ್ನನಿತೂ ವಿಷ ವಮನದಿ
ನನ್ನಂತಃಕರಣ
ಮಮತಾಫಣೆ ಲಯಹೊಂದುತೆ
ಬರಲಮೃತದ ಮರಣ!

ತುಳೀ ಹತ್ತಿ! ತುಳೀ ಒತ್ತಿ!
ಅಹಂಕಾರವಳಿಯಲಿ!
ನನ್ನ'ಸತ್ತ್ವದೆಲ್ಲ ಸತ್ತು
ನಿನ್ನ ಸೊತ್ತು ಉಳಿಯಲಿ!

ಸದಾ

ನಿನ್ನ ಆಶೀರ್ವಾದ ಪರಿವೇಷ ಮುತ್ತಿರಲಿ
ನನ್ನನು ಸದಾ;
ನನ್ನ ಭಕ್ತಿಯ ಬಳ್ಳಿ ಮಲರಾಂತು ಸುತ್ತಿರಲಿ
ನಿನ್ನನು ಸದಾ.
ನನ್ನ ಹೃದಯದ ತುಂಬಿ ನಿನ್ನಡಿಯ ಮಧುರತೆಗೆ
ಹಾರಲಿ ಸದಾ;
ನನ್ನ ಸಾಂತತೆ ನಿನ್ನಂತತೆಯನೆಡೆಬಿಡದೆ
ಹೀರಲಿ ಸದಾ.

ನನ್ನ ವ್ಯಕ್ತಿತೆ ನಿನ್ನ ವ್ಯಕ್ತಿತ್ವಸಾಗರದಿ
ತೇಲಲಿ ಸದಾ;
ನನ್ನ ಕರ್ಮಗಳೆಲ್ಲ ನಿನ್ನ ಋತ ಮರ್ಮವನೆ
ಹೋಲಲಿ ಸದಾ.
ನನ್ನ ನ್ಯೂನತೆಯೆಲ್ಲ ನಿನ್ನ ಪೂರ್ಣತೆಗಾಗಿ
ನೋಯಲಿ ಸದಾ.
ನನ್ನ ನಶ್ವರವೆಲ್ಲ ನಿನ್ನ ನಿತ್ಯತೆಗಾಗಿ
ಸಾಯಲಿ ಸದಾ!

ಹಾರೈಸು

ಹಾರೈಸು ಹಾರೈಸು ಹಾರೈಸು, ಜೀವ;
ಹಾರೈಸು ನೀನಾಗುವನ್ನೆಗಂ ದೇವ!

ಹಾರೈಸಿ ಹಾರೈಸಿ ಹಾರೈಸಿ
ಅನ್ನ ತಾನಾದುದ್ಮೆ ಪ್ರಾಣ;
ಹಾರೈಸಿ ಹಾರೈಸಿ ಹಾರೈಸಿ
ಹಾರಿದುದೊ ನೀರಧಿಯ ಮೀನ!
ಹಾರೈಸಿ ಹಾರೈಸಿ ಹಾರೈಸಿ
ಪ್ರಾಣಗುದಿಸಿತು ಮನೋಜ್ಞಾನ;
ಹಾರೈಸಿ ಹಾರೈಸಿ ಹಾರೈಸಿ
ಸಿದ್ಧಿಯಾಯ್ತಾತ್ಮವಿಜ್ಞಾನ!
ಹಾರೈಸಿ ಹಾರೈಸಿ ಹಾರೈಸಿ
ಹಸುರನುಸುರ್ದುವೊ! ಕಲ್ಲು ಮಣ್ಣು;
ಹಾರೈಸಿ ಹಾರೈಸಿ ಹಾರೈಸಿ
ಕುರುಡು ಜಡಕುದಿಸಿತಯ್ ಕಣ್ಣು!
ಹಾರೈಸಿ ಹಾರೈಸಿ ಹಾರೈಸಿ
ಚಿತ್ ಉರುಳ್ವುದು ಸುತ್ತಿಸುರುಳಿ;
ಹಾರೈಸಿ ಹಾರೈಸಿ ಹಾರೈಸಿ
ಮೃತ್ ಅರಳ್ವುದೊ ಅತ್ತೆ ಮರಳಿ!

ಕಂಸಶಿಲೆ

ನೀನೊಬ್ಬನೆಯೆ ಅಲ್ಲ, ಸಾವಿನಳುಕಿಗೆ ಸಿಕ್ಕಿ,
ಮುದ್ದಾಡಲರ್ಹವಹ ಶಿಶುಗಳೇಳನು ಶಿಲೆಗೆ
ಬಡಿದು ಕೊಂದೆಂಟನೆಯುದರ ಕೈಲಿ ನೀಳ್ಗೊಲೆಗೆ
ತುತ್ತಾದವನು, ಕಂಸ: ನಮ್ಮೆದೆಗಳನು ಕುಕ್ಕಿ
ನೋಡಿದರೆ ಕಾಣುವುದು ಮಕ್ಕಳೆಲುಬಿನ ರಾಶಿ!
ಒಂದೊಂದು ಹೃದಯವೂ ಕಂಸಶಿಲೆ: ನೂರಾರು
ಹೊಂಗನಸಿನಾದರ್ಶ ಶಿಶುಗಳಾಯೆಡೆ ಚೂರು.
ಚೂರಾದರೇನ್? ತುದಿಗೆ ಗೆಲುವನಸುರದ್ವೇಷಿ
ಧ್ವಂಸಗೈದಾ ದೇವ ವೈರಿಯಂ—ಬಾಲ್ಯದಿಂ
ಕುಟ್ಟುವೆವು ಕೆಡಹುವೆವು; ಹಳಿವೆವೊಲಿವೆವು ಮತ್ತೆ;
ಕಿಚ್ಚಿಟ್ಟೊಲುಮೆ ಬೂದಿಯಾಗೆ ಮತ್ತೊಂದೊಲುಮೆ
ಮೋಹಿಪುದು ಬಿಗಿದಪ್ಪಿ. ರುಚಿಯ ಚಾಪಲ್ಯದಿಂ
ತುಟಿಯಿಡುವೆವಾ ಕೊಳಕೆ ಈ ಕೊಳದ ನೀರ್ ಬತ್ತೆ.
ಕೃಷ್ಣನೈತರ್ಪನ್ನೆಗಂ ಕಂಸನೆದೆ ಕುಲುಮೆ!

ಯಶೋಲಕ್ಷ್ಮಿ

ವ್ಯೋಮ ಗೋಪುರ ಶಿಖರದಿಂದಿಳಿದು ಬಾ, ಹೇ ಅಮೃತೆ,
ಮಣಿದೆನ್ನ ಮುಡಿಗುಡಿಗೆ: ಶಿವೆ ನೀಂ ತಪೋರೂಪಿಣಿ;
ಚಿರಧವಳೆ; ಪುಣ್ಯಮಯಿ; ಲಜ್ಜಾಕರೆ; ಋತಾನ್ವಿತೆ;
ಭಗವದಾಶೀರ್ವಾದ ಮೇಣ್ ಕೃಪಾ ಸ್ವರೂಪಿಣಿ!
ನಾನಳಿವ ದಾರಿಯುದೆ ನೀನಿಳಿಯುತೈತಹ ಪಥಂ:
ಮರ್ತ್ಯಜಂ ಕೀರ್ತಿಶನಿ ಅಹಂಕಾರ ಖನಿಯಲ್ತೆ?
ಜನ್ಮಜನ್ಮಕ್ಕೆನಗೆ ನೀಂ ಮೋಕ್ಷಯಾತ್ರಾ ರಥಂ,
ಸ್ಪರ್ಧಾದೂರೆ, ಮತ್ಸರವಿದೂರೆ, ಹೇ ಅಮರ್ತ್ಯೆ!
ವಿಪಿನ ಚಂದ್ರಿಕೆಯಂತೆ ಶಾಂತೆ, ನೀರವೆ, ಧನ್ಯೆ,
ಪರಾಭಕ್ತಿಯುದ್ದೀಪನವೆ ತವಾಗ್ನಿಪದ ಚಿಹ್ನೆ!
ಕ್ಷೀರ, ವಾರಾಶಿಯೋಲ್ ಕಾಲಲೀಲಾ ಕ್ಷುಬ್ಧೆ

ನೀಂ ನಿತ್ಯಮುಕ್ತುಬ್ಧೆ ; ಮೇಣ್ ಗರ್ವವರಿಯದ ಮುಗ್ಧೆ
ಸುವಿದಗ್ಧೆಯಾದೊಡಂ: ಹೇ ಅಸಂಖ್ಯ ಹೃತ್‌ಸಂಗಿನಿ
ಕವಿಯಶೋಲಕ್ಷ್ಮಿ, ನೀನನವರತಮೇಕಾಂಗಿನಿ !

ಇಂತಹ ಸುಂದರ ಪ್ರಾತಃಕಾಲದಿ

ಇಂತಹ ಸುಂದರ ಪ್ರಾತಃಕಾಲದಿ
ಜೀವಿಸುವುದಕಿಂತಲು ಬೇರೆಯ ಗುರಿ
ಜೀವಕೆ ಬೇಕಿಲ್ಲ;
ಚಿರಸೌಂದರ್ಯದ ಸಂಪದವಿದ್ದರೆ
ಧರ್ಮಕೆ ಚ್ಯುತಿಯಿಲ್ಲ—
ಮತಿಯಿಲ್ಲ;
ರಸಾನುಭೂತಿಯ ರಸಪಥವಲ್ಲದೆ
ಸತ್ಯಕೆ ಗತಿಯಿಲ್ಲ !

ನಿನ್ನೆಯ ಸಂಜೆಯ ಮಳೆಯುಲಿ ಮಿಂದು
ಕಳಕಳಿಸುವ ಹಸುರ್ಬಯಲಲಿ ಇಂದು
ಹೊಂಬಿಸಿಲಲಿ ಉರಿದರೆ ಜಲಬಿಂದು
ಸತ್ತಳೊ ಉರ್ವಶಿ ಸ್ವರ್ಗದಲಿ !
ಗಾಳಿಯ ಮಂಡಲ ಸ್ಫಟಿಕದವೋಲಿದೆ;
ನಭವೂ ನೀಲವಿತಾನವ ಹೋಲಿದೆ;
ಅಲ್ಲಲ್ಲಿಯೆ ಮುಗಿಲಿನ ಪಟ ತೇಲಿದೆ:
ವೈಕುಂಠವಿದೆ ನಿಸರ್ಗದಲಿ !

ದನಕರುಗಳು ಬಯಲಲಿ ಮೇಯುತ 'ಇವೆ';
ಗಿರಿತರುಗಳು ಬದುಕನು ಸವಿಯುತ 'ಇವೆ';
ಅರಿವಾಸೆಯ ಮಾಯೆಗೆ ಬೀಳದೆ 'ಇವೆ';
ಇರುವಿಕೆಯಾನಂದದಿ ನಲಿಯುತ 'ಇವೆ';
'ಇವೆ';

ಇರುವಿಕೆಗಿಂತಲು ಹೆಚ್ಚಿಗೆ ಗೋಜಿಗೆ ಹೋಗದಿವೆ !
'ಅರಿವಾ' ಸೆಯೆ ಮಾಯಾ ಬಂಧ;
'ಇರು'ವುದೆ ಮುಕ್ತಿಯ ಆನಂದ
'ಅರಿವಾ'ಸೆಯ ಬಿಡು: 'ಇರು' ವಾಸೆಯ ತೊಡು !

ಇಂತಹ ಸಮಯದಿ 'ಇರುವಿಕೆ'ಗಿಂತಲು
ಹೆಚ್ಚಿನ 'ಅರಿವಿ'ಲ್ಲ!
ಇಂತಹ ದಿವ್ಯ ಪ್ರಭಾತ ಕಾಲದಿ
ಜೀವಿಸುವುದಕಿಂತಲು ರಸಜೀವಿಗೆ
ಬೇರೆಯ ಗುರಿಯಿಲ್ಲ!

ಕವಿಶ್ಶೈಲದಲ್ಲಿ ಸಂಧ್ಯೆ

ದೃಷ್ಟಿದಿಗಂತದ ಮೇರೆಯ ದಾಟಿ
ಗಗನದ ಮೇಘವಿತಾನವ ಮೀಟಿ
ದೂರಕೆ ದೂರಕೆ ಸುದೂರ ದೂರಕೆ
ಹಬ್ಬಿದೆ ಪರ್ವತ ದಿಗಂತ ಶ್ಶೈಲಿ,
ಮೈಲಿ ಮೈಲಿ!

ಪಶ್ಚಿಮ ಗಿರಿಶಿರದಲಿ ಸಂಧ್ಯೆಯ ರವಿ;
ನಿರ್ಜನ ಕವಿಶೈಲದೊಳೊಬ್ಬನೆ ಕವಿ;
ಮಲೆನಾಡಿನ ಬುವಿ ಮೇಲರುಣಚ್ಛವಿ;
ವಸಂತ ಸಂಧ್ಯಾ ಸುವರ್ಣ ಶಾಂತಿ!
ಅನಂತ ಶಾಂತಿ!

ಸೊಂಡಿಲ ಮೇಗಡೆ ಸೊಂಡಿಲ ಚಾಚಿ
ವಿಶಾಲ ವ್ಯೋಮದ ಕರೆಯನೆ ಬಾಚಿ
ಸ್ಪರ್ಧಿಸುತಿರುವುವೊ ಎನೆ ದಿಗ್ದಂತಿ
ಹಬ್ಬಿದೆ ಸುತ್ತಲು ದಿಗಂತ ಪಂಕ್ತಿ,
ಗಂತಿ ಗಂತಿ!

ತೆರೆ ತೆರೆ ತೆರೆಯೆದ್ದರಣ್ಯ ಶ್ರೇಣಿ,
ಬಿದ್ದಿದೆ ನಿದ್ದೆಯೊಳೋ ಎನೆ ಪ್ರಾಣಿ,
ಅಸಂಖ್ಯ ವರ್ಣದಿ ಅಪಾರ ಪರ್ಣದಿ
ತಬ್ಬಿದೆ ಭೂಮಿಯನೆರಂಕೆ ಚಾಚಿ,
ವೀಚಿ ವೀಚಿ!

ಎಲ್ಲಿಯು ಎಲ್ಲವು ಮಹತ್ತೆ ಇಲ್ಲಿ
ಈ ಸಹ್ಯ ಮಹಾ ಬೃಹತ್ತಿನಲ್ಲಿ!

ಕ್ಷುದ್ರಸ್ಪಷ್ಟತೆಗೆಡೆಯಿಲ್ಲಿಲ್ಲಿ?
ಭವ್ಯಾಸ್ಫುಟವಿದು—ಶರೀರ ಸೀಮಾ
ವಿಹೀನಧಾಮು!

ಆಲಿಸು! ಕೇಳುತಲಿದೆ ಓಂಕಾರ;
ನಿತ್ಯನಿರಂತರ ಅಳಿ ಝೇಂಕಾರ!
ಮನವೇ, ಧ್ಯಾನದಿ ಮುಳುಗು ನಿಧಾನದಿ:
ನುಂಗಲಿ ನಿನ್ನಂ ತಪಃ ಸುಷುಪ್ತಿ,
ಅನಂತ ತೃಪ್ತಿ!

ದೇವರು ರುಜು ಮಾಡಿದನು

ದೇವರು ರುಜು ಮಾಡಿದನು:
ರಸವಶನಾಗುತ ಕವಿ ಅದ ನೋಡಿದನು!

ಬಿತ್ತರದಾಗಸ ಹಿನ್ನೆಲೆಯಾಗಿರೆ
ಪರ್ವತದೆತ್ತರ ಸಾಲಾಗೆಸೆದಿರೆ
ಕಿಕ್ಕಿರಿದಡವಿಗಳಂಚಿನ ನಡುವೆ
ಮೆರೆದಿರೆ ಜಲಸುಂದರಿ ತುಂಗೆ
ದೇವರು ರುಜು ಮಾಡಿದನು:
ರಸವಶನಾಗುತ ಕವಿ ಅದ ನೋಡಿದನು!

ನದಿ ಹರಿದಿತ್ತು; ಬನ ನಿಂತಿತ್ತು;
ಬಾನ್ ನೀಲಿಯ ನಗೆ ಬೀರಿತ್ತು.
ನಿರ್ಜನ ದೇಶದ ನೀರವ ಕಾಲಕೆ
ಖಗರವ ಪುಲಕಂ ತೋರಿತ್ತು.
ಹೂಬಿಸಿಲಲಿ ಮಿರುಗಿರೆ ನಿರಿವೊನಲು
ಮೊರೆದಿರೆ ಬಂಡೆಗಳಲಿ ನೀರ್ಸೊದಲು
ರಂಜಿಸೆ ಇಕ್ಕೆಲದಲಿ ಹೊಮ್ಮಳಲು
ಸಿಬ್ಬಲುಗುಡ್ಡೆಯ ಹೊಳೆಯಲಿ ಮೀಯುತ
ಕವಿಮನ ನಾಕದಿ ನೆಲಸಿತ್ತು;
ಮಧು ಸೌಂದರ್ಯದ ಮಧುರ ಜಗತ್ತು
ಹೃದಯ ಜಿಹ್ವೆಗೆ ಜೇನಾಗಿತ್ತು!

ದೃಶ್ಯ ದಿಗಂತದಿನೊಮ್ಮೆಯೆ ಹೊಮ್ಮಿ
ಗಿರಿವನ ಪಟದಾಕಾಶದಲಿ
ತೇಲುತ ಬರಲ್ಕೆ ಬಲಾಕಪಂಕ್ತಿ
ಲೇಖನ ರೇಖಾನ್ಯಾಸದಲಿ,
ಅವಾಙ್ಮಯ ಛಂದಃಪ್ರಾಸದಲಿ,
ಸೃಷ್ಟಿಯ ರಚನೆಯ ಕುಶಲಕೆ ಚಂದಕೆ
ಜಗದಚ್ಚರಿಯಂದದ ಒಪ್ಪಂದಕೆ
ಚಿರಚೇತನ ತಾನಿಹೆನೆಂಬಂದದಿ
ಬೆಳ್ಳಕ್ಕಿಯ ಹಂತಿಯ ಆ ನೆವದಿ
ದೇವರು ರುಜು ಮಾಡಿದನು
ರಸವಶನಾಗುತ ಕವಿ ಅದ ನೋಡಿದನು.

ಬಾ ಫಾಲ್ಗುಣ ರವಿ ದರ್ಶನಕೆ!

ಶಿವಮಂದಿರಸಮ ವನಸುಂದರ ಸುಮಶೃಂಗಾರದ ಗಿರಿಶೃಂಗಕೆ ಬಾ;
ಬಾ ಫಾಲ್ಗುಣ ರವಿ ದರ್ಶನಕೆ!

ಕುಂಕುಮ ಧೂಳಿಯ ದಿಕ್ತಟವೇದಿಯೊಳೋಕುಳಿಯಲಿ ಮಿಂದೇಳುವನು;
ಕೋಟಿ ವಿಹಂಗಮ ಮಂಗಲರವ ರಸನೈವೇದ್ಯಕೆ ಮುದ ತಾಳುವನು:
ಚಿನ್ನದ ಚೆಂಡೆನೆ ಮೂಡುವನು;
ಹೊನ್ನನೆ ಹೊಯ್‌ನೀರ್ ನೀಡುವನು.
ಸೃಷ್ಟಿಯ ಹೃದಯಕೆ ಪ್ರಾಣಾಗ್ನಿಯ ಹೊಳೆಹರಿಯಿಸಿ ರವಿ ದಯೆಮಾಡುವನು

ತೆರೆತೆರೆಯಾಗಿಹ ನೊರೆನೊರೆ ಕಡಲನೆ ನೋಡುವ ಕಣ್ನೋಡುವವರೆಗೆ
ಬನಸಿರಿ ತುಂಬಿದ ಕಣಿವೆಯ ಹಂಬಿರೆ ಧೂಳೀಸಮ ಹಿಮ ಬಾನ್‌ಕರೆಗೆ
ಪ್ರತಿಭೆಯ ಹೋಮಾಗ್ನಿಯ ಮೇಲೆ
ಕವಿಮನ ತಾನುರಿದುರಿದೇಳೆ
ಮರಗಿಡದಲಿ ಜಡದೊಡಲಲಿ ಇದೆಕೋ ಸ್ಪಂದಿಸುತಿದೆ ಭಾವಜ್ವಾಲೆ!

ವರ್ಣನದಿಂದ್ರಿಯ ನಂದನವನು ದಾಂಟುತೆ ದರ್ಶನ ಮುಕ್ತಿಯ ಸೇರಿ
ವ್ಯಕ್ತಿತೆ ಮೈಮರೆವುದು ಸೌಂದರ್ಯ ಸಮಾಧಿಯೊಳಾನಂದವ ಹೀರಿ:
ಸರ್ವೇಂದ್ರಿಯ ಸುಖನಿಧಿ ಅಲ್ಲಿ;
ಸರ್ವಾತ್ಮನ ಸನ್ನಿಧಿ ಅಲ್ಲಿ;
ಸಕಲಾರಾಧನ ಸಾಧನ ಬೋಧನದನುಭವ ರಸ ತಾನಹುದಲ್ಲಿ!

ಸುವರ್ಣ ಸಂಪುಟ/೧೬೩

ಮುಂಗಾರು

೧

ಪಡುವಲ ಕಡಲಿನ ಮಿಂಚನು ಗುಡುಗನು ನುಂಗಿ ಬಸಿರಿನಲಿ, ಮುಡಿಗೆದರಿ,
ಮುಂಗಾರಸುರಿಯು ರಕ್ಕಸವಜ್ಜೆ ಗಳಿಕ್ಕುತ ಬಂದಳು ಬಲು ಗದರಿ !
ಗುಟುರನು ಹಾಕಿತು ಮುಂಗಾರ್ ಗೂಳಿ !
ಘೀಳಿಟ್ಟೊರಲಿತು ಘನಘಟೆಯಾಳಿ !
ಬುಸುಗುಟ್ಟಿತು, ಬೀಸಿತು ಬಿರುಗಾಳಿ !
ಸುತ್ತಲು ಮುತ್ತಿತು ಕಾರ್ಮೋಡ !
ಹರಿಯುವ ಹಾವಿನ ತೆರದಲಿ ಕತ್ತಲೆ ಮೆಲ್ಲನೆ ನುಂಗಿತು ಮಲೆನಾಡ !

೨

ಹಿಂಜರಿದುರಿಬಿಸಿಲಂಜುತಲಡಗಿತು, ರವಿಮಂಡಲ ಕಣ್ಮರೆಯಾಯ್ತು;
ಕಾಳಿಯ ಕೇಶದ ತಿಮಿರವು ಮುಸುಗಿತು, ಶಾಂತಿಯು ಗಲಭೆಗೆ ಸೆರೆಯಾಯ್ತು.
ಕಾಳಿಯ ಕಂಗಳ ಕೆಂಬೆಳಕಂತೆ,
ಕೈ ಹೊಂಬಳೆಗಳ ಹೊಸ ಹೊಗರಂತೆ,
ಝಳಪಿಪ ಖಡ್ಗದ ದೀಧಿತಿಯಂತೆ,
ಮಿಂಚುಗಳೆಸೆದುವು ಗೊಂಚಲಲಿ !
ಹೊಳೆದುವು, ಅಳಿದುವು, ಸುಳಿಸುಳಿದಲೆದುವು ಮುತ್ತುವ ಮೋಡಗಳಂಚಿನಲಿ !

೩

ಹಾಡುವ ಹಕ್ಕಿಯು ಹಣ್ಣಿನ ಮರದಿಂದೋಡುತ ಹುಲ್ಲಿನ ಹಕ್ಕೆಯಲಿ
ಚಿಲಿಪಿಲಿ ದನಿ ಮಾಡವ್ವನ ಕರೆಯುವ ಮರಿಗಳನಪ್ಪಿತು ತಕ್ಕೆಯಲಿ.
ಬೆಚ್ಚನೆ ರೆಕ್ಕೆಯೊಳವುಗಳನಿಟ್ಟು,
ಹಸಿದಿಹ ಮಕ್ಕಳಿಗುಣಿಸನು ಕೊಟ್ಟು,
ಗೂಡಿನ ಬಾಯಲಿ ಮಂಡೆಯನಿಟ್ಟು
ದಿಟ್ಟಿಯನಟ್ಟಿತು ಯೋಗಿಯೊಲು,
ಕೊಂಬೆಯು ತೊಟ್ಟಿಲ ತೂಗುತ ಗಾಳಿಯು ಬುಸುಬುಸುಗುಡುತಿರೆ ಭೋಗಿಯೊಲು !

ಬನದಲಿ ಬಯಲಲಿ ಮೇಯುವ ತುರುಗಳು ಜವದಲಿ ಕೊಟ್ಟಿಗೆಗೋಡಿದುವು.
ಬಾಲವನೆತ್ತಿದ ಕರುಗಳು ಅಂಬಾ ಎನ್ನುತ ತಾಯ್ಗಳ ಕೂಡಿದುವು.
ಗುಡುಗಿನ ಸದ್ದಿಗೆ ಕಾಡುಗಳದುರಿ
ಅಡವಿಯ ಮಿಗಗಳು ಸಿಡಿಲಿಗೆ ಬೆದರಿ

ಕಿತ್ತೆದ್ದೋಡುತ ಹಿಂಡನು ಚೆದರಿ
ಪೊದೆಗಳ ಗುಹೆಯನು ಸೇರಿದುವು.
ತೊಳೆಯುವ ಚರ್ಮಗಿಲಾಲಿಯ ಕಲ್ಗಳ ಮಿರುಗುವ ಮಳೆಯನು ಕಾರಿದುವು!
ವನಪರಿವೃತ ಗಿರಿಶಿರದಿಂದೊಯ್ಯನೆ ಮರದಲೆದಳಿರನು ತುಳಿತುಳಿದು
ಚೆಲುವಿನ ಹನಿಗಳು ಸುರಶಿಶುಮಣಿಗಳು, ಬುವಿಗಿಳಿತಂದರು ನಲಿನಲಿದು.
ಬಳಿ ಸಾರುವ ದೂರದ ಸರ ಕೇಳೆ,
ಗಣನೆಗೆ ಸಿಲುಕದ ಮಳೆಹನಿ ಬೀಳೆ,
ಕಬ್ಬಿಗನೆದೆಯಲಿ ಮುದ ಮೊಳೆತೇಳೆ
ನೆನೆವುದು ಸೊಗದಲಿ ಬಗೆಗಣ್ಣು:
ಧಾರೆಯ ದಾರದಿ ನೆಯ್ದಿಹ ತೆಳ್ಳನೆ ಜವನಿಕೆಯುಡುವಳು ತಿರೆವೆಣ್ಣು!
ಮುಗಿಲಿನ ಮುತ್ತುಗಳಾಲಿಯ ಕಲ್ಲುಗಳುದುರಲು ಹೂಮಳೆಯಂದದಲಿ
ಹುಡುಗರು ಹುಡುಗಿಯರಾಯ್ದಾಯ್ದವುಗಳ ಕುಣಿದು ತಿಂದರಾನಂದದಲಿ.
ಸಗ್ಗದ ಕಂಬನಿ ತಿರೆಯನು ತೊಯ್ಯೆ,
ಬೆಂದಿಹದುರಿಯನು ಪರ ಬಂದೊಯ್ಯೆ,
ಲೋಕಕೆ ನಾಕವು ಬಿಜಯಂಗೆಯ್ಯೆ
ಕಿಸಲಯ ಸುಮ ಸೋಪಾನದಲಿ,
ಕವಿ ಹೃದಯದಿ ಮೋಹನ ಸುರಗಾನದ ಮಳೆಗರೆವುದು ಸುವಶ್ಮಾನದಲಿ!

ಹಸುರು

ನವರಾತ್ರಿಯ ನವಧಾತ್ರಿಯ
ಈ ಶ್ಯಾಮಲ ವನಧಿಯಲಿ
ಹಸುರಾದುದೊ ಕವಿಯಾತ್ಮಂ
ರಸಪಾನ ಸ್ನಾನದಲಿ!

ಹಸುರಾಗಸ: ಹಸುರು ಮುಗಿಲು:
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ;
ಹಸುರು ಸಂಜೆಯಿಾ ಬಿಸಿಲೂ!

ಆಶ್ವೀಜದ ಶಾಲಿವನದ
ಗಿಳಿಯೆದೆ ಬಣ್ಣದ ನೋಟ,
ಅದರೆದೆಯಲಿ ಬನದಂಚಲಿ
ಕೊನೆವೆತ್ತಡಕೆಯ ತೋಟ!

ಅದೊ ಹುಲ್ಲಿನ ಮಕಮಲ್ಲಿನ
ಪೊಸಪಚ್ಚೆಯ ಜಮಖಾನೆ
ಹಸರಿಸಿ ತಿರೆ ಮೈ ಮುಚ್ಚಿರೆ
ಬೇರೆ ಬಣ್ಣವನೆ ಕಾಣೆ!

ಹೊಸ ಹೂವಿನ ಕಂಪು ಹಸುರು,
ಎಲರಿನ ತಂಪೂ ಹಸುರು!
ಹಕ್ಕಿಯ ಕೊರಲಿಂಪು ಹಸುರು;
ಹಸುರು ಹಸುರಿಳೆಯುಸಿರೂ!

ಹಸುರತ್ತಲ್ ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ
ಹಸುರ್ಗಟ್ಟಿತೊ ಕವಿಯಾತ್ಮಂ
ಹಸುರ್ನೆತ್ತರ್ ಒಡಲಿನಲಿ!

ವೀಣಾಗಾನ

ನಾನೆ ವೀಣೆ, ನೀನೆ ತಂತಿ,
ಅವನೆ ವೈಣಿಕ;
ಮಿಡಿದನೆನಲು ರಸದ ಹೊನಲು
ಬಿಂದು ಬಿಂದು ಸೇರಿ ಸಿಂಧು
ನಾದ ರೂಪಕ.

ಭುವನವೆಲ್ಲ ಸವಿಯ ಸೊಲ್ಲ
ಕವಿಯ ಗಾನ:
ನನ್ನ ನಿನ್ನ ಹೃದಯಮೀನ—
ಕಲ್ಲಿ ಜೇನ ಸೊಗದ ಸ್ನಾನ;
ಅಮೃತ ಪಾನ.

ತಂತಿಯಿಂಚರದಿ ವಿಪಂಚಿ
ರಸ ಪ್ರಳಯಿಸೆ
ನನ್ನ ನಿನ್ನ ಜೀವಮಾನ
ತಾನ ತಾನ ತನನ ತಾನ
ಪ್ರಾಣ ಪುಳಕಿಸೆ.

ಷೋಡಶಿಗೆ

ಷೋಡಶೀ, ಷೋಡಶೀ,
ಮೂಡಿ ಬಾ, ಷೋಡಶೀ !
ಬಾಳ ಕವಿಯೆ ಕಾಳ ನಿಶಿ
ಮೂಡುವೋಲು ಪೂರ್ಣ ಶಶಿ,
ಚಿನ್ಮಯಿಾ, ಹೃನ್ಮಯಿಾ,
ಮೂಡಿಬಾ, ಷೋಡಶೀ !

ಕತ್ತಲೇ ಅತ್ತಲೇ
ಓಡುವಂತೆ, ಷೋಡಶೀ,
ಚಂದ್ರಿಕಾ ಚಕೋರಿಯಾಗಿ
ಸೌಂದರ್ಯ ಸಾಂದ್ರೆಯಾಗಿ,
ಪ್ರೇಯಸೀ, ಪ್ರೇಯಸೀ,
ಮೂಡಿ ಬಾ, ಷೋಡಶೀ !

ಗಿರಿಗಿರಿಯಾ ಶಿರಶಿರದಾ
ಶಿಲಾತಲದಿ ಕ್ರೀಡಿಸಿ,
ಮರಮರದಲಿ ಮರ್ಮರಿಸಿ
ಅಲೆವ ಎಲರ ಒಲವರಸಿ,
ಷೋಡಶೀ ಬಾ, ಷೋಡಶೀ !

ಷೋಡಶೀ, ಷೋಡಶೀ,
ಪ್ರಣಯನಾಕದೂರ್ವಶೀ,
ಅನಿಂದಿತೇ, ಅ ಚುಂಬಿತೇ,
ಅನವರತ ಪ್ರಾಣ ರತೇ,
ಪ್ರೇಯಸೀ, ಪ್ರೇಯಸೀ,
ಮೂಡಿ ಬಾ, ಷೋಡಶೀ !

ಷೋಡಶೀ, ಷೋಡಶೀ,
ರಸಋಷಿಯಾ ಪ್ರೇಯಸೀ,
ನಿತ್ಯ ನಿರ್ದಿಗಂತಿನೀ

ಸಾಂತದೊಳೊ ಅನಂತೆ ನೀ !
ಪ್ರೇಯಸೀ, ಷೋಡಶೀ,
ಮೂಡಿಬಾ, ಷೋಡಶೀ !

ಭಗವಂತನೆ ಕವಿ, ಸಹೃದಯ ನಾಂ !

ರಸ ಪ್ರಯೋಜನ ಭವನಂ ಕವನಂ:
ಭಗವಂತನೆ ಕವಿ, ಸಹೃದಯ ನಾಂ !

ಬಾನೋ ಬಯಲೋ ಕಾಡೋ ಮಿಗವೋ
ಮಣ್ಣಿನೊಳಾಡುವ ಮುದ್ದಿನ ಮಗವೋ,
ಹಕ್ಕಿಯ ಗೂಡಿನ ಮುತ್ತಿನ ಮೊಟ್ಟೆಯೊ,
ಅಲೆ ಅಲೆ ಏರಿಳಿಯುವ ಮಲೆಬೆಟ್ಟವೊ
ಹೂವಕ್ಕಿಯ ಇಂಚರ ಟೂವ್ವಿಟ್ವೂವೊ,—
ರಸ ಪ್ರಯೋಜನ ಭುವನಂ ಕವನಂ:
ಭಗವಂತನೆ ಕವಿ, ಸಹೃದಯ ನಾಂ !

ಹೊನಲೋ ಹೊಳೆಯೋ ತಳಿರೋ ತರುವೋ
ಕೆಚ್ಚಲಕರುವನು ನೆಕ್ಕುವ ತುರುವೋ,
ಮುಳುಗುವ ನೇಸರೊ ಮೂಡುವ ತಿಂಗಳೊ
ಚೆಲುವಿನ ಹೆಂಗಳೊ ಒಲವಿನ ಕಂಗಳೊ,
ಆನೆಯೊ ಸಿಂಹವೊ ಮೊಸಳೆಯೊ ಮಾನೋ
ಉಗ್ರವೊ ಸಾಧುವೊ ಎಂತೋ ಏನೋ,—
ರಸ ಪ್ರಯೋಜನ ಭುವನಂ ಕವನಂ;
ಭಗವಂತನೆ ಕವಿ, ಸಹೃದಯ ನಾಂ !

ಅಲ್ಪವೊ ಭೂಮವೊ ಹಿರಿದೋ ಕಿರಿದೋ
ಸಿಹಿಯೋ ಕಹಿಯೋ ಬಿಳಿದೋ ಕರಿದೋ,
ಬಂಜರು ಮಳಲೋ ಹುಲುಸಿನ ಹೊಳಲೋ
ಬರವೋ ಸಾವೋ ಕದನದ ನೋವೋ,
ನೆಲೆಗೆಟ್ಟಲೆವಾ ಜನತೆಯ ಬೇವೋ,
ಲೀಲಾಪ್ರಜ್ಞೆಗೆ ಸರ್ವಂ, ಓವೋ !—
ರಸಪ್ರಯೋಜನ ಭುವನಂ ಕವನಂ:
ಭಗವಂತನೆ ಕವಿ, ಸಹೃದಯ ನಾಂ !

ಪು. ತಿ. ನರಸಿಂಹಾಚಾರ್

ಬಾನ್ ತಿಳಿದಿತ್ತು

ಬಾನ್ ತಿಳಿದಿತ್ತು—ಬಿಳಿಮುಗಿಲೋಳಿಯು
ಕೇಳಿಯ ದೋಣಿಯ ಹೋಲಿತ್ತು.
ಸರಸಿಗಳೆದೆಯೊಳು, ಬಯಲೊಳು ಮಲೆಮೇಲ್
ಬೆಚ್ಚನೆ ಕಿರುಬಿಸಿಲೊರಗಿತ್ತು.
ಹಸುರೊಳು ಹಿಮಮಣಿ ರತ್ನಜ್ಯೋತಿಗ–
ಳಂಬನು ದೆಸೆದೆಸೆಗೆಸೆದಿತ್ತು.
-ಶರದದ ಹಗಲೊಳು ಚೆಲುವಿತ್ತು,
ಬಿಡುವಿತ್ತು,
ಕಳೆಯಿತ್ತು.

ಎಲೆ ಮೇಲುರುಳುತ ಮುತ್ತಿನ ಕಂಠಿಯು
ಕಮಲಕೆ ಕಿರುದೆರೆ ಹಾಕಿತ್ತು.
ತಣ್ಣನೆ ನುಣ್ಣನೆ ನುಸುಳುತ ಗಾಳಿಯು
ಬಳ್ಳಿಗೆ ಕಚಕುಳಿಯಿಡುತ್ತಿತ್ತು.
ಪೊದರೊಳು, ಮೆಳೆಯೊಳು, ಕ್ರೀಡಾವನದೊಳು
ಹಕ್ಕಿಯು ಹಾಡನು ಹರಡಿತ್ತು.
-ಶರದದ ಹಗಲೊಳು ಒಲವಿತ್ತು,
ಗೆಲವಿತ್ತು,
ನಲವಿತ್ತು.

ಆದೊಡೆ ಪೂರ್ಣತೆಯರಸುತ ದುಂಬಿಯ
ತೆರದೊಳಗೆನ್ನಯ ಒಲವಿತ್ತು.
ಚಿಂತೆಯ ಕಾರ್ಮುಗಿಲಿರುಳೊಳಗೆನ್ನದೆ
ಬೆಳಕನು ಕಾಣಲು ತವಿಸಿತ್ತು.
ನನಸಿನ ಕನಸಿನ ಅಂತರವಳೆಯುತ
ಬಾಳಿನೊಳುಲ್ಲಸ ಕುಗ್ಗಿತ್ತು,
ಬಲು ಕುಗ್ಗಿತ್ತು.

ಸು ವರ್ಣ ಸಂಪುಟ/೧೬೯

ಶರದದ ಗೆಲವಿನ ಹಗಲೊಳಗಿದ್ದುದು
ನಾಕದ ನಲವಿನ ಸಂದೇಶ.
ಅಚ್ಚರಿ! ಬಾಳಿನ ಕುಗ್ಗನು ಹೆಚ್ಚಿಸು–
ತಿಹುದೀ ನಲ್ಮೆಯ ಸಂದೇಶ!

ಮಳೆಯು ನಾಡ ತೊಯ್ಯುತಿರೆ

ಮಳೆಯು ನಾಡ ತೊಯ್ಯುತಿರೆ,
ಮಂಜಿಗಿರುಳು ಬೆದರುತಿರೆ,
ಗೂಡ ಮುದ್ದುಗೊಲ್ಲನೆಡೆಯೊಳೊಂದು ಹಣತೆ ಮಿನುಗುತಿರೆ,
ಮುದವದೊಂದು ಮೊಳೆವುದು
ಬಗೆಯ ಕಣ್ಣ ತೆರೆವುದು.

ಹಿಂದೆ ಸೆರೆಗೆ ಸಿಲುಕುತ,
ಕಂಸಭಯಕೆ ನಡುಗುತ
'ಹಡೆದ ಕೂಸು ಬಾಳ್ವುದೆಂತು' ಎನುತ ತ–ಲ್ಲಣಿಸುತ
ನೊಂದ ಪಿತರ ಚಿತ್ರವ
ಕಾಂಬೆ ಕೃಷ್ಣನುದಯವ.

ಒಲುಮೆ ತೊಡರ ಕಳಚಲು,
ತಂದೆ ಶಿಶುವನಪ್ಪಲು
ತಾಯಿ ಕೊಡುವ ಕೊನೆಯ ಮುತ್ತು ಕಂಬನಿಯೊಳು ನೆನೆಯಲು,
ಒಯ್ದನಂದು ಶಿಶುವನು
ಬೆಳಗೆ ಗೋಪಗೃಹವನು.

ಸಾಸಿರ ಹೆಡೆ ಸರ್ಪವು
ಸೋನೆಗಾಗೆ ಛತ್ರವು,
ಮಾಯೆ ನಿದ್ರೆಗಂದು ಜಗವೆ ಕೆಡೆಯಲಡಗೆ ಶಬ್ದವು,
ಯಮುನೆ ಬತ್ತಿ ಬಟ್ಟೆಗೊಡೆ
ಶಿಶುವ ಬಿಟ್ಟ ಗೊಲ್ಲನೆಡೆ.

ಮಾಯೆ ಹರಿಯೆ, ಬಾಲನಳೆ,
ಗೋಪಿ ಹರುಷ ಕೋಡಿಗೊಳೆ
ನಂದಗೋಪ ನೋಡಿ ನೋಡಿ ಸುತನ ಮುದ್ದ ಸೂರೆಗೊಳೆ.

ಅಂದು ಎಲ್ಲ ಗೋಕುಲ
ಹರುಷಕಾಯ್ತು ದೇಗುಲ.

ಇಂತು ಗೊಲ್ಲನಾಗಿ ಹರಿ
ಕೊಳಲು ಕರದಿ, ನವಿಲುಗರಿ
ಶಿಖೆಯೊಳೆಸೆಯೆ, ಬೃಂದವನದೊಳಾಡಿ ಗೋವ ಕಾದ ಪರಿ
ಜಗಕೆ ರಮ್ಯವಾದುದು,
ಇಂದೂ ಮೋದವೀವುದು !

ಕುಳಿರ್ವನದಿ ಸೇರುವ
ಜೊನ್ನಕೂಟ, ಕುಣಿತವ,
ಕೊಳಲು ಕರೆವ ಮೋಹದಿಂಪಿಗೊಲಿದು ತುಡಿವ ಹೃದಯವ
ನೆನೆಯಲೆಷ್ಟು ಮೋದವು !
ಆಹಾ ! ಏನು ಮೋದವು !

ಕಾಳಿಮಡುವು, ರಾಸದೆಡೆ,
ಸುಖದಿ ಮೇವ ಗೋಗಳೆಡೆ,
ತಳಿತ ಹೂತ ವನದೊಳಾಡಿ ಬುತ್ತಿ ಮೆಲುವ ಗೊಲ್ಲಪಡೆ-
ಇಂದು ಬರಿಯ ನೆನಪದು:
ಕವಿಯು ಕಾಂಬ ಕನಸದು !

ಸೋನೆ ತಿರೆಯ ತೊಯ್ಯುತಿರೆ,
ಮಿಂಚೆ ತಿಮಿರ ನಡುಗುತಿರೆ;
ಗೂಡಗೊಲ್ಲ ಜೀವಗೊಂಡು ಹಿಂದಸಿಂತು ಮನಕೆ ತರೆ,
ಮುದವು ಮೊಳೆದು ನಮೆವುದು,
ಸುಯ್ಯಲೊಂದ ತರುವುದು-
ಇಂದು ನಮ್ಮ ಬಾಳು ಗೋಳು, ಬಯಲು, ಹುಸಿಯು ಎನಿಪುದು.

ಯದುಗಿರಿಯ ಮೌನ ವಿಕಾಸ

೧

[ಯದುಗಿರಿಯ ಮೂಡಣ ಕಣಿವೆಯ ಮೌನ]

ಮೂಡಣ ಕಣಿವೆಯ ಹಿಮುದವಕುಂತನ
ರವಿಕರಸ್ಪರ್ಶಕೆ ಜಾರುತಿದೆ,
ನಾಡದೊ, ಹಿಗ್ಗುತ ನಾಚುತ ಮೆಲ್ಲನೆ
ಮೈಸಿರಿಯನು ತಾ ತೋರುತಿದೆ.

ಬನದೊಳು ಕೆರೆಯೊಳು ಕಮರಿಯ ಬುಡದೊಳು
ದಿಗಂತ ವಿಸ್ತೃತ ನಾಡಿನೊಳು,
ಇನನರುಣಾಂಶುಗಳೆಲ್ಲೆಡೆ ಮಡಿವುವು
ತರು ಜಲಗಳ ನೆರೆ ನಲವಿನೊಳು.

ಜನಪದದಂತರ್ಯಾಮಿಯ ಯೋಗಸ-
ಮಾಧಿಯ ಕಲಕಿದೆ ಸುಮ್ಮಾನ;
ಕಣಿವೆಯ ತಳದಂಚಿನೊಳೊಯ್ಯೊಯ್ಯನೆ
ಎಚ್ಚರುತಿದೆ ಮಾಗಿಯ ಮೌನ.

ಕರುಗಳ ಗಂಟೆಯ ಕಿಣಿಕಿಣಿ ರವದೊಳು
ನಿರ್ಝರ ಮರ್ಮರ ನಾದದೊಳು,
ಖಗದಿಂಚರದೊಳು ಮೃಗ ಕೂಜನದೊಳು,
ಡೇಗೆಯ ರೆಕ್ಕೆಯ ಹೊಯ್ಲಿನೊಳು;

ಮಂದಾನಿಲನೊಲೆದಲೆಯುವ ಮಾರ್ಗದಿ,
ರೈತರ ಮಂಜುಳ ವಾಣಿಯೊಳು,
ದಧಿಭಾಂಡವ ಹೊತ್ತೊಯ್ಯನೆ ಸಾರುವ
ಗೊಲ್ಲತಿಯರ ನಡೆಮಾತಿನೊಳು;

ಮೂಡಣ ಕಣಿವೆಯ ತಳದೊಳಗಾಲಿಸು
ಎಚ್ಚತ್ತಿದೆ ಮೌನ!
ಸಾಸಿರ ದನಿಯೊಳು ಚಿಗುರಿದೆ ಮೌನ,
ಸುಮ್ಮಾನದಿ ನುಡಿವೆತ್ತಿದೆ ಮೌನ!
ಸುಂದರವೀ ಮೌನ!

೨

[ಉದುಗಿರಿಯ ಪಡುವಣ ಕಣಿವೆಯ ಮೌನ]

ಪಡುವಣ ಕಣಿವೆಯ ನೀರವ ಭಾವವ
ಹಗಲಿನ ಹರುಷವು ಕೆಣಕಿಲ್ಲ.
ಕಣಿವೆಯನಾಳುವ ಕರಿಕಲ್‌ಗುಡ್ಡದ
ನಿರ್ಭರ ಮೌನವು ಕದಡಿಲ್ಲ.

ಅಲ್ಲಲ್ಲೊಮ್ಮೆಗೆ ಒಮ್ಮೆಗೆ ಇಂಚರ
ನುಸುಳುವುದಾಳದ ಅಂಚಿನೊಳು,
ಸಾನ್ನಿಧ್ಯದ ಗಾಂಭೀರ್ಯವನರಿಯದ
ಹಸುಳೆಯ ಧಾರ್ಷ್ಟ್ಯದ ಮಾತಿನೊಲು.

ರಾಜರ್ಷಿಗೆ ರವಿ ತಹ ಕಾಣಿಕೆಯೊಲು
ಕಣಿವೆಯಂ ತುಂಬಿದೆ ಹೂಬಿಸಿಲು;
ಗಿರಿಯೆಡೆ ನೀರವ ತರುಗಳು ನಿಂತಿವೆ
ವಿನೀತ ಭಾವದಿ ಭಕ್ತರೊಲು.

ಬಸಿರೊಳು ವಿಲಯುವ ಹದುಗಿಸಿ ನಿಂತಿರು–
ವಂತಿದೆ ಗಿರಿ ದಮುದೋಜೆಯೊಳು;
ಬೆಚ್ಚನೆ ಬಿಸಿಲಿನ ಪುಷ್ಪಸ್ಪರ್ಶಕು
ಪ್ರಚಲಿತವಾಗದ ಯೋಗದೊಳು.

ಗಿರಿರಾಜನ ಸಾನ್ನಿಧ್ಯದ ನಾಡೊಳು
ಹಗಲಿನೊಳೂ ಸದ್ದಿನಿತಿಲ್ಲ.
ಶಬ್ದದ ಶಮವಿದೆ, ಚಲನದ ದಮವಿದೆ,
ಸುಮ್ಮಾನದ ಹುಚ್ಚಿನಿತಿಲ್ಲ.

ಪಡುವಣ ಕಣಿವೆಯ ಆಳದೊಳಾಲಿಸು
ನಿದ್ರಿಸುತಿದೆ ಮೌನ!
ಹೊಂಬಿಸಿಲೆಚ್ಚರಗೊಳಿಸದ ಮೌನ,
ರಾಗವೋದಗಳು ಕಲಕದ ಮೌನ
ಸೋಜಿಗವೀ ಮೌನ!
ಘನ ಮೌನ!

೩

[ಯದುಗಿರಿಯ ದೇಗುಲದ ಮುಂಜಾನೆಯ ಮೌನ]

ಹಿಮ ಬೀಳುತಿದೆ, ಚಳಿ ಮೂಡುತಿದೆ,
ಮಾಗಿಯು ಗಾದಿಯನೇರುತಿದೆ;
ತಮ ಹದುಗುತಿದೆ, ಬೆಳಕೊಗೆಯುತಿದೆ,
ಬೆಳ್ಳಿಯು ಮಂಜೊಳು ಕರಗುತಿದೆ.

ಜಾವದ ಪೂಜೆಯ ನಗಾರಿ ನಾದವು
ಎಚ್ಚರಿಸುತ್ತಿದೆ ಯದುಗಿರಿಯ-
ತ್ರಿಯಾಮೆಯಂತ್ಯಾಲಿಂಗನ ಸುಪ್ತಿಯೊ-
ಳಿರವಳಿದಿರುವೀ ಯದುಗಿರಿಯ.

ಹರಿಸಾನ್ನಿಧ್ಯದಿ ಜನತೆಯು ನೆರೆದಿದೆ
ಝರಿಗಳು ಮಡುವೊಳು ನೆರೆವಂತೆ;
ಗುಡಿಕತ್ತಲೆಯೊಳು ಹಣತೆಗಳೆಸೆದಿವೆ
ತಮವೇ ಪುಷ್ಪಿತವಾದಂತೆ.

ಮಾನುಷ ಪದರದಿ ಬಸಿಯುತ ನೈಜಾ-
ನಂದಕೆ ತಿಳಿಯುವ ಯತ್ನದೊಳು
ಪಾಶುರಗಾನದಿ ನುತಿಕೊಡುತಿದೆ ಜೀ-
ವಾತ್ಮವು ದೇವನ ಸನಿಯದೊಳು.

ಸಹಸ್ರ ಕಂಠದಿ ಮೇಳವಿಸಿದೆ ನುತಿ,
ದೇಗುಲವಾಗಿದೆ ಘೋಷವತಿ,
ಆತ್ಮಾನಂದಕೆ ತನ್ನೇಕಾಂತದಿ
ನಿಯುತಿಯು ಮಿಡಿಯುವ ‘ ಘೋಷವತಿ ’.

ಏನಿದು ಥಟ್ಟನೆ ಗೀತವು ಬಿಗಿದಿದೆ !
ದನಿಯುಡುಗಿಸಿ ನಿಂತಿದೆ ಜನತೆ !
ಏನೀ ಮೂಕತೆ, ಏನೀ ಮೌನತೆ
ಏನೀ ಮಂದಿಯ ನೀರವತೆ !

ಜೀವವು ಭಾವಕೆ ಸಂದಿತೆ? ಗೀತವು
ಕೃತಕೃತಿಯಾಯಿತೆ? ಸದ್ದಿಲ್ಲ-
ಕಾಯದ ಕರಣದ ಹಂಗನು ತೊರೆಯಿತೆ
ಆತುಮ? ಭಾವವು ಸವಿಸೊಲ್ಲ?

ನುತಿ ಕೊಟ್ಟಾಯಿತೆ? ಮೊರೆಯಿಟ್ಟಾಯಿತೆ?
ಹಸಾದ ದೊರಕಿತೆ ಚೇತನಕೆ?
ನೋವನು ಸಾವನು ದಾಟಿದ್ದಾಯಿತೆ?
ಆ ದಡ ಸಿಕ್ಕಿತೆ ಆತುಮಕೆ?

ಹಿಂದಿನ ಚಣದೊಳು ಕಡಲೊಲು ಮೊರೆದೀ
ಮಂದಿಯ ಬಿಗಿದಿದೆ ನೀರವತೆ !
ದ್ವಂದ್ವವು ನಂದಿದೆ, ಜಾಡ್ಯವು ಹರಿದಿದೆ,
ಹುಟ್ಟಿದೆ ಸಾತ್ವಿಕ ಸುಸ್ಥಿರತೆ !

ದೇಗುಲದೊಳು ಮುಂಜಾನೆಯೊಳಾಲಿಸು
ಚಿತ್ ಆಗಿದೆ ಮೌನ
ಭಾವವ ಕಾಯುವನಾಂತಿಹ ಮೌನ !
ಮೋಕ್ಷಾನಂದದಿ ಜೀವನ್ಮೌನ !
ಓ-ಕಡು ಸೋಜಿಗವೀ ಮೌನ !
ಚಿನ್ಮೌನ !

ಕೊಳದೆಡೆಯ ಇರುಳು

ಬುವಿ ಬಾನಳೆದುರವಣಿಸಿದ
ಹರಿಪಾದಕೆ ತಲೆಯೊಡ್ಡುತ
ಕೆಳಲೋಕಕೆ ತೆರಳುತ್ತಿಹ
ಬಲಿದೊರೆಯಂದದೊಳು,

ಮಗುವಿರುಳಿನ ನಿಡು ನೀಟಿದ
ದೆಸೆ ಮೆಟ್ಟಿದ ಮುಗಿಲಡಿಯಡಿ
ಮರೆಯಾದುದು ಪಗಲ್ಸೈಸಿರಿ
ಪಡುವಣ ಕಮರಿಯೊಳು.

ಹಿಮವದ್ಗಿರಿ ಗಹ್ವರದೆಡೆ
ತಪವೆಸಗುವ ವರಯೋಗಿಯ
ನಿಶ್ಚಲ ಕಿಂಚಿನ್ಮೀಲಿತ
ಫಾಲಾಂಬಕಮೆನಲು,

ಬೆಳ್ಳಿಂಚಿನ ಕರಿಮುಗಿಲಿನ
ನಡುವಣ ಬಾನಿನ ನೆತ್ತಿಯೊ–
ಳೆಂತೊಪ್ಪಿದೆ ಹೊಂಬಣ್ಣದ
ಬಿದಿಗೆಯ ಪೆರೆಯೆಸಳು.

ಚಣಚಣಕೂ ಮಿರುಮಿಂಚುವ
ಕೋಲ್ಮಿಂಚಿನ ಸಂಚೇನಿದು-
ತಪಭಂಗಕೆ ಕುಸುಮಾಸ್ತ್ರವ
ನಣಿಗೈವನೊ ಮಾರಂ?

ಚಣಚಣಕೂ ಕಿವಿಗಿನಿದೆನೆ
ಗುಡುಗುಡುಗುವ ದನಿಯೇನಿದು-
ಸಿಂಗಾಡಿಗೆ ಹೆಡೆಯೇರಿಸಿ
ಮಿಡಿವನೊ ಎದೆಗಾರಂ?

ಕಣ್ಮನಗಳ ನೀರಡಿಸುವ
ನಿಶ್ಶಾಂತಿಯ ಈ ಇರುಳೊಳು
ಉತ್ಸುಕಿಸಿಹೆ, ಕಾತರಿಸಿಹೆ,
ಭಾವುಕ ಕತಮೇನ್ನೈ !

ಕಣ್ಸೋಲಲು ನಿಟ್ಟಿಸುವೀ
ಕಿವಿಸೋಲಲು ಲಾಲಿಸುವೀ
ಬಗೆ ಸೋಲಲು ಭಾವಿಸುವೀ
ಭ್ರಾಂತಿಯ ಬಗೆಯೇನ್ನೈ ?

ನೇವುರದಿನಿದನಿ ಯಾವುದ
ಸೂಡಿದ ಪೂಗಂಪಾವುದ
ನೋಟದ ಕುಣಿ ಮಿಂಚಾವುದ
ಸ್ಮೃತಿ ಧನುವಿಂದೊಗೆದು.

ನಿನ್ನೆದೆ ಗವಿಯೊಳಗಿಂತೆಯೆ
ತವಿಪ ನಿರಾಶೆಯ ರುದ್ರನ
ಎಚ್ಚರಿಸುತ, ಒಲವಾವುದು
ಬೇಳುವೆಯಾಗಿಹುದು ?

ನಂದಿಯ ಬೆಟ್ಟದ ಮೇಲುಗಡೆ

ಬೇಡದೆ ಬಿಸುಡಿದ ವಸ್ತುವೊಲಾಯ್ತಿಳೆ
ಕೆಳ ಕೆಳಗಾಳದ ಕಣಿವೆಯೊಳು;
ಕಪ್ಪೆಯ ಗೂಡೋ, ಹುತ್ತವೊ ಇದು ಎನೆ
ನಗೆಗೇಡಾಯಿತು ನೆರೆ ಹೊಳಲು;
ಕೆರೆಯೋ ಕೊಚ್ಚೆಯೊ, ಪೈರೋ ಪಾಚಿಯೊ,
ಹಳುವೋ ಹುಲ್ಗಾವಲ ಹರಹೋ ?
ಎನ್ನುತ ಭ್ರಮಿಸುವ ತೆರವಿಂದಾಯಿತು
ನಂದಿಯ ಬೆಟ್ಟದ ಮೇಲುಗಡೆ.

ಐರಾವತವೆನೆ ಬಿಳಿಮುಗಿಲಾನೆಯ
ಸದರದಿ ಮುಟ್ಟುತ ನೇವರಿಸಿ,

ಕುಸುಮಾವಳಿಯನೆ ಬಾನಿನ ನೀಲವ
ಟೊಂಗೆಯ ತುದಿಯೊಳು ದೋಲಯಿಸಿ,
ಚಿರ ಯೌವನವೆನೆ ಹಸುರನು ಮೆರೆಯಿಸಿ,
ಜುಮ್ಮನೆ ಸುರಭಿಯ ನಿಃಶ್ವಸಿಸಿ,
ದನಿಯೊಳು ನೆಳಲೊಳು ಚೋದ್ಯಂಗೊಳಿಸುವ
ಬನವಿದಿಗೋ ಮಲೆ ಮೇಲುಗಡೆ !

ಕಿರುದೆರೆ ಕುದುರೆಯ ರವಿರಾವುತರನು
ಕೊಳದಂಗಣದೊಳಗೋಡಿಸುತ,
ಚಣಕೂ ಚೆದರುವ ಮೋಡದ ಮಂದೆಗೆ
ಬಾನಿನ ಬಯಲೊಳಗೂಳಿಡುತ,
ತಲೆ ಕೆದರುತ, ಮೈ ಕುಣಿಸುತ ತರುಗಳ
ಹುಡುಗಾಟಕೆ ಹುಯಿಲಿಡಿಸುತ್ತ,
ತಿಣ್ಣನೆ ಮಂದಿಯ ತುಡುಕುತ, ಜಡತೆಯ
ಕಸಿಯುವೆಲರ್ ಮಲೆ ಮೇಲುಗಡೆ.

ಪಗಲಿರುಳಾಗಿಸಿ ದೆಸೆಯೊಗ್ಗೂಡಿಸಿ
ಲೋಕವ ಮೋಹಿಸುತುರವಣಿಸಿ,
ಘುಡು ಘುಡಿಸುತಲಾರ್ಭಟಿಸುತ ಫಳ್ಳನೆ
ಪಲ್ಕಿರಿಯುತ ಭೀಕರನೆನಿಸಿ,
ಬುದ್ಧನ ಮಾರನೊಲಚಲವ ತಾಗುತ
ಹಮ್ಮಳಿದೋಡಲು ಕಾರ್ಮುಗಿಲು,
ನಗುತಿಹ ದೇವರ ದಿವ್ಯಸ್ಮಿತವೆನೆ
ಮಳೆಬಿಸಿಲಿದೊ ಮಲೆ ಮೇಲುಗಡೆ.

ಸೊದೆಯುಂತಸುವನು ಬಿಸಿಲುದ್ದೀಪಿಸೆ
ನಲಿದುಲಿದಾಡುವೆ-ಸುರನವೊಲು;
ಕೈಯೆಡೆ ಕೋಡೊಳು ರೆಕ್ಕೆಯುಗೊಳ್ಳಲು
ಮುಗಿಲುತ್ಸುಕಿಸುವೆ-ಯಕ್ಷನೊಲು;
ಗಿರಿಶನೊಲದ್ರಿಯ ನಡೆವ ಮಹಾತ್ಮನ
ಹಿಂಬಾಲಿಸುವೆನು-ಗಣರವೊಲು;
ಅಮರ್ತ್ಯಚೇತನರನೇಕ ಭಾವಗ–
ಳಿಂತೆನಗಹುದೈ ಮೇಲುಗಡೆ.

ಸುವರ್ಣಸಂಪುಟ/೧೭೭

ಮೆಲ್ಲನೆ ಮೆಲ್ಲನೆ ಬೆಳುದೆಸೆ ದಳಗಳ
ತಿರೆ ಹೂ ಮುಚ್ಚಲು, ಇರುಳಿಳಿಯೆ,
ಶಾಂತನ ತೇಜಸ್ವಿಯ ಸಾನ್ನಿಧ್ಯದಿ
ತಮ್ಮೊಳಬೆಳಕೊಳು ಜನವೆಸೆಯೆ.
ಶ್ರುತಿ ನುಡಿಯಲು, ನುತಿಯೊಗೆಯಲು, ಕರಣಗ–
ಳಮಿತಾಚರಣೆಯ ಸುತನವೊಲು
ದಣಿದಾತ್ಮದ ಬಳಿಗೈತರೆ-ಅಹ ಏ-
ನುತ್ಸವವೋ ಮಲೆ ಮೇಲುಗಡೆ!

ಹೊನಲ ಹಾಡು

ಸ್ಥವಿರ ಗಿರಿಯ ಚಲನದಾಸೆ
ಮೂಕವನದ ಗೀತದಾಸೆ
ಸೃಷ್ಟಿಹೊರೆಯ ಹೊತ್ತ ತಿರೆಯ
ನಗುವಿನಾಸೆ ನಾ

ಬಾಳ್ವಿಗೆಲ್ಲ ನಾನೆ ನಚ್ಚು
ಲೋಕಕೆಲ್ಲ ಅಚು ಮೆಚ್ಚು
ನಾನೆ ನಾನೆ ವಿಧಿಯ ಹುಚ್ಚು
ಹೊನಲ ರಾಣಿ ನಾ

ಕಿರಣ ನೆಯ್ದ ಸರಿಗೆಯುಡಿಗೆ,
ಇರುಳು ಕೊಟ್ಟ ತಾರೆ ತೊಡಿಗೆ,
ಇಂದುಕಳೆಯ ಹೂವೆ ಮುಡಿಗೆ,
ದೇವಕನ್ಯೆ ನಾ.

ಬೆಳ್ಳಿ ನೊರೆಯ ನಗೆ ನಗುತ್ತ,
ತೆರೆಯ ನಿರಿಯ ಚುಮುಕಿಸುತ್ತ,
ಕಡಲ ವರಿಸೆ ತವಕಿಸುತ್ತ,
ನಡೆವ ವಧುವೆ ನಾ.

ನಲಿತ ಕುಣಿತವೆನ್ನ ಶೀಲ,
ಚಲನವೆನ್ನ ಜೀವಾಳ.

ಲುಪ್ತವಾಗೆ ದೇಶಕಾಲ
ಎನ್ನ ಗಾಯನಾ

ದಡದ ಗಿಡಕೆ ಪುಷ್ಪಹಾಸ,
ಸನಿಯದಿಳಿಗೆ ಸಸ್ಯಹಾಸ,
ಹಾಸಕೀರ್ಣ, ಹಾಸಪೂರ್ಣ
ಎನ್ನ ಜೀವನಾ.

ಹೂವಿನಾಸೆಯನ್ನು ತೋರಿ
ಎಲೆಯ ಕಣ್ಣೀರ ಕಾರಿ
ರೆಂಬೆಯಡ್ಡಗಟ್ಟಿ, ಹಳುವು
ಆಡೆ ಕರೆವುದು;

ಬೆಟ್ಟ ಮುದ್ದು ಮಾಡಲೆಂದು,
ಮಡುವು ಹಾದಿ ತಂಗಲೆಂದು,
ಕಡಲು ಒಲುಮೆ ಸಾಲದೆಂದು
ನನ್ನ ತಡೆವುದು.

ನಾನು ನಿಲ್ವುದೊಂದೆ ಚಣಂ
ಸತತ ಕರ್ಮವೆನ್ನ ಗುಣಂ
ಅದಕೆ, ಕಾಣೆ ಗೋಳನಣಂ
ಹರ್ಷವೆನಗೆ ಚಿರಂತನಂ.

ಗವಿಗಳಲ್ಲಿ ಹುಳ್ಳನಡಗಿ,
ಬಂಡೆಮೇಲೆ ಹವ್ವನೆರಗಿ
ಮಡುವಿನಿಂದ ಮೆಲಸೆ ಜರುಗಿ
ಕಡಲಿಗೋಡುವೆ;

ಬಿಸಿಲಕೋಲ ಹಿಡಿದು ಹತ್ತಿ
ನೀರ ತೇರನೇರಿ ಸುತ್ತಿ
ತಿರುಗಿ ತಿರೆಯ ಮಡಿಲಿನಲ್ಲಿ
ಧುಮುಕಿ ಹರಿಯುವೆ.

ಅಚರ ಜಗದ ಚಲನದಾಸೆ
ಮೂಕ ಜಗದ ಗೀತದಾಸೆ
ನಿಯತಿ ನಿಯಮ ನಿಯತ ಜಗದ
ನಗುವಿನಾಸೆ ನಾ.

ವನ ವಿನೋದ, ಮಲೆಯ ಮೋದ,
ಮುಗಿಲ ಮೇಲ್ಮೆ, ನಾಡ ನಲ್ಮೆ,
ನಾನೆ ನಾನೆ ದಿವದ ಕೂರ್ಮೆ-
ಪೊನಲ ರಾಣಿ ನಾ.

ಅಂತರ್ಯಾಮಿಯ ಒಂದು ಸೋಗಿನ ದರ್ಶನ

೧

ಬೆಳು ಬೆಳಗಾಯಿತು, ಎಳ ಬೆಳಕಾಡಿತು
ದೇವನ ಹಳ್ಳಿಯ ನೆಲ ನಲಿದಿತ್ತು.
ಆತ್ಮೋಲ್ಲಾಸದ ಮಧುರಾಲಾಪದ
ತೊಟ್ಟಿಲ ಮಗುವೊಲು ಜಗವುಲಿದಿತ್ತು.

ಆಗಸ ಮಾನಸಸರದೊಳು ಮಿಂದೊಲು
ತಣ್ಣನೆ ತೆಳುಗಾಳಿಯು ಬೀಸಿತ್ತು;
ಎದುರಿನ ಹೊಲದೊಳು ಹೊಂಗೆಯ ತುರುಗಲು
ಬೆಳಕಿನ ತುಂತುರುಗಳ ಹನಿಸಿತ್ತು.

ಆವುದೊ ಹಾಡಿಗೆ ಅಭಿನಯಿಸುವ ತೆರ
ಅರಳಿಯು ಎಲೆಗೈಯಾಡಿಸುತ್ತಿತ್ತು;
ಮುಗಿಲಿಳೆ ಕೂಡುವ ತಾಣದಿ ಬೆಟ್ಟವು
ಮುಗಿಲಿಗಿಂತಲೂ ಹಗುರಾಗಿತ್ತು.

ಏತಕು ಅಂಟದೆ ತನ್ನಾರಾಮದಿ
ಹದುಳದಿ ನೆಮ್ಮದಿಯೊಳು ಮನವಿತ್ತು;
ದೇವನ ಹಳ್ಳಿಯ ದಿನವಿಂತಿತ್ತು,
ದೇವರಿಗಾಡುಂಬೊಲದಂತಿತ್ತು.

೨

ಇಂತಾದಿನವಿರೆ ಬಿನದಕೆ ಮೀಸಲು,
ನನ್ನ ಮನಂ ಪಟವಿಳಿಸಿದ ಓಡೊಲು;
ಅವಧಾನವ ಕೆಡಿಸುವರಾರಿಂತು
ನನ್ನನೆ ದುರುದುರು ದಿಟ್ಟಿಸುತಿಂತು?

ಇತ್ತೆಡೆಯೊಮ್ಮೆಗೆ ಅತ್ತೆಡೆಯೊಮ್ಮೆಗೆ
ಸುಳಿಸುಳಿದಾಡುತ ಚಣ ಚಣ ನಿಂತು
ನನ್ನೆದುರೆನ್ನನೆ 'ಕೌತುಕವಿದ ನೋ-
ಡೆ' ನ್ನುವ ತೆರ ನಿಟ್ಟಿಸುತಿದೆ ಜಂತು!

ಕೊಂಕಿದ ಕೋಡಿನ ಮುರುಟಿದ ಮುಸುಡಿನ
ಹಳ್ಳದ ಮೂಗಿನ ಬಿರಿಹೊಳ್ಳೆಗಳ,
ಬಾಳೆಯ ಮೋತೆಯ ಗಾತ್ರದ ಕಿವಿಗಳ
ಮೃಗವಿದಿಗೋ ಗುಡ್ಡೆಯ ಕಣ್ಣುಗಳ!

'ಬಲ್ಲೆ ನಾ ನಿನ್ನ, ನೀನೋ ನನ್ನನು
ಗುರುತಿಸಲಾಗದೆ ಭ್ರಮೆಯಿಂದಿರುವೆ.
ಇದುವೇ ಬಿನದಂ–ಅಹಹಾ!' ಎಂಬೊಲು
ನಗಲಾಗದೆ ನಗುತಿತ್ತೇನೊರೆವೆ.

"ನೋಡಣ್ಣಾ, ನೋಡಣ್ಣಾ" ಎಂದಿದ
ಬಳಕೆಯ ಹೆಸರೊಳೆ ಕರೆಯಿತು ಹಸುಳೆ.
"ಎಳಮನಸಿನ ಮಗು-ಬಲ್ಲುದೆ? ನೀನೋ?"
ಎನ್ನುವ ತೆರನದು ನೋಡಿತು ಮಗುಳೆ.

೩

ಇಂತಾ ಮೃಗವೇಷನು ಬಿನದಿಸುತಿರೆ
ವೇಷವನಾಂತವನಾರೆಂದಾನಿರೆ,
ಸೂಟಿಯೊಳಾ ಸೋಗಿನ ಒಳಹೊಕ್ಕು
ನಿಜವರಿತೋಹೋ ಎಂದೆನು ನಕ್ಕು—

"ಬಲ್ಲೆ ಬಲ್ಲೆ ಈ ನಗೆಯಾಟವ, ಬಾ,
ಮೊಗವಾಡವ ಕಳೆ-ಏನಿದು ಹುಚ್ಚು;
ಇನ್ನೀ ವಂಚಿಸುವಾಟವು ಸಾಗದು,
ಬಿನದ ಸಾಕಣ್ಣ, ಯಾರಿಗೆ ಮೆಚ್ಚು!"

ಇಂತೀ ತೆರ ನಾ ಸದರದಿ ನುಡಿಯಲು
ದೌಡೋಡಿತು ಮೃಗ ಬಲು ನಾಚಿದವೊಲು-
ಮರುಚಣವೆಲ್ಲವು ನಿತ್ಯದೊಲಾಯ್ತು,
ದೂರ ಒಂದೆಮ್ಮೆ ಮೇಯುತಲಿತ್ತು!

೪

ದೇವನ ಹಳ್ಳಿಯೊಳಾ ಒಂದರೆಚಣ
ಮಾಯೆ ತೆರೆದು ದರ್ಶನವಿತ್ತವನಂ
ಅಂದಿಂದೆಲ್ಲಾ ರೂಪದ ಮರೆಯೊಳು
ಹುಡುಕುತ ಹಂಬಲಿಸಿದೆ ನನ್ನ ಮನಂ.

ಪಯಣಿಗರ ಹಾಡು

ಗುಡಿಯಾಚೆ ಗಡಿಯಾಚೆ ಗಿಡದಾಚೆಗೆ
ಹೋಗೋಣ ಬನ್ನಿರೋ ಹೊಸನಾಡಿಗೆ.
ಹೊಚ್ಚ ಹೊಸ ನೋಟಕ್ಕೆ
ಅಚ್ಚ ಬಾಳಾಟಕ್ಕೆ
ನೆಚ್ಚುಗೆಯ ಕೆಳೆಯರೇ ಹೊಸ ನಾಡಿಗೆ.

ನೆರೆಗೊಂಡ ಹೊನಲಂತೆ ಭೋರಿಡಲಿ ರಸ್ತೆ,
ಸಾಲುಮರ ಬಿದ್ದೆದ್ದು ದೌಡಿಡಲಿ ಮತ್ತೆ,
ರೈಲ್‌ಬಂಡಿ ಮೋಟಾರು ಬಸ್ಸು ಹರಿಗೋಲು,
ನಾಡಾಗಲೆಮಗೊಂದು ತೂಗುವುಯ್ಯಾಲು.

ಹುರುಡುಗಟ್ಟುತ ನಮ್ಮ ಜತೆಗೋಡಿ ಬರುವ
ಗುಡ್ಡಗಳ ಹಿಂದಿಟ್ಟು ನಾವೆಲ್ಲ ನಗುವ,
ನಮ್ಮ ವೇಗದಿ ಸಾಗಿ ಮುಗಿಲು ರವಿ ಎಲ್ಲಾ
ಒಕ್ಕೂಟಕೈತರಲಿ ದಿಕ್ಕುದೆಸೆ ಎಲ್ಲಾ.

ಹಚ್ಚಹೊಲ ಹುಚ್ಚೆಳ್ಳು ತೆನೆ ಜೋಳ ನೆಲ್ಲು
ಒಂಟಿ ಮರಗಳ ಸುತ್ತ ರಾಸವೆಲ್ಲೆಲ್ಲೂ;
ಬಾಳೆ ಕೈ ಬೀಸುತ್ತ ಕರೆವ ಕಣ್ ಸೈಪು
ಗರಿಯಲಗ ಝಳಪಿಸುವ ಈಚಲಿನ ಕಾಪು.

ಬೆರಗುನೋಟದ ಹಳ್ಳಿ ಮಂದಿಗಳ ಕೂಟ,
ಬೆಡಗಿನುಡುಪಿನ ಹೊಳಲ ಹೆಣ್ಣುಗಳ ನೋಟ
ಹೊಳೆ-ಹಳುವು-ಗುಡಿ ಎಂದು ಹರಿವ ಕಣ್ಣೋಟ,
ಅಡಿಗಡಿಗು ಅಹ ಎಂದು ಅಚ್ಚರಿಸುವಾಟ !

ಇಂದು ಯಾದವಗಿರಿ ನಾಳೆ ಹಳೆಬೀಡು,
ಮುಂದೆ ಜಗದಚ್ಚರಿ ಗೊಮ್ಮಟನ ಮೋಡು;
ಕಡಲು ಕರೆಯಲು ಹಿರಿಯ ಕುಮರಿಯುನೆ ನೆಗೆವ
ಪ್ರಣಯ ರುದ್ರೆಯು ಕಂಡು ಸೋಜಿಗವ ಪಡುವ

ಕಿವಿ ತಣಿಯೆ ಮೊರೆಯುವ, ಕಣ್ತಣಿಯೆ ಕುಣಿವ,
ಮುಪ್ಪಿಲ್ಲವೆನೆ ಹರಳು–ನೀರೊಳು ಹೊಳೆವ,
ಮರ್ತ್ಯಂಗನಂತದ ಆಸೆ ಮಿಗಲೆಂದೋ
ಕರುಣಿಸಿ ಬಾನ್ ಕವಿಯು ಕಡಲ ತಡಿ ಮುಂದು.

ಗಿರಿಯಾಚೆ ಗಡಿಯಾಚೆ ಗಿಡದಾಚೆಗೆ
ಹೋಗೋಣ ಬನ್ನಿರೋ ಹೊಸ ಸೀಮೆಗೆ
ಹೊಚ್ಚ ಹೊಸ ನೋಟಕ್ಕೆ
ಅಚ್ಚ ಬಾಳಾಟಕ್ಕೆ
ನೆಚ್ಚಿನಾ ನೇಹಿಗರೆ ಹೊಸ ಸೀಮೆಗೆ !

ಶಾರದಯಾಮಿನಿ

ಓ ತಾರಾಪಥ ಗಾಮಿನಿ
ಶಾರದಯಾಮಿನಿ
ನಕ್ಷತ್ರೋದ್ದೀಪಿಕೆ
ಶೋಭನೆ ಕಾರ್ತಿಕೆ
ಕಾಂತಿಮಯೀ ಶಾಂತಿಮಯೀ
ದಯಗೈ ತಾಯೀ.

ಕ್ಷೀರ ಪಥದೊಳಗೆ ಧೂಳನೆಬ್ಬಿಸುತ
ತೇರು ಹರಿದುಬರೆ ನಿನ್ನನೀಕ್ಷಿಸುತ
ತಾರೆ ಬಳಗ ಹೆದ್ದಾರಿಯಿಕ್ಕೆಲದಿ
ತುದಿಯ ಕಾಲಿನೊಳು ನಿಲ್ಲೆ ಕೌತುಕದಿ
ಹೊಸಿಲನೇರಿ ಸುಸ್ವಾಗತವೆನುತೆ
ಕುಡಿಯಾಡಿಸುತಿರೆ ಸಾಸಿರ ಹಣತೆ,
ಇದುವೇ ತಿರೆ ನಾವಿಲ್ಲಿಹೆವೆಂದು
ಸನ್ನೆಗೈವರೋ ನಿನಗೆನುವಂದು
ಮುದ್ದಿನ ಸದ್ದೊಳು ನಗೆಗದ್ದಲದೊಳು
ಬಣ್ಣದ ಬಾಣದಿ ತಿಣ್ಣನೆ ಹುಯಿಲೊಳು
ಬೀದಿಯೊಳೆಳೆಯರು ನಿನಗುತ್ಸವಿಸೆ
ಈ ದನಿ ಎನ್ನಾಸೆಯನೆಚ್ಚರಿಸೆ
ಹೊರಗೆ ಬಂದು ನಾನಂಬರ ತಲಕೆ

ಮೊಗವೆತ್ತುವೆನೌ ಸಂದರ್ಶನಕೆ.
ಆದೊಡಹಾ ಮುಂಬರಿದಿಹೆ ನೀನು
ದಿನದಿನವೂ ತುಸತುಸ ತಡ ನಾನು
ನಿನ್ನ ತೇರು ನನ್ನಾಸೆಗು ಚುರುಕು
ನೀ ಮಿಗಿಲೆನ್ನಯ ಹಂಬಲಕು
ಓ ದಿಗಂತ ಪ್ರಯಾಣೆ
ಚಾರು ಶಶಿಯಾನೆ !

ಇರುಳಿಗೆ ಮುಂಬೆಳಗಿನ ತೆರೆ ಬೀಳೆ
ರಂಗಕಿಳಿಯೆ ಚೆನ್ನುಡೆಯುಷೆ ಬಾಲೆ
ಮಂಜುಳರವ ಮೌನವನೆಚ್ಚರಿಸೆ,
ಸಂಜೀವನ ಮಂತ್ರವನುಚ್ಚರಿಸೆ
ಕುಳಿರುಗಾಳಿ, ಬೆಳ್ಳನೆ ದಳ ತೆರೆದು
ಸೇವಂತಿಗೆ ಹೊನ್ನೊಳಗನು ತೋರೆ,
ನಿನ್ನ ನೆರಳೊ ಎನೆ ಬೆರಗನು ಪಡೆದು
ನಾನಾಹೂಗಳ ಸನಿಯಕೆ ಸಾರೆ,
ಹಸುರೊಳು ಹನಿ ನನ್ನೊಹಗೆ ಹ್ಲೊಗೊಡೆ
ಕಂಡೆನೆಂಬೆ ನಾ ನಿನ್ನನಾಯೆಡೆ.
ಆದೊಡಹಾ, ನೀ ಮುಂಬರಿದಿರುವೆ,
ಎಂದಿನಂತೆಯೇ ನನ್ನನು ಮರೆವೆ,
ಓ ನಿರ್ಜಿತ ಗಗನವಿಷಾದೆ
ವಿಕಸಿತಾಹ್ಲಾದೆ !

ಮೃದು ಪದ ಪಾತಕೆ ತೆನೆ ನಸು ಬಾಗಿದೆ
ಉಯ್ಯಲನಾಡಿಹೆ ಎನೆ ಲತೆ ತೂಗಿದೆ
ಬಂದ ಪರಿಯನೀ ಹಕ್ಕಿ ಹಾಡಿದೆ
ಸಂದ ವರವನೀ ಹಸುರು ತೋರಿದೆ
ಸರಸಿ ಮಿಂಚಿಹುದು ನಕ್ಕೆಯೋ ಎನೆ
ನಿನ್ನನಂತು ನಾ ಕಾಣೆ ಶೋಭನೆ.
ನನ್ನ ಮನಕೊ ನೀನೊಂದನುಮಾನ-
ನನ್ನೆದೆಗೋ ನಿನ್ನರಿತ ಸುಮಾನ
ಓ ತರಂಗ ತಾರಾಭರಣೆ
ಸಂಮೋದ ಕಿರಣೆ !

ನಡು ಬಾನೊಳು ದಿನಪನು ಸೊಕ್ಕಿರಲು
ತಿಳಿನೀಲಕೆ ನೀಲಿಮೆ ಮಿಕ್ಕಿರಲು
ಬಿಳಿಮೋಡವು ಪುಳಿನದ ತೆರನಾಗೆ
ನಡುವೊಳು ತಣ್ಣನೆ ತಿಳಿಗೊಳವಾಗೆ
ನೀನಾ ತೀರದೊಳಾಡಿ
ಕೊಳದೊಳು ಜಳಕವ ಮಾಡಿ
ಹಿಂದಿರುಗುವೆಯಾ ನಿನ್ನ ಸದನಕೆ
ಸಂಜೆಯ ಮೆರವಣಿಗೆಯ ಹಸದನಕೆ.
ಓ ಅಂಬುದ ಪುಳಿನ ವಿಹಾರಿಣಿ
ನಭಸ್ತಾಪಹಾರಿಣಿ !

ನೀ ಮರಳಲು ನಿನ್ನಂತಃಪುರಕೆ
ಮರಳುವೆ ನಾ ನಿತ್ಯದ ಬೇಸರಕೆ.
ಹಗಲೊಳಾಸೆ ಮನದೊಳು ತೀರಿಹುದು
ಸಂಜೆಯುತ್ಸವಕೆ ಎದೆ ಹಾರಿಹುದು.
ಅಹ, ಇದಿಗೋ ! ಚೆಂಬೊನ್ನಿನ ಬೆಳಕಾಯ್ತು
ನನ್ನಯ ಮನೆ ಸೆರೆಯಂಗಳದೊಳಗೆ,
ಹಕ್ಕಿಯ ಕಲರವ ಕಲಕಲವಾಯ್ತು
ಸರಸಿಯ ಮುಂದಣ ತೋಪುಗಳೊಳಗೆ
ಬಾನ ಬೀದಿಯೊಳು ಚೆನ್ನೆಲರೆರಚಿ
ಸಂಜೆ ನಡೆವಳು, ಹೋ ಎಂದರಿಚಿ
ಬಿನದಿಸೆ ಮಕ್ಕಳು ಬೀದಿಯಮೇಲೆ
ಬಾ ಹೊರಗೆನ್ನುವಳೆನ್ನೆಳ ಬಾಲೆ,
ಮರಳಿಯಿಂತು ಜಗ ನಿನ್ನುತ್ಸವಕೆ
ಹಾರೈಸಿರೆ ನಾನಂಬರ ತಲಕೆ
ಮೊಗವೆತ್ತಿಹೆನೌ ಸಂದರ್ಶನಕೆ
ಓಹೋ ತಾರಾಪಥಗಾಮಿನಿ
ಶಾರದಯಾಮಿನಿ
ನಕ್ಷತ್ರೋದ್ದೀಪಿಕೆ
ಶೋಭನೆ ಕಾರ್ತಿಕೆ
ಕಾಂತಿಮಯೀ
ಶಾಂತಿಮಯೀ
ಬಗೆವೊಗು ತಾಯೀ.

ಕಡಲಿದಿರು

ಗುಳಿಗೆ ಬಿದ್ದಾರುತಿಹ ಭೂತದಂತೊರಲುತಿದೆ
ನಿಡುಸುಯ್ಯುತೀ ಕಡಲು ತನ್ನ ಬಂಧಿಸುವರೆಯು
ದಡವನಲೆಪಂಜದಿಂ ಪರಚಿ–ಮೇಲೇರಿ ಬರ
ಲೆಳಸಿ ನಿಮಿನಿಮಿರಿ ಬಿದ್ದೆದ್ದುರುಳಿ ಕೊನೆಗೆ ಈ
ಕರೆಗೆಯೇ ಕೈಚಾಚುತಿದೆ ನೆರವ ಕೋರುತ್ತ.
ದಿಟ ಮಹದ್ವ್ಯಕ್ತಿ ಈ ನೀರನಿಧಿ; ಚಿರವಿದರ
ತಟದೆಲ್ಲೆಯುಪಮಾನದಾರ್ತ ನಿರ್ಘೋಷ. ಇದ
ಸೆರೆಯೊಳಿಟ್ಟಾಳ್ವರಾರ್?–ಯೋ ವೈ ಭೂಮಾ ತತ್
ಸುಖಮೆಂಬ ಋಷಿವಾಣಿ ಅನುಭೂತವಾಗುತಿರೆ
ದಣಿವಿಲ್ಲದಲೆಯುುವೀ ಮುನ್ನೀರ ಹರಹ ನಾ
ಕನಿಕರಿಸಿ ನಿಂದಿಹೆನು ಆ ಮಹಾಶಕ್ತಿ ಸಂ–
ಮುಖದಿ ಅದರ ಋತವನು ಸೋಂಕಿ ಅಲ್ಪತೆ ನೀಗಿ-
ಕ್ಷುಬ್ಧ ಜಗದೊಳು ಕ್ಷಾಂತಿಯಾಂತಿರುವ ಯುಕ್ತನಂತೆ
ಹರಿಯ ನಿಲುವೊಳು ಭವಿಗೆ ಮರುಗುತಿಹ ಭಕ್ತನಂತೆ.

ಚಿಕುಹೂ

ಚಿಕುಹೂ ಚಿಕುಹೂ ಚಿಕುಹೂ-
ಸ್ನಯುವೊಲು ಮುಹುರ್ಮುಹು
ಆರೆಚ್ಚರಕೀ ತುತ್ತೂರಿ
ಬಾನೊಳು ಮೊಳಗುತಿದೆ?
ಎನ್ನ ಕಿವಿಯೊಳೀ ಸವಿ ದನಿ
ಸಿಂಪಿಸುತಿದೆ ಸೊದೆಸೀರ್ಪನಿ
ವಿಸ್ಮೃತಿಗೈದಿರುವಾತ್ಮವ–
ನುಜ್ಜೀವಿಪ ತೆರದೆ.

ದಿವಮುರೆತಪ್ಪನೆರೆ ಎಚ್ಚರೆ
ಅಗಲುವಳೆಂದಿಳೆ ಬೆಚ್ಚಿರೆ
ಹರಿಕಾರರನಮರಾವತಿ
ದೊರೆಯಟ್ಟಿಹನೆನಲು
ಈ ದನಿ ಬರೆ ಲಾಲಿಸುತೆದೆ
ಪಯಣಕೆ ಸಡಗರಗೊಳುತಿದೆ
ಮನ್ಮಾನಸ ಸರೋವರದ
ಕರಣಗಳಂಚಿನೊಳು.

ಚಿಕುವೂ ಚಿಕುವೂ ಚಿಕುವೂ-
ಕಂಪೆರಚಿದೆ ಈ ದನಿಹೂ
ರಸ ಸೂಸಿದೆ ಸ್ವಾಹಾ
ಎಂದುಜ್ವಲಿಸಲು ನೆನಹು
ನೋಡುತಲಿದ್ದರು ಕಾಣದು
ಆಲಿಸುತ್ತಿದ್ದರು ಕೇಳದು
ಸರ್ವೇಂದ್ರಿಯವಿದಕಾಗಿರೆ
ಪ್ರತ್ಯಕ್ಷವೆ ಮರಹು.

"ಬಂದಿರ ತಂದಿರ ಕೊಡುವಿರ
ಕೊಟ್ಟಿರ ಕೊಳುವಿರ ನಡೆವಿರ"-
ನಿಸ್ನೇಹದ ಸಭ್ಯತೆಯೊಳು
ಈ ನಡೆವಳಿಯೆಲ್ಲಾ
ನಡೆಯುತ್ತಿವೆ ಹೊರಬಗೆಯೊಳು,
ಮನೆಯಾಚೆಯು ಗದ್ದಲದೊಲು;
ಯೋಗಕ್ಷೇಮದ ವೇದನೆ
ಇಂದೆನಗಿನಿತಿಲ್ಲ.

ಭವಿ ನಾ ತಾಪಸಿ ನಾನು
ಕವಿ ನಾ ಕಿಂಕರ ನಾನು
ನಾ ನಾ ಇದಕಿತಿಯೇನಿದೆ
ಮಿತಿಯೇನಿದೆ, ದನಿಯೇ,
ಥಟ್ಟನೆರಗಿ ಗರುಡನ ತೆರ
ಅಹಮೆಂಬೀ ನಿಧಿನಾಗರ,
ನೊಯ್ದಿಹೆನೀ ಮುದವಿದ್ಯುತ್-
ಸ್ಪರ್ಶವ ಮನ ಪಡೆಯೆ.

ಚಿಕುವೂ ಕುವ್ವೂ-ಏನ್ ಸವಿ !
ಒಂದೇ ಸರದೊಂದೇ ಛವಿ
ಅಜರಾಮರವಿದು ಅಚ್ಚರಿ
ಪುರಾಣ ನೂತನವು
ಕೋಟಿ ಕೋಟಿ ಕೋಗಿಲೆ ವ್ಯೆ
ತರಗೆಲೆಯಂತುದುರಿವೆ ಸೈ
ಇದನು ಹಿಡಿದು ಬಿಡುವಾಟದಿ
ಋತುಋತು ಯುಗಯುಗವೂ.

ಈಯೆಡೆ ಆಯೆಡೆ ಬೇರೆಡೆ
ಬಿಡುವಿರುವೆಡೆ ಬಿಡುವಿರದೆಡೆ
ಒಲಿವೆಡೆ ನಲಿವೆಡೆ ಅಳುವೆಡೆ
ದೇಶವಿದೇಶದೊಳು.
ಜನ್ಮದಿ ಜನ್ಮದಿ ನಾನಿದ
ಬಗೆಬಗೆಯೊಳು ಕೇಳಿದ ಹದ
ಇಂದೆಂತೆಯೊ ತೆರೆ ತೆರೆಯುತ
ತೋರಿದೆ ಹೃದಯದೊಳು.

“ಓ ಕೆಳೆಯಾ, ಮನೆ ನೆನೆಯಾ
ಬಿಡುಬಿಡು ಭವದೀ ಕೊನೆಯಾ
ದಿವ್ಯತೆಗೆಯೆ ಕಾಮುಂಗೊಂ-
ಡೆದೆ ಎರಕೆಯುನೆರೆಯಾ”
ಎಂಬರ್ತಿಯ ಆರ್ತಸ್ವರ–
ವಿದು ಬಗೆಗೊಳೆ, ನಾ ಕಾತರ–
ಗೊಂಡೋಗುಟ್ಟುವೆ ನೆನೆನೆನೆ–
ದಾ ದೂರದ ಕರೆಯಾ.

ಚಿಕುವೂ ಕುವು ಕುವು ಟಿಇವೂ-
ಕಾರ ತಂಪು ಮಿಂಚ ಹೊಳಹು
ದಾಳಿಂಬೆಯ ರುಚಿ ಅಗಲಿದ
ಕಾದಲರೆದೆ ಕಾವು,
ಮಗು ತಾಯಿಗೆ, ಕವಿ ಚೆಲುವಿಗೆ,
ನನ್ನಿಗ ನನ್ನಿಗೆ, ಪರಮಗೆ
ಭಕ್ತರು ಹಂಬಲಿಸುವ ಬಗೆ
ಈ ಕೋಗಿಲೆಯುಲಿವು.

ದನಿಹಣ್ಣಿಂದಮೃತದ ರಸ
ತೊಟ್ಟಿಡಲಿಂತೆದೆ ತಾಮಸ-
ವುಳಿದುಜ್ವಲಿಸಿರೆ ಈ ಮಹ-
ದನುಭವ ಕೇನೆಂಬೆ?
ಈ ಶಾಶ್ವತ ರುತಿಗೊಂದಿದ
ಅಂದಂದಿನ ಸ್ಮೃತಿಯೋಲಿದ
ಪಿಡಿವಾನಂದದೊಳಾನಂ-
ತ್ಯವ ಮುಟ್ಟಿಹೆನೆಂಬೆ.

ಪ್ರತೀಕ್ಷೆ

ಇಂದು ಏನಾಗಿಹುದೆ, ಗೆಳತಿ
ಏಕೆ ಸಡಗರಗೊಳ್ವೆನೇ?
ಕಡಲಿನಗಲದ ಕೇರಿ ಹರಹನು
ಹಾರಿಬರುವೆಲರಾರ ದೂತನೆ,
ಸುದ್ದಿಯಾವುದ ಪೇಳ್ವೆನೇ?

ಕತ್ತಲಿದು ಮುನ್ನೀರಿನಂದದಿ
ತಿರೆಯ ಮುಳುಗಿಸೆ ಹಬ್ಬಿದೆ;
ಒಡೆದ ಹಡಗುಗಳಂತೆ ಮನೆಮಠ
ಅದರ ತಲದೊಳು ಬಿದ್ದಿದೆ–ಮನ
ಬೆದರಿ ಬಯಕೆಯು ತಬ್ಬಿದೆ.

ಎಲ್ಲ ಕರಣವ ಕಿವಿಗೆ ಹೊಂದಿಸಿ
ನಿಲ್ಲುವೆನು ದನಿಯುರಸುತ,
ಅನ್ಯಗಿಲ್ಲದ ಧೀರಗಮನದ
ಛಂದವಾಲಿಪ ನಲ್ಲದೊಂದನೆ
ತುಡಿಯುವೆದೆಯೊಳು ಹರಸುತ.

ಅಕೊ—
ಬಾನವರಿಗಿಳಿನೆನಪ ತರುವೀ
ಗುಡಿಯುಗಂಟೆಯು ಬಾಜನೆ
ಬೀದಿಯೊಳು ನೂರ್ ಕೊರಲ ತರುತಿದೆ;

ಹೃದಯುದೇಕಾಂತವನು ಸಾರುವ
ದನಿಯು ತಪುದೋ ಕಾಣೆನೇ.

ಅದೊ ಅವನ ನೇಹಿಗನ ನಗೆನುಡಿ-
ಅಗಲಿದರು-ಬಹನಿತ್ತೆಡೆ!
ಒಳಪುಗುವೆ, ಕನ್ನಡಿಯು ಮುಂಗಡೆ
ತುಸುನಿಲುವೆ, ಹೊರಬರುವೆ, ಲಾಲಿಪೆ
ನೆದೆಯು ಹಾಸುವೆ ನಡೆವೆಡೆ.

ಬಹನು ಬರುತಿಹನವ್ವ–ಬಂದನು–
ಕಂಡರೇಗತಿ ಕಾಣೆನೇ!—
ಬಯಕೆ ಕೊಡೆ ವಿಡಿದೊಲುಮೆಯುತ್ಸವ
ನನ್ನನರಸಿಯೆ ಬಳಿಗೆ ಬಂದಿರೆ
ಕಾಣದೊಲು ಮರೆನಿಂದೆನೇ!

ಸಂಜೆ ಗಾಳಿಗೆ ಜಳಕ ಮಾಡಿಸೆ

ಸಂಜೆ ಗಾಳಿಗೆ ಜಳಕ ಮಾಡಿಸೆ
ಹನಿತು ಮಳೆ ಹೊಳೆಯೋಡಿತು
ಬಾನ್‌ಬೆಸಲೆ ಶಶಿ ನೋಡಿ ನಗುತಿರೆ
ತಿರೆಗೆ ತಂಗದಿರಾಯಿತು.

ಮುಗಿಲ ರಂಬೆಯು ಮೇಲೆ ಮಿಂಚಿನ
ಹಕ್ಕಿ ರೆಕ್ಕೆಯು ಕೆದರುತ
ಹವಣಿಸಿದೆ ಉಡ್ಡೀನ ಲೀಲೆಗೆ
ಚಂದ್ರಲೋಕವ ಬಯಸುತ.

ಕಪ್ಪೆ ಜೀರುಂಡೆಗಳು ಮೇಳದಿ
ಜಪಿಸುತಿವೆ ಬಲ್ ಮಂತ್ರವ
ಅದರ ಮಹಿಮೆಯೊ ಎನ್ನೆ ತೋರುತ
ಸುತ್ತ ದೃಶ್ಯದ ತಂತ್ರವ.

ಓರೆಯಾದೀ ಸೋದೆಯು ಬೋಗುಣಿ
ಸುರಿಯುತಿಹ ಬೆಳುದಿಂಗಳ

ಕುಡಿದು ಮದವೇರಿಹುದೊ ಪುರವೆನೆ
ದೀಪವೆಸೆದಿವೆ ಚಂಚಲ.

ವಿಶ್ವಮೋಹನನುಸಿರು ಮಿಡಿದೆ–
ನ್ನಹಂಗೋಳದ ಬುದ್ಬುದ
ಚಿತ್ರದಂಚಿನೊಳವನ ಮಾಯೆಯು
ಮೆರಸುತಿದೆ ಬಹು ವಿಧವಿಧ.

ಕೊಳದ ಹೇಳಿಕೆ

"ಹೊನಲಿನ ಗೆಲುವಿಲ್ಲಿದಕೆ
ಕಮರಿಯ ಹಾರುವ ಸಾಹಸವಿಲ್ಲಿದಕೆ
ಕನಿಕರದಿಂದಲಿ ಗಾಳಿ
ತಳ್ಳಲು ಚರಿಸುವುದಲೆ ಹೆಳವನ ಹೋಲಿ
ಹರಿಯದು ತನ್ನಿಂದಾಚೆ
ಇದಕೆದೆಯೊಳು ದಿವಕೆಡೆಗೊಡದಿಹ ಪಾಚೆ
ಚೆಲುವಿದರೀ ಸೋಪಾನ
ಇದಕಾದೊಡೆ ಚಲಿಸುವ ಹಾಡುವ ಶುಚಿಗೊಳ್ಳುವ ಋತ ಊನ"

ಇಂತೆನ್ನನು ಜರೆಯದಿರು
ಹರಿಸುವ ಋತ ಸಲ್ಲದು ಕಟ್ಟೆಯ ಇದಿರು
ಆದೊಡೆ ಚ್ಯುತಿಯಿಲ್ಲದಕೆ
ಈ ಮುಲುಗುಟ್ಟುವ ಹುಳುವಾಯ್ತಾ ಋತಕೆ
ಮೀಣೇ ಹಾವೀ ಕಪ್ಪೆ
ಇಕೊ, ಈ ತಾವರೆಹೂ ! ಇದು ನಿನಗೊಪ್ಪೆ ?
ಎನೆಕೊಳ, ನಾ ಬೆರಗಿಂದ
ಉಡುಗಿದ ನಡೆ ಉಲಿಯದ ಹಾಡೀ ಹೂವಾಯ್ತೆನೆ
ಕೊಂಡೆನು ಬೆರಗಿಂದ;

ದಾಳಿಂಬೆ

ಇದು ಮೀಸಲೇ ನನಗೆ, ಈ ಬೆಳ್ಳಿಬಟ್ಟಲೊಳು
ರತ್ನಕಾಂತಿಯು ಚೆಲ್ಲಿ ಕಳಕಳಿಪ ದಾಳಿಂಬೆ?
ನೂತ್ನ ಋದ್ಧಿಯ ಪಡೆದ ಮೋದದೊಳಗೀ ಜಿಹ್ವೆ
ಇದುವರೆಗು ಕಾರ್ಪಣ್ಯದೊಳಗಿದ್ದೆನೆನುತಿಹುದು

ಬಿತ್ತ ಬಿತ್ತದ ರಸವ ಸವಿದು ಸವಿದಾಕ್ಷಣದಿ
ಆಯುಷ್ಯಸಾರವನು ಬಟ್ಟಿಯಿಳಿಸುವ ತೆರದಿ.
ದೇಯುವಿದನಾ ರೂಕ್ಷ ವೃಕ್ಷವೀ ಪೃಥ್ವಿಯಿಂ
ದೆತ್ತಿ ಈ ಮುದವೆರೆವವೊಲಾವರ್ತಿ ಚೋದಿಸಿತು?

ಋತು ಋತುಗಳಾದರವ, ಗಾಳಿಯುಪ್ಪುಗೆ ಸೊಬಗ,
ಬೆಂಗದಿರ ರಕ್ತಿಯನು ತಂಗದಿರ ಸಕ್ತಿಯನು
ತಂಗಿಸಿತೊ ಮಳೆಮಂಜಿನೊಲವ ಮಧುರಾಮ್ಲದೊಳು
ಇತರೇಂದ್ರಿಯ ದ್ಯುತಿಯ ರಸನೆಗನುವದಿಸುವೊಲು?

ರಸವಿದೇನಿದ ಸವಿವರಾರ್ ಏನಿದಚ್ಚರಿಯು ಭೋಗ
ರಸನೆಹಸೆಯೊಳಗಿಂತು ಪ್ರಕೃತಿ ಪುರುಷರ ದಿವ್ಯಯೋಗ!

ನೆರಳು

ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು
ಅದಕೊ ಆದರಿಚ್ಛೆ ಹಾದಿ
ಇದಕು ಹರಿದತ್ತ ಬೀದಿ.

ನೆಲನೆಲದಿ ಮನೆಯ ಮನೆಯ ಮೇಲೆ
ಕೊಳ ಬಾವಿ ಕಂಡು ಕಾಣದೋಲೆ
ಗಿಡ ಗುಲ್ಮ ತೆವರು ತಿಟ್ಟು
ಎನ್ನದಿದಕೊಂದೆ ನಿಟ್ಟು.

ಗಾಳಿ ಬೆರಗಿದರ ನೆಲದೊಳೋಟ!
ವೇಗಕಡ್ಡಬಹುದಾವ ಹೂಟ?
ಸಿಕ್ಕುದಣಿವಿಲ್ಲದಂತೆ
ನಡೆಯಿದಕೆ ನಿಲ್ಲದಂತೆ.

ಇದ ನೋಡಿ ನಾನು ನೆನೆವೆನಿಂದು-
ಇಂಥ ನೆಳಲೇನು ಗಾಂಧಿಯೆಂದು!
ಹರಿದತ್ತ ಹರಿಯು ಚಿತ್ತ
ಈ ಧೀರ ನಡೆವನತ್ತ.

ವಿಶ್ವಕುಟುಂಬಿಯ ಕಷ್ಟ

ಬೇಸಗೆ ಮಧ್ಯಾಹ್ನ ತಾಪವುಮ್ಮಳಿಸಿತಾ-
ಕಾಶಕೆಲ್ಲಕು ರವಿಯೊಬ್ಬ;
ಬೀಸುತ ಗೋದುವೆ ಹಿಟ್ಟನ್ನು ನಾಗಿ ಆ-
ಯಾಸದೊಳೆಳೆವಳು ಕಲ್ಲ.

ಬಿಸಿಯುಂಡ ಬವಣೆಗೆ ನೆಲದೊಳು ಹೊರಳಿ ನಿ-
ಟ್ಟುಸಿರೆಳೆಯುವಳೆನ್ನ ಅಜ್ಜಿ;
ಅಸುವನ್ನು ನಮಗಾಗಿ ಮಿಾಸಲು ತೆಗೆದಿಟ್ಟ
ಕಸಿಹಣ್ಣು ಹಣ್ಣು ನಮ್ಮಜ್ಜಿ.

ಬೇಗೆಯ ಬವಣೆಗೆ ಜಡವಾಯ್ತು ಸೃಷ್ಟಿಯು
ಕೂಗಿಲ್ಲ-ಸದ್ದಿಲ್ಲ-ಬಿಡುವು.
ಬೀಗಲು ಭಯ, ಜೀವ ನೆಳಲಿಗೆ ಶರಣಾಯ್ತು-
ನಾಗಿಗನಾಥೆಗೆ ಬಿಡುವೆ?

"ವರುಷದ ಕೂಸೆದ್ದು ಅಳುತಿರಬಹುದೇನೊ?
ನರಸೀಗೆ ಹಸಿವೇನೊ, ಭಯವೊ?
ಸರಿಹಗಲಚ್ಚೇರು ಬೀಸುವುದುಳಿದಿದೆ,
ಇರುಳೀಗೆ ತುಸ ಹಿಟ್ಟೊ ಇಲ್ಲ".

ಸುವರ್ಣಸಂಪುಟ/೧೯೩

ಸೊರ ಸೋರ ಬುಸು ಬೂಸು ಎಂಬೊಂದು ದನಿಯಿಂದು
ಗರಿಮೂಡಿದಜ್ಜಿಯ ಕನಸ
ಹರಿಯೆ, ತಾನೆಲ್ಲೆಡೆ ನಿರುಕಿಸಿ ಕಂಡಳು
ಸೊರಗುವ ಒಕ್ಕಲ ಹೆಣ್ಣ.

"ನಾಗಿ, ಇದೇನವ್ವ ಬಿಸಿಲೊಳು ಕಣ್ಣೀರು !
ಸಾಗಿದ ಗಂಡನ ನೆನಪೆ?
ಬೇಗುದಿಗೊಂಬೆಯ ಬದುಕಿನ ಬವಣೆಗೆ?
ಮಾಗಿಲ್ಲವೇ ಬಾಳ ಗಾಯ?

"ಬಿಕ್ಕಿ ನೀನಳುವಷ್ಟು ಕಷ್ಟ ಅದೇನವ್ವ?
ಮಕ್ಕಳ ಹಂಬಲೆ, ನಾಗಿ?"
ಉಕ್ಕುವ ದುಃಖವ ನುಂಗುತ ನುಡಿದಳಾ
ಒಕ್ಕಲ ಹೆಣ್ಣು ಈ ತೆರದಿ:

"ಏನೇಳ್ಳಿ ನಮ್ಮವ್ವ, ಇರುವೋರು ಮೂವೋರು:
ನಾನು ನಮ್ಮೆಣ್ಣು ಮೊಲೆಗೂಸು.
ಕಾಣೆರಾ, ಒಪ್ಪೊತ್ತು ದುಡಿಯದೆ ಕೂತರೂ
ಪ್ರಾಣಾವ ನೀಸೋದು ಕಷ್ಟ.

"ಹುಲುಮನುಸಿಯ ಪಾಡು ಹಿಂಗಯ್ತೆ, ನಮ್ಮವ್ವ,
ಮಲೆದೇವ್ರ ಪಾಡ ಏನೇಳ್ಳಿ!
ಸುಲಭಾನೆ ಲೋಕಾದ ಸಂಸಾರ ನಡೆಸೋದು
ಅಳು ಬಂತು ನಮ್ಮಪ್ಪಗಾಗಿ".

"ಹುಚ್ಚಿ ನೀನೆಲ್ಲಾರೂ ಹೋಗೆ"ಂದು ನಮ್ಮಜ್ಜಿ
ಹುಚ್ಚಾಗಿ ನಕ್ಕಳು ಅಂದು.
ಹೆಚ್ಚುಂಟೆ ಒಕ್ಕಲ ಹೆಣ್ಣಿನ ಮರುಕಕೂ?
ಅಚ್ಚರಿಗೊಂಬೆ ನಾನಿಂದೂ!

ಜ್ಞಾನ-ಮೌನ

(ಅನುಭಾವ ಗೀತೆ)

ಮನ ತನ್ನ ಹರೆಯುವ ತೆತ್ತು
    ಪಡೆದರಿವಿನ ಫಲವೆ
ವರಿಸಲು ಬಹ ನುಡಿಗೆ
    ಮೊಗಗೊಡದಿರೆ ತರವೆ?

ಛಲವೇಕೆ ಹಸೆಗೆ ನಿಂತು
    ಬಳಗಕೊಸಗೆ ತರೆ
ಹುಸಿಯಲ್ಲದೊಲುಮೆಗೆ
    ಕೊಸರಾಡುವರೆ?

ಮೌನದ ತೌರಿನೊಳೆ
    ತಾನೆ ತಾನಾಗಿರುತ
ಅನ್ಯರನೊಲ್ಲದ
    ಕನ್ಯೆಯೆ ನೀ ನಿರುತ?

ಮನ ತನ್ನ ಹರೆಯವ ನೀಡಿ
    ಪಡೆದರಿವಿನ ಫಲವೆ
ಒಲಿದು ಬಹ ನುಡಿಗೆ
    ನಿಲುಕದಿಹುದು ತರವೆ?

ನೇರಿಳೆ

ಬೊಗಸೆಯೊಳಿರೆ ನೇರಿಳೆ
ಸೊಗಸದಾವಗೀ ಇಳೆ?

ಏನು ಬಣ್ಣ ಏನು ಹೊಳಪು
ಬೆಳಕನೆ ಜಾರಿಸುವ ನುಣುಪು!
ರಸನೆಗಿದುವೆ ಸಾಲಿಗ್ರಾಮ
ಹಸರಿಸುತಿದೆ ರಸಗ್ರಾಮ.

ಹುಳಿಸಿಹಿ ಬೆರೆತೊಂದೊಗಚು
ನಾಲಗೆಯೊಳೆ ಮನ ಮೊನಚು
ಎಲೆ ವದನಾಲೋಲ ಜಂಬು
ಜಿಹ್ವೇಂದ್ರಿಯನಭಶ್ಯಂಭು
ಇಂಥ ಹದವನೆಲ್ಲಿ ಕಲಿತೆ
ಬಣ್ಣವೆಲ್ಲ ನಿನಗೆ ಹೊರತೆ
ನಿನ್ನೀ ಪರಿಣತ ರಹಸ್ಯ
ಆವ ಶಾಮ ಸೌಮನಸ್ಯ?

ಮಾವಡಗುತ ಪೇರಳೆ
ಬಹ ಮುನ್ನವೆ ನೇರಿಳೆ
ಬನವೆ ತುಂಬೆ ಬೀಸುಗಾಳಿ
ಬಿಸಿಲಿಗಿಡಲು ಮೋಡ ದಾಳಿ
ಮನೆವಳತನ ಹಿರಿಯುಗಾಗೆ
ಎಳೆಯರ ನಿನ್ನಾಸೆ ಬೇಗೆ-
ಯೊಗೆಯೆ ಬಂಡೆ ತೋಪಿನತ್ತ
ಮೇಲೆ ಮೇಲೆ ಅತ್ತ ಅತ್ತ
ಕಡಲಕುವರ ಕರಿಮುಗಿಲಿಗೆ
ಇದೆ ಬನದೇವಿಯು ಕೊಡಿಗೆ
ಎನೆ ತೋರುವೆ ರಸದ ಗಣಿ
ವೃಕ್ಷಕೆ ನೀ ಬೈತಲೆಮಣಿ

ಪಾಂಡವರನೆ ಸೆಳೆದ ಫಲವೆ
ಅನನ್ಯಾನ್ನ ಮುನಿಯ ಛಲವೆ,
ಮುರಿವ ತೆರದೊಳೆತ್ತಿ ಕೊರಲ
ನಿಟ್ಟಿಪನಲ ನಿನ್ನ ತರಳ
ಫಲದರ್ಶನ ಹರ್ಷಿತ
ರಸವ್ಯಸನ ಕರ್ಷಿತ—
ಹರಣ ಹಗುರ ನಿನ್ನಾಸೆಗೆ
ಮಾಸಾಹಸಕೊಲಿವುದು ಬಗೆ
ಅಂಜಿಸದೈ ಬೃಹದ್ವೃಕ್ಷ
ಮೈ ಮರ್ಕಟದೊಲು ದಕ್ಷ

ತೆವಳುವ ದೇಕುವ ಜೋಲುವ
ರೆಂಬೆಗು ರೆಂಬೆಗು ವಾಲುವ
ಜೊಂಪೆಗು ಜೊಂಪೆಗು ನಿಮಿರಿ
ಕೆಳಗಣ ಕಮರಿಯ ನಗುವ;
ಮುಸುಕುವ ತುರುಗಲ ಸವರಿ
ಕೆಳೆಯಗೆ ಕೆಂಗಾಯೊಗೆವ;
ಕೆನ್ನೆಯುಬ್ಬಿ ಚೀತ್ಕರಿಸುವ
ಬಿತ್ತವುಗುಳಿ ಫೂತ್ಕರಿಸುವ
ಬೆಳುಬಟ್ಟೆಗೆ ಗುರಿಯಿಡುವ
ನಗುತಲೆ ಶಾಪವ ಪಡೆವ.

ಇನ್ನಾಯಿತು ವನದ ಸಲ್ಮೆ
ಕೊಳದ ನೀರಿಗಿಲ್ಲ ಬಲ್ಮೆ
ನಾಲಗೆ ಬಣ್ಣವ ತೊಳೆಯೆ
ಮನೆಯ ತಾಣವಿರುಳ ಕಳೆಯೆ
ಹಿಸ್ಸುಣಿಸುತಿರೆ ತುಟಿಯ ಕಪ್ಪು
ಹಿರಿಯರೆರಚೆ ಬೈಗಳುಪ್ಪು
ನುಸುಳುವನವ ಮೆಲ್ಲಗೆ—
ಅಲ್ಲಲ್ಲಿಂದೆಲ್ಲಿಗೆ?

ಮೂಲೆಯೊಂದು ವೇತ್ರಾಸನ
ಹೊಸಿಲ ದಾಟಲೊಲ್ಲದ ಮನ
ಆದೊಡಿರವು ನವನೂತನ
ಆಗಲು ವನರಸಸೇಚನ

ವತ್ಸಲೆ ತಿರೆಮೊಲೆಕರ್ಮೊನೆ
ಇದು ದಿಟ ಈ ತನಿವಣ್ಣೆನೆ
ಬೊಗಸೆಯೊಳಿರೆ ನೇರಿಳೆ
ಸೊಗಸದಾವಗೀ ಇಳೆ?

ಬಿದ್ದಗರಿಯ ಕಂಡು

ಯಾವ ಲೋಕ ವರ್ಣವಿದಕೆ !
ಏನು ಮೃದುಲ ರೇಖೆಯು !
ತಿಳಿಯ ಬಾನನೀಲಿ, ಪಚ್ಚೆ,
ಬಿಳಿದು, ಕರಿದು, ಹಳದಿಯು !
ಹಸುರು ಹುಲ್ಲ ಸಂದಿನಲ್ಲಿ
ಅವಿತುಕೊಂಡ ಪುಟ್ಟ ಗರಿಯೆ !
ಸಂಜೆ 'ವಾಕಿ'ನಲ್ಲಿ ಕಂಡೆ
ನಿನ್ನ ಮುದ್ದು ಮಾಟವಾ.

ಕೆಳಗೆ ತಿಳಿಯ ಬಾನಬಣ್ಣ
ತಾಗಿ ಹಳದಿ ಗೆರೆಯಿದೆ,–
ಕಂಡು ಕಾಣದಿರುವ ರೇಖೆ
ಯಾವ ಕುಂಚವೆಳೆದುದೊ–
ಒತ್ತಗಿಹುದು ಮಿರುಗು ಕರಿಯು,
ಅಲ್ಲಿಗಲ್ಲಿ ಪಚ್ಚೆ ಬಣ್ಣ,
ಹರಿದು ಬಳೆದುಕೊಂಡಿದೆ,
ಬಿಳಿಯ ಚುಕ್ಕೆ ತುದಿಗಿದೆ.

ಎಲ್ಲಕ್ಕಿಂತ ಮಿಗಿಲು ಕಾಣೊ
ಸ್ವರ್ಣಕಣದ ಸಿಂಚನ !
ಮುಟ್ಟಿನೋಡೆ ಬೆರಳ ತುದಿಗೆ
ಅಂಟುತಿರುವ ಕಾಂಚನ !
ಏನು ಚೆಲುವು ! ಏನು ಮುದ್ದು !
ಎಂಥ ಕಾಂತಿಯಡಗಿದೆ.
ಯಾವ ಮಾಯೆಯುವಿತುಕೊಂಡು
ಪುಟ್ಟಗರಿಯ ತುಂಬಿದೆ ?

ಯಾವ ಚೆಲ್ವ ಹಕ್ಕಿ ಪುಕ್ಕ-
ವನ್ನು ಬೆಳಗಿ ಬಾಳಿತೊ !

ಯಾವ ಹೆಣ್ಣನೊಲಿಸಿ ತಂದು
ಹಾಡಿ ಗೂಡ ನಲಿಸಿತೊ !
ಯಾವ ನೋಟವನ್ನು ಬೆಳಗಿ
ಯಾರ ಕಣ್ಣ ಸೆಳೆಯಿತೊ !
ಯಾವ ಬಣ್ಣಗಾರನಿಂಗೆ
ಮುದವನಿತ್ತು ಹರಸಿತೊ !

ಗರಿಯೆ ! ಎಂತು ಬಿದ್ದು ಹಸುರು
ಹುಲ್ಲ ಸಂದಿನಲ್ಲಿಹೆ ?
ಯಾವ ಯಾನಗೊಂಡವೇಳೆ
ಭರಕೆ ಜಗುಳಿ ಬಿದ್ದಿಹೆ ?
ಹಕ್ಕಿ ಕೊಕ್ಕಿನಿಂದ ಕೆದರೆ
ಕೆರಳಿ ಬೇರೆಯಾದೆಯೊ ?
ಕಾಲಮಾಗೆ, ಕಾರ್ಯವಾಗೆ
ಭಾರವಾಗಿ ಸಿಡಿದೆಯೊ ?

ದೇವಲೋಕದಲ್ಲಿ ಶಾಪ-
ಗ್ರಸ್ತೆಯಾದ ಅಪ್ಸರಿ
ಬುವಿಯ ಪುಣ್ಯಪುರುಷನೊಂದು
ಸ್ಪರ್ಶಕಾಗಿ ಕಾದಳೊ ?
ಭೂಮಿರಾಣಿ ಪಸದನಕ್ಕೆ
ಹಸುರು ಹುಲ್ಲ ಹಸೆಯಲಿ
ಮಡಗಿವೋದ ಒಡವೆಯೊಂದೊ
ತಿಳಿಯಲಾರೆನಾರೆನು.

ರಾಮಚಂದ್ರ ವಿನೀತ

ಓರ್ವದೇವಿ

"ಉರಿವ ಸೂರ್ಯನ ಕಣ್ಣು ಸಹ ಕುಕ್ಕಿಸುವ ರನ್ನೆ
ನೀನಾರು ದುಂದುಗಾರ್ತಿ?
ಮೈಯ ನಿಂಬೆಯ ಬಣ್ಣವನ್ನು ಬೀರುವ ಹೆಣ್ಣು
ನೀನಾರು ಹೊನಹುಗಾರ್ತಿ?
ಹೊಂಗೇದಿಗೆಯ ಸುಳಿಯ ಹಾಗೆ ಸುಳಿಯುತ ಬರುವ
ನೀನಾರು ಚೆಂದಗಾರ್ತಿ?
ಜಗಮುಕುಟದಲ್ಲಿ ಹೊಂಗರಿಯಂತೆ ನರ್ತಿಸುವ
ನೀನಾರು ಚೆಲ್ಲಗಾರ್ತಿ?

ಹೆಜ್ಜೆ ಹೆಜ್ಜೆಯ ಮುಂದೆ ಬಣ್ಣ ಬಣ್ಣಗಳಿಂದ್ರಚಾಪ
ಮೂಡಿಸುತ ಬರುವಿ!
ಹೆಜ್ಜೆ ಹೆಜ್ಜೆಯ ಹಿಂದೆ ಚಿಕ್ಕೆ ಚಿಕ್ಕೆಗಳನ್ನು
ಚೆಲ್ಲುಚೆಲ್ಲುತ್ತಲಿರುವಿ!
ಬಂದಬಂದಲ್ಲೆಲ್ಲ ಚಂದನದ ಚಂದವನು
ಸೂರೆಮಾಡುತ್ತ ತರುವಿ!
ನಿಂದನಿಂದಲ್ಲೆಲ್ಲ ನಂದನದ ನಂದನವ
ಧರಿಸುವುದು ಸಕಲ ಪೊಡವಿ!

ನುಡಿನುಡಿಗೆ ಮುತ್ತುಗಳನುಗುಳುಗುಳಿ ಮುದ್ದು
ಮಂಟಪವನ್ನು ಮಾಡುತಿರುವಿ!
ನೋಟ ನೋಟಕೆ ಚೆನ್ನ ಮಿಂಚು ಮಿಂಚಿನ
ಹೊನ್ನಿನಂಚನ್ನು ಹೆಣೆಯುತಿರುವಿ!
ಪುಟನಡಿಗೆಯಾಟಕ್ಕೆ ಚಕ್ಕಂದದೋಟಕ್ಕೆ
ಮಾಟ ಸೆಲೆ ಪುಟಿಸುತಿರುವಿ!
ಮುಗುಳುನಗೆಬಗೆಯನ್ನು ಮಿಗೆಯೊಗುತ ಜಗದಲ್ಲಿ
ಮುಗುಳುಗಳ ಚಿಗಿಸುತಿರುವಿ!

*   *   *   *

ನಾಡಿನೊಡೆಯನ ಬೊಕ್ಕಸದ ಗುಟ್ಟು. ಪೊಡವಿಯೊಡಲಿನ
ಕಣಿಯ ಕರಣಿ ನಾನು!

ಚಿನ್ನರನ್ನದ ತಳಪು, ಹಾಲು ಬೆಳ್ಳಿಯ ಹೊಳಪು,
ಮುತ್ತುಗಳ ನೀರು ನಾನು !
ಒಕ್ಕಲಿಗರಕ್ಕರದಿ ಹರಹರಿಸಿ ಬರುಬರುವ
ಮಳೆಬೆಳೆಯ ಭರವು ನಾನು !
ಸುಗ್ಗಿ ಹರವುವ ಹರೆಯಬಾಳು, ಹೂಗಳ ಹುರುಳು,
ಹಾಲ್ದೆನೆಯ ತಿರುಳು ನಾನು !

ನಲ್ಲರನು ನೋಡಿ ನೆರೆನಾಚಿ ನಿಲ್ಲುವ ನಲ್ಲೆಯರ
ಗಲ್ಲ ಕೆಂಪು ನಾನು !
ಮದದಾನೆಯೊಲು ನಡೆವ ಮಾನಿನಿಯ ಕೈಯುಗುರ
ಮದರಂಗಿ ಕೆಂಪು ನಾನು !
ತಾಯಿ ಸಲೆ ಚುಂಬಿಸುವ ಬಾಲಕನ
ಚುಂಬವಳದುಟಿಯ ಕಡುಗೆಂಪು ನಾನು !
ಸಂಜೆ ಮುಂಜಾವುಗಳ ಕೆಂಬಾರ ಹೊಂಬಣ್ಣಗಳ
ಶಾಂತಿ ಕಾಂತಿ ನಾನು !

ಎಳೆಹುಲ್ಲು ಹಚ್ಚನೆಯು, ಗಿಳಿಚುಂಚು ಕೆಚ್ಚನೆಯು,
ಕಣ್ಣೋಗೆ ಕಪ್ಪು ಗೀಚು !
ಚಣಚಣಕೆ ಪಾರ್ವ ಪಾತರಗಿತ್ತಿ ಪಕ್ಕಗಳ
ಬಣ್ಣಬಣ್ಣಗಳ ಹುಚ್ಚು !
ಬಲು ಚೊಕ್ಕ ಚಿಕ್ಕೆಗಳ ಚಿಕ್ಕಮಕ್ಕಳ ತಾಯ
—ಸ್ವರ್ಣದಿಯ ಬಸುರ ಕೆಚ್ಚು !
ಬೆಳ್ಳಿ ಬೆಳಕನು ಬೀರ್ವ ಕೋಲುಮಿಂಚಿನ ನಾಚು,
ನನ್ನ ಮಾನಸದ ಮೆಚ್ಚು !

ಎಲ್ಲ ಗ್ರಹಗಳ ಸೊಗಯಿಸುವ ಬೆಳಕು,
ವಿಶ್ವಚಿತ್ರವ ಬರೆವ ಬಣ್ಣ ನಾನು !
ಜಗದಿ ಜಿನುಗುವ ಜಿನುಗು ಬೆಳಕು—ಜಿನುಗನು ನೋಡಿ
ಬೆರಗಾದ ಕಣ್ಣು ನಾನು !
ಸಕಲ ವಿಶ್ವದ ರೂಪು-ನನ್ನ ಜರಿಯುವ ಮನುಜ
ಹಾಳಾದ ಬಾಳಿನವನು;
ನನ್ನಾಳು ಬಲು ಮರುಳು, ನನ್ನನಾಳುವ ಧೀರ ವೀರ
ನಿಜ ಜಾಣನವನು !"

ಹಾಲಕ್ಕಿ

ರಂಗು ಮಹಲಿನ ರಾಗ, ರಂಗುದುಟಿಗಳ ರಾಗ,
ಇಂಗೊರಲು ಉಲಿವರಾಗ,
ಶೃಂಗಾರ ಸೂತ್ರಜ್ಞೆ ಕೋಕಿಲೆಯ ಕುಕಿಲು ಸಹ
ಕಡು ಬೇಸರಾಯಿತೀಗ !
ಅಡ್ಡ ಹಾದಿಯ ಹಿಡಿವೆ ! ಸಾವಿನಾಚೆಯ ನಾಡ
ಗೂಢವಿಂದೊಡೆಯುತಿಹುದು !
ಗುಡ್ಡಗಾಡಿನ ನಡುವೆ ಕಳಕುಳಗಿಳೆಂದು
ಹಾಲಕ್ಕಿಯೊಡನುಡಿಯುತಿಹುದು !

ಜೀರಿಡುವ ಹಾಲಕ್ಕಿ ! ದೇವಲೋಕದ ಗುಟ್ಟು ಬಟ್ಟೆಯನು
ನೀನೆ ಬಲ್ಲೆ !
ಕಾರಿರುಳದೇವತೆಯು ಕಿವಿಯಲ್ಲಿ ಹೇಳಿದಳು ಇರಿಸಿ
ಮುಂಗೈಯ ಮೇಲೆ !
ಈಚೆ ಮುಳುಗುವ ಭಾನು ಆಚೆ ಮೂಡುವನೆಂದು
ಚೀರುತಿಹೆ ಬೇರೆ ಸ್ವರದಿ !
ಊಚ–ನೀಚದ ಮಾನ ನಿನ್ನದೌ ಕನಸರಸಿ ! ಸಾಗುವೆನು
ನಾನು ತ್ವರದಿ !

ನನ್ನ ದೈವದ ದೈವತವೆ ! ನಿನ್ನ ಮನೆಯಲ್ಲಿ
ಪರದ ಸಂಸಾರಿಯಾಗಿ
ಇನ್ನು ಬಾಳುವೆನಮ್ಮ—ನಿನ್ನ ಒಳ್ಗುಡಿಯಲ್ಲಿ
ಇಹದ ಸಂನ್ಯಾಸಿಯಾಗಿ !
ಅಕ್ಕ ಶಕುನದ ಹಕ್ಕಿ ! ನಿನ್ನ ಭಕ್ತನು ಅಂಗಲಾಚುವನು
ಮುಂದೆ ನಿಂದು
ಕಕ್ಕುಲಾತಿಯ ತೋರಿ ಹರಿಸವ್ವ—ಜಗದಲ್ಲಿ ಹಗಲು
ಇರುಳಾಗಲೆಂದು !

ಈ ಆಟ ಸಾಕು

ಕಣ್ಣು ಮುಚ್ಚುವಾಟ ಸಾಕು
ಕಣ್ಣು ತೆರೆಯುವಾಟ ಬೇಕು॥

ಕಳ್ಳನಾಗಿ ಹುಡುಕುವವನು
ಕೊನೆಯುವರೆಗು ನಾನೆ ಏನು?
ಒಮ್ಮೆ ಅಡಗಿ ಕುಳಿತೆ ನೀನು
ಇಂಥ ಆಟ ಮುಗಿವುದೇನು?॥

ಅಡಗಿದವಳು ನೀನೆ ಇರುವಿ
ನೀನೆ ಕಣ್ಣು ಮುಚ್ಚುತಿರುವಿ
ಎಲ್ಲು ನನಗೆ ಕಾಣದಿರುವಿ
ಹೇಗೆ ನೀನು ಹೊರಗೆ ಬರುವಿ?॥

ಹೊರಗೆ ಒಮ್ಮೆ ಬಂದು ನೋಡು
ಮುಟ್ಟ ಬರಲು ದೂರ ಓಡು
ಕುಣಿಸಿ ನಗಿಸಿ ಆಟವಾಡು
ಒಲ್ಲದಿರಲು ಸಾಕು ಮಾಡು॥

ಇಂಥ ಆಟ ಆಡಲಾರೆ
ನಿಂತು ನಿಂತು ನೋಯಲಾರೆ
"ಹುಲಿಯು ಬಂತು! ಬಂತು ಬಾರೆ"
ಎಂಬ ಆಟ ಆಡಬಾರೆ॥

ಬೆಳಗೆರೆ ಕೃಷ್ಣಶಾಸ್ತ್ರೀ

ಏಕನಾಗಿ ನಲಿವೆ

ಕಣ್ಣಹೊಳಹಿನಲಿ ಬಣ್ಣ ಬಣ್ಣಗಳ ಕವಿಸಿ ಕಾಣಿಸಿರುವೆ
ಬಿನ್ನಾಣವ ಬೀರಿರುವೆ
ಎನ್ನ ಒಳಹೊರಗೆ ನೀನೆ ನೆಲಸಿರುವೆ ಚಿನ್ಮಯನಾಗಿರುವೆ.

ರಂಗುರಂಗುಗಳ ಭಂಗಿಯೊಡನೆ ಭವರಂಗವ ತೋರಿರುವೆ
ಬಲು ಡಂಗುಗೊಳಿಸುತಿರುವೆ
ಭಂಗಗೊಳದ ಶೃಂಗಾರವಿರಿಸಿರುವೆ ಮಂಗಳನಾಗಿರುವೆ

ಉದಯಗಿರಿಯ ತುದಿರವಿಯ ತೋರಿ ಅದರತ್ತ ಸೆಳೆಯುತಿರುವೆ
ಹೃದಯದ ಪದುಮವ ತೆರೆವೆ
ಮಧುರದುಲುಹ ಪೊದೆಯಿಂದಲುಗಿಸಿ ಮುದವೆರಸಿ ನಗಿಸುತಿರುವೆ.

ಭೃಂಗದೊಳಗೆ ಗುನುಗುನುಗನಿರಿಸಿ ಸಂಗೀತವಗೈಸಿರುವೆ
ಎನ್ನ ಮಂಗನ ಮಾಡಿರುವೆ
ಹಿಂಗದೆಲ್ಲೆಡೆಯು ತುಂಬಿ ತುರುಗಿ ನಿಸಂಗವುವಾಗಿರುವೆ.

ಕುಸುಮದೊಳಗೆ ಪೊಸಗಂಧವಿರಿಸಿ ದೆಸೆದೆಸೆಗೆ ಪಸರಿಸಿರುವೆ
ನಸುನಗೆಯು ಸೂಸುತಿರುವೆ
ನಿಶೆಯ ಮುಸುಕಿನೊಳು ಮಿಸುನಿಗಣ್ಣ ಮಿಳಮಿಳನೆ ಮಿಣುಕಿಸಿರುವೆ.

ಹರುಕುಮೋಡಗಳ ಬಿರುಕಿನೊಳಗೆ ಚಂದ್ರಮನನಿಣಿಕಿಸಿರುವೆ
ಮಂದಾನಿಲವೆರೆಸಿರುವೆ
ಗಿರಿಯ ಝರಿಯ ತರುಲತೆಯ ತೋರಿ ಸಿರಿಸೊಬಗ ಸುರಿಸುತಿರುವೆ.

ಪಾಕಗೊಳಿಸೆ ಈ ಹೃದಯಲೋಕವನನೇಕವನಿರಿಸಿರುವೆ
ಎನ್ನ ದೂಕನ ಮಾಡಿರುವೆ
ಏಕಭಾವದಿಂದೇಕರೂಪದಿಂದೇಕನಾಗಿ ನಲಿವೆ.

ರಂ. ಶ್ರೀ ಮುಗಳಿ

ಉಗಾರದ ಹೊಳೆಯು ಬಳಿ

ಅದೊ ಉಗಾರ ಹೊಳೆಯು ಬಳಿಯು
ದಂಡೆಯಲ್ಲಿ ನಿಂತುನೋಡು
ಸಂಜೆಯಿತ್ತು ದರ್ಶನವನು
'ವಿಶ್ವವೆಲ್ಲ ಒಂದು ಗೂಡು!' ೧

ಕೆಳಗೆ ಅಲ್ಲಿ ಹಿರಿಯ ಹೊಳೆಯು
ನೀಲವಸನ ಹಾಸಿ ಇಹುದು
ನಿಂತಹಾಗೆ ತೋರಿ ಮೆಲನೆ
ಸಂತವಾಗಿ ಹರಿಯುತಿಹುದು. ೨

ನಟ್ಟನಡುವ ಬೇಸಗೆಯಲಿ
ಅಚ್ಚಹಸಿರು ತಡಿಯ ತಬ್ಬಿ
ಮೆರೆಯುತಿಹುದು ಕರೆಯುತಿಹುದು
ಅವರೆ ಬಳ್ಳಿಯಾಗಿ ಹಬ್ಬಿ. ೩

ಇಳಿಹೊತ್ತಿನ ಹೊನ್ನಕದಿರು
ಕಳಸವಿಟ್ಟು ಎಲ್ಲ ನೆಲಕೆ
ಹರಕೆಯೀವ ಹಿರಿಯನಾಗಿ
ತೆರಳುತಿಹುದು ತನ್ನಗೃಹಕೆ. ೪

ಮಂದ್ರದಿಂದ ತಾರವರೆಗೆ
ಸುಯ್ಯುತಿರುವ ಗಾಳಿಯಲ್ಲಿ
ಎಲ್ಲವೂ ಸಚೇತವಾಗಿ
ಬೆರೆಯಿತೊಂದು ಒಂದರಲ್ಲಿ. ೫

ಕೆನ್ನೆಮೊನೆಯ ಹಸುರು ಕಣೆಯು
ಬಂತು ನೋಡು ಗಿಳಿಯ ಸಾಲು
ಮರದಿ ಮರಕೆ ಚಿಮ್ಮಿ ಹಾರಿ
ಗಳಪುತಿಹುದು ಕೆಳಗುಮೇಲು. ೬

ಸುವರ್ಣಸಂಪುಟ/೨೦೫

ಚಿಟ್ಟಗುಬ್ಬಿ ಬೀರುತಿರಲು
ಚಣವು ನಿಲದೆ ಹಾರಾಡುತ
ಕಾಗೆಯುಸರ ಪಿಕದಿಂಚರ
ಕೇಳುತಿಹುದು ಎಲ್ಲ ಬೆರೆತು. ೭

ಎಲ್ಲ ಅದಕೆ ಎದೆಯು ಅರಳಿ
ಧ್ಯಾನದಲ್ಲಿ ಲೀನವಾಗಿ
ಇರಲು, ಬಂತು ಹೊಳೆಯ ಮೇಲೆ
ಬೆಳ್ಳ ಹಕ್ಕಿ ಹಿಂಡು ಸಾಗಿ. ೮

ರೆಕ್ಕೆ ಬಿದಿರಿ ಹಾರಿ ತೂರಿ
ತೊರೆಯ ಕರೆಯ ತೀವನೆಲದಿ
ಪರಮಹಂಸ ನೆರವಿಯಂತೆ
ಕುಳಿತುಕೊಂಡು ಇಹುದು ಕೆಲದಿ. ೯

ಯಾವ ಗಹನ ಜಾನದಲ್ಲಿ
ಯಾವ ಅರಿದು ಯೋಚನೆಯಲಿ
ಎಂದು ಬಗೆಯೆ, ಬದುಕದೊಂದೆ
ಕಂಡಿತಾಚೆ ದಡದ ನೀರಲಿ. ೧೦

ಬದುಕಿನತ್ತ ಬೆಳ್ಳಹಕ್ಕಿ
ಹಿಗ್ಗುದುಂಬಿ ಹಾರಿ ತೆರಳೆ
ತಮವು ತನ್ನ ಸೆರಗಿನೊಳಗೆ
ತೆರೆಯನೆಲ್ಲ ಮುಚ್ಚಿ ಸುರುಳೆ ೧೧

ಬೆಳಕಿನಲ್ಲಿ ಕತ್ತಲೆಯಲಿ
ಸವಿಯ ಸರದಿ ಅಪಸ್ವರದಿ
ಜೀವ ಜಡದಿ ಒಂದೆ ಭಾವ
ಒಂದೆ ಸುಖವು ತುಂಬೆ ಮನದಿ ೧೨

ಕೇಳಿತೆನಗೆ ಮರಳಿ ಮರಳಿ
ಹಳೆಯ ಮಂತ್ರ! ಹೊಸತು ಹಾಡು!
“ವಿಶ್ವವೆಲ್ಲ ಒಂದು ಗೂಡು
ವಿಶ್ವದೊಡನೆ ಒಂದುಗೂಡು!” ೧೩

ಮಳೆ ತಂದಲು

ಬೇಸಗೆ ಕೊನೆಯಲಿ ಬಿಸಿಲುರಿವೊನೆಯಲಿ
ಬಿಸಿಬಿಸಿ ಗಾಳಿಯು ಬೀಸುತಲಿರಲು
ಗೋಳುವ ಬರಿನೆಲ ಭಣ ಭಣಗುಟ್ಟಿರೆ
ಹಾಳ್ಸುರಿಯುವ ಹೆಣ್ಣಿನ ಹಣೆಯಾಗಿರೆ
ಮುಗಿಲಲಿ ಒಮ್ಮೆಲೆ ಕಪ್ಪಿನ ನೀಲಿಯು
ಬಗೆಬಗೆ ರೂವಿನ ಮೋಡಗಳೋಳಿಯು
ಮೊತ್ತದಿ ಆನೆಯು ನೆತ್ತಿಯು ಹಾರದಿ
ಮುತ್ತುಗಳಂದದಿ ಹನಿಹನಿಯೊಡೆಯುಲು
ತೆಂಪಿಂಪಿನ ಮಳೆಗಾಳಿಯು ಬೀಸಲು
ತಂಪಿನಿಯನು ಬುವಿ ಮೈಯಲಿ ಸೂಸಲು
ಬಿರಿಯುತ ಬಾಯ್ದೆರೆದಿಹ ನೆಲ ಹೀರಿತು
ಸಂತೋಷದ ಸವಿಗಂಧವ ಬೀರಿತು
ಆರಿದ ನಾಲಿಗೆ ಹೊಸಹನಿ ಸುಧೆಯನು
ಈಂಟಿತು ಬಾಯ್‌ಚಪ್ಪರಿಕೆಯ ತೋರಿ.
ಸುರಿವಾ ಮಳೆಗಿಂತಲು ಬರಲಿಹ ಮಳೆ–
ತಂದಲು ಸವಿಯಲಿ ಮಿಗಿಲೋಮಿಗಿಲು.

ಸುಖ ಸಂಚಾರಿಗಳು

ಎಲ್ಲಿಂದೆಲ್ಲಿಗೆ ಏತಕೆ ಹೇಗೆ
ಎಂಬಾ ಕೇಳಿಕೆ ಕೆರಳಿಸಿ ಮೇಗೆ
ಬಾನಂಗಣದಲಿ ನಾನಾರೂಪದೊಳು
ಸಾಗಿವೆ ಶ್ರಾವಣಸುಖಸಂಚಾರಿಗಳು. ೧

ಮುಮ್ಮಳೆ ಸುರಿದಿಹ ಧಾರಾಕಾರದ
ಕರುಣೆಗೆ ಬಾಯ್ತೆರೆಯುತ ಬರುನೆಲದ
ಕೆರೆತುಂಬಿರೆ ಕಾಲುವೆ ತುಳುತುಳುಕೆ
ಕಿರಣಕೆ ಕುಣಿಯುತ ತೆರೆ ಥಳುಥಳುಕೆ. ೨

ತಿರೆಯೊಡಲಿನ ಮಾಟದ ಸತರಂಜಿಯೆ
ಹೊರದೋರಿತೊ ಎನೆ ಹೊಸಪಸುರಿನ ಹಸೆ
ಹಾಸಿದೆ "ಬಾ ಚೆಲುವೇ ಒರಗಿಲ್ಲಿ"
ಎಂದೊಲೆಯುತ ಪಿಸುನುಡಿಯಲಿ ಸೊಲ್ಲಿ. ೩

ಬದುಕಿಗೆ ಭರವಸೆ ನೀಡುವ ತೆರದಲಿ
ಬಿತ್ತಿದ ಬೀಜಕೆ ಹೊಲಹೊಲಗೆರೆಯಲಿ
ಮೊಳಕೆಗಳೇಳುತ ತಿಳಿಯದೆ ಬೆಳೆದಿರೆ
ಪ್ರಕೃತಿಯು ಅಭಯದ ಕಿರುಬೆರಳಾಡಿಸಿರೆ. ೪

ಈ ನೋಟದಿ ತಮ್ಮಾಟವ ನೋಡುತ
ಸವಿಯುತ ತೂಗುತ ನಡೆಯಲಿ ತಡೆಯುತ
ಬಾನಂಚಿನ ಮಂಚದಿ ಜೊಂಪಿಸಿ ಮರಳಿ
ಏಳುತ ಕೆರಳಿವೆ ಆ ಮುಗಿಲಿನ ಓಳಿ. ೫

ಒಮ್ಮೆಲೆ ನೆಲದಲಿ ಕತ್ತಲೆನೆರೆಯಿಸಿ
ರಪರಪ ಸರಿಯನು ಸುತ್ತಲು ಸುರಿಯಿಸಿ
ಹೂಬಿಸಿಲಿಗೆ ಮೈತೆರೆಯುತಲೊಮ್ಮೆಗೆ
ಹಸುರನು ಕುಲುಕುಲು ನಗಿಸುತ ಸುಮ್ಮಗೆ. ೬

ಹರಿಹರಿದಾರಿಯ ಸಾಗುತ ಸೇರೆಯು
ಮಳೆಕಾಣದ ನೆಲಕಿಳಿಯಿಸಿ ಸೋನೆಯು
ಆಗಸದರಸನ ಹರಿಕಾರರೊ ಇವರು
ಮಾಟವು ಆಟವೆ ಆಗಿರೆ ನಡೆದಿಹರು. ೭

ಕೆದರಿದ ಕುರುಳಿನ ನೀಲಮೇಘನಾ
ವೇಷದಿ ಗಾಳಿಯು ಕೊಳಲಿನ ಗಾಯನಾ
ನುಡಿಯಿಸಿ ಭಸಿತವ ಮೈಯಲಿ ತೊಡುವರು
ನೇಸರನಲಿ ಹಣೆಗಣ್ಣನು ಪಡೆವರು. ೮

ಕಾಮರೂಪರಿರೆ ಕಾಮವರ್ಣರಿರೆ
ಕಾಮನೆಕಾಣದ ಲೇಸಿಗರಿವರೆ
ತಮ್ಮಯ ಆಟದಿ ಮೆಲ್ಲಗೆ ಸುಮ್ಮನೆ
ಸಾಗುತ ತಿಳಿಪರು ಕರ್ಮದ ನೆಲೆಯನೆ ೯

ಭೂಮಿಯ ಸಾರವ ಹೀರುತಲೇರುತ
ಮೇಲಣ ನೆಲೆಯಿಂದಮೃತವ ಕರೆಯುತ
ತುದಿಮೊದಲಿಲ್ಲದನಂತದ ಸ್ಪರ್ಶದಿ
ಹಿಗ್ಗುತ ತುಂಬುವರಿಳೆಯನು ಪುಳಕದಿ.

ಆತ್ಮತಪಸಿ

ಮನಹಿಮಾಲಯವಾಸಿ ಆತ್ಮತಪಸಿ !
ಘನಕೆ ಕೈಚಾಚಿರುವ ಮಾಸಾಹಸಿ !

ಸೊಲ್ಲಿಲ್ಲ ತಡೆಯಿಲ್ಲ ಮುಂಬರಿವಿಗೆ
ಗುರಿಯುತ್ತಮಾಗಿ ಸಾಗಿರುವ ನಿನಗೆ
ಸೋಲಿಹುದು ಗೆಲ್ಲಲಿಕೆ ಹುರಿದುಂಬಿಸೆ
ತಡೆಯಿಹುದು ಪಡೆಯಲಿಕೆ ಕಿಡಿಯೂದಿಸೆ.

ಕುಳಿರ ಸೋಂಕಿನಲಿ ಕಾವಾರಲೆಂದು
ಕಡೆಗಣಿಸಿ ಹಿರಿಯಣಕವಾಡಲೆಂದು
ನಗೆಯೆ ಹಿಮವಾದಂತೆ ಸುತ್ತರಿದಿವೆ
ಸಾಲುಸಾಲಿನ ಬೆಟ್ಟ ತಲೆಯೆತ್ತಿವೆ.

ಆ ಹಿಮದ ಆ ನಗೆಯ ನೀನಿದಿರಿಸಿ
ಒಳನಗೆಯ ಬೆಳಗಿಂದ ಅದ ಬೆಳಗಿಸಿ
ಸತ್ವದಲಿ ತಲೆದೋರೆ ಅಚಲ ಶಾಂತಿ
ನೀ ಪಡೆವೆ ದಿವ್ಯಜೀವನದ ಕಾಂತಿ.

ಮಧುಮಾಸ ಮೊಗವಡವ ಹಾಕಿಕೊಳುತ
ಗಿಡಬಳ್ಳಿ ಹೂವುಗಳು ರೂವಾಗುತ
ತರತರದ ವೈಮಣಿಸಿ ಕೈಹೊರಳಿಸಿ
ಹಾಡಿನಲಿ ಕುಣಿತದಲಿ ಮರುಳುಗೊಳಿಸಿ.

ಬಂದಿರಲು ಕಾಮುಗಳ ಕಾಮಿನಿಯರು
ತಪವ ಭಂಗಿಸಬಂದ ಅಪ್ಸರೆಯರು
ಕದಡಿ ಕರಗಿದ ಚಿತ್ತ ಬೆರೆಯೆ ಸವಿದು
ತಿಳಿವನುಣ್ಣಿಸುವೆ ನೀ ತಪದಿ ಬಲಿದು.

ಸುವರ್ಣಸಂಪುಟ/೨೦೯

ಕೊನೆಯ ಮೊನೆಯಲಿ ನಿಂತು ಜಾನಿಸುತಿರೆ
ಜನುಮಜನುಮದಿ ಬೀಸಿ ಬಂದಂತಿರೆ
ಅಳಿಯಾಸೆ ಕೊಳೆನೆನಹು ಇಣಿಕುತಿಹವು
ಬೆಳೆಯೆ ನಿನ್ನಯ ಬೆಳಕು, ಮಿಣಿಕುತಿಹವು.

ಗೆಲ್ಲಬಾರದ ಬಲವೆ ತುಂಬಿದೊಲವೆ
ನಿಲ್ಲದೆಯೆ ನಡೆದಿರುವ ತಪದ ಚಲವೆ
ಕೆಳೆ ಹೊಳೆಯು ಪತನಗಳು ಏಸಾದರು
ಪೂರ್ಣತೆಯು ಸಾಗರವ ಬಳಿತರುವವು.

ಬದುಕು ಎತ್ತಿದ ಹೆಜ್ಜೆ ತಪದ ಪಥದಿ
ಮರಣ ಇರಿಸಿದ ಪದವು ದಣಿದ ಚಣದಿ
ನೋವು ಕಾವುಗಳೆಲ್ಲ ಮುಳ್ಳುಮುರಿತ
ನಲಿವುತಣಿವುಗಳೆಲ್ಲ ಹಿಗ್ಗುಕುಣಿತ.

ಮನಹಿಮಾಲಯದಲ್ಲಿ ನೆಲೆ ನಿಲ್ಲುತ
ಘನ ನಾನು ಎಂದರಿತು ನೆರೆಸೊಲ್ಲುತ
ತಪವಿಹುದೆ ಸಿದ್ಧಿಗೇ ಹಿರಿಯ ಗುರುತು
ಘನವಾಗಿ ಘನದಲ್ಲಿ ಬೆರೆವೆ ಅರಿತು.

ತೀ. ನಂ. ಶ್ರೀಕಂಠಯ್ಯ

ಒಲವೋ ಹಗೆಯೋ

ಮಿಕ್ಕವರಲಿ ನಗೆಗೂಡುತ ಬೆರೆವೆ
ನನ್ನೊಂದಿಗೆ ಬರಿಗೋಳನೆ ಕರೆವೆ;
ಒಲವೋ ಹಗೆಯೋ—ಯಾವುದಿದು ?

ಹೆರರೇನೆನ್ನಲಿ, ಕೇಳುತ ನಲಿವೆ,
ಸರಸವನಾಡಲು ನನ್ನಲಿ ಮುನಿವೆ;
ಒಲವೋ ಹಗೆಯೋ—ಯಾವುದಿದು ?

ಕುಳಿತರೆ ನಿಂತರೆ ಹುಳಕನೆ ಬಗೆವೆ,
ತುಸ ತಪ್ಪಾದರು ಕಲಹವ ತೆಗೆವೆ;
ಒಲವೋ ಹಗೆಯೋ—ಯಾವುದಿದು ?

ಪ್ರಣಯವ ಬೀರಲು, ಕಪಟವಿದೆನುವೆ,
ಸುಮ್ಮನೆ ಸಾರಲು, ಒಲವಿಲ್ಲೆನುವೆ;
ಒಲವೋ ಹಗೆಯೋ—ಯಾವುದಿದು ?

—ದೂರಿದೆನಲ್ಲವೆ ನಿನ್ನನು ಹೆಚ್ಚು ?
ನನಗಾದರೊ, ಈ "ಹಗೆ"ಯೂ ಮೆಚ್ಚು !
ಒಲವೋ ಹಗೆಯೋ—ಯಾವುದಿದು !

ಅಗಲಿಕೆ

ಬೇಗ ಕೂಡುವೆವೆಂಬ ನೆಚ್ಚಿಕೆಯೂರೆಗೋಲನು ನೆಮ್ಮಿ ನಿಲ್ಲುತ
ಸಾಗಿಹೋದೀ ವರುಷವೊಂದನು ನಾವದೆಂತೋ ಕಳೆದೆವು.
ಕೊಚ್ಚಿಹೋಯಿತು ಕುಲದ ಕಟ್ಟಳೆಯೆಂಬ ಹೊನಲಿನ ಸೆಳವಿನೊಳಗೆ
ನೆಚ್ಚಿಕೆಯ ಪುಸಿಯೂರೆಗೋಲದು; ಬೆಳೆದುಹೋದುವು ದಿನಗಳು.
ಕೂಡುವಾ ಮಾತೇಕೆ? ನೋಡುವ ಭಾಗ್ಯವೇ ನಮಗಿಲ್ಲ !—ಬಿರುಹೊಳೆ
ಕಾಡುತಿರುವುದು ನಮ್ಮ ಇಬ್ಬರ ನಡುವೆ ಮೊರೆಯುತ ಸರಿಯುತ.

ಬೇಯುವನು ನಾನೊಬ್ಬನಾದರೆ ಮೆಟ್ಟುವೆನು ಬಿಗಿಹಿಡಿದು ಗೋಳನು.
ಹಾಯುವೆನು ಗಂಡೆದೆಯಲೆದುರಿಸಿ ದೀರ್ಘವಿರಹದ ಕಿಚ್ಚನು
ಅಯ್ಯೊ, ತಾಳುವಳೆಂತು ಕೋಮಲೆ ಹಿಂಗದಾ ಹಂಬಲಿನ ನೋವನು?
ಕೊಯ್ಯದೇ ನಾಚಿಕೆಯು ಕೊರಳನು, ಹೆರರಿಗುಸಿರುವೆನೆನ್ನಲು!
ಪಾಪಿ ನನ್ನೊಳದೇಕೆ ಲೋಕಕೆ ಮೀರಿದೊಲುಮೆಯನಿತ್ತೆ, ನಲ್ಲೆ?
ತಾಪದಲಿ ಕಂಗೆಡುವುದೊಂದೇ ಫಲವೆ ನಿನ್ನಾ ಪ್ರೇಮಕೆ!

ಕಾಂಚನಮೃಗ

೧

ಮೃಗ–ಜಲ–ರಸದಲಿ ಸ್ವಪ್ನದ ಕುಸುರಲಿ
ವಿಷಯ–ವಿಷಾನ್ವಿತ–ತೃಷ್ಣೆಯ ಉಸಿರಲಿ
ಮಾಯಾ–ರಾಕ್ಷಸಿ–ಕೃಷ್ಣೆಯ ಬಸಿರಲಿ
ಪ್ರಳಯವು ಗರ್ಭವನಾಂತಿಹುದು !
ಹಸಿಹಸಿದಾಸೆಯ ರಕ್ತ–ಪಿಪಾಸೆಯ
ಕಲ್ಪನೆ ಸುತ್ತಲು ನಿಂತಿಹುದು !

೨

ಮಾನಸ–ವೇಗೋಜ್ಜೃಂಭಿತ–ವೀಚಿಯು
ಮಿಂಚಿನ ಗೊಂಚಲ ಚಂಚಲ ರೋಚಿಯು
ನಷ್ಟ–ಪ್ರಪಂಚಾತೃಪ್ತ–ಪಿಶಾಚಿಯು
ಚಿತ್ರವಿಚಿತ್ರವ ಕೆತ್ತಿಹುದು !
ಸಂಚಿನ ಹೊಂಚಿನ ಕಾಂಚನ–ಕುಂಚವು
ಸ್ವರ್ಣ–ಸುವರ್ಣವ ಮೆತ್ತಿಹುದು !

೩

ಝಂಝಾವಾತವು ಪ್ರಸವಿಸುವಂತೆ
ತಿಂಗಳ ಹೃದಯದ ಪಡಿನೆಳಲಂತೆ
ಮೋಹದ ನೇಹದ ದೋಹದ ಚಿಂತೆ—
ಕಾಂಚನ–ಮೃಗವಿಳೆಗೊಗೆಯಿತಲಾ !
ರಂಗ–ತರಂಗಿತ–ಪ್ರಕಾಶ–ವೇಷಿತ
ಮಾಯಾ–ತಿಮಿರವು ಪರ್ಬಿತಲಾ !

೪

ಹಮ್ಮಿನ ಬಿಮ್ಮಿನ ಚಿಮ್ಮುವ ಶೃಂಗಿಯು
ಕರ್ಷಿಸಿ ಘರ್ಷಿಪ ಕಪಟ—ಪ್ರಸಂಗಿಯು
ಟಣ್ಣನೆ ಹಾರಿತು ಮಿಥ್ಯಾ–ಸಂಗಿಯು

ದೂರ ಸುದೂರ ದಿಗಂತದಲಿ!
ಭೂಮಿಯು ಕಂಪಿಸಿ, ಕಾಮವು ಗುಂಫಿಸಿ
ಉಕ್ಕಿದುದಂತಃಪ್ರಾಂತದಲಿ!

೫

ಮೈ ಮೆರುಗಿಗೆ ದಿಶೆ ಕಳಕಳಿಸಿತ್ತು!
ಕಣ್ ಹೊಳಪಿಗೆ ಬಾನ್ ಥಳಥಳಿಸಿತ್ತು!
ಕಾಲೊಲೆತಕೆ ಕೋಲ್ಮಿಂಚಳಿಸಿತ್ತು!
ಕಲ್ಪನೆ, ಜಲ್ಪನೆಯುಡುಗಿದುದು!
ಸುಮ–ಸಮ–ಕಾಯವು, ನಿರ್ಭರ–ಪ್ರಾಯವು
ಇಂದ್ರಜಾಲದಲಿ ಮಡಗಿಹುದು!

೬

ನೀರದು ಧಗೆಯಲಿ ನೀರಡಿಸಿತ್ತು!
ಬೆಂಕಿಯು ಚಳಿಯಲಿ ಕಟಗುಟ್ಟಿತ್ತು!
ಬೆಳಕದು ಕಾರಲಿ ಕಂಗೆಟ್ಟಿತ್ತು!
ಪ್ರಕೃತಿಯು ವಿಕೃತಿಗೆ ಗುರಿಯಾಯ್ತು!
ಶಾಂತಿಯು, ಕಾಂತಿಯು, ದಾಂತಿಯು ಸಂತತ
ಚಿಂತಾ–ಭ್ರಾಂತಿಗೆ ಸೆರೆಯಾಯ್ತು!

೭

ಸೀತೆಯನಗಲಿಸಿ ರಾಮನ ತೊಳಲಿಸಿ
ಆ ಲಕ್ಷ್ಮಣನನು ಕನಲಿಸಿ ಬಳಲಿಸಿ
ರಾಮಾಯಣವನೆ ರಕ್ತದೊಳಳಲಿಸೆ
ಒಂದೇ ನೋಟವೆ ಸಾಕಾಯ್ತು.
ಅಲ್ಲದ, ಇಲ್ಲದ, ಸಲ್ಲದ ಹೊಲ್ಲದ
ಕ್ರಿಯೆಗಳಿಗಿದು ಕಾರಣವಾಯ್ತು!

೮

ಸೀತಾಪತಿ ಶ್ರೀರಾಮನ ಬಾಣವು
ಆ ಮಾರೀಚನ ಪಂಚಪ್ರಾಣವ
ಸೀಳ್ದರು, ಮರೀಚಿಕಾ—ಸಂತ್ರಾಣವು
ಕಾಂಚನ ಮೃಗಕಿತ್ತಿದೆ ಹರಣಾ
ಕಾಂಚನ, ಕಾಂಚನ, ಕಾಂಚನದಲ್ಲಿಯೆ
ಅಮರತೆವಡೆಯಿತು ಆ ಹರಿಣಾ!

೯

ಸೀತಾರಾಮರ ಕಾಲವು ಹೋಯಿತು !
ದಾನವರದ್ಭುತ ಕೃತಿ ಮರಹಾಯಿತು !
ಆ ರಾಮಾಯಣ–ಯುಗ ಮರೆಯಾಯಿತು !
ಇಂದಿಗು ಕಾಂಚನ ಮೃಗವಿಹುದು !
ಕಷ್ಟವ, ನಷ್ಟವ, ಪಾಪವ, ತಾಪವ
ಬೆಂಬತ್ತಲು, ತಾನೀಯುವದು.

೧೦

ಕಾಂಚನ, ಕಾಂಚನ, ಕಾಂಚನ ಮೃಗವಿದು-
ಬಾಹ್ಯಾಡಂಬರ-ಮಿಥ್ಯಾ–ಜಗಮಿದು-
ಸುಳಿಯುತ, ಹೊಳೆಯುತ, ನಟನೆಯ ಸೊಗಮಿದು
ಮೋಹವ ದಾಹವ ಹುಟ್ಟಿಸುತ
ನೆಗೆವುದು ಸಂತತ ಲೋಕದ ಬುದ್ಧಿ-ವಿ
ವೇಕಗಳೆಲ್ಲವನಟ್ಟಿಸುತ !

ಕೋರಿಕೆ

೧

ಜಗವೆಲ್ಲ ನಗುತಿರಲಿ,
ಜಗದಳುವು ನನಗಿರಲಿ !
ನಾನಳಲು ಜಗವೆನ್ನನೆತ್ತಿಕೊಳದೇ ?
ನಾ ನಕ್ಕು, ಜಗವಳಲು, ನೋಡಬಹುದೇ ?

೨

ತೆರವಾಗಿ ನನ್ನೆದೆಯು,
ಧರೆಯೆದೆಯು ಉಕ್ಕಿರಲಿ !
ಧರೆಯೊಳಗೆ ತೇಲಿಸುವೆನೆನ್ನೆದೆಯುನು !
ಧರೆ ಬತ್ತಿ, ಎನ್ನೆದೆಯು ಉಕ್ಕಲೇನು ?

೩

ಪೊಡವಿಯೈಸಿರಿ ಪಡೆದು,
ಬಡತನವು ನನಗಿರಲಿ !
ಕೈಯೊಡ್ಡೆ, ಪೊಡವಿಯೆನಗಿಕ್ಕದೇನು ?
ಪೊಡವಿಯೇ ಮೈಯಳಿಯೆ, ಮಾಡಲೇನು ?

೪

ವಿಶ್ವವನು ತುಂಬಿರುವ
ಈಶ್ವರನೆ ಅಳತೊಡಗೆ,
ಸೈತಿಡಲು, ಸೈಪಿಡಲು, ಬರುವನಾವಂ ?
'ಹೇ, ತಂದೆ,' ಎನಲೆನ್ನನವನೆ ಕಾವಂ ?

ತುಂಬಿಗೆ

ಸುಮನೋ-ವಿಹಾರಿಯೇ,
ಸುರಸ-ಝೇಂಕಾರಿಯೇ, ೧
ನಿನ್ನ ಸ್ವಾಗತಕೆ ಬನ ನಳನಳಿಸಿವೆ !
ಅಲರಲರ ಎಸಳುಗಳು
ನರುಗಂಪ ಪಸುಳೆಗಳು
ನಿನ್ನ ದರ್ಶನಕಹಾ ! ಕಳಕಳಿಸಿವೆ.

ಆನಂದ-ಮಧು-ಪಾನ ೨
ತೃಪ್ತಿ-ಸಂಭ್ರಮ-ಗಾನ
ಮೈಗೊಂಡು ಗಂಧವಹನನು ಏರಿಹೆ !
ಅಮೃತ–ರಸ–ಸಂಚಯಕೆ
ಹೊರಹೊಮ್ಮಲೊಳಬಯಕೆ
ಸುಮ–ಸುಧಾ-ಸುರಲೋಕವನು ಸಾರಿಹೆ !

ಓ ಪರಾಗಿತ-ಪದವೆ ೩
ಪರಿಮಳಿತ-ಶ್ರೀಯೊದವೆ
ಅರಳಿ ನಿಂತಿದೆ ಪುಷ್ಪ–ಲೋಕ ! ಗೆಳೆಯಾ !

ಅಲ್ಲಿ ಪದವಿಡು ತುಂಬಿ
ಮುತ್ತನಿಡು ಎದೆದುಂಬಿ
ತುಂಬದರ ಗರ್ಭಕವಿನಾಶಿ—ಕಳೆಯು.

ತುಂತು ತುಂಬೆಲೆ ತುಂಬಿ ೪
ದಿಗ್ದೇಶಗಳ ತುಂಬಿ,
ತುಂಬಿ ಮೀರೆಲೆ ನೀನು ನಾಕ–ಲೋಕ
ಒಂದೊಂದೇ ಪದಸ್ಪರ್ಶ
ಒಂದೆ ಚುಂಬನ-ಹರ್ಷ
ಬಗೆಯಿಸಲಿ ನವ–ಸರಸ–ಸೃಷ್ಟಿಪಾಕ.

ಡಿ. ಎಸ್. ಕರ್ಕಿ

ಮೋಡಗಳ ಹಾಡು

ಕಡಲೀಗೆ ಸಾರೇವು
ನೀರನ್ನು ಹೀರೇವು
ಆಗಸಕೇರೇವು
ಏರೇವು
ಆಕಾರ ತೋರೇವು
ತೋರೇವು.

ಅಲ್ಲಲ್ಲಿ ಮೂಡೇವು
ಒಂದೆಡೆ ಕೂಡೇವು
ಚೆಕ್ಕಂದವಾಡೇವು
ಆಡೇವು
ಹಿಂದಾಗಿ ಮುಂದಾಗಿ
ಓಡೇವು.

ಒಂದು ಹತ್ತಾದೇವು
ಹತ್ತು ಒಂದಾದೇವು
ಬಹುರೂಪ ತಳೆದೇವು
ತಳೆದೇವು
ಬಯಲಿಗೆ ಬಣ್ಣವ
ಬರೆದೇವು.

ತಿಂಗಳ ಹೊನಲಲ್ಲಿ
ಹರಿಗೋಲ ಹೋಲೇವು
ತೇಲೇವು ತೇಲೇವು
ತೇಲೇವು
ಲೀಲೆಯ ಜಾಲವ
ನೇದೇವು.

ಒಮ್ಮೊಮ್ಮೆ ಹಗಲಲ್ಲಿ
ಬೆಳಕನ್ನೆ ಕುಡಿದೇವು.

ಒಡಲಲ್ಲಿ ಕಡೆದೇವು
ಕಡೆದೇವು
ಕಾಮನ ಬಿಲ್ಲನ್ನ
ಕುಡಿದೇವು.

ಸರಸಕೆ ಮೆಚ್ಚೇವು
ಇರುಳ ಕಣ್ಮುಚ್ಚೇವು
ಆಗಾಗ ಬಿಚ್ಚೇವು
ಬಿಚ್ಚೇವು
ಚಿಕ್ಕೆಯು ದೀವಿಗೆ
ಹಚ್ಚೇವು.

ಕರುನಾಡ ಹೊಕ್ಕೇವು
ಸೊಬಗಿಗೆ ಸಿಕ್ಕೇವು
ಮಿಂಚನ್ನೆ ನಕ್ಕೇವು
ನಕ್ಕೇವು
ಗುಡುಗಿನ ಕೇಕೆಯು
ಹಾಕೇವು.

ಬಿಮ್ಮನೆ ಬೀಗೇವು
ಒಡಲನ್ನು ತೂಗೇವು
ಬಾಳನ್ನು ನೂಗೇವು
ನೂಗೇವು
ಮೆಲ್ಲನೆ ಮುಂದಕೆ
ಸಾಗೇವು.

ಹರಿದೇವು ಮೆರೆದೇವು
ಎಷ್ಟೊಂದು ಮೆರೆದೇವು
ಒಡಲನ್ನು ತೆರೆದೇವು
ತೆರೆದೇವು
ಭೂಮಿಗೆ ಮುತ್ತನ್ನೆ
ಸುರಿದೇವು.

ಮುತ್ತನ್ನು ಕಳಿಸೇವು
ಮುತ್ತನ್ನು ಬೆಳಿಸೇವು
ತೃಪ್ತಿಯ ಸುಳಿಸೇವು

ಸುಳಿಸೇವು
ಬಾಳಿನ ಬಾವುಟ
ನಿಲಿಸೇವು.

ಹಚ್ಚೇವು ಕನ್ನಡದ ದೀಪ

ಹಚ್ಚೇವು ಕನ್ನಡದ ದೀಪ
ಕರುನಾಡದೀಪ ಸಿರಿನುಡಿಯದೀಪ
ಒಲವೆತ್ತಿ ತೋರುವಾ ದೀಪ ॥ ಹಚ್ಚೇವು ॥

೧

ಬಹುದಿನಗಳಿಂದ ಮೈಮರವೆಯಿಂದ
ಕೂಡಿರುವ ಕೊಳೆಯು ಕೊಚ್ಚೇವು
ಎಲ್ಲೆಲ್ಲಿ ಕನ್ನಡದ ಕಂಪು ಸೂಸ–
ಲಲ್ಲಲ್ಲಿ ಕರಣ ಚಾಚೇವು
ನಡು ನಾಡೆ ಇರಲಿ, ಗಡಿನಾಡೆ ಇರಲಿ
ಕನ್ನಡದ ಕಳೆಯು ಕಚ್ಚೇವು
ಮರೆತೇವು ಮರವ, ತೆರೆದೇವು ಮನವ, ಎರೆದೇವು ಒಲವ-ಹಿಡಿ ನೆನಪ
ನರನರವನೆಲ್ಲ ಹುರಿಗೊಳಿಸಿ ಹೊಸೆದು ಹಚ್ಚೇವು ಕನ್ನಡದ ದೀಪ.

೨

ಕಲ್ಪನೆಯು ಕಣ್ಣು ಹರಿವನಕ ಸಾಲು
ದೀಪಗಳ ಬೆಳಕ ಬೀರೇವು
ಹಚ್ಚಿರುವ ದೀಪದಲಿ ತಾಯ ರೂಪ
ಅಚ್ಚಳಿಯದಂತೆ ತೋರೇವು
ಒಡಲೊಡಲ ಕೆಚ್ಚಿನಾ ಕಿಡಿಗಳನ್ನು
ಗಡಿನಾಡಿನಾಚೆ ತೂರೇವು
ಹೊಮ್ಮರಲು ಪ್ರೀತಿ ಎಲ್ಲಿಯದು ಭೀತಿ?-ನಾಡೊಲವೆ ನೀತಿ ಹಿಡಿ ನೆನಪ
ಮನೆಮನೆಗಳಲ್ಲಿ ಮನಮನಗಳಲ್ಲಿ ಹಚ್ಚೇವು ಕನ್ನಡದ ದೀಪ.

೩

ಕರುನಾಡಿನರಿವ ನೆರೆತೀವಿ ಭಾವ–
ದಲಿ ಜೀವನಾಡಿ ನುಡಿಸೇವು
ತೆರೆತೆರೆದ ಕಣ್ಣಿನಲಿ ನೇಹವೆರೆದು
ನವ ಜ್ಯೋತಿಯನ್ನೆ ಮುಡಿಸೇವು
ನಮ್ಮನ್ನವುಂಡು ಅನ್ಯಾಯಗೈಯು
ವಂಥವರ ಹುಚ್ಚ ಬಿಡಿಸೇವು
ಇಹುದೆಮಗೆ ಛಲವು, ಕನ್ನಡರ ಬಲವು ಕನ್ನಡದ ಒಲವು-ಹಿಡಿನೆನಪ
ನಮ್ಮೆದೆಯು ಕೆಚ್ಚುನೆಚ್ಚುಗಳನೂಡಿ ಹಚ್ಚೇವು ಕನ್ನಡದ ದೀಪ.

೪

ನಮ್ಮವರು ಗಳಿಸಿದಾ ಹೆಸರ ಉಳಿಸ–
ಲೆಲ್ಲಾರು ಒಂದುಗೂಡೇವು
ನಮ್ಮೆದೆಯ ಮಿಡಿಯುವೀ ಮಾತಿನಲ್ಲಿ
ಮಾತೆಯನು ಪೂಜೆ ಮಾಡೇವು
ನಮ್ಮುಸಿರು ತೀಡುವೀ ನಾಡಿನಲ್ಲಿ
ಮಾಂಗಲ್ಯಗೀತ ಹಾಡೇವು
ತೊರೆದೇವು ಮರುಳ, ಕಡೆದೇವು ಇರುಳ ಪಡೆದೇವು ತಿರುಳ-ಹಿಡಿನೆನಪ
ಕರುಳೆಂಬ ಕುಡಿಗೆ ಮಿಂಚನ್ನೆ ಮುಡಿಸಿ ಹಚ್ಚೇವು ಕನ್ನಡದ ದೀಪ.

ಗೋಲ ಗುಮ್ಮಟ

೧

ಗೋಲ ಗುಮ್ಮಟ ಬೋಲ ಗುಮ್ಮಟ
ಗುಮ್ಮ ಗೂಢವಿದು ಗುಮ್ಮಟ
ಬಯಲ ಬೊಮ್ಮದ ಸುಳುಹದೋರಿಹುದು
ನೆಟ್ಟ ದಿಟ್ಟಿಗಿದು ಗುಮ್ಮಟ.

೨

ಗೆದ್ದು ನಿಂತಿಹುದು ಎಲ್ಲ ಗುಮ್ಮಟವ
ವಿಜಯಪುರದ ಈ ಗುಮ್ಮಟ

ಕಂಬಗಿಂಬಗಳ ಹಂಗ ಹರಿದು ಬಯ–
ಲನ್ನೆ ಅಪ್ಪಿಹುದು ಗುಮ್ಮಟ

೩

ಅನ್ಯ ಸಂಸ್ಕೃತಿಯು ಮಾನ್ಯ ಕಾಣ್ಕೆ ಕೃತಿ–
ಗಿಳಿಯೆ ಮೂಡಿತಿದು ಗುಮ್ಮಟ
ಸರ್ವ ಧರ್ಮದಲಿ ಒಂದೆ ಮರ್ಮವನು
ಸೂಚ್ಯಗೈದಿಹುದು ಗುಮ್ಮಟ.

೪

ರೂಪಬ್ರಹ್ಮದಲಿ ಶಬ್ದಬ್ರಹ್ಮವನು
ತುಂಬಿಕೊಂಡಿಹುದು ಗುಮ್ಮಟ
ಬೆರಗಿನೊಡನೆ ನಿಬ್ಬೆರಗ ನೆಯ್ದಿಹುದು
ತನ್ನ ಗರ್ಭದಲಿ ಗುಮ್ಮಟ

೫

ಶಬ್ದಮಾಯೆಯಲಿ ಸಪ್ತಛಾಯೆಗಳ–
ನಿಟ್ಟು ಆಡಿಸಿದೆ ಗುಮ್ಮಟ
ಸುಳಿದ ಶಬ್ದ ನಿಶ್ಶಬ್ದಗೊಳಿಸುವುದು
ಗೂಢದೊಡಲಿನಲಿ ಗುಮ್ಮಟ.

೬

ಬಯಲ ಬಗೆದು ನೋಡಲ್ಲಿ ಮುಗಿಲ ನೆಲ
ವನ್ನು ತಬ್ಬಿದೆಡೆ ಗುಮ್ಮಟ
ಏಕಮೇವ ಆಕಾರದಲ್ಲಿ ಸಾ–
ಕ್ಷಾತ್ತಿಗೈದಿಹುದು ಗುಮ್ಮಟ.

೭

ಜಗದ ಪೀಠದಲಿ ಗಗನ–ದೇವ ನೆಲೆ–
ಗೊಂಡ ಪರಿಯೊಳಿದೆ ಗುಮ್ಮಟ
ಕಾಲ ದೇಶ ಮತ ಪಂಥದಾಚೆಗಿಹ
ಸ್ಫೂರ್ತಿಜನ್ಯವಿದು ಗುಮ್ಮಟ.

ಪ್ರಹ್ಲಾದ ನರೇಗಲ್ಲ

ನಸುಕು

೧

ಜಗಕೆಲ್ಲ ಬಿದ್ದಿತ್ತೊ ಇಷ್ಟು ಹೊತ್ತಿರುಳೆಂಬ
ಕಂಪಾದುದೊಂದು ಕನಸು !
ಹಗಲಿನ್ನು ಬಂದು ಬೆಳಕಿನ ಸೊಬಗು ಬೆಳಗುವುದು–
ಕನಸು ಆಗುವದು ನನಸು !

೨

ಕನಸು ಕನಸೆಂದು ಕಂಗಳರು ಕನಕರಿಸುವರು
ಕನಸು ಕನಸಾಗಬಹುದೇ ?
ಜನಿಸಿದರೆ ಕನಸಿನೊಳು ನನಸು, ನನಸಿನ ಜಗವು
ಕನಸಾಗಿ ಸಾಗಬಹುದೇ ?

೩

ಕನಸು ನನಸಿನ ಕನಸು, ನನಸು ಕನಸಿನ ನಸುಕು
ಎಂಬ ಸವಿಗವನವನ್ನು
ಇನಿದಾಗಿ ಕಟ್ಟುತಿಹ ಕವಿಯಾಗಿ ಒಪ್ಪುವದು
ಬೆಳಗು ಮುಂಜಾವು ಮುನ್ನು !

೪

ಚಿಕ್ಕಿಯಾಗಿರುಳೆಲ್ಲ ಮುಗಿಲಲ್ಲಿ ನಗೆಮೊಗದಿ
ಆಟವನ್ನಾಡಿ ದಣಿದು
ಹಕ್ಕಿಯಾಗೀಗ ಸಲೆ ಹಾಡುವನು ಇಂಪಾಗಿ
ದೇವತಾ ಮನದಿ ತಣಿದು !

೫

ಅಂದಲರ ಕಂಪಿನಲಿ ಕಣ್ಣೆಲರ ತಂಪಿನಲಿ
ಪಾಡುಗಳ ಪೆಂಪಿನಲ್ಲಿ
ಕೆಂದಳಿರ ಕೆಂಪಿನಲಿ ಸೊಬಗೊಗೆವ ಸೊಂಪಿನಲಿ
ವೈದೋರ್ವಲಂಪಿನಲ್ಲಿ !

೬

ಒಪ್ಪಾಗಿ ಚಿಗುರುತಿಹ ಮೂಡಲದ ಬೆಳಕಿನೊಳು
ಸೊಗಸುಳ್ಳ ಮನದಲಿಂದು
ಒಪ್ಪುತಿರುವದು ಬೆಳಗು ಮುಂಜಾವು ನುಣ್ಬುಳ್ಳ
ಬೆಳಕನೀರಿಂದ ಮಿಂದು !

೭

ಚೊಕ್ಕಟವದೆಂತಹದೊ ಈ ಬಗೆಯು ಬೆಳಗು ಮುಂ–
ಜಾವಿನಾ ಸೊಬಗು –ಸೊಗಸು !
ಅಕ್ಕ ನಸುಕೇ ! ಅಕ್ಕರದಿ ನಕ್ಕು ನನ್ನ ಯೀ
ಅಂತರಂಗವನು ನಗಿಸು !

ಕನ್ನಡ್ ಪದಗೊಳು

ಯೆಂಡ ಯೆಡ್ತಿ ಕನ್ನಡ್ ಪದಗೊಳ್
ಅಂದ್ರೆ ರತ್ನಂಗ್ ಪ್ರಾಣ !
ಬುಂಡೇನ್ ಎತ್ತಿ ಕುಡದ್ಬುಟ್ಟಾಂದ್ರೆ-
ತಕ್ಕೊ ! ಪದಗೊಳ್ ಬಾಣ ! ೧

ಬಗವಂತ್ ಏನ್ರ ಬೂಮಿಿಗ್ ಇಳದು
ನನ್ ತಾಕ್ ಬಂದಾಂತ್ ಅನ್ನು;
ಪರ್‌ಗಿರೀಕ್ಸೆ ಮಾಡ್ತಾನ್ ಔನು-
ಬಕ್ತನ್ ಮೇಲ್ ಔನ್ ಕಣ್ಣು ! ೨

'ಯಂಡ ಕುಡಿಯಾದ್ ಬುಟ್‌ಬುಡ್ ರತ್ನ !'
ಅಂತ್ ಔನ್ ಏನಾರ್ ಅಂದ್ರೆ-
ಮೂಗ್ ಮೂರ್ ಚೂರಾಗ್ ಮುರಸ್ಕೊಂತೀನಿ
ದೇವರ್ ಮಾತ್ಗ ಅಡ್ಬಂದ್ರೆ ! ೩

'ಯಂಡ ಬುಟ್ಟೆ, ಯೆಡ್ತೀನ್ ಬುಟ್‌ಬುಡ್ !'
ಅಂತ್ ಔನ್ ಏನಾರ್ ಅಂದ್ರೆ-
ಕಳದೋಯ್ತ್ ಅಂತ ಕುಣದಾಡ್ತೀನಿ
ದೊಡ್ದ್ ಒಂದ್ ಕಾಟ ! ತೊಂದ್ರೆ ! ೪

'ಕನ್ನಡ್ ಪದಗೋಳ್ ಆಡೋದ್ನೆಲ್ಲ
ನಿಲ್ಲೀಸ್ ಬುಡಬೇಕ್ ರತ್ನ !'
ಅಂತ ಔನ್ ಅಂದ್ರೆ-ದೇವ್ರ್ ಅದ್ರ್ ಏನು !
ಮಾಡ್ತೀನ್ ಔನ್ಗೆ ಖತ್ನ ! ೫

ಆಗ್ನೆ ಮಾಡೋ ಐಗೋಳ್ ಎಲ್ಲಾ
ದೇವ್ರೆ ಆಗ್ಲಿ-ಎಲ್ಲ !
ಕನ್ನಡ್ ಸುದ್ದೀಗ್ ಏನ್ರ ಬಂದ್ರೆ
ಮಾನಾ ಉಳಸಾಕಿಲ್ಲ ! ೬

ನರಕಕ್ಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ-

ಮೂಗ್ನಲ್ ಕನ್ನಡ್ ಪದವಾಡ್ತೀನಿ!
ನನ್ ಮನಸನ್ನ್ ನೀ ಕಾಣೆ! ೭

ಯೆಂಡ ವೋಗ್ಲಿ! ಯೆಡ್ತಿ ವೋಗ್ಲಿ!
ಎಲ್ಲಾ ಕೊಚ್ಕೊಂಡ್ ವೋಗ್ಲಿ!
ಪರ್ಪಂಚ್ ಇರೋ ತನಕ ಮುಂದೆ
ಕನ್ನಡ್ ಪದಗೊಳ್ ನುಗ್ಲಿ! ೮

ಮಡಿಕೇರೀಲಿ ಮಂಜು

ಬೂಮಿತಾನ್ ತಬ್ಬಿದ್ ಮೋಡ್ ಇದ್ದಂಗೆ
ಬೆಳ್ಳಿ ಬಳಿದಿದ್ ರೋಡ್ ಇದ್ದಂಗೆ
ಸಾಫಾಗ್ ಅಳ್ಳ ತಿಟ್ಟಿಲ್ದಂಗೆ
ಮಡಿಕೇರೀಲಿ ಮಂಜು!
ಮಡಗಿದ್ ಅಲ್ಲೇ ಮಡಗಿದ್ದಂಗೆ
ಲಂಗರ್ ಬಿದ್ದಿದ್ ಅಡಗಿದ್ದಂಗೆ
ಸೀತಕ್ ಸಕ್ತಿ ಉಡಗೋದಂಗೆ
ಅಳ್ಳಾಡಾಲ್ದು ಮಂಜು! ೧

ತಾಯಿ ಮೊಗೀನ್ ಎತ್ಕೊಂಡಂಗೆ
ಒಂದಕ್ಕೊಂದು ಅತ್ಕೊಂಡಂಗೆ
ಮಡಿಕೇರೀನ ಎದೆಗೊತ್ಕೊಂಡಿ
ಜೂಗೀಡ್ತಿತ್ತು ಮಂಜು!
ಮಲಗಾಕ್ ಸೊಳ್ಳೆ ಪರದೆ ಕಟ್ಟಿ
ಒದಿಯಾಕ್ ಒಗದಿದ್ ದುಪಟಿ ಕೊಟ್ಟಿ
ಪಕ್ದಾಗ್ ಗಂದದ್ ದೂಪ ಅಕ್ದಂಗ್
ಮಡಿಕೇರೀ ಮೇಲ್ ಮಂಜು! ೨

ಮಂಜಿನ ಮಸಕಿನ್ ಕಾವಲ್ನಲ್ಲಿ
ಒಣಗಿದ್ ಉದ್ದಾನೆ ವುಲ್ನಲ್ಲಿ
ಒಳಗೇ ಏನೋ ಸರದೋದಂಗೆ
ಅಲಗಾಡ್ತಿತ್ತು ಮಂಜು!
ನಡಿಯೋ ದೊಡ್ಡೊಡ್ ದೇವಲ್ನಂಗೆ

ಪಟ್ಣದ್ ಸುತ್ತಿನ್ ಕಾವಲ್ನಂಗೆ
ಅಲ್ಲಲ್ಲೇನೆ ಅಂಗಂಗೇನೆ
ಗಸ್ತಾಕ್ತಿತ್ತು ಮಂಜು ! ೩

ಸೂರ್ಯನ್ ಕರೆಯೋಕ್ ಬಂದ್ ನಿಂತೋರು
ಕೊಡಗೀನ್ ಎಲ್ಲಾ ಪೂವಮ್ಮೋರು
ತೆಳ್ನೆ ಬೆಳ್ನೆ ಬಟ್ಟೇನಾಕಿ
ಬಂದಂಗಿತ್ತು ಮಂಜು !
ಚಿಮ್ತಾನಿದ್ರ್ ಎಳಬಿಸಿಲಿನ್ ಕೆಂಪು
ಮಂಜಿನ್ ಬಣ್ಣ ಕಣ್ಗೆ ತಂಪು !
ಕೊಡಗಿನ್ ಲಸ್ಮೀರ್ ಪೂವಮ್ಮೋರ್ಗೆ
ಆಲಿನ್ ಸೌಂದ್ರೀ ಮಂಜು ! ೪

ಅಗಲೇ ಬರಲಿ ರಾತ್ರೇ ಬರಲಿ
ಬಿಸಲು ನೆಳ್ಳು ಏನೇ ಇರಲಿ
ಕಣ್ಮರೆಯಾಗಕ್ ತಾವ್ ಕೊಡಾಲ್ದು
ಮಡಿಕೇರೀಗೆ ಮಂಜು !
ತೈಲ ನೀರಿನ್ ಮೇಗಿದ್ದಂಗೆ
ಪೂವಮ್ಮ-ನನ್ ತಂಗೀದ್ದಂಗೆ
ಬಿಟ್ರೂ ಬಿಡದಂಗ್ ಇಡಕೋಂತಿತ್ತು
ಮಡಿಕೇರೀಗೆ ಮಂಜು ! ೫

ನನ್ನ ಯೆಂಡತಿ

ಮೋಯೀನಿ ಯವತಾರಾನೆತ್ತಿ—ಮಂಕು
ರಾಕ್ಸಸರಿಗೆ ಸೊನ್ನೆಸುತ್ತಿ—ದೇವ-
ತೆಗಳಿಗೆ ಅಮ್ರುತದ ಬುತ್ತಿ—ತಂದ
ಮಾದರಿ ಯಾರೇ—ಸೌಟ ಯಿಡಿದೆತ್ತಿ ?
ನೀನಲ್ಲವೇ ನನ್ನ ಯೆಂಡತ್ತಿ ! ೧

ಕಲ್ ತುಂಬ ರೇಸನ್ ಅಕ್ಯಾಗ—ಅಸೀ
ಸೌದೇದು ವೊಗೆ ಮುತ್ತಿ ಮೂಗ—ಬ್ಯಾಳೆ
ಬೇಯದೆ ಬಾವಿನೀರಾಗ—ಅಡಿಗೆ-
ಮನೆಯೊಳಗ್ಯಾರೇ—ದಿನಕೆರಡು ಸತ್ತಿ ?
ನೀನಲ್ಲವೇ ನನ್ನ ಯೆಂಡತ್ತಿ ! ೨

ಮನೆ ತುಂಬೊ ಮೂರ್ ಮಕ್ಕಳ್ ಕೊಟ್ಟು—ತಿದ್ದಿ
ನೇರಮಾಡುತ ಅವರ ಸೊಟ್ಟು—ಬಿಡತ
ಆಗಾಗ ನಂಗೂ ಒಂದು ಮೊಟ್ಟು—ನೋಡಿ
ಬೀಸುವರ್ ಯಾರೇ ಮಾತೀನ ಕತ್ತಿ !
ನೀನಲ್ಲವೇ ನನ್ನ ಯೆಂಡತ್ತಿ ! ೩

ನಗತಿದ್ರೆ ನೀ ರಾಮುನ್‌ಯೆಣ್ಣು—ಕೆಳ್ಳಿ
ಬುಟ್ಟೇಂದ್ರೆ ಬಲಬೀಮುನ್ ಕಣ್ಣು—ಸಡ್ಡೆ
ಮಾಡ್ದಿದ್ರೆ ನಾ ನಿಂಗೆ ಮಣ್ಣು—ಯಿಂಗೆ
ಮೀಟೋರ್ ಯಾರೇ ನಮ್ಮ ಪ್ರೀತಿಯ ಬತ್ತಿ ?
ನೀನಲ್ಲವೇ ನನ್ನ ಯೆಂಡತ್ತಿ ! ೪

ನೆಗ್ತಿರ್ತಿ ಮಲ್ಗೆವೂನಂಗೆ—ಗದರಿ
ಸಿಡಿಗುಡ್ತಿ ಮಿಂಚು ಗುಡುಗಂಗೆ—ಅಂಗೇ
ತತ್ತೀಯ ಕಣ್ಣಾಗ ಗಂಗೆ—ಇಂಗ್ನನ್ನ
ಆಡ್ಸೋರ್ ಯಾರೇ ಇಲೀನ್ ಆಡ್ಸೋವಂಗ್ ಕೊತ್ತಿ ?
ನೀನಲ್ಲವೇ ನನ್ನ ಯೆಂಡತ್ತಿ ! ೫

ಮಾತಾಯಿ ! ಮನೆಲಚ್ಮಿ ಮಲ್ಲಿ !—ನೀನೆ
ಕೆಂಪೂಜ್ರ ! ನಿನ್ನ ಪಕ್ಕದಲ್ಲಿ—ಬ್ಯಾರೆ
ಯೆಣ್ಣೆಲ್ಲ ನಡರಸ್ತೆ ಜಲ್ಲಿ—ಅನಿಸೀ
ಯಿಡಿದೊರ್ಯಾರೇ ನನ್ನನ್ ಇಂಗೆ ಮೇಗೆತ್ತಿ ?
ನೀನಲ್ಲವೇ ನನ್ನ ಯೆಂಡತ್ತಿ ! ೬

ಶೇ.ಗೋ. ಕುಲಕರ್ಣಿ

ಆತ್ಮಶಿಶು

ಅತಳಲೋಕದ ತಳವನೆಲ್ಲನೊಂದಡಿ ಮಾಡಿ
ಮುಗಿ ಇಲ್ಲದಿಹ ಮುಗಿಲ ಮೇಲೆ ಮುಖವನೆತ್ತಿ
ನೋಡಿ ನಲಿದೆನು ಒಂದು ಅದ್ಭುತದ ಲೀಲೆಯನು.
ಶಿಶುರೂಪದಿಂದೆನ್ನ ಆತ್ಮ ತಾನಾಡುತಿಹನಲ್ಲಿ.
ಚಿಕ್ಕೆ ಚಂಡನು ಮಾಡಿ ದೂರ ಎಸೆದಾಡುವನು;
ನಕ್ಷತ್ರ ಮಸ್ತಕದ ಮೇಲೆ ಕಾಲನ್ನೊತ್ತಿ
ಜಿಗಿದು ಹಾರಾಡುವನು. ಕಂಡು ಕಣ್ಮರೆಯಾಗಿ
ಓಡಿಹೋಗುವ ಉಲ್ಕಗಳ ಮೇಲೆ ಉಲುಕುವನು.
ಹುಲಿಯಂತೆ ಬೇಟೆಗಾರನು ಆಗಿ, ದಣಿದಣಿದು
ಹಿಂದಿರುಗಿ ನನ್ನ ನಗೆಮೊಗ ನೋಡಿ, ಜಿಗಿದೋಡಿ
ಬಂದಪ್ಪಿಕೊಂಡನು ತಾಯಿಯಂತೆನ್ನ ಮುದದಿ.
ತನುವ ಜೋಳಿಗೆ ಮಾಡಿ ಮಲಗಿಸಿದೆನವನನ್ನು
ಜೋಗುಳ ಪಾಡಿ ಹರಸಿದೆನು ಹಿಗ್ಗಿನಿಂದವನ.
ಏನು ನೋಟವಿದೆಂಥ ಲೀಲೆಯು ಆತ್ಮ ಶಿಶುವಿನದು !

ಬೆಳಕ ಹೊಳೆ

ಬೆಳಕಹೊಳೆಯಲೀಸುತಿದ್ದೆ
ತೀರ ದೂರ ಪಾರದಲ್ಲಿ
ಮೇರೆ ಮೀರಿ ಹರಿವ ಹೊಳೆಯು
ನೀರಿನೊಳಗೆ ಧುಮುಕಿಕೊಂಡು.

ಮುಳುಗಿ ಒಳಗೆ, ಹಾರಿ ಮೇಲೆ
ಸಾರಿ ತೆರೆಯನೇರಿ ನಿಂತೆ
ಮುಗಿಲಿನಗಲವಾಗಿ ಬೆಳೆದು
ಇಳೆಯನೊಮ್ಮೆ ಅಪ್ಪಿಕೊಂಡೆ.

ಹಾಲ ನೊರೆಯು ಸುರುಳಿಯಾಗಿ
ಬಿಳಿಯ ಆನೆ ಓಳಿಗೊಂಡು
ಕೇಳಿಗಾಗಿ ಧುಮುಕಿ ಎನ್ನ
ಏಳು ಸೊಂಡಿಲಿಂದ ಎತ್ತಿ
ಚಂದ್ರಲೋಕಕೊಯ್ದಿತು
ಇಂದ್ರ ಪಟ್ಟಗಟ್ಟಿತು.

ಮನಸು ಮತ್ತು ಮಾತು

ಮನಸು ಮಾತುಗಳೆರಡು ಒಂದೆ ಲೋಕದ ವಸ್ತು
ಮನವನರಳಿಸುವ ಕಲೆ ಮಾತಿಗುಂಟು
ಮನ ಸೋತು ಬಿದ್ದಾಗ ಗದ್ದರಿಸಿ ಎಬ್ಬಿಸುವ
ಘನ ಒಲವು ಮಾತಿನೊಳು ಅಡಗಿ ಉಂಟು.

ಮಾತು ಬಲ್ಲುದು ಎಲ್ಲ ಮೌನ ಮನಸಿನ ಸೊಲ್ಲ
ಕೂತಿರುವುದದಕಾಗಿ ಜನುಮ ತೆತ್ತು
ಮಾತು ಮಾತಿಗು ಮನವ ಕುಣಿಸಿ ಮಣಿಸುವ ಜಾಣು
ಮಾತಿಗಲ್ಲದೆ ಮತ್ತೆ ಏತಕುಂಟು.

ಮನಸುಗಳು ಎಷ್ಟುಂಟೊ ಅಷ್ಟು ಮಾತುಗಳುಂಟು
ಮನಸು ಮಾತಿಗು ಹೀಗೆ ಬಿಡದ ಗಂಟು
ಮನಸು ಮೇಣದ ಬತ್ತಿ ಮಾತು ಜ್ಯೋತಿಯ ಹೊತ್ತಿ
ಮನೆಯ ಬೆಳಗುವದಿಂತು ಸ್ನೇಹ ತಾನಂಟಿ.

ಒಳಗಿದ್ದ ಮನಸದುವೆ ಹೊರಬರಲು ಮಾತಾಯ್ತು
ಮಾತಿಗೆಲ್ಲಿಗೆ ಬಂತು ಬೇರೆ ಅಸ್ತಿತ್ವ
ಕತ್ತಲೆಯ ಗುಹೆಯಲ್ಲಿ ತನ್ನದೇ ಮನೆಯಲ್ಲಿ
ಮನಮಥಿಸೆ ಹೊರ ಬಂತು ಶಬ್ದತತ್ತ್ವ.

ಕೈಸನ್ನೆ ಕಣ್ಸನ್ನೆ ಮನದ ಸಂಕೇತಕ್ಕೆ
ಮೈಸನ್ನೆ ಎಲ್ಲವೂ ಸಾಲದಾಗಿ
ಕಾತರದಿ ಮನನೊಂದು ಬಳಲುತಿರೆ ಖತಿಗೊಂಡು
ಮಾತು ಬಂದಿತು ಮನದ ರೂಪವಾಗಿ.

ಜನುಮ ಜನುಮಾಂತರದಿ ಮೌನ ಬೆನ್ನಟ್ಟಿ ಬರೆ
ಅರಳದೆಯೆ ಉಳಿದಿತ್ತು ಮನದ ಮೊಗ್ಗು
ಮನವೆ ಮನುಜನ ಜನ್ಮ ತಾಳಿ ತಾ ಕಣ್ಣು ತೆರೆ
ಮನ ಮಾತು ಸೃಷ್ಟಿಸಿತು. ಜೀವನಕೆ ಹಿಗ್ಗು !

ತನ್ನ ಪ್ರಕೃತಿಗೆ ಒಪ್ಪಿ ಪುರುಷನಿಂದಿರೆ ಅಪ್ಪಿ
ಮನಕುಮುದೆ ನಾಚಿದಳು ಜರಿದು ಸರಿದು
ನನ್ನದೇನಿಹುದಿಲ್ಲಿ ಎಲ್ಲ ನಲ್ಲನದೆಂದು
ಸನ್ನಿಧಿಯ ಸೇರಿದಳು ಮೌನದಲಿ ನಡೆದು.

ಪಾಂಡೇಶ್ವರ ಗಣಪತಿರಾವ್

ಕನ್ನಡ ತಾಯ ಪಾದಕ್ಕೆ

ತಾಯೇ, ಕನ್ನಡದೇವಿ ! ಕೈಗೊಳೆನ್ನೀ ಸೇವೆ
ತಾಯೆ, ನಿನಗಳ್ತಿಯಿಂದೀವೆ ನುಡಿದೊಡವ !

ಪಂಪನೊಲು ಕಂಪುಗುವ ಕವನ ಕುಸುಮವನಿತ್ತು
ಸೊಂಪಿನುತ್ಸವದಿ ಪೂಜಿಸಲರಿಯೆನು;
ರನ್ನ, ಕವಿರನ್ನನೊಲು, ರತ್ನರಾಶಿಯನಿತ್ತು,
ರತ್ನಗರ್ಭೇ ಎಂದು ಹೊಗಳಲರಿಯೆಂ !

ಕನ್ನಡದ ಕವಿಚೂತವನ ಚೈತ್ರನೊಲು ನಿನ್ನ
ಭಾಗೋತ್ಸವಕೆ ಮಧುವ ತರಲಾರೆನು;
ಬಣಗು ಕವಿಗಳನು ಲೆಕ್ಕಿಸದ ಕಬ್ಬಿಗರಾಯ
ನೊಲು ನಿನ್ನ ಕೀರ್ತಿಗಾನವ ಹಾಡೆನು.

ಇನ್ನೆನಿತೊ ಇಂಪಿಂದ ಕವಿಗಳೆನಿಬರೊ ಜನಿಸಿ
ನಿನ್ನ ರೂಪವನು ಬಣ್ಣಿಸಿ ಬರೆದೊಡಂ,
ಮುನ್ನೆಸೆವನಂತಕಾಲವೆ ನುಡಿಯಲಾಂ ನಿನ್ನ
ಬಣ್ಣಿಸಿದೆನೋ ಇಲ್ಲವೆಂಬ ನಿಜವ !

ಶ್ರೀರಂಗಪಟ್ಟಣ

೧

ನೋಡಿಲ್ಲಿ ! ಕಾವೇರಿ ನೀಳ್ದೋಳ್ಗಳಿಂದೆತ್ತಿ
ಆಡಿಸಿದ ಮಗುವಿನೀ ಕ್ರೂರವಿಧಿ ನೋಟಂ !
ಮಳೆ, ಬಿಸಿಲ್, ಬಿರುಗಾಳಿ. ಬರಸಿಡಿಲ್ಗಳ ನುಂಗಿ
ಮಲೆನಾಡ ಗರ್ಭದಲಿ ಬಳೆದುದಿಸಿ ಬಂದು,
ಇಳೆಯೊಳೆಲ್ಲೆಡೆ ತನ್ನ ಆಟಪಾಟವ ತೋರಿ,
ನಲಿದುಲಿದು, ಮರುಳಾಗಿ. ಮುಗುಳು ನಗೆಗಳ ಬೀರಿ,

ಧರೆಯ ನಾಯಕರನೆಲ್ಲರ ನೇಹಿಗರ ಮಾಡಿ,
ಉರಿವೆದೆಯ ಕೆಚ್ಚಿಂದಲವರೊಡನೆ ಎಳೆದಾಡಿ,
ಕೊನೆಗಿಂತು ಮೌನದಲಿ, ಭೀಕರದ ಮೌನದಲಿ,
ಮುನಿಸಿ ಸಮಾಧಿಯುಲಿ ಕುಳಿತಿರ್ಪವೊಲು ಕುಳಿತಿಹನು !

೨

ಇನ್ನೂರು ವರುಷಗಳ ಜವನಿಕೆಯ ಹಿಂದೆ,
ಚಿತ್ರಿಸಿರುವಾ ನೋಟವೆಲ್ಲ ಕಣ್ಮುಂದೆ—
ಎರಡು ಶತಕದ ಮೊದಲ ರಾಜವೀಥಿಗಳು,
ಹರಿವ ಕಾವೇರಿ ನಿರ್ಮಲ ತರಂಗಿಣಿಯು,
ಮೇಲ್ಮುಗಿಲ ಮುದ್ದಿಡುವ ಕೊತ್ತಳದ ಸಾಲು,
ಕೊತ್ತಳದ ಮೇಲ್ನಿಂತ ಸೈನಿಕರ ಸಾಲು.
ಅಲ್ಲಲ್ಲಿ ಸಿಡಿಮದ್ದು ಭಾಂಡಗಳು, ತೋಪು
ಕಾವಲರ, ಕಾಲಾಳ ಎಚ್ಚರದ ಕಾಪು,
ಮೈಸೂರ ಭೂಪತಿಯ ಕೀರ್ತಿಸುವ ಭೇರಿ,
ನಾಲ್ದೆಸೆಯ ಮೊಳಗಿಸುವ ಯುದ್ಧದ ತುತೂರಿ,
ಇಲ್ಲಿಹುದು ಸುಲ್ತಾನನರಮನೆಯ ಸಾಲು !
ಕನಸುಗಳ ಕಲ್ಗವನ ಸಿರಿಯ ಹಿರಿ ಬಾಳು !
ಆರಲ್ಲಿ, ಹಿರಿದ ಬಾಳ್ ಝಳಪಿಸುತ ನಿಂತು
ದೂರದ ದಿಗಂತವನು ದಿಟ್ಟಿಸುವುದಿಂತು ?
ಓಹೊ ! ಕಲಿ ಸುಲ್ತಾನ ಮೈಸೂರ ಹುಲಿಯು,
ಕೆಚ್ಚೆದೆಯ, ಕೆಂಗಣ್ಣ ರಣಕುತೂಹಲಿಯು !
ಸಿಡಿಲಂತೆ ಘುಡುಘುಡಿಸಿ ಹೊಡೆವ ಬಲ್ದನಿಯಿಂ
ಪಡೆವಳರನೆಚ್ಚರಿಪುವಾರ್ಭಟವಿದೇನು ?
ಶ್ರೀರಂಗಪಟ್ಟಣವ ಮುತ್ತಿದವು ಮುಂದೆ–
ನುಡಿದ ನುಡಿ ಸಿಡಿದ ಕಿಡಿ ಕಾಳ್ಗಿಚ್ಚಿನಂತೆ
ಹಬ್ಬುತಲಿ ಗಡಣಿಸಿತು ಸೈನಿಕರ ಸಂತೆ !
ನುಗ್ಗಿ ನಡೆ ಕುಗ್ಗದೆಯೆ ಮುಂದೆ ದೌಡೆತ್ತಿ !
ಬಗ್ಗಿ ಬಡಿ, ಹಿಗ್ಗಿ ಹಿಡಿ, ನೆಗ್ಗಿ ನೆಡು ಕತ್ತಿ !
ಕಣಿ ಖಣಿಲ್, ಗಣ ಘಣಿಲ್, ಘನ ನಿನಾದದಲಿ
ಕುಣಿದು ರಣಸಿರಿಯನೊಲಿಸಿದರು ಮೋದದಲಿ.
ಅರ್ಧಚಂದ್ರೋದಯದ ಕೇತನದ ಕೆಳಗೆ
ಆರ್ಭಟಿಸಿ ಮೈಮರೆದು ಕಾದಿದರು ಇಳೆಗೆ !
ನೂರು ಸಾವಿರ ಯೋಧರೊಂದಾಗಿ ನುಗ್ಗಿ

ಸುಲ್ತಾನ ಸೇನೆಯುನು ಕಬಳಿಸಿದರೊಗ್ಗಿ !
ನೆತ್ತರಂ, ನೆತ್ತರಂ, ನೆತ್ತರಿನ ಹೊಳೆಯು,
ಕತ್ತಿಗಳ, ಕೈದುಗಳ, ಗುಂಡುಗಳ ಮಳೆಯು !
ಆರಿವಂ ಬಾಗಿಲೆಡೆ ಬಿದ್ದಿಹುದು ಮಡಿದು !
ಆರಿಲ್ಲ ಬಿಸಿ ರಕುತ ! ಕೈಕಾಲ್ಗಳುಡಿದು ?
ಅಯ್ಯೊ ! ಕಲಿಸುಲ್ತಾನ, ಮೈಸೂರ ಸಿಂಹ !
ಹಾರಾಡಿ, ಹೋರಾಡಿ ಮಲಗಿಹುದೆ ಸಿಂಹ !

೩

ಯಾತ್ರಿಕನೆ, ಏಕಿಂತು
ಸ್ತಬ್ಧನಾಗಿರುವೆ ?
ಮಾತಿಲ್ಲದೇಕಿಂತು
ಮೌನವಾಗಿರುವೆ ?
ಕಣ್ಣೀರ ಕೋಡಿಯೇಂ
ನಿನ್ನ ಕಣ್ಗಳಲಿ ?
ಈ ಪರಿಯ ನಡುಕವೇ-
ನ್ನಿನ್ನಂಗಗಳಲಿ ?
ಸೊಬಗುಗುವ ಹೂದೋಟ
ಮಸಣವಾಯ್ತೆಂದೊ ?
ಸೊಬಗಳಿದ, ಸಿರಿಯುಳಿದ
ಕಾಡಾಯ್ತಿದೆಂದೊ ?
ಅರೆನಿಮಿಷ ಕಣ್ಮುಚ್ಚಿ
ಭಾವದಲಿ ನೋಡು—
ಬಿರಿದೆಸಳ ಹೂವಾಗಿ
ತೋರ್ಪುದೀ ಕಾಡು !

೪

ಚಿತ್ರಭಿತ್ತಿಯೊಳಿಂತು
ಚಿತ್ರಗಳು ತೋರಿ,
ನೋಟಕನ ಕಣ್ಮನವ
ಸೆಳೆಯುವುವು ಸಾರಿ.
ಕೊತ್ತಳಂ ಕಲ್ಗುಪ್ಪೆ,
ಬೀದಿ ಮುಳ್ದೋಟ;
ಸುಲ್ತಾನನರಮನೆಯು

ತಿಪ್ಪೆಗಳ ಕೂಟ !
ಛಲದಿಂದ ಕೌರವನ
ಸಿರಿಯವೊಲ್ ಮೆರೆದು,
ಬಲದಿಂದ ಬಲರಾಮು
ನುರ್ಕಿನೊಲ್ ಉರಿದು.
ಕೊನೆಗಿಂತು, ಬಯಲ ತಂ-
ಗಾಳಿಯೊಲ್ ಪರಿದು,
ಮಾತುಳಿದು ಮೌನದಿಂ
ಬಿದ್ದಿಹುದು, ಬರಿದು !
ಕವಿಯ ಭಾವಕ್ಕೊಂದು
ರಾಗವೀಯುುವುದು,
ಭುವಿಯ ಭಾಗ್ಯಕ್ಕೊಂದು
ಹೆಸರನೀಯುುವುದು !

ಸಂಜೆ ಬಂತು

೧

ಸಂಜೆಬಂತು, ಸಂಜೆಬಂತು,
ಮುಗಿಲ ಕದವ ತೆರೆದು ಬಂತು
ಕಡಲ ಕರೆಯ ತೊರೆದು ಬಂತು
ಹೊಳಲು ಮಧ್ಯಕೆ—
ಉಡುಗಳಡಿಯನಿಡುತ ಬಂತು
ಗಗನ ಮಧ್ಯಕೆ.

೨

ಹೊಳಲ ಹೂವ ಮುಗಿಸಿ ಬಂತು,
ಬಾನಿನಲರ ನಗಿಸಿ ಬಂತು,
ಕೊಳಲ ಕರೆಯ ಕೇಳಿ ಬಂತು
ಚೆಲುವ ಹಳ್ಳಿಗೆ—
ಹಳುವ ತೆರೆಯ ಸೀಳಿ ಬಂತು
ಹೊಳಲ ಗಲ್ಲಿಗೆ.

೩

ಕಡಲನಳೆದು, ಕಾಡ ತುಳಿದು
ಬೆಟ್ಟದಿಂದಲಳುಕುತಿಳಿದು,
ಇಳೆಯ ನಗೆಯ ನುಂಗಿ ಮುಳಿದು
ಸಂಜೆ ಬಂದಿತು—
ಹೊಳೆವ ತಾರೆ ತಳತಳಿಸುತ-
ಲದೋ ನಿಂತಿತು

೪

ದೂರದೂರಿಗೈದ ನಲ್ಲ
ನೀರೆಯ ಹಂಬಲದಿ ಮೆಲ್ಲ
ಗಾರಿದುಸಿರನುಸಿರುವಂತೆ
ಗಾಳಿಬೀಸುತ
ಸಾರಿ ಬಂತು ಸಂಜೆಯು ಕಂ–
ಬನಿಯ ಸೂಸುತ !

೫

ನೀಲ ಮುಗಿಲ ಮೇಗಣಿಂದ,
ನೀಲ ಕಡಲಿನಾಳದಿಂದ
ನೀಲಗೀತ ಲಹರಿಯೊಂದ
ದಿಳೆಗೆ ಸುರಿದುದು,
ನೀಲಿಯೊಂದೆ ಬಣ್ಣದಿಂದ
ಲಿಳೆಯ ಬರೆದುದು !

೬

ತಳಿರ ತಂಪು ತೆಕ್ಕೆಯಲ್ಲಿ
ಚಿಲಿಪಿಲಿಯಿಂ ಪಕ್ಕಿಯಲ್ಲಿ
ಉಲಿಯುತಿಹುದು ಪುಟ್ಟ ಮರಿಗೆ
ಸಂಜೆಯ ಬರವ–
ಹಳಿಯುತಿಹುದು ಮನವು ನೊಂದು
ಬೇಸರವಿರವ !

ಭಾವಗೀತೆ

ಇಲ್ಲೆ ಇರು, ಅಲ್ಲಿ ಹೋಗಿ ಮಲ್ಲಿಗೆಯನು ತರುವೆನು;
ನೇಹಕೆಂದು ನಲುಮೆಗೊಂದು ಗುರುತನಿರಿಸಿ ಬರುವೆನು.

ಹೋದಮೇಲೆ ಸುತ್ತಬೇಕು ಏಳು ಕೋಟೆ ದ್ವಾರವು !
ಹಾದಿಯಲ್ಲಿ ತೀರದಂಥ ದುಃಖವಿಹುದಪಾರವು !
ಸಾಧಿಸುತ್ತ ಜಯಿಸುವದೇ ಬಾಳುವದರ ಸಾರವು !

ಇಲ್ಲಿ ಕೊನರದಂಥ ನೋವು, ಫಲಿಸದಂಥ ಯಾತನೆ:
ಇಲ್ಲಿ ನಿತ್ಯ ಕೊಳೆಯುತಿಹುದು ನನ್ನ ಜೀವ ಚೇತನೆ !
ಇನ್ನು ಮೊಳ್‌ಗಿಸಿದರೆ ಮೊಳಗಿಸುವೆನು ಅದರ ಮಾತನೆ !

ನವಗ್ರಹಗಳ ನಾಡ ದಾಟಿ ಮಿಗಿಲ ಗಡಿ ಮೀರಿಯೂ
ದಿಕ್ಕು ತಪ್ಪುತಲೆವ ತಾರೆಗಳಿಗೆ ದಾರಿ ತೋರಿಯೂ
ಕತ್ತಲಿದ್ದ ತಾಣದಲ್ಲಿ ಎದೆಯ ಬೆಳಕ ಬೀರಿಯೂ !

ಗಾನದುನ್ಮಾದವೇರಿ ನಡೆದ ರಾಜಭೃಂಗವು,
ದೇವಕನ್ನಿಕೆಯರು ನುಡಿಸುವಂಥ ಮೃದು ಮೃದಂಗವು–
ಇದಕು ಹಿರಿದು ಎದೆಯಲಿರುವ ಭಾವನಾತರಂಗವು !

ಕೋಟಿ ವರುಷದಾಚೆ ಜನಿಸಿದಂಥ ಜೀವದಾಸೆಯು
ತೀರಬಹುದು, ಹಿಂಗಬಹುದು ಅಂದಿನಾ ಪಿಪಾಸೆಯು !
ಇಂದೆ ರುಚಿರವಾಗಬಹುದು ನನ್ನ ದೈವರೇಷೆಯು !

ಸ್ಯಾನ್‌ಫ್ರಾನ್ಸಿಸ್ಕೋ

ಬೆಟ್ಟದ ಮೇಲೆ ಕುಳಿತಪವು ಬರ್ಕ್ಲೆ, ಓಕ್‌ಲಂಡ್,—
ಅಡಿಯಿಂದ ಮುಡಿವರೆಗೆ ಬೆಳ್ಳಕ್ಕಿ ಕುಳಿತ ತೆರದಿ.
ಅರ್ಧಚಂದ್ರಕಾರ ನೀಲಿಯಿದು ಉಪಸಾಗರ
ಪವಡಿಸಿದೆ ನಿನ್ನ ಪದತಲದಲ್ಲಿ ಹೊಳೆದು ಭರದಿ.

ನೀನೆದ್ದು ನಿಂತಿರುವೆ ಓ ಚೆಲುವ ನಗರಲಕ್ಷ್ಮಿ,
ಕಡಲೊಡೆಯ ರಚಿಸಿಹ ಕಮಾನಿದನು ನೋಡಲೆಂದು;
ಎದ್ದು ನಿಂತಿಹೆ ಬೆಟ್ಟದತಿ ತುತ್ತತುದಿಗೆ ಬಂದು
ನಿನ್ನ ಮಕ್ಕಳು ನೋಡಿ ಸೌಂದರವ ಹಾಡಲೆಂದು.

ಕಟ್ಟಿರುವ ಮನೆಯಲ್ಲ ಕಡಿದಿರುವ ದಾರಿಯಲ್ಲ
ಬೆಟ್ಟದಲ್ಲಿಯೆ ಕೊರೆದ ಗವಿಯಂತೆ ನಿನ್ನರಮನೆ;
ನೀಳ್ದ ಶಿಲೆಗಳೆ ನಿನ್ನ 'ಶ್ವೇತ ಸ್ಕೈ' ಸ್ಕ್ರೇಪರುಗಳು;
ಶಿಲಾಖಂಡ ಮನೆ; ಶಿಲಾವ್ಯೂಹವೇ ಹರ್ಮ್ಯದ ಗೊನೆ?
ಪರ್ವತವೆ ನಿನಗಾಯಿತಿದು ಪದ್ಮಸದನವರಳಿ
ನಗರ ಲಕ್ಷ್ಮಿಯು ನೀನು ನೆಲಸಲೆನೆ ಬರುವಿಯೆಂದು;
ಉಪಸಾಗರವೆ ನಿನಗೆ ಸ್ವರ್ಣ ಸೇತುವೆಯಾಯಿತು.
ಜಗದೊಳಿಹ ಮುತ್ತುರತುನವನಿಲ್ಲಿ ತರುವಿಯೆಂದು.

ರೋಮದಂತೆಯೋ ನೀನು ಹರವಿರುವಿ ಬೆಟ್ಟದಲ್ಲಿ;
ಪ್ಯಾರೀಸಿನಂತೆ ತುಳುಕುವದು ಮಾನವ ವಿಲಾಸ;
ಲಂಡನ್ನಿನಂತಿಲ್ಲಿ ಜನ–ಜನಾಂಗದ ಸಂಗಮ;
ಟೋಕಿಯೋದೊಲು ನಿನ್ನ ರಾತ್ರಿಗಳ ಇಂದ್ರಹಾಸ.
ಆಲ್ಜಿಯರ್ಸ್‌ದೊಲು ಹೊಳೆವೆ ನೀ ಸೂರ್ಯಕಿರಣದಲ್ಲಿ.
ದಿಲ್ಲಿ–ಇಸ್ತಾಂಬೂಲ ಥಳಯಿಸಿ ಹೊಳೆಯುವಂತೆ
ಶ್ವೇತಪ್ರಭೆ ಘನವಾಗಿ ಪರ್ವತದಿ ನೆಲಸಿದಂತೆ
ಲಕ್ಷಮಂದಿರವಾಗಿ; ಚಂದಿರನು ಮೊಳೆಯುವಂತೆ!

ಆಫ್ರಿಕದ ತುಂಡಿಲ್ಲಿ; ಪಡುವಣದ ತಂಡವಿಲ್ಲಿ;
ಏಸಿಯದ ಕುಂಡವಿದೊ! ಚೀನದಾ ಹೊಂಡವಿಲ್ಲಿ!
ವಿವಿಧ ವರ್ಣಗಳಲ್ಲಿ ತಮ್ಮ ಸಂಸಾರ ಹೂಡಿ
ಚಿಗುರುತಿವೆ, ಕೊನರುತಿವೆ, ಸಕಲ ಬ್ರಹ್ಮಾಂಡವಿಲ್ಲಿ!
ಮನುಕುಲವ ಸ್ವಾಗತಿಸಿ ನೀನಾದೆ ಕುಲದೇವತೆ;
ವಿಶ್ವಮಾನವಗೆಂದು ನೀನು ಕಟ್ಟಿದೆ ತೋರಣ.
ಸೂರ್ಯಹಾಸವು ನಿನ್ನ ಮೋರೆಯಲಿ ಮಿನುಗುತಿಹುದು.
ಉಕ್ಕುತಿದೆ ನಮ್ಮ ಕುಲದೈಕ್ಯದೋರಣ-ಪೂರಣ.

ನಿನ್ನ ಬೀದಿಗಳೆಲ್ಲ ಕೆಳಗಿನಿಂದೆದ್ದು ಮೇಲೆ
ತುಂಗ ಶೃಂಗಗಳ ತಪ್ಪಲುವೀಡಿನಲ್ಲಿ ಮುಗಿದು

ಮಾಯವಾಗಿವೆ. ತಂತಿಟ್ರಾಮುಗಳು ನಿನ್ನೊಳೋಲಿದು
ಸಾಗಿಹವು ವಿದ್ಯುತ್ತು ತಮಗೆ ಕೀಲೆಂದು ಬಗೆದು.
ನದಿಯು ತಡಸಲದಂತೆ ಹಲಕೆಲವು ದಾರಿ–ಕೇರಿ;
ಓ ಅನಾಯಾಸ ಕಾರಿಳಿಯುತಿದೆ ನೋಡು ತಾನೆ!
ನಾಗಮುರಿಗೆಯು ಮಣಿತ ಪ್ರೀತಿಯಾಭರಣ ನಿನಗೆ:
ಆಗೀಗ ಅಮೃತಸಿಂಚನ ಮಳೆಯು ತರುವ ಸೋನೆ!

ಅಮರ ಯೌವನದಲ್ಲಿ ಕಾರ್ಥೇಜು, ಏಥೆನ್ಸಿನಾ
ಹಾಳುಗಳ ತೆರದಿ ಶೋಭಿಸುವಿ, ಸಾಗರದ ಬದಿಗೆ.
ಕಂಡೆ ಬೆಟ್ಟವನೇರಿ: ರಾತ್ರಿಯಲಿ ದೀಪ್ತಸೌಧ-
ಮಾಲೆಗಳನೇರಿ ನೀ ಸಾಗಿರುವಿ ತುತ್ತತುದಿಗೆ!
ನಿನ್ನ ಗೆಯ್ಮೆಯದೆಲ್ಲ ರಮ್ಯ, ಲೀಲಾವತಾರಿ!
ರವಿಸನ್ನಿಧಿಗೆ ಹೊಳೆವ ನೀಲ್ಗಡಲ ಬದಿ ರಾಜಿಸಿ
ನಿನ್ನ ಮಾಲಕುಮಿ ಕಳೆಗಿಲ್ಲ ಇಳಿವಯದ ಅಳಿವು.
ನಿರ್ಜರಾಂಗನೆ ನೀನು, ಅನ್ಯಪುರಿಗಳ ನಾಚಿಸಿ.

ಓ ನಗರಗಳ ಗೌರಿ! ಚಂದ್ರಮೌಳಿಯ ಪ್ರೇಮವು
ನಿನ್ನನಾವರಿಸಿಹುದು. ಅಸಮವಿದು ನಿನ್ನ ದ್ಯುತಿಯು.
ಕಾಲಸಾಗರದಲ್ಲಿ ನಗರಗಳು ನೌಕೆಯಂತೆ-
ಎದ್ದಿಹವು ಮುಳುಗಿಹವು ಬರಲೆಂತೊ ನುಸುಳಿ ಚ್ಯುತಿಯು.
ನಿನ್ನ ಭೌತಿಕ ದೇಹವೆಂದಾದರೂನು ಇಂತು
ಕ್ಷಯದ ಬಾಧೆಗೆ ವ್ಯಯಿಸುತಿರಲು ಭಗ್ನಾವಶೇಷ
ನಿನ್ನಾತ್ಮ ಹೊಳೆಯುವದು ನೆಲದಿ ಧ್ರುವತಾರೆಯಂತೆ
ರತ್ನವಾಗಿಸಿ ಹೆಡೆಯೊಳಿರಿಸುವನು ಆದಿಶೇಷ.

ಚಂದ್ರಗ್ರಹಣ

ನೋಳ

ಒಂದು ಗ್ರಹಕೆ ಬಂತು ಗ್ರಹಣ,
ಇಂದೆ ಚಂದ್ರಗ್ರಹಣ
ಇಂದೆ ಚಂದ್ರಗ್ರಹಣೋ!
ಇಂದೆ ಚಂದ್ರಗ್ರಹಣ.

ಮೇಳದ ಹಿರಿಯ

ಕೆನೆವೆಳಕಿನ ಸೋನೆಯ ಚಂದ್ರ–
ನಾದನು ಕಪ್ಪಿಡಿದ ಲಾಂದ್ರ.
ಪವನವಾಯ್ತು ತಾಮ್ರದ ಪೈ
ಕತ್ತಲೆಯೇ ಎತ್ತಿದ ಕೈ.
ಮರುಳೆಂದವು: ಸೈ, ಸೈ, ಸೈ !
ದೆವ್ವ ಕುಣಿಯೆ: ಹೈ, ಹೈ, ಹೈ !
ತಬ್ಬಿಬ್ಬಾದವು ತಾರೆ
ಮಬ್ಬಿಡಿಯಲು ಹೌಹಾರೆ !

ಮೇಳ

ಒಂದು ಗ್ರಹಕೆ ಬಂತು ಗ್ರಹಣ.
ಇಂದೆ ಚಂದ್ರಗ್ರಹಣ.
ಇಂದೆ ಚಂದ್ರಗ್ರಹಣೋ !
ಇಂದೆ ಚಂದ್ರಗ್ರಹಣ.

ಮೇಳದ ಹಿರಿಯ

ತುಂಬುದೆರೆಯ ತಂಬುಲವನು
ತುಂಬ ಮೆಲುವ ಹಂಬಲವನು
ತಳೆದರಂತೆ ರಾಹು ಕೇತು;
ನೋಡಿದೆಂಥ ಹೇತು, ಬೇತು !
ಕಾಡಿನಲ್ಲಿ ಕಗ್ಗತ್ತಲೆ.
ಮನೆ ಮನೆಯಲಿ ಮಡಿಬತ್ತಲೆ !
ಬಂದಿತಾವುದೋ ವಿಪತ್ತು
ಮಂದಿ ತಿಳಿಯರದರ ಗತ್ತು.

ಮೇಳ

ಒಂದು ಗ್ರಹಕೆ ಬಂತು ಗ್ರಹಣ,
ಇಂದೆ ಚಂದ್ರಗ್ರಹಣ.
ಇಂದೆ ಚಂದ್ರಗ್ರಹಣೋ !
ಇಂದೆ ಚಂದ್ರಗ್ರಹಣ.

ಮೇಳದ ಹಿರಿಯ

ರಾಹು ಕೇತು ರಗಳೆ, ಕಂತೆ.
ಅಂಜಿಕೆಗಳ ಬಂಜೆ ಸಂತೆ.

ಮಣ್ಣಗರಿಗೆ ಹೊಳೆದಿರುವುದು-
ಸತ್ಯಕಥೆಯು ತಿಳಿದಿರುವುದು
ಹೊಂಗದಿರನಿಗೆದುರಾಗಿ
ಭೂಮಿಯು ಬರುತಿರಲಾಗಿ
ಬೀಳುತಿರುವ ಕಪ್ಪುನೆಳಲು–
ಆದುವೆ ಚಂದ್ರನಳಲು–ಬಳಲು
ಹುಣ್ಣಿಮೆಯನೆ ನುಂಗುವಂಥ
ರಾಹು ನಾವು. ನಮ್ಮ ಪಂಥ
ಪಂಥಾನವ ಸುತ್ತಿದೆ,
ಮುದ್ದು ಮುಗಿಲ ಮುತ್ತಿದೆ;
ಭೂಮಂಡಲ ಕೆಣಕುತಿದೆ:
ಸಾಯ್ವೆಳಕದು ಮಿಣುಕುತಿದೆ:

ಮೇಳ

ಒಂದು ಗ್ರಹಕೆ ಬಂತು ಗ್ರಹಣ,
ಇಂದೆ ಚಂದ್ರುಗ್ರಹಣ
ಉಳಿದವಕೂ ತುಂಬಿದೆ ದಿನ
ನಾಳೆ ಸೂರ್ಯಗ್ರಹಣ.

ಮೇಳದ ಹಿರಿಯು

ದೇ ದಾನ್ ! ಸುಟೀ ಗ್ರಾನ್ !
ದೇ ದಾನ್ ! ಸುಟೀ ಗ್ರಾನ್ !

ರಾಮಲಿಂಗ ದೇವಾಲಯ

ಲಕ್ಷ್ಮೇಶ್ವರದ ರಾಮಲಿಂಗ ದೇವಾಲಯದ
ಲೊಂದು ಸಾವಿರಲಿಂಗ ಮೂಡಿರಲು ಪಿಂಡದಲಿ
ರಾಮೇಶ್ವರವೆ ಆಗುತದು ಭರತಖಂಡದಲಿ
ಮೆರೆಯಬಹುದಿತ್ತೆಂದು ಜನರೊಂದು ವಿಸ್ಮಯದ
ಮಾತ ನುಡಿವರು. ಅಕಟ ! ಕೋಳಿ ಸೂರ್ಯೋದಯದ
ಕಾಲಕ್ಕೆ ಕೂಗಿತ್ತು. ಆ ಶಿಲಾಖಂಡದಲಿ
ಮೂಡಲಿಹ ಕೊನೆಯ ಲಿಂಗವನಳಿಸಿ ! ದಿಂಡದಲಿ
ಎಲ್ಲ ಲಿಂಗಗಳರಳಿ ಮುಡಿಗೆ ಬರೆ-ಹೋಯ್ತುಹದ !

ಸುವರ್ಣಸಂಪುಟ/೨೪೧

ಸುತ್ತಲೊಂಭೈನೂರು ತೊಂಭತ್ತರೊಂಭತ್ತು!
ಇರಲೇನು? ಸಾವಿರಕೆ ಬರಿ ಒಂದು ಕಡಿಮೆಯಿರೆ
ಗಣಿತವಾಯಿತು ವ್ಯರ್ಥ. ಗಿಡಗಂಟೆಯದು ಸುತ್ತ
ಬೆಳೆದಿಹುದು. ದೇಗುಲವ ನೋಡಬಯಸುವರಿಲ್ಲ.
ಸಮೃದ್ಧಿಗೂ,—ಅಮೃತಸಿದ್ಧಿಯು ಕೊನೆಗೆ ಬಾರದಿರೆ,—
ಇಡಿಯ ಜನ್ಮವೆ ವ್ಯರ್ಥ. ಇದನು ಬಲ್ಲವ ಬಲ್ಲ.

ಅಚ್ಚೆ

ಹೀಚುಗಾಯಿಯೊಂದರಲ್ಲಿ ಇದ್ದಿತಯ್ಯ ರೂಪಿಸಿ.
ಬಲ್ಲರಾರು ನಲಿವುದೆಂದು ದಿಗಂತವನೆ ವ್ಯಾಪಿಸಿ?

ಹಾಲೆಬಳ್ಳಿಗಾಯಿಯಲ್ಲಿ ರೇಶಿಮೆಯೊಲು ಮೃದುಲವು.
ಅಚ್ಚೆಗಳಿಡಿ ಗುಂಪಿನಲ್ಲಿ ಎಲ್ಲವದಕೆ ಹದುಳವು.
ಮುದುಡಿಕೊಂಡು ಕಾಯಿತಯ್ಯ ಬರುವುದೆಂದು ಕಾಲವು.
ಹೀರಕರಂಡಕ ತೆರೆಯಲು ದಶ ದಿಶೆಗಳು ಸಾಲವು!

ಹೀಚುಗಾಯ ಮುದ್ದಿಸಿತ್ತು ಅರುಣೋದಯ ಮೆಲ್ಲನೆ.
ಅದರ ಸುತ್ತು ಬಂದು ಸುಳಿದರೆಲ್ಲ ಮರುತರೊಯ್ಯನೆ!
ವರುಣ ಕರೆದ ಮಳೆಯಾಯಿತು ಹೀಚಿಗಮೃತಸಿಂಚನ.
ಬೆಂಗದಿರನ ಪ್ರಭೆಗೆ ಬಣ್ಣ ರೋಮಾಂಚನ ಕಾಂಚನ!

ಕಾಯ ಹೊನ್ನ ಹೊದಿಕೆಯೊಡೆದು ಸ್ವರ್ಣದ್ವಾರ ತೆರೆದಿರೆ,
ಮುಗಿಲೊಳಾಡಲೆಂದು ಬಂದ ಮಂದಾನಿಲ ಕರೆದಿರೆ
ಅಚ್ಚೆದಿಂಗಳಿರುಳನಂದು ಅಚ್ಚೆರಿಗೊಳುತೀಕ್ಷಿಸಿ
ಅಚ್ಚೆ ನುಸುಳಿತಯ್ಯ ದೇವಯಾನಗಳನಪೇಕ್ಷಿಸಿ.

ತಂಬೆಲರುಗಳೂದುತಿರಲು ಚಂದ್ರನಿಂದ್ರಜಾಲಕೆ
ಮೋಹಿಸಿದೆಳೆ ಮರುತರೆಲ್ಲ ನರ್ತಿಸುತಿರೆ ತಾಲಕೆ
ಮೇಲೆ ಮೇಲೆ ತೇಲಿ ವಿಶ್ವದೊಂದನಂತ ಲೀಲೆಗೆ
ಅಚ್ಚೆ ಹವಣಿಸಿತ್ತು: ನಿಃಸೀಮ ನೃತ್ಯಶಾಲೆಗೆ.

ಬೆಳುದಿಂಗಳಿನಲಿ ಹೊಳೆಯಿತು. ವಾಯುಪಥವು ಎಳೆಯಿತು;
ಮೌನಸಂಗೀತವದನು ಮೇಲೆ ಮೇಲೆ ಸೆಳೆಯಿತು.

ಮಂದಾಕಿನಿಯಲಿ ತೃಷೆಯನು, ಸೂರ್ಯಪಥದಿ ಕ್ಷುಧೆಯನು
ಹಿಂಗಿಸಿತ್ತು, ಇಂಗಿಸಿತ್ತು, ಸವಿದು ನೋಡಿ ಸುಧೆಯನು.

ಅವಲೋಕಿಸೆ ಮೇಲಿನಿಂದ,—ಮರೆಯಾದಳು ಮೇದಿನಿ;
ಒಮ್ಮೆ ಆಕೆ ಉನ್ಮಾದಿನಿ, ಒಮ್ಮೆ ಆಹ್ಲಾದಿನಿ!
ಗುಣಗಳೆಲ್ಲ ತಂದರಿಳೆಗೆ ಇರುವೆಗೋಂಟೆ ಶಿಲ್ಪವ
ಫಣಿಮಾನವ ಕಲ್ಪಿಸಿದನು ಹುತ್ತಗಳ ವಿಕಲ್ಪವ.

ಪ್ರಕೃತಿ ಸರ್ಪವೇಣಿ, ಪುರುಷನಹುದು ಸರ್ಪಭೂಷಣ.
ಇಂತಿರೆ ವೇದಾಂತವೆಲ್ಲ ಬರಿಯ ಕಂಠಶೋಷಣ.
ರಕ್ತಪಾತ, ಹಿಂಸೆ, ಕೊಲೆ,—ಇಲ್ಲವಿವಕೆ ನ್ಯಾಯ, ನೆಲೆ.
ಎಲ್ಲಿ ಇವನು ನಿಲ್ಲಿಸಬಹ ಮಹಾಮಂತ್ರ, ಇಂದ್ರಕಲೆ?

ಎಂಬ ಧ್ವನಿಯು ಪ್ರತಿಧ್ವನಿಸಲು ಆಗಿ ಸರ್ವವ್ಯಾಪಕ
ಯಾವ ರುದ್ರಮಂತ್ರವಿದು? ಯಾವ ರುದ್ರರೂಪಕ?
ಎಂಬ ಗೂಢವನು ತಿಳಿಯಲು ಸರ್ವಮಯವ ಸೇರಿತು.
ಸರ್ವಮಂಗಲಾಸ್ಪದವನು ಮೆಲ್ಲನೆ ಬಳಿಸಾರಿತು.

ಆನಂದದ ಯಾವ ಸೆಲೆಗೆ ದುಃಖ–ಸುಖದ ದ್ವಂದ್ವವು
ಹರಿಯುವದೋ, ತೆರೆಯುವದೋ ದಿವ್ಯ ಬ್ರಹ್ಮರಂಧ್ರವು;
ಸರಿಯುವವೋ ಒಳಿತು–ಕೆಡಕು, ಜನನ–ಮರಣ ಸ್ಥಿತಿಗಳು:
ಒಂದೆ ಮಲರ ಕುಸುಮಗಳೈ, ಒಂದೆ ಎಲರ ಗತಿಗಳು:

ಆ ಸೆಲೆಯಲಿ ಸಿಲುಕಿ ಪರಂಜ್ಯೋತಿಪದ ಪ್ರಕಾಶವು
ಹೊಮ್ಮುತಿರಲು, ತುಂಬುತಿರಲು ಬಿತ್ತರದಾಕಾಶವು,—
ಇಳೆಯ ತಮವ ಕಳೆಯಬಲ್ಲ ಜ್ಯೋತಿಯೇ! ನಮೋ ನಮೋ!
ವಿರಸದಾಳಿಕೆಯ ಮುಗಿಸುವ ಸಮರಸವೇ! ಓಂ ನಮೋ!

ಇಂತು ಸ್ಮಿತಸಮಾಧಿಯಲ್ಲಿ ಅಚ್ಚ ಲೀನವಾಗಿರೆ
ಸೌಂದರ್ಯಸಾಗರದಲಿ ಮಿಂದ ಮೀನವಾಗಿರೆ
ತಾಯ್ನೆಲದೆಡೆ ಬಾನಾಡಿಯ ನೋಟ ಮತ್ತೆ ಹೊರಳಿತು.
ಕಂಡುದನ್ನು ಕರುಣಿಸಲೆನೆ ಅಚ್ಚ ಇಳೆಗೆ ಮರಳಿತು.

ಹಾಲ್ಗೆನೆಯಲಿ ಹಿಂಜಿದಂಥ ಹಿರಿಯ ಅಂದಚೆಂದವ
ತಳೆದು ಬೀರುತೆಲ್ಲೆಡೆಗೂ ಪರಾತ್ಪರದ ಗಂಧವ
ಬಾಳಿದೊಂದು ಲೀಲೆಯೆಂದು ತಿಳಿದು ತಿಳಿಸಿ ಹೊಳೆವುದು.
ಬೆಳಕುಮುಗಿಲ ಕಿರಿಮರಿಯೊಲು ಅಚ್ಚ ಇಲ್ಲಿ ಸುಳಿವುದು.

ಹೀಚುಗಾಯಿಯೊಂದರಲ್ಲಿ ಇದ್ದಿತಯ್ಯ ರೂಪಿಸಿ.
ಬಲ್ಲರಾರು ನಲಿವುದೆಂದು ದಿಗಂತವನೆ ವ್ಯಾಪಿಸಿ!

ಬಾಳ ದೇಗುಲದಲ್ಲಿ

ಬಾಳ ದೇಗುಲದಲ್ಲಿ
ಜೀತದಾಳೆಂದು
ಬಂದು ನಿಂತಿಹೆವಿಂದು
ನೀನೆ ಆಳ್ ಎಂದು.
ಓ ದೇವಿ! ಮಾದೇವಿ!
ಕಂಣು ತೆರೆಯೆಂದು;
ನಮ್ಮ ಪಾಪಗಳನ್ನು
ತೊಡೆದು ಪೊರೆಯೆಂದು.
ಉಳಿದ ದೇವರುಗಳೆ–
ಲ್ಲರು ದಿಂಡವೆಂದು
ಕಾಣುವದಿದೆಲ್ಲ ನಿನ್–
ನದೆ ಪಿಂಡವೆಂದು.
ನಿಂದ ಭಕ್ತರನಿನ್ನು ಕಣ್ದೆರೆದು ನೋಡು
ಬಂದ ಯಾತ್ರಿಕರನ್ನು ಹರಸು, ಕಾಪಾಡು.

ದಶಾವತಾರಗಳೆಲ್ಲ
ನೀನೆ ತಾಯ್ ಎಂದು,
ಎಲ್ಲ ಕುಲಧರ್ಮಗಳು
ನೀನೆ ಕಾಯ್ ಎಂದು,
ಇಂದು ನೇಸರ ಚಿಕ್ಕೆ
ನೀ ಕರುಣೆಯೆಂದು,
ಅನುಭಾವಿ, ಕವಿ, ಜ್ಞಾನಿ,—
ಚಿರ ತರುಣಿಯೆಂದು:
ಒಡನುಡಿದು ಬಾಳಿರಲು
ನಿನ್ನ ಪದತಲದಿ
ನಾವಿಂದು ನಿಂತಿಹೆವು
ನಿನ್ನ ಎಡಬಲದಿ.
ಓ ದೇವಿ! ಮಾದೇವಿ! ಕಣ್ದೆರೆದು ನೋಡು
ನಿಂದ ಭಕ್ತರನಿನ್ನು ಹರಸು, ಕಾಪಾಡು.

ಧಾರುಣಿಯ ಹುಡಿಯಿಂದ
ಬಾನ್ ಹುಡೆಯುವರೆಗೆ
ಸಾಗರದ ನಡುವಿಂದ
ಅದರ ಕೊನೆವರೆಗೆ
ಎಂಟು ದಿಗ್ದೆಸೆಯಿಂದ
ಧ್ರುವತಾರೆವರೆಗೆ
ನರ್ತಿಸುವ ಧರೆಯಿಂದ
ಶೂನ್ಯದಾ ಗೆರೆಗೆ—
ನಾವು ಕಂಡಿಹುದೊಂದೆ:
ತಾಯ್: ನಿನ್ನನೊಂದೇ
ನಾವರ್ಚಿಸಿಹುದೊಂದೆ;
ಬಾಳ್! ನಿನ್ನನೊಂದೇ.
ಓ ದೇವಿ! ಮಾದೇವಿ! ಕಣ್ದೆರೆದು ನೋಡು.
ಬಂದ ಯಾತ್ರಿಕರನ್ನು ಹರಸು ಕಾಪಾಡು.

ಏಸುಕ್ರಿಸ್ತನು ನಿನ್ನ
ಬೆಸ್ತರವನಹುದು.
ಕೃಷ್ಣಯಾದವ ನಿನ್ನ ಬೇಡರವನಹುದು.
ರಾಮ ರಾಘವ ನಿನ್ನ
ಬಡಪಾಯಿಯಹುದು.
ಬುದ್ಧ ಗೌತಮ ನಿನ್ನ
ಬೇಹಿನವನಹುದು.
ಬಂದು ಜನಿಸಿದರಿವರು
ನಿನ್ನುದರದಲ್ಲಿ
ಕಂಡು ಮುಕ್ತಿಯನಲ್ಲಿ,—
ಕಾಣ್ಬುದಿನ್ನೆಲ್ಲಿ?
ಓ ದೇವಿ! ಮಾದೇವಿ! ಕಣ್ದೆರೆದು ನೋಡು.
ನಿಂದ ಯಾತ್ರಿಕರನ್ನು ಹರಸು ಕಾಪಾಡು.

ಮಣ್ಣಿನಲಿ ಮೊಳೆಯುತ್ತ
ಕಣ್ಣೆನಲ್ಲರಳಿ
ದೇಹ ಮನದಲಿ ನರಳಿ
ಪ್ರಾಣದೆಡೆ ಹೊರಳಿ
ಬುದ್ಧಿಯಲಿ ಜೋತಾಡಿ

ನೇತಾಡಿ ಕೆರಳಿ
ಆತುಮನ ಜ್ಯೋತಿಯಲಿ
ನಿನ್ನೆಡೆಗೆ ಮರಳಿ
ನಿನ್ನ ಪದಪದ್ಮದಲಿ
ಬಾಳ್ವುದೆಂಬುವರು.
ಅಲ್ಲಿಂದ ಲೋಕವನೆ
ಆಳ್ವುದೆಂಬುವರು.
ಓ ದೇವಿ! ಮಾದೇವಿ! ಕಣ್ದೆರೆದು ನೋಡು.
ಬಂದ ಭಕ್ತರನಿನ್ನು ಹರಸು, ಕಾಪಾಡು.

ಕ್ರಿಮಿ ಕೀಟಕಂಗಳಲಿ
ಅಣುರೇಣೆನಲ್ಲಿ
ಧಾತುಲೋಹಂಗಳಲಿ
ತೃಣಕಾಷ್ಠದಲ್ಲಿ
ನರದೇಹ ಪಂಜರ
ಮನಬುದ್ಧಿಯಲ್ಲಿ
ನೆಲಸಿರುವೆ, ನೀನಿರದ
ಸಮೃದ್ಧಿಯೆಲ್ಲಿ?
ನೀನೆ ಸೌದಾಮಿನಿಯು,
ನೀನೆ ಮೋಹಿನಿಯು.
ಎಲ್ಲೆಡೆಗೆ ತುಂಬಿಹುದು
ನಿನ್ನ ವಾಹಿನಿಯು.
ಓ ದೇವಿ ಮಾದೇವಿ! ಕಣ್ದೆರೆದು ನೋಡು.
ಬಂದ ಭಕ್ತರನಿನ್ನು ಹರಸು, ಕಾಪಾಡು.

ಭೂಮಿಯಲಿ ಸುಖದುಃಖ
ಭೋಗಿಸಿದೆಯೆಂದು
ಗಂಧರ್ವ ಲೋಕದಲಿ
ರಾಗಿಸಿದೆಯೆಂದು
ದೇವಲೋಕದಿ ತಪವ
ಮಾಗಿಸಿದೆಯೆಂದು
ಮರಳಿ ಭೂ—ವೈಕುಂಠ—
ವಾಗಿಸುವಿಯೆಂದು
ನಿನ್ನ ಖ್ಯಾತಿಯು ಕೇಳಿ
ಬಳಿಗೆ ಬಂದಿಹೆವು

ಹಸುಳೆ ಜೀವವ ಕಾಣ್ಕೆ–
ಯೆಂದು ತಂದಿಹೆವು.
ಓ ದೇವಿ ! ಮಾದೇವಿ ! ಕಣ್ದೆರೆದು ನೋಡು.
ಬಂದ ಯಾತ್ರಿಕರನ್ನು ಹರಸು, ಕಾಪಾಡು.

ತುಂಬಿ ಬೆಸಲಾದ ಶೂ–
ನ್ಯದ ರಾಣಿ ನೀನು.
ಎಲ್ಲ ಕುಲವೆಲ್ಲ ಜಗಗಳ
ಜನನಿ ನೀನು.
ಕಾಲಗೋಲಗಳುಸಿರು
ಸಿರಿವಾಣಿ ನೀನು
ಸಾವೆಂಬ ತೆರೆ ಮರೆಯ
ಲಿಹ ಜಾಣೆ ನೀನು.
ನೀನೊಲಿದು ಕರುಣಿಸುವ
ವಿಶ್ವಚೇತನವು
ಪಟ್ಟ ಕಷ್ಟಕ್ಕಿಂತ
ಮಿಗಿಲು ವೇತನವು
ಓ ದೇವಿ ! ಮಾದೇವಿ ! ಕಣ್ದೆರೆದು ನೋಡು.
ಬಂದ ಭಕ್ತರನಿನ್ನು ಹರಸು, ಕಾಪಾಡು.

ಪ್ರಾಣದರಗಿಳಿ ನುಡಿಸಿ
ಬಗೆಗೊಡೆಯ ಹಿಡಿದು
ರಾಗವಾಗಿಸಿ ಕೊರಲ
ವೀಣೆಯನು ಮಿಡಿದು
ಮಂಗಳಾರತಿಯೆತ್ತಿ
ಕಂಗಳಲಿ ತಡೆದು
ನಿನ್ನರ್ಚಕನ–ದೈವ–
ದಾಣತಿಯ ಪಡೆದು
ನಿಂತಿಹೆವು ನಾವಿದೊ ಉ–
ಧೋ ! ಉಧೊ ! ಎಂದು
ಸಾಲುದೀವಟಿಗರೆನೆ
ಮೂಲಕೈತಂದು:
ಓ ದೇವಿ ! ಮಾದೇವಿ ! ಕಣ್ದೆರೆದು ನೋಡು.
ಬಂದ ಕನಸಿಗರನ್ನು ಹರಸು, ಕಾಪಾಡು.

ಎಲ್ಲ ಶೋಧವು ಮುಗಿದು
ನಿನ್ನ ದೇಗುಲದಿ
ನೆರೆದಿಹುದು ಜನಜಾತ್ರೆ
ನಿನ್ನ ಬಾಗಿಲದಿ;
ಪಾಪಪುಣ್ಯದ ಕಥೆಯು–
ದೆಂದು ಮನುಕುಲದಿ
ತೊಡೆದು ಹೋಗುವದೆಂದು
ತಡೆದು ವ್ಯಾಕುಲದಿ.
ನಿನ್ನ ದರುಶನಕೆಲ್ಲ
ಪಾಪ ಹರಿಯುವದು
ಪುಣ್ಯಸಂಚಯವೆಲ್ಲ
ಹಣ್ಣೆ ಬಿರಿಯುವದು.
ಓ ದೇವಿ ! ಮಾದೇವಿ ! ಕಣ್ದೆರೆದು ನೋಡು.
ಬಂದ ಯಾತ್ರಿಕರನ್ನು ಹರಸು, ಕಾಪಾಡು.

ಗರ್ಭ ಗುಡಿಯಲಿ ನಿನ್ನ
ಮೂರ್ತಿಯಿಹುದೆಂದು
ಹೊರಗಿಲ್ಲಿ ಬರಿ ನಿನ್ನ
ಕೀರ್ತಿಯಿಹುದೆಂದು
ಕಾಣದಾ ಸೊಬಗಿಂಗೆ
ನಾವ್ ಲುಬ್ಧರೆಂದು
ನಿನ್ನ ಕಾಣುವವರೆಗೆ
ನಾವ್ ಸ್ತಬ್ಧರೆಂದು
ನಿಂತಿಹೆವು ತೆರೆಯಲಿ ಮ–
ಹಾದ್ವಾರ, ತಾಯೆ !
ಬೆಳಕು ಹೊಳೆಯಿಳಿದು ಸರಿ–
ಯಲಿ ನಿನ್ನ ಮಾಯೆ:
ಓ ದೇವಿ ಮಾದೇವಿ ! ಕಣ್ದೆರೆದು ನೋಡು.
ಬಂದ ಭಕ್ತರನಿನ್ನು ಹರಸು, ಕಾಪಾಡು.

ಬಣ್ಣದೊಳಗಿಂದ

ಬಣ್ಣದೊಳಗಿಂದ, ಬಯಕೆಯೊಳಗಿಂದ,
ಒಳಿತಿನೊಳಗಿಂದ, ಕೆಡಕಿನೊಳಗಿಂದ,
ಚಂದ್ರಿಕಾತಲ್ಪ ನಿದ್ರೆಯೊಳಗಿಂದ,
ಬಿಸಿಲ ಬೇಗೆಯಾ ಮುದ್ರೆಯೊಳಗಿಂದ,
ಬಿಡಿಸಿಕೊಂಡು ಬಾ,
ಬಿಡಿಸಲೆನ್ನ ಬಾ,
ಬಾ, ಬಾ, ಬಾ,
ಓ ನೀರದ ಬಾ !
ತಮವು ತೋಡಿದಾ ನರಕದೊಳಗಿಂದ,
ರಜವು ಹೂಡಿದಾ ರಣಾಂಗಣದಿಂದ,
ಸತ್ತ್ವ ರಚಿಸಿದಾ ಸ್ವರ್ಗದೊಳಗಿಂದ;
ನಿರ್ಗುಣಗಳ ನಿರ್ವಯಲ ಸೆರೆಯಿಂದ,
ಗುಣಗಣಂಗಳಾ ಮುಚ್ಚುಮರೆಯಿಂದ;
ರೂಪದಿಂದ್ರಜಾಲಗಳ ಹೊರೆಯಿಂದ,
ರೂಪವಿಲ್ಲದಾ ಶೂನ್ಯದೊರೆಯಿಂದ;
ಜಡದ ವಾದಜಂಜಡದ ಜಡೆಯಿಂದ,
ಏಕಮೇವ ಚೈತನ್ಯದೆಡೆಯಿಂದ;
ಸಾರ್ವಭೌಮ ಮರ್ತ್ಯತೆಯ ಮುಡಿಯಿಂದ,
ಕೈವಲ್ಯದ ಅಮರತೆಯ ಅಡಿಯಿಂದ,
ಅರ್ಥಮರ್ಥ ದರ್ಶನದ ಗುಡಿಯಿಂದ;
ಬಿಡಿಸಿಕೊಂಡು ಬಾ,
ಬಿಡಿಸಲೆನ್ನ ಬಾ,
ಬಾ, ಬಾ, ಬಾ,
ಓ ನೀರದ, ಬಾ !

ಎಲೆಯಿಲ್ಲದ ಮರ

೧

ಒಂದೂ, ಒಂದೂ ಎಲೆಯಿಲ್ಲ.
ಅದೇ ಇದರ ಚೆಲುವು!
ಸಂತತ ಸಂತಸ ಧಾವಿಸುತಿರುವದು
ಇದರೆಡೆ ನನ್ನೊಲವು!
ವರ್ಣರಹಿತ ಶಾಖೋಪಶಾಖೆಯಲಿ
ನನ್ನ ಪ್ರಾಣಪಕ್ಷಿ
ವಿಹರಿಸುತಿರುವದು ಮನಬಂದಂತೆ
ನಿರ್ಭಯ, ನಿರಪೇಕ್ಷಿ!
ಮೊಗ್ಗೆಯು ಬೇಡ, ಕುಸುಮವು ಬೇಡ,
ಫಲಭಾರವು ಬೇಡ.
ದಿಗಂಬರಾಕೃತಿ, ಸಂಪತ್‌ಕೋನ,—
ಅಷ್ಟೆಸಾಕು ನೋಡ.

೨

ಕೋನದ ಗಣಿತ, ಏನಾ ಮಣಿತ!
ಕೊಂಬೆಯಿಂದ ರೆಂಬೆ;
ರೆಂಬೆಗೆ ಟಿಸಿಲು, ಟೊಂಗೆಗೆ ತೊಂಗಲು
ಏನು ಸೂಕ್ಷ್ಮವೆಂಬೆ!
ಬೊಡ್ಡೆಯಿಂದ ತಾ ಕಡ್ಡಿಯವರೆಗೆ
ನೂರಾಕೃತಿ ಕೂಡಿ
ಯುಕ್ಲೀಡನ ಸಿದ್ಧಾಂತಮಾಲೆಯೋ
ಮೂರ್ತಿಸಿದೊಲು ಮಾಡಿ
ತ್ರಿಕೋನ, ತ್ರಿಜ್ಯ, ಚೌಕೋನ
ವ್ಯಾಸ, ವೃತ್ತ, ಕರ್ಣ:
ಒಡಮೂಡಿರಲಿವು—ಏತಕೆ ವರ್ಣ?
ಏತಕೆ ಆ ವರ್ಣ?

೩

ನಿರಾಭರಣ ಮೂಲಗಳನು ಸೇರಿ
ಸನ್ನೊಲವಿದರೊಳು ಹರಿದಿಹುದು;
ಇಂಬುವಡೆಯುತಾ ಕೊಂಬೆಗಳಲ್ಲಿ
ಸೊಬಗಿನ ಸೋನೆಯು ಸುರಿದಿಹುದು;
ಹಸಿರೆಲೆಯಾಗುತ ಮರವನು ಕುಸುರಿಸಿ
ಗಾಳಿಯಲೆಗಳನು ಕರೆದಿಹುದು;
ಜೀವರಸವಾಗಿ ಚಿಗುರ ಹೊಗರಾಗಿ
ಮೊಗ್ಗೆಯ ಮಾಣಿಕ, ಮೆರೆದಿಹುದು.
ನನ್ನೀ ಪ್ರೀತಿ ಕಾಯಿಯು, ಹಣ್ಣು.
ಜೋತಿದೆ, ಓತಿದೆ ಮರದಲ್ಲಿ,
ಶೂನ್ಯವನ್ನೆ ಬೆಸಲಾಗಿಸುವಂಥ
ಇಂದ್ರ ಕಲೆಯ ನಿರ್ಭರದಲ್ಲಿ.

೪

ತಂತಿದೀಪವಿದರೆಳೆಗಳ ವ್ಯೂಹದಿ
ಬಳ್ಳಿಯ ಸೆಳೆಮಿಂಚಾಡಿಲ್ಲ;
ಸಿದ್ಧ ವೀಣೆಯಿದು: ವಸಂತ ವೈಣಿಕ–
ನಿದ ಬೆರಳಾಡಿ ನೋಡಿಲ್ಲ.
ಯಂತ್ರಯೋಗಿ ಗೆಯ್ದಸ್ಥಿ ಪಂಜರವು;
ಶೋಣಿತವಿದರೊಳು ಸುಳಿದಿಲ್ಲ;
ಫಲ್ಗುಣರಥವಿದು; ಶ್ರೀಕೃಷ್ಣನ ಸಾ–
ರಥ್ಯದ ಗೆಲುವನು ಕಳೆದಿಲ್ಲ.
ಮಧುಮಾಸದ ಹಿಗ್ಗಿನ ತೇರು
ತಳಿದೋರಣವನು ಕೋದಿಲ್ಲ;
ಮಾಂತ್ರಿಕ ವರುಣಾನಿಲ ಬಂದು
ವಸಂತ ಮಂತ್ರವನೂದಿಲ್ಲ !

೫

ಓ ಕೊಂಬೆಗಳೆ ! ಓ ರೆಂಬೆಗಳೆ !
ಕೈ ನೀಡಿದಿರಾ ಮುಗಿಲೆಡೆಗೆ ?
ಬಾಂಬಯಲಿಂದ ಕರುಣೆಯ ಸೋನೆ
ಸುರಿದು ಕಾವುದೆಂದಿರ ಕಡೆಗೆ ?
ಉಂಡಾಳರೊಲು ಅಲೆಯುವ ಮೋಡದ

ಪಡೆಯುನು ನಿರುಕಿಸಿ ಫಲವೇನು?
ಬೇರ್ಗಳನಿನ್ನಿಷ್ಟುದ್ದಕೆ ಚಾಚಿರಿ!
ಆಳದೊಳಿದೆ ಜೀವನ ತಾನು!
ಹಿಂದೊಮ್ಮಿಳಿದಿಹ ಕರುಣೆಯ ವೃಷ್ಟಿ
ಮಡವುಗಟ್ಟಿ ಭೂಗರ್ಭದೊಳು
ಪೊರೆವುದು, ನಾಳಿನ ವಸಂತ ಸ್ರಾವ
ರಕ್ಷಿಸಲಿಳಿಯುಲು ಧರ್ಮದೊಲು!

ವೈದ್ಯವಿದ್ಯಾಲಯ

(೧)

ವೈದ್ಯವಿದ್ಯಾಲಯುದ ವಿದ್ಯಾರ್ಥಿಗಳ ವೃಂದ
ನೆರೆದಿರಬಹುದು. ಕಸಬುಗಾರರೆ ಹೆಚ್ಚು. ದೇಶಸೇ–
ವಕರು ಅಲ್ಲಿಲ್ಲಿಹರು. ಕೊಯ್ತುಗೆಯ್ತುದ 'ಸಜ್ಜು–
ವನೆಯನೀಕ್ಷಿಸುತಿಂದು ಬೆರಗಾದೆ. ಮೃತದೇಹ
ಬಿದ್ದಿಹುದು,–ಚರ್ಮಗಾರನ ಕಿರಿಯ ಕಾವಣದೊಲು!
ಹಳಬನಿಹ ಪಾಂಥಸ್ಥ ಹಸಿಬೆಯುಲಿ ತುರುಕಿರುವ
ಹಿರಿಕಿರಿಯ ಗಂಟು–ಗದಡಿಗಳಂತೆ ಚರ್ಮದೀ
ಹೊದ್ದಿಕೆಯುಲಿವೆ: ಪುಪ್ಪುಸವು,—ರಬ್ಬರಿನ ತಿದಿಯು.
ರಬ್ಬರಿನುಸಿರುಗೊಳವೆ; ಹೃದಯು—ರಬ್ಬರುಪಿಂಡ;
ಸಕೃತ್ ದರ್ಶನಕೆ ಯಕೃತ್ತೊಂದು ರಬ್ಬರು ಮುದ್ದೆ.
ಬೆನ್ನೆಲುಬಿಗಂಟಿರುವ ರಬ್ಬರಿನ ರಜ್ಜುವಿದು
ಕಶೇರುಕಾರಜ್ಜು (ಕುಂಡಲಿನಿ ಹೋಯ್ತೆಲ್ಲಿ?)
ಸ್ಪ್ಲೀನು ರಬ್ಬರು, ಮೂತ್ರಕೋಶ, ವೀರ್ಯದ ಕೋಶ.
ಚರ್ಮಗಾರನು ಚರ್ಮವನ್ನನಾಯಾಸದಲಿ
ತುಂಡರಿಸುವೊಲು ಎಳೆಯರಂಗಾಂಗಗಳನೆಲ್ಲ
ಕಪಕಪನೆ ಕೊಯ್ಯುವರು. ಮಡುಗಾಟವಾಡುವರು.
ಅವಯುವಗಳೊಡನೆ ಸೆಂಡಾಡುವರು. ನೋಡುವರು.
ನೋಡುತಿದನೆಲ್ಲ ಮಸಣದ ಗೀತೆಯೊಂದಾಗ
ಬಾಯುಂಗಳದಿ ಜನುಮ ತಾಳಿತ್ತು. ಇದು ಗೀತೆ:

ನಾನು ರಬ್ಬರು
ನೀನು ರಬ್ಬರು.

ರಬ್ಬರೇ ಇನ್ನೊಬ್ಬರು!
ಪ್ರಾಣಹೋಗಲು ರಬ್ಬರಿನ ಈ
ಗೊಂಬೆಗಳು ಬರಿ ಗೊಬ್ಬರು!

(೨)

ಅಂಚೆಮನೆ–ತಂತಿಮನೆಗಳ ತಂತಿವ್ಯೂಹದೊಲು
ಧಮನಿ–ಸ್ನಾಯುಗಳು ಸುತ್ತಿಹವೆಲ್ಲಿ ನೋಡಿದೊಡೆ,
ಕಾಲ್ಬೆರಳಿನಿಂದ ಮಸ್ತಕದ ಪರ್ಯಂತ. ಓ!
ಅಹುದು! ಅಸ್ತವ್ಯಸ್ತ ಸನ್ಯಸ್ತದೇಹದಲ್ಲಿ
ಸಿಸ್ಟೊಂದು, ಕ್ರಮವೊಂದು. ದೇಹದಾಡಳಿತದಲಿ
ಕರ್ಮಸಚಿವನ ಶಾಖೆ, ಅರ್ಥಸಚಿವನ ಶಾಖೆ,
ನೀರಾವರೀ ಯೋಜನೆಯ ಶಾಖೆ, ಆರೋಗ್ಯ–
ಸ್ವಚ್ಛತೆಯ ಶಾಖೆಗಳು. ಇದರ ಯೋಜಕನೆಲ್ಲಿ?
ಸರಕಾರವೆಲ್ಲಿಹುದು? ಈ ಯಂತ್ರವಾಹನದ
ನಿಯಂತ್ರಕನೆಲ್ಲಿ? ಎಲ್ಲಿ? ಎಲ್ಲಿ?
ತಂತಿಗಳಿವೆ; ವೀಣೆಯಿದೆ.
ವೈಣಿಕನೇ ಇಲ್ಲ!
ತಂಬುರಿಯು ಇದ್ದವೊಲಿದೆ
ನಾರದನೇ ಇಲ್ಲ!
ಇಲ್ಲ ತಂತಿಗಳಲಿ ಜೀವ
ತುಂಬಿಸುತಿಹ ಬೆರಳು!
ಇಲ್ಲ ಧ್ವನಿಯು,—ಯಾವುದಕ್ಕೆ
ಕೊಳಲಾಯಿತೊ ಕೊರಲು!
ರುಗ್ಣಾಂಗಗಳ ಸಂಗ್ರಹಾಲಯಕೆ ಮುನ್ನಡೆದೆ.
ಉತ್ತಮ ಬಟಾಟೆಯಲಿ ಕಾಃಲಿಫ್ಲಾವರು ಬೆಳೆದ–
ವೊಲು ಕಾಂಬ ಮೆದುಳಿಗಿದೊ ಛಿದ್ರರೋಗದ ರಾಹು!
ಫುಪ್ಫುಸಕೆ ರಾಜಯಕ್ಷ್ಮದ ಬಿರುಸು, ಹೃದಯಕ್ಕೆ
ರಕ್ತಾಣುವಿನ ಥ್ರುಂಬೊಸಿಸ್ಸು. ಸ್ಪ್ಲೀನಿನ ಮಾನು
ಕೂರ್ಮವಾಗಿಹುದಿಲ್ಲಿ. ಯಕೃತ್ತಿದು ವಿಕೃತ–
ವಾದ ಕುಂಬಳಕಾಯಿ. ಒಳಹೊಟ್ಟೆಯಲಿ ಕುಳಿತು
ಕೊಬ್ಬಿಹಳು ಸಂಗ್ರಹಿಣಿ—ಡಾಕಿನಿಯು! ಮೂತ್ರಕೋ–
ಶದಿ ಕೆಂಡವಿಟ್ಟಂತೆ ಕಲ್ಲುಹರಳಿದು ಗುಂಡು.
ಜನನೇಂದ್ರಿಯಕೆ ಚಿತ್ರಹಿಂಸೆಯೂ ರಾಜಗುರು.
ಕಾಲಿದಾನೆಯ ಕಾಲು. ಹೊಟ್ಟೆ ಕ್ರಿಮಿಗಳ ಮೊಟ್ಟೆ.

ನನ್ನಂಥ ಮಾನವನ ಅಂಗಾಂಗಗಳಲಿಂಥ
ರೋಗರುಜಿನಗಳು ವ್ಯಾಪಿಸಬಲ್ಲವೆಂಬುದನು
ತಿಳಿದು ನಾ ಬೆಪ್ಪಾದೆ. ಉಸಿರಿನಾ ನಿರ್ಗಮನ–
ಕಿರುವ ಸಾವಿರ ನಾಗಮುರಿಗೆಗಳ ಘಟ್ಟಗಳ
ನೀಳ್ದಾರಿಗಳ ಕಂಡು ಕರುಳು ಕುದಿದಿತ್ತು.
ಇಲ್ಲಿ ತನ್ನೊಳಮೆಯ್ಯ ತನಗೆ ತಾನೆಯೆ ಬಿಚ್ಚಿ
ನೋಡಿಕೊಳುತಿದೆ ಕಾರು. ಭೀತಿಮಾನವ ಬುದ್ಧಿ
ತನ್ನ ಮುತ್ತುವ ವಿನಾಶದ ದಾರಿಗಳ ತಿಳಿಯು–
ಬಯಸಿಹುದು. ಇರವೇನು? ಏನು? ಏನು?
ಸೂಸಿ ಬಂದು ಬೀಸಿ ಹೊಯ್ತು,—
ಗಾಳಿಗಾವ ಬಟ್ಟೆ?
ಗಾಳಿಯೊಡನೆ ಗುದ್ದಾಡಲು
ನೀನು ಮಾತ್ರ ಕೆಟ್ಟೆ!
ಅಂಗಾಂಗಗಳನು ಬಿಡಿಬಿಡಿಯಾಗುತಿರಿಸುತ್ತ
ಪರಿಕಿಸುವ ವರ್ಕ್‌ಶಾಃಪು: ಈ ವೈದ್ಯಶಾಲೆ.
ಯಂತ್ರೋಪಯಂತ್ರಗಳನ್ನೆಲ್ಲ ಕೀಲಿಸಿ ಚಲಿಸಿ
ಮಂತ್ರಿಸುತ ಬೆಳೆಯುವೊಲು, ನಡೆಯುವೊಲು, ಹಾರುವೊಲು
ಗೆಯ್ವ ಮಾಯಾವಿಯ ಪ್ರಯೋಗಮಂದಿರವೆಲ್ಲಿ?
ಯಂತ್ರ–ಯಂತ್ರಾರೂಢರನು ನಿರ್ಮಿಸುವ ಮಹಾ
ನಿರ್ಮಾತೃವಿನ ರಹಸ್ಯಾಗಾರದಲ್ಲಿಣಿಕಿ
ನೋಡಬೇಕೆಂದಿರುವೆ ಅದಕಾವ ಕಣ್ಣು?
ಬೇಕೆನಗೆ ಇಂದ್ರುವರ,—ಆ ದಿವ್ಯ ನೇತ್ರ.
ನಿಃಸೀಮದ ಸೀಮೆ,
ಅನಂತದಂತಪಾರ,—
ಇದ ತಿಳಿವುದೆ ವಿದ್ಯೆ.
ಉಳಿದುದು ನಿಃಸಾರ.
ಬರಿ ಮೆಕ್ಯಾನಿಕ್ ಅಲ್ಲ,—
ಉತ್ಪಾದಕನಾಗು
ಬರಿ ಪುರಾಣಿಕನಲ್ಲ,—
ನಿಜಸಾಧಕನಾಗು!
ಗಾಳಿಯ ಹೆಜ್ಜೆಯ ಗುರುತಿಸು
ಅರಗಿಳಿಯೊಡನಾಡಿ.
ಪ್ರಾಣಪಕ್ಷಿಯನ್ನು ತಿಳಿ
ಮುಗಿಲೊಳು ತೂರಾಡಿ.

ಡಿಜ್‌ನಿ ಲ್ಯಾಂಡ್

(ಕ್ಯಾಲಿಫೋರ್ನಿಯ)

ಮಾನವನಿರ್ಮಿತ ಬಾಲನಂದನ
ಕತೆಗಳು ಕನಸುಗಳೆಲ್ಲಾ
ಸತ್ಯಸೃಷ್ಟಿಯಾಗುವ ಪವಾಡವಿದೆ
ಇದರೊಳು ಕಂಡವ ಬಲ್ಲ!

ಕಡಲುಗಳ್ಳರಾ ಕಡಲುಕಾಳಗ,
ಗತ ಯುಗದೊಳಗಿನ ಬಸ್ಸು,
ಬಗಿ, ಹಳೆ ಮಾದರಿ ಗಾಡಿ, ಏರುವ
ಬಾಲರಿಗೆಲ್ಲಿ ವಯಸ್ಸು!

ಏ್ಯಲಿಸ್ ನುಸುಳಿದ ವಿಚಿತ್ರ ಸೃಷ್ಟಿ,
ಪೀಟರ್ ಪ್ಯಾಃನನ ಲೋಕ;
ಅದನೊಳನುಗ್ಗುವ ಟ್ರಾಮಿನೊಳೆಚ್ಚರ.
ಹೊರಳಲು ಬಂದಿತು ಧೋಕಾ!

ಆಫ್ರಿಕ ಜಂಗಲ್ ಸೀನು ಸೀನರಿ,
ನದಿಯೊಂದೇ ಅಲ್ಲ!
ದೋಣಿ ಸಾಗಲಂಜಿಸಿ ನೆರೆಯುವವು
ಕಾಡುಮಿಗಗಳೆಲ್ಲ!

ಗೋರಿಲ್ಲ, ಚಿಂಪಂಝೀ, ಹಿಪ್ಪೋ
ಅಣಗಿಸಿ ಮುತ್ತುವವು.
ಎದೆ ಝಲ್ಲೆನುವಂತಲ್ಲಿ ಗರ್ಜಿಸಿ
ನಮ್ಮನು ಸುತ್ತುವವು.

ಸಿಂಹ, ಕರಡಿ ದವಡೆಯ ತೆರೆಯುವವು
ಮೊಸಳೆಯಡ್ಡಗಟ್ಟಿ.
ವೃಕ್ಷಗಳಿಂದೆಮ್ಮೆಡೆ ಜೋತಾಡಿ
ಹೆಬ್ಬಾವಿನ ಭೆಟ್ಟಿ!

ಕೃತ್ರಿಮ ಪ್ರಾಣಿಗಳೆಲ್ಲ ನೋಡಿದರೆ!
ವಿದ್ಯುತ್ತೇ ಪ್ರಾಣ;
ಒಂದು ನಿಮಿಷವಾದರೂ ಕಳೆಯುವುದು
ಕೈಕಾಲೊಳಗಿನ ತ್ರಾಣ

ಅಡವಿ ಮೂಲೆಯೊಳಗಡಗುತ ತಲೆಗೆ
ಗುರಿಯಿಟ್ಟನು ಬಾಣ
ಆಫ್ರಿಕ ಜಂಗ್ಲೀ. ಅಯ್ಯೋ! ಸತ್ತೆ!
ಇತ್ತ ಕಾಡುಕೋಣ!

ಇನ್ನೊಂದೆಡೆಯಲಿ ಸಂಧಿಸಿ ನಿಂತಿದೆ
ನಾಳೆ ಮೂಡಲಿಹ ಜಗವು;
ನವಗ್ರಹ ಸೃಷ್ಟಿಯು ಗಾಡಿ,
ಪಾಃಕೆಟ್ ಮನೆಗಳ ಸೊಗವು!

ಅಣುಬಲ ಚಲಿಸುವ ಸಬ್‌ಮರೀನಿನೊಳು
ಮೀನಿನಂತೆ ಬದುಕಿ
ಮುನ್ನೀರಿನ ತಳಬುಡಗಳನೆಲ್ಲಾ
ನೋಡಿ ಕೆದಕಿ ಬೆದಕಿ.

ಸೂರ್ಯ–ಚಂದ್ರ–ತಾರೆಯ ಪ್ರಭೆಯಿಲ್ಲದೆ
ಜಲಧರ ನರನಿಹ ರೀತಿ
ವರ್ಷ–ವರ್ಷವೂ; ಉತ್ತರ ಧ್ರುವದಾ
ತಲದಲಿ ಪಡೆದ ಪ್ರತೀತಿ!

ಬಾಣದಂತೆ ಗುರಿಯಿಟ್ಟು ಬಿಟ್ಟಿರುವ
ತಾನೇ ನಡೆಯುವ ಕಾರು,
ನೆಲವಿಲ್ಲದೆ ಹುಲುಸಾಗಿ ಬೆಳೆಯುತಿಹ
ಪೈರು, ಇನ್ನೂ ನೂರಾರು!...

ಎಳೆಮಗುವೊಂದದು ತೀರಿಕೊಂಡಿತೆ?
ಹಾಗಾಗದಿರಲಿ, ಪಾಪ!
ಅದಕಾವುದು ಸದ್ಗತಿ? ಎಲ್ಲಳಿವುದು
ಅದರ ಸೂಕ್ಷ್ಮ ರೂಪ?

ಡಿಜ್‌ನಿ ನಾಡೇ ಅದಕಿಹ ಸ್ವರ್ಗ!
ಮಗುವಲ್ಲಿಯೆ ಉಳಿದು
ಏ್ಯಲಿಸ್ ಮೀಟರ್ ಪ್ಯಾಃನರ್ ಹೆಜ್ಜೆಯು
ಬಾಳುವದದು ತುಳಿದು!

ನಮ್ಮ ನಾಡಿನೊಳಗಿದ್ದರು, ಇಹರು
ಅಕಬರ್, ಮಹಮ್ಮದ ಘಜನಿ;
ನಮಗೂ ಎಳೆಯರ ಕರುಳನು ಬಲ್ಲವ
ಬೇಕು,—ವಾಃಲ್ಟರ್ ಡಿಜ್‌ನಿ!

ಬಹುರತ್ನಾ ವಸುಂಧರಾ

ಬಹುರತ್ನಾ ವಸುಂಧರಾ
ಬಹುಕುಸುಮಾ ವಸುಂಧರಾ
ಅತಿಧವಲಾ ವಸುಂಧರಾ
ಅತಿಶ್ಯಾಮಾ ವಸುಂಧರಾ

೧

ಸಸ್ಯಶಾಸ್ತ್ರವನೆಲ್ಲ ಗಾಜಿನಾಕೃತಿಯಲ್ಲಿ—
ಎಲೆಯು, ಹೂ, ಹೂದೇಟು ಮೂಡಿಸುತ್ತ
ಅದ್ವಿತೀಯವು ಕುಸಿರು; ತದ್ರೂಪ ವರ್ಣವಿದೆ;
ಅನುಪಮವಿದೆಂದು ದನಿಗೂಡಿಸಿತ್ತ
ಜನವು ಸೋಜಿಗಗೊಳಲು ಬದಿಯ ಕೋಣೆಯಲಿಹುದು
ವಸುಂಧರೆಯ ಕಲೆಯು ಮೌನವಾಗಿ;
ಅತ್ಯದ್ಭುತವು; ವಿವಿಧ ವರ್ಣವೈಖರಿಯುತವು;
ನಿಸರ್ಗಕೃತಿಯೊಂದು ಗೌಣವಾಗಿ!

ಭೂಮಿಯುಂಗಾಂಗದಲಿ ನೂರು ವರ್ಣದ ಕುಸುಮ
ಅರಳುವವು, ಮರಳುವವು ಮತ್ತರಳುತ
ಇಲ್ಲಿದೋ! ಭೂಗರ್ಭದಲ್ಲಿ ಕಣ್ದೆರೆದಿರುವ
ಕುಸುಮ ಕರೆವವು ನನ್ನ ಬಗೆ ಕೆರಳುತ.
ಎನಿತು ಸಾವಿರ ವರ್ಷ ಭೂಗರ್ಭದಲಿ ತಪಿಸಿ

ನೀರುಂಡು ಬೆಳೆದವೋ ಕಲ್ಲುಹೂವು!
ತಮಗಿರುವ ಸುಗ್ಗಿ ಶಾಶ್ವತವೆನುತಿಹವು ಹಿಗ್ಗಿ.
ಕುಸುಮಭಂಜಕ ಬಾರ; ಇಲ್ಲ ಸಾವು!

ಆಗಿದಷ್ಟು ಭಾಗ್ಯವಿದೆಯೆಂದಳೀ ಭೂಮಾತೆ;
ತೆಗೆದಷ್ಟು ವಿಸ್ಮಯಕಲಾಕೃತಿಗಳು!
ಅವಳನಂತಾನಂತ ಚೆಲುವನಳೆದವರಿಲ್ಲ
ನಭಗರ್ಭದಲ್ಲೆಂತೂ ನವಶ್ರುತಿಗಳು.
ವಿವಿಧ ಧಾತುಗಳಲ್ಲಿ ವಿವಿಧ ವರ್ಣಗಳಲ್ಲಿ
ವಿವಿಧ ರೂಪಗಳಲ್ಲಿ ನವ್ಯರಸನ!
ಕಣ್ತುಂಬ ನೋಡಯ್ಯ ಬೆರಗುಬಡಿಸುವ ಚೆಲುವ,
ನೋಡಿ ಮಾಡಿರು ನಿನ್ನ ಬಾಳು ಹಸನ.

೨

ತೂರ್ಮಲೀನಿನ ಸ್ಫಟಿಕಸ್ತಂಭಮಾಲೆ;
ಸ್ಟಿಲ್ ಬೈಟಿನ ಬಿಳಿ ಪಾತರಗಿತ್ತಿ ಪಕ್ಕ;
ಕ್ರೋಕುಐಟಿನ ಗೊರಟೆಗೆಯ ಕಿತ್ತಳೆಗೊಂಚಲು;
ಪ್ರೆಹನೈಟಿನ ಬಿಳಿಹಸಿರು ಕಲ್ಲುಸಕ್ಕರೆ ಲೆಕ್ಕ!
ವೇವ್‌ಲೈಟಿನ ಶ್ಯಾಂಡೆಲಿಯರು ವ್ಯೂಹ
ಸೆಲೆಸ್ಟೈಟಿನ ಬಿಳಿಗುಂಡುಗಳ ಮೊತ್ತ;
ಕ್ವಾರ್‌ಝಿನ ನೂರು ಲೋಲಕದಾಟ;
ಮ್ಯಾಲ್‌ಕೈಟಿನ ಅಚ್ಚುಹಸಿರಿನ ಲೆತ್ತ!
ಗಂಧಕಶಿಲೆಯ ಕ್ಯೂಬು, ಪೀರಮಿಡು;
ಲೆಬ್‌ರ್ಯಾಡರೈಟಿನ ಹಸಿರು–ನೀಲಿ ಪಾಟಿಯ ನುಣುಪು;
ಬೈಸೊಲೈಟಿನ ಬೂದಿ–ಹಸಿರು ಕೂದಲ ಕುಸಿರು;
ಬೆರಿಲ್ ಶಿಲೆಯ ಬೆಕ್ಕುಗಣ್ಣಿನ ಒನಪು!
ಆಕೃತಿಯೇ ಕಾವ್ಯಮಯ ಸಿದ್ಧಾಂತವಾಗಿದೆಯಿಲ್ಲಿ!
ರೂಹೇ ವ್ಯವಹಾರ–ವೇದಾಂತವಾಗಿದೆಯಿಲ್ಲಿ!

೩

ಮಸ್ಕೋವೈಟಿನ ಬೂದಿಬಂಗಾರ.
ಲೆಪಿಡೊಲೈಟಿನ ಪಾರಜಸಿಂಗಾರ.
ಕ್ಯಾಲ್‌ಸೈಟಿನ ಜಾಂಬಳಿಗೆಂಪು;
ಎಕ್ಸ್‌ವೈಟಿನ ಕಲ್ಲಿದ್ದಲಿಪೆಂಪು
ನೆಫ್ರೈಟಿನ ಹಚ್ಚಹಸಿರು;

ಹೆಮಟೈಟಿನ ಶ್ವೇತ–ಶ್ಯಾಮಸಂಗಮ;
ಗ್ರೆಫೈಟಿನ ಸೀಸಪದ್ಯ ದುರ್ಗಮ!
ಫ್ಲುಓರೈಟಿನ ಹಳದಿ–ನೀಲಿಕುಸಿರು,
ಗಂಧಕದ ಕ್ಯೂಬಿನ ಹುಚ್ಚುಹಳದಿಕೇಸರಿ–
ಮ್ಯಾಲಕೈಟಿನ ಹಚ್ಚಹಸಿರಿನ ಗರಿ!
ಎಷ್ಟೊಂದು ಬಣ್ಣಬಣ್ಣ! ಏನು ಸಿಂಗಾರ!
ಇದೆಲ್ಲ ತಾಯ ಕರುಳ ಬಂಗಾರ.

೪

ಇಲ್ಲಿದೋ ತಾವ್ರುದ ಪಿಂಡ;
ಅಲ್ಲಿದೆ ರಜತದ ಗರ್ಭಕೋಶ.
ಇತ್ತಿದೋ ಕಾರ್ಬೋನ್ನಿನ ರಕ್ಕಸಗಡಲೆ;
ಅತ್ತಿದೋ ಹೊಂಗೂದಲ ಮಾಯಾಪಾಶ.
ತಾಯುಮೋಹವೆಲ್ಲ ಪಂಚಲೋಹವಾಗಿದೆ.
ಶಿಲಾಪಿಂಡದಲ್ಲಿ ತಾಯಿ ತೋರಿದ ಕಲಾಕೃತಿ
ಧಾತುವಿನ ಮಾಧ್ಯಮವಾಗಿ
ಮಾನವನ ಶಿಲ್ಪವೈಚಿತ್ರ್ಯದ ಸನ್ನಾಹವಾಗಿದೆ!

೫

ರತ್ನ, ವಜ್ರ, ಮಾಣಿಕ:
ಮನುಜತಾಯ ಸಿರಿಯ ಕರಣಿಕ!
ಪುಷ್ಪರಾಗ, ಪದ್ಮರಾಗ, ಸಿತರಾಗ:
ಉಣ್ಣದಲೀ ವರ್ಣಭೋಗ
ನಿರರ್ಥಕವು ತ್ಯಾಗ!
ಶಿಲಾಕುಸುಮವರಳಿಸಿದಳು;
ಧಾತುವಾಗಿ ಹೊರಳಿಸಿದಳು;
ಕಲಾ ಶ್ರೀಮಂತಿನಿಯ ಶಿರಕೆ
ಇದೋ ಸ್ಯಮಂತಕಮಣಿ!
ಉಪಲ, ವಜ್ರ, ರತ್ನ, ಪೂರ್ಣ,—
ಪೂರ್ಣನೆಂತೊ ದಿನಮಣಿ!
ಒಂದೊಂದು ಹರಳಿನಲಿ ಒಂದೊಂದು ವರ್ಣದಾ
ವಿದ್ಯುಲ್ಲತೆಯೆ ಆಗಿ ಬಂದು
ಉಕ್ಕುತಿಹುದದರಲ್ಲಿ ಸರ್ವಸಂಗ್ರಹವಾಗಿ
ಆ ಬೆಳಕಿನೊಂದು ಸಿಂಧು!

ಸಾರಬಿಂದುವದಾತ್ಮ;
ವಜ್ರದೇಹವ ನೋಡು:
ಗೋಲಾಕಾರ,
ಅಂಡಾಕಾರ,
ಷಟ್ಕೋನಾಕಾರ.
ಪದರು–ಪದರು ತೆರೆದು
ಜ್ಯೋತಿಯಾತ್ಮ ಪೂರ್ಣ;
ಇಹುದು ಸಮನ್ವಯ ಸಂಪೂರ್ಣ!
ದೇವನೊಲು ಪೂರ್ಣವೀಪಾಡು.
ಲೋಕದೊಳಿದೆ ಮೆರೆದು.

೬

ಕೋಟಿವರುಷಗಳ ಕಲಾತಪಸ್ವಿನಿ
ಕಳೆದಳು ಕಂದನಿಗಾಗಿ
ಕಳೆದಳು ಆ ಮೇದಿನಿ, ತೇಜಸ್ವಿನಿ,
ಉಳಿದೆಲ್ಲವ ನೀಗಿ;
ಪೂರ್ಣದ ಕುರುಹೊಂದನು ಕೊಡ ಬಯಸಿ
ಪ್ರಯೋಗಿಸುತ ನಭರಾಜನ ಪ್ರೇಯಸಿ
ಶಿಲಾಕುಸುಮಗಳ ಸೃಜಿಸಿದಳು;
ಲೋಹವ್ಯೂಹಗಳ ರಚಿಸಿದಳು;
ಮತ್ತೆ ಆಲೋಚಿಸಿದಳು
ವರವನು ಬೇಡಿದಳು
ಪ್ರಿಯನನು ಕಾಡಿದಳು.
ಆಗ ಬಂದಿತಾ ಸಮ್ಯಕ್‌ದರ್ಶನ
ಸ್ವಾಮಿಯ ಪ್ರೇಮದ ಅನಂತ ಸ್ಪರ್ಶನ.
ಪೂರ್ಣ ತೇಜಬಿಂಬ,
ಪೂರ್ಣದ ಪ್ರತಿಬಿಂಬ:
ಹೊಳೆದಿತ್ತದು ಬಿಂದು!
ಸುಳಿದೆದುರಿಗೆ ಬಂದು!

ಆ ಜ್ಯೋತಿಬಿಂದುವಿಗೆ ಈ ವಜ್ರದೇಹ.
ಸಮರಸದ ಅನ್ಯೋನ್ಯವೀ ಮಧುರಸ್ನೇಹ.
ಇದೇ ಕಲಾಸಿದ್ಧಿ.
ಇದೇ ಬಾಳಿನ ಪಾವನತಮ ವೃದ್ಧಿ.

ವಜ್ರಕಠೋರವಿದೀ ಶಿಲಾಶರೀರ:
ಆದರೆ ಪ್ರಭೆಗದು ನೇರ ದ್ವಾರ ಪೂರ!
ಅಷ್ಟಪೈಲುಗಳ, ಅಷ್ಟಾಂಗದ ಶೋಭೆ:
ಹೊರಳಿಸಿದೆಡೆ ತುಳುಕಾಡಿದೆ ಸ್ವಯಂಪ್ರಭೆ!
ಮೊನೆಗಾರ ರತ್ನರಸಿಕನು ಮಲ್ಲಿನಾಥ.
ಹರಳಿಹುದು ಭೂದೇವಿಯೊರೆದಿಹ ಪ್ರಗಾಥ.

ಬಹುರತ್ನಾ ವಸುಂಧರಾ.
ಬಹುಕುಸುಮಾ ವಸುಂಧರಾ.
ಅತಿಧವಲಾ ವಸುಂಧರಾ.
ಅತಿಶ್ಯಾಮಾ ವಸುಂಧರಾ.

ಯು. ಎನ್. ಓ.

(ನ್ಯೂಯಾರ್ಕಿನಲ್ಲಿಯ ಭವನಗಳಲ್ಲ)

ವಾಸ್ತುಶಿಲ್ಪದ ಸುಭಗಕ್ರಾಂತಿ. ರಕ್ತದಿ ಮುಳುಗಿ
ತನ್ನವರ ಕೊಲೆಗೆ ಪಳಗಿ
ರಕ್ತರಂಜಿತವಾದ ಮಾನವನ ದೈವ ಕರೆದು,-
ಇರಲೆಂದು ಅವನು ಮೆರೆದು,
ಅನ್ಯ ಇತಿಹಾಸವನು, ಅನ್ಯ ಭವಿತವ್ಯಗಳನು-
ಅವ್ಯಕ್ತ ದ್ರವ್ಯಗಳನು-
ತಪಿಸಿ ಕಂಡಿರಲೆಂದು ನವ್ಯ ಸೃಷ್ಟಿಯ ಕಟ್ಟುತ-
ಧ್ರುವತಾರೆಯನು ಮುಟ್ಟುತ-
ಮಗುವಾದ ಮಾನವನ ಕೈಗಿತ್ತ ಕಮಲನಾಭ
ಕಂದ! ಕಲಿಯೆಂದು ಓನಾಮ,-
ಕಡಲಿನೊಲು ಭವ್ಯ, ಮುಗಿಲಿನೊಲು ತಿಳಿಯಾಟ ಪಾಟಿ;
ಕರೆದಿತ್ತ ಬ್ರಹ್ಮ ಮಾನವನೆದೆಯ ಮೀಟಿ.

ಚಿತ್ರಶಿಲ್ಪದ ಮಧುರಕ್ರಾಂತಿ: ಚಿತ್ರಗಳ ಬಣ್ಣ
ಬರಿ ಕಣ್ಣುಕುಕ್ಕಿಸಲು, ತೆರೆದ ಕಲೆಯಲ್ಲೋ, ಅಣ್ಣ!
ರಮ್ಯ ಮೋಹಕ ರೂಪದಿಂದ್ರಜಾಲವ ಮೂಡಿಸಿ
ಅಪ್ಸರಿಯನ್ನಾಡಿಸಿ,

ತನ್ನ, ತನ್ನವರ ತಾನರ ಮಾರಿಬಿಟ್ಟ ಗುರುತು:
ನಾಳಿನಾ ಕಲೆ ಇದಕೆ ಹೊರತು.
ಕರಿ, ಕೆಂಪು, ಬಿಳಿ, ಹಳದಿ, ಕಂದಿ:
ಈ ಪಂಚವರ್ಣಗಳ ಸಂಗಮವೇ ಅಹುದು ನಾಂದಿ
ಕುಲದೈಕ್ಯ ಜೀವನಕೆ, ಅತಿ ನವ್ಯ ಚಿತ್ರಕಲೆಗೆ:
ಮಣಿಯದಿರು ಪಣ್ಯವಸ್ತುವಿನ ಬೆಲೆಗೆ!
ಸ್ನಾಯುಗಳು ನೂರೊಂದು ನರದೇಹವನು ವ್ಯಾಪಿಸಿ,
ಹೃದಯ ಒಂದೇ ಒಂದು, ಅವುಗಳೆಲ್ಲವ ರೂಪಿಸಿ.
ಇರಿಯದಿರು ಕೊಲ್ಲದಿರು. ಕಣ್ಣೀರಿನುಪ್ಪು ಸಾಲು,—
ಅದಕೆ ಕೆಡದಿರಲಿನ್ನು ತಾಯ ಹಾಲು.
ನೆಲದ ಬೆಳೆಯನು ಬೆಳೆದು ಮಕ್ಕಳಿವು ನಲಿದಾಡಲಿ.
ಸಂಕ್ರಾಂತಿಯೊಡಮೂಡಲಿ.

ತತ್ವ ಶಿಲ್ಪದ ಚದುರ ಕ್ರಾಂತಿ. ಹಳೆ ಓದುಗಬ್ಬ
ಕಣ್ಗೆ ತಂದಿತ್ತು ಮಬ್ಬ.
ಪುಸ್ತಕಾಲಯವಲ್ಲ ನರಕ ಮಸ್ತಕದ ಮದ್ದು.
ಅವರಿವರು ಕಟ್ಟಿ ಜಿದ್ದು.
ಹೋಳಿಹುಣ್ಣಿಮೆಯಲ್ಲ, ಪಟ್ಟಾಭಿಷೇಕವಲ್ಲ,
ಬರಿ ಹರ್ಷ–ಶೋಕವಲ್ಲ.
ಒಂದೇ ಭೂಗೋಲದಾ ವಿವಿಧ ವಿಸ್ತಾರದಲ್ಲಿ
ಕಡಲುಗಳ ತೀರದಲ್ಲಿ
ಮನುಕುಲದ ಪುರುಷಾರ್ಥಗಳ ಕುರಿತು ಗೆಯ್ದ ಮನನ!
ಗೂಢ ದರ್ಶನದ ಖನನ.
ಅನೇಕದರಲ್ಲಿರುವ ಏಕಮೇವದ ಅನುಭವ,
ಸತ್ಯ–ಸುಂದರ–ಶಿವ;
ವಿಶ್ವವಾಙ್ಮಯವರಳಿ ವಿಶ್ವಾತ್ಮವಾಣಿಯಂತೆ,
ಸಂತೈಸಿ ವೀಣೆಯಂತೆ.

ಜೀವಶಿಲ್ಪದ ಪೂರ್ಣಕಾಂತಿ. ಈ ಶಾಸನ ಸಭೆ
ಕೇಂದ್ರಿಸಿತು ಲೋಕದ ಪ್ರಭೆ!
ನ್ಯಾಯಾಂಗ, ಕಾರ್ಯಾಂಗ, ಆಲೋಚನಾಂಗ,
ಎಲ್ಲಕೊಂದೇ ಒಂದು: ಮನುಕುಲದ ಉತ್ತಮಾಂಗ!
ನೂರು ದೇಶಗಳಿಲ್ಲಿ ನಿಂತಿಹವು ಕಹಳೆಯೂದಿ:
ಇದು ಸತ್ಯಯುಗದ ಆದಿ.

ಒಂದೇ ಗುಮ್ಮಟದಡಿಗೆ ಶತ್ರುರಾಷ್ಟ್ರಗಳು ಕುಳಿತು
ಎನ್ನುವವು: ಒಳಿತು: ಒಳಿತು.
ವೈಮನಸ್ಯವದಿರಲಿ, ಆಗೀಗ ರಣಗರ್ಜನ:
ಅದಕಿಹುದು ಪರಿಮಾರ್ಜನ.
ಇರಲಿ ಷೋಡಶ ಕಲೆಯು, ಚಂದ್ರ ತಾನಹುದು ಚಂದ್ರ;
ಜಾಗತಿಕ ಕೇಂದ್ರ,—ಕೇಂದ್ರ.
ಇದೇ ನಮ್ಮ ಪ್ರಾರ್ಥನೆಯು: ಚಂದ್ರಾಧಿಪತಿಯೆ, ಸೂರ್ಯ!
ಶುಭವಿರಲಿ ನಮ್ಮ ಕಾರ್ಯ.

ನೌಕಾಯಂತ್ರ

ಹಡಗದ ಹಗೆಯಲ್ಲಿಳಿದಿಳಿದು ಗವಿಯುನೊಳವೊಕ್ಕು ಸಾಗಿದೆವು ದೂರ, ಸುದೂರ,—
ನಿರೋಳಕ್ಕೆ ಹಾಯ್ದ ಹಡಗದ ತಳದ ಗರ್ಭದೊಳು ನೂಕಿ.
ಇದೇನು ತಿಮಿಂಗಿಲ ತಿಮಿರ! ನಿಶಾಚರರ ದಿಶೆಯೇನಿದು! ಜಲಚರಗಳ ಜಗವು!
ಇಟ್ಟ ಕಾಲೆಳೆಯುತಿದೆ ಜಾರಿ ಯಮಲೋಕಕ್ಕೆ!
ಹರಿಯುತಿದೆ ನೋಡಲ್ಲಿ ಕೊಳಚೆ ನೀರು,—ರವರವ ನರಕದಲ್ಲಿ!
ಮೇಲೆ ತಲೆತಿರುಗಿ ಕಣ್ಣೆತ್ತಲು, ಕಾಣುವ ಕಪ್ತಾನನ ಕೋಣೆಯೇ ಮುಗಿಲಿಲ್ಲ!
ಇಲ್ಲಿಯ ಯುವರಾಜನವನು,—ಇಂದ್ರ ಚಂದ್ರನೀ ಲೋಕಕೆ:
ಅವ ಸನ್ನೆಗೆಯ್ದಂತೆ ವರ್ತಿಸುವವಿಲ್ಲಿರುವ ಪ್ರಾಣಿಗಳು.

ತೀರ ಕೆಳಗೆ ಸಮುದ್ರ,—ಅದರ ಮೇಲಿಹುದು ಸಿಹಿನೀರ ಕೆರೆ
ಕಬ್ಬಿಣದ ಹೊದಿಕೆಯಲಿ,—ಅದರ ಮೇಲ್ನಿಂತಿಹುದು ಯಮಲೋಕವಿದು.
ಈಗೆ ಬಾ, ಇತ್ತ ಬಾ, ಹಿಡಿದು ಸಾಗಿ ಕಬ್ಬಿಣದ ಕಂಬಿಯನು:
ಇಲ್ಲದಿರೆ ಪುಡಿಪುಡಿ ಮಾಡಿ ಚೆಲ್ಲೀತು ಸುತ್ತುತಿಹ ಚಕ್ರವದು:
ಇಲ್ಲಿಹುದು ನೋಡು ಚಕ್ರವ್ಯೂಹ: ಗರ್ರನೆ ತಿರುಗುತಿವೆ ಗಾಲಿಗಳು
ಯಮನ ಕಣ್ಣಾಲಿಗಳಂತೆ: ಅಣಿಗೊಳಿಸಲೆಂದು ನಿಂತಿಹರು ದೂತರಿವರು:
ಅವರಿಗುಸಿರೆಂಥ ಮರಣವು ನಿನ್ನದಿರಲೆಂದು. ಹಾ! ಬಾಗಿಲ್ಲಿ!
ಜಂತಿ ಭಿಂತಿಯು ಮೇಲೆ ಕೈಮೆಯ್ಯ ತಳಕಿಕ್ಕಿ
ಹೊಟ್ಟೆ ಸರಿದುಬ್ಬಿ ಬರುತಿವೆ ನೋಡು ಹೆಬ್ಬಾವು: ಏ ಗುಬ್ಬಿಮಾನವ!
ಏಳು! ಹಾರಿಲ್ಲಿಂದ! ಇಲ್ಲದಿರೆ ಮಡಿದೆಯೆಂದು ತಿಳಿ!
ಇದು ನೋಡು,—ವಾಯುವಿನ ನುಂಗಿ ನೀರ್ಕುಡಿದ ಘಟಸರ್ಪ:
ಬಾಯ್ಬಿರೆದು ಗಾಳಿ ಬಿಡುತಿದೆ: ಇಲ್ಲಿಯದರ ವಿಷದುಸಿರು ಸಹ

ತಂಪಮೃತದಂತೆ: ಮತ್ತಿದು ಕಾಳಸರ್ಪ: ಉಗಿಯನೊಯ್ದು ಯಂತ್ರಕೆ ಮಂತ್ರಿಸಿ
ಹುಟ್ಟು ಕಡೆಸುವ ಮಹಾತಂತ್ರ!
ಅಲ್ಲಿ ಬೇಡ! ಹುಟ್ಟುತಿಹುದಿಲ್ಲಿ ಸಹಿಸಲಸಾಧ್ಯವಾದ ಬೆಳಕು,—
ವಿದ್ಯುತ್ತು: ಮಿಂಚಿನ ಹೊಂಚಿನಲಿ ಹೆಂಚಿನಂತೆ ನೀ ಹುರುಪಳಿಸಬಹುದು.
ಉಗಿಯೆಲ್ಲ ಮಿಂಚಾಗುವದಿಲ್ಲಿ, ಇಲ್ಲಿಗೊ! ಸದ್ದಿಲ್ಲದೆ ತಮ್ಮ ಮೈಸುತ್ತು ಸುಳುಸುಳು ತಿರುಗುತ್ತ
ಬಿದ್ದುಕೊಂಡಿವೆ ಮೀನಿನಂಥ ಪ್ರಾಣಿಗಳು: ತೆಡವಬೇಡಿವುಗಳ ಹಸಿವನು,
ಉಗಿಮಾಡಿ ನುಗಿಸಬಹುದು ನಿನ್ನನು. ಮತ್ತಿಲ್ಲಿ! ಎಚ್ಚರಿಕೆ!
ಸುಧನ್ವನ ಕಾಸಿದಂಥ ಕೊಪ್ಪರಿಗೆಗಳಲಿ ಗಪ್ಪಾಗಬಹುದು ನೀನು!
ಮುಟ್ಟಬೇಡ ಆ ಹುಟ್ಟನು; ತರುವದು ನಿನ್ನ ಸಾವನದು ನಿಮಿಷದಲಿ.

ಧಗಧಗಿಸುವ ಸೆಕೆಯಲ್ಲಿ ಬೂದಿಯಾಗಿ ಬಿದ್ದೀ ನೀನು
ನಿಂತರೆ ಟರ್ಬೈನಿನ ಹತ್ತಿರ!
ಹಲ್ಲುಗಟಕರಿಸಿ ಸೆಟೆದು ಮಂಜುಕಲ್ಲಾಗಿ ನಿಂತೀ ನೀನು
ಹೋದರೆ ಮಂಜಿನಾಗಾರಕೆ!
ಟಕಮಕನೆ ತಿರುಗಿ ಟಕ್ ಟಕ್ ಎಂದು ಶಕುನದ ಹಕ್ಕಿಯಂತೆ ಕಟಿಯುತಿದೆ ನೋಡು

ತಿರುಗುಮುರುಗಳೆಯುವ ತಿರುಪೊಂದು.
ಲೊಚ್ ಲೊಚ್ ಎಂದು ಹಿರಿಹಲ್ಲಿಯಂತೆ ಲೊಚಗುಡುತಿದೆ ನೋಡು
ಬೇರೊಂದು ಬಗೆಯ ಮಾಪೊಂದು!
ಹಸಿರು ಕೆಂಪು ಮಾಟದ ಗೊಂಬಿಗಳು ಮೂಡಿ ಮತ್ತೆ ಮಾಯವಾಗುತಿಹವಿಲ್ಲಿ
ಆಹುತಿಗಾಗಿ ಹಾತೊರೆದ ಮರುಳ್ಗಳ ಕುಣಿತ ನಡೆದಿಹುದಿಲ್ಲಿ!
ಅಯ್ಯೋ! ದೇವನಿಂದ ಜೀವಗುವರನ ನೆಳೆತಂದು
ನೀರು ನೆಲದ ಮಮತೆಯ ಬಿಡಿಸಿ ಕೊಲ್ಲಲು ಹಾಕಿದ ಹೊಂಚದು ಕಾಣಿರೋ!
ಯಾವ ಮಾಂತ್ರಿಕನ ಮೋಸವಿದು? ಯಾವ ಯಾಂತ್ರಿಕನ ಕೃತಿಯಿದು?
ಹೇಗೆ ಬಂದೆನಿಲ್ಲಿ? ದಾರಿ ಯಾವುದು ಹೊರಗೆ? ಏನಿದು? ಏಕಿದು?
ಕಾಗೆಗಳ ಹಿಂಡಿನಲ್ಲಿ ಸಿಕ್ಕ ಪರಪುಟ್ಟನಂತೆ ವಿಲಿವಿಲಿ ಒದ್ದಾಡಿದೆ,

ಅತ್ತು ಕರೆದೆ, ಚೀರಿದೆ. ಹೆಬ್ಬಾವು ಬಂದು ಸುತ್ತಿದವು,
ಮೀನು ಬಂದು ಮುತ್ತಿದೆವು, ಗಾಲಿ ಬಂದು ಎತ್ತಿದವು,—
ನಿಲ್ಲಲು ನೆಲವಿಲ್ಲದಾಯ್ತು. ಮರೆಹೋಗಲು ಮರುಕವಿಲ್ಲದಾಯ್ತು. ಕಣ್ಗೆ ಕತ್ತಲೆಯಾಯ್ತು

ಅಯ್ಯೋ! ಸತ್ತೆ! ಸತ್ತೆ! ಸತ್ತೆ!!
ಅಲ್ಲ! ನರಕವಲ್ಲವಿದು: ಮಾನವನು ನಿರ್ಮಿಸಿದ ಯಂತ್ರಶಾಲೆ,—

ನಿಯಮಗಳನು ಪಾಲಿಸುವದಿದು: ಕವಿಯುಲುಸುರಿದಂತೆ ಆಲಿಸುವುದು.
ಮುಗಿಲೊಳಗಿಂದ ಕಪ್ತಾನನೆಳೆದ ಗೆರೆಯನು ದಾಟಲಾರದಿದು.
ಮತ್ತಿಲ್ಲಿ ನೋಡು: ದುಡಿಯುವರು ನಿನ್ನಂಥ ಮಾನವರಿಲ್ಲಿ ಸಂಬಳಕ್ಕಾಗಿ.
ಈ ಮಹಾಯಂತ್ರದಿಂದ ಮುನ್ನಡೆಯುವದು ಹಡಗ,—
ಇಡಿಯ ಪಟ್ಟಣವೊಂದು ತೇಲುವದು ನೀರ ಮೇಲೆ!
ಇದು ನರಕವೆನ್ನುವದು ಕುರುಡುತನ, ಅಜ್ಞಾನ.
ಅಲ್ಲಿ ಮೇಲಿನ ಮಹಲಿನಲಿ ಕುಳುತಿಹನು ನೋಡು ಕಪ್ತಾನನು,—
ಈ ಸೃಷ್ಟಿಯ ವಿಷ್ಣುವೀ ಜ್ಞಾನದ ಮಹರ್ಷಿ!
ಅವನ ಕೋಣೆಯಲಿ ಸಂಚಿತ ವಹುದೀ ಯಂತ್ರ ಮೂಲಮಂತ್ರ-
ವೀ ರಾಜ್ಯದ ಸೂತ್ರಗಳು. ರಾಕ್ಷಸೀ ವ್ಯಾಪಾರವಿದನು-
ಮತ್ತೀ ನಾವಿಗರ ಕ್ಷಾತ್ರ ತೇಜವನು—
ಅಂಕಿತದಲಿಡಬಹುದು ಅವನ ಬ್ರಹ್ಮಜ್ಞಾನ!
ಕಂಡಿರುವರಾರದನು? ಹಿತಕಾಗಿ ವ್ಯಯವಾಗುವೀ ತಾಮಸೀ ಶಕ್ತಿ
ರುದ್ರಭಯಂಕರವಾಗಬಹುದು, ಮುಂದೆ. ಬೆಂಕಿಯ ಮಳೆಗರೆಯಬಹುದು,
ಇಂದು ಹೊಳೆದ ಚಮತ್ಕೃತಿಯೆ ಮುಳುವಾಗಬಹುದು ಮಾನವಗೆ ನಾಳೆ!
ನನ್ನ ತಂದೆಯೆನೆ ಮೆಟ್ಟಿ ತುಳಿಯಬಹುದದು ಭಬ್ರುವಾಹನನಂತೆ:
ಮುಳುಗಿಸಿಹುದಿಂದು ಮಾನವ ಜಾತಿಯನು ದಾಸ್ಯವೃತ್ತಿಯಲ್ಲಿ:
ಯುದ್ಧಗಳ ಪುನರಾವೃತ್ತಿಯಲ್ಲಿ. ನಾಳೆ ಸಂಹರಿಸಲದನು ಸಂಪೂರ್ಣ,—
ಆಗ ಮನವಂಶವನು ಮತ್ತೆ ಬದುಕಿಸಬಲ್ಲ ಕೃಷ್ಣನಾರು?

ಏನಿಹುದೋ ದೈವದ ಮಡಿಲಲ್ಲಿ,— ಇದ್ದಲ್ಲಿಯೇ ಮಡಗಿರಲಿ!
ಕಾಲ ಬರುವ ಮುನ್ನ ಕೀಳಬೇಡದನು ಸೋಜಿಗಕಾಗಿ.
ಕಾವ್ಯವನು ಬಗೆ,—ಆದರ ಪರಿಣಾಮ ಎಷ್ಟುಪಕಾರಿ,
ಎಷ್ಟುಪಕಾರಿಯೆಂಬುದನು ಹೇಳಬಲ್ಲವರಾರು?
ಎಲ್ಲದರ ದೈವದಂತಿಹುದೀ ವಿಜ್ಞಾನಚಮತ್ಕೃತಿಯ ದೈವ.
ಎಲ್ಲ ದೈವಾಧೀನ. ಫಲಜ್ಯೋತಿಷದ ಹಾದಿಯನೆ ಬಿಟ್ಟು
ಆಗು–ಹೋಗುವದರ ಸಾಮುದ್ರಿಕವನೆ ತೊರೆದು
ನೋಡು ಸಮುದ್ರವ ಕೊರೆದು ನಡೆದೀ ಮಹಾಯಂತ್ರವನು!
ಅನುಭವಿಸದರ ರುಧ್ರಭಯಂಕರ ಸೌಂದರ್ಯವನು,
ಭವ್ಯ ವಿಭವವನು, ಕ್ರಮವನು, ಸಿಸ್ತನು!
ಯಂತ್ರಾಗಾರವಹುದಿದು ಕಬ್ಬಿಣದಿ ವಿಜ್ಞಾನ–ಕವಿಯೊರೆದ ಮಹಾಕಾವ್ಯ!
'ಕಬ್ಬಿಗರ ಕಾವ'ವ ತಿಳಿದವನೆ! ತಿಳಿಯೀ ಕಬ್ಬಿಣದ ಕಾವ!
ಪದವಿಲಾಸವನರಿತವನೆ! ಕುರಿಯೀ ಧಾತುವಿನ ಹದವ!
ಇಲ್ಲಿದೆ ಜಕ್ಕಣಾಚಾರ್ಯರ ವಾಸ್ತುಶಿಲ್ಪ. ರವೀಂದ್ರರ ಚಿತ್ರಕಲೆ,

'ಲೇಒಕೂಒನ್' ದಲ್ಲಿಯ ಮೂರ್ತಿಶಿಲ್ಪ, ತಾಂಡವನೃತ್ಯದ ನೆಲೆ,
ಪಂಪನ ಕಾವ್ಯರಚನೆಯ ಮಹಾದ್ಭುತ! ಕಲ್ಲು ಮಣ್ಣಿನಲ್ಲಿ,
ಬಣ್ಣದಲ್ಲಿ, ವರ್ಣಾಕ್ಷರದಲ್ಲಿ, ಮೆಯ್ಯ ವಿಧವಿಧದ ನಿಲುವಿನಲ್ಲಿ,—
ತನ್ನಲಿಹ ಬುದ್ಧಿ ವೈಭವವನರಳಿಸಲು ಬಾರದೆ
ಕಟ್ಟಿದನು ವಿಜ್ಞಾನ ಮಹರ್ಷಿ ಕಬ್ಬಿಣದಲೀ ಕಟ್ಟುಕಥೆಯ!
ಅತಿ ಸರಸವಾಗಿ ಮಿಡಿದೀ ವೀಣೆಯನು—
ಗುರುತಿಸಿ ಸ್ವರಗಳನು ಕೈಯ್ಯಾಡಿಸಿ ಪಿಯಾನಿನ ಮೇಲೆ—
ಕಂಡದರ ಹ್ರಸ್ವದೀರ್ಘವನು, ಏರಿಳಿತವನೆಲ್ಲ—
ಸರಿ–ಗಮ ಸರಿ–ಗಮ ಎಂದೊರೆವ ಭೂಪನಿವ ಕಪ್ತಾನ,—
ಸಮುದ್ರ ಸಂಗೀತದ ಶಾಸ್ತ್ರವನೆಲ್ಲ ಬಲ್ಲ ರಸಿಕ!

ನವೋದಯ

ಓ ತರುಣ! ಎದ್ದೇಳು!
ನಿನ್ನ ಮೋರೆಯಲ್ಲಿ ಹುಮ್ಮಸ್ಸಿದೆ.
ನಿನ್ನ ಕಣ್ಣಿನಲ್ಲಿ ಅಸಾಧಾರಣ ತೇಜಸ್ಸಿದೆ.
ನಿನ್ನ ಹಣೆಯಲ್ಲಿ ಭವ್ಯತೆಯಿದೆ.
ಗದ್ದದ ಕುಣಿಯಲ್ಲಿ ದಿವ್ಯತೆಯಿದೆ.
ಎತ್ತರದ ನಿಲುವಿನಲ್ಲಿ ಸಂಕಲ್ಪವಿದೆ.
ತುಟಿಯ ತುದಿಯಲ್ಲಿ ಆದೇಶವಿದೆ.
ನಿಡಿದೋಳ್ಗಳಲ್ಲಿ ನವಖಡ್ಗವನ್ನೆ ತೂಗುವ ಬಲವಿದೆ.
ಅಡಿಯಲ್ಲಿ ಬಿಡುಗಡೆಯಿದೆ.
ಓ ತರುಣ! ಎದ್ದೇಳು!
ನಿನ್ನ ರಾಜ್ಯವನ್ನಾಳು!

ಸರ್ವಮಯವಿದು ನಿನ್ನ ಸೊತ್ತು.
ಸರ್ವರಿಗೆ ನೀನು ಅಡಿಯಾಳು.
ಎಲ್ಲರೆದೆಯ ಹೊಂಗನಸು ನೀನು.
ಎಲ್ಲ ಸ್ವರ್ಣಸ್ವಪ್ನದ ರಾಜಬೀಜ ನೀನು!
ಮನ್ವಂತರವು ಬರಲಿದೆ:
ಪಾರು ಪತ್ಯಗಾರನಾಗು!

ಧನುರ್ಧರ ಪಾರ್ಥನಾಗು !
ಯೋಗೀಶ್ವರ ಕೃಷ್ಣನಾಗು !
ಏಳು ! ಏಳು ! ಏಳು !

ಊದು ! ಕಹಳೆಯೂದು !
ಎಲ್ಲ ಅನ್ಯಾಯದೊಡನೆ ಯುದ್ಧವನ್ನು ಸಾರು.
ಕಿತ್ತೊಗೆ ಎಲ್ಲ ಜಾತಿ–ಮತಗಳ ಬೇರು.
ಸನಾತನ ಸಂಕಟಗಳನ್ನು,
ವಿನೂತನ ವಂಚನೆಗಳನ್ನು,
ಪರಂಪರೆಯ ಪರಿಪರಿ ಯಾತನೆಗಳನ್ನು,—
ಎಲ್ಲವನ್ನೂ ತರಿದೊಗೆ !
ಗೆಲ್ಲಲಿ ಪ್ರೇಮ, ನಿಲ್ಲಲಿ ಹಗೆ.
ಕಾಡುದಾರಿಗಳನ್ನಳಿಸಿ
ರಾಜವೀಧಿಗಳನ್ನು ಕಟ್ಟು.
ಗಗನ ಮಹಲ್ಲುಗಳನ್ನು ರಚಿಸಿ
ಮುಗಿಲನ್ನು ಮುಟ್ಟು !
ಗುಡಿಸಲುಗಳನ್ನು ಗುಡಿಚಾಪೆಗೂಡಿಸು.
ನೆಲದೆದೆಯಲ್ಲಿ ಮುಗಿಲನ್ನು ಮೂಡಿಸು !
ನೂತನ ಜಗದ ನಿರ್ಮಾತೃವಾಗು.
ನವರಾಷ್ಟ್ರದ ಹರ್ಷ ವರ್ಧನನಾಗು !
ಸಿಡಿಲು ನಿನ್ನ ವಾಣಿಯಲ್ಲಿ
ಮಿಂಚು ನಿನ್ನ ಕೈಯಲ್ಲಿ.
ಏಳು ! ಏಳು ! ಏಳು !

ಎತ್ತು ! ಅಭಯತರವನ್ನೆತ್ತು !
ಚಕ್ರಪಾಣಿಯಾಗು !
ನೆಲದಲ್ಲಿ, ಜಲದಲ್ಲಿ,
ಗಾಳಿಯಲ್ಲಿ, ಆಕಾಶದಲ್ಲಿ,
ಸಿರಿಗಡಲಿ ನೊಡಲಲ್ಲಿ,
ನೆಲದ ತಳಬುಡದಲ್ಲಿ,
ತಾರಾಮಂಡಲದ ಸಾವಿರ ವೀಥಿಗಳಲ್ಲಿ,—
ಎಲ್ಲೆಡೆಗೆ ನಡೆಯಲಿ ನಿನ್ನ ಯಂತ್ರ !
ಕೇಳಿ ಬರಲಿ ನಿನ್ನ ಮಂತ್ರ:—
ಪೂರ್ಣಜೀವನದ ಪಥದಲ್ಲಿ ಮಾನವನು ಮುಂದುವರಿದಿದ್ದಾನೆ !

ಅಗ್ನಿಯೇ ! ಅಡುಮನೆಗೆ ನಡೆ !
ವರುಣನೇ ! ಒಕ್ಕಲಿಗನಾಗು !
ವಾಯುವೇ ! ಬಿಜ್ಜಣಿಗೆಯಾಗು !
ಕುಬೇರನೇ ! ನಾಡ ಬೊಕ್ಕಸವಾಗು !
ಇಂದ್ರನೇ ! ಕಲಾ ಕೇಂದ್ರವಾಗು !
ಸರಸ್ವತಿಯೇ ! ವಿದ್ಯಾಗುರುವಾಗು !
ಬೃಹಸ್ಪತಿಯೇ ! ಮಹಾಪ್ರಧಾನನಾಗು !
ನಡೆ ! ನಡೆ ! ನಡೆ !

ಏಳು ! ಧನುಸ್ಸನ್ನು ಸಜ್ಜು ಗೊಳಿಸು !
ಒಂದು ಬಾಣಕ್ಕೆ ಅಜ್ಞಾನ,
ಇನ್ನೊಂದಕ್ಕೆ ದುರಭಿಮಾನ;
ಒಂದು ಟಂಕಾರಕ್ಕೆ ಅಹಂಕಾರ,
ಇನ್ನೊಂದಕ್ಕೆ ದ್ವೇಷದ ಸಾರ,
ಒಂದು ಝೇಂಕಾರಕ್ಕೆ ಜನ್ಮಾಂಧತನ,
ಇನ್ನೊಂದಕ್ಕೆ ಮಂದತನ:—
ಎಲ್ಲವೂ ನಿರ್ನಾಮವಾಗಿ,
ಮಾನವನ ಚಿತ್ತ ಪರಿಶುದ್ಧ ವ್ಯೋಮವಾಗಿ
ಪ್ರಜ್ವಲಿಸುವ ಪರಂಧಾಮವಾಗಿ,—
ರಾಮಚಾಪ ಸೀತೆಯನ್ನು ತಂದಂತೆ,
ಗಾಂಢೀವವು ದ್ರೌಪದಿಯನ್ನು ಪಡೆದಂತೆ,
ಪೂರ್ಣಜೀವನ ಸುಂದರಿ ಬಂದು
ಮಾಲೆಹಾಕಿ ಗೌರವಿಸುವಳು;
ಸ್ವಯಂವರಿಸುಳು !
ಏಳು ! ಧನುಸ್ಸನ್ನು ಸಜ್ಜುಗೊಳಿಸು !

ನೂತನ ಯುಗದ ತ್ರಿವಿಕ್ರಮನೇ !
ಮರ್ತ್ಯ-ವ್ಯೋಮ-ಪಾತಾಳಗಳನ್ನು ವ್ಯಾಪಿಸಿ ನಿಲ್ಲು !
ಮನುಕುಲದ ಮಹೇಂದ್ರನೆ !
ಇಂದ್ರಚಾಪದಿಂದ ಭೂ-ವ್ಯೋಮಗಳಿಗೆ ಸೇತುವೆಗಟ್ಟು !
ಪಂಚಪ್ರಾಣವಾದ ಪ್ರಾಣ ದೇವರೆ !
ಅಶೋಕವನದಲ್ಲಿ ಮಾತೆಯನ್ನು ನಾಡಿಗೆ ತೋರಿಸು !
ಸಂಜೀವನಿಯನ್ನಾಯ್ದು ತಾ !
ಓ ನನ್ನ ನಾಡ ಪುತ್ಥಳಿಯೇ !

ನನ್ನ ತಾಯ ಕಣ್ ಗೊಂಬಿಯೇ!
ಮಾನವ ಜಾತಿಗೆ ಬಿಟ್ಟ ದೇವ ಹೂವೇ!
ನೀನೇ ಯುಗ ಪುರುಷ.
ನೀನೇ ಬರಲಿರುವ ಅವತಾರ.
ನೀನೇ ಅಪೌರುಷೇಯ ಪೌರುಷ.
ನೀನಲ್ಲದೆ ಅನ್ಯರಿಗೆ ಚೈತ್ಯಸುಂದರಿಯೊಲಿಯುವಳೆ?
ಏಳು! ಏಳು! ಏಳು!!

ತಾನೆ ಹರಿಯ ಮುರಲಿ

ಮುರಲಿ ಮೋಹನನ ಮುದ್ದು ಮೆಲ್ಲುತಿರೆ ಗೋಪಿಗೆಂಥ ನೋವು
ನೀಡಬಾರದೆ ನೋಡಲಾರದೆ ಅವಳಿಗಿಂದೆ ಸಾವು.
ಕನಸು ಕಾಣತಿಹಳದೊ ಕೃಷ್ಣ ತಾ ಹೋದ ದೂರ ದೂರ
ಅಲ್ಲಿ ಆಟವಿದೆ ಸೊಬಗಿನೂಟವಿದೆ ತಿರುಗಿ ಬೇಗ ಬಾರ.
ಇವಳ ಹಳಿವಂತೆ ಅಳಿವ ತರುವಂತೆ ಮತ್ತೆ ವೇಣೆಗಾನ
"ಬೇಡವಾದರಿನ್ನೇಕೆ ಬದುಕುವದು ಬರೆದೆ ಹರಿಗೆ ಕರುಣ".
ಗೋಪಿ ನಿದ್ದೆಯಲಿ ಎದ್ದು ನಡೆದಳದೊ ಸಾವಿನಲ್ಲಿ ತೇಲಿ
ಎಚ್ಚರಾಗಿರಲು ಬೆಚ್ಚಿ ನೋಡಿದಳು ತಾನೆ ಹರಿಯ ಮುರಲಿ!

ಟಾರು ಬೀದಿಯ ಮೇಲೆ ಕಾರ್ಗಾಲ

ಒಣಗಿದೆಣ್ಣೆಯ ಮೇಲೆ
ಹನಿಬಿದ್ದು ಉರಿಯೆದ್ದು ಜ್ವಾಲೆ!
ಕಾರ್ಗಾಲ ತನ್ನೊಡನೆ ತಂದಿರುವ ಮಾಯೆ
ಇಂದ್ರ ಚಾಪವ ಮುರಿದು ಮಾಡಿರುವ
ಲೋಕಗಳೇನೊ ಎನಿಸುವ ಹಲವು ವರ್ಣಛಾಯೆ
ತಾರಕೆಗೆ ಬಣ್ಣಗಳ ತುಂಬಿ ಬಂಗಾರದಲಿ
ಬಿಗಿದು ಬೀದಿಯ ಮೇಲೆ ಬಿಟ್ಟರಾರು?
ಊಹೆಗೇ ಬಣ್ಣವನು ಬರೆದು ಚಿತ್ರಿಸಿದಂತೆ
ಒಂದೆ ಚಿತ್ರದಿ ವರ್ಣ ನೂರು ನೂರು.

ಟಾರು ಬೀದಿಯ ಮೇಲೆ ಕಾರ್ಗಾಲ
ಕಣ್ತೆರೆದು ರಂಗು ರಂಗಿನ ಎಲೆಯು ಬಿಚ್ಚಿದಂತೆ
ದೇವಲೋಕದ ಸೋಗೆ ಪೈದುಂಬಿ ಕುಣಿಯುತೆ
ಅಲ್ಲಲ್ಲಿ ನವಿಲುಗರಿ ಉದುರುವಂತೆ?

ರಾಜವೀಧಿಯ ಸುಪ್ತ ಸ್ವರ್ಣಸ್ವಪ್ನಗಳಿಂದು
ಹತ್ತು ಬಣ್ಣದ ಹೊತ್ತು ಅರಳಿದಂತೆ
ಎದೆಯ ಮಸೆತಕೆ ಹರಿದ ಸರದ ಪದಕಗಳೇನು
ಯಕ್ಷನಭಿಸಾರಿಕೆಯು ಇರುಳು ನಡೆದಂತೆ.
ಯಾವ ರಾಸಾಯನಿಕ ನೆಸಕವೇನೋ ಕಾಣೆ ಸ್ವರ್ಣ-
ಪರ್ಣಕು ಜೀವ ಪಡೆವ ಚಿಂತೆ.

ಕಡಲ ಕನ್ನಡ

ಮನವು ನಲಿದಾಡಲಿಕೆ ಕಡಲು ಕುಣಿದಾಡುವುದು.
ಹಸುರೆ ಉಸಿರಾಡುವುದು ಎಲ್ಲ ಕಡೆಗೆ.
ಗಗನವನೆ ಮುತ್ತಿಡುವ ಉತ್ತುಂಗ ಶಿಖರವೇ
ಕಳಸವಲ್ಲವೆ ನಮ್ಮ ಬಾಳಗುಡಿಗೆ?

ಗಿರಿನಿರ್ಝರದ ಗಾನ ನಮ್ಮ ನುಡಿಯಾಗಿರಲು
ನಮಗೇಕೆ ಸಂಗೀತ ಹಾಳುಹರಟೆ?
ಕಡಲ ನೊರೆಗಳ ನಗುವು ನಮ್ಮ ಮುದ್ದಿನ ಮಗುವು:
ವೃದ್ಧಾಪ್ಯ ನಮಗಿಲ್ಲ ಕೊನೆಯು ವರೆಗೆ.

ಹೊಳೆಹಳ್ಳ ಹೃದಯವನು ತುಂಬಿ ತುಳುಕಾಡಿಸುವ
ಪ್ರೇಮದೌದಾರ್ಯವೇ ಬಾಳ ಜೇನು.
ಕಡಲ ತೆರೆ ಧಾರುಣಿಯು ಪಾದ ತೊಳೆಯುತಲಿರಲು
ಸದ್ಭಕ್ತಿ ಭಾವನೆಗೆ ಸಾಲದೇನು?

ಸಾಗರನು ಆಗಸವನಾಲಿಂಗಿಸುವ ಕ್ಷಿತಿಜ
ನಮ್ಮ ಮನೆಯಂಗಳದ ಕೊನೆಯ ರೇಖೆ
ನಮ್ಮ ಹೃದಯಾಕಾರ ಸಾಗರದ ವಿಸ್ತಾರ,
ಅದರಂತೆ ಆಳವೂ ಆಗದೇಕೆ?

ಜೋ. ದೊಡ್ಡನಗೌಡ

ಜೋಳದ ಝೋಕ್

ಯಂಗಂತ ಹೇಳಲಿ ನಿನ್ನ ಪ್ರತಾಪ
ಜಗಜಗಿಸುವ ಜೋಳ ರಾಜ್ಯದ ಭೂಪ ॥ ಪ ॥

ಯಾರಿಗು ಅಂಜದೆ ನೆಟ್ಟಗೆ ನಿಂತಿ
ಮೋರೆಯಮ್ಯಾಕೆತ್ತಿ ತೂಗುತಲಿದ್ದಿ
ಮಾರುದ್ದ ಕೈಗಳ ಬೀಸುತಲಿದ್ದಿ
ಬೀರನ ತೆರನಂತೆ ಮೆರೆಯುತಲಿದ್ದಿ ॥೧॥

ಒಳ್ಳೆಯ ಮುತ್ತಿನ ಚೆಂಡಂತೆ ಮೋರಿ
ಬೆಳ್ಳಗೆ ಬೆಳಗುವ ಕಾಂತಿಯು ಬೀರಿ
ತೆಳ್ಳಗೆ ಹಸುರಿನ ಮೈಯದು ತೋರಿ
ಚೆಲುವಾದ ಕಳೆಯೇರಿ ವಲಿಯುವೆ ಭಾರಿ ॥೨॥

ನೆಲ್ಲಪ್ಪ ಗೋದೆಪ್ಪ ಮುಂತಾದೊರೆಲ್ಲ
ಬಲ್ಲಂತೆ ನಿನ್ನನು ಬೈದವರೆಲ್ಲ
ಹಲ್ಕಿರಿದಿಂದಿನ ಶರಣೆಂದರಲ್ಲ
ಭಲರೇ ನಿನ್ನಸಮ ಲೋಕದೊಳಿಲ್ಲ ॥೩॥

ಒಂದಕ್ಕೆ ಹತ್ತಾಗಿ ನೂರಾಗಿ ಬೆಳೆವೆ
ನಂಬಿದೋರಿಗೆ ನಿನ್ನ ಜೀವವಕೊಡುವೆ
ತಿಂಬುಂಬ ಮನೆಯೆಂದು ಹೆಸರಿಗೆ ತರುವೆ
ನಂಬದ ಜನಕೆಲ್ಲ ಮಣ್ಣುಮುಕ್ಕಿಸುವೆ ॥೪॥

ಬಡವ ಬಲ್ಲಿದರೆಂಬ ಭೇದವನೀಗಿ
ಸಡಗರದೆಲ್ಲರ ಗೆಳೆಯನೀನಾಗಿ
ನಡೆಯಿಂದ ರಾಮೇಶಗೊಪ್ಪುವ ಮಗನಾಗಿ
ನಾಡಬೋನದ ಬೊಮ್ಮನೆನಿಸಿದೆ ತ್ಯಾಗಿ ॥೫॥

ನೇಹ ನಾನಾಸ್ತಿ ಕಿಂಚನ

ಗಂಧವೆಲ್ಲ ನೀನಾಗಿರಲು
ಘ್ರಾಣಿಸುವುದೇನನ್ನು ನೀ ಹೇಳು?
ರಸವೆಲ್ಲ ನೀನಾಗಿರಲು
ನಾನೇನ ರುಚಿಸಲಿ ನೀ ಸೊಲ್ಲು?
ಚರಾಚರ ಚಲುವೆಲ್ಲ ನೀವೆ;
ಚಕ್ಷುವಿನಿಂ ನಾನೇನ ನೋಡುವೆ?

ಗಾಳಿಯೇ ನೀವಾಗಿ ಸೋಂಕಿರಲು
ಹೇಳಿ ಇನ್ನೇನು ಸೋಂಕಲಿ ನಾನು?
ನೀವಿರೆ ನಾದಮಯವಾಗಿ
ನುಡಿಯಲಿ ನಾನಾರಿಗಾಗಿ?
ನಿನ್ನುಳಿದು ನಾ ಮಾಳ್ಪುದೇನಿಲ್ಲಿ?
ನೀನಲ್ಲದೆ ಬೇರಿಲ್ಲ ನಸು ಎಲ್ಲಿ!

ಇದು ಶ್ರುತ್ಯನುಭವಘೋಷಣ;
'ನೇಹ ನಾನಾಸ್ತಿ ಕಿಂಚನ!'

ಬಯಕೆ

ಸೊನ್ನಲಿಗೆಯ ಸಿದ್ಧನ
ಕಲ್ಯಾಣ ಬಸವನ
ಶೃಂಗೇರಿ ಶಂಕರನ
ಬುದ್ಧಮಹಾವೀರರ
ಬರುವಿಕೆ ಬಯಕೆಯನು
ಬಯಸೇನ, ಬಯಕೆಯನು ಬದುಕುದಕೆ.

ಬರುವಿರಿ ಇನ್ನೊಮ್ಮೆ
ಎಂಬುತ ನಂಬುತ
ದೂಡುವೆ ದೋಣಿಯ
ತೆರೆಯೇನ? ಬಂಡೇನ?
ತಡೆಯದು ನನ್ನೇನು
ತಡೆಯೇನು? ಬಾಳುವೆ ಕಡಲಾಗ-

ನೂಕುವೆ ನೌಕೆಯ
ಬೇಕೇನ ನನಗೇನ
ಕೂಡುವೆ ನಿಮ್ಮನ್ನ
ಅಂಜೇನು ಸಾವೀಗು
ಸಾವೇನು ನಿಮ್ಮ ಉಡಿಯೇನು?
ಸಾವೇನ ಬೇರೇನ? ಸಾವೇನ ನನ್ನ ತವರೇನ?

ಗಾಳಿಯ ಪ್ರೀತಿ

ಹೂವಿನೆಸಳ ಎಳೆದಂತೆ ಗಾಳಿ ಗಲ್ಲವನು ಸವರಿ ಸೋಂಕಿ
ಚಿಗುರ ಬೆರಳ ಸುಳಿಗಾರುಳ ಸುತ್ತಿ ಅಳಿಯಾಳಿಗಳನು ನೂಕಿ
ನಲುಮೆವಾಡನದು ಕಳ್ಳಗತ್ತಿನಲಿ, ಸಣ್ಣದನಿಯುಲುಲಿದು
ಸುಸಿಲ ಸೂಚಿಸುವ ಇನಿಯನಂತೆಯದು ಸುಳಿದು ಬಹುದು ನಲಿದು.

ನೀಲಿ ರೇಸಿಮೆಯ ವಸನಕದೋ ಜರತಾರಿ ಚಿಕ್ಕಿ ಕೆಚ್ಚಿ
ಮುಸುಕ ಹಾಕಿದರು ಒಳಗೆ ಸುಳಿಯುತಿದೆ ತನಗೆ ತಾನೆ ಮೆಚ್ಚಿ
ಬೆಳ್ಳಿದೋಳ, ಅದೊ ಬೆರಳ ಚಿಗುರ ಕಣ್, ವೇಗವ ಮುಟ್ಟಿ ತಟ್ಟಿ,
ಅಲ್ಲಾಡಿಸುತ್ತ ಚೆಲ್ಲಾಟವಾಡುತಿದೆ, ಎಂಥದವ್ವ ಎಟ್ಟಿ!

ತಲೆವಾಗಿಲನ್ನು ತಟ್ಟಿತ್ತು ಅವರೆ ಬಂದರೋ ಎಂದು ಎದ್ದೆ
ಮೈಮುರಿದು ಅಲಸಿಕೆಯ ಕಳೆದು, ಕಾಡಿದರು ಸದ್ದು ಮೊದ್ದ ನಿದ್ದೆ
ಬಾಗಿಲವ ತೆರೆದೆ ಇದೆ ಏನು ಅಲ್ಲಿ ಎಲ್ಲವೂ ಬರಿಯ ಬಯಲೇ
ಈ ಕಳ್ಳ ಗಾಳಿಯಾಟವನು ಹುಚ್ಚಿನಾನೆಂತು ತಿಳಿಯಬಲ್ಲೆ.

ಇಕೊ ಸೆರಗ ಹಿಡಿದು ಬೆನ್ ಹಿಂದೆ ಸುಳಿಯುತಿದೆ ಹುಡುಗ ಹೆಜ್ಜೆಗೆಜ್ಜೆ
ಉಲಿವಂತೆ ಕುಣಿದು ಮೈ ಮೊಗವನಡರಿ ಅಕೊ ಗಲ್ಲಗಲ್ಲ ಉಜ್ಜಿ
ತಡಿಲಾರೇನವ್ವ ಈ ತುಂಟತನವ ಏನಾರೆಮಾಡಲಿನ್ನು
ಈ ದೂರನವರ ಎದುರೆಂತು ಹೇಳಲೀ ಗಾಳಿ ನನ್ನ ಹೊನ್ನು.

ನನಗು ನನ್ನ ಆ ಪ್ರಾಣನಾಥನಿಗು ಪ್ರಾಣದುಸಿರು ನೀನು
ಅಡಿಗೆಯಲ್ಲಿ ಉಪ್ಪೆಂತೊ ಅಂತೆ ನೀ ಜೀವ ಜಗದ ಜೇನು
ಮಾತೆ ಮಮತೆ, ಆ ಪತಿಯ ಪ್ರೀತಿ, ಹಸುಗೂಸಿನಂಥ ಹೃದಯ
ಎರಕಗೊಂಡು ಏ ಗಾಳಿ, ನಿನ್ನ ನಾ ಕೇಳಿ, ಕಂಡೆ ಉದಯ!

ವಾಲಿ, ಗಂಗಪ್ಪ

ಸಾರಜ್ಞನ ನುಡಿಗಳು

ಋಣವ ಹೊರುವುದಕಿಂತ
ಹೆಣವ ಹೊರುವುದು ಲೇಸು
ಋಣವ ಹೊತ್ತವನು ಯಮನು ಕರೆಯುವ ಮುನ್ನ
ಹೆಣವಾಗಿ ಬಿಡುವ ಸಾರಜ್ಞ.

ಸಾಲವಿದ್ದವ ಲೆಂಬ
ಕೊಳು ಕುಳ್ಳಿಗು ಕೀಳು
ಸಾಲವನು ಹರಿದ ಮರುದಿನದ ಒಣ ರೊಟ್ಟಿ
ಹಾಲ ಕೆನೆಯಕ್ಕು ಸಾರಜ್ಞ.

ದುಡಿಮೆಯೆಂಬುವ ಹೊನ್ನ
ಕೊಡವೆ ಕೈಯೊಳಗಿರಲು
ಕಡಬಡ್ಡಿಯವರ ಮಂಗ ಮಲಕಿಗೆ ಸಿಗುವ
ಗೊಡವೆಯೇತಕ್ಕೆ? ಸಾರಜ್ಞ.

ಅಗ್ಗದಾ ಮುಖಸ್ತುತಿಗೆ
ಹಿಗ್ಗದವ ಕಡು ಜಾಣ
ಹಿಗ್ಗದಗೆ ಮುಂದೆ ಹೆಗ್ಗುರಿಯ ಹಾದಿಯಲಿ
ನೆಗ್ಗಲಿಯ ಮುಳ್ಳು ಸಾರಜ್ಞ.

ಆ ರಾಜ್ಯ ಕರ್ತರಿಗೆ
ಮೂರು ಹಾದಿಯ ಮಣ್ಣು
ತೂರಿದೆವು ಆಗ! ಯಾರಿಂಗೆ ತೂರುವದು
ಸ್ವಾರಾಜ್ಯದಲ್ಲಿ? ಸಾರಜ್ಞ.

ಅತ್ತೆ ಸರಸತಿಯಾಗಿ
ಮತ್ತೆ ಸಿರಿ ಸೊಸೆಯಾಗಿ
ಹತ್ತು ಬೆರಳುಗಳು ತೊತ್ತಾದರೆಲ್ಲರಿಗು
ಹೆತ್ತಪ್ಪ ಕಡುಬು ಸಾರಜ್ಞ.

ಸುವರ್ಣ ಸಂಪುಟ/೨೭೭

ಇರಲೊಂದು ಮನೆಯಾಗಿ
ಸುರಿಯಲಂಬಲಿಯಾಗಿ
ಹೊರಲರಿವೆಯಾಗಿ ಅರಿವಿರಾ ಬಾದರದು
ವರ ರಾಜ್ಯವೆಂಬೆ ಸಾರಜ್ಞ.

ಹಿಡಿಯುರಳು ಮುಕ್ಕಲ್ಕೆ
ಇಡಿ ಬಣವೆ ಸುಡುವವರ
ಒಡಲ ಸಡಗರಕೆ ಬಹುಜನರ ಹಿತವೆಲ್ಲ
ಹುಡಿಗೂಡದಿರಲಿ ಸಾರಜ್ಞ.

ಹಸಿದುಂಡ ರಸಭೋಜ್ಯ
ಹೊಸರಕ್ತವಾಗುವುದು
ಒಸೆದೋದಿದೋದು ಹಸಿಯು ಗೋಡೆಗೆ ಹರಳ
ಎಸೆದಂತೆ ನಿಜದಿ ಸಾರಜ್ಞ.

ಗುಟ್ಟನ್ನು ಹೃದಯದೊಳ-
ಗಿಟ್ಟು ದುಡಿವವ ಜಾಣ;
ಪಿಟ್ಟೆಂದರೆಲ್ಲ ಗುಟ್ಟು ರಟ್ಟಾದೀತು.
ಗುಟ್ಟೆದೆಯ ಕಸುವು ಸಾರಜ್ಞ.

ಎಸ್. ವಿ. ಪರಮೇಶ್ವರಭಟ್ಟ

ದೀಪ ಹಚ್ಚಾ!

ಪ್ರೀತಿಯು ಕರೆ ಕೇಳಿ ಆತ್ಮನ ಮೊರೆ ಕೇಳಿ
ನೀ ಬಂದು ನಿಂದಿಲ್ಲಿ
ದೀಪ ಹಚ್ಚಾ.

ನಲ್ಲ ನೀ ಬಂದಂದು ಕಣ್ಣಾರೆ ಕಂಡಂದು
ಮನೆಯೆಲ್ಲ ಹೊಳೆದಂತೆ
ದೀಪ ಹಚ್ಚಾ.

ಬಾಳ ಮುಂಬೆಳಗುರಿದು ಹಗರಣದ ಬೈಗಿಳಿದು
ಕಪ್ಪೇರಿ ಬಂದಿತು
ದೀಪ ಹಚ್ಚಾ.

ಕರಿಗೆಜ್ಜೆ ಕುಣಿಸುತ್ತ ಕಣ್ಣೀರ ಮಿಡಿಯುತ್ತ
ಇರುಳಾಕೆ ಬಂದಳು
ದೀಪ ಹಚ್ಚಾ.

ಕಾಲರಾಯನ ಗಾಲಿ ಕತ್ತಲ್ಲೆ ತಿರುಗಲಿ
ನನ್ನೆದೆಗೆ ನಿನ್ನೊಲವ
ದೀಪ ಹಚ್ಚಾ.

ದೇಹದ ಗೂಡಲಿ ನಿನ್ನೊಲವು ಮೂಡಲಿ
ಜಗವೆಲ್ಲ ನೋಡಲಿ
ದೀಪ ಹಚ್ಚಾ.

ಬಾನಿನಂಗಳದಲ್ಲಿ ಚುಕ್ಕಿ ಹೊಳೆದೆಸೆವಂತೆ
ನನ್ನ ಮನದಂಗಳದಿ
ದೀಪ ಹಚ್ಚಾ.

ಬೆಲ್ಲದಂತೆಲ್ಲ ಬಗೆ ಕರಗುತಲಿಹುದೊಳಗೆ
ನೀನ್ನನೆ ಬೇಡುವೆ
ದೀಪ ಹಚ್ಚಾ.

ದೀಪಿಲ್ಲ ಧೂಪಿಲ್ಲ ಝಳಝಳವಿನಿಸಿಲ್ಲ
ಕಳಕಳವಾಯ್ತಲ್ಲ
ದೀಪ ಹಚ್ಚಾ.

ಮಿಂಚಿಗೆ ಕಾರ್ಮುಗಿಲು ಮಿರುಗದೆ ಹೊನ್ನಾಗಿ
ನಾನೂ ಹೊನ್ನಾದೇನು
ದೀಪ ಹಚ್ಚಾ.

ಹಳೆಬಾಳು ಸತ್ತಿತ್ತು ಕೊಳೆಬಾಳು ಸುಟ್ಟಿತ್ತು
ಹೊಸಬಾಳು ಹುಟ್ಟಿತ್ತು.
ದೀಪ ಹಚ್ಚಾ.

ದಿನದಿನದ ಲೋಕಾನುಭವದೊಳೆದೆಯನು ತುಂಬಿ
ಜೀವನವನನುಗೊಳಿಸಿ
ದೀಪ ಹಚ್ಚಾ.

ಸಾವಿನ ಒಳಸಂಚು ಮಾಯದ ಕಣ್ಮಿಂಚು
ನಿನ್ನೆದುರು ನಂದಿತು
ದೀಪ ಹಚ್ಚಾ.

ಪ್ರೀತಿಯ ರತಿಗೆ ನೀ ಬೆಳಕಿನ ಆರತಿ
ಬೆಳಗಿನ ಕಲ್ಲಾರತಿ
ದೀಪ ಹಚ್ಚಾ.

ಮೋಹದ ಮತಿಗೆ ನೀ ಸುಟ್ಟು ತೋರುವ ದೀಪ
ಸುಜ್ಞಾನ ಪ್ರದೀಪ
ದೀಪ ಹಚ್ಚಾ.

ಜ್ಯೋತಿಸ್ವರೂಪಪನೆ ಸ್ವಯಂ ಪ್ರಕಾಶನೆ
ತೇಜೋರೂಪನೆ
ದೀಪ ಹಚ್ಚಾ.

ವಿಶ್ವಮೋಹಿತಚರಣ ವಿವಿಧವಿಶ್ವಾಭರಣ
ಆನಂದದ ಕಿರಣ
ದೀಪ ಹಚ್ಚಾ.

ನೀನೆಂಬ ಜೋತಿಯಲಿ ನಾನೆಂಬ ಪತಂಗ
ಸೋತ ಉಲಿ ಏಳಲಿ
ದೀಪ ಹಚ್ಚಾ.

ಭವದಂಧಕಾರದಿ ಎನ್ನ ಸಂಸಾರದಿ
ನಿಂದೀಪ ಬೆಳಗಲಿ
ದೀಪ ಹಚ್ಚಾ.

ನನ್ನಂತರಂಗದಿ ನಂದದೆ ನಿಂದೀಪ
ನಂದಾದೀಪಾಗಿರಲಿ
ದೀಪ ಹಚ್ಚಾ.

ಒಂದು ರಾತ್ರಿ

ತಿಳಿಮುಗಿಲ ತೊಟ್ಟಿಲಲಿ
ಮಲಗಿದ್ದ ಚಂದಿರನ
ಗಾಳಿ ಜೋಗುಳ ಹಾಡಿ
ತೂಗುತಿತ್ತು.

ಗರಿ ಮುದುರಿ ಮಲಗಿದ್ದ
ಹಕ್ಕಿಗೂಡುಗಳಲ್ಲಿ
ಇರುಳು ಹೊಂಗನಸೂಡಿ
ಸಾಗುತಿತ್ತು.

ಮುಗುಳಿರುವ ಹೊದರಿನಲಿ
ನರುಗಂಪಿನುದರದಲಿ
ಜೇನುಗನಸಿನ ಹಾಡು
ಕೇಳುತಿತ್ತು.

ತುಂಬುನೀರಿನ ಹೊಳೆಯೊ
ಳಂಬಿಗನ ಕಿರುದೋಣಿ
ಪ್ರಸ್ಥಾನ ಗೀತೆಯನು
ಹೇಳುತಿತ್ತು.

ಬರುವ ಮುಂದಿನ ದಿನದ
ನವನವೋದಯಕಾಗಿ
ಪ್ರಕೃತಿ ತಪವಿರುವಂತೆ
ತೋರುತಿತ್ತು.

ಶಾಂತರೀತಿಯೊಳಿರಳು
ಮೆಲ್ಲಮೆಲ್ಲನೆ ಉರುಳಿ
ನಾಳಿನ ಶುಭೋದಯವ
ಸಾರುತಿತ್ತು.

ಎಂ. ರಾಮರಾವ್

ಹಳ್ಳದ ಸೆದೆಗಳು

ಹಳ್ಳದ ಬದುವಿನ ಮುಳ್ಳಿನ ಪೊದೆಗಳು
ಹಾಡಿಹವೆಲರಿನಲಿ,
ತಂಪೊಳು ಚಲಿಸುವ ಇಂಪಿ ಅಲೆಗಳ
ಸುಂದರ ಸನಿಯದಲಿ.

ಒಲಿದೆನ್ನೆದೆಯೊಳು ದನಿಗೈದಿಹವಿವು
ಮೆಲ್ಲನೆ ಮಂದರದಿ
ಕವಿಗಳ ಪದಗಳು ಹೊಗಳದ ಸೆದೆಗಳು
ಹೃದಯ ಮಂದಿರದಿ.

ಎಸ್. ವೆಂಕಟರಾಜ

ಬೆಳಕಿಗಾಗಿ

೧

ಬಿದ್ದಿತ್ತು ದಾರಿಯಲಿ ಬಿಸಿಲು!
ನಿದ್ದೆಬಾರದ ಹಸುಳೆ ಕೈನೀಡಿ ಮೇಲ್ಮುಸುಕ-
ನೊದ್ದು ನೋಡುವ ರೀತಿ
ಬಿದ್ದಿತ್ತು ದಾರಿಯಲಿ ಬಿಸಿಲು!

ಮುಗ್ಧತೆಯ ಮೋಹದಲಿ ಕಲೆತು ಕತ್ತಲ ಕುಂತಿ
ಹೆತ್ತು ಕೈ ಬಿಟ್ಟಿರುವ ಕೂಸು
ಸದ್ದಿಲ್ಲದೊಮ್ಮೊಮ್ಮೆ ನೆರಳ ಬೆರಳನು ತೂರಿ
ಸಂತೈಸುತಿರುವ ಹೆಣ್ಮನಸು!

ಮುದ್ದಿಟ್ಟು ಮಮತೆಯಲಿ ತಳಿರೆಲೆಯ ತೊಟ್ಟಿಲಲಿ
ತೂಗುತಿಹ ತರುಲತೆಯ ಸೊಗಸು
ಶುದ್ಧತೆಗೆ ತೆರವಿತ್ತು ಸರಿವ ಹಿನ್ನೆಲೆಯಾಗಿ
ಜಗುಳಿಹುದು ಜಗದ ಕಣ್ಕನಸು!

ಸದ್ದುಳಿದು ಮೆಲ್ಮೆಲನೆ ಬಂದು ಮುಂಜಾವದಲಿ
ಯಾರೊ ಬರೆದಿಹ ರಂಗವಲ್ಲಿ
ಎದ್ದು ನೋಡಲು ಜಗತಿ ಮೂಕ ಬ್ರಹ್ಮಾಂಡದಲಿ
ಹೊದ್ದಿತ್ತು ಬೆಳ್ಳನ್ನ ಬಳ್ಳಿ!

ಉದ್ದಗಲದಾಕಾಶವಿಳಿದು ಭೂಮಿಗೆ ಚಂಚು
ತೂರಿರುವ ಚೆಲುವು ಮಿಂಚುಳ್ಳಿ
ನಿದ್ದೆಯಲಿ ಬಿಗಿದಂತರಾತ್ಮ ಜಾಡ್ಯವನುಳಿದು
ಚೈತನ್ಯಕಡರಿಹುದು ನುಸುಳಿ!
ಬಿದ್ದಿತ್ತು ದಾರಿಯ ಬಿಸಿಲು.

೨

ತುಂಬಿತ್ತು ಗಂಭೀರ ಮೌನ!
ಕದ್ದ ಸೊತ್ತನು ಹಂಚಿಕೊಳಲು ಕಾದಿಹ ಕಳ್ಳ
ಜನರ ಗುಟ್ಟಿನ ಕಾರ್ಯಸ್ಥಾನ-
ಅಂತಿತ್ತು ಸಂಜೆಯು ವಿಧಾನ!

ಕಾಲನಲ್ಲಲ್ಲಿ ಕರಿನೆರಳ ಮಸಿಯೊಳಗದ್ದಿ
ಬರೆದ ಕಲ್ಪದ ಚರಮಗೀತ
ಮೇಲೆ ಮೊಗವೆತ್ತಿ ನರಿನಾಯಿ ನಿಚ್ಚಳವಾಗಿ
ನೀಡುತಿಹ ನರಕ ಸಂಗೀತ!

ಶೀಲತೆಯನೊರಸಿಯಶ್ಲೀಲ ನಿರ್ಮಾಣದಲಿ
ಪಾಲುಗೊಂಡಿಹ ಮನೋವಿಕಾರ
ಹಾಲು ಸವಿಯಕ್ಕರೆಯ ಸಕ್ಕರೆಗೆ ಮುಸುಳುತಿಹ
ದುರ್ವಿಷಯ ದುಃಖಾಂಧಕಾರ!

ತುಂಬಿತ್ತು ಗಂಭೀರ ಮೌನ!
ಬೆಣ್ಣೆಯಾಸೆಗೆ ಕಣ್ಣುಮುಚ್ಚಿ ಕಠ್ರನೆ ಬೆಕ್ಕು
ಕಾದುಕುಳಿತಿರುವ ಕಾರ್ಪಣ್ಯ-
ಅಂತಿತ್ತು ಕತ್ತಲ ವಿಧಾನ!

೩

ದಾರಿಯಲಿ ಬಿದ್ದಿತ್ತು ಬೆಳ್ದಿಂಗಳು
ಚಾರುವಿರಹಾಂಗನೆಯ ಬಹುದಿನಗಳಾಸೆ ಮೈ-
ದೋರಿ ಮೆಚ್ಚಿರುವಂತೆ-
ದಾರಿಯಲಿ ಬಿದ್ದಿತ್ತು ಬೆಳ್ದಿಂಗಳು!

ಆರಿಗೂ ನಿಲುಕದಿಹ ಮಾಯಕದ ಮಾಟದಲಿ
ಕವಿಕಾಣುತಿಹ ಸುಖಸ್ವಪ್ನ
ಜಾರಿಬಿದ್ದಿದೆ ದೇವನಾರಿಯರ ಸಿರಿಮುಡಿಯ
ಸೌರಭದ ಶೃಂಗಾರ ಸುಮನ

ಧಾರಿಣಿಯು ಬರಗೊಂಡ ಮಾನವ್ಯದನುಭಾವ-
ದಾದರಕೆ ಸುರಿದ ಮೃಷ್ಟಾನ್ನ

ಏರು ಮನಸಿನ ಮಮತೆಯರಿತು ಹೊಂಗೊಳಲೂದಿ
ಕರೆದಿರುವ ವೃಂದಾವನ!

ಮೂಜಗದ ಪರಮ ಪರಮಾಣು ಸುಸ್ಫುರಣೆಯಲಿ
ಚಿಮ್ಮಿರುವ ರಸರಿಂಗಣ
ಸಾಜವಿದು! ತಮಸಿನಾವರ್ತದಲಿ ಪುಟಗೊಂಡ
ಪೂರ್ಣತೆಯ ಪುಣ್ಯಕಿರಣ
ದಾರಿಯಲಿ ಬಿದ್ದಿತ್ತು ಬೆಳ್ದಿಂಗಳು!

ಮುಟ್ಟಿನೋಡಿದೆ ನದನು ಮೂಸಿನೋಡಿದೆನದನು
ನೆಕ್ಕಿದೆನು–ಹಿಡಿತಕ್ಕೆ ಸಿಕ್ಕಲಿಲ್ಲ!
ಬೆಟ್ಟಬಯಲಿನ ಮೇಲೆ ಸುತ್ತ ಬೆಳಕಿನ ಲೀಲೆ
ಸೃಷ್ಟಿಕರ್ತನ ಕೃಪಾಕಟಾಕ್ಷಜಾಲ.

ಕೆ. ಎಸ್. ನರಸಿಂಹಸ್ವಾಮಿ

ಗೃಹಲಕ್ಷ್ಮಿ

ನನ್ನವಳು ನನ್ನೆದೆಯ ಹೊನ್ನಾಡನಾಳುವಳು
ಬೆಳಗುಗೆನ್ನೆಯ ಚೆನ್ನೆ ನನ್ನ ಮಡದಿ;
ಹೊಳೆಯ ಸುಳಿಗಳಿಗಿಂತ ಆಳ ಕಣ್ಣಿನ ಚೆಲುವು
ಅವಳೊಮ್ಮೆ ಹೆರಳ ಕೆದರಿ
ಕಪ್ಪು ಗುರುಳನು ಬೆನ್ನ ಮೇಲೆಲ್ಲ ಹರಡಿದರೆ
ದೂರದಲಿ ಗಿರಿಯ ಮೇಲೆ
ಇಳಿದಂತೆ ಇರುಳ ಮಾಲೆ.

ಕರೆದಾಗ ತೌರುಮನೆ–ನೆನೆದಾಗ ನನ್ನ ಮನೆ-
ಹಳ್ಳಿಯೆರಡರ ಮುದ್ದು ಬಳ್ಳಿಯುವಳು.
ಮುಚ್ಚು ಮರೆಯಿಲ್ಲದೆಯೆ ಅಚ್ಚಮಲ್ಲಿಗೆಯಂತೆ
ಅರಳುತಿಹುದವಳ ಬದುಕು.
ಬಂಗಾರ ದೊಡವೆಗಳ ಬಯಸಿಲ್ಲ ಮನಸಿನಲಿ
ಬಂಗಾರದಂಥ ಹುಡುಗಿ
ನನ್ನೊಡವೆ, ನನ್ನ ಬೆಡಗಿ.

ಹಸುರು ಸೀರೆಯನುಟ್ಟು, ಕೆಂಪುಬಳೆಗಳ ತೊಟ್ಟು
ತುಂಬುದನಿಯಲಿ ಕರೆವಳೆನ್ನ ಚೆಲುವೆ;
ಹಣೆಯನಾಳುವುದವಳ ಕುಂಕುಮದ ನಿಡುಬಟ್ಟು
ಲಕ್ಷ್ಮಿಯವಳೆನ್ನ ಮನೆಗೆ.
ನಮಗಿದುವೆ ಸೊಗಸು ಬದುಕಿನ ಬಣ್ಣಗಳ ಸಂತೆ
ನಮಗಿಲ್ಲ ನೂರು ಚಿಂತೆ;
ನಾವು ಗಂಧರ್ವರಂತೆ.

ತೆಂಗು ಗರಿಗಳ ಮೇಲೆ ತುಂಬು ಚಂದಿರ ಬಂದು
ಬೆಳ್ಳಿ ಹಸುಗಳ ಹಾಲು ಕರೆಯುವಂದು
ಅಂಗಳದ ನಡುವೆ ಬೃಂದಾವನದ ಬಳಿ ನಿಂದು
ಹಾಡುವೆವು ಸಿರಿಯ ಕಂಡು.

ತಾರೆಗಳ ಮೀಟುವೆವು, ಚಂದಿರನ ದಾಟುವೆವು
ಒಲುವೆಯೊಳಗೊಂದು ಸಾವು;
ನಮಗಿಲ್ಲ ನೋವು, ಸಾವು.

ಪ್ರಶ್ನೆಗೆ ಉತ್ತರ

ಒಂದಿರುಳು ಕನಸಿನಲಿ ನನ್ನವಳ ಕೇಳಿದೆನು
ಚೆಂದ ನಿನಗಾವುದೆಂದು-
ನಮ್ಮೂರು ಹೊನ್ನೂರೊ, ನಿಮ್ಮೂರು ನವಿಲೂರೊ
ಚೆಂದ ನಿನಗಾವುದೆಂದು.

ನಮ್ಮೂರು ಚೆಂದವೋ, ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೆ?
ನಮ್ಮೂರ ಮಂಚದಲಿ ನಿಮ್ಮೂರ ಕನಸಿದನು
ವಿಸ್ತರಿಸಿ ಹೇಳಬೇಕೆ?—
ನಮ್ಮೂರು ಚೆಂದವೋ, ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೆ?—ಎನ್ನರಸ,
ಸುಮ್ಮನಿರಿ ಎಂದಳಾಕೆ.

ತೌರೂರ ದಾರಿಯಲಿ ತೆಂಗುಗಳು ತಲೆದೂಗಿ
ಬಾಳೆಗಳು ತೋಳ ಬೀಸಿ;
ಮಲ್ಲಿಗೆಯ ಮೊಗ್ಗುಗಳು ಮುಳ್ಳುಬೇಲಿಯ ಮರಿಸಿ
ಬಳಕುತಿರೆ ಕಂಪ ಸೂಸಿ;
ನಗು ನಗುತ ನಮ್ಮೂರ ಹೆಣ್ಣುಗಳು ಬರುತಿರಲು
ನಿಮ್ಮೂರ ಸಂತೆಗಾಗಿ,
ನವಿಲೂರಿಗಿಂತಲೂ ಹೊನ್ನೂರೆ ಸುಖವೆಂದು
ನಿಲ್ಲಿಸಿತು ಪ್ರೇಮ ಕೂಗಿ—

ಸ್ವಪ್ನಸುಂದರಿ

ಕೋಟಿ ಕನಸುಗಳಿಂದ ಥಳಥಳಿಪ ತಾರೆಯಲಿ
ಸ್ವಪ್ನ ಸುಂದರಿ ಜಗವನಾಳುತಿಹಳು;
ಇರುಳೆಂಬ ಕತ್ತಲೆಯ ಕಡಲು ತುಂಬಿದ ಮೇಲೆ
ಚಂದಿರನ ಹರಿಗೋಲ ಮಾಟಿ ಬಹಳು.

ಪಾಳು ದೇಗುಲದಲ್ಲಿ ಪವಡಿಸಿಹ ಭಿಕ್ಷುಕನ
ಕಣ್ಣ ಮುಂಗಡೆ ಹೊನ್ನ ಸುರಿದು ಬಹಳು,
ಚೆಲ್ಲಿ ಸೂಸುವ ಸಿರಿಯಲಿಳೆಯೊಣ್ಮ ಮಲಗಿರಲು
ಸರ್ಪ ದರ್ಶನವಿತ್ತು ಕುಣಿದು ಬಹಳು.

ರವಿ ಬಂದರೇಕಿಂತು ಓಡುವಳೊ ಚೆಲುವೆ, ಕಾಣೆ!
ಹಗಲಿನಲಿ ಮೌನದಲಿ ಮಲಗಿರುವುದವಳ ವೀಣೆ;
ಜಗದ ಜೀವನಯಂತ್ರ ನಡೆಯುತಿಹುದೆಂದಿನಂತೆ,—
ಅವಳಾಟಪಾಟಗಳು ಮಳೆಬಿಲ್ಲ ಬೇಟದಂತೆ.

ತುಂಗಭದ್ರೆ

ಈ ತುಂಗಭದ್ರೆ–ಹೊಳೆಯಲ್ಲ-ವರುಷದ ಮಗಳು;
ಇವಳೆನ್ನ ದೇವರಾಗಿಹಳು. ಮದರಾಸಿನಲಿ
ಬಿರುಗಾಳಿ ಎದ್ದು ಮೈಸೂರಿನಲಿ ಹತ್ತುಹನಿ
ಮಳೆ ಬಿದ್ದಿತೆನ್ನಿ,—ಇವಳಿಗೆ ನೆಗಡಿ; ಬೀದಿಯಲಿ
ಬೇಸಗೆಯ ಬಿಸಿಲು ಸುಳಿದರೆ ಉಷ್ಣ...ಮನೆಯೊಳಗೆ
ಎಲ್ಲೆಲ್ಲು ಇವಳೆ, ಇವಳದೆ ಮಾತು, ಇವಳಾಟ!
ಈ ತುಂಗಭದ್ರೆ-ಹೊಳೆಯಲ್ಲ-ವರುಷದ ಮಗಳು
ಒಳಗಣ್ಣ ಕಪ್ಪ ಕತ್ತರಿಸುವಳು. ದಿನವೂ ಹಿಡಿದು
'ಅಕ್ಕ, ಅಮ್ಮ' ಎಂದು ಒಲಿಸಿ ಬಿಸಿನೀರೆರೆದು,
ಮೈತುಂಬ ಹೊದಿಸಿ, ಧೂಪವನಿಟ್ಟು, ತೊಟ್ಟಿಲನು

ರಟ್ಟೆ ಬೀಳುವತನಕ ತೂಗಿ, ಮೆಲುದನಿಯಲ್ಲಿ
ಚೋಳ ಕನ್ನೆಯರ ಭಂಗವನು ಪಲುಕಿದರಿವಳು
ಮಲಗುವಂಥವಳೆ, ಈ ಮಾಯಾಂಗನೆ? ಇಣಿಕಿ,
ಹೆಡೆ ಎತ್ತಿ ನಕ್ಕು ನಗಿಸುವಳು.

ವರುಷದ ಮಗಳು—
ಇವಳೆನಗೆ ಸರ್ಪಗಾವಲು. ಹೊಸಿಲ ದಾಟಿದರೆ
ಬಾಗಿಲಿಗೆ ಬಂದು ಕಾಡುವಳು...ಸಂಜೆಯ ತನಕ
ತಾಯ ಬಳಿ ಇವಳ ಅಧಿಕಾರ. ನಡುರಾತ್ರಿಯಲಿ
ನನ್ನೆದೆಗೆ ಇವಳು ದೇವರ ಪದಕ. ಈ ಮಗಳು
ತುಟಿಯ ತೆರೆದರೆ ಸಾಕು ಮೇಲೊಂದು ಸಣ್ಣಕ್ಕಿ,
ಕೆಳತುಟಿಯ ಹಿಂದೆ ಇನ್ನೊಂದು ಹಾಲಿನ ಚುಕ್ಕಿ;
ಬಟ್ಟ ತಲೆ, ದುಂಡು ಮುಖ, ಕಿವಿಯವರೆಗೂ ಕಣ್ಣು,
ಇಷ್ಟಾಗಿ ಶಾಸ್ತ್ರಕ್ಕೆ ಹತ್ತು ಕೂದಲು; ಒಂದು
ಮರುಳು ಜಡೆ, ಅದೂ ಬ್ರಹ್ಮಗಂಟು!

ವರುಷದ ಮಗಳ—
ಧೈರ್ಯವೇ ಧೈರ್ಯ. ಆಗಾಗ ಮುಂಗೋಪದಲಿ
ತಂದೆ ಜರೆದರೆ ಇವಳು ತಾಯ ಬಳಿ ಸೇರುವಳು.
ತಾಯಿ ಬೇಸರದಿಂದ ಮತ್ತೊಮ್ಮೆ ಗದರಿದರೆ
ಅಂಬೆಗಾಲಿಡುತ ಕಂಬನಿಯೊಂದನುರುಳಿಸುತ
ಬಂದು ತಂದೆಯ ತೊಡೆಯನೇರುವಳು. ಸಂಸಾರ
ಒಂದು ಸಾಗರ. ನಾನು ಒಂದು ದಡ. ಮೀನಾಕ್ಷಿ
ಇನ್ನೊಂದು ದಡ. ನಡುವೆ ತುಂಗಭದ್ರೆಯ ಹಡಗು
ಚಂದಿರನ ಹೊತ್ತು ಓಡಾಡುವುದು. ಆ ಧೈರ್ಯ
ನನಗಿಲ್ಲ; ನನ್ನಂಥ ಎಷ್ಟೋ ಬಾಳಿಗೆ ಇಲ್ಲ.
ಒಂದು ದಡ ಗದರಿದರೆ ಮತ್ತೊಂದು ದಡವಿಹುದು,
ಅಲ್ಲಿ ತಂಗಿದರೆ ಜೀವಕ್ಕೆ ಮಂಗಳವೆನುವ
ಒಂದು ನಂಬಿಕೆಯಿಂದ—(ಇಂಥ ಅರಿಯದ ಕಂದ
ಎಲ್ಲಿಂದಲೋ ತಂದ ಒಂದು ನಂಬಿಕೆಯಿಂದ)
ಈ ಜೀವ ಬೆಳಕಾಗಿ ಮುನ್ನುಗ್ಗದೆಯೆ, ನಿಂತು,
ಬಿಟ್ಟ ದಡ ಬಲುದೂರವೆಂದು, ತಂಗಲು ಮುಂದೆ
ಇನ್ನೊಂದು ದಡವಿಹುದೊ, ಇಲ್ಲವೋ ಎನುವೊಂದು
ಸಂಶಯದ ಮುಳ್ಳಿಡಿದ ಕಾಡು ದಾರಿಗೆ ಬಿದ್ದು

ದಿಕ್ಕುಗೆಟ್ಟಿಹುದು. ತಳಮಳಗೊಂಡು ಎದ್ದೆದ್ದು
ಕನವರಿಸುತಿಹುದು ಮುಂದೇನು ಮುಂದೇನೆಂದು
ಏನು ಬಹುದೋ ಎಂದು, ಏನು ಬಹುದೋ ಎಂದು
ಏನು ಬಹುದೋ ಎಂದು, ನೊಂದು, ನೊಂದು.

ನಿರೀಕ್ಷೆ

ಹಗಲಿನಬ್ಬರ ತಣ್ಣಗಾಯಿತು;
ಸಂಜೆ ರಂಜಿಸಿ ತೆರಳಿತು;
ತುಂಬುತಾರೆಯ ಗಗನ ಮೆರೆಯಿತು;
ಚಂದ್ರಲೋಕವೆ ತೆರೆಯಿತು.

ಸುತ್ತು ಬೆಳ್ಳಿಯ ಹಬೆಯನೆಬ್ಬಿಸಿ
ಬೆಳಕು ನುಗ್ಗಿತು ಹಳ್ಳಿಗೆ.
ಹಾದಿ ಬೀದಿಯಲೆಲ್ಲ ಮಲ್ಲಿಗೆ!—
ಹಾಡು, ಜೀವವೆ; ಮೆಲ್ಲಗೆ.

ಆಳಿನೆತ್ತರ ಬೆಳೆದ ಜೋಳದ
ಹೊಲದ ಚೆಲುವಿನ ತೊಡೆಯಲಿ,
ಬಾನಿನೆತ್ತರ ಹಾರಿದೊಲವಿನ
ಕೆಂಪು ಕನಸಿನ ಸುಳಿಯಲಿ,

ದಿಕ್ಕು ದಿಕ್ಕಿಗೆ ಕಣ್ಣ ತಿರುಗಿಸಿ
ಎದುರುಗಾಳಿಯನೆದುರಿಸಿ
ಬೇಲಿಯಾಚೆಗೆ ನೆರಳನೋಡಿಸಿ
ಬಳೆಯ ಜಿಂಕೆಯ ಗದರಿಸಿ,

'ಇನಿಯ ಬಂದನು, ಬಂದ; ಬಂದನೆ?'
ಎಂದು ಕಾದಿಹ ಹೆಣ್ಣಿಗೆ
ಅವನೆ ಚಂದಿರ, ತಾನೆ ಚಂದ್ರಿಕೆ;
ಬೇರೆ ಹುಣ್ಣಿಮೆ ಇವರಿಗೆ.

ಉಂಗುರ

ಗಾಳಿ ಆಡಿದರೆ ಬನವೂ ಆಡಿ
ಹೂವಿನುಂಗುರ;
ಮಳೆ ಮೂಡಿದರೆ ಕೆರೆಯೂ ಆಡಿ
ನೀರಿನುಂಗುರ;

ತಾರೆ ಧುಮುಕಿದರೆ ಬಾನಿಗೆ ಬಾನೆ
ಬೆಳಕಿನುಂಗುರ;
ಕಣ್ಣತುಂಬಿ ಬಹ ನಿದ್ದೆಯು ಬೆರಳಿಗೆ
ಕನಸಿನುಂಗುರ;

ತುಂಬಿದ ಒಡಲಿಗೆ ತಾಂಬೂಲದ ತುಟಿ
ಬೆಂಕಿಯುಂಗುರ;
ಬಾಳ ಕಾಣದಿಹ ಕಲ್ಲ ಕಣ್ಣಿನಲಿ
ಮಣ್ಣಿನುಂಗುರ;

ಒಲ್ಲದ ಹೆಣ್ಣಿನ ಸಲ್ಲದ ಬಯಕೆಗೆ
ಎಲ್ಲೋ ದೂರದ
ತೆನಸನೂಡಿಸುವ ಕೊರಗಿನ ಬೆರಳಿಗೆ
ಆಸೆಯುಂಗುರ.

ಎದೆಯ ಕತ್ತಲೆಯ ಪೊದೆಯಲಿ, ಕಮಲಾ,
ವಜ್ರದುಂಗುರ
ನಿನ್ನ ಕೆನ್ನೆಯಲಿ ಮೆಲ್ಲಗೆ ನನ್ನಾ
ಪ್ರೇಮದುಂಗುರ.

ತರುಣ ಮಿತ್ರನಿಗೆ

ಉಪದೇಶ ಮಾಡಿದರೆ ಕಿವಿಗೊಡುವ ಜನವಲ್ಲ;
ಉಪವಾಸಮಾಡಿದರೆ ಬೆದರುವರು ನಾವಲ್ಲ;
ದೇವರುತ್ಸವದೆಡೆಗೆ ಸಾಗುವರು ನಾವಲ್ಲ;
ಹೊಸ ಕಾಲದುತ್ಸಾಹದಿಂದ ಜೀವನವೆಲ್ಲ

ಹೊಸ ದಿಕ್ಕಿಗೋಡುತಿದೆ ಎಂದು ಹಿಗ್ಗುವೆಯಲ್ಲ-
ಓಟವೇ ಗುರಿಯೆ, ಗಡಿಯಾರ ದೇವರೆ, ನಿನಗೆ?
ಪಯಣದಲಿ ಆಗಾಗ ನಿಂತು ನೋಡುತ ನಡೆವ
ಜನವೆಲ್ಲ ನಿರ್ಗತಿಕರಲ್ಲ! ಓ ತರುಣ ಮಿತ್ರ,
ಒಲಿದಿತ್ತು ನೋಡು. ಚಲಿಸುವುದೆಲ್ಲ: ಭೂಮಿಯೇ
ಸುಸ್ಥಿತಿಯಲುರುಳುತಿದೆ; ಇಲ್ಲಿ ಕಾಣದು ಓಟ.
ಇದು ಕಾಲ ದೇಶಗಳ ಚೆಲುವು ಕಟ್ಟಿದ ತೋಟ.
ಭಾಗ್ಯಮಯವೀ ನೆಲದ ನೋಟ. ಓಡುವುದಿರಲಿ,
ನಡು ನಡುವೆ ನಿಂತು ನೋಡುವ ತಾಳ್ಮೆ ನಿನಗೆ ಬರಲಿ!

ಮುಗಿಲ ದನಿ

೧

ಯಾರು ತೂಗುವ ತೊಟ್ಟಿಲೋ, ಇದು
ಯಾವ ಸೀಮೆಗೆ ಮೆಟ್ಟಿಲೊ,
ಯಾವ ನೋವಿನ ಕಪ್ಪು ಹೂವಿನ
ಕಣ್ಣ ಹನಿಗಳ ಬಟ್ಟಲೊ,
ಯಾವ ಹರುಷದ ಬಾನಸೆರಗಿನ
ಜಿಂಕೆ ನೆರಳಿನ ತೋಟವೊ,
ಯಾರ ಪ್ರೀತಿಯ ಮುರಿದ ಕನಸಿನ
ಕಡೆಯ ನಿಮಿಷದ ನೋಟವೊ!
ಮುಗಿಲೆ, ಮುಗಿಲೆ? ಮುಗಿದ ಹಗಲಿನ ಮುಗಿಯದಾಸೆಯಬಾಗಿಲೆ!

೨

ಬಿಳಿಯ ಲಂಗದ ಪುಟ್ಟ ಮಕ್ಕಳು
ಬೇಲಿಯಾಚೆಗೆ ಸರಿದವು;
ತುಂಬು ನೀಲಿಯ ತಾಯಿ ನಕ್ಕಳು;
ಸಂಜೆ ದೀಪಗಳುರಿದವು.
ಮುಗಿಲು ಕೂಡಿತು, ಮುಗಿಲು ಚದುರಿತು
ಕಾಡು ಗಾಳಿಗೆ ಬೆದರಿತು;
ತುದಿಯ ಹಣ್ಣೆಲೆ ಮಣ್ಣಿಗುದುರಿತು

ಹಸಿರ ಕುರುಳನು ಕೆದರಿತು
ಒಡಲ ತುಂಬಿದ ನೆಲದ ಬೇಗೆಗೆ ಕಡಲು ಬಾನಿಗೆ ಹೊರಳಿತು.

೩

ಏಳಲಾರದ ಮಂಕು ಬಾಳಿಗೆ
ಮುಗಿಲ ರೆಕ್ಕೆಗಳೊಡೆದವು;
ಹಾರಗೊಡದಂತದನು ಬಾನಿಗೆ
ನೆಲದ ಕೈಗಳು ತಡೆದವು.
ಮಿಂಚಿನಾಚೆಗೆ ಗುಡುಗಿನಾಚೆಗೆ
ಸಿಡಿಲ ಕಲ್ಲೆದೆ ಸಿಡಿಯಿತು;
ಹಸಿದ ಮುಖಗಳ ತುಟಿಯ ಬಿಳುಪಿಗೆ
ಮುಗಿಲ ಹಿತವನೆ ನುಡಿಯಿತು.
ಏಳು ಬೀಳಿನ ಕಾಲುದಾರಿಗೆ ಮಿಂಚು ದೀಪವ ಹಿಡಿಯಿತು.

೪

ಸೋನೆ ಸುರಿಯುವ ಮಿಂಚು ಹರಿಯುವ
ಸಿಡಿಲು ಸೀಳುವ ಇರುಳಿಗೆ,
ಬಾನ ಹಣೆಯಲಿ ಬೆಳ್ಳಿ ಕರಗುವ
ನವಿಲ ಬಣ್ಣದ ಹಗಲಿಗೆ,
ಕಣ್ಣ ಬೆಂಕಿಯ ಹೃದಯುದಮೃತದ
ವೀರ ಮಾತೆಯ ಕರುಣೆಗೆ,
ಬಾಳಿನಾಸೆಗೆ ಹಾಲನೆರೆಯುವ
ಭಾವಗೀತೆಯ ಸ್ಮರಣೆಗೆ.
ಮುಗಿಲೆ, ಮುಗಿಲೆ! ನೀನು ಬಾಗಿಲೆ? ಮುಗಿಯುದಾಸೆಯ **ಬಾಗಿಲೆ?**

ಕವಿ—ವಿಜ್ಞಾನಿಗೆ

ಬೇಡ, ದಮ್ಮಯ್ಯ! ಓ ವಿಜ್ಞಾನಿ,
ಈ ಅಲರ ಪಕಳೆಯನು ತೂಗದಿರು ನನ್ನೆದುರು
ನಿನ್ನ ಅತ್ಯಾಧುನಿಕ ತ್ರಾಸಿನಲಿ;
ಹೇಳದಿರು ಅದರ ನಿರ್ದಿಷ್ಟ ಭಾರವ ನನಗೆ
ನಿನ್ನ ಮೆಟ್ರಿಕ್ ತೂಕದಲ್ಲಿ
ದಶಾಂಶ ಚುಕ್ಕಿಯು ಬಲಗಡೆಗೆ
ಪಂಚಮಸ್ಥಾನಪರ್ಯಂತ ಭಾಗಿಸಿ ಸರಿಮಾಡಿ!
ದಮ್ಮಯ್ಯ! ಬೇಡ, ಓ ವಿಜ್ಞಾನಿ,
ನಿನಗೆ ನನ್ನಾಣೆ!

ಬೇಡ ಬೇಡೆನೆಗೆ ನೀ ಕೊಡಬೇಡ ಲೆಕ್ಕವನು—
ಈ ಗುಲಾಬಿಯಲಿ ಕಸದಂಶವಿಷ್ಟು,
ನೀರಿಷ್ಟು, ಇಂಥಿಂಥ ರಸಾಯನಗಳಿಷ್ಟಿಷ್ಟು
ಎಂದು ಶತಾಂಶ ಭಾಷೆಯಲಿ!
ರಸವೆ ಮೈವೆತ್ತು ಬಂದಿದೆಯೆಂದು ನಾನಿದಕೆ
ಸ್ತೋತ್ರವೊಂದನು ಸಮೆಯುತಿರೆ,
ತರಬೇಡ ನಿನ್ನ ಲೆಕ್ಕವನು—
ನನಗೆ ದುಕ್ಕವನು.

ಹಸು ಕರುವ ನೆಕ್ಕುತ್ತೆ ನಿಂತಾಗ
ನಾನದರ ವಾತ್ಸಲ್ಯಕ್ಕೆ ಮುಗ್ಧನಾಗಿ ಅರೆಮುಗಿದ ಕಣ್ಣಾಗಿರಲು,
ತಿವಿದು ಕಿವಿಯಲಿ ನಿನ್ನ ಸಂಶೋಧನೆಯ ಫಲಿತಾಂಶ ಶಲ್ಯವನು
ಹೇಳದಿರು, ವಿಜ್ಞಾನಿ,
"ಈ ಕರುವ ಮೈಯ ಉಪ್ಪಿನ ರುಚಿಗೆ
ನೆಕ್ಕುತಿಹುದೀ ತಾಯಿ" ಎಂದು;
"ಕರುವಿನಾ ಮೈಯ ಒಂದೊಂದು ಚದುರಿಂಚಿನಲಿ
ದಿನವೊಂದರಲಿ ಹಸುವಿಂಗೆ ಒಂದೌಂಸಿನಲಿ
ಇಂತಿಷ್ಟು ಲಕ್ಷದಂಶದ ಉಪ್ಪು ದೊರೆವುದು"ವೆನಗೆ
ಹೇಳಬೇಡವೋ, ನಮೋ ನಿನಗೆ!

ಹಾ! ಬಂದೆಯಾ, ವಿಜ್ಞಾನಿ?
ಏಕಾಂತದಲಿ ನಾನೆನ್ನ ನಲ್ಲೆಯನು ಚುಂಬಿಸಿರೆ
ತಂದೆಯಾ ನಿನ್ನ ಸೂಕ್ಷ್ಮಾತಿಸೂಕ್ಷ್ಮಯಂತ್ರವನು?
ಹಚ್ಚದಿರು ನಮಗದನು;
ನಮ್ಮ ಪ್ರೇಮದ ಭರವನಳೆದು,
"ಇದೊ ನಿನ್ನ ಪ್ರೇಮ ನೂರೈವತ್ತನಾಲ್ಕರ ಮೇಲೆ
ಆರು ಶತಸಹಸ್ರಾಂಶವಿದೆ" ಎಂದೆನಗೆ ಉಸಿರದಿರು!

ಬಣ್ಣ ಬಣ್ಣದ ಚಿಟ್ಟೆಯೊಂದ
ಕಬ್ಬಿಣದ ಘನದ ಮೇಲಿರಿಸಿ,
ಆರುಮಣ ಏಳು ಸೇರಿನ ಸುತ್ತಿಗೆಯಿಂದ
ಸೆಕುಂದಿಗೆ ಇಪ್ಪತ್ತೊಂದೂವರೆ ಫೂಟಿನ ವೇಗದಿಂದ
ಕುಟ್ಟಿದರೆ,
ಆ ಚಿಟ್ಟೆಯ ಪ್ರಾಣ
ಒಂದು ಸೆಕುಂದಿನ ಆರುನೂರ ಎಪ್ಪತ್ತಮೂರಂಶದಲಿ
ಹಾರಿಹೋಗುವುದೆಂದು ಹೇಳಬೇಡ,
ಅರಗಿಸಲಾರೆನೀ ಜ್ಞಾನ
ನಾನು ನಿತ್ರಾಣ.

ಬೇಡ ಬೇಡ!
ನನಗೆ ಡಾರ್ವಿನನ ಪರಿಣಾಮವಾದವನು ತಿಳಿಹೇಳಬೇಡ.
ನಾನು ಕಳೆದುಕೊಂಡ ಬಾಲದ ಸ್ಥಳವ ಸಂದೇಹದಿಂ
ಮುಟ್ಟಿನೋಡುವ ಹಾಗೆ ಮಾಡಬೇಡ!

ಹಿಡಿವೆ ನಿನ್ನ ಕಾಲ:
ನನ್ನನೆಳೆದು ಫ್ರಾಯ್ಡ್‌ಥಿಯರಿಯ ಭೂತಗನ್ನಡಿಯ ಎದುರು ನಿಲಿಸಿ
ಪಶುವಿನ ಪಿಶಾಚಿಯನು
ನನ್ನ ಮುಖದಲಿ ನಾನೆ ಕಾಣುವೊಲು ಮಾಡಬೇಡ,
ಓ ವಿಜ್ಞಾನಿ,
ನಾನಿನ್ನೂ ದುರ್ಬಲ ಮನುಷ್ಯಪ್ರಾಣಿ!

ವಿಶ್ವದ ಸಮಸ್ಯೆಗೆ ನೀನುತ್ತರವ ಬಲ್ಲೆ,
ನನಗೆ ಗೊತ್ತು;
ಅದಕಾಗಿ ನಿನಗೆ ಧನ್ಯೋಸಿ ಧನ್ಯೋಸಿ ಎಂಬೆ,
ಅಷ್ಟಕ್ಕೆ ಬಿಡು ನನ್ನ ಬೇಡಿಕೊಂಬೆ.

ಆ ನಿನ್ನ ಭೌತ ಶಾಸ್ತ್ರದ ಮಾರುದ್ದ ಜಟಿಲ ಬೀಜಾಕ್ಷರಾಬದ್ಧ
ಸೂತ್ರಗಳ ಅಂಕುಡೊಂಕಿನ ಮಾಲೆಯನ್ನು
ತೊಡಿಸದಿರು ನನ್ನ ಕೊರಳಿಂಗೆ;
ನಾ ಬರಿಯ ಪೆಚ್ಚು ಕವಿ, ಅಜ್ಞಾನಿ,
ಈ ಬ್ರಹ್ಮಸೃಷ್ಟಿಯೇ ಸಾಕು ನನಗೆ
ಬೆರಗಿನಲಿ ಬಾಯಿ ತೆರೆಸೆ;
ನಿನ್ನ ಸೂತ್ರವ ಕಂಡು ದಿಙ್ಮೂಢನಾದೆನ್ನ ತೆರದ ಬಾಯಿ
ಮತ್ತೆ ಮುಚ್ಚದು, ಒಮ್ಮೆ ಮಾಡಿಬಿಡು ಮಾಫಿ,
ನಾನು ಬಡಪಾಯಿ!

ನನ್ನ ಗೋರಿಯ ಮೇಲೆ

ಇಲ್ಲೊಬ್ಬ ಕವಿಯಿದ್ದನವನ ಜೀವದ ಬಯಕೆ
ಕಾರ್ತವೀರ್ಯನ ತೆರದಿ ಕೈಯ ಸಾವಿರವೆತ್ತಿ
ನಿಲುಕದಿರುವೊಡವೆಗಳ ಕಡೆಗೆ ನೀಳ್ಕರಿಸುತ್ತೆ
ಪ್ರತಿಕೂಲದೈವಪರಶುವಿಗೆ ಕೈತುತ್ತಾಗಿ
ತೀರಿದುದು: ಪ್ರಥಮ ಶರದುದಯದಲಿ ಮುಗಿಲೊಂದು
ನೀರಾಗಿ ಸುರಿವುದಕೆ ತಂಪು ಸಾಲದೆ, ಮತ್ತೆ
ನೇರಾಗಿ ಸುರಿವುದಕೆ ಭಾರ ಸಾಲದೆ, ಗಾಳಿ
ಆವಾವ ಕಡೆಗೆ ತೂರುವುದತ್ತ ಹಾರುತಲಿ,
ಒಂದರಿಂದೆರಡಾಗಿ ಹತ್ತಾಗಿ ನೂರಾಗಿ
ಚೂರಾಗಿ ಸಾರಿ ಹರಿಹಂಚಾಗಿ ಹೋಗುವಲು
ಅವನ ಜೀವನವಾಯ್ತು; ಕೊನೆಗೊಂದು ದಿವಸದಲಿ,
ವಿಧಿಗೆ ತೋರಿಸಿದ ಕರ್ಪೂರದಾರತಿಯೆನಲು
ಅವನ ಬಾಳಾರಿತ್ತು; ಗಂಧೈಕ ಶೇಷನಾ-
ಗುಳಿದನಾತನು ಬಳಿಕ ಕೆಲದಿನಂಗಳವರೆಗೆ
ಎದೆಯ ನೆನೆಯುವರ ಮನವೆಂಬ ಮಾರುತಪಥದಿ—
ಕಡೆಗೆ ಮರವೆಯ ಕೊಳದ ತಳವ ಸೇರಿದನಾತ.

ನುಸಿಗೆ

ಒಡ ಮುನಸಿಪಾಲಿಟಿಗೆ ಒಡಹುಟ್ಟಿದವ ನೀನು!
ನಿನ್ನ ಗಾನದ ಸಿರಿಗೆ ಕರುಬಿ, ನಾಚಿಕೆಗೊಂಡು
ಕಾಡಾಡಿಯಾಗಿ ತಲೆಮರೆಸಿಹುದು ಪಿಕವೊಂದು!
ನಾಗರಿಕ ನರನಾರಿವದನಕಮಲದ ಜೇನು
ಸವಿದು ಜೇಂಕರಿಸಿ ನಲಿವಾರಡಿಯೆ ನೀನೇನು?
ನಿದ್ದೆವೆಣ್ಣಿನ ಕೈಯ ಬೀಣೆ! ನಿನ್ನಯ ದನಿಯ
ಮಾಧುರಿಗೆ ಮಾನವನು ಮೈಮರೆತು ಮನದಣಿಯ
ತಾಳವಿಕ್ಕುವ ಭರಕೆ, ಸೂಕ್ಷ್ಮ ಜೀವಿಯೆ, ನೀನು
ನಜ್ಜುಗುಜ್ಜಾಗುವುದು ಇಹುದು,—ಎಂತಹ ದುಗುಡ!
ಓ ನುಸಿಯೆ, ಪ್ರೇಮಗಾನದ ಸಸಿಯೆ, ಸಂತಸಿಯೆ!
ನಿನ್ನನರಿಯದೆ ಜರೆವ ಮಾನವನೆ ಕಡುಕಿವುಡ!
ಇದಕೊ! ನಿನಗೆನ್ನ ನೆತ್ತರ ಕಾಣ್ಕೆ, ಹಸಿಬಿಸಿಯೆ!
ಬೇಡುವರ ರೇಡಿಯೋ ನೀನು! ಬಡವರ ಬಂಧು!
ಹರಕುಗೋಡೆಯ ವಾಸಿ! ನಿನಗೆ ನಮಿಸುವೆ ನಿಂದು!

ಹೊಸ ಹಾಡು

೧

ನವಭಾವ–ನವಜೀವ–ನವಶಕ್ತಿ ತುಂಬಿಸುವ
ಹಾಡೊಮ್ಮೆ ಹಾಡಬೇಕು;
ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ
ವೀರಧ್ವನಿಯೇರಬೇಕು;
ಜಾತಿ–ಕುಲ–ಮತ–ಧರ್ಮಪಾಶಗಳ ಕಡಿದೊಗೆದು
ಎದೆಹಿಗ್ಗಿ ಹಾಡಬೇಕು;
ಯುಗಯುಗಗಳಾಚೆಯಲಿ ಲೋಕಲೋಕಾಂತದಲಿ—
ಆ ಹಾಡು ಗುಡುಗಬೇಕು;

೨

ಉನ್ನತೋನ್ನತ ಘನಹಿಮಾದ್ರಿ ಶಿಖರವನೇರಿ
ಹಾಡಲ್ಲಿ ಹಾಡಬೇಕು;
ಹಾಡುನುಡಿಗುಂಡುಗಳು ಹಾರಿ ದಶದಿಕ್ಕಿನಲ್ಲಿ
ಭಯವ ಬೆನ್ನಟ್ಟಬೇಕು;
ಗಂಡೆದೆಯ ಗರ್ಜನೆಗೆ ಮೂಹತ್ತು ಮೂಕೋಟಿ
ಕಲಕಂಠ ಬೆರೆಸಬೇಕು;
ಭೂವ್ಯೋಮಾಂತರಾಳದಲಿ ನಭಚಕ್ರ ಗೋಳದಲಿ-
ಮಾರ್ದನಿಗಳೇಳಬೇಕು.

೩

ಜಡನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲಿ
ಬಾನು ಭುವಿ ಬೆಳಗಬೇಕು;
ನಡೆನುಡಿಗಳೆಡೆಯಲ್ಲಿ, ಪದತಾಳ ಗತಿಯಲ್ಲಿ
ಕ್ರಾಂತಿಕಿಡಿ ಕೆರಳಬೇಕು;
ಅಳಿದುಳಿದ ಭವ್ಯತೆಯ ರುದ್ರಶಿಖಿಯುಜ್ಜ್ವಲಿಸೆ
ಹಾಡು ತಿದಿಯೊತ್ತಬೇಕು;
ದಿವಸ ದಿವಸಗಳಿಂದ ಮನದಿ ಮರುಗತಲಿದ್ದೆ-
ಹಾಡಿಂತು ಹಾಡಬೇಕು.

೪

ಎನ್ನ ಪಾಡಿಗೆ ದುಃಖ ತಾಯಿಗಿದು ಹಿರಿಮರುಕ.
ನಾನಿದನು ಸಹಿಸಲೆಂತು?
ಎನ್ನ ಕೃತಿಯಪಮಾನ ದೇವಿಗಿದೆ ದುಮ್ಮಾನ,
ನಾನಿದನು ನೋಡಲೆಂತು?
ಜಯ ಜನನಿ! ಶಿರವೆತ್ತಿ ವೀರಭರವಸೆಯಿಂದ
ಹೊಸ ಹಾಡ ಕೇಳಿ ನೋಡು!
ಇದೊ ಮೊದಲು, ಮುನ್ನಿಲ್ಲ-ಮುಗಿದುದಂದಿನ ಪಾಡು,
ಹೊಸತಿಂದು ಹೊಸತು ಹಾಡು!

ಯಾಂವ ನನ್ನ ಕೇಳಾಂವ?

ಯಾಂವ ನನ್ನ ಕೇಳಾಂವ?
ಯಾಂವ ಯಾಂವ ಯಾಂವ ಯಾಂವ
ಯಾಂವ ನನ್ನ ಕೇಳಾಂವ? ॥ ಪ ॥

ಮನಸಿಗೆ ಬಂದರ ಬರಿಯಾಂವ
ಮನಸಿಗೆ ಬಂದರ ಹಾಡಾಂವ–ನನ
ಮನಸಿಗೆ ಬಂದರ ಕುಣಿಯಾಂವ
ಯಾಂವ ನನ್ನ ಕೇಳಾಂವ? ॥ ಅ.ಪ. ॥

ಗಾಳಿ ಸುಂಯ್ ಸುಂಯ್ ಅನ್ನಿರವಲ್ದು
ಬೆಳಕು ತನ್ಕೈ ಚಾಚಿರವಲ್ದು
ಹಾಳು ಕತ್ತಲಿ ಇನ್ನೂ ಮಬ್ಬಿನಾಗ
ತೂಗಾಡ್ತಿದ್ದರ ತೂಗಾಡ್ತಿರಲಿ
ಯಾಂವ ನನ್ನ ಕೇಳಾಂವ? ॥೧॥

ತೊಟ್ಟಿಲ ಕೂಸು ಆಡತಿರಲಿ
ತಾಯಿ ಜೋಗುಳ ಹಾಡತಿರಲಿ
ಹಕ್ಕಿದನಿಗೆ ದನಿಗೂಡಿಸಿದರು
ನಾಯಾಕ ನನ್ಹಾಡ ಹಾಡಲಿ?
ಯಾಂವ ನನ್ನ ಕೇಳಾಂವ! ॥೨॥

ತುಂಬಿ ಹೂವಿಗೆ ಮುತ್ತಿಡುತಿರಲಿ
ಸವಿದುಟಿ ಜೇನ ಕುಡಿಯುತ್ತಿರಲಿ
ಹುಂಬನ್ಹಂಗ ಮೈಯ್ಯಮರೆತು
ಗುಂಯ್ ಗುಂಯ್ ಗುಂಯ್ ಗುಂಯ್ ಅನ್ನುತ್ತಿರಲಿ
ಯಾಂವ ನನ್ನ ಕೇಳಾಂವ? ॥೩॥

ಹೆಣ್ಣು ಗಂಡು ಕೂಡಿಕೊಂಡು
ಸಣ್ಣಗೂಡ ಕಟ್ಟಿಕೊಂಡು
ತಮ್ಮ ಬಾಳು ಶಾಶ್ವತವೆಂದು

ಹಾಡತಿದ್ದರ ಹಾಡತಿರಲಿ
ಯಾಂವ ನನ್ನ ಕೇಳಾಂವ? ॥೪॥

ಬರುವುದು ಬರಲಿ ಬಿಡುವುದು ಬಿಡಲಿ
ನ್ಯಾನ್ಯಾಕ್ಯೋಚನೆ ಮಾಡಲಿ?
ಪರಮನ ಕರುಣೆಯು ಕರಗತವಾಗುತ
ಬಾಳು ನಂದನವಾಗಲಿ
ಆಗ ನಾನು ಹಾಡಾಂವ
ಆಗ ನಾನು ಬಾರಿಯಾಂವ
ಆಗ ನಾನು ಕುಣಿಯಾಂವ ॥೫॥

ಯಾಂವ ನನ್ನ ಕೇಳಾಂವ
ಯಾಂವ ಯಾಂವ ಯಾಂವ ಯಾಂವ
ಯಾಂವ ನನ್ನ ಕೇಳಾಂವ? ॥ ಪ ॥

ರಾಮಚಂದ್ರ ಕೊಟ್ಟಲಗಿ

ನಿಃಶ್ವಾಸ

ಭೂ ವ್ಯೋಮ ಪಾತಾಳ
ಏನು? ನಿಮ್ಮದೇಕ ತಾಳ
ಹೆಜ್ಜೆಗೊಮ್ಮೆ ಪ್ರಳಯ ಲೀಲೆ
ಗೆಜ್ಜೆದನಿಗೆ ಸಿಡಿಲ ಮಾಲೆ
ಮುಗಿಲಿನೊಡಲನುರಿಸಿ ಬಂತು
ಭೂಮಿ ಎದೆಯ ಬಿರಿಸಿ ಬಂತು
ಮೂಜಗದೀ ಪ್ರಳಯವೆಲ್ಲ
ಜನ ಮನವನು ಸಹಿಸಿತಲ್ಲ

ಮುಗಿಲಿನಲಿ ಸಿಡಿಲು ಮಿಂಚು
ಪ್ರಾಣಕಾಗಿ ಹಾಕಿ ಹೊಂಚು
ನೆಲವದೆಲ್ಲ ತಪ್ತ ಕೆಂಡ
ಭೋರ್ಗರೆವ ಗಾಳಿ ಬಂಡ-
ಹೂಡಿ ನಮ್ಮ ತುತ್ತವೆಂದು
ಪ್ರಳಯ ರೂಪ ಧರಿಸಿ ನಿಂದು
ವಿಶ್ವದೆಡೆಗೆ ಕೊಳ್ಳಿಯಿಟ್ಟು
ನಲಿವುದೇನು ನಿಮ್ಮ ಗುಟ್ಟು

ಕೈಯ ಬಾನಿಗೆತ್ತಿ ನಾವು
ಕರೆಯುತಿಹುದು ಕಾಣದೇ
ಜನ್ಮವಿತ್ತ ತಂದೆ ಗಿಂದು
ನಮ್ಮ ಮೊರೆಯು ಕೇಳದೇ?
ಉತ್ತಿ ಬಿತ್ತಿ ಬೆಳೆವುದೇನು?
ಬಸಿರ ಬಯಕೆ ಭೂಮಿಗಿಲ್ಲ!
ನಮಗೆ ಬಂದ ಭಾಗ್ಯವೇನು?
ನೀರಾದರು ನೆತ್ತರಲ್ಲ!

ಭೂಮಿಗೊಮ್ಮೆ ಕಾಲನೂರಿ
ನಿಲ್ಲಲೆಮಗೆ ಇಲ್ಲ ತ್ರಾಣ!

ಗಾಳಿ ವೇಗ ಮೀರಿಸಿಹುದು
ಹಾರುತಿರುವ ನಮ್ಮ ಪ್ರಾಣ!
ಇಂತು ಎಲ್ಲ ಮೇಳವಿಸಿರೆ
ಇಲ್ಲ ಬದುಕುವಾಸೆಯು
ಕೊನೆಯ ಗಂಟೆ ಕೇಳುವನಕ
ಸುಡಲಿ ಬಾಳ ಮೂಸೆಯು.

ಲೀಲೆ

ಬೆಳ್ಳಿ ಚೊಗಚೆಯ ಚಂದ್ರ ಮುಗಿಲ ಮಂಟಪದಲ್ಲಿ
ತಾರೆಗಳ ಬಳಗದಲಿ ರಂಜಿಸಿರಲು ॥
ಗಂಧವಾಹಕನಿಂದು ಕುಸುಮವತಿಯರನೆಲ್ಲ
ಚಂದಿರನ ಸ್ವಾಗತಕೆ ಬಳುಕಿಸಿರಲು ॥

ಮುಗಿಲ ಮಾನಸದಲ್ಲಿ ರಾಜಹಂಸಗಳಂತೆ
ತಿಳಿಮೋಡಗಳು ಮೆಲನೆ ತೇಲುತಿರಲು ॥
ಮೇದಿನಿಗೆ ಮೊದಲಾಗಿ ಹುಲ್ಲಿಗೂ ಕಡೆಯಾಗಿ
ಎದೆದುಂಬಿ ಹಿಡಿಸದಲೆ ನಗುತಲಿರಲು ॥

ಹೊಚ್ಚ ಹೊಸ ಪಲ್ಲವದ ಬೆಚ್ಚನೆಯ ಮನೆಯಲ್ಲಿ
ಈ ಪಕ್ಷಿ ದಂಪತಿಗದೆಂಥ ನಿದ್ರೆ ॥
ಮೈ ಕೊರೆವ ಮಾಗಿಯೂ ಮಧುಮಾಸವಾಗಿರಲು
ನಲ್ಲೆ–ನಲ್ಲರಿಗಾರ ಯೋಗ ಮುದ್ರೆ ॥

ತಂಗದಿರ ಹೊಳೆದಾಗ ಗಾಳಿಯಲೆ ಸುಳಿದಾಗ
ಜೀವ ಕುಮುದಿನಿ ಮೆಲ್ಲನರಳುತಿತ್ತು ॥
ಯಾರ ಲೀಲೆಯ ಕನಸು ಎಂಬ ಭಾವನೆ ಮೂಡಿ
ನಸುಗುಂದಿ ಕಳೆ ಹೀನವಾಗುತಿತ್ತು ॥

ಎಲೆ ಗಾಳಿ! ಉಡುಗಣವೆ! ಪಕ್ಷಿ ದಂಪದಿಗಳೇ
ಅರಳಿದಿರಿ ನೀವಾರ ಕನಸದಾಗಿ ॥
ಒಂದು ಕ್ಷಣವಾದರೂ ಕನಸುಗಳ ಕನಸಿಗನೆ!
ಮೂಡಿ ಬಾ! ಎಳೆ ಬಿದಿಗೆ ಚಂದ್ರನಾಗಿ ॥

ಸುಖ—ದುಃಖ

ಒಮ್ಮೆ ಸುಖದ ಗಳಿಗೆ ಬಂದು
ಪ್ರೀತಿಯಿಂದ ಬಳಿಗೆ ನಿಂದು
ಅಂಗಲಾಚಿ ಬೇಡಿತೆನ್ನ
ಮಡದಿಯಾಗಿ ವರಿಸು ಎಂದು.

ಸುಖದ ಓಂ ಭವತಿ ಕೇಳಿ
ದುಃಖ ಕ್ರುದ್ಧ ಮುದ್ರೆ ತಾಳಿ
ಕೂಗಿತೊದರಿ 'ಎಲಾ ಚೌಡಿ,
ಇವರು ಕಟ್ಟಬೇಕೆ ತಾಳಿ?'

"ನೀನು ಅವಳು ಅಕ್ಕತಂಗಿ
ಒಂದೆ ಗಿಡದ ಎರಡು ಟೊಂಗಿ
ಭೇದ ಭಾವ ಮಾಡಬೇಡಿ"
ಮೆಲ್ಲನೆಂದೆ ಉಗುಳು ನುಂಗಿ.

ಗೆಣೆಯ, ನಿನ್ನ ಗಂಟು ಹಾಕಿ
ಬ್ರಹ್ಮ ಬರೆದ ವಿಧಿಯ ಲೇಖಿ
ಮರೆತೆಯೇನು ಇಷ್ಟರಲ್ಲಿ
ಮೊದಲು ತೀರಲೆನ್ನ ಬಾಕಿ.

ಸುಖದ ರಟ್ಟೆ ಹಿಡಿದು ನೂಕಿ
ಬಾಗಿಲಿಕ್ಕಿ ಅಗಣಿ ಹಾಕಿ
ಗದರಿ ಹೇಳಿತೆನಗೆ ದುಃಖ
"ಬೇಡ ಬೇರೆ ಹೆಣ್ಣ ಷೋಕಿ"

ಮೋಡ

ಹುಬ್ಬು ಹಾರಿಸುತಿಹುದು ಮಿಂಚಿನಲಿ ಮೋಡ-
ಶೃಂಗಾರ ಚೇಷ್ಟೆಯಿದು ಯಾರ ಕೂಡ?

ಬಿಳುಪಾಯ್ತು, ಕಪ್ಪಾಯ್ತು, ಕೆಂಪಾಯ್ತು ಮೋಡ!
ಕ್ಷಣಕೊಂದು ರೂಪಾಯ್ತು-ಯಾರ ಕೈವಾಡ?

ಮುಳುಗುತಿವೆ, ಮೂಡುತಿವೆ, ಓಡುತಿವೆ ಮೋಡ!
ಸೇರಲಿಕೆ ಹೊರಟಿಹವು ಯಾವ ನಾಡ?

ಗುಡುಗುತಿದೆ, ಗದರುತಿದೆ, ಕಂಪಿಸುತ ಮೋಡ-
ಈ ಸಿಂಹ ಕೆರಳಿಸಿದನದಾವ ಬೇಡ?

ಬಯಲ ಕಡಲಿನ ಹಡಗೊ ಮೀನವೋ ಮೋಡ?
ಕಟ್ಟಿಹವೊ ತಾರೆಗಳು ಗೊಂಬೆಯಾಟಕೆ ಗೂಡ?

ಶಶಿ ತಾರೆಯರ ಕಣ್ಣುಮುಚ್ಚಾಲೆ ನೋಡ-
ಆಗಿಹುದು ಅಡಗಲಿಕೆ ಕರುಮಾಡ ಮೋಡ!

ಕರಗಿತದೊ, ಕರಗಿತದೊ, ಸುರಿಯುತಿದೆ ಮೋಡ!
ಕಂಡು ಕನಿಕರ ಬಂತೆ ಈ ಜಗದ ಪಾಡ?

ಕವನ ಜನನ

ಬಗೆಯ ಬಾನಲಿ ಬಣ್ಣವೇಳರ
ಬಿಲ್ಲ ದಿಬ್ಬಣ ಸಾಗಿದೆ
ಎಲ್ಲೊ ಒಂದೆಡೆ ಭಾವ ಬುದ್ಧಿಯು
ಹಸೆಗೆ ನಿಲ್ಲುವ ಹಾಗಿದೆ

ನೀಲಮೇಘದ ಮೇಣೆ ನೂರಿವೆ
ಹೊತ್ತು ಮಿಂಚಿನ ಹೆಂಗಳ
ಎನಿತೊ ದಿನಗಳು ಕಳೆದ ಮೇಲಿದೊ
ಮತ್ತೆ ಮಸಗಿದೆ ಮಂಗಳ

ಹಿಂದೆ ಮುಂದೆಡಬಲದಿ ನಡೆದಿದೆ
ರಜತ ರಶ್ಮಿಯ ಲಾಸ್ಯವು
ಮೇಣೆ ಮೇಣೆಗೆ ಇಣುಕಿ ನೋಡುವ
ಮಿಂಚಿನಂಗನೆಯಾಸ್ಯವು

ಬಣ್ಣಬಣ್ಣದ ಹಕ್ಕಿಗಳ ಬಾ-
ವುಟಗಳೇಸೋ ನಭದಲಿ
ಚೆಂದವೆಲ್ಲೆಡೆ ಚೆಲ್ಲವರಿದಿದೆ
ಶೋಭೆ ಸೇರಿದೆ ಶುಭದಲಿ

ಹೊಳೆವ ತುಂತುರ್ವನಿಯೆ ಅಕ್ಷತೆ
ಸಾಂಧ್ಯಸ್ವರ್ಣಮೆ ಅರಿಶಿನ
ಹೊಂಗದಿರ ಮಾಂಗಲ್ಯ, ಸಂಜೆಯು
ಕೆಂಪು ಕುಂಕುಮ ಚಂದನ

ಬಗೆಯ ಬಾನಲಿ ಬಣ್ಣವೇಳರ
ಬಿಲ್ಲ ದಿಬ್ಬಣ ಸಾಗಿದೆ
ಎಲ್ಲೊ ಒಂದೆಡೆ ಭಾವ ಬುದ್ಧಿಯು
ಹಸೆಗೆ ನಿಲ್ಲುವ ಹಾಗಿದೆ

ಬಯಲಾಟ

ಬಯಲಾಟ ನೋಡು
ಬಯಲಾಟ ನೋಡು
ಬಯಲಾಟ ನೋಡು ಗೆಳೆಯ
ಇದು ಎಂಥ ಆಟ ಗೆಳೆಯ!
ಇದು ಇಂಥ ನೋಟ ಕೆಳೆಯ!

ಆ ಬೆಟ್ಟ ಅಟ್ಟ
ಕುಣಿಯುವನು ಅಟ್ಟ-
ಹಾಸದಲಿ ದಿಟ್ಟ
ಜಗಜಟ್ಟಿ ಮೇಘರಾಜ

ಮೋಡಗಳ ಉಟ್ಟ
ಮಿಂಚುಗಳ ತೊಟ್ಟ
ಮೈಚಳಿಯ ಬಿಟ್ಟ
ನಾಟ್ಯರ್ಷಿ ಮೇಘರಾಜ

ಕುಣಿಯುವನು ಥಕ್ಕ
ಥಕಥೈ ಕಡ್ತಕ
ಧಿಕ್ತಾ ಕಡ್ತಕ
ಗತ್ತಿಂಗೆ ಮೇಘರಾಜ

ನಡುಗಿಸುತ ದಿಕ್ಕ
ಕಾಲಡಿಗೆ ಸಿಕ್ಕ
ಬೆಟ್ಟಗಳ ಸೊಕ್ಕ
ಮುರಿವಂತೆ ಮೇಘರಾಜ

ಗುಡುಗೇ ಮೃದಂಗ
ನಾದದ ತರಂಗ
ಸೂಸಿವೆ ದಿಗಂಗ
ಪುಳುಕಿಸುವೆ ಹಾಗೆ ಜವದಿ

ನಭದಂತರಂಗ
ಕಂಪಿಸುವ ಪಾಂಗ
ತೋರುತ್ತ ಚೆಂಗ-
ನಿಳಿಯಿತ್ತು ಉಲ್ಕೆ ನಭದಿ

ನುಡಿಸಿದರೆ ಗುಡುಗು
ಕೆರಳಿದರೆ ಸಿಡಿಲು
ಝಳಪಿಸಲು ಕಡುಗ-
ಮ್ಮೈಮುರಿವ ಮಿಂಚಿನಲಗು

ಇವ ಹೆಜ್ಜೆಯಿಡಲು
ಈ ಪೊಡವಿಯೊಡಲು
ಸಂತಸದ ಕಡಲು
ಆನಂದ ಹೊರಗು ಒಳಗು

ಹಿಮ್ಮೇಳ ಬಾನ
ಭೇದಿಸುವ ಧ್ವಾನ
ಪುಲಕಿತವು ಪ್ರಾಣ
ಕತೆಗಾರನೆಲ್ಲಿ, ಕಾಣ!

ಈ ಯಕ್ಷಗಾನ
ಬಣ್ಣಿಸುವ ಜಾಣ
ಮುಗಿಸಯ್ಯ ಕವನ
ನಿನಗೆಲ್ಲಿ ಮುಂದೆ ತ್ರಾಣ?

ಬಾ ದುಃಖವೆ !

ಬಾ ದುಃಖವೇ ನನ್ನ ಬಗೆವಳ್ಳಿಯನು ಕೊರೆವ ಕೀಟವಾಗಿ
ಬಾ ದುಗುಡವೇ ನನ್ನ ಬಾಳಿನಮೃತಕೆ ಕಾಳಕೂಟವಾಗಿ
ಬಾ ವ್ಯಸನವೇ ನನ್ನ ಮನದ ಮಂದಿರಕೆ ಅಗ್ನಿ-ಸ್ಫೋಟವಾಗಿ
ಬಾರೆ ಬೆಂಕಿಯ ಮಗಳೆ ಬಾ ಘೋರ ಮೃತ್ಯುವಿನ ಬೇಟವಾಗಿ !

ದಯಬೇಡ ದುಃಖವೇ, ದಹಿಸು ನನ್ನವಗುಣದ ಖಾಂಡವವನು
ನನ್ನ ಕ್ಲೈಬ್ಯವ ಸುಟ್ಟು ಎದೆಯ ರಂಗದೊಳಾಡು ತಾಂಡವವನು
ನನ್ನ ಹೃದಯವ ಮಾಡು ಬೇಗುದಿಯ ಬ್ರಹ್ಮಾಂಡವನ್ನು
ಭಸ್ಮವಾಗಿಸು ನನ್ನ ಬಹು ದುರಿತದುಷ್ಕರ್ಮಕಾಂಡವನ್ನು !

ಸೋಲಾಗಿ, ಬೇನೆ ಬಡತನವಾಗಿ, ನನ್ನವರ ಸಾವಾಗಿ,
ಚಿಂತೆಗಳ ಚಿತೆಯಾಗಿ, ಸಂತಸದ ಶಿಶುವಿಗೇ ಹಾವಾಗಿ.
ದೈನ್ಯ ಕಳವಳ ಕೊರಗು ಅವಮಾನ ನಿಂದೆಗಳ ಕಾವಾಗಿ,
ನನ್ನ ವಂಶದ ಮರಕೆ ಕೊಡಲಿ, ಕೊಡಲಿಗೆ ತಕ್ಕ ಕಾವಾಗಿ

ಬಾ ದುಃಖವೇ ನಿನ್ನ ನೂರಾರು ರೂಪದಲಿ
ಪೂರ್ಣ ಬಲ ತಳೆದು ಬಾ ಪೂರ್ಣ ಪ್ರತಾಪದಲಿ
ನೂಕೆನ್ನ ಉರಿಯುತಿಹ ನಂಜುಗಳ ಕೂಪದಲಿ
ಪಾಪಗಳ ಸುಟ್ಟು ಪೂತನಾಗುವೆನಿಂದು ತಾಪದಲಿ !

ನನ್ನ ಬಾಳಡವಿಯಲಿ ಬೆಳೆದು ಮುಳ್ಳಿನ ಮೆಳೆಯ
ವಿಷಜಂತುಗಳೆ ದುಷ್ಟ ವನ್ಯಮೃಗಗಳ ನೆಲೆಯ
ಆಶೆ ರೋಷ ದ್ವೇಷ ಗರ್ವ ಕಲುಷದ ಕೊಳೆಯ
ಸುಟ್ಟುಳಿಸು ಸದ್ಗುಣದ ಸತ್ಯಪ್ರೇಮದ ಬೆಳೆಯ !

ಕೊಡು ದೈವವೇ ನನ್ನ ಪಾಲಿಗಿಂತಲು ಹೆಚ್ಚು ದುಃಖ ನನಗೆ
ನನಗಿಂತ ದುಃಖಿಗಳು ಕೋಟಿ ಜನ, ನೀಡವರ ದುಃಖ ನನಗೆ
ಇಂದೆನ್ನ ಬಾಳಿನಲಿ ಅನ್ನ ನೀರುಗಳೆಲ್ಲ ದುಃಖ ನನಗೆ
ಹಾಸಲೂ ಹೊದೆಯಲೂ ಉಸಿರಾಡಿಸಲೂ ದುಃಖ ನನಗೆ !

ಆಗಲೈ ತಂದೆ ! ನನ್ನನಿಂತಳಿಸಿದಕೆ ನಗಿಸು ಬಡವರ ಮೊಗವ
ಇರಿಸೆನ್ನ ಹೆಗಲಮೇಲವರ ದುಃಖದ ನೊಗವ
ನನ್ನ ಬನ್ನವ ಬೆಳೆಸಿ ಕರುಣೆಸವರಿಗೆ ಸೊಗವ
ದುಃಖಪಂಜರದಲ್ಲೆ ಇರಿಸಬಹುದು ನಿನ್ನೀ ಖಗವ !

ಸುವರ್ಣಸಂಪುಟ/೩೦೮೪

ಸೆರಗು

ಸೀರೆಗೆ ಬೇಕೇ ಸೆರಗು?
ಯಾತಕೆ ಈ ಸೋಗು?
ಇದ್ದರು ಇದ್ದಂತಿಲ್ಲ?
ಹೊದೆಯುವ ಹಂಬಲವೇ ಇಲ್ಲ!

ಹಿಂದಿನ ಕಾಲಕೆ ಬೇಕಿತ್ತು
ಮಾನದ ಕೇತನವೆನಿಸಿತ್ತು!
ಅಂದೋ? ಗಂಭೀರದ ಸಂಕೇತ!
ಇಂದೋ? ಅದಕೆಲ್ಲಕು ಖೋತ!

ಅದೊ, ಹೆಣಗಾಡುತ್ತಿದೆ ಹೆಗಲಿನ ಮೇಲೆ
ಜಾರುತ್ತಿರುವುದೇ ನೂತನ ಲೀಲೆ!
ಗಾಳಿಗು ಅದಕೂ ಒಪ್ಪಂದ
ಚಣಚಣವೂ ಚಕ್ಕಂದ!

ಮೈಮುಚ್ಚುವುದಾದರು ಏನುಂಟು?
ಎಲ್ಲವು ತೆರೆದಿಟ್ಟಿಹ ಗಂಟು!
ರವಿಕೆಯು ಒಳಗುಟ್ಟು
ರಟ್ಟೋ ರಟ್ಟು!

ಬಣ್ಣ ಬಣ್ಣದ ಬೆಡಗು!
ಅದಕಾಗಿಯೇ ಇನ್ನೂ ಉಳಿದಿದೆ ಸೆರಗು!

ಬಿ. ಎಚ್. ಶ್ರೀಧರ

ಎಸ್. ಟಿ. ಬಸ್.

I

ಎಸ್. ಟಿ. ಬಸ್, ಎಸ್. ಟಿ. ಬಸ್,
ಗಲಗಲ ಸದ್ದಿನ ಸರ್ಕಸ್!
ಬ್ರಹ್ಮಾಂಡವ ಪ್ರತಿನಿಧಿಸುವ
ಪಿಂಡಾಡದ ಚಲನದ ರಷ್!

ನೂರ್ ಮೀರಿದ ವೃದ್ಧಾಪ್ಯದ ಗೂಡೊಳಗಿನ ಮೂಳೆಗಳೋ
ಕಡಲಾಳದ ಜಲಚರಗಳ ಹಿಡಿದೆಳೆದಿಹ ಜಾಲಗಳೋ
ತುಂಬಿರಬೇಕಿದರಲ್ಲೆನೆ ಕಿವಿಯಾಳವ ಸೀಳುತ್ತಿದೆ,
ಅಂತರಯಂತ್ರ ಧ್ವನಿ ಮಿದುಳಲೆಗಳನೊಡೆದಾಳುತ್ತಿದೆ!

ಜೀವಿಗಿಂತ ಜೋರೊದರುವ
ಜಡವಾಹನ ರಾವಣಾ;
ಜೀವಿಗಳನು ಗಡಗುಡಿಸುವ
ಜಂಪಿಂಗ್ ಹೃದ್ವಾರಣಾ!

ರಶಿಯ ಅಮೇರಿಕಗಳಲ್ಲಿ ಕಾಳೆಗ ಸುರುವಾಯಿತೋ,
ಜ್ವಾಲಾಮುಖಿಧೆಬಧಬೆಗಳು ಕಲಹಿಕ್ಕಿದಿರಾದವೋ!
ನರಕದ ಆಸ್ಪತ್ರೆಯಲ್ಲಿ ಹೊಸ ಮಕ್ಕಳು ಹುಟ್ಟಿದವೋ
ವಿಶ್ವರಾಷ್ಟ್ರ ಸಂಮೇಳನ ಕಂಬಳಗಳ ನಡೆಸಿತೋ!

–ಏನಿದೇನಿದೆಂಬ ಹಾಗೆ
ಮೈತುಂಬಾ ನಾದವಾಗೆ–
ನರನಾಡಿಗಳಲ್ಲಿ ಹೊಕ್ಕು ಮಾಡುವವರ ದಾಳಿಯ
ದುರ್ನಿವಾರ್ಯ ಪಾಳಿಯ!

ಗಲಿಬಿಲಿ, ಗದ್ದಲ, ಗೊಂದಲ ಗಲಿಗಲಿಸಲು ಕಾಯುವ
ಮುರಿದೊಗೆವುದೊ ವಿನಲಲುಗಿಸಿ ಬಿಡುವುದು ತಳಪಾಯವ!
ನಿನ್ನಾರ್ಭಟ ನವ್ಯ ಧ್ವನಿ; ಮಹಾಯಂತ್ರ ಭೈರವ–
ನೀನೆ ಕಾಯಬೇಕು ಕಡ್ಡಿ ಪೈಲ್ವಾನ್ ಶರೀರವ!

II

ಹಳ್ಳಿಗಳಿಗೆ ನಾಗರಿಕತೆ ಹೊತ್ತುತಂದ ವೀರ,
ಧೂಲೀಧರ, ದುರ್ವಾದವ ಮುಳುಗಿಸುವ ಸಮೀರ
ನಿನ್ನೊಂದಿಗ ! ಎಸ್. ಟಿ. ರಾಜ, ನಿನಗೆ ನಮಸ್ಕಾರ–
ಕನ್ನಡ ಸೀಮೆಯನಳೆಯುವ ಹೊಸ ಕಲ್ಕ್ಯವತಾರ !

ರೋಡೆಂಜಿನ್ ಬೆಳೆದು ಬೆಳೆದು ನೀನಾಯಿತೊ ಹೇಗೆ?
ರಾಡಿಯಲ್ಲಿ ಓಡಾಡುವ ನಿನಗೆಲ್ಲಿದೆ ಬೇಗೆ?
ಕೋಡಿಲ್ಲದ ಶರಭ ! ನಾಯಿ ಬೆಕ್ಕು ಕೋಳಿ ಎಲ್ಲಾ
ರೋಡಿನಲ್ಲೆ ಭೂಗತ ನಿನಗಿದಿರಾದರೆ ಮಲ್ಲ !

ಎಸ್. ಟಿ. ಬಸ್, ಎಸ್. ಟಿ. ಬಸ್,
ಪ್ರಜಾರಾಜ್ಯಕ್ಕೇ ಯಶಸ್
ತಂದು ಕೊಟ್ಟ ಮಹಾಕಾಯ, ಕಾಲದರ್ಪ ಭಂಜನಾ !
ಹಳ್ಳಿಯೂರ ಬಾಲಬಂಧು ಜಾಲ ಮನೋರಂಜನಾ !
ನಿನ್ನ ಧೂಳು ಕಣ್ಣಿದ್ದವರೆಲ್ಲರಿಗೂ ಅಂಜನ !
ನಿನ್ನನಾದ ಪ್ರಗತಿವಾದ ವಿಹಾರಿ ಹೃದ್ ವ್ಯಂಜನ !

ಸಂಗಮೇಶ ಹೊಸಮನಿ

ಹಕ್ಕಿಯಾಗಿ ಹಾರಬೇಕು

೧

ಹಕ್ಕಿಯಾಗಿ ಹಾರಬೇಕು
ದೂರ ದೂರ ನಾವು!
ಸಿಕ್ಕಮರಕೆ ಕೂಡಬೇಕು
ಅಲ್ಲಿ ನಾವು ನೀವು!!
ಹೂವು ಮೆಚ್ಚಿ ನಲಿಯಬೇಕು,
ಕಾಯಿಕಚ್ಚಿ ಉಲಿಯಬೇಕು
ಹಣ್ಣಿಗಾಗಿ ಅಲೆಯಬೇಕು
ನಾವು ನೀವು!
ಸಿಕ್ಕಾಮರಕೆ ಇಳಿಯಬೇಕು
ತಳಿರಿನೊಳಗೆ ಕೂಗಬೇಕು
ಕುವ್ವ ಕುವ್ವ

೨

ಗಗನದೊಡಲ ಕಂಪಿನಲ್ಲಿ
ರವಿಯ ಸಿರಿಯ ಸೊಂಪಿನಲ್ಲಿ
ರಜನಿರಾಜ ನಿಂಪಿನಲ್ಲಿ
ನಾವು ನೀವು!
ಗರಿಯಗೆದರಿ ಹಾರಬೇಕು,
ಸಾಲು ಸೇರಿ ತೂಗಬೇಕು
ಕುವ್ವ ಕುವ್ವ

೩

ಅಗುಳು ಅರಸಿ ದಣಿಯಬೇಕು
ಗೂಡುಕಟ್ಟಿ ಕುಣಿಯಬೇಕು,
ಗುಟುಕುಕೊಟ್ಟು ತಣಿಯಬೇಕು
ನಾವು ನೀವು
ರೆಂಬೆಯೊಂದರಲ್ಲಿ ಮಲಗಿ

ಕನಸುಕಂಡು ಕೂಗಬೇಕು,
ಕುವ್ವ ಕುವ್ವ.

೪

ಕುರುಳು ಕೂಗಲೋಡಬೇಕು,
ಅರಚಿ ಕಿರುಚಿ ಕೂಡಬೇಕು
ದುರುಳರನ್ನು ದೂಡಬೇಕು
ನಾವು ನೀವು!
ಇರುಳನೆಲ್ಲ ಕಾಯಬೇಕು
ಮರಳಿ ಮತ್ತೆ ಕೂಗಬೇಕು
ಕುವ್ವ ಕುವ್ವ

ಹಕ್ಕಿಯಂತೆ ನಮ್ಮ ಭಾವ
ಹಕ್ಕಿಯಂತೆ ನಮ್ಮ ಜೀವ
ಹಕ್ಕಿಯಾಗಿ ನೋವು ಸಾವ
ಜಯಿಸಿ ನಾವು!
ಗರಿಯಗೆದರಿ ಹಾರಬೇಕು
ಸಾಲುಸೇರಿ ಕೂಗಬೇಕು
ಕುವ್ವ ಕುವ್ವ.

ಯಲ್ಲಟ್ಟಿ, ಬ. ಗ.

ಸೊಸೆಯ ಮೊರೆ!

೧

“ಚಾಂಡಾಲಿ, ನೀನೆಲ್ಲಿ ನನಗಾಗಿ ಕುಳಿತಿದ್ದೆ
ನನ್ನ ಸೌಭಾಗ್ಯವನು ಅಳಸಿಬಿಟ್ಟೆ,
ಎಂಥ ಕರಿಗಾಲೇನೊ-ನೀ ಬಂದ ತಿಂಗಳಲೆ
ನನ್ನ ಐಸಿರಿಯನ್ನೆ ತುಳಿದು ಬಿಟ್ಟೆ!”

೨

ಹೀಗುಂಟು ದಿನಬೆಳಗು ಮಂಗಳಾರತಿ ನನಗೆ
ಕಾಲಿರಿಸಿದಾಗಿಂದ ಅತ್ತೆಮನೆಗೆ;
ಪತಿಯಿದ್ದು ಗತಿಹೀನಳಾಗಿರುವೆ ದುರ್ದೈವಿ”
ಬೆನ್ನು ಕಟ್ಟುವರಾರು ಇನ್ನು ನನಗೆ?

೩

ಸೊಸೆಯಾಗಿ ಹೊಸದಾಗಿ ಹೋದೊಂದೆ ತಿಂಗಳಲಿ
ಮಾವನೊಯ್ದಿತು ಸಾವು ಕದ್ದು ಬಂದು;
ಕಾಗೆ ಕುಳಿತಾಕ್ಷಣಕೆ ಟೊಂಕೆ ಮುರಿದಂತಾಗಿ
ನನ್ನ ಕಾಲ್ಗುಣವೆ ಕೆಟ್ಟಾಯಿತಂದು!

೪

ಮನೆ ನೋಡಿಕೊಳುವಂಥ ಮಾನವನಿಲ್ಲಾಗಿರಲು
ಅತ್ತೆ ಮನೆಗೆಲ್ಲ ಸರ್ವಾಧಿಕಾರಿ!
ತಾಯ ಮಾತಿಗೆ ಒಂದು ತುಟಿ ಎರಡು ಮಾಡದೆಯೆ
ಹೊಂಗೊಡುವದೆನ್ನವರಿಗೊಂದೆ ದಾರಿ!

೫

ತಿಂದುಂಡು ತಣ್ಣಗಿದ್ದರೆ ಸಾಕು ನನ್ನತ್ತೆ
ತಿಳಿಸಿ ಹೇಳುತ ತಾಕು ತಪ್ಪಿದಲ್ಲಿ;
ಹಚ್ಚಲಾರೆನು ಇಡಲು ಈಚೆ ಕಡ್ಡಿಯನಾಚೆ
ಸರಿಗಟ್ಟಿಕೊಳ್ಳಲಾರೆ ಕೆಲಸದಲ್ಲಿ!

೬

ಗಂಡನೊಡನೆನಗಿಲ್ಲ ಸವಿಮಾತು ಸಹಕಾರ
ಹಡೆದವರ ಮನೆ ಬಿಟ್ಟು ಬರುವದೇಕೊ!
ಗಂಡ ಸವಿಯಾಗಿರಲು ತನ್ನ ಹೆಂಡತಿಯೊಡನೆ
ಅಯ್ಯೊ ತಳಮಳ ಕುದಿತ ಅತ್ತೆಗೇಕೊ!

೭

ತವರುಮನೆಗೊಂದೆರಡು ದಿನ ಹೋದರೇನಲ್ಲಿ
ಅಣ್ಣನರಸಿಗೆ ದಾಸಿಯಾಗಬೇಕು;
ಬೆನ್ನು ಕಟ್ಟುವ ತಾಯಿ ಬಯಲಾದ ತವರಿನಲಿ
ಮನೆ ಮಗಳದೇನಾಟ ನಡೆಯಬೇಕು!

೮

ಕೊಟ್ಟ ಮೇಲೊಮ್ಮೆ ಹೆಣ್ಣಿಗೆ ಹುಟ್ಟುಮನೆಯಲ್ಲಿ
ಇಲ್ಲ ಸುಖಸೌಲಭ್ಯದಾವ ಹಕ್ಕು!
ತುತ್ತು ಕೂಳಿಗು ಅತ್ತೆಯುವರ ಅಪ್ಪಣೆ ಬೇಕು,
ಎಲ್ಲಿ ಹೋದರು ಏನು? ಯಾರು ದಿಕ್ಕು?

೯

ಮನೆಯ ನ್ಯಾಯಾಲಯದಿ ಹುಟ್ಟು ಅಪರಾಧಿ ಸೊಸೆ
ಎಷ್ಟು ಶಿರಸಾವಹಿಸಿ ನಡೆದರೇನು?
ತಪ್ಪದತ್ತೆಯ ಕಾಟ ಸೆರೆಯಾಳಿನಂತಾಗಿ
ಒಂಟಿಗಾಲಿಯ ಮೇಲೆ ನಿಂತರೇನು!

೧೦

ಇನ್ನೇಸು ದಿವಸ ಈ ರೀತಿ ತೆಗೆಯಲಿ ನಾನು
ಸುಟ್ಟು ಬರಲೀ ಹಾಳು ಹೆಣ್ಣ ಜನ್ಮ!
ಮಣ್ಣಗೂಡುವವರೆಗೆ ಹೆಣ್ಣಿಗೆಲ್ಲಿಯ ಸೌಖ್ಯ?
ಸಣ್ಣಾಗಿ ಸವೆಯುವದೆ ಅವಳ ಕರ್ಮ!

ವೈ. ಎಸ್. ಲೂಯಿಸ್

ಪ್ರೇಮ ಚಕ್ಷುಸ್ಸು

ನೂರು ಮುಖ ನೆರೆದಲ್ಲಿ ಕಾಣಬಲ್ಲವು ಕಣ್ಣು
    ನಿನ್ನೊಂದು ಸಿರಿಮೊಗದ ಕಡುಚೆಲುವನು;
ನೂರು ದನಿ ಮೊರೆವಲ್ಲಿ ಕೇಳಬಲ್ಲದು ಕಿವಿಯು
    ನಿನ್ನೊಂದು ಕೂರಲಿನಾ ಇನಿದನಿಯನು.

ನೂರು ಪದ ನಡೆವಲ್ಲಿ ತಿಳಿಯಬಲ್ಲೆನು ನಾನು
    ಮುಂಬರುವ ನಿನ್ನಡಿಯ ಶಬ್ದವನ್ನು;
ಇನಿಯ, ನೂರಾರು ಜನ ನೂಕಾಡುವೆಡೆಯಲ್ಲಿ
    ಅರಿಯಬಲ್ಲೆನು ನಿನ್ನ ಸ್ಪರ್ಶವನ್ನು !

ಜಿ. ದುಂಡಣ್ಣ

ಸ್ಫೂರ್ತಿದೇವಿಗೆ

ಬಯಕೆ ಬಾಯಾರಿ ನಿನ್ನನು ನಾನು ಕರೆದಾಗ
ಬಾರದಿಹೆ, ತೋರದಿಹೆ, ದೂರವೇ ಇರುವೆ.
ನನ್ನರಿವೆ ನನಗಿರದ ಆವುದೋ ಗಳಿಗೆಯಲಿ
ತಟ್ಟನೆನ್ನಯ ಬಳಿಗೆ ಬಂದು ನಗುವೆ!

ನಿನ್ನಾಟಕೊಮ್ಮೊಮ್ಮೆ ಮುನಿಸು ಬರುವುದು ನನಗೆ;
ನಿನ್ನ ಕಂಡೊಡನೆಲ್ಲ ಕರಗಿ ಅಕ್ಕರೆಯಾಗಿ
ಸಕ್ಕರೆಯು ಸವಿಯಾಗಿ ಒಲುಮೆಗಿರಿಯೇರುವುದು;
ನಾನರಿಯದೆಯೆ ನನ್ನ ಬಯಕೆ ತೀರುವುದು!

ನಾನು ಕಾಮಿಸಿದಾಗ ನೀನು ಮೊಗವನೆ ತೋರೆ;
ಮೃಣ್ಮಯದ ಭೋಗಕ್ಕೆ ಒಳಗಾಗದಿರುವೆ!
ನನಗರಿಯದಿರುವಂತೆಯೇ ಚಿನ್ಮಯದ ಪ್ರೇಮವನು
ಸುರಿಸುರಿದು ಬರುತಿರುವೆ ಕರುಣೆಯೊಲವೆ!

ನೀಂ ನಿತ್ಯ ಪರಿಶುದ್ಧೆ, ಸರ್ವಮಂಗಳೆ, ಜನನಿ;
ನಾಂ ಬರಿಯ ಹಸುಗೂಸು, ಕಡುಪಾಪಿ, ಕಾಮಿ.

ಅಯ್‌ನ್‌ಸ್ಟನ್ ಆತ್ಮ

"ಶ್ರಾವಣ ಮಾಸದ ಬೆಳಗಿನ ಜಾವದಿ
ಮರವನು ಸುತ್ತುವಳಾರೀ ನಾರಿ?
ಒಣಗುವ ಮರವನು ಬತ್ತುವ ಜಲವನು
ಸುತ್ತುವ ಮೌಢ್ಯವೇ ಈ ಯುಗದಿ?"
ಎನ್ನುತ ಚೆನ್ನಿಗನೋರ್ವನು ನಡೆದನು
ಹೆಂಗೆಳೆಯ ಕಡು ಮೌಢ್ಯವ ಕಂಡು.
ಅಲ್ಲಿಯೇ ನಿಂತಿರ್ದೊಂದು,
ಇವನೀ ಗೋಣಗನು ಕೇಳಿದ, ಕತ್ತೆ
ತನ್ನೊಳೆ ಚಿಂತಿಸಿತಿಂತೆಂದು:
"ಹೌದೇನ್ ?
ನಿಜವೇನ್?
ಮರ ಒಣಗುವುದೇನ್?
ನೀರ್ ಬತ್ತುವುದೇನ್?
ಯಾರಿಗು ತಿಳಿಯದ ಅಗಾಧ ಸತ್ಯವ
ಶೋಧಿಸಿ ತೆಗೆದೀ ಜಾಣನ ಜಾಣ್ಮೆಗೆ
ಎಣೆಯುಂಟೇ?
ಈತನೇ ನ್ಯೂಟನ್!
ಇವನೇ ಐನ್‌ಸ್ಟನ್!!
ಬುದ್ಧಿವಂತನಿಗೆ ಶಹಬಾಸ್! ಶಹಬಾಸ್!!
ಆ ಜಾಣನ ನುಡಿಗೂ
ಕತ್ತೆಯ ಶಂಕೆಗೂ
ಕಿವಿಮನ ಕೊಡದಾ ಸಾಧ್ವಿ
ಬನ್ನಿಯ ಮರವನು ಸುತ್ತೀ ಸುತ್ತೀ
ಕುಳಿತಳು ಮರದಡಿ ಮಂಡಿಯನೂರಿ
ಸ್ತುತಿಗಳ ನುಡಿದಳು ಕಣ್ಮುಚ್ಚಿ:
"ರಕ್ಷಿಸಾ ಮಹಾಕಾಳಿ!
ಯಜ್ಞಗಳಿಗಾದಿಯಲಿ
ಅಗ್ನಿಯನು ನಿನ್ನಿಂದ

ಕಡೆದು ಪಡೆದರು ದೇವಿ;
ನಿನ್ನ ಗರ್ಭದೊಳಿರ್ದ
ಅವ್ಯಕ್ತ ಚಿಚ್ಛಕ್ತಿ
ಅಗ್ನಿರೂಪದೊಳಾಯ್ತು ವ್ಯಕ್ತ!
ಅವ್ಯಕ್ತ ಶಕ್ತಿಯನು
ಅಗ್ನಿ ರೂಪದಿ ವ್ಯಕ್ತ-
ಗೊಳಿಸಿದೀ ಮಹಾತಾಯೇ
ನಮೋ ನಿನಗೆ ಮಹಾ ಕಾಳೀ!
ನಿನ್ನ ಅಂಗಾಂಗದಲಿ
ಹರಿಯುತಿದೆ ಪರಶಕ್ತಿ
ನಿನ್ನೊಳಿದೆ ಆ ದೈವ ಮಲಗಿ!!
ನಮೋ! ನಮೋ! ನಮೊ!"
ಅಲ್ಲೆ ಎಲ್ಲಿಯೋ ಬನ್ನಿಮರದ ಕೊಂಬೆಗಳಲ್ಲಿ
ಸುತ್ತಿ ಸುಳಿಯುತಲಿದ್ದ ಐನ್‌ಸ್ಟನ್ನಿನಾತ್ಮ
ಸಾಧ್ವಿಯಾಡಿದ ಸ್ತುತಿಯ ಸೂಕ್ಷ್ಮಕಿವಿ ಕೇಳಿ
ಬೆರಳ ಕಚ್ಚಿತು ಬೆಚ್ಚಿ ಅಚ್ಚರಿಯಪೊಂದಿ!
ನಾ ಬಾಳ್ದೆ ಎಂಬತ್ತು ವರುಷಗಳ–ದೀರ್ಘಕಾಲ
ಈ ಸತ್ಯ ಅರಿಯಲೆಂದು!
ಆದರೇನೊ ಅರಿಯದೀಬಾಲೆ ಕಂಡಿಹಳು
ಜಡದೊಳಡಗಿದೆ ಶಕ್ತಿ, ಚೈತನ್ಯಮೆಂದು!

“ಬುವಿಯೆ ತಾಯಿ, ಬಾನು ತಂದೆ!!”

ಬುವಿಯೆ ತಾಯಿ, ಬಾನು ತಂದೆ, ನಿಮಗೆ ವಂದನೆ !
ನಿಮ್ಮ ತೊಡೆಯ ಹಾಸಲಾಡಿ ಹಾಡಬಂದೆನೆ ॥ ಪಲ್ಲ ॥

೧

ಇಳೆಯ ಒಡಲ ಬ್ರಹ್ಮವೆನಗೆ ರೂಪವಿತ್ತಿತೊ,
ಮುಗಿಲದೊರೆಯ ನೀಲಿಕೊಡೆಯು ನೆಳಲನಿತ್ತಿತೊ,
ಈ ಅನಂತ ತೊಟ್ಟಿಲೆನಗೆ ನಿದ್ದೆಕೊಟ್ಟಿತೊ,
ಬಿಸಿಲು, ಬೈಗು, ಮೋಡ, ಚುಕ್ಕೆ ಚಟ್ಟು ಕಟ್ಟಿತೊ.

೨

ಹಾಲು ಮೆಯ್ಯ ಹಣ್ಣಿನಂಥ ಮೊಲೆಯ ಕುಡಿದೆನು
ನಿನ್ನ ಚಲುವ ಮುದ್ದುಮೊಗವ ತುಟಿಗೆ ಹಿಡಿದೆನು
ಗೋಲು ತಿರೆಗೆ ಪಣವ ಹಚ್ಚಿ ನಡೆದೆ ನಡೆದೆನು
ಮುನ್ನು ಎಲ್ಲು ನಿಲವು ಇರದೆ ತೊಡೆಗೆ ಇಳಿದೆನು.

೩

ಅಯ್ಯ ! ನೆಲಕೆ ಮಳೆಯನಿಳಿಸಿ ಸುಧೆಯ ಸುರಿದಿಹೆ
ಜೀವದೊಳಗೆ ಭಾವ ಮೊಳಿಸಿ ಬಗೆಯ ಕರೆದಿಹೆ
ಸೂರ್ಯ ಚಂದ್ರ ಕಣ್ಣತೆರೆದು ಬೆಳಕ ನೆರೆದಿಹೆ
ಏಳುಬಣ್ಣ ರಸದ ಋಷಿಯ ಯೋಗ ಮೆರೆದಿಹೆ.

೪

ವಿವಿಧ ಲೋಕಗಳಿಗೆ ಸಾಗಿ ನೋಡಲಿರುವೆನೆ
ನಾಕ-ಮರ್ತ್ಯ, ಯಕ್ಷ ಸೃಷ್ಟಿ ಎಲ್ಲ ಅಲೆವೆನೆ
ಬಾಳಿನುಸಿರು ಬಯಲ ತುಂಬಿ ಗಾಳಿ ತರುವೆನೆ
ಕಡಲ ಸೆರಗ ಎದೆಗೆ ಹೊಚ್ಚಿ ತೊಡೆಗೆ ಬರುವೆನೆ.

೫

ಬಲ್ಲೆ ತಾಯಿ ನಿನ್ನ ಹಿರಿಮೆ, ನಲಿವು ಕೊಡಲಿದೆ
ಅಲ್ಲೊ ತಂದೆ, ನಿನ್ನ ಒಲುಮೆ ಎಲ್ಲಿ ಬಿಡಲಿದೆ ?
ಕಂದನನ್ನು ನೆವುಳಿತೆವುಳಿ ಹರಸೆ, ‘ ಮಂಗಳ ’
ದನಿಯ ವೀಣೆ ಮಿಡಿಯುಬಂತು, ಇಂಥ ಜೋಗುಳ !

ಬುವಿಯೆ ತಾಯಿ, ಬಾನು ತಂದೆ ನಿಮಗೆ ವಂದನೆ !
ನಿಮ್ಮ ತೊಡೆಯ ಹಾಸಲಾಡಿ, ಹಾಡಬಂದೆನೆ ॥

ಅತಿಥಿ

೧

" ಎತ್ತಿಕೊ ! ಎತ್ತಿಕೊ ! ಎತ್ತಿಕೊ ಕರೆದು.
ಒಮ್ಮೆಯಾದರೂ ಎತ್ತಿಕೊ ಕದವ ತೆರೆದು."
ಅಂಬೆಗಾಲಿಡುವಂಥ ಮುದ್ದುಮಗುವೊಂದು
ಅಂಗಳದ ತುಂಬೆಲ್ಲ ಹರಿದಾಡಿ ಬಂದು
ನೋಡಿರಲು ಮುಚ್ಚಿತ್ತು ಮನೆಯ ಕದ ಕಿಟಕಿ.
ಕೈಮಾಡಿ ಕರೆದಿತ್ತು ಎಲ್ಲ ಕಡೆಗಿಣಿಕಿ
" ಎತ್ತಿಕೊ ! ಎತ್ತಿಕೊ ! ಎತ್ತಿಕೊ ಕರೆದು
ಒಮ್ಮೆಯಾದರು ಎತ್ತಿಕೊ ! ಕದವ ತೆರೆದು.

೨

ಇಲ್ಲಿ ಅರಮನೆಯೊಳಗೆ ನೆಲಮನೆಯೊಳವಿತು
ಹಿಡಿಸಲಾರದ ಹಣದ ಹಿಗ್ಗಿನಲಿ ಮರೆತು
ಒಂಬತ್ತು ಕೊಪ್ಪರಿಗೆ ನಾಣ್ಯಗಳ ನೋಡಿ
ಒಂದೊಂದೆ ನಾಣ್ಯವನು ತೆರೆದು ಮುದ್ದಾಡಿ
ಉದಯಾಸ್ತಮಾನಗಳ ಕೊಳಗದೊಳಗಳೆದು
ಆಯುಷ್ಯರಾಶಿಯನು ಒಂದು ಕಡೆಗೆಳೆದು.
ಸೂರ್ಯ ಚಂದ್ರರ ದೀಪ ಉರಿದರೂ—ಕಾಣದು
ಅಂಬೆಗಾಲಿಡುವ ಮಗು ಕರೆದರೂ–ಕೇಳದು

೩

ಒಂದು ಚಿನ್ನದ ಜೇಡ ಕಟ್ಟಿದರೆ ಬಲೆಯ
ಕೊಳ್ಳಲಾರದೆ ಅಂತರಾತ್ಮನಿಗು ಬಲಿಯೆ ?
ಒಮ್ಮೆ ಮೈ ತುಂಬಿದರೆ ಚಿನ್ನದುನ್ಮಾದ
ಕೇಳಬಲ್ಲದೆ ಮಗುವು ಕರೆವಾರ್ತನಾದ ?
ತಡೆಯಲಾರದೆ ಒಮ್ಮೆ ಮನೆಯ ಯಜಮಾನಿ
ಹೇಳಿದಳು ಗಂಡನಿಗೆ " ನಿಮಗೆಂಥ ಗ್ಲಾನಿ ?"
" ಹಗಲಿರುಳು ಕರೆಯುತಿದೆ ಮುದ್ದುಮಗುವೊಂದು ;

“ ಕರೆದುಕೊಳ್ಳಿರಿ ಒಳಗೆ ಬರುವೆ ನಾನೆಂದು;
“ ಅಂಬೆಗಾಲಿಕ್ಕುತಿದೆ ಅಂಗಳದಿ ಬಂದು;
“ ಕುಳಿತಲ್ಲಿ ನಿಂತಲ್ಲಿ ಕೇಳುತಿದೆ ಕರೆಯು.
“ ಉಣಿವಲ್ಲಿ ತಿನುವಲ್ಲಿ ಅದರದೇ ಮೊರೆಯು.
“ ಒಂದು ಸಲವಾದರೂ ಬಾಗಿಲವ ತೆರೆದು
“ ಎತ್ತಿಕೊಳ್ಳಿರಿ ಮಗುವ ಮನೆಯೊಳಗೆ ಕರೆದು.

೪

ಕೊನೆಗೊಮ್ಮೆ ಯಜಮಾನ ಬಾಗಿಲಿಗೆ ಬಂದು
ಕರೆದುಕೊಳ್ಳುವೆ ಮಗುವ ಮನೆಯೊಳಗೆ ಎಂದು
ಕದವ ತೆರೆಯಲು, ಕಾಣಲಿಲ್ಲ ಮಗು ಹೊರಗೆ.
ಶ್ರುತಿಹಿಡಿದ ತುಂಬೂರಿಯಿತ್ತು ಬಾಗಿಲಿಗೆ.
ನುಡಿಯತೊಡಗಿತು ಮೆಲ್ಲ “ ನೆತ್ತಿಕೊ ! ಎತ್ತು !
ಒಮ್ಮೆಯಾದರೂ ಕೈಯೊಳೆತ್ತಿಕೊ ! ಎತ್ತು.”

೫

ಒರಗಿರುವ ತುಂಬೂರಿಯೆತ್ತಿದನು ನೋಡಿ
ಹಿಡಿಸಲಾರದ ಹಿಗ್ಗು ಹೃದಯದಲಿ ಮೂಡಿ.
ನಾದಲೋಕದ ಅತಿಥಿ ಬರಲು ಮನೆಯೊಳಗೆ
ಮರುದಿನವೆ ಯಜಮಾನ ನಡೆದಿದ್ದ ಹೊರಗೆ
ಒಂಬತ್ತುಕೊಪ್ಪರಿಗೆ ಹಾಡುಗಳ ಸುರಿದು
ಪರಮಾತ್ಮನಿಗರ್ಪಿಸಿದ ನೆಲ್ಲಕಡೆಗಲೆದು.

ಪ್ರೀತಿ

ಚಿರ ತಾರುಣ್ಯದ ಚೆಲುವಿನ ರೂಪ
ಹಿಡಿದಿದೆ ಹೃದಯದ ಚಂದನ ಧೂಪ.
ಮನ-ಬನಗಳ ಮದರಂಗಿಯ ಬರೆದು
ಹಾರೈಕೆಯ ಹೃತ್ಕಮಲವ ತೆರೆದು
ನೆಲ ಜಲದೊಳಗಲೆದಾಡುತಿರಲು
ಆಗಸ ಕೇಳಿತು “ ಏನು ಹೆಸರು ? ”
“ ಪ್ರೀತಿ ”
ಎಂದು ಬಂದಿತ್ತು ಗಾಳಿಯುಸಿರು,
ಒಮ್ಮೆಲೆ ನಕ್ಕಿತು ಸುತ್ತು ಹಸಿರು.

ಮೀನು ಪೇಟೆ

೧

ಕೊಳೆತು ನಾರುತಿರುವದಿಲ್ಲಿ
ಹಳಸಿಹೋದ ಮೀನವು,
ಕುಳಿತು ಮಾರುತಿರುವದಿಲ್ಲಿ
ಜೀವ ದುಃಖಮ್ಲಾನವು.
ದೈನ್ಯ ಸಾರುತಿರುವದಿಲ್ಲಿ
ಬಂಡವಲಿನ ಬುಟ್ಟಿಯಲ್ಲಿ
ಜೀತವಾಗಿ ಹುಟ್ಟಿದಲ್ಲಿ
ಬದುಕು ನಿತ್ಯದೀನವು.
ಬೆಳಗು ಬಂತು.
ಸಂಜೆ ಬಂತು.
ವರುಷ ವರುಷ ಕಳೆದರೂ
ಹರೆಯ ಮುಪ್ಪು ಕಳೆದರೂ
ತೆಂಗಿನ ಸಸಿ ಬೆಳೆದರೂ
ಬುಟ್ಟಿ-ಮೀನ ಕೊಳೆತರೂ
ಹರುಷಗಿರುಷ ದೊರೆಯಲಿಲ್ಲ
ಇವರ ಬಾಳ ಹಂತಕೆ
ಈ ಬದುಕಿನ ಪಂಥಕೆ.

೨

ಇಲ್ಲಿ ಸಾಲು ಕುಳಿತ ಹೆಣ್ಣೆ
ಎಲೊ ಮುಗಿಲಿನತ್ತ ಕಣ್ಣೆ
ಕುಳಿತರಿಲ್ಲಿ ಮತ್ಸ್ಯಗಂಧಿ
ಉಟ್ಟುಕೊಂಡು ಹರಕು ಚಿಂದಿ
ನೊಂದ ಜೀವ ನೂಲು ಕಿತ್ತು
ಸುಖಸ್ವಪ್ನದರ್ಶನ,
ಬಯಸಿತದರ ಸ್ಪರ್ಶನ.
ಕಡಲಿನಾಚೆ ತೇಲುತಿತ್ತು
ಮಭವೆ ! ಹಾಯ ಹಿಗ್ಗಿಸಿ
ಹರೆಯ ಮುಪ್ಪು ತಗ್ಗಿಸಿ

ರಂಪಿಣಿ ಬಲೆ ಬೀಸಿದಲ್ಲಿ
ಬಿಡಲಿ ನನ್ನ ಕರೆಯಿತು.
ಗಾಳಿ ಕಡಲನೀಸಿದಲ್ಲಿ
ದುಃಖ ಲಿಪಿಯ ಬರೆಯಿತು.
ಬಿಂಡವಲಿನ ಬುಟ್ಟಿಯಲ್ಲಿ
ಜೀತವಾಗಿ ಹುಟ್ಟಿದಲ್ಲಿ
ಬಲೆಗೆ ಬಿದ್ದ ಮೀನದಂತೆ
ವಿಲಿ ವಿಲಿ ಮಣಿದಾಡಿದೆ.
ಕೊಳೆತ ಬದುಕು ಬಾಡಿದೆ.
ತಂದ ಮೀನ ಕೊಳೆತರೂ
ಬಾಲ್ಯ ಹರೆಯ ಕಳೆದರೂ
ಹರುಷಗಿರುಷ ದೊರೆಯಲಿಲ್ಲ
ಇವರ ಬಾಳ ಹಂತಕೆ
ಈ ಬದುಕಿನ ಪಂಥಕೆ.

ಶ್ವೇತಕೇತು ದೇವರ್ಷಿ

ಉಷಾಸ್ತೂತಕದೊಡನೆದ್ದು ಬಂದಿತೊ ಬಾನಬೆಳ್ಳಿ ಚಿಕ್ಕೆ;
ದಿಗ್ದಿಗಂತಕೂ ಸಡಿಲುತಿದ್ದಿತೊ ಇರುಳ ತೋಳ ತೆಕ್ಕೆ;
ರವಿಯು ಮಿಸುನಿ ರಥವೇರಿ ಬಂದಿತೊ ಮುಗಿಲ ಮೂಡಲಿಕ್ಕೆ;
ರೆಂಬೆ ರೆಂಬೆಗಳ ಋಷಿಗಳೆಲ್ಲ ಕೆದರಿದರು ತಮ್ಮ ರೆಕ್ಕೆ;
ಶ್ವೇತಕೇತು ದೇವರ್ಷಿ ಬಂದ ಮಂದಾಕಿನೀ ತಟಕ್ಕೆ ॥ ೧ ॥

ದುಂಡು ಮಲ್ಲಿಗೆಯ ಗೊಂಚಲಲ್ಲಿ ಕಿವಿಮಾತನೇನೋ ಹೇಳಿ,
ಮಂದಗಂಧಗಾಯತ್ರಿ ಹಾಡಿ ಬಂದಿತ್ತು ತಂಪುಗಾಳಿ;
ಚಕ್ರವಾಕ ಕಲಹಂಸ ನಲಿದು ನಡೆಸಿದವು ನೀರ ಕೇಳಿ;
ಚೆಲ್ಲುವರಿದು ಬೆಳಕೆಲ್ಲ ಕಡೆಗೆ ಪಲ್ಲವಿಸಿತಿರುಳ ಹೂಳಿ;
ಶ್ವೇತಕೇತು ದೇವರ್ಷಿ ನಿಂತನಂಜುಳಿಯೊಳರ್ಘ್ಯತಾಳಿ ॥ ೨ ॥

ಬಣ್ಣಬಣ್ಣಗಳ ಕುಂಚವಿಡಿದು ನೆಲಮುಗಿಲ ಬಳಸಿ ಸುತ್ತು;
ಛಂದ ಬಂಧ ಸ್ವಚ್ಛಂದ ಬ್ರಹ್ಮಲಿಪಿ ಚೆಲುವು ಬರೆಯುತಿತ್ತು;
ನೀರ ಕಂಪು ಸವಿರೆದ್ದು ನಕ್ಕಿತೋ ನದಿಯು ಸುತ್ತುಮುತ್ತು;
ದಿನದ ದಿಬ್ಬಣದ ನಡುವೆ ನಿಂತು ಮರಿಜಿಂಕೆ ನೋಡುತಿತ್ತು:
ಶ್ವೇತಕೇತು ದೇವರ್ಷಿ ನಿಂತ ರವಿದೇವಗರ್ಘ್ಯವಿತ್ತು ॥ ೩ ॥

ನವಿಯ ಪುಡೆ-ಮಳಲಲ್ಲಿ ಬೆಳೆದ ಗಿಡಗಿಡಕೆ ಮಿಳ್ಳಿಯಾಡಿ,
ರಂಗವಲ್ಲಿ ಬರೆದಿತ್ತು ನೆರಳು ಹೊಂಬಿಸಿಲು ಬಣ್ಣ ತೀಡಿ;
ಚೈತ್ರಮಾಸ ವನವಾಸ ಬರಲು ವೈಶಾಖ ವಧುವ ಕೂಡಿ;
ಭಾದ್ರಪದದ ಕಾರ್ಮುಗಿಲು ಮಿಂಚು ನೆನೆಸಿತ್ತು ನವಿಲಜೋಡಿ;
ಶ್ವೇತಕೇತು ದೇವರ್ಷಿ ನಿಂತನಾನಂದಚಿತ್ತ ಮೂಡಿ ॥ ೪ ॥

ಮಿಂಚುದೇಹ ಸಿಡಿದೋಳು ದುಂಡು ಮುಖ ನೊಸಲು ಗಂಧವಿಟ್ಟು;
ಕಾಮರೂಪ ಮೈತುಂಬಿ ಬಂತು ಯಜ್ಞೋಪವೀತ ತೊಟ್ಟು;
ನೋಡಿದಶ್ವಿನೀಕುವರರೆಲ್ಲ ಕಚ್ಚಿದರು ತಮ್ಮ ಬೊಟ್ಟು;
ತುಂಬಿಬಂದ ಹೊಂಬಿಸಿಲು ಮಿಂದು ನಿಂದಿರಲು ಹರುಷಪಟ್ಟು;
ಶ್ವೇತಕೇತು ಮಂದಾರಮರದ ವಲ್ಕಲದ ವಸನವುಟ್ಟು ॥ ೫ ॥

ಮೂರು ಲೋಕಗಳ ಕಣ್ಣಿಗಿಂತ ಸೌಂದರ್ಯದಿಂದ್ರ ದೀಪ;
ಕಂಡ ಕಣ್ಣ ಕನವರಿಸಿ ಸುಟ್ಟಿತೆದೆಯಲ್ಲಿ ಕಾಮಧೂಪ;
ನೋಡಿ ನಲಿದ ಹರಿಣಾಕ್ಷಿ ಚಿತ್ತ ನುಡಿಸಿತ್ತು ವಿರಹತಾಪ;
ರಂಭೆ ಮರನ ಕೈಗೊಂಬೆ ಮೊರೆದಳಭಿಸಾರಿಕಾ ವಿಲಾಪ;
ಶ್ವೇತಕೇತು ದೇವರ್ಷಿ ಚೆಲುವು ನಿಂತಂಥ ನಿಲುವು ರೂಪ ॥ ೬ ॥

ಸಹಸ್ರಾರ ಬಿಳಿ ಕಮಲವರಳಿ ತೆರೆದಿರಲು ಪೀಠ ಕೊಟ್ಟು;
ಎಂದಿನಂತೆ ಮಂದಾಕಿನಿಯಲಿ ಹೊಸಹಸಿರು ಮಡಿಯನಿಟ್ಟು;
ಮುಕುಟ ಮಾಲೆ ಮೇಖಲೆ ಸುವರ್ಣ ಮಣಿಕರ್ಣ—ಪೂರ ತೊಟ್ಟು;
ಕಮಲವದನೆ ಕಮಲಾಕ್ಷಿ ಲಕ್ಷ್ಮಿ ಸಿಂಧೂರ ತಿಲಕವಿಟ್ಟು;
ಕುಳಿತು ನೋಡೆ ಋಷಿರೂಪ ಮೂಡಿತನುರಾಗ ರಾಗಪಟ್ಟು ॥ ೭ ॥

ನಯನಗೋಲಗಳ ತುಂಬಿ ತುಳುಕಿತನುರಾಗವೇರಿನಿಂದು;
ಕಮಲಪೀಠದಲಿ ಕುಳಿತ ಕ್ಷೀರಸಾಗರದ ಕುವರಿಗಂದು.
ಮುದುಗಿದಂಥ ಹೆಂಗರುಳಿನಾಸೆಗೊಡೆದಿರಲು ನಯನ ಬಿಂದು;
ಮನದ ಭೋಗದಭಿಲಾಷೆ ನಯನ ಜಲಭಾಷೆಯಾಡಿ ಬಂದು
ಮನದ ಯೋಗ ಮನ ತುಂಬುತಿತ್ತು ಋಷಿರೂಪ ರೂಪಕೆಂದು ॥ ೮ ॥

ಚೆಲುವುತೆತ್ತ ಕಡೆಗೋಲು ಚಿತ್ತವನು ಕಾಮರಾಗ ಹಿಡಿದು,
ಕಮಲಶಯ್ಯೆಯಲಿ ಕುಳಿತ ದೇವಿಯೊಳ ಹೃದಯ ಕಡಲ ಕಡೆದು;
ಋಷಿಯ ರೂಪದನುರಾಗ ಸೆರೆಯ ಸಂಯೋಗದಾಸೆ ಮಿಡಿದು;
ಬರಿಯ ನೋಟದಲಿ ಸುರತಕೂಟ ಸುಖಚಿತ್ತ ತೃಪ್ತಿಪಡೆದು;
ಕಮಲವದನೆ ಕಮಲಾಕ್ಷಿ ನಲಿದಳೋಲಾಡಿ ಗಂಡು ಹಡೆದು ॥ ೯ ॥

ತೋಳ ತೊಟ್ಟಿಲಲಿ ಮಗುವ ತೂಗಿ ಕೇಳಿದಳು ಹರುಷ ದಿಂದು:
"ಏನ ಬಯಸುತಿದೆ ನಿಮ್ಮ ಚಿತ್ತ ದೇವರ್ಷಿ ನದಿಯಲಿಂದು?"
ನುಡಿದನಾಗ ಋಷಿ: "ದೇವಿ ಬಯಸುತಿದೆ ಪುಂಡರೀಕಕೆಂದು."
ದೇವಿನಾಚಿ ಕೈಕೂಸ ಚಾಚಿ ಹೇಳಿದಳು "ಹಿಡಿಯಿರೆಂದು."
ಹೂವ ಬಯಸಿದರೆ ಹೆಣ್ಣೊಲುಮೆ ಹಸುಗೂಸನಿತ್ತಿ ತಂದು ॥ ೧೦ ॥

ಹಾವಾಡಿಗರ ಹುಡುಗ

೧

ಒಂಬತ್ತು ಬಾಗಿಲುಗಳಿರುವ ಮನೆಗೊಪ್ಪಿದವು
ಒಂಬತ್ತು ಉಪ್ಪರಿಗೆ;
ತುಂಬಿತ್ತು ಸಂಪತ್ತು, ತುಳುಕಾಡುತಿದ್ದವು
ಒಂಬತ್ತು ಕೊಪ್ಪರಿಗೆ.
ಬಿಡಿಗಾಸು ಕೊಡ ಹೊರ
ಬಿಡದಂತೆ ಹಗಲಿರುಳು
ನಿಧಿಯ ಕಾಯುವ ಸರ್ಪ
ಬಂದ ಬಂದವರೆದುರು
ಹೆಡೆಯೆತ್ತಿ ಫೂತ್ಕರಿಸುತಿತ್ತು.
ಕಾಸುಕಾಸಿನ ಪುಂಗಿ
ಯೆಳೆದ ಲೋಹಸ್ವರಕೆ
ಹೆಡೆಯೆತ್ತಿ ತೂಗುತ್ತಿತ್ತು
ನಿಧಿಯ ಕಾಯುವ ಹಾವಿಗಿನ್ನೇನು ಗೊತ್ತು?

೨

ಒಂದು ದಿನ ಮುಂಜಾವು;
ಘಮಘಮಿಸಿದವು ಹೂವು.
ದಿವ್ಯ ಸೌಗಂಧಿಕ
ಸಹಸ್ರ ಸೌರಭಿ ತಾಳಿ
ಬಿರಿದ ದಿಕ್ಕುಗಳಿಂದ
ಬೀಸಿದವು ಗಾಳಿ.
ಅಂದು ಬಂದೇಬಿಟ್ಟ
ಹಾವಾಡಿಗರ ಪುಟ್ಟ

ಹುಡುಗ ಬಲು ದಿಟ್ಟ !
ಮುಗಿಲಿಗಿಂತಲು ನೀಲ
ಮೈಯು ಬಣ್ಣ.
ಮೊಸರು ಬೆಣ್ಣೆಯನುಂಡ
ಮುದ್ದು ಗೊಲ್ಲರ ಬಣ್ಣ.
ತಳಿರು ತುಟಿ ಬಿಡಿಸಿದರೆ
ಮುಗುಳು ನಗೆ ಗಿಣ್ಣ
ಹೆಜ್ಜೆಯಿಟ್ಟರೆ ಸಾಕು
ನೆಲವು ಬಂಗಾರ.
ಗೆಜ್ಜೆಗಳು ಗಂಟೆಗಳು
ಕಿವಿ ತುಂಬ ಸಿಂಗಾರ.

೩

ನಿಧಿಯ ಕಾಯುವ ಸರ್ಪ
ಫೂತ್ಕರಿಸ ತೊಡಗಿತ್ತು,
ಹೆಡೆಯೆತ್ತಿ ಕಣ್ಣಬಿಟ್ಟು.
ಹಾವಾಡಿಗರ ಹುಡುಗ
ಮುಂದೆ ಬಂದೇ ಬಿಟ್ಟ
ಒಂದೊಂದೆ ಹೆಜ್ಜೆಯಿಟ್ಟು.
ಹಾವಿನೆದುರಿಗೆ ನಿಂದು
ಪುಟ್ಟ ಕೈಯೆತ್ತಿದನು,
ನೇವರಿಸಿ ಹೆಡೆಯ ಮೇಲೆ
ಗರುಡವಾಹನನಿತ್ತೆ
ಗಾರುಡಿಗ ಸ್ಪರ್ಶಕ್ಕೆ
ಹಾವಾಯ್ತು ರತ್ನಮಾಲೆ.
ವಿಧಿಯ ಕೊಳಲಿನ ಕರೆಗೆ
ವಿಧಿಯ ಕಾಯುವ ಸರ್ಪ
ಹೊಳೆದಿರಲು ಮಾಲೆಯಾಗಿ
ಎತ್ತಿ ಕೊರಳೊಳಗಿರಿಸಿ
ಮತ್ತೊಮ್ಮೆ ಮಲಗಿದನು
ಶ್ರೀಹರಿ ಶೇಷಶಾಯಿಯಾಗಿ.

ನೀರು

ನೀರಂಚಿನಲಿ ಕುಳಿತ ಬಿಳಿಯ ಕೊಕ್ಕರೆ ಪಕ್ಕ
ತೆರೆದು ಹವ್ವನೆ ಹಾರಿ ಬೆಳ್ಳಗೆ ಮಿಂಚಿ ಹೊಡೆಯೆ ಚಕ್ಕರು
ಬಾಯಿಲ್ಲದಭಿಲಾಷೆಗಳು ಕೆರಳಿ ನಿಂತವನೆ
ಬಾ ಇಲ್ಲಿ.

ಹೂಂಕರಿಸಿ ತೇಂಕಾಡಿ ಅಬ್ಬರಿಸಿ ಗುಡುಗಾಡಿ
ಹೆಡೆಯೆತ್ತಿ ಏರೇರಿ ಬಂದು ದಡದುದ್ದಕ್ಕೂ
ಸಿಡಿದೊಡೆವ ತೆರೆಗಳೊಡ ಕುಣಿಯೆ ಧಾವಿಸಿದವನೆ
ಬಾ ಇಲ್ಲಿ.

ಮಳಲಲಲೆದಾಡಿ ಓಂಕಾರವಡಗಿಹ ಶಂಖ
ಮಳೆಬಿಲ್ಲನೇಳು ಬಣ್ಣಗಳ ಪಡೆದಿಹ ನಿಂಪು
ಕಡಲಬಳ್ಳಿಯ ಬೀಜ
ರವಿಯಗ್ನಿಯುಂಡು ಝಳಪಿಸುವ ಮೀನದ ಎಲುಬು-
ಒಂದೊಂದು ಕೌತುಕವನೂ ಎತ್ತಿ ಕಡಲಗೂಢಗಳನ್ನೆ ಧೇನಿಸುತ್ತ ನಡೆದವನೆ
ಬಾ ಇಲ್ಲಿ.

ನೆಲವ ವ್ಯಾಪಿಸಿ ಮೊರೆವ ವರುಣಸಾಮ್ರಾಜ್ಯವನು
ಬ್ರಹ್ಮದೇವರ ಗುಡ್ಡವೇರಿ ಝುಗ್ಗನೆ ಕಂಡು
ಜಲಚಕಿತನಾದವನೆ
ಬಾ ಇಲ್ಲಿ.

ಮನೆಗೆ ಮರಳಿದರೂನು, ದಿನಗಳುರುಳಿದರೂನು,
ದಿಗ್ದೇಶಗಳಿಗೆ ತೆರಳಿದರೂನು ಉದಧಿಯುದ್-
ಘೋಷವನಗಾಧ ವಿಶ್ವದ ಕೂಗಿನೊಲು
ಎದೆಯಲಿ ಹೊತ್ತು ನಡೆದವನೆ
ಬಾ ಇಲ್ಲಿ.

ಇದು ನೀರು !
ಮನೆಯ ಹಿತ್ತಿಲ ಬಾವಿಯಲ್ಲಿ ತುಂಬುವ ಪ್ರಾಣಜಲವಲ್ಲ,
ಊರು ಕೇರಿಗೆ ಹಸಿರ ಹಾಸಿ ಹರಿಯುವ ಹಳ್ಳ ಹೊಳೆಯಲ್ಲ.

ನೆಲವುತ್ತು ಬಿತ್ತುವರೆ ತಕ್ಕಕಾಲಕೆ ಬಂದು
ಮುಗಿಲಿಂದ ಸುರಿವ ಸೋನೆಯಿದಲ್ಲ
ಕಲ್ಪಾಂತ ಜಲವೆ ನವಖಂಡ ಪೃಥ್ವಿಯು ನುಂಗಿ
ನೊರೆಯುವೊಲು
ಮುಗಿಲಿಗೂ ಕೆರೆಹಾಯ್ಸಿ ಹರಿಹಾಯ್ವ ನೀರು !
ಎಲೆಲೇ ಭೀರು !
ಕ್ಷಿತಿಜಪರಿವೃತ ಜಲಧಿ ದಿಕ್ಕುಗಳ ಮುಕ್ಕಳಿಸುವೀ
ವಿರಾಟವ ಕಾಣೆ, ನಡುಗು.
ದಂಡೆಯಿದಕಿಲ್ಲ, ಬಂಧನವಿಲ್ಲ
ಹಿಂಡುಹಿಂಡಾಗಿ ಅಂಡಲೆಯುತಿದೆ ಜಲರಾಶಿ—
ಕಾಲನ ಕಿರಿಯ ತಂಗಿ, ನೆಲನ ಹಿರಿಯಕ್ಕ,
ಇದನಾಳಬಲ್ಲವ ಗಂಡು ಯಾರಯ್ಯ.
ನೆಲದಣಿಗ !
ನಿನ್ನ ಹೆಜ್ಜೆಯ ಕುರುಹು ಕೂಡ ಮೂಡದು ಇಲ್ಲಿ.
ಕಾಲನಿಟ್ಟಲ್ಲಲ್ಲಿ
ನುಂಗೆ ಕಾದಿಹುದು ಬಾಯ್ತೆರೆದು ಪಾತಾಳದೊಲು
ದುಂಡುತೆಕ್ಕೆಯ ಹಾಕಿ ಕರಿನೀಲ ಜಲಶೇಷ
ಕ್ಷಣ ಸ್ತಬ್ಧ, ಮರುಕ್ಷಣವೆ ವಿಕ್ಷುಬ್ಧ ಪ್ರಕ್ಷುಬ್ಧ.
ಕಣ್ಣೀರ ಹೊಲವಯ್ಯ, ಬರಿಯ ಉಪ್ಪಿನ ಹಳುವು
ದುಡುಕದಿರು ಈ ಅಮಾನುಷ ವಿಫಲ ಸೀಮೆಯ ಸೇರಿ.
ಇದರ ಬಾಳ್ ಬೇರೆ, ಗತಿ ಬೇರೆ, ತಾಳವೆ ಬೇರೆ,
ಮೈ ಬೇರೆ, ಮನ ಬೇರೆ, ಅಂತರಂಗವೆ ಬೇರೆ,
ಉಸಿರ ಮೇಲುಸಿರಿನಲಿ ದಿಕ್ತಟಗಳಾಚೆಗೂ
ಹಾಯ್ವ ಉರುಬೇ ಬೇರೆ,
ಬಸಿರಲ್ಲಿ ತುಡಿವ ಬಲ ಬೇರೆ ಛಲವೇ ಬೇರೆ.
ಎದೆಯ ಬಯಲಲ್ಲಿ ಹಗಲಿರುಳು ತೆರೆಗಳ ನಟ್ಟಿ
ತರುಬಿ ಹುಯಿಲುವ ಗಾಳಿ.
ಒಡಲ ಕಂದಕದಿ ಹೊಯ್ದಾಡುವಂಧಃಕಾರ
ದಲ್ಲಿ ಯುಗಯುಗ ಜನಿತ ಹಿಂಸ್ರ ಭೀಕರ ಸೃಷ್ಟಿ.
ತನ್ನ ತೋಷವನೊ ರೋಷವನೊ ಮಡಿಲೊಳಗಿಟ್ಟು
ಯಾವ ಛಂದಕೊ ತೂಗಿ ನೂಗುವರು ದಿನರಾತ್ರಿ.
ಹೋಗದಿರೆಯ್ಯೊ ಇದರ ನೀಲ ಏಕಾಂತವನು
ಈಚೆಯಿಂದಾಚೆಗೂ ಚಾಚಿ ಕುದಿಯುವದಿಲ್ಲಿ
ಮತ್ಸ್ಯಗಂಧಿತ ತಿಮಿತಿಮಿಂಗಿಲೋದರ ಮರಣ !

ಫೈಲು

ಒಂದಿನಿಸು ಬಿಸಿಲು ಬಿದ್ದರೆ ಸಾಕು
ಹುಚ್ಚೆದ್ದು ನಡೆವವರು ನಾವು
ನಮಗೇತಕಯ್ಯ ಈ ಫೈಲು ಫೈಲಿನ ರಗಳೆ.
ಮನದ ಮಾತಿನ ಮಗಳೆ
ಕವಿತೆ
ಪಡುತಿಹಳು ವ್ಯಥೆ
ಹೊಸ್ತಿಲಾಚೆಗೆ ನಿಂತು ಕಾದು ಕಾದು
ಕರೆದೊಯ್ಯಲೆಳಸಿ
ಜೀವವನದುಮಿ ಬೆಳೆದ ಈ ಹತ್ತುಗೋಡೆಗಳಾಚೆ
ಈ ಒತ್ತುಗರಡು, ಮಸಿ, ಬರಡು ಕಾಗದ
ಸುತ್ತ ಕರಡು ಗೀಚುವ ನೂರು ಕೈಗಳಾಚೆ
ಕಡಲ ಮುದುಕನ ತೆರದಿ ಹೆಗಲಲ್ಲೆ ಕುಕ್ಕರಿಸಿ
ಆಚೆ ಕೋಣೆಯಲಿಂದೆ ಆಹಾ ಜೀವವನಿಕ್ಕುಳಲಿ ಹಿಡಿದು ಕುಳಿತ ಸಾಹೇಬನಾಚೆ.

ಆ ಅಲ್ಲಿ ಹೊರಗೆ ಬಿತ್ತರ ತೆರೆದ ಬಾನಡಿಗೆ ಹರಡಿಹುದು ಬಿಡುಗಡೆ.
ಬೀಸಿಹುದು ಗಾಳಿ, ದಡಸೂಸಿ ಹರಿದಿಹುದೆ ಹಾ ಮನುಜೀವನದ ಜಲ—
ತಿಳಿ ಕದಡು ಗಂಭೀರ ಶಾಂತ ಕಾಂತ ನಿಕಾಂತ ಚಲವಿಚಲ—

ಜಗದ ಐತಿಹ್ಯವನ್ನೆಲ್ಲ ಹೊತ್ತು
ಕರೆಯುತಿದೆ ಮೀಯೆಂದು ಪ್ರಾಣಪೋಷಕ ಪಾತ್ರ.
ನಾವಿಲ್ಲಿ ಒಳಗೆ ಸಿಕ್ಕವರು ಮಾತ್ರ
ಕುರ್ಚಿಯಲಿ ಕುಳಿತಲ್ಲೆ ಗಲಿತ ಗಾತ್ರ
ನಿಮಿಷ ನಿಮಿಷಕ್ಕೊಮ್ಮೆ ಬಡೆದು ಪೇದೆಯನಟ್ಟಿ ಅಲೆಯಿಸುವ ಕೈಗಂಟೆ

ಬಿಡೆದೆ ಬಾಗಿಲ ನೂಕಿ ದಿನದುದ್ದ ಫೈಲುಗಳು ತರುವ ತಕರಾರು ತಂಟೆ
ನೂರುತರದ ಸಮಸ್ಯೆ ನೂರುತರ ಪರಿಹಾರ
ಸೂಚಿಸುತ ಶಂಕಿಸುತ ಯೋಚಿಸುತ ಅಂಕಿಸುತ
ಹಲವು ಮೆದುಳುಗಳು ಮೇಜಿಗೆ ಅಡಕಲೇರಿಸುವ ಗೌಜಿ ಗಜಿಬಿಜಿಯು ಸಂತೆ.

ನಿದ್ದೆ ಎಚ್ಚರಗಳಲು
ರೂಲು ಸ್ಕೇಲು ಕರಾರು
ಭತ್ತೆ ಭಡತಿ ಪಗಾರು
ಅರ್ಜಿ, ಮರ್ಜಿಯ ಹುಕುಮು, ಮೆಹತಬಾನಿ
ಮುರವತ್ತು ಮುತುವರ್ಜಿ ಹುಜರೆ ಮುಜರೆ ಸಲಾಮು
ಉದರಭರಣಕೆ ಏಸು ಸತ್ತ್ವಹಾನಿ !
ಮನದ ಕೊನೆಗೆಲ್ಲ ಹಬ್ಬಿದೆ ಹಾಳು ಕಳ್ಳಿಯೊಲು
ಕಾನೂನ ಬಳ್ಳಿ ಹರಿಬಿಟ್ಟ ಕಲಮು.
ಟೀಕು ಟಿಪ್ಪಣಿ ಬರೆದು ಮೇಲಿನಪ್ಪಣೆ ಪಡೆಯೆ
ಜೀವಕ್ಕೆ ಹತ್ತೆಡೆಗೆ ಜಖಮು ಜುಲುಮು.
ಮೆದುಳ ಮೇಲ್ಭಾಗದಿಂದಲೆ ಎಲ್ಲ ವ್ಯವಹಾರ
ನೋಂದು ದಾಖಲೆಯೆಂಬ ಖಾತೆಯೀ ಹಣೆಭಾರ
ಹೊತ್ತು ಓಡಾಡುತಿವೆ ಸುತ್ತ ಫೈಲು
ಆಡಿದ್ದನಾಡಾಡಿ ಮಾತು ಬೆಳಸಿ
ಏರಿಳಿದು ಮೈಲುದ್ದ ದಾರಿ ಬಳಸಿ.
ಈ ಕಾಗದದ ಸರಕ ಮೇಲೆ ಕಾವಲನಿಟ್ಟು
ಇದರ ಆವಕ ಜಾವಕದ ಮೇಲೆ ಕಣ್ಣಿಟ್ಟು
ಕುಳಿತೆವಯ್ಯಾ ಇಲ್ಲಿ ತಲೆ ಮೇಲೆ ಕೈಯಿಟ್ಟು
ಶುಷ್ಕ ಆಯಾಸದಲಿ ಆಯು ವ್ಯಯಿಸಿ.
ಒಡಲಿಂದ ವ್ಯರ್ಥ ಉದ್ದಕು ಹೊರಟ ನೂಲಿನಲಿ
ಸುತ್ತಿಬಿದ್ದಿದೆ ಜೀವ.
ಸುತ್ತುಬಿದ್ದಿದೆ ಮನುಸು ಕನಸುಗಳ ಕಳಕೊಂಡು
ಬರಿದಾಗಿ ಅಸು ಯಂತ್ರದಂತೆ ಅತಂತ್ರ ದುಡಿಯುತಿದೆ
ಒಣಬೆಯೊಲು ಬೆಳೆದ ಈ ಫೈಲುಗಳ ನೆಳಲಲ್ಲಿ.
ಅಣಬೆ ತಲೆಯೆತ್ತುತಿವೆ ಅಹ ಬೀಳುನೆಲದಲ್ಲಿ.
ಬುದ್ಧ ಬಂದರು
ಏಸುವನು ಸಿಲುಬೆಗೇರಿಸುತ ಕೊಂದರೂ
ಅಲೆಯೊಂದು ಹಾಯದಿಹ ಸೊಟ್ಟು ಕಾಣವಿದೆಯ್ಯ
ತಾನೆ ತನ್ನಷ್ಟಕೆ ತಿರುಗಿ ಸಣ್ಣಗೆ ಅರೆವ ಹೊಟ್ಟುಗಾಣವಿದಯ್ಯ
ನಮಗೇತಕಯ್ಯ ಈ ಇಂಥ ಸಾವು—
ಒಂದಿನಿಸು ಬಿಸಿಲು ಬಿದ್ದರೆ ಸಾಕು
ಹುಚ್ಚೆದ್ದು ನಡೆವವರು ನಾವು.

ಎ. ಜಿ. ಭಟ್ಟ

ಆತ್ಮ ಶೋಧನೆ

ಹುಡುಕಿದೆ ಹಗಲೆಲ್ಲಾ
ಎಲ್ಲೂ ಸಿಗಲಿಲ್ಲ.
ಹಳಬರು ಹೇಳಿದ ಆತ್ಮವು ನನಗೆ
ಎಲ್ಲೂ ಸಿಗಲಿಲ್ಲ.

ಗುಡಿಯಲಿ ಬರಿಕಲ್ಲು
ವೇದ ಪುರಾಣದ ಪೀಠದ ಮೇಲೆ
ಬೆಳೆದಿದೆ ಒಣಹುಲ್ಲು.

ಹುಡುಕಿದೆ ಮಗುವಿನ ಕಣ್ಣಿನಲಿ
ಮಸಣದ ಮಣ್ಣಿನಲಿ
ಸಿಗಲಿಲ್ಲ.
ಪರಿಕಿಸಿದೆನು ಚೆಲುವಿನ ಕೆನ್ನೆ
ಒಳಗಡೆ ಬರಿ ಸೊನ್ನೆ
ಹಾರಿದೆ ಕಣ್ಣೀರಿನ ತಳಕೆ
ಕೇಸುರಿಗಳ ಜೋಲೆಯು ಝುಳಕೆ
ಅಲ್ಲಿ
ಹೆಣವೂ ಸಿಗಲಿಲ್ಲ
ಆತ್ಮದ
ಕಣವೂ ಸಿಗಲಿಲ್ಲ.

ಮತ್ತೆಲ್ಲೆಲ್ಲೋ ಹುಡುಕೇ ಹುಡುಕಿದೆ
ಆತ್ಮವು ಸಿಗಲಿಲ್ಲ.
ಪುಣ್ಯಕೆ
ಹುಚ್ಚಲೆದಾಡುವ ನನ್ನನ್ನು ನೋಡಿ
ಯಾರೂ ನಗಲಿಲ್ಲ !

ಬಳಲುತ ಬರುತಿರಲಾ ಸಂಜೆ
ಯತಿಯೊಬ್ಬನ ಕಂಡೆ

ಆತ್ಮದ ಶೋಧನೆ ಕತೆಯನು ಕೇಳಿ
ಯತಿ ಗಹಗಹಿಸಿದನು
ಹೇಳಿದ ಕೊನೆಗೆ
"ನಡೆ ಮನೆಗೆ—
ಕಾಣುವ ಆತ್ಮನ ಮನೆಯಲ್ಲೇ"
ಅನಿಸಿತು: ಅಲೆದಾಡಿದೆ ಸುಳ್ಳೇ.

ಮನೆಯಲಿ ಮಂಚದ ಮೇಲೊರಗಿ
ಆತ್ಮವ ಕಾಣದೆಯೇ ಕೊರಗಿ
ಏನೂ ತಿಳಿಯದೆ ಕುಳಿತಿರಲಾರೋ
ಕರೆದರು. ನೋಡಿದೆ ಹಿಂತಿರುಗಿ
ಯಾರೂ ಇದ್ದಿಲ್ಲ
ನನ್ನುಸಿರಿನ ಸದ್ದಿಲ್ಲ.

ಆ ಕರೆ ಬಂತು.
ತಡೆಯುವದೆಂತು?
ಕರೆಯನು ಹಿಂಬಾಲಿಸಿ ನಡೆದೆ.
ದೊಡ್ಡ ಕಪಾಟಿನ ಬಳಿ ತಡೆದೆ.
ಅದರೊಳಗಿಂದ
"ಬಾಬಾ ಕಂದ"

ಎಂದೆನ್ನಾರೋ ಕರೆಕರೆಯೆ
ಗುರುತಿಸಿ ಆ ಹೊತ್ತಿಗೆ ತೆರೆಯೆ
ಅದರೊಳಗಿಂದ
"ಇದೊ ಇದೊ ಕಂದ
ನಾನಿಹೆನಿಲ್ಲಿ
ಹುಡುಕುವೆ ನೀನೆಲ್ಲಿ?"

ಸಿಕ್ಕಿತು! ಸಿಕ್ಕಿತು!
ಆತ್ಮವು ನಕ್ಕಿತು
ಕಿಟ್ಟೆಲ ಕೋಶದ ನೂರಾ ಐವತ್
ಮೂರನೆ ಪುಟದಲ್ಲಿ
ಹರಿ ಓಂ ಹರ ಓಂ ಹರಿಹರ ಓಂ ಸತ್
ಆತ್ಮವು ಇನ್ನೆಲ್ಲಿ?
ಹಳಬರು ಹೇಳಿದ
ಆತ್ಮವು ಇನ್ನೆಲ್ಲಿ?

ತವರ ಮನೆಯಿಂದ ನಾ ನಿನ್ನ ಕರಸಿದನೇಕೆ?

ತವರು ಮನೆಯಿಂದ ನಾ ನಿನ್ನ ಕರಸಿದನೇಕೆ
ಇಷ್ಟು ಅವಸರ ಮಾಡಿ ತಂತಿ ಬಿಟ್ಟು?
ನನಗಾಗಿ ಅಲ್ಲವೇ ಅಲ್ಲ ಓ ಮಾರಾಯ್ತಿ
ನನ್ನ ಮೇಲೀಪರಿಯದೇಕೆ ಸಿಟ್ಟು?

ತುಸು ತಾಳು. ಶಾಂತಿಯೇ ಇಂದು ವಿಶ್ವದ ಮಂತ್ರ
ನನ್ನ ಮಾತನು ಸೊಲ್ಪ ಕೇಳು ರಾಣಿ
ನಂಬಿದರೆ ನಂಬು; ಸರಿಯೆನಿಸದಿರೆ ನಕ್ಕುಬಿಡು
ಇದು ನಿನ್ನದೇ ಕವಿಯ ಪುರುಷವಾಣಿ

ಚಳಿಗಾಲವಾದರೂ ನನಗೇನು? ರಗ್ಗುಂಟು
ಬೆಚ್ಚಗಿದೆ ನಿನಗಿಂತ ನೂರು ಪಟ್ಟು
ಪಾಪ ಬೆಕ್ಕಿನ ಮರಿಯು ಕೂಗಿ ಸಾಯಲು ಬಿತ್ತು
ಒಲೆ ಬೆಚ್ಚಗಿಲ್ಲದೆಯೆ ದಿಕ್ಕುಗೆಟ್ಟು

ಅದಕಾಗಿಯೇ ನಿನ್ನ ಕರೆಸಿದೆನು. ತಪ್ಪೆ?
ಮರಿಯು ಕೊರಗನು ಅರಿಯದವನೆ? ಬೆಪ್ಪೆ?

ಮೂರ್ತಿ

ಈ ಗಾಳಿಯ ಬೆನ್ನ ಮೇಲೆ
ಮೂರ್ತಿಯೊಂದ ಕೆತ್ತಬೇಕು

ಅದಕೆ ಎಲ್ಲ ಸಾಧನ
ಈ ದೇಹಾ ಈ ವಿದ್ಯಾ
ಜನನ ಮರಣ ವೇದನಾ

ಅಲ್ಲವೊ ಇದು ಮಿದುಮೇಣ
ಮೊಂಡಾಗುವದೀ ಚಾಣ
ನೀರ ಮೇಲೆ ಮಣ್ಣ ಮೇಲೆ
ಮತ್ತೆ ಮತ್ತೆ ಮಸೆಯಬೇಕು

ಕಾಲವು ಸರಿಯುವುದು
ಚಾಣವು ಮುರಿಯುವದು
ಎಸೆಯಬೇಕು
ಬೇರೆ ಜನ್ಮವೆತ್ತಬೇಕು
ಮೂರ್ತಿಯೊಂದ ಕೆತ್ತಬೇಕು
ಈ ಗಾಳಿಯ ಬೆನ್ನಮೇಲೆ—

ವಿನೋಬಾ ದರ್ಶನ

ನೆಲಕೆಲ್ಲ ಹಬ್ಬಿರುವ ಹೂಗಂಪುಗಳ ನೀನು
ಹಿಡಿದು ಮಾಲೆಯಕಟ್ಟಿ ಕೊಡುವೆಯೇನು ?

ಮುತ್ತುಗಳ ಬಸರಿನಲಿ ತುಳುಕಾಡುತಿದೆ ನೀರು
ಅದನು ಕೊಡದಲಿ ತುಂಬಿ ಕೊಡುವರಾರು ?

ಹೆರವರಿಗೆ ಸಿಗದಂತೆ ಸೂರ್ಯಬಿಂಬವನೆಲ್ಲ
ನೆಲಮಾಳಿಗೆಗೆ ಸೆಳೆದು ಹೂಳಬಹುದೇ ?
ತನ್ನ ತ್ರಿಜೂರಿಯಲಿ ಹುದುಗಬರುವೆಯು ಎಂದು
ಮಾರುತನ ವರ್ಲ್ಡ್ ಬ್ಯಾಂಕು ಕೇಳಬಹುದೇ ?

ಭೂದೇವಿ ಮೈಮೇಲೆ ಎಕರೆ ಗುಂಠೆಯು ಗೆರೆಯ
ಕೊರೆದು ದಸ್ತೇವೋಜು ಮಾಡಬಹುದೇ ?
ಭೂತ ಗಣಗಳು ಬಂದು "ಮಾಡುವೆವು" ಹೇಳಿದರೆ
ಜೀವದೇವನು ಸುಮ್ಮ ಕೂಡಬಹುದೇ ?

——ಆವೇಶದಲಿ ವಿನೋಬನ ಕಣ್ಣು ತುಳುಕಿತ್ತು
ಬಿದ್ದ ಹನಿಯನು ಹಿಡಿದೆ ಹೃದಯದಲ್ಲಿ
ಮುತ್ತುಗಳ ಬಸಿರಿನಲಿ ತುಳುಕಾಡಿದಂತೆಯೋ
ಇರಲಿ ಆ ಬಿಂದು ಎದೆ ಸಿಂಪಿನಲ್ಲಿ.

ಎಲ್. ಆರ್. ಹೆಗ್ಗಡೆ

ರಂಪಣಿ ದೋಣಿ

ಬಡ್ತನ್ದಲ್ಲೇ ಹುಟ್ಬೆಳ್ದೋರು
ಬಡ್ತನ್ದಲ್ಲೇ ಸಾಯ್ವೋರಾದ್ರೂ
ಬಡ್ತನದ ಸಂಗ್ತೀ ಹೊಡ್ದಾಡ್ಕಂಡು
ದುಡ್ಯೋರ್ನಾವು
ನಮ್ದು ರಂಪ್ಣಿ ದೋಣೀ ॥

ಕಡ್ಲಾಗ್ಯೆಷ್ಟು ಮೀನಿದ್ರೇನು ?
ದುಡೀದೆ ಬಂದ್ ಬಂದ್ ಬೀಳ್ತದ್ಯೇನು ?
ಹಿಡಿಬೇಕೆಂತ ಎಷ್ಟಾದ್ರೂನು
ಹೊರ್ಟೇವ್ನಾವು ।
ನಮ್ದು ರಂಪ್ಣಿ ದೋಣೀ ॥

ಅಡ್ವಿಮರಗೊಳ ನೆರಳಿದ್ದಂತೆ
ದೊಡದೊಡ ಬಲೆಗಳ ನೆಯ್ದಿಟ್ಕೊಂತ
ಮಾರೀಬಲೆಗಳ ಮಾಡ್ಕೊಂಡವ್ರೆ
ಸಣ್ಬೆನ್ನುಗ್ಳಿಂದ ।
ನಮ್ದು ರಂಪ್ಣಿ ದೋಣೀ ॥

ಮೀನ್ಗೊಳ್ ನೀರಲ್ ಕಪ್ಪುಕಪ್ಪಾಗಿ
ಗುಂಪಾಗ್ ಕಂಡಾಗ್ ಹೊಗ್ತೇವ್ಬೇಗ
ಗಂಜೀಬೊಡ್ಡೆ ತುಂಬಿಟ್ಕಂಡು
ದೋಣೀ ಬಿಟ್ಕಂಡು
ನಮ್ದು ರಂಪ್ಣಿ ದೋಣೀ ॥

ವಬ್ರಿಗ್ ಕಮ್ಮಿ ವಬ್ರಿಗ್ ಹೆಚ್ಚು
ಪರ್ವಂಚಿಲ್ದೆ ಸವ್ನಾಗ್ ಹಚ್ಚು
ತತ್ವಾ ಇಟ್ಕಂಡ್ ಬಲೆ ಚಾಚು
ಕೆಲ್ಸ ಮಾಡ್ವವ್ರು ।
ನಮ್ದು ರಂಪ್ಣಿ ದೋಣೀ ॥

ರಾತ್ರಿ ಹಗ್ಲ್ಲಯೆಂಬೂದಿಲ್ಲ
ಥಂಡಿ ಬಿಸ್ಲು ತಾಗೂದಿಲ್ಲ
ದೋಣಿಮನೆ ಒಂದೆಯೆಲ್ಲಾ
ಸಮುದ್ರುದ್ ಸಂಸಾರ ।
ನಮ್ದು ರಂಪ್ಣಿ ದೋಣೀ ॥

ಕೋಳಿ ಬಲಿಕೊಟ್ರೆ ಜಾಸ್ತಿ
ಜಟ್ಗಾಬಿಟ್ಗಾ ದೆವ್ವಮಾಸ್ತಿ
ಮಾಡ್ತವೆ ನಮ್ಗೆ ಬಲೆಸೂಸ್ತಿ
ಸಂದ್ರುದ ನೀರ್ನಲ್ಲಿ ।
ನಮ್ದು ರಂಪ್ಣಿ ದೋಣೀ ॥

ಪಾಪ ಪುಣ್ಯ ಅಂಬೂದ್ಯೆಲ್ಲ
ಬ್ರಾಂಬ್ರೀಗಿರ್ಲಿ ನಮ್ಗ್ಯೇನಿಲ್ಲ
ಕೊಂದ ಬಂದ ಪಾಪ ತಿಂಬೂದಿಲ್ಲ
ಸುಮ್ಮಂಗ್ ಮನ್ಗವೋರು ।
ನಮ್ದು ರಂಪ್ಣಿ ದೋಣೀ ॥

ಹೆಂಡ ಕುಡ್ಯೋದ್ ಬಿಡಬೇಕೆಂತ
ಬ್ರಾಂಬ್ರೀಗುಪದೇಸ ಮಾಡ್ಬೇಕಿಂಥ
ಥಂಡೀನೀರ್ನಲ್ ಕೆಲ್ಸ ಗೈತ
ಹೆಂಡ ಕುಡಿಬೇಕು ।
ನಮ್ದು ರಂಪ್ಣಿ ದೋಣೀ ॥

ಹೂವಿನ ಮಕ್ಕಳು

ಕುಣಿಯುತ್ತ ಮೈ ಮೈ ಥೈಥಕ ಥೈ ಥೈ
ಜಾತ್ರೆಯ ಸಮಯಕ್ಕೆ ಹಿಗ್ಗಿನ ಥೈ ಥೈ

ದೇವಿಯ ಸೇವೆಗೆ ಹೂವಿನ ಮಕ್ಕಳು
ಕುಣಿಯುತಲಿರುವರು ರೈತರ ಮಕ್ಕಳು.

ತಲೆಮೇಲೆ ಹೂವಿನ ಹಾರ ರುಮಾಲು
ಮೈಮೇಲೆ ಹೂಗಳ ಸರಗಳ ಶಾಲು

ಕುಸುಮಾಲೆ ಹೂಗಳ ಬಲೆ ಮೈಮೇಲೆ
ಗೋವೆ ಸಂಪಿಗೆಗಳ ತಲೆಗಳ ಮಾಲೆ.

ಕಾಲಿಗೆ ಕಿರುಗೆಜ್ಜೆ ಕೈಗೆ ಹೂಕೋಲು
ಹೆಜ್ಜೆಯ ಗತ್ತಿಗೆ ಕುಣಿವ ಕುಶಾಲು

ಕುಣಿಯುವ ಗತ್ತಿಲೆ ಗದ್ದೆಯನೂಳಿ
ಸುತ್ತಲು ತಿರುಗುತ ಕುಣಿಯುವರೋಳಿ.

ಬೀಜವ ಬಿತ್ತುವ ನಟನೆಯ ತಾಳಿ
ದುಡಿತದ ದೃಢಮನದಿ ಕಳೆಯನು ಕೀಳಿ

ಬೆಳೆಯುತ ಪೈರನು ಕೋಲಲಿ ಸವರಿ
ರಾಸಿಯ ಹಾಕುವ ಕುಣಿತದಿ ಬೆವರಿ.

ಕೈಗಳೆರಡರಲು ಮೆದೆಗಳ ಹಿಡಿದು
ಥೈಥಕ ಥೈ ಥೈ ಬತ್ತವ ಬಡಿದು

ರೈತರ ಹೋರೆಯ ಕುಣಿತದ ನೋಟ
ಬಾಗುತಲೇಳುವ ಕುಣಿಯುವ ಮಾಟ.

ವನರಾಜ ಹೂಗಳ ಶೋಭೆಯ ಪಡೆದು
ತನಿಗಾಳಿ ಸುತ್ತಿಗೆ ಮೈಯೆಲ್ಲ ಮಣಿದು

ವನರಾಣಿ ಸೇವೆಗೆ ಫಲಗಳನಿಡಿದು
ಜನತಾಜನಾರ್ದನಗೆ ಮೈಯೆಲ್ಲ ದುಡಿದು.

ಭಾವುಕತನದಲಿ ಭಕ್ತಿಯಮಾಲೆ
ದೇವಕುಲದ ಮುಂದೆ ರೈತರ ಲೀಲೆ !

ಹೀಗಾಯಿತೆ!!

ನೀ ಬಿಟ್ಟಿಹ ಜಡೆ
ಕಾಳಿಂಗನ ಹೆಡೆ
ಕೊರಳನು ಕೊಂಕುತಿರೆ
ಹಾಕಲು ಹೆಜ್ಜೆ
ಝಣೆರೆನೆ ಗೆಜ್ಜೆ
ಚಲಿಸದೆ ಕಣ್ಣ ತೆರೆ!

ನಿನ್ನಯ ದಿಟ್ಟಿ
ಕೊರಳಿಗೆ ಕಟ್ಟಿ
ಎಳೆದೊಯ್ಯುವ ಕಣ್ಣೆ!
ನಿನ್ನಯ ಮೈಯಿ
ಮುಟ್ಟಲು ಕೈಯಿ
ಕಾಳೆಮ್ಮೆಯ ಬೆಣ್ಣೆ!!

ಕುಪ್ಪಸ ಬಿರಿಯೆ
ಮುಸುಗಿನ ತೆರೆಯೆ!
ಮೈಮುರಿದೊಡೆಯುತಿರೆ!
ಏತಕೆ ಬಿಂಕ
ಹಿಡಿಸುವಿಯಂಕ
ರತಿರಾಗವ ಕರೆಯೆ!

ನೋಡುತನಿಂದೆ
'ಯಾಕಡೆಗೆಂದೆ'
ನೀ ಕುಡಿನೋಟ ಬಿಡೆ!
ಬಳುಕುತ ನಡೆದೆ
ಥಳಕನೆ ಹೊಳೆದೆ
ಮೈ 'ಝುಮ್ಮೆ'ನ್ನುತಿರೆ!!

ಮೆಲುನಗೆ ಉಕ್ಕೆ
ಕುಲುಕುಲು ನಕ್ಕೆ
ಅದೆ ಆಯಿತು ರೆಕ್ಕೆ !
ಹಾಡುತ ಬಂದೆ
ಪಕ್ಕದಿ ನಿಂದೆ
ಎರಡಕ್ಷಿಯ ಚುಕ್ಕೆ !!

ನಿನ್ನಯ ಕೆನ್ನೆ
ಎರಡಕು ನಿನ್ನೆ
ಜೇನ್ ತುಂಬಿಟ್ಟರೆನೆ !
ಚೆಂದುಟಿ ಬಿರಿಯೆ
ಜೇನ್‌ಸಲೆ ಸುರಿಯೆ
ಚುಂಬಿಸಿ ಚೀಪಿದೆನೆ !!

ರಾಜಗೋಪಾಲ ಕ. ವೆಂ.

ಹೂ ತುಂಬಿದ ಮರದ ನೆರಳು

ಹೂ ತುಂಬಿದ ಮರದ ನೆರಳು ಹೂವಿಗಿಂತ ಹಗುರ
ನೆಳಲ ಹೂತಳದಿಂದ ಹೆರಳ
ಹೂತನಕ ಬಹು ಸುಂದರ
ತೆರೆದ ಹೂಮನದ ಸಿಂಗಾರಕ್ಕೆ ಹೊಂಗನಸಿನ ಹಾರ
ಹೂವಿನ ಹೆಡೆಯಾಡುವ ನೆಳಲಿನ ನಗೆ ಹೂವಿನ ಸ್ವರ !

ನೆಳಲ ಸಂಭ್ರಮದುಸಿರ ಬಲೆಯೊಳಗೆ ಹೂವು ನೆಳಲು
ತಿಳಿನೀರಿನೆವೆಯು ನೆಳಲಲ್ಲಿ ಸೊಗದ-
ಕನಸಿನ ಪಚ್ಚೆ ಮರಳು
ನೆಳಲು ಹಸುರಾಗಿ ಕನಸು ಹೂವಾಗಿ ತೇಲಿ ಬರಲು
ತಳದ ಹೂಮರಳ ನೆಳಲಿನ ಮುಡಿಗೆ ನಗುವ ಬಂಗಾರದರಳು !

ಹೂ ಮುಡಿವ ಸಡಗರದ ನೆಳಲ ಮಣ್ಣಿನ ಬೆರಳು ಅರಳುತಿರಲು
ಮಣ್ಣು ನೆಳಲಿನ ನಗೆಯು ತಾಯಿ ಕರುಳಿನ ಕರೆಯು
ಬಂಗಾರದರಳ ಕತೆಯನು ಕಟ್ಟಿ ಮುಡಿಯುತಿರಲು
ನೆಳಲು ಹಸಿರುಡಿಗೆಯುಲಿ ನಿಂತು ಹಣ್ಣ ಬಯಸುತಿಹುದು !

ಎಸ್. ಅನಂತನಾರಾಯಣ

ನನ್ನ ನಿನ್ನ ಅಂತರ

ನಿನ್ನದು ಆ ತೀರ—ನನ್ನದು ಈ ತೀರ.
ನಟ್ಟನಡುವಿನಂತರ—ತೊರೆಯ ಅಭ್ಯಂತರ,
ಕಿರಿದಹುದು, ಕಿರಿದಲ್ಲ; ಹಿರಿದಲ್ಲ, ಹಿರಿದಹುದು;
ಕಿರು ತೊರೆಯ ಅಂತರ—ಕಡಲಿನಂತರ !

ಹರಿಯುವಲೆಗಳಂತೆನ್ನ ಮನಸಿನಾತುರ
ಹರಿಯುತಿದೆ, ಕೊರೆಯುತಿದೆ ಒಲವ ಕಾತರ.
ಮೌನದಲ್ಲೆ ಮರುಗಿಸಿದೆ ಹೃದಯದ ಭಾರ.
ಕಿರು ತೊರೆಯ ಅಂತರ—ಕಡಲಿನಂತರ !

ಮುಗಿಲಿನ ಮಡಲಿನಲ್ಲಿ ಮೋಡದ ಮರೆಗೆ
ಮಿಣುಕುತಿರುವ ತಾರೆಗಿಂತ ದೂರ ಆಚೆಗೆ
ಸಾಗುವಾಸೆ ಆಗಿಹೋಯ್ತು ಎದೆಯ ಸುಡುಹೊಗೆ.
ಕಿರು ತೊರೆಯ ಅಂತರ—ಕಡಲಿನಂತರ !

ಈ ತೀರ, ಆ ತೀರ, ಎಂದೆಂದು ಬಲು ದೂರ.
ಸಂಧಿಸಲು ಹವಣುಂಟು, ನಟ್ಟನಡುವಿನಂತರ
ಬಲು ಕಿರಿದು, ನಾಲ್ಕು ಗೇಣು; ಹವಣೆಲ್ಲ ಹುಡಿದಾರ.
ಕಿರು ತೊರೆಯ ಅಂತರ—ಕಡಲಿನಂತರ !

ಪಡುಗಡಲು

ಹೊಡೆ—ಹೊಡೆ—ಹೊಡೆ
ಪಡುಗಡಲಿನ ತೆರೆ
ತಡಿಯೊಡೆಯುವವರೆಗೂ.
ತಡೆ—ತಡೆ—ತಡೆ
ಕಡಲಲೆಗಳ ಹೆಡೆ
ದಡ ಮುಟ್ಟುವವರೆಗೂ.

ನಡೆ—ನಡೆ—ನಡೆ
ಕೆಡೆದೆಬ್ಬಿಸುತಲೆ
ಮುಗಿಲಪ್ಪುವವರೆಗೂ.
ಕಡೆ—ಕಡೆ—ಕಡೆ
ಕಡೆದುಬ್ಬಿಸು ತೆರೆ
ನೊರೆಯಾಗುವವರೆಗೂ.

ಮಡು—ಮಡು—ಮಡು
ಬಡಿವಾರದ ನೊರೆ
ಕುಣಿದಾಡುವ ಸೆರಗು,
ಪಳ—ಪಳ—ಪಳ
ಥಳ ಥಳಿಸುವ ನೊರೆ
ಪರೆ ಕಳಚುವವರೆಗೂ.

ಸುಡು—ಸುಡು—ಸುಡು
ರವಿಯುರಿಯುತಲಿರೆ
ಅಡಿ ಮುಟ್ಟುವವರೆಗೂ,
ಬುಳು—ಬುಳು—ಬುಳು
ಕಡಲಂಚಿನ ಕಿರಿ
ಒಯ್ಯಲಿನೆದೆ ಬರುಗು.

ಉರಿ—ಉರಿ—ಉರಿ
ಕೆನ್ನಾಲಗೆಯುರಿ
ಕಡಲಾ ಕೊನೆವರೆಗೂ,
ಅಲೆ—ಅಲೆ—ಅಲೆ
ಉರಿ ಹೊತ್ತಿರೆ
ಸಾಗರ—ಸುಡುತರಗು.

ಸಿರಿ—ಸಿರಿ—ಸಿರಿ
ಕೆಂಬಣ್ಣದ ಸಿರಿ
ಮುಗಿಲಂಚಿನವರೆಗೂ,
ಕರಿ—ಕರಿ—ಕರಿ
ಕರಿ ಸೀರೆಯ ಸಿರಿ
ಇರುಳಿಳಿಯುವವರೆಗೂ.

ಧಗೆ—ಧಗೆ—ಧಗೆ
ಎಲ್ಲೆಲ್ಲಿಯು ಹೊಗೆ
ಗಾಳಿಯು ಸುಳಿ ಸೆರಗು
ಮೊಗೆ—ಮೊಗೆ—ಮೊಗೆ
ಮೊಗೆ ನೀರಿನ ಹನಿ
ಮೈ ಮುಚ್ಚುವವರೆಗೂ.

ಸಿಡಿ—ಸಿಡಿ—ಸಿಡಿ
ಸಿಡಿಲಂತಕನೊಲು
ಮುಡಿಯುರುಳುವವರೆಗೂ.
ಬಡಿ—ಬಡಿ—ಬಡಿ
ಭೋರ್ಗರೆಯುತ ನಡಿ
—ಅಡಿಗೆರಗುವವರೆಗೂ.

ಗಾಳಿಮರ

೧

ಥರ್‍ರೆಂದು ಡುರುಕಿಯು ಹೊಡೆದು ಕಾಲು ಕೆದರಿ,
ಟಣ್ಣನೇ ಪುಟನೆಗೆದು ಮೈಮೇಲೆ ಹಾರಿ,
ಸಿಕ್ಕುಸಿಕ್ಕುದನೆಲ್ಲ ಸಿಗಿದುಹಾಕುವೆನೆಂದು
ಭರಭರಾಟಿಲಿ ಹೊರಟ ತುಂಟ ಗೂಳಿ,
ಈ ಕಡಲ ಗಾಳಿ !
ಅದ ಕಂಡು ಬಲು ಬೆದರಿ
ಮೈಯು ಮುದರಿ,
ಬಿದ್ದುಕೊಂಡಿರಲಿತ್ತ ಬಡಪಾಯಿ ಭೂಮಿ
'ತನಗಿನ್ನು ಗತಿಯಾರು ?' ಎಂದು ಹೌಹಾರಿ !
ಮೈದೋರಿದದು ಮಧ್ಯೆ ಈ ವೃಕ್ಷವೀರ,
ಅಭಯಂಕರ !

೨

ನಗುವಿರದ ಬಿಗುವಿರದ
ಅಳುವಿರದ ಅಳುಕಿರದ
ಹೂವು-ಹಣ್ಣುಗಳಿರದ
ಈ ಅಸಾಮಾನ್ಯ ಮರ
ಸ್ಥಿತಪ್ರಜ್ಞನ ತೆರ !
ನೆಲದಿ ಕಾಲೂರಿದರು
ಮುಗಿಲ ಮುದ್ದಿಡುವಂಥ ನಿಲವು—ನೇರ !
ರೋಮ-ರೋಮಾಂಚನದಿ ನಿಶಾನಿಯ ಹಸರ !
ಪ್ರುರುಷಾಮೃಗದ ಪಾಲಿನ ಕೋಟ್ಯಂತರ ಲಿಂಗದ ವಿಸರ !

೩

ಬೀಸುಗಾಳಿಯ ಹೊಳೆಗೆ ಒಡ್ಡಕಟ್ಟಲು ಬಯಸಿ
ಸಹಸ್ರಬಾಹುವದೆನಿಸಿ ತೋಳ ಬೀಸಿ,
ಧೃತಿಗೆಡದೆ ನಿಂತಿಹುದು ಏಕಾಂಗವೀರ !

ಅದಕೆಂದೆ ಜನ ಕರೆದಿತೇನೋ ಇದನು
ಗಾಳಿ-ಮರ !
ಅಥವಾ ಬಗೆದಿತೊ ತಾನು
ಬಡಿದಿದೆಯೆಂದು ಗಾಳಿ—ಗರ ? !

೪

ಅಂತು ಏನೇ ಇರಲಿ;
ಇದು ಖಚಿತ, ನೆನಪಿರಲಿ;
ಪತ್ತರೊಳಗೊಂದಾಣೆ ಮುತ್ತು ಈ ಕಡಲತೀರದ ಮರ !
ಮರವಲ್ಲ; ಅ-ಮರ !
ಅಮರ !

ಗಿರಿಯಲ್ಲಿ ಹೂಬಿಸಿಲು

ಚಿತ್ರ ೧

ಹಸಿರು ಹಚ್ಚಡಹೊದ್ದು, ಮಿಸುಕಾಡದೊಲು ಬಿದ್ದು
ಗೊರಕೆಹೊಡೆಯುತ್ತಿರಲು ಬೆಟ್ಟದಾಸಾಮಿ;
ಚುರುಕುಗುರ ಮರೆಮಾಚಿ, ಬೆಚ್ಚಗೊರಗಿದೆ ಬದಿಗೆ
ಮೆತ್ತೆಗಾಲಲಿ ಬಂದ ಹೂಬಿಸಿಲ—ಕಾಯಿ !

ಚಿತ್ರ ೨

ತಾಯ ಮುದ್ದಿಡಲಿಕ್ಕೊ, ಮೊಲೆಹಾಲ ಕುಡಿಯಲಿಕ್ಕೊ
ಮೇಲ್ಮೊಗದಿ ನಿಂದಿರಲು ಬೆಟ್ಟ—ಕರುವು;
ಬಿಸಿಲು ನಾಲಗೆಯಲಂತಃಕರಣರಸವೆರೆದು
ಕರುಮೆಯ್ಯ ನೆಕ್ಕುತಿದೆ ಮುಗಿಲ—ಗೋವು !

ಚಿತ್ರ ೩

ಹೂವಿಗಿಂತಲು ಹಗುರ ಮಧುವಿಗಿಂತಲು ಮಧುರ
ಹೆಜ್ಜೆಯಲಿ ಬಂದ ಹೂಬಿಸಿಲಿನ ವಧು,
ಗಿರಿಯ ಮದುಮಗನ ಬದಿ ಕುಳಿತುಕೊಂಡಿರೆ ಸುಖದಿ.
ಗೌರಿ-ಶಂಕರರ ಪ್ರತಿಬಿಂಬವಹುದು !

ಕಬ್ಬು

ಒಲವಿನರಸಿಗೆ ಮುತ್ತ-
  ನಿಡೆ ಪ್ರಿಯನು ಬರಲು
ತಪ್ಪಿಸಲು ನಾಣವಳ
  ತನು ಬಳುಕಿಸಿರಲು,
ಪ್ರಿಯನ ತುಟಿಗಾಸರೆಯ-
  ನೀಯದೊಲು ಚೆನ್ನೆ
ತಲೆದೂಗುತಿರೆ ಕುರುಳು
  ಹಾರುತಿಹುದೆನ್ನೆ,
ಮೃದು ಸಮೀರನು ಮುತ್ತ-
  ನೊತ್ತಲ್ಕೆ ಬರಲು
ಕಬ್ಬು ಬಳುಕುವುದಹಹ
  ಗರಿಯೊಲೆಯುತಿರಲು !

ಭದ್ರಾವತಿಯನ್ನು ಬಿಡುವಾಗ

೨

ಎಂಥ ಕಲ್ಲೆದೆಯವನು ಗಂಟೆ ಬಾರಿಸಿದಾತ !
  ಬಲವೆಲ್ಲ ಬಿಟ್ಟುಸಿರ ತುಂಬಿದನು 'ಶಿಲ್ಪಿ'ಯೊಳು
  (ಆ ರವಕೆ ಬೆಚ್ಚಿದವು ಸುತ್ತಲಿನ ಬಲ್ಬುಗಳು !)
ಆ ಕ್ರೂರಿ ಹಸುರು ದೀಪವನೊಮ್ಮೆ ಆಡಿಸುತ !
ಕಿವಿ ಬಿರಿಯುವಂದದೊಳು ಅಬ್ಬರಿಸುತಾ ಶಕಟ
  ನಿಟ್ಟುಸಿರನು ಬಿಡುತ್ತ ನನ್ನನೆಳೆಯಿತು ಮುಂದೆ !
  ಚಕ್ರ ಕಂಬಿಗಳೆರಡು ಕೂಡಿಯೊಕ್ಕೊರಲಿಂದೆ
ದುಃಖದಾವೇಗದಿಂ "ಅಕಟಕಟ ಅಕಟಕಟ"
ಎಂದು ದನಿ ಗೈಯುತಿರೆ (ಮೋಡದಿ ಮುಳುಗಿದ ಪೆರೆ !)

ಭದ್ರಾವತಿಯು ತನ್ನ ನೂರು ಕಣ್ಣುಗಳಿಂದ
ನೋಡುವೊಲೆ ಮಿನುಗೆ ವಿದ್ಯುದ್ದೀಪಗಳ ತಂಡ,
ತೆರೆಯಾಗಿ ಉಕ್ಕಿಬರೆ ಕಣ್ಣೊಳು ನೀರ ನೆರೆ
ಕತ್ತಲಿನ ಕಡಲಿನೊಳು ಕರಗಿಹೋಯಿತು ನನ್ನ
ಪ್ರಿಯನಗರಿ ! ಹಾ ! ಎನ್ನನಾವರಿಸಿತಲ ಬನ್ನ !

ಭುಜೇಂದ್ರ ಮಹಿಷವಾಡಿ

ಕೂಸಿನ ಲೀಲೆ

ನೋಡಾ ತಾಯಿಯ ತೊಡೆಯ ಮ್ಯಾಲೆ
ಆಡುತಲಿರುವ ಕೂಸಿನ ಲೀಲೆ

೧

ಬೆಳ್ಳನ ಬಿಳಿಯ ಸಿಂಪಿಯ ಒಳಗ
ಬೆಳ್ಳಿಯ ಮುತ್ತು ಹೊರಳುವ ಹಾಂಗ
ಮುಂಜಾನ್ಹೊತ್ತು ಹೂವಿನ ಒಳಗ
ಮಂಜಿನ ಹನಿಯು ಉರುಳುವ ಹಾಂಗ
ನೋಡಾ ತಾಯಿಯ ತೊಡೆಯ ಮ್ಯಾಲೆ
ಆಡುತಲಿರುವ ಕೂಸಿನ ಲೀಲೆ !

೨

ನೀಲಿಯ ಮುಗಿಲ ನೀರಿನ ಮ್ಯಾಲೆ
ತೇಲುತ್ತಿರುವ ಚಂದಿರನ್ಹಾಂಗ
ಕಣ್ಣಿನ ನಡುವೆ ಕುಣಿಯುತ್ತಿರುವ
ಸಣ್ಣನ ಗೊಂಬಿ ಸರಿಯುವ ಹಾಂಗ
ನೋಡಾ ತಾಯಿಯ ತೊಡೆಯ ಮ್ಯಾಲೆ
ಆಡುತಲಿರುವ ಕೂಸಿನ ಲೀಲೆ !

೩

ಊರಿನ ಹಿರಿಯ ಗುಡಿಯ ಒಳಗ
ಭೇರಿಯ ನಾದ ಸುತ್ತುವ ಹಾಂಗ
ಮೌನ ಕೃಷ್ಣೆಯ ಉಡಿಯ ಒಳಗ
ಮೀನಿನ ಕ್ರಿಡೆ ನಡೆಯುವ ಹಾಂಗ
ನೋಡಾ ತಾಯಿಯ ತೊಡೆಯ ಮ್ಯಾಲೆ
ಆಡುತಲಿರುವ ಕೂಸಿನ ಲೀಲೆ !

೪

ಮೌನ ಮುನಿಗಳ ಮನಸಿನ ಒಳಗ
'ಓಂ' ನುಡಿಯು ಆಡುತಲಿದ್ದಾಂಗ
ತವಸಿಯು ಮೂಗಿನ ತುದಿಯ ಮ್ಯಾಲೆ
ರವಿ ಬಂದಾಡುದ ನೋಡಿದ್ದಾಂಗ
ನೋಡಾ ತಾಯಿಯ ತೊಡೆಯ ಮ್ಯಾಲೆ
ಆಡುತಲಿರುವ ಕೂಸಿನ ಲೀಲೆ !

ನಾಚಿಕೆಬುರುಕಿ

ಏನು ಮೆಚ್ಚು ಮಾಡಿದೆ
ನನಗೆ ಹುಚ್ಚು ಹಿಡಿಸಿದೆ !

೧

ಕೈಯಕೈಯ ಹಿಡಿದುಕೊಂಡು
ನನ್ನ ಕೂಡ ತಿರುಗದೆ
ಮೈಗೆಮೈಯ ತಾಗಿಸುತ್ತ
ಮನೆಯ ಹೊರಗೆ ಬಾರದೆ
ಅಕ್ಕಪಕ್ಕದಲ್ಲಿ ಕುಳಿತು
ನಕ್ಕು ಮಾತನಾಡದೆ
ಹಾವಭಾವ ಸೋಗುಮಾಡಿ
ಕಾಮ ಕೇಳಿಯಾಡದೆ ॥
ಏನು ಮೆಚ್ಚು ಮಾಡಿದೆ
ನನಗೆ ಹುಚ್ಚು ಹಿಡಿಸಿದೆ !

೨

ವೇಷಭಾಷೆ ತೆರೆಯ ಮರೆಯ
ಸುಳ್ಳುಸೋಗು ಮಾಡದೆ
ಒಳಗು ಹೊರಗು ಒಂದೆಯಾದ
ಅಚ್ಚುಮೆಚ್ಚ ನೀಡಿದೆ !
ಪ್ರೀತಿಬಿಚ್ಚಿ ಬೈಲಿಗಿಟ್ಟು
ಅಗ್ಗ ಮಾಡಲಾರದೆ

ನಾಚಿನಾಚಿ ಒಳಗೆ ಮುಚ್ಚಿ
ಅದರ ಬೆಲೆಯು ತೋರಿದೆ
ಏನು ಮೆಚ್ಚು ಮಾಡಿದೆ
ನನಗೆ ಹುಚ್ಚು ಹಿಡಿಸಿದೆ!

೩

ಶಬ್ದವಿಲ್ಲದಂಥ ಮೌನ
ಭಾವ-ಭಾಷೆ ನಿನ್ನದೆ?
ಮಾತಿನಾಚೆ ಮಾತನೆಲ್ಲ
ಮೌನ ನುಡಿಯಬಲ್ಲದೆ!
ಅಳಲನಳಿದು ನಗೆಯ ನುಂಗಿ
ಮೊಗವು ಮೌನವಾಗಿದೆ!
ಭಕ್ತಿ ತುಂಬಿ ನಮ್ರವಾಗಿ
ನಾಚಿ ಕೆಳಗೆ ಬಾಗಿದೆ!
ಏನು ಮೆಚ್ಚು ಮಾಡಿದೆ
ನನಗೆ ಹುಚ್ಚು ಹಿಡಿಸಿದೆ!!

ರಾಮಚಂದ್ರ ಶರ್ಮ

ಮಾಯೆ ಮಲಗಿತ್ತು

ಮಾಯೆ ಮಲಗಿತ್ತು ಪ್ರೇಮಜಾಲವನು ಬೀಸಿ ಚಿಂದುಟಿಯ ಮೇಲೆ !
ಸುಮವಾದ ಮೋಹ ಸೌರಭವ ಚೆಲ್ಲಿ ಮೆರೆದಿತ್ತು ತನ್ನ ಲೀಲೆ !
ತೋಳ ತಲೆಗಿಟ್ಟು ಮಲಗಿರಲು ಮುರಿದ
ಬಿಲ್ಲಂತೆ ಚೆಲುವೆ ಬಾಲೆ,

ಸುಖನಿದ್ರೆಯಲ್ಲಿ ಇರವನ್ನೆ ಮರೆತ
ಮುಗ್ಧೆ ಮಾಯಾವಿಯಂತೆ,
ಮಾಯೆ ಮಲಗಿತ್ತು ಸೋತು.

ಡೊಂಕು ಡೊಂಕಾಗಿ ವಂಕಿ ಬಳಿಯಂತೆ ತುಟಿಗಳನೆ ತಬ್ಬಿದಂತೆ,
ಅರೆಬಿರಿದ ಮೊಗ್ಗ ಕಲ್ಪನೆಗೆ ಕರೆವ
ಅಧರಗಳ ರೂಪ ಹೊತ್ತು,
ಮಾಯೆ ಮಲಗಿತ್ತು ಸೋತು;

ಬಿರಿದ ತುಟಿಯಿಂದ ಕದ್ದು ಹೊರಬಂದು ಎಳೆ ಮಿಂಚ ಬೆಳ್ಳಿ ಕೋಲೆ
ಮುಗುಳು ನಗೆಯಾಗಿ ಮಿನುಗಿ ಮರೆಯಾಯ್ತು ಅರೆಘಳಿಗೆಯವಧಿಯಲ್ಲೇ.
ದುಷ್ಯಂತನಂಥ ಯಾವ ಸಿರಿಗುವರ ಎದೆಯೊಲವ ತುಂಬಿ ಮೆರೆದ
ದನಿಗೆ ಮಧುಸುರಿದು ಕರೆದ?

ಕಚುಗುಳಿಯನೆದೆಗೆ ಇಡುವ ಸವಿಗನಸ ಮಹಿಮೆ ನಾನೆಂತು ಬಲ್ಲೆ ?
ಮಾಯೆ ಮಲಗಿತ್ತು ಅಲ್ಲೆ;
ಸಿರಿಗೆಂಪು ಮರೆಯುವಲ್ಲೆ.

ಸಂಭೋಗದಲ್ಲಿ ಮೈಗೆ ಮೈ ಹೆಣೆದು ಮೈಮರೆತ ಕಪ್ಪುನಾಗ-
ದ್ವಯದ ಚಿತ್ರವನು ಹೆರಳ ಕಂಡ ಮನ ಬರೆಯಿತಾಗ.
ಹೆರಳ ಕಪ್ಪಿಗೂ ಮಿಗಿಲೆನ್ನ ಕಪ್ಪು ಎಂದೆಂಬ ಮುತ್ತಿನಲ್ಲೆ
ಕರಿಮಣಿಯ ಮಾಲೆ

ಮೆರೆದಿತ್ತು ಇರಲು ಹಿನ್ನೆಲೆಗೆ. ತರಳೆಯೆದೆ ಕೊರಳ ಬಳುಪ ಲೀಲೆ !
ದಾರುಣದ ವೇದೆ ಮೊಲೆಕಟ್ಟ ಬಂಧ

ಎಂದೆ ಮನಗಂಡ
ಮೊಲೆಯು ಹೊರಬಂತೆ ಸ್ವಚ್ಛಂದದಂದ ಚೆಂದಗಳ ಬಯಕೆಯಿಂದ?
ಗೂಡ ತೊರೆದು ಹೊರಬರುವ ಎಳೆ ಪಾರಿವಾಳದಂತೆ,
ನೆಲದಾಳದಿಂದ ನೆಲಕೆದ್ದು ಬರುವ ಬಿಳಿಯ ಮೊಲದಂತೆ ಬಂತೆ!
ತಿರವೆಣ್ಣ ಚೆಲುವನುಣಬಯಸಿ ಚಿಂತೆ!
ತೊಕ ಹೊತ್ತು ಬಲು ದಣಿದ ಬಡ ನಡುವ ಹೊರೆಯನ್ನು ತಾನೆ ಹೊತ್ತು
ನಿಂತ ತೊಡೆಗಿಪುದು ಹೊಂಬಾಳೆಗಿರುವ ಸುತ್ತುಗತ್ತು.
ಮೈವೆತ್ತ ಮಾಯೆ ಮಲಗಿತ್ತು ಸೋತು.

ಬಯಸದೆಯೆ ಚೆಲುವ ನೋಡಿ ತಣಿವ ಜನ ವಿರಳ, ಅತಿ ವಿರಳವಲ್ಲೆ!
ಮಲಗಿರಲು ನನ್ನ ನಲ್ಲೆ
ದುರುಳ ಖಳ ನಿದ್ದೆ ತೋಳ ಸೆರೆಯಲ್ಲಿ ಮುಗುದೆಯನು ಕಾಡುತಿರಲು,
ಬಿಡಿಸದಿರಲಾನು ಸತ್ತ ಕಲ್ಲೆ!
ಇದೊ ಬಂದೆ ನಲ್ಲೆ,
ಮಾಯೆ ಮಲಗಿರಲಿ ಅಲ್ಲೆ, ಅಲ್ಲೆ!

ಏಳು ಸುತ್ತಿನ ಕೋಟೆ

೧

ಏಳು ಸುತ್ತಿನ ಕೋಟೆ.
ಸರ್ಪಕಾವಲು ಅದಕೆ ಹೊರಗೆ ಒಳಗೆ!
ನಡುವಿನರಮನೆ ಕೆಳಗೆ
ನೆಲಮಾಳಿಗೆ!
ಅಲ್ಲಿ ರೋದಿಸುತಿಹಳು ಚೆಲುವೆ ರಾಜಕುಮಾರಿ.
ಮಾನಸಂರಕ್ಷಣೆಗೆ ಇರುವುದೊಂದೇ ದಾರಿ,
ಹೊಳೆ ಬೆಂಕಿ ವಿಷ ಚೂರಿ!
ಅರೆಘಳಿಗೆಯಂತರವೆ ಬಹುಕು ಬಯಲಿನ ನಡುವೆ!
ಏಳು ಸುತ್ತನು ದಾಟಿ
ನೂರು ಭಟರನು ತರಿದು
ಕತ್ತಿ ಹಿರಿದು
ನುಗ್ಗಿ ಬಾರನೆ ರಾಜಕುವರ ನಲ್ಲೆಯ ಬಳಿಗೆ?
ಅದೊ ಹೆಜ್ಜೆ ಸಪ್ಪುಳ! ಕಣ್ಣ ನಂಬಲೆ ತಂದೆ?

ಯಾರಿವನು ಕಣ್ಮುಂದೆ!
ಹಗಲಿರುಳ ಸವಿಗನಸು ಇಳೆಗಿಳಿದು ಬಂತೆ?
'ಮನದನ್ನೆ, ಇದೊ ಬಂದೆ.
ಖಳನಾಯಕನ ಕೊಂದೆ
ನಿನಗೆಂದೆ!'
ಮುಗುಳ ಮೆರೆಯಿತು ಮೊಗವು; ಕುಶಲ ಕೇಳಿತು ಕಣ್ಣು; ನಂಜ ನುಂಗಿತು ನೆಲವು.
ನೂರು ವರುಷದವರೆಗೆ ಸುಖವಾಗಿ ಬಾಳಿದವು ಒಲವು ಚೆಲುವು!
ಅಜ್ಜಿಕತೆ ಜೊತೆಜೊತೆಗು ಬುಗುರಿ ಚಿಣ್ಣೀದಾಂಡು
ಕವಣೆ ಗಾಜಿನ ಗೋಲಿ ಕಲ್ಲಾಂಟಿ ಚೆಂಡು.
ಇಂಥ ಲೋಕಕ್ಕೊಂದು
ಮಗು ಬಂತು, ಬಂತು!

೨

ಬಂತೆನಲೆ?
ದೊರೆ ಬರವ ನುಡಿಯಿತೇನು ನಗಾರಿ?
ಮಾರ್ಗದರ್ಶಕ ಕಾರು ಹೋಯಿತೇನು?
ನೀಲಿಮೆಗೆ ಮುಗಿಲರಳೆ ಉರುಳಿದುದ ಕಂಡೆಯ?
ಸುಮಕೆ ಸೌರಭ ಬಂದ ಘಳಿಗೆ ಯಾವುದು ಹೇಳು.
ಬಂತೆ ಮಗು!
ಅಥವ ಮನೆಯೊಳಗಿತ್ತೊ!
ಅಜ್ಞಾತದಾಳದೊಳು ತಲೆ ಮರೆಸಿ ಕುಳಿತೊಂದು ನೆನಹಂತೆ ಆಗ ಅದು
ಹೊರಬಿತ್ತೊ!
ಮಗು ಬಂದ ಮೇಲೆನಗೆ ಮಗುಬರವಿನರಿವು.
ಮುದ್ದು ಮುಖ; ಬಿಗಿಹಿಡಿದ ಕೈ; ಚೆಲುವು ಮೈ; ದೈನ್ಯ ಕಣ್ಣೊಳಗಿತ್ತು.
'ಬಂದೆ ನಿನ್ನನೆ ನಂಬಿ.
ಇರಲು ಎಡೆಕೊಡು ಸಾಕು; ತಿನಲು ಏನೂ ಬೇಡ.'

೩

ಮಗುವಿನೊಡನಾಟ ಹಿತವೆನಿಸಿ ಮನಕೆ
ದಿನ ದಿನಕೆ
ಸವೆದ ತಿಂಗಳು ಹೊಸತು ತಿಂಗಳಿಗೆ
ವರುಷ ಹೊಸ ವರುಷಕ್ಕೆ
ಎಡೆಗೊಟ್ಟುದೇ ಕಾಣದಾಯ್ತೆನ್ನ ಕಂಗಳಿಗೆ!
ಅಂತವಿರದಾಯ್ತು ಎದೆಯುಂಡ ಹರುಷಕ್ಕೆ.

ನನಗೆ ಹದಿನೆಂಟು ತುಂಬಿದ ದಿನಕೆ ಮಗುವಿಗೂ ಹದಿನೆಂಟು,
ಘಳಿಗೆ ಘಳಿಗೆಗು ಬೆಳೆಯಿತೆಮ್ಮ ನೇಹದ ನಂಟು.
ಕಂಗಳುಟ್ಟವು ಗೆಳೆಯು ನೀಡಿದ ಗಾಜು
ತಿರೆ ತಳೆದ ಸಿರಿ ಚೆಲುವ ನೋಡುವದೆ ಬಲು ಮೋಜು !
ದುಂಬಿ ಅರವಿಂದದೊಳು ಲೀನವಾಗುವ ಮುನ್ನ
ನನ್ನೆದೆಗೆ ಮೊಗ ತಿರುಹಿ ಕಣ್ಣು ಹೊಡೆಯಿತು ಒಮ್ಮೆ.
ಮಾಮರವ ಸೆರೆಹಿಡಿದ ಬಳ್ಳಿ ಮೈ ಕುಣಿಕುಣಿಸಿ
ಹೂವು ನಗೆಯೆಸೆದು ಕೆಣಕಿತು ನನ್ನ. (ಅದಕೆಂಥ ಹೆಮ್ಮೆ !)
ತುಂಬಿದೆದೆ ಮಲೆ ಮೇಲೆ
ಸಂಜೆ ಸೂರ್ಯನ ಹೊನ್ನ ಬೆರಳ ಲೀಲೆ !
ಹುಲ್ಲು ಹಾಸಿದೆ ಕೆಳಗೆ;
ಮೇಲೆ ಬೆಳದಿಂಗಳಿನ ಮಿದು ಹೊದಿಕೆ-
ಮರೆಯಿಂದ
ಹೆಣ್ಣದನಿ ಮೋದದೊಳು ನಕ್ಕ ಕಿಲಕಿಲ ಚೆಂದ !
ಏಳು ಸುತ್ತಿನ ಕೋಟೆ,
ಒಳಗೆ ರಾಜಕುಮಾರಿ.
ಮಾನಸಂರಕ್ಷಣೆಗೆ ಇರುವುದೊಂದೇ ದಾರಿ;
ಹೊಳೆ ಬೆಂಕಿ ವಿಷ ಚೂರಿ !
ಕೇಳದೇ ಆಕ್ರಂದ ? ನಡೆ ಮುಂದೆ !
ನಾನೆ ರಾಜಕುಮಾರ: ಇದೊ ಬಂದೆ
ಮನದನ್ನೆ
ಅಸುವ ನೀಗುವ ಚಿಂತೆಯೇಕಿನ್ನು ಕಾಂತೆ ?

೪

ಮಗುವಾಗಿ ಬಂದವನು ಮುಗಿಲುದ್ದ ನಿಂತ !
ನಾನೆ ಮಗುವಾದೆ, ಚೋಟುದ್ದವಾದೆ.
ಅವನು ಬಡಿದನು ತಾಳ; ನಾ ಕುಣಿದೆ ಬೇತಾಳ !
ಜಗದಗಲ ನಿಂತವನು ನೂರು ರೂಪವ ತಾಳಿ ಎಡೆಬಿಡದೆ ಕಾಡಿದ
ಮೈಯೊಳಗೆ ಮನೆ ಮಾಡಿ ಬಯಕೆ ಬಾಧೆಯು ಒಂದೆ ಎನುವಂತೆ ಮಾಡಿದ !
ನಾನಾದೆ ಮುಳ್ಳುಗಿಡ.
ಅಗ್ನಿಪರ್ವತದೊಳಗೆ ಬಯಕೆಲಾವವು ಬಂದಿ.
ಮೈಯೊಳಗೆ ಸೆರೆಯಾದ ಹುಚ್ಚು ಹೊಳೆಗೆ
ರವಿಯಿರವನರಿಯದಿಹ ಕಡಲ ಕೂಡುವ ಬಯಕೆ !
ಜೋಡಿ ಬೆಟ್ಟವನೇರಿ

ಕಣಿವೆಯಾಳದಿ ಸುಳಿದು
ಬಯಲುದ್ದ ಹರಿದು
ಭೂಮಧ್ಯರೇಖೆಯೆಡಬಲಕಿರುವ ಕಗ್ಗಾಡನುಳಿದು
ಕಡಲ ಮಡಿಲೊಳು ಇರವ ಮರೆವ ಬಯಕೆ !

೫

ನಾನೊಂದು ಮುದಿಗೊಡ್ಡು.
ಇದ್ದರೂ ಇರಬಹುದು ಅರಳು ಮರಳು !
ಮಗುವಾಗಿ ಬಂದವನು ಜೊತೆಯಾಗಿ ನಿಂತವನು
ಬಂದ ದಾರಿಯ ತುಳಿದು ಯುಗವಾಯಿತಲ್ಲವೆ ?
ನೆರಳು ನೆರಳಾಗಿರುಳು.
ಎದೆಯು ಕನವರಿಸುತಿದೆ ಬೇವು ಬೆಲ್ಲದ ನೆನಹು.
ನೆನಹಂತೆ ಕಣ್ಣೆದಿರು ಮಲೆಯ ಸಾಲು;
ವಿವರಗಳ ಬೈತಿಟ್ಟರೂ ಮಾಟ
ಸುಸ್ಪಷ್ಟ.
'ತಾತ, ಬೇಸರ ನನಗೆ, ಒಂದು ಕತೆ ಹೇಳು.'
'ಮಗು, ಕೇಳು :
ಏಳು ಸುತ್ತಿನ ಕೋಟೆ
ಸರ್ಪಕಾವಲು ಅದಕೆ ಹೊರಗೆ ಒಳಗೆ !'

ಹ. ವೆಂ. ನಾಗರಾಜರಾವ್

ಎಲ್ಲಿಗೆ ಕರೆವಿರಿ

ಎಲ್ಲಿಗೆ ಕರೆವಿರಿ
ಬರುವೆನು ನಡೆಯಿರಿ,
ನಿಮ್ಮನು ಬಿಟ್ಟವರುಂಟೇ-
ಅಪರಂಜಿಗಳೇ,
ಬಿಟ್ಟರೆ ಬದುಕುಂಟೆ ॥ ಪ ॥

ಮದುವೆ ಮನೆಯು ಬಲು ಸಂಭ್ರಮವೋ
ಆನಂದದಿ ಮೈ ಮರೆತಿಹೆವೋ
ಮಂಗಳವಾದ್ಯಗಳೆತ್ತಲು ಮೊಳಗಲು
ಸಡಗರದೈಸಿರಿ ಕಡಲಂತಾಡಲು
ವರ್ಣವರ್ಣ ವಸ್ತ್ರಾನ್ವಿತರಾಗಿ
ಬಂಗಾರದ ಸರ ಕೊರಳೊಳು ತೂಗಿ
ಅಲ್ಲು ಇಲ್ಲು ಎಲ್ಲೆಲ್ಲಿಯು ತಾವೆನೆ
ಕೂಡಿ ಹಾಡಿ ಹಾರಾಡಿ ಹರ್ಷದಲಿ
ಕಾಂತಿವಡೆದ ಲಾವಣ್ಯದೇವಿಯರೆ ॥

ಪಾರಿಜಾತಮರ ಮನೆಯಂಗಳದಲಿ
ಮುಂಜಾವದಿ ಹೂ ಹರಡಿದರೆ ನೆಲದಲಿ
ಚೆಂಗುಲಾಬಿ ಸೇವಂತಿಗೆ ಮರುಗ
ದಾಸವಾಳ ಬಗೆಮಲ್ಲಿಗೆ ಬಳಗ
ಮಂಜು ಮುತ್ತಿನಲಿ ರಂಗು ತಿರುಗಿರಲು
ಎತ್ತಣಿಂದಲೋ ಕದ್ದೈತಂದು
ಹೂವ ಹರಿವ ಹಿರಿಯಾಸೆಗೆ ಸಂದು
ಬೆದರಿ ಬೆದರಿ ಸುತ್ತತ್ತ ನಿರುಕಿಸುವ
ಹಿಂದು ಬಾಲಕರ ಮುದ್ದು ಮೊಗಗಳೇ ॥

ವಾಣಿ ಹಿಡಿದಿಹಳೊ ವೀಣೆಯನು ವೊಲು
ನಾದ ಹೊಮ್ಮುತಿದೆ ಇವಳ ಕೈಯೊಳು
ಕೊಳಲು ಖಂಜರಿಯು ಪಕ್ಕವಾದ್ಯದೊಳು

ಮೃದಂಗವಾದನ ಕೊಡೆ ಹೊಳಲು
ಗಂಗೆಬಿಡುವಂತೆ ಶಿವನಮುಡಿಯೊಳು
ಚಂದ್ರನಿಂದ ಬೆಳುದಿಂಗಳಿಳಿವೊಲು
ನಾದ ತರಂಗಿಣಿ ತುಂಬಿ ತುಳುಕಿರಲು
ಅದ್ದಿರಸದಿ ತೊಳೆದೆದ್ದ ಜೀವಗಳು
ಅಂತರಂಗದಲಿ ಪಟ್ಟಸುಖಿಗಳೇ ॥

ಐದು ದೀಪದ ಕಂಬ

ಐದು ದೀಪದ ಕಂಬ
ಈ ಡಿಂಬ
ತಂದು ನಟ್ಟರು ಇಲ್ಲಿ
ಮಾರುಕಟ್ಟೆಯ ಮಹಾ ಚೌಕದಲ್ಲಿ
ತಂತಿ ಸಂಪರ್ಕವೀಯುತ ಹಾಯಿಸುತ ವಿದ್ಯುಚ್ಛಕ್ತಿ
ದಿಗ್ಗನುರಿಯಿತು ಹತ್ತಿ ಇದರ ನೆತ್ತಿ.

ಐದು ದೀಪದ ಕಂಬ
ಈ ಡಿಂಬ
ತಾಯಿ ಅಂಗೈಯೊಳಗೆ ಹಚ್ಚಿ ಹಿಡಿದಿರುವಂಥ ದೀಪಾರತಿ;
ಹೊಸೆದು ಬಾಳಿನ ಬತ್ತಿ
ಬೆಳಗಿ ಪಂಚೇಂದ್ರಿಯ;
ಇವ ನಿಶೆ ಗರ್ಭದೊಳಗಾದ ವಿಸ್ಮಯ
ಬಾಲ ಚಂದ್ರೋದಯ;
ಕಣ್ಣ ಕಾಣಿತ; ಕೇಳಿ ಕಿವಿ;
ಮೂಗು ಮೂಸುತ್ತ; ನಾಲಿಗೆ ಸವಿದು:
ಚರ್ಮ ಸ್ಪರ್ಶದಲಿ ಮಿಂಚು ಹಳೆಂಚಿ ಮಯ್ಯೊಳಗಾಡಿ
ಜೀವ ತುಳುಕಿ
ಕ್ರಿಯೆ ತೊಡಗಿ
ಕಾಲ ಬ್ರಹ್ಮಾಂಡದಲಿ ಭೂಮಂಡಲದಿ
ತಾನಿದ್ದ ಕಡೆಗೇ ಕೇಂದ್ರಬಿಂದುವೆನಿಸಿ
ನಡುವೆ ನಿಂತಿದೆ ಕಂಬ
ಈ ಡಿಂಬ

ನಿಶ್ಚಲದಿ
ಹತ್ತಾರು ರಸ್ತೆಗಳ ಪೂರ್ಣ ಪ್ರವಾಹ ನುಗ್ಗಿ ಬರುವೀ ಮಹಾ ಚೌಕದಲ್ಲಿ

ಬಾಳು ಸುಳಿ ಸುತ್ತಿ
ಕಾಲನು ಕತ್ತಲೆ ಮೊತ್ತ ಒತ್ತೊತ್ತಿ ಮುಸುಗಿದರು
ಮಿಸುಗದಿದೆ
ಈ ಡಿಂಬ
ಐದು ದೀಪದ ಕಂಬ
ನಿಂತು ನಿಲುವಿನಲ್ಲಿ
ಒಂದೆ ನಿಟ್ಟಿನಲ್ಲಿ.

ಡೊಳ್ಳು ದಿನಗಳು

Shape without form, shade without colour.
paralysed force, gesture without motion.
—T. S. ELIOT

ಅಂತು ಹೊರಟಿತು ರೈಲು ಕೊನೆಗು ಕದಲಿತು ರಥ
ಜಗ್ಗು ಹಾಕುತ ಡೊಳ್ಳು ಮುಲುಕಿ ಮೂಕರಿಸುತ್ತ
ಕಾಲಲಂದುಗೆ ಗೆಜ್ಜೆ ಹೆಜ್ಜೆ ಮೇಗಡೆ ಹೆಜ್ಜೆ
ಹೊಟ್ಟೆಪಟ್ಟದ ಶಿಷ್ಟ ಎತ್ತರಾರದ ಪ್ರಾಯ ಮುಖ ಹಿಂಸೆ
ಹೊಸೆದು ಎಸೆದಂಥ ಕೊಚ್ಚೆಯಲಿ ಬಿದ್ದಿದ್ದ ಎಮ್ಮೆಕೋಣ
ಹಿಮಮಾನವನ ಹೆಜ್ಜೆ ಹುಡುಕುತಿಪನೀ ಜಾಣ.
ರೀಲುದಾರದ ಸಿಕ್ಕು, ರೇಗು, ರೇಜಿಗೆ, ರಂಪ, ತಿರುಗುಬಾಣ
ರಾತ್ರಿ ರಸ್ತೆಗಳಲ್ಲಿ ಬೀದಿನಾಯ್ಗಳ ಅಲೆತ
ಸೋಮಾರಿಕಟ್ಟೆಯಲಿ ಷೋಕಿ ರ್‍ಷೋಕು !
ದಿನದಿನದ ಬೋಗಿಗಳ ತುಂಬ ಓವರುಲೋಡು
ನಿಂತರೂ ನಡೆದರೂ ಒಂದೆ ಕೀರಲುದನಿ
ಭರ್ತಿಜನ ಸಾಲದೆಲೆ ಮೇಲೆ ಗರುಡಸವಾರಿ
ಮೂತ್ರಿಪಮೃಟ ಹಿಡಿದು ಮೂಳೆ ಮಗ್ಗುಲ ಕೊರೆವ ತಿಗಣೆ ಭಾರಿ
ಹೊರಗೆ ಸ್ವಚ್ಛಂದ ಚಂದದ ಗಾಳಿ. ಹೂ ಹೆಣ್ಣುಗಳ ಕಂತೆ. ಸುಸುಗಂಧ
ಒಳಗೆ ಚಿಮಣಿಯ ಗಮಟು. ಅಪಪಾನು. ಅವಕಿರಿಯುಗಿತ. ಬಾಯಿ ದುರ್ಗಂಧ

ಮೂಕು ಮೋಡಗಳಲ್ಲಿ ಮೇಲೆ ಮೇಳವಿಸಿ ಮೆರೆವ ಚಕ್ಕಂದ
ಮೂಕುಸಂಕಟದಿಂದ ಮರುಗುತಿಹುನೀ ಕಂದ.

೨

ಎರಡು ಹಳಿಗಳ ಮೇಲೆ ಹೊರಳುತಿಹುದೀ ರೈಲು
ಧಡಧಡಾ ಧಡಧಡಾ
ಕಿಟಕಿಗಾಯಿತು ಇಲ್ಲಿ ಭಾರಿ ಜಗಳ
ಇವರಿವರೊಳೇ ಬೆಳೆದ ತೀವ್ರ ತುಮುಲ
ಸಡಿಲ ಮಡ್‌ಗಾರ್ಡಿನೊಲು ನಡುಗುತಿರುವನು ಇವನು:
'ಸೀಳುತಿದೆ ಚಳಿಗಾಳಿ ಸಾಯುತಿರುವೆನು ನಾನು ಕಿಟಕಿ ಮುಚ್ಚು'
ಎಲ್ಲ ಕದ ಬಡಿದು ತಾನಾಗಿ ಉಬ್ಬಸದಿ ಬೆಂದವನು.
'ಸಿಕ್ಕಿಕೊಳ್ಳುತೆಲುಸಿರು ಉಳಿಯಲಾರೆನು ನಾನು ಕಿಟಕಿ ಬಿಚ್ಚು'
ಬಿರುಗಾಳಿ, ಬಾಗಿಲು ಬಡಿತ, ಹಲಗೆ ಸೀಳುವ ಶಬ್ದ, ರಣರಂಗ ಸಿಡಿಗದ್ದಲ.
ದೋಣಿಯಾನದೊಳು ಹಾವು ಹೊರಬಿದ್ದಂತೆ ಕೋಲಾಹಲ
ಇವನೂ ನಮ್ಮ ಜೊತೆ ಪಯಣಿಗನೆ,
ಇವನೆಂದ:
"ಮೊದಲು ಮುಚ್ಚು: ಉಸಿರು ಸಿಕ್ಕಿ ಸಾಯುವನು ಸಾಯಲಿ;
ಬಳಿಕ ಬಿಚ್ಚು: ಚಳಿಗಾಳಿಯಲಿ ಸಾಯುವನು ಸಾಯಲಿ;
ಉಳಿದವರು ಉಸಿರಾಡಿ ನೆಮ್ಮದಿಗೆ ಸಾಗಲಿ."

ಎರಡು ಹಳಿಗಳ ಮೇಲೆ ಹೊರಳುತಿಹುದೀ ರೈಲು
ಸುತ್ತಲಿರಿಯುತಲಿರಲು ಮೊನೆಗತ್ತಲು
ಅಡಿಗೆ ಪೂರ್ಣ ಪ್ರವಾಹ, ಹಳೆಯ ಸೇತುವೆ ಮೇಲೆ ನಡುಗಿ ನಡೆದಿದೆ ಇದು
ಕತ್ತಲೆಯ ಕತ್ತಲೊಡ ಸೆಣಸಿ, ನೋವಿನಲಿ, ಗೊಂದಲದಿ.
ತನ್ನ ತಾನೇ ತಿವಿದು ಕೊಂದುಕೊಳುತಿರಲು.

ರಾಘವೇಂದ್ರ ಇಟಗಿ

ಕ್ಷಿತಿಜ ಕೋದಂಡ

೧

ತಾರೆಗಳ ಕಿರುಬೆಳಕು ಕರಗುತಿದೆ
ಎಂಬ ಕೊರಗೇಕೆ ನಿನಗೆ?
ಇದುವರೆಗೆ ಮುತ್ತಿದ್ದ ಕತ್ತಲೆಯ ಮುರಿದಿಕ್ಕಿ
ಹೊಂಬೆಳಗು ಮೂಡುತಿದೆ.
ದಿಕ್ಕೆಲ್ಲ ಕೂಡತಿದೆ
ರಾಮರಕ್ಷೆಯ ರಶ್ಮಿ !

ಬೆಳ್ಳಿ-ಚಿಕ್ಕೆಯ ಮುಂದಿಕ್ಕಿ
ಉಷೆಯ ನರ್ತನದ ಪಲ್ಲಕ್ಕಿ
ಬರುತಲಿದೆ ದಾರಿಯಲಿ—
ನೀರವ ನೂಪುರದ ನಸುಕು
ತೆಗೆದೊಗೆದು ಮುಸುಕು
ಗೈಯ್ಯುತಿರೆ ಮಂಗಲನಿನಾದ

ಅರಳಿತ್ತು ಸಾಮವೇದ, ಹೆಜ್ಜೆ ಹೆಜ್ಜೆಗಃ !
ಕುತ್ತುಸಿರಿನ ಶಾಪವಿಮುಕ್ತ ಜಗ
ಪಡೆದಿತ್ತು ಕಮಲ ಚೇತನದ
ಆನಂದದುನ್ಮಾದ !
ಶುಭೋದಯದ ಉದ್ಘೋಷ
ನೀಡುತಿದೆ ನವ್ಯ ಆಮೋದ !

ಹಚ್ಚ ಹಸುರಿಸಿದೆ ಆರ್ದ್ರ ವಿಶ್ವದೆದೆ—
ಮುತ್ತು ರತುನಗಳನೀಡಾಡಿ
ಬಾನ್ನೆಲದ ತುಂಬ ಓಡಾಡುತಿಹ
ಹರ್ಷ-ಹಸುಗೂಸು ;
ಪ್ರತಿಬಿಂಬ ಬೆಳೆದು ನಿಂತಿದೆ
ಮುಗಿಲಂಚವರೆಗು !

ಹೂಬಿಸಿಲ ಕೋಟಿಕರ
(ಬೆಳಕು ಕೋಮಲ !)

ತಾಯಾಗಿ ತಬ್ಬುತಿದೆ
ತ್ರಸ್ತ ತಬ್ಬಲಿಗೊಳನು ತಡುವುತಿದೆ
        ಅಭಯದೊಲು ಹಬ್ಬುತಿದೆ
        ಮಬ್ಬು, ಮಂಜನು ಕಡಿದು !
ನವಿರೇಳುವ ನಮನಾಂಕಿತ
        ಜಾಗೃತ ಮಂತ್ರ

ಚಾಮರ ವಿಕ್ಕುತಿರೆ,
ಸೂಸುತಿದೆ ಸಂಭ್ರಮದ ತಂಗಾಳಿ
(ಮೈಮನ ಕಳಕೊಂಡು
ಭೂತದೊಲು ಅಲೆದಿತ್ತು, ಈ ವರೆಗು)
ಅದರ ಬೆನ್ನೇರಿ ಬಂದ
ಆ್ಯಟಂ ಸದ್ದು—ಇನ್ನೂ ಇದೆ !
(ಘುಡು ಘುಡಿಸಿತ್ತು—
        ರಾವಣ ರಾತ್ರಿಯ ಭೀಷಣ ಹಾವಳಿ !)
ರೇಡಿಯೊ-ಆ್ಯಕ್ಟಿವ್ ರೇಣುಗಳ ಧೂಳಿ
ಏರಲೆಂದಿದೆ ಮೇಲೆ
ಈ ಹೊಚ್ಚಹೊಸ ಬೆಳಕ ಹೂಳಿ,
ಹಾರುತಿವೆ ರಾಕೆಟ್ಟು-ಗಿರಗಿರನೆ
ಸುತ್ತುತ್ತಿವೆ ಉಪಗ್ರಹ-ಸೆಟಲೈಟು
ಬಾನೆದೆಯ ಸೀಳುತಿದೆ—
ವಿಜ್ಞಾನದೂರ್ವಶಿಯು ಜೈತ್ರಲೆ ತೆಗೆಯುತಿದೆ—ಜೆಟ್ಟು
ಅಂತರ್‌ಲೋಕಗಳ ಸಫಲಯಾನ
ಇನ್ನೂ ಏರುತಿದೆ ಮೇಲೆ—
ಹಾರುತಿದೆ ಸಾಹಸ ವಿಮಾನ
' ಹೃದಯಗಹ್ವರ-ಇರುಳ ಕಾನನ
ಅಗೊ ಅಲ್ಲಿಗೆ ನೀಡು, ಹೊಸ ಬೆಳಕ ಬಾನ ! '

೨

ದೀಪಕ್ಕೆ ದೀಪ ಹತ್ತಿತೊ—ದೀಪದಾನ
ನಡೆಯಲಿದೆ ನಿತ್ಯ—
                ಈ ಯಾತ್ರೆ ಚಿರಂತನ !
ಸೂರ್ಯಚಂದ್ರರೆ ಸಾಕ್ಷಿ
ತೆರೆಯಲಿದೆ ಚೈತ್ಯಾಕ್ಷಿ

ಏತಕೀ ತಡೆ, ಈ ಮೌನ.
'An aweful pause!'
ಹಿಂದಿತ್ತು ಕಾಡು—
ಮುಂದೆ ಹಬ್ಬಲಿದೆ ಹೊಂಬೆಳಗ
ಹಾಲುಂಡು ಕುಸುಮಿಸುವ ಉದ್ಯಾನ!
ಆರುಹ್ಯ ಕವಿತಾಶಾಖಾಂ—
ವಾಲ್ಮೀಕಿ ಕೋಕಿಲ ಕುಕಿಲುತಿದೆ—
        ರಾಮ, ರಾಮ, ರಾಮ!
ಜಯ ಜಯವೆನುತಿದೆ ಜನಸ್ತೋಮ
ದುಮುದುಮಿಸೆ ಬಾನ್ನೆಲವ ಈ ನಿನಾದ
ಯುಗಯುಗದ ಮಾರ್ತಾಂಡನನು ಹೊತ್ತ
ಚಂಡ ಬಲದೋರ್ದಂಡ.
ಕ್ಷಿತಿಜ ಕೋದಂಡ
ಬಾಗಿ ನಿಲೆ;
ಹಿಡಿದು ಹೂಮಾಲೆ
ಅಣಿಯಾಗು ಸ್ವಾಗತಕೆ
ಋಣಿಯಾಗು ನವಯುಗಕೆ!

ಹಾಯಾಗಿದೆ ಹೊಂಬಿಸಿಲು

ಹಾಯಾಗಿದೆ ಹೊಂಬಿಸಿಲು
ತಾಯಾಗಿದೆ ಈ ಹಸಿರು
    ಮುಗಿಲಾಗಿದೆ ಕೆಂದಾವರೆಯು
    ಹಗಲಾಗಿದೆ ಹೊಂದಾವರೆಯು
    ಹಾಲೊಳೆ ಆಡಿದ ಕಿರಿನೆರಳು
    ಬಾನಂಚಿಗೂ ಬೆಳೆದಿಹುದು,
        ಹಾಯಾಗಿದೆ ಹೊಂಬಿಸಿಲು
        ತಾಯಾಗಿದೆ ಈ ಹಸಿರು.

ಸಿಕ್ಕಿದುದೆಲ್ಲ ಬಿಂಬಿಸಬಲ್ಲ
ನೀರಿಗೂ ನೀಲಿಗೂ ತಮ್ಮರಿವಿಲ್ಲ
ಕಣ್ಣೊಳೆ ಕಾಂಬ ಹವಣಿಕೆಯಲ್ಲ

ಉಭಯರ ಚುಂಬನ ಜಗವೆಲ್ಲ
ಹಾಯಾಗಿದೆ ಹೊಂಬಿಸಿಲು
ತಾಯಾಗಿದೆ ಈ ಹಸಿರು.

ನೆಲದೆದೆಯೊಳು ಹರುಷದಲಿ
ದನಕರು ಕೊರಳಲಿ ಗಂಟೆಯುಲಿ
ಪಡುವಣ ನುಂಗಿದೆ ಚಿನ್ನದ ಬೆಂಕಿ
ಮೂಡಣ ತೊಡುತಿದೆ ಬೆಳ್ಳಿಯ ವಂಕಿ
ಹಾಯಾಗಿದೆ ಹೊಂಬಿಸಿಲು
ತಾಯಾಗಿದೆ ಈ ಹಸಿರು.

ಈ ಸಮತೋಲನ ಸೃಷ್ಟಿಯ ಸಾಧನ
ಇದ ಸಾರಲು ಈ ನಾಟಕ ಚಿತ್ರಣ
ಹಾಯಾಗಿದೆ ಹೊಂಬಿಸಿಲು
ತಾಯಾಗಿದೆ ಈ ಹಸಿರು.

ನಾಟಕದ ಹೆಣ್ಣು

ಸೀತೆಯಾದರು ಕೂಡ ಒಲಿದಿನಿನುಡಿವ ರಾಮನಿಲ್ಲ
ಅರೆಗಳಿಗೆ ಗಿರಿಜೆ ನಾ ಗೆಲಲು ಶಿವಯೋಗಿ ಕಾಣನಲ್ಲ
ರಾಜ್ಯಗಳ ರಾಣಿ ಈ ಸಂಜೆ, ನಾಳೆ ಉಣಲಶನವಿಹುದೊ
ಪಿತನುಸಿರು ಪಾಂಚಾಲಿ, ಪೊರೆವ ಪಿತನೆನಗಿಹನೊ
ರತಿಯಾಗಿ ಮೆರೆವೆ ರಂಗದಲಿ, ಕಾಳಿ ನಾ ಬಣ್ಣತೆಗೆಯೆ
ವಾದ್ಯಗಳ ಗದ್ದಲದಿ ಮುಳುಗುತಿದೆ ಬಡದನಿಯು, ಸಭೆಗೆ ಇಂಪು.

ಮಂದಿರದಿ ಮುಂದುಗಡೆ ಕುಳಿತಿಹರು ಚೆಲುವೆಯರು ಜರಿಯುಧರಿಸಿ
ರತಿಯ ನೃತ್ಯವ ನೋಡಿ ಅವರೆದೆಯು ಕುಣಿಯುವುದು ಪಾದದೊಡನೆ
ಬಿನ್ನಾಣ ಬಡಿವಾರ ಉಲ್ಲಸವ ನುಸುರುವುದು ಅವರ ಮನದೊಳಗೆ
ನನ್ನೆದೆಯ ಕಾವಳವು ಕೃತ್ರಿಮದ ನಟನೆಯರಿವಿಲ್ಲವಾಯ್ತು
ನಟಿಯ ಪದವಿಯನೊಲಿದು ಕರುಬುವರು ಚೆಲುವೆಯರು
ಸಭಿಕರಲಿ ನಾ ಕುಳಿತು ನಲಿವ ಸೊಗವೆಂದೊ.

ಮುದುಕಿ

ತನುವನೊಂದು ಬಿಲ್ಲುಮಾಡಿ
ಪ್ರಾಣಬಾಣವನ್ನು ಹೂಡಿ
ಕಾಲ ಪುರುಷನೆಳೆದ ಹಾಗೆ
ದೇಹ ಬಾಗಿಹೋಗಿದೆ-
ಗಳಿತಫಲದ ತರುವಿನಲ್ಲಿ
ಶಿಶಿರ ಕುಳಿರಗಾಳಿಯಲ್ಲಿ
ಎಲೆಗಳುದುರಿ ರಸವಿಹೀನ-
ತರುವಿನಂತೆ ತನುವಿದೆ.

ಬೆಳ್ಳಿನವಿರ ಹೆಣ ಮುದುಕಿ
ಭಗವಂತನ ನಂಬಿ ಬದುಕಿ
ಕೈಯಕೋಲನೂರಿ ಮುಂದೆ
ಬರುತಲಿರುವಳು.
ಕಣಿವೆಯಾದ ಕೆನ್ನೆಮೇಲೆ
ಮುಗಿಲ ಮರೆಯತಾರೆಯೋಲೆ
ಎರಡು ಕಣ್ಣ ಶಾಂತಿಯಿಂದ
ಅರಳಿಸಿರುವಳು !

ಯಾವ ಊರೊ ಎಲ್ಲಿಯುವಳೊ !
ಎಲ್ಲಿಗಿಂತು ಸಾಗುತಿಹಳೊ-
ನನಗೆ ಮಾತ್ರ ಜಗದ ಜೀವ
ನಡೆಯುವಂತೆ ತೋರಿದೆ-
ಅರಿಯದಿರುವ ಭಾವವೊಂದು
ಎದೆಯನೆಲ್ಲ ಕಲಕಿನೀದು
ನಿಷ್ಕಾರಣದೊಲವು ಮೂಡಿ
ಕಣ್ಣ ಹನಿಯ ತುಂಬಿದೆ.

ಕ್ರಾಂತಿಕಾರ

ಅದೊ ಬಂದ, ಇವನೊಂದು ಕಿರಿಯ ಬಿರುಗಾಳಿ!
ಮನೆಯ ಒಳಗೂ ಹೊರಗು ಇವನದೇ ಧಾಳಿ,
ಇದ್ದುದೊಂದೆಡೆ ಇರದು ಇವನ ರಾಜ್ಯದಲಿ
ತುಂಟತನಕಿನ್ನೆರಡು ಕಾಲ್ ಬಂದ ತೆರದಿ
ಬಂದುವಿವನಿಗೆ ಎರಡು ಪುಟ್ಟಕಾಲು
ಮನೆಯ ವಸ್ತುಗಳೆಲ್ಲ ದಿಕ್ಕುಪಾಲು!

ತುಂಬು ಕಿತ್ತಲೆ ಕೆನ್ನೆ, ನಗೆ ಮಿಂಚುಗಳ ಕುವರ
ಕ್ರಾಂತಿಕಾರ!
ಹೊಳೆವೆಳೆಯ ಕಂಗಳಲಿ ಬೆಳುದಿಂಗಳನು ತುಂಬಿ
ತಂದು ಮನೆಯಂಗಳಕೆ ಸುರಿವ ಧೀರ.
ಇವನು ಎದ್ದರೆ ಮನೆಯ ಮೈಯೆಲ್ಲ ಎಚ್ಚರ
ಇವನು ಮಲಗಲು ಮನೆಗೆ ಕವಿಯುವುದು ಮಂಪರ!

"ಕೊಳಲಿನಿದು, ವೀಣೆಯು ಇನಿದು ಎನ್ನುವರು
ಮಕ್ಕಳ ಸೊಲ್ಲನಾಲಿಸದ ಜನರು"
ಎಂದೊರೆದ ತಮಿಳು ಕವಿ; ಅವನ ಮಾತಿನ ಸತ್ಯ.
ಅನುಭವಕೆ ಬರುತಿಹುದು ಇವನ ಎದುರು!
ಇವನ ಮಾತಿನ ಅರ್ಥ ದೇವರೇ ಬಲ್ಲ
ಭಾವ ಗೀತಗಳಂತೆ ಅಸ್ಪಷ್ಟವೆಲ್ಲ!

ಚಂದ್ರಮಾಮನ ಅಳಿಯ, ಬೆಕ್ಕುನಾಯಿಯ ಗೆಳೆಯ,
ನಮ್ಮ ಲೋಕದ ತಿಳಿವಿನಾಚೆಯವನು
ಅವನ ನೀರೆಯೆ ಬೇರೆ, ಅವನ ನಿಯತಿಯೆ ಬೇರೆ
ದೇವ ಲೋಕದ ಬೆಳಕ ಹಿಡಿಯುವವನು
ಮಹ ಮಹಾ ಪಂಡಿತರ ಉದ್ಗ್ರಂಥಗಳನೆಲ್ಲ
ನೆಕ್ಕಿ ರುಚಿ ನೋಡುವನು ರಸನೆಯಿಂದ!
ಎಷ್ಟಾದರೂ ಎಲ್ಲ ಬರಿಯ ನೀರಸವೆಂದು
ಹರಿದೆಸೆದು ಬಿಸುಡುವನು ತಾತ್ಸಾರದಿಂದ!

ಮನೆಗೆ ಮನೆಯೇ ಇವನ ಜೊತೆಗೂಡಿ ಆಡುವುದು
ಒಲವಿನಿಂದ
ನಮಗಡ್ಡಲಾಗಿರುವ ವರುಷಗಳ ಕರಿ ತೆರೆಯ
ಸರಿಸಿ ಬಾಲ್ಯದ ಚೆಲುವ ತಂದು ಕೊಡುವನು ಇವನು
ತನ್ನ ಒಂದೇ ಒಂದು ಮೃದು ಹಾಸದಿಂದ.
ಸಿಟ್ಟುಬಂದರೆ ಇವನ ತಡೆಯುವವರಾರುಂಟು?
ರುದ್ರಾವತಾರ!
ನಕ್ಕು ನಗಿಸುವ ಚಿಣ್ಣ, ಎದೆಯ ಒಲವಿನ ಹಿರಿಯ
ಸೂರೆಕಾರ.
ನನಗು ಅವಳಿಗು ನಡುವೆ ವ್ಯಕ್ತಪ್ರೇಮ ಸೇತು;
ಇವ ಮಾಯಕಾರ
ಎರಡು ಬಾಳನು ಬೆಸೆದ ಸೂತ್ರಧಾರ!

ಜಡೆ

ಲಲನೆಯರ ಬೆನ್ನಿನೆಡೆ
ಹಾವಿನೊಲು ಜೋಲ್ವ ಜಡೆ.
ಕಾಳಿಂದಿಯಂತಿಳಿದು, ಕೊರಳೆಡೆಗೆ ಕವಲೊಡೆದು
ಅತ್ತಿತ್ತ ಹರಿದ ಜಡೆ!
ಚೇಳ್ ಕೊಂಡಿಯಂಥ ಜಡೆ,
ಮೋಟು ಜಡೆ, ಚೋಟು ಜಡೆ
ಚಿಕ್ಕವರ ಚಿನ್ನ ಜಡೆ!
ಎಣ್ಣೆಕಾಣದ ಹಿಣಿಲು ಹಿಣಿಲಾಗಿ ಹೆಣೆದ ಜಡೆ
ಬೆವರಿನಲಿ ಧೂಳಿನಲಿ ನೆವೆದಂಟಿ ಕೊಂಡಿರುವ
ಗಂಟು ಜಡೆ!
ಅಕ್ಕ ತಂಗಿಯ ಮುಡಿಯ
ಹಿಡಿದು ನಾನೆಳೆದಂಥ
ಮಲ್ಲಿಗೆಯ ಕಂಪು ಜಡೆ
ಕೇದಗೆಯ ಹೆಣೆದ ಜಡೆ.
ಮಾತೃಮಮತಾವೃಕ್ಷ ಬಿಟ್ಟ ಬೀಳಲಿನಂತೆ
ಹರಡಿರುವ ತಾಯ ಜಡೆ!
"ಕುರುಕುಲ ಜೀವಾಕರ್ಷಣ ಪರಿಣತ"-ಆ
ಪಾಂಚಾಲಿಯ ಜಡೆ!

ಸೀತೆಯು ಕಣ್ಣೀರೊಳು ಮಿಂದ ಜಡೆ
ಓ ಓ ಈ ಜಡೆಗಲ್ಲಿ ಕಡೆ!
ಸಂಜೆಯುಲಿ ಹಗಲು ಕೆದರುವ ಕತ್ತಲೆಯು
ಕಾಳ ಜಡೆ
ಬೆಳಗಿನಲಿ ಇರುಳು ಬಿಚ್ಚುವ ಬೆಳ್ಳನೆಯು
ಬೆಳಕು ಜಡೆ
ಒಮ್ಮೊಮ್ಮೆ ಮುಗಿಲಲ್ಲಿ ತೇಲುತ್ತ ಬರುವಂಥ
ಬೆಳ್ಳಕ್ಕಿಗಳ ಜಡೆ
ಕೊಂಚೆಗಳ ಜಡೆ.
ಮರಮರದಿ ಬಳಕುತಿಹ ಹೂಬಿಟ್ಟ ಬಳ್ಳಿ ಜಡೆ!
ಕಾಡುಬಯಲಿನ ಹಸುರು ಹಸರದಲಿ ಹರಿ ಹರಿದು
ಮುನ್ನಡೆವ ಹೊಳೆಯು ಜಡೆ!
ಶ್ರೇಣಿಶ್ರೇಣಿಗಳಾಗಿ ಹರಿದಿರುವ ಗಿರಿಯ ಜಡೆ;
ಗಿರಿ ಶಿವನ ಶಿರದಿಂದ ಹಬ್ಬಿ ಹಸರಿಸಿ ನಿಂದ
ಕಾನನದ ಹಸುರು ಜಡೆ.
ನಕ್ಷತ್ರಗಳ ಮುಡಿದು ನಟ್ಟಿರುಳ ನಭದ ಜಡೆ!
ಮುಂಗಾರು ಮೋಡಗಳು ದಿಕ್ಕುದಿಕ್ಕಿಗೆ ಬಿಚ್ಚಿ
ಹರಡಿರುವ ಮಳೆಯು ಜಡೆ!
ಚಂದ್ರಚೂಡನ
ವ್ಯೋಮಕೇಶನ
ವಿಶ್ವವನೆ ವ್ಯಾಪಿಸುತ ತುಂಬಿರುವ ಜಡೆ
ಗಾನಗಳ ಕಾವ್ಯಗಳ ಶಿಲ್ಪಗಳ ಕಲೆಯು ಜಡೆ
ಎಲ್ಲವೂ ರಮ್ಯವಲ್ಲ!
ಜಡೆಯಾಚೆ ತಿರುಗಿಸಿದ ತಾಯ ಮುಖ ಮಾತ್ರ ಇಂದಿಗೂ ಕಾಣದಲ್ಲ.

ಬಂಡೆ-ಹೂವು

ಬೆಟ್ಟಬಂಡೆಯು ಮೇಲೆ ಕಲ್ಲೆ ಮರವಾದಂತೆ
ದೇವಗಣಗಲೆ ಮರವು ನಿಂತು ಮುಗಿಲಿಗೆ ಹೂವಿ-
ನಾರತಿಯನೆತ್ತುತಿದೆ! ಎಲೆಗಳೊಂದಾದರೂ
ಇಲ್ಲ; ಹಿಡಿಹಿಡಿ ಹಿಡಿದು ಹೂವೆಲ್ಲ ಬಳಿದು; ಆಹ
ಹೂವು ಎಂಥ ಮಿದು! ಬಂಡೆಯೊ ಘಟ್ಟಿ; ಬಲುಘಟ್ಟಿ
ಒಂದು ಮೃದು ಮತ್ತೊಂದು ಕಠಿಣ; ಈ ಮೃದುತೆ ಆ

ಕಠಿಣತೆಯು ಮತ್ತೊಂದುರೂಪ ! ಕಾಠಿಣ್ಯವೀ-
ಮೃದುತೆಯಿನ್ನೊಂದು ರೂಪ: ಈ ಮೃದು ಕಠಿಣದಂ-
ಬೆರಡು ಬೇರೊಂದು ನಿಲವಿನ ರೂಪ ! ನೋಡು ಈ
ಹೂವನರಳಿಸಿದ ಮರ ಆ ಕಲ್ಲುಬಂಡೆಯೊಳು
ಬೇರೂರಿ ರಸವ ಹೀರುತಿದೆ; ಕಲ್‌ಗುಂಡಿನೆದೆ-
ಯಲ್ಲು ಕೋಮಲತೆಯರಳಿಸುವ ಮೂಲರಸವಡ-
ಗಿಹುದು ! ಈ ಬಂಡೆಯೇ ಅಲ್ಲಿ ಮರದ ತುದಿಯಲಿ
ಹೂವಾಗಿ ಅರಳಿಹುದು ! ಓ ಮನವೆ ನೋಡಿ ಕಲಿ !

ಒಂದು ಚಿತ್ರ

ಯಾರು ಕೊಟ್ಟರೋ ಬಾನಿಗೊಂದು ಬಂಗಾರದ ಮೆಡಲು !
ಸಂಜೆ ಬೆಳಕಿನಲಿ ಸಾಲು ಗುಡ್ಡಗಳು
ಅನಂತತೆಯ ತೊದಲು !
ತೆಂಗು ಅಡಕೆಗಳು ಜಿರಾಫೆ ಕೊರಳನು
ಮೇಲಕೆತ್ತಿ ನಿಲಲು,
ಪುಟ್ಟ ಕೈಗಳನು ನಭಕೆ ಚಾಚಿ ಮಗು
ಚಿಕ್ಕಗಣ್ಣ ತೆರೆದು
"ಚಂದು ಮಾಮ ಬಾ"—ಎನ್ನುತಿಹುದದೋ
ತನ್ನ ತಾನೆ ಮರೆತು !

ಮಬ್ಬಿನಿರುಳು

ಮಬ್ಬಿನಿರುಳು ದಬ್ಬುತಲಿದೆ ಹೇಗೊ ತನ್ನ ಕಾಲವ.
ಕುರುಡು ಮೋಡ ಹರಡುತಲಿದೆ ಬಾನ ತುಂಬ ಜಾಲವ.
ಬಾನ ಬಟ್ಟೆಗಂಜ್ಜಿ ಉಜ್ಜಿ ಸವೆದ ಮುದುಕು ಸೋಬಾನಂತೆ ತೆಳ್ಳಗಾದ ಚಂದಿರ.
ಮೈಲಿಯೊಳು ತೇಲುತಿಹನು ಕವಿದ ಹಾಗೆ ಮಂಪರ.
ಪುರಾತನದ ಮಹಲಿನಲ್ಲಿ ಬಲೆನೇಯುವ ಜೇಡದಂತೆ
ಮಬ್ಬು ಬೆಳಕು ಹಬ್ಬುತಿರಲು. ಗಿಡ ಮರಗಳ ರೂಕ್ಷ ಚಿಂತೆ
ತಲೆಯ ಕೆದರಿ ಗಾಳಿ ಹೊಳೆಯೊಳೀಜಿ ಈಜಿ ಸೋಲುತಿರಲು.
ಮುಗಿಲು ಉಗಿವ ಎಂಜಲಂತೆ ಸೋನೆಯು ಮಳೆ ಸಿಡಿಯುತಿರಲು.
ನಿಲುವುದೆಂದೊ ನಿಲುವುದೆಂದೊ ಘೋರದ ಮನೆ ನೆನೆದ ಮಾತ್ರ, ಕೆಸರ ಮೆಟ್ಟಿ ಕೇಳಿಕೆ.
ಬೆಳಗು ಬಂದು ನಿಲಿಸಬಹುದೆ ಸಲಿಸಿ ತನ್ನ ಕಾಣಿಕೆ?

ಚೆಲುವಿಗೆ

ಹುಲ್ಲು ಹೂವಿನ ಕೊರಳಿಗೂ ಮಣಿಹಾರ ತೂಗುವ ಜ್ಯೋತಿಯೆ
ಬೋಳು ಬಯಲನು ಹಸುರು ನಗೆಯಲಿ ತುಂಬಿ ತಬ್ಬುವ ಪ್ರೀತಿಯೆ
ನೆಲದ ಬಯಕೆಯು ನೂರು ಶಿಖರವನೆತ್ತಿ ನಿಲ್ಲುವ ಮೌನವೇ
ಕಡಲ ಕರೆಗೋಗೊಟ್ಟು ಸಾಗುವ ರಮ್ಯ ಜಲಕಲನಾದವೇ.

ಕಪ್ಪು ಮೋಡಕು ಬೆಳ್ಳಿಯಂಚನು ಬರೆವ ಮಿಂಚಿನ ಕುಂಚವೇ
ಬಾನದೇಗುಲಕಿಂದ್ರಚಾಪದ ತೋರಣದ ಸಮ್ಮೋಹವೇ,
ಸಪ್ಪುಳಿಲ್ಲದೆ ತಿರೆಯನಪ್ಪುವ ಬಾನಿನೊಲವಿನ ಸೋನೆಯೇ
ನೆಲದ ಹಸುರಿನ ಬಯಕೆ ಬೀಜವನೆಚ್ಚರಿಪ ಕ್ರತು ಶಕ್ತಿಯೇ.

ಗುಡುಗು ಮಿಂಚಿನ ಪಡೆಯ ವಿಕ್ರಮದಲ್ಲಿ ತೋರುವ ವೀರವೇ
ಕ್ಷೀರಧಾರೆಯು ಕರೆವ ಕೆಚ್ಚಲ ಚಂದ್ರಿಕೆಯ ವಾತ್ಸಲ್ಯವೇ
ನೀಲ ನಭದೊಳು ಲೀಲೆಯಾಡುವ ಶುಭ್ರ ಮೇಘೋಲ್ಲಾಸವೇ,
ಚಿಕ್ಕೆ ಚಿತ್ರಾಂಕಿತದ ನಭದೀ ಛತ್ರಿಯರಳಿಪ ತೇಜವೆ!

ಶಿಶಿರ ಮೌನ ಮ್ಲಾನ ಗರ್ಭದಿ ಪೊಳೆವ ಸುಗ್ಗಿಯ ಸ್ವಪ್ನವೇ
ಹಳೆಯ ಹೆಜ್ಜೆಗೆ ಹೊಸತು ಗೆಜ್ಜೆಯ ಕಟ್ಟಿ ಕುಣಿಸುವ ತುಷ್ಟಿಯೇ,
ಸುಪ್ತಮನದೊಳು ತಪ್ತ ಜ್ವಾಲಾಮುಖಿಯ ಮರಿಸುವ ಮೋದವೆ
ಈ ಚಿರಂತನ ಉತ್ಸವಪ್ರಿಯ ಸೃಷ್ಟಿಯೀ ಸಿಂಗಾರವೆ!

ಮಸುಳಿಸಲು ಚಂದ್ರ ಲೋಕಕೊಯ್ವ ಹೂವಿನ ಯಾನವ
ಮರೆಯುದಿಸೆ ದೊಳು ಮತ್ತ್ಯ ಮಂತ್ರವ ಧೇನಿಸುವ ಉನ್ಮಾದವೆ
ಕುದಿವ ಕಡಲೊಳು ತೇಲ್ವ ನೌಕೆಗೆ ಕರ್ಣಧಾರ ತ್ರಾಣವೆ
ಸಂಜೆಯಾಗಸ ತುಂಬ ಹಾರುವ ಸ್ಮೃತಿಯ ಬರೆಯುವ ಭಾವವೆ!

ಹದದ ಹದರಗಳಾಗಿ ಜೀವವ ಬಿಗಿದು ಸುತ್ತುವ ಮೋಹವೆ
ತನ್ನತನವನೆ ಇಲ್ಲಿ ಗೈಯುವ ತುಂಬು ಬದುಕಿಯ ಪ್ರೀತಿಯೆ
ಮೈಯ ಗಾಳವನೆಸೆದು ಮನಸಿನ ಮೀನನಾಡಿಪ ಕಾಮವೆ
ಅಪ್ಪುದೊಳಿ ನಿಲ್ಲಿಸದೆ ಭೂಮಕೆ ಸೆಳೆವ ಪ್ರೇಮ ಸ್ತೋತವೆ!

ಕಣ್ಣ ಸಂಪುಟದಲ್ಲಿ ವಿಶ್ವವ ತೂಗೆಹಾಕ್ವಾನ ಶಕ್ತಿಯೇ
ಜೀವದೆದೆಯಲಿ ನೂರು ಅನುಭವವನ್ನು ಹೊತ್ತುವ ಮಂತ್ರವೇ

ಸಾಂತವೇದಿಕೆಯಲ್ಲನಂತನ ರುದ್ರ ಬಂಧುರ ನೃತ್ಯವೇ
ಅಣುವಿನಲ್ಲೂ ಗ್ರಹಗಳಲ್ಲೂ ಲಾಳಿಯಾಡುವ ಸೂತ್ರವೇ !

ನೂರು ವರ್ಣದ ನೂರು ರಾಗದ ಮಧುರ ಛಂದೋಬಂಧವೆ
ಹಗಲು ಇರುಳೂ ನೆಳಲು ಬೆಳಕಿನ ಅಲೆಯನಾಡಿಪ ಸಿಂಧುವೇ,
ನಿತ್ಯಯಾತ್ರೆಗೆ ಸಂದು ಲೋಕವ ನವ್ಯವಾಗಿಪ ಬಂಧುವೇ
ಎಷ್ಟು ಸವಿದರು ಇದುವೆ ಮೊದಲೆಂತೆನ್ನಿಸುವ ಆನಂದವೇ !

ಅಂತರಂಗದ ಬೆಳಕು ಬಾಹ್ಯದ ಬೆಳಕನೊಲಿಯುವ ತಾಣವೆ
ಪಾತ್ರಪಾತ್ರದೊಳರಳಿಸ್ಪಂದಿಸುವಾತ್ಮ ಕಿರಣ ಪ್ರಾಣವೆ !
ಜೀವ-ದೇವನ ಸಾಮರಸ್ಯದ ನವ್ಯ ಆವಿರ್ಭಾವವೆ
ಕುದಿವ ಬೆಂಕಿಯೊಳರಳಿನಿಲ್ಲುವ ಚಂದ್ರಸುಮಸೌಗಂಧವೇ.

'ಆಹ' ಎನಿಸಿತು ಬಂದು 'ಅಯ್ಯೋ' ಎನಿಸಿ ನಡೆಯುವ ಚಂಚಲೆ
ನಿನ್ನ ಮಿದುಪದ ಸೋಂಕಲೀ ಮನ ನೂರು ಮಿಂಚಿನ ಗೊಂಚಲೆ !
ನಿನ್ನ ಕೃಪೆಗೊಳಗಾದ ಸಂತಗೆ ಸರ್ವ ಸೃಷ್ಟಿಯೆ ಚಿತ್‌ಕಲೆ,
ಕಂಡುದೆಲ್ಲವು ಚೆಲುವು, ಮತ್ತಲ್ಲುಂಡುದೇ ರಸವಲ್ಲವೆ ?

"ಕಂಪ್ಲೇಂಟು"

ಕ್ಯೂ ನಿಂತು ಚೈತ್ರನಿಗಾಗಿ ಕಾಯುತಿದ್ದೇವೆ ನಾವೆಲ್ಲ,
ಬಂದನೇ ಹಿಡಿದು ಬಣ್ಣ ಬಣ್ಣಗಳ ಬಕೆಟ್ಟನು ?
ಓ, ಬಂದ. ಗಾಳಿಯ ಕುಂಚವನ್ನದ್ದಿ ಬಣ್ಣದಲಿ
ಆಗಲೇ ಬಳಿದಿದ್ದಾನೆ ಹಲವು ಮರಗಳನು !

ಎಷ್ಟು ತಡ, ಏಕೆ ತಡ ? ಇವನೊಬ್ಬ ಮುನಿಸಿಪಲ್ ಕಂಟ್ರಾಕ್ಟರು ;
ತನಿಖೆ ಮಾಡುವರಿಲ್ಲ, ಇವನನ್ನು ಕೇಳುವರಿಲ್ಲ ವರದಿ
ಅಲ್ಲರ್ಧ ಇಲ್ಲರ್ಧ—ಇವನ ಕೆಲಸವೆ ಹೀಗೆ
ಇನ್ನು ಯಾವಾಗಲೋ ನಮ್ಮ ಸರದಿ !

ಸಾಕಪ್ಪ ಸಾಕು : ಕೊರೆವ ಕತ್ತರಿಗಾಳಿ ಹತ್ತಾರಿ ಹೊಡೆದು.
ಇದ್ದ ತರಗು-ಬರಗನು ತೆಗೆದು ಬತ್ತಲೆಮಾಡಿ,
ಛಳಿಯ ಪಾಲಿಷ್ ಹಾಕಿ, ಹೀಗೆ ಬಿರುಬಿಸಿಲಲ್ಲಿ
ನಿಲಿಸಬಹುದೇ ಇವನು ನಮ್ಮ ಮರ್ಯಾದೆಯನು
ಕಾಸಿಗಿಂತಲು ಕೂಡ ಕಡಮೆ ಮಾಡಿ !

ಹಿಂದೆಲ್ಲ ಹೀಗಿರಲಿಲ್ಲ, ಕವಿಗಳ ಕೇಳಿ.
ಈಗೀಗಂತೂ ಹೆಚ್ಚಾಗುತಿದೆ ಅವ್ಯವಸ್ಥೆ —
ಅರ್ಜಿ ಸಲ್ಲಿಸಿ ನಾವು ಎಷ್ಟು ದಿವಸಗಳಾಯ್ತು, ಏನು ಕತೆ;
ಹೀಗೆಲ್ಲ ಕೆಡಬಾರದಪ್ಪ ಹೆಸರಾದ ಸಂಸ್ಥೆ.

ಗೊರಕೆ

ಇರುಳ ಮೌನದ ಕೊರಡ ಕೊರೆಯುವ
ಇವರ ಗೊರಕೆಯು ಗರಗಸ
ತಾರಮಂದರದಲ್ಲಿ ಏರಿಳಿ-
ದೆಂತು ಗೈದಿದೆ ಪರವಶ !

ಇರುಳ ನಿದ್ದೆಯ ಮರಳುಗಾಡೊಳು
ನಡೆವ ಕನಸಿನ ಕಾರವಾನ್,
ಇವರ ಗೊರಕೆಯು ಬೀಸಿನುರುಳಿಗೆ
ಸಿಲುಕಿ ನಿಂತಿತೊ ಕಾಣೆ ನಾನ್ !

ಏನು ಲಯ, ಓ ಏನು ತಾಳ-
ವಿದೇನು ರಾಗಾಲಾಪನೆ !
ಘೂಕ-ಗಾರ್ದಭ ಚಕಿತವಾಗಿವೆ,
ಆಹ ! ಎಂಥ ಕಸಿವಿಸಿ ಯಾತನೆ !

ಗಾನದೇವಿಯು ಶಿಲುಬೆಗೇನಿಸ-
ಲವಳು ನರಳುವ ದನಿಗಳೋ,
ಜಗದಪಸ್ವರಗಳನು ಭಟ್ಟಿಯ-
ನಿಳಿಪ ಗಾಣದ ಮೊರೆತವೋ,
ನಿದ್ದೆ ಬೀದಿ ರಿಪೇರಿ ರೋಡೆಂ
ಜಿನ್ನು ಉರುಳುವ ರಭಸವೋ,
ಏನು ಬಣ್ಣಿಸಲಯ್ಯ ಉಪಮಾ-
ತೀತವಾದೀ ಗಾನವ,
ಇಂಥ ಗೊರಕೆಯು ನಕ್ರಪೀಡನೆ-
ಯಿಂದ ಬಿಡಿಸೋ ಕೇಶವ.

ಎಂ. ಗೋಪಾಲಕೃಷ್ಣ ಅಡಿಗ

" ಅಂಧೇನೈವ ನೀಯಮಾನಾ ಯಥಾಂಧಾಃ "

ರಸ್ತೆಯಲ್ಲೋ ಮಸ್ತು ಜನ; ಇಲ್ಲ ಪುರಸೊತ್ತು;
ಮನೆಯಿಲ್ಲದಲೆವಪಾಪೋಲಿ ಗೂಳಿಯ ಮಸ್ತಿ;
ಬೀದಿ ದೀಪಗಳು ಕೊಟ್ಟವು ಗಸ್ತು; ಬಾನಲ್ಲಿ
ಮೋಡ ಪಟದಾಚೇನೊ ಮೇಜವಾನಿ;
ಕೆಳಗೋ ವೃಥಾ ಜೀವಭಾವ ಹಾನಿ.
ನೂಕು ನುಗ್ಗಲು ಪರಿಷೆ:
ನಿಮಿಷ ನಿಮಿಷಕ್ಕೊಂದು ವರಸೆ ಗುಟುರು ಗಲಾಟೆ ಮುಲುಕು ಛಳಕು.

ಏನು, ' ಬೇದಿಂಗ್ ಬ್ಯೂಟಿ ' ಬೀದಿಯಲ್ಲೇ ತೆರೆಗೆ ಬಂದಳೇನು ?
ವಾಲಿಸುಗ್ರೀವ ಕಾಳಗವಯ್ಯ, ಕೋಡಂಗಿ ಆಗಲೇ ಕೆರೆಯಾಚೆ ಬಂದನಯ್ಯ.
ಕಿಷ್ಕಿಂಧಕಾಂಡ ಬ್ರಹ್ಮಾಂಡ,
ದುಂದುಭಿ ಹೆಣದ ಸುತ್ತಲೂ ಮರ್ಕಟೋತ್ತಮರ ಎದೆದುಂದು ನೃತ್ಯ.
ಸಪ್ತಸಾಲದ ನೆರಳಿನಲ್ಲಿ ನಡೆದಿವೆ ಬಾಲವೆತ್ತಿ ಮುಲುಕುತ ನೂರು ಹೆಣ್ಣೆಕೋರೆ.
ಸುತ್ತಮುತ್ತಲ ರುಂಡಬುಂಡೆಯಲಿ ನೊರೆಗಳ್ಳು ಕುಡಿದು
                    ಕುಣಿದಿದೆ ಕೆಂಪುಕುಂಡೆ ಕೋತಿ,

ಹೆಣ್ಣ ತೊಡೆಯುರಸುತಿದೆ ಅದರ ಮೂತಿ.
ವಾಲಿಯೂಟದ ತಟ್ಟೆ ತಾರೆ ಟಣ ಟಣ ಚಿಮ್ಮಿ ಜಾರಿದಳು ಸುಗ್ರೀವನಡಿಗೆ ಮಗೆ.
ಕಿಷ್ಕಿಂಧದೆದೆ ಬಡಿತ ಮಂದ, ಮಂದ.
ಬರುವನೇ ರಾಮಚಂದ್ರ ?
' ಬಂದಾನೊ ಬಾರನೊ ಓ '

ಮೋಟಾರು ಕಾರು, ಸಿಟಿ ಬಸ್ಸು, ಲಟಕಾಪಟಕ ಜಟಕ. ಒಂಟೆತ್ತುಗಾಡಿ:
ನಾಯಿ ನರಿ ಕತ್ತೆ ಹೈನಾ ಕುದುರೆ ಹುಲಿ ಚಿರತೆ ನರವಾನರರ ಮುಂದೆ. ಮಂದೆ
ಕವಣೆ ತೂರಿದ ಹಾಗೆ ಹವಣರಿತು ಜಾರುತಿವೆ
ಒಂದಕೊಂದಕೆ ತಾಗಿ ತಾಗದಂತೇಗುತಿವೆ;
ಯಾವ ದಾರವೊ ಹಿಡಿದು ಜಗ್ಗುತ್ತಿದೆ.

ಮುಖಮುಖಕ್ಕೊಂದು ಮುಖವಾಡ: ಸೆಕ್ಕಿದೆ ನೋಡು
ಒಂದೊಂದು ಬಾಯಿಗೊಂದೊಂದು ಮೈಕ್ರೋಫೋನು

ಮುಖಮುಖದ ನಡುವೆ ಮಂಜಿನ ದಟ್ಟ ತೆರೆ; ಢಿಕ್ಕಿ
ಹೊಡೆದು ಫಕ್ಕನೆ ಬಿಕ್ಕು, ಕಿರಚು; ಅಯ್ಯೋ ಬಿದ್ದ, ಎದ್ದ ನೆಗೆದೇ ಬಿದ್ದ.

ತುಳಿದು ಚೂರಾದವರ ಮೇಲೆ ಬಂತು ಸವಾರಿ ಕುದುರೆ, ಕುದುರೆಯ
ಹಿಂದೆ ಆನೆ, ಆನೆಯ ಹಿಂದೆ ರಥ. ರಥದ ಹಿಂದೆ ಮೋಟಾರು ಲಾರಿ.
(ಈಚೆಗೆ ಕ್ಷಣಕ್ಷಣಕ್ಕೊಂದು ಕುರಿ ಹೊಗ್ಗುತಿರೆ
ಆಚೆ ಅಪರಕ್ಷಣವೆ ಟಿನ್ನೊಳಪ್ಪಟಮಾಂಸ
ನೀಡಲೆಂದೇ ಇಡೀ ಹಗಲಿರುಳು ದುಡಿದೇದಿ ಹೂಂಕರಿಸಿ ಗದರುತಿದೆ
ಸುರ ಚಿಕಾಗೋವಿನಲಿ ಅಸುರ ಯಂತ್ರ).

ಅಹಾ ನೋಡು, ಎಂಥ ಆಟ!
ಎದುರುಬದುರೇರೇರಿ ಕಾರು ಕಾರುಗಳ ಹೋರಾಟ;
ಬಾರಿಗಾದ ಮೇಲೆ ಮೋಟಾರಿನೇರಾಟ;
ದಾರಿಗರ ಮೇಲೆ ಸೈಕಲ್ಲು; ಸೈಕಲ್ಲ ಮೇಲೆ ಎತ್ತಿನಗಾಡಿ;
ಗಾಡಿ ಮೇಲಕೆ ಬಿತ್ತು ಜೀಪು;
ಹಾಕು ಮದ್ದಳೆಕರಣೆ ಮೇಲೆ ಛಾಪು!
ವ್ಹಾರೆವಾ, ಛಾಪು, ಛಾಪು!

ನನ್ನ ಕಿರುಮನೆ ಕಿಟಕಿ ಬಳಿ ಹಿಡಿದು ಕೈದೀಪ
ನಾನು ಸಾಕ್ಷೀಭೂತ ನಿಂತೆ ನಡುಗಡ್ಡೆಯಲಿ;
ಸುತ್ತ ಸೈರನ್ನು ಗೀತಕ್ಕೆ ಎದೆಬುಡ ನಡುಗಿ
ಕಿವಿಗೆ ಜಡಿದೆನು ಮೇಣದುಂಡೆ, ಭಡವಾ.
ಕುಳಿತೆ ಕುರ್ಚಿಯ ಮೇಲೆ ತೆರೆದು ಹಳೆ ಡೈರಿಯನು
ಮಗಚುತ್ತ ನಡೆದೆ ಒಂದೊಂದೆ ಪುಟವ.

ಏನಾದರೂ ಮಾಡುತಿರು ತಮ್ಮ

ಏನಾದರೂ ಮಾಡುತಿರು ತಮ್ಮ;
ನೀ ಸುಮ್ಮನಿರಬ್ಯಾಡ;
ಆ ಸಸಿಯ ಕೀಳು, ಚಿವುಟೀ ಚಿಗುರ.
ಹೂವ ಕಂಡರೆ ಹಿಸುಕಿ ಬಿಸುಡು! ಹುಲ್ಲೆಲ್ಲೆಲ್ಲಿ
ಅಲ್ಲಲ್ಲಿ ಕೊಳ್ಳಿ ಹಿಡಿದಾಡು ಲಂಕಾದಹನ.
ಮರಿ ಚಿಟ್ಟೆ, ಗಿಳಿ, ಗುಬ್ಬಿ—ಎಲ್ಲಿ ಕಂಡರೆ ಅಲ್ಲಿ

ಅಟ್ಟು, ಹಿಡಿ, ಕುಟ್ಟು: ಕಿತ್ತೆಸೆ ಪಕ್ಕ ಪುಕ್ಕಗಳ.
ಕಾಡಾನೆ ಹೊಕ್ಕ ನಂದನದಲ್ಲಿ
ಬಿಕ್ಕುತಿದೆ ಇಲ್ಲಿ ಮಲ್ಲಿಗೆ ಅಲ್ಲಿ ಹೊಂಬಾಳೆ.
ಸುತ್ತಲೂ ಗೋಡೆ ಮೇಲೆಲ್ಲ ಪೌರುಷ ಬಲದ
ಸ್ವಿಚ್ಚು; ಕಣ್ಣನು ಮುಚ್ಚು:
ಒತ್ತು ಹತ್ತಿಪ್ಪತ್ತನೊಂದೆ ಸಲ; ನೆಲ, ನೀರು, ಆಕಾಶ—
ಬಂಗಾರ ಮೊಟ್ಟೆ ಕೋಳಿಯು ಹೊಟ್ಟೆ–ಬಗೆ, ಸೀಳು.
"ಮಾಡು, ಇಲ್ಲವೊ ಮಡಿ."
ನಿನ್ನ ನಾಲ್ಕೂಕಾಲ ನರ್ತನಕೆ ಪ್ರತಿನಿಮಿಷ
ಏನಾದರೊಂದಕ್ಕೆ ಜಖಂ ಆಗದಿರೆ ನಿನ್ನ
ಅದ್ಭುತ ಪ್ರತಿಭೆಗೇ ಕುಂದು ಕಂಡೆಯು, ತಮ್ಮ.
ವಾನರನ ಮಾಡಮಾಡುತ್ತಲಿ ವಿನಾಯಕನ ಮಾಡಿಬಿಟ್ಟರು ಸರಿಯೆ.

ಯೋಚಿಸುವುದಳೆದು ಸುರಿವುದು ತೂಗಿ ತೂರುವುದು—
ಈ ಎಲ್ಲ ಗತಕಾಲದಾಪತ್ತು;
ಸತ್ತ ಭಾವದ ಸಾಯಲಾರದ ಪ್ರೇತ ಸಂಪತ್ತು.

ಕಾಡು ಇದೆ, ಕಡಿ; ಸಿಗಿದು ಕಟ್ಟು ತೋರಣ. ಕೈಲಿ
ಕೊಡಲಿ ಇದೆ, ಮಚ್ಚು, ಗರಗಸ, ಕತ್ತಿ; ಎತ್ತೆತ್ತಿ
ಆಡಿಸಾಡಿದು—
ಮಾಗಿಯಲ್ಲಿ ಸುತ್ತಲು ಮಬ್ಬು ಕವಿದಾಗ,
ಮೋರೆ ಮೋರೆಯ ಮಧ್ಯೆ ಒಂದೆರಡು ಗೆರೆ ಮಂಜು ಗೋಡೆ ನೆಗೆದೆದ್ದಾಗ.

ದಾರಿ ಕಣ್ಣೆದುರು ಕವಲೊಡೆದು ನಿಡುಸುಯ್ದಾಗ,
ಎರಡು ಗಿರಿ ಶಿಖರ ತಲೆಯೆತ್ತಿ ಮಾರ್ಮಲೆದಾಗ,
ಮರಮರದ ಮೇಲೆ ಮೋಹಿನಿ ಕಣ್ಣ ಹೊಡೆದಾಗ—
ಚಿಂತೆಯೇ, ಧರ್ಮಸಂಕಟವೆ?
ಛೀ, ತೆಗೆ; ನೀನು ಸರಳ-
ಅದೆ ನಿನ್ನ ಹೆಗ್ಗಳಿಕೆ;

ಕಣ್ಣ ಪಟ್ಟಿಯ ಕುದುರೆ ನೋಟ ನಿನ್ನಗ್ಗಳಿಕೆ.
ಕೈಗೇನೆ ಸಿಕ್ಕಿದರು ತಿನ್ನು;
ಕಣ್ಣಿಗೆ ಏನು ಬಿದ್ದರೂ ಅದ ಹಿಡಿದು ಹಿಂಡು;
ಕಾಲಿಗೆ ಏನು ತೊಡರಿದರು ಅದ ಹಿಡಿದು ಕತ್ತರಿಸು.
ಈ ಅಬಲೆ

'ಮಲಗಿರುವ ತಾಯಿ ಪೃಥಿವೀ'
ಸುಸ್ತಾಗಿ ಇಲ್ಲಿ ಮಲಗಿದ್ದಾಳೆ; ಮುಗಿಲ ಕಡೆ
ಕಣ್ಣನೆತ್ತಿದ್ದಾಳೆ.
ಅವಳ ಅಂಗಾಂಗದಲಿ
ಒಂದಿಷ್ಟು ರಕ್ತ ಜಿನುಗವ ತನಕ ಅದ ಕಚ್ಚಿ ಹೀರು.
ಮಾಂಸವಿಲ್ಲದವೆ?
ಮಾಂಸ?
ಮೂಳೆ ನರ ಮಜ್ಜೆ ತೊಗಲಷ್ಟಾದರೂ ಇಪುದೂ ಅಲ್ಲೊ!

ಅಹಹಾ, ಗಂಡು ನೀ ಕಣೋ!

ಆ ಅಲ್ಲಿ ಇಹುದು ಜೀವದ ಬಾವಿ.
ಕಟ್ಟು ಯಾತವ-ಯಾತಕಾದರೇನಂತೆ ಅದು—
ಮೊಗೆ ನೀರ.
ಬಾವಿತಳ ತೊಳಸು ಹನಿಬನಿಯು ಕೊನೆ ಸಿಗುವತನಕ.
ಪಾತಾಳಗರುಡಿ ಇಳಿದಿಳಿದು ತಡಕಲಿ ತಳವ.
ಅಣಿವನೊಡೆ, ಮಹತ್ತನ್ನು ಪಡೆ.
ಬ್ರಹ್ಮಾಂಡಕ್ಕೆ ತೊಟ್ಟುಬಿಡು ಬ್ರಹ್ಮಾಸ್ತ್ರ.
ವಿಜಯಿೀ ಭವ.

ಏನಾದರೂ ಮಾಡುತಿರು ತಮ್ಮ; ಸುಮ್ಮನೆ ಕೂತು
ನೆಲಕೆ ನೀ ಬರಿಭಾರವಾಗಬೇಡವೊ; ನೆಲದ
ಭಾರ ಕಳೆಯಲು ಹೀಗೆ ಮಾಡು ನೀ ಸರಿ, ಸಹಜ.

ಇದು ಬಾಳು!

೧

ಅಳುವ ಕಡಲೊಳೂ ತೇಲಿ ಬರುತಲಿದೆ
ನಗೆಯ ಹಾಯಿ ದೋಣಿ;
ಬಾಳ ಗಂಗೆಯು ಮಹಾಪೂರದೊಳೂ
ಸಾವಿನೊಂದು ವೇಣಿ
ನೆರೆತಿದೆ, ಬೆರೆತಿದೆ; ಕುಣಿವ ಮೊರೆವ
ತೆರೆತೆರೆಗಳೋಳಿಯಲ್ಲಿ
ಜನನ ಮರಣಗಳ ಉಬ್ಬು ತಗ್ಗು ಹೊರ
ಳುರುಳುವಾಟವಲ್ಲಿ!

೨

ಆಶೆ ಬೂದಿ ತಳದಲ್ಲು ಕೆರಳುತಿವೆ
ಕಿಡಿಗಳೆನಿತೊ ಮರಳಿ,
ಮುರಿದು ಬಿದ್ದ ಮನಮರದ ಕೊರಡೊಳೂ
ಹೂವು ಹೂವು ಅರಳಿ!
ಕೊಡಲಾರದೆದೆಯಾಳದಲ್ಲೂ ಕಂ-
ಡೀತು ಏಕ ಸೂತ್ರ;
ಕಂಡುದುಂಟು ಬೆಸೆದೆರೆಗಳಲ್ಲು ಭಿ-
ನ್ನತೆಯ ವಿಕಟ ಹಾಸ್ಯ.

೩

ಎತ್ತರೆತ್ತರಕೆ ಏರುವ ಮನಕೂ
ಕೆಸರ ಲೇಪ, ಲೇಪ;
ಕೊಳೆಯ ಕೊಳಚೆಯಲಿ ಮುಳುಗಿ ಕಂಡೆನೋ
ಬಾನಿಗೊಂದು ಪೆಂಪ;
ತುಂಬು ಗತ್ತಲಿನ ಬಸಿರ ನಾಳುತಿದೆ
ಒಂದು ಅಗ್ನಿ ಪಿಂಡ;
ತಮದಗಾಧ ಹೊನಲಲ್ಲು ಹೊಳೆಯುತಿದೆ
ಸತ್ಯವೊಂದಖಂಡ!

೪

ಇದನರಿತೆನೆಂದೆ; ಆ ಅರಿವು ಕಿರಣವನೆ
ನುಂಗಿತೊಂದು ಮೇಘ;
ಆ ಮುಗಿಲ ಬಸಿರನೇ ಬಗೆದು ಬಂತು ನವ
ಕಿರಣ ವೊಂದಮೋಘ!
ಹಿಡಿದ ಮಣ್ಣೆ ಮಣ್ಣಹುದು; ಮಣ್ಣೊಳೂ
ಹೊಳೆದುಂಟು ಹೊನ್ನು;
ಇದು ಹೀಗೆ ಎಂಬ ನಂಬುಗೆಯ ಊರೆಗೋ-
ಲಿಲ್ಲ ಇನ್ನು ಮುನ್ನು!

೫

ಆಶೆಯೆಬ ತಳವೊಡೆದ ದೋಣಿಯಲಿ
ದೂರ ತೀರ ಯಾನ;
ಯಾರ ಲೀಲೆಗೋ ಯಾರೊ ಏನೊ ಗುರಿ-

ಯಿರದೆ ಬಿಟ್ಟಬಾಣ !
ಇದು ಬಾಳು ನೋಡು: ಇದ ತಿಳಿದೆನೆಂದರೂ
ತಿಳಿದ ಧೀರನಿಲ್ಲ;
ಹಲವು ತನದ ಮೈಮರೆಸುವಾಟವಿದು;
ನಿಜವು ತೋರದಲ್ಲ !
ಬೆಂಗಾಡು ನೋಡು ಇದು; ಕಾಂಬ ಬಯಲುದೊರೆ-
ಗಿಲ್ಲ ಆದಿ–ಅಂತ್ಯ;
ಅದ ಕುಡಿದೆನೆಂದ ಹಲರುಂಟು; ತಣಿದ ನೆಂ-
ದವರ ಕಾಣೆನಯ್ಯ !
ಅರೆ ಬೆಳಕಿನಲ್ಲಿ ಬಾಳಲ್ಲಿ ಸುತ್ತಿ ನಾ
ವೇಕೊ ಮಲೆತು, ಮೆರೆದು,
ಕೊನೆಗೆ ಕರಗುವೆವು ಮರಣ ತೀರ ಘನ
ತಿಮಿರದಲ್ಲಿ ಬೆರೆದು !

ಸಖಿ, ಬಾ !

ಬಾ, ಬಾ, ಸಖಿ ! ಬಾ,
ನೆನಹಿನ ನಂದನ
ವನವಿದೊ ಕುಣಿಯುತಿದೆ;
ಇಲ್ಲಿಗೆ ಬಗೆಗಣ್ಣೆದಿರೊಳು ತನ್ನಯ
ಸೊಬಗನು ಮೆರೆಯುತಿದೆ.

ಇದೊ ನಲ್ವಾತಿನ ನಲುಮೆಯ ನಗೆನೆಗಳು
ನಲಿದಿದೆ ನಿನಗಾಗಿ;
ಇದೆಕೋ ಬೇಟದ ಸವಿಸವಿ ಹೂಗಳು
ನಗುತಿವೆ ನಮಗಾಗಿ.
ಆನಂದದ ಕಂಬನಿಗಳ ಧುನಿಗಳು
ಚಿಮ್ಮಿವೆ ನಮ್ಮೆದಿರು;
ಪುಳಕ ಪುಳಕಗಳ ಚಿಗುರಜಲ್ಲಿಗಳು
ಚೆಲ್ಲಿವೆ ಕಣ್ಣೆದಿರು;
ಇದೊ ಮೈನಲವಿನ ಒಲವಿನ ಕೂಟದ
ಫಲಗಳು ನಮಗಾಗಿ
ಕಾದಿವೆ; ಇಲ್ಲಿಯೆ ಸುತ್ತಲು ಸವಿಸವಿ
ಮುತ್ತಿನ ಮಾಲೆಗಳು

ಸುತ್ತಿವೆ; ಸವಿಸವಿಯಾಲಿಂಗನಗಳ
ಕೆತ್ತಿವೆ ಚಿತ್ರಗಳು.
ಅಲ್ಲಿಯೆ ನಾನೂ ನೀನೂ ನಿಲ್ಲುವೆ, ಗೆಲ್ಲುವ ಒಂದೆ ಚಣ:
ಇಂದಿಗೆ ಬೆಂಗಾಡನು ತೊರೆ; ಮರೆ, ಹಾ, ಬಾಳಿನ ನಿಷ್ಕರುಣ!
ತುಂಬಲಿ, ತುಳುಕಲಿ, ದಡೆಗಳ ದುಡುಕಲಿ, ಮಗುಳೆಮ್ಮಾಹರಣ!

ಎದೆಯು ತೆರೆದು ಮೈತೆರೆದು ಬಾಳ ತೆರೆದಪ್ಪಿನ ದಿನಗಳನು,
ಸೋಂಕು ಸೋಂಕಿನಲಿ, ಮುತ್ತು ಮುತ್ತಿನಲಿ ನೆಗಳಿದ ದಿವಗಳನು,
ಇಲ್ಲಿ ನೋಡು ಎದೆಯಲ್ಲಿ; ನೋಡಿ ಹಾ, ಬಿಡು ನಿಟ್ಟುಸಿರೊಂದು;
ನಲವು ಕಳೆದರೂ ನಲುಗದು, ಹಾ ಪ್ರಿಯೆ, ನಮ್ಮ ಪ್ರೇಮ ಬಂಧ!

ಬಾರದ ದಿನಗಳ ಮಣಿಗಳ ಪೋಣಿಸು
ನೆನಹಿನ ದಾರದಲಿ;
ಒಲವಿನ ಜಪದೊಳು ಬಾಳುವ, ಬಾಳಿನ
ಕಾರಾಗಾರದಲಿ!

ಬಾ, ಬಾ, ಸಖಿ! ಬಾ,
ನೆನಹಿನ ನಂದನ
ವನವಿದೊ ಕರೆಯುತಿದೆ-
ಇಲ್ಲಿಯೆ, ಬಗೆಗಣ್ಣೆದಿರೊಳು ತನ್ನಯ
ಸೊಬಗನು ತೆರೆಯುತಿದೆ.

ಅತಿಥಿಗಳು

೧

ಅದೃಶ್ಯ ಲೋಕದ ಅನೂಹ್ಯ ರೂಪದ
ಅನಂತಕಾಲದ ಯಾತ್ರಿಕರೇ,
ಮಣ್ಣಿನ ಮನದಲಿ ಹೊನ್ನನೆ ಬೆಳೆಯುವ
ಅಪೂರ್ವ ತೇಜದ ಮಾಂತ್ರಿಕರೇ!—
ಅತಿಥಿಗಳಹ ನೀವೆಲ್ಲರು ಇಲ್ಲಿಗೆ
ನೆಲೆಸಲು ಬಂದವರಲ್ಲ;
ಒಂದೆ ಗಳಿಗೆ ಆಮೋದಕೆ ಬರುವಿರಿ,
ಒಂದರಗಳಿಗೆಯೊಳೇ ಮೈಗರೆವಿರಿ,
ಶೂನ್ಯ ಶೂನ್ಯ ದಿನವು.

೨

ಇದಿಗೋ ಬಂದೆವು ಬಂದೆವೆನ್ನುವಿರಿ,
ಎಂದಿಗೋ ನೆನಪಿನ ಬೆಂಕಿಯನೆರೆವಿರಿ;
ಎಂದೂ ಇಲ್ಲದ ಆಶೆತವಕಗಳ
ಒಂದೊಂದೇ ಹೊಸ ಬಯಕೆ ಬವಣೆಗಳ
ತಂದು ಕೂಡಿ, ಗರಿಮೂಡಿ ಹಾರುವಿರಿ-
ವಿಜನ ವಿಜನ ಮನವು,
ಶೂನ್ಯ ಶೂನ್ಯ ದಿನವು!

೩

ದಟ್ಟನೆಳಲ ಕೆಳಗಳಲುವ ಕೊಳದೊಳು
ಥಟ್ಟನೆಲರು ಸುಳಿಯಲು ಎಲೆ ಎಲೆಗಳು
ಕದಲಿ ಕದಲಿ ಕಂಗೊಳಿಪ ಜರಡೆಯೊಳು
ಬೆಳಕಿನ ಕುಡಿಗಳು, ಮಿಡಿನಾಗರಗಳು
ತೂರಿ ಜಾರಿ ಬಂದೆರಗಿ ಹೋಗುವೊಲು
ಬರುವಿರಣ್ಣ ಈ ಮನಕೆ ಥಟ್ಟನೆ
ಹೇಳುವಂತೆ ಹೊಸತೊಂದು ಗುಟ್ಟನೆ
ನಟಿಸಿ ಅಟಮಣಿಟಿಸಿ ಪುಟಿದು ಹೋಗುವಿರಿ;
ಅಂತೆ ಪುಟಿಯ ಬೇಡಿ,
ಎದೆಯನು ಸೇರಿ ಮನೆಯ ಮಾಡಿ!

೪

ಬೆಳಗಾಗಲು ಎವೆ ತೆರೆಯುವ ಮೂಡಲ
ಮಡಿಲಲಿ ಮಲಗಿದ ಹಕ್ಕಿ ಹಕ್ಕಿಗಳ
ಕೊರಳ ಗೀತದಲಿ ಕೆರಳುವ ಹೊರಳುವ
ಸುಂದರ ಸುಮಧುರ ನಾದರೂಪರೇ,
ತಳಿರು ತಳಿರಿನಿಬ್ಬನಿಯ ಗೋಳದಲಿ
ಮೇಳಗೊಂಡು ಮರೆಮರೆವ ಭೂಪರೇ,
ಅರಳು ಮೊಗ್ಗೆಗಳ ಕೆಂಪುದಾರಿಯಲಿ
ಅಲೆವ ಅನಂತದ ಯಾತ್ರಿಕರೇ!
ಬನ್ನಿ, ಬನ್ನಿ, ಬನ್ನಿ,
ಇಲ್ಲೇ ಇರಲು ಬಂದೆ ಬನ್ನಿ!

೫

ಕುಳಿತು ನೀವು ಬೆಳ್ಮುಗಿಲಿನಲಿ ರಥದಲಿ
ನೊರೆ ಮೊರೆದೇರುವ ತಾರಾಪಥದಲಿ
ನಲಿದು ಕೆಲೆದು ಕಿಲಕಿಲನೆ ನಕ್ಕು ಆ-
ನಂದದ ಆಟದಲಿ
ಮೈಮರೆತಲೆವೆಲೆ ಮುದ್ದುಮಕ್ಕಳೇ,
ಬಾನಿನೂರಿನಲಿ ನೆಲಸಿದೊಕ್ಕಲೇ,
ಬನ್ನಿ, ಬನ್ನಿ ಬನ್ನಿ;
ಇಲ್ಲೇ ಇರಲು ಬನ್ನಿ, ಬನ್ನಿ, !

೬

ಮಳೆ ಬಿಲ್ಲಿನ ತೂಗುಯ್ಯಲನೇರಿ
ತೂಗಿ ತೂಗಿ ಭೂ ತೀರವ ಸೇರಿ
ತುರುಗಿ ತುರುಗಿ ಬಂದೆರಗುವಿರಹ ಹಾ !
ವಿಜನ ವನದ ಕಾಸಾರ ತೀರಕೆ
ಬರುವ ಜಿಂಕೆಯಂತೆ,
ಬಣಗು ನೆಲದ ಒಣ ಬಾಯ್ದೆರೆಗಿಳಿಯುವ
ಜೇನ ಹನಿಗಳಂತೆ
ನಲವಿನಲ್ಲಿ ಮೈಗರೆದ ಮನವು ಮೈ
ಅರಿತು 'ಬಂದಿರಾ ?' ಎನ್ನುವ ಮುನ್ನವೆ
ಒಲವಿನೊಂದು ಹನಿ ಜಿನುಗುವ ಮುನ್ನವೆ
ಹಾರಿ ನೆಗೆಯ ಬೇಡಿ,
ಎದೆಯನು ಸೇರಿ ಮನೆಯ ಮಾಡಿ.

೭

ನೀವಿಲ್ಲದೆ ಈ ಮನದೊಳಗೇನಿದೆ ?
ನೀವಿದ್ದರೆ ಹೂವಿದೆ ಹೊಸ ಜೇನಿದೆ,
ಬಾನಿನ ಕೆಳೆಯಿದೆ, ಗಾನದ ಬೆಳೆಯಿದೆ,
ಮುಗಿಲ ಮಲ್ಲಿಗೆಯ ಎಳೆತ ಸೆಳೆತವಿದೆ,
ವೃಂದಾವನವಿದೆ, ಕಲ್ಪವೃಕ್ಷವಿದೆ,
ನಿಮಗಾಗಿಯೆ ಈ ಮನದರಮನೆ ಇದೆ
ತೆರವು, ತೆರವು, ತೆರವು;
ನಿಮಗಾಗಿಯೆ ಎದೆಗದ್ದುಗೆ ಕಾದಿದೆ,
ಬರಿದು, ಬರಿದು, ಬರಿದು !

ಕನಸಿನ ಲೋಕದ ಬಣ್ಣಬಣ್ಣ ತಳೆದಣ್ಣರೆ, ಐತನ್ನಿ!
ನನ್ನಿಯ ನಾಡಿನ ಬಿಣ್ಣರೆ,
ನನ್ನೊಳಗಣ್ಣಿನ ಸಣ್ಣ ಸಣ್ಣರೇ,
ಬನ್ನಿ, ಬನ್ನಿ, ಬನ್ನಿ,
ಇಲ್ಲೇ ನೆಲಸಿ; ಬನ್ನಿ, ಬನ್ನಿ!

ಅತಿಥಿಗಳಹ! ನೀವೆಲ್ಲರು ಇಲ್ಲಿಗೆ
ನೆಲೆಸಲು ಬಂದವರಲ್ಲ;
ಒಂದೆಗಳಿಗೆ ಆಮೋದಕೆ ಬರುವಿರಿ,
ಬಂದರಗಳಿಗೆಯೊಳೇ ಮೈಗರೆವಿರಿ,
ವಿಜನ ವಿಜನ ಮನವು
ಶೂನ್ಯ ಶೂನ್ಯ ದಿನವು.

ಒಂದು ಸಂಜೆ

ಮೌನ ತಬ್ಬಿತು ನೆಲವ; ಜುಮ್ಮನೆ ಪುಳುಕಗೊಂಡಿತು ಧಾರಿಣಿ;
ನೋಡಿ ನಾಚಿತು ಬಾನು; ಸೇರಿತು ಕೆಂಪು ಸಂಜೆಯ ಕದಪಲಿ.
ಹಕ್ಕಿಗೊರಲಿನ ಸುರತಗಾನಕೆ ಬಿಗಿಯು ನಸುವೇ ಸಡಿಲಿತು:
ಬೆಚ್ಚಬೆಚ್ಚನೆಯುಸಿರಿನಂದದಿ ಗಾಳಿ ಮೆಲ್ಲನೆ ತೆವಳಿತು.

ಇರುವ ಸೆರಗಿನ ನೆಳಲು ಚಾಚಿತು, ಬಾನು ತೆರೆಯಿತು ಕಣ್ಣನು;
ನೆಲವು ತಣಯಿತು, ಬೆವರು ಹನಿಯಿತು; ಬಾಷ್ಪ ನೆನೆಸಿತು ಹುಲ್ಲನು.
ಮೌನ ಉರುಳಿತು, ಹೊರಳಿತೆದ್ದಿತು: ಗಾಳಿ ಭೋರೆನೆ ಬೀಸಿತು,
ತೆಂಗು ಗರಿಗಳ ಚಾಮರಕೆ ಹಾಯೆಂದು ಮೌನವು ಮಲಗಿತು.

ಧೂಮ ಲೀಲೆ

ಸಿಗರೇಟಿನ ಹೊಗೆ
ವರ್ತುಳ, ವರ್ತುಳ
ಧೂಪ–ಧೂಮ ಮಾಲೆ,
ವಿವಿಧರೂಪ, ವಿಹ್ವಲ ವಿಲಾಪಗಳು
ವಿಕೃತ ಚಿತ್ರಗಳು
ಗಾಳಿಯಲೆಯ ಮೇಲೆ.

ಗಾಳಿಗು ನಸುಹಗುರ ಹೊಗೆ:
ಅಂತೆ ಅನಾಯಾಸ ಏರುತಿದೆ ಹೊಗೆಯು ಹೀಗೆ. ಹೀಗೆ.
ಸುರುಳಿ ಸುರುಳಿ ಹೊರಹೊರಳಿಯುರುಳಿ ಎಳೆಎಳೆಗಳಾಗಿ ಬಿಡಿಬಿಡಿಸಿ ಬೆಳ್ಳಿಗೆರೆ.

ಎರೆದು ಕೊರೆದ ಹಾಗೆ,
ಕೊರೆದು ಬಿಟ್ಟ ಹಾಗೆ!

ಕರುಣೆಗಾಳಿ ನಸುಮೌನ ತಾಳಿ ತಳುವಿದರೆ ಇದರ ಹೊನಲು
ಕಣ್ಣನಳತೆ ಕುಣಿದಾಡಿ ಸೇರುವುದು ಕಾಣದೂರ ನೀಲು:
ಕೆರಳಿ ಗಾಳಿ ಹೊಯ್ದಾಡಿತೆನ್ನು, ಈ ಹೊಗೆಯು ದಿಕ್ಕು ಪಾಲು.
ರೂಪವಳಿದು ನೆಲೆಯುಳಿದು ಹರಿಹರಿದು ಬಿಡುವ ನೂಲು. ನೂಲು!

ತೇಲಿ, ತೇಲಿ, ತೇಲಿ
ಹೊಗೆಯಿದು
ಗಾಳಿಯಲೆಯ ಮೇಲೆ
ಬಿಸಿಲ ಝಳಕೆ ಕಡಲಾವಿಯಾಗಿ ಮೇ
ಲೆದ್ದು ಹೋದ ಹಾಗೆ,
ಸುಪ್ತ ಚಿತ್ತದಲಿ ಸ್ವಪ್ನಚಿತ್ರ ನಿ-
ಶ್ಶಬ್ದ ಎದ್ದಹಾಗೆ;
ಜೊನ್ನ ಕುಣಿತವಿದು ಕಂಡು ಕಂಡು ಜನ
ಮನವು ಕಣ್ಣ ಸೋಲಿ
ಸಿಗರೇಟಿನೆದೆಯ ಧಗಧಗಿಸುವುರಿಯು ಕುಡಿ
ವವನ ನಿತ್ಯ ಲೀಲೆ!

ನಾನು ನೀನು ಸಿಗರೇಟು—ಅಹಹ!—ಅದೆ ಬಣ್ಣವಣ್ಣ ತಿಣ್ಣ!
ನಮ್ಮ ಬಾಳು ಹೊಗೆ, ಕಾಣದೊಂದು ನಗೆ ಹರಹುತಿರುವ ಬಣ್ಣ!

ಯಾರೊ ಏನೊ ಕುಡಿಕುಡಿದು ಹೊಗೆಯನುಫ್ ಎಂದು ಉಗುಳುತಿಹನು;
ಹೊತ್ತಿಯುರಿವ ಸಿಗರೇಟು ಬಲ್ಲುದೇನವನ ಸಂತಸವನು?

ಸಿಗರೇಟು ತೋರುತಿದೆ; ಹೊಗೆಯು ಏರುತಿದೆ:
ಕುಡಿವ ಸೊಗಸುಗಾರ
ಯಾವನವನು? ಕಾಣಿಸದು ಕುಡಿವ ಪಾಯ್ಪ್ ಹಿಡಿದ ಬೆರಳ ಯುಗಳ.

ಸಿಗರೇಟು ತೀರುತಿದೆ, ಹೊಗೆಯು ಏರುತಿದೆ,
ಹೊಗೆಯೆ ಮೊದಲು ಕೊನೆಯು!
ಈ ಬಾಳ ನನೆಯು, ಕೊನೆಯು!

ಮೋಹನ ಮುರಲಿ

ಯಾವ ಮೋಹನ ಮುರಲಿ ಕರೆಯಿತು ದೂರತೀರಕೆ ನಿನ್ನನು?
ಯಾವ ಬೃಂದಾವನವು ಸೆಳೆಯಿತು ನಿನ್ನ ಮಣ್ಣಿನ ಕಣ್ಣನು?

ಹೂವುಹಾಸಿಗೆ, ಚಂದ್ರ, ಚಂದನ, ಬಾಹುಬಂಧನ, ಚುಂಬನ;
ಬಯಕೆ ತೋಟದ ಬೇಲಿಯೊಳಗೆ ಕರಣಗಣದೀ ರಿಂಗಣ;

ಒಲಿದ ಮಿದುವೆದೆ, ರಕ್ತಮಾಂಸದ ಬಿಸಿದು ಸೋಂಕಿನ ಪಂಜರ;
ಇಷ್ಟೇ ಸಾಕೆಂದಿದ್ದೆಯಲ್ಲೋ! ಇಂದು ಏನಿದು ಬೇಸರ?

ಏನಿದೇನಿದು ಹೊರಳುಗಣ್ಣಿನ ತೇರುನೋಟದ ಸೂಚನೆ?
ಯಾವ ಸುಮಧುರ ಯಾತನೆ? ಯಾವ ದಿವ್ಯದ ಯೋಚನೆ?

ಮರದೊಳಡಗಿದ ಬೆಂಕಿಯಂತೆ ಎಲ್ಲೊ ಮಲಗಿದೆ ಬೇಸರ;
ಏನೊ ಕಿಡಲು ಏನೊ ತಾಗಲು ಹೊತ್ತಿ ಉರಿವುದು ಕಾತರ:

ಸಪ್ತಸಾಗರದಾಚೆಯೆಲ್ಲೋ ಸುಪ್ತಸಾಗರ ಕಾದಿದೆ;
ಮೊಳೆಯದಲೆಗಳ ಮೂಕಮರ್ಮರ ಇಂದು ಇಲ್ಲಿಗು ಹಾಯಿತೆ?

ವಿವಶವಾಯಿತು ಪ್ರಾಣ; ಹಾ! ಪರವಶವು ನಿನ್ನೀ ಚೇತನ;
ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?

ಯಾವ ಮೋಹನಮುರಲಿ ಕರೆಯಿತು ಇದ್ದಕಿದ್ದೊಲೆ ನಿನ್ನನು?
ಯಾವ ಬೃಂದಾವನವು ಚಾಚಿತು ತನ್ನ ಮಿಂಚಿನ ಕೈಯನು?

ಯಾರಾದರು ನೀನಾಗಿರು

ಯಾರಾದರು ನೀನಾಗಿರು, ಪ್ರಭುವೇ?
ನನ್ನೆದೆಯಾಳವನಾಳುವ ವಿಭುವೇ
ನಿನ್ನಯ ಪದನಖದುನ್ಮುಖ ಮಯೂಖ
ಮಾಲೆಗೆ ಶರಣಾದೆನು ಗುರುವೇ!
ನಿನ್ನ ವಿಲಕ್ಷಣ ಕರುಣಾಘಾತಕೆ
ತಲೆಬಾಗಿದೆ ದೊರೆಯೇ!

ಹಳೆಯ ಹೆಸರು ಸೊಗಸದು ಈ ಮನಕೆ;
ಹೆಸರೆಲ್ಲವು ಹುಸಿ ಎಂಬನು ಮಾನಕೆ
ಸಿಕ್ಕಿದಂಥ ದುಃಖಿ,—ರೆಕ್ಕೆಯ-
ಬಲಕೆ ಉಕ್ಕಿ, ಸೊಕ್ಕಿ
ಹಳೆಗೂಡಿನಾಸೆ ಬಿಟ್ಟು,
ಹೊಸತನದ ಪಂಥ ತೊಟ್ಟು,
ದೂರ, ದೂರ, ದೂರ—
ಬಾನನೆಲ್ಲ ಈಜಾಡಿ ನೋಡಿ ತೊನೆದಾಡಿಯಾಡಿ ಹಾಡಿ.
ಕುಣಿದು ಕುಣದು ಕೊನೆಕೊನೆಗೆ ತನಗೆ ಕೊನೆಯಿರದ ದಣಿವು ಮೂಡಿ.
ರೆಕ್ಕೆ ಸೋಲುತಿರೆ, ಉಸಿರು ತೀರುತಿರೆ,
ಎಲ್ಲಿ, ಎಲ್ಲಿ, ಹಕ್ಕಿ?
ನಿನ್ನ ಅದೃಶ್ಯ, ಅನೂಹ್ಯ. ಸನಾತನ ವಕ್ಷವೊಂದೆ ರಕ್ಷೆ!—ದೊರೆಯೇ
ಅದೇ ಕೊನೆಯ ಭಿಕ್ಷೆ!
ಈಜುವವನ ಕೈ ಸೋಲುವವರೆಗೂ
ಕಡಲಿನಾಳ ಬಾಯ್ದೆರೆಯುವ ವರೆಗೂ
ತಾನೆ ತನ್ನ ದೈವ-ತಾನೇ-
ತನ್ನ ಜೀವ ದೇವ.
ಕಡಲ ತೆರೆಗಳೇರಾಟಕೆ ಗೆಲವು
ಬರಲು, ಕಳೆಯೆ ಕೈ ಕಾಲ್ಗಗಳ ಬಲವು,
ಮುಗಿಯೆ ತನ್ನಹಂಕಾರದ ಛಲವು,
ಏನು ಏನು ಮತ್ತೆ?
ಅಯ್ಯೋ ಸತ್ತೆ ಸತ್ತೆ ಸತ್ತೆ;
ನೀರಿನಾಳದಿಂದೆದ್ದು ಬರದೆ ದೊರೆ ನಿನ್ನ ವರದ ಹಸ್ತ?
ಮೇರು ವಂತೆ ಮೇಲೆದ್ದು ಬರಲಿ, ಓ ನಾನು ನಿನ್ನ ವತ್ಸ!

ಯಾರಾದರು ನೀನಾಗಿರು, ದೊರೆಯೆ;
ಹೆಸರಿಲ್ಲದೆ, ಹೆಸರರಿಯದೆ ಕೂಗುವೆ;
ಯಾವ ಬಿಂಬಕೋ ನಾ ತಲೆಬಾಗುವೆ.
ಪೊರೆಯೊ, ಪೊರೆಯೊ, ತಂದೆ!
ಉಳಿದುದನೆಲ್ಲ ಬಿಟ್ಟು ಬಂದೆ.

ಸಮಾಜ ಭೈರವ

ನನ್ನ ಮನವ ನನಗೆ ಕೊಡು
ಓ ಸಮಾಜ ಭೈರವ;
ನನ್ನ ನಗೆಯು ನನ್ನ ಬಗೆಯು
ನನ್ನ ಜಗವ ನನಗೆ ಬಿಡು,
ನನ್ನ ಮನವ ನನಗೆ ಕೊಡು.

ತೊಡಿಸಿ ಬರಲು ಬೇಡ ನಿನ್ನ ಹೊನ್ನ ಸಂಕೋಲೆಯು,
ಬಳಿಕ ಮುಗುಳ ಮಾಲೆಯು;
ಉಡಿಸ ಬರಲು ಬೇಡ ನನ್ನ ಮನಕೆ ನಿನ್ನ ಚೇಲವ,
ನಿನ್ನ ದಯೆಯ ಸಾಲವ;
ಬಿಟ್ಟುಬಿಡೋ, ಎಲೆಲೆ, ನನ್ನ ಮನವ ತನ್ನ ಪಾಡಿಗೆ,
ತನ್ನ ಹಲವು ಹಾಡಿಗೆ.

ನೀನು ಸಮೆದ ಈ ಪಂಜರ ಅತಿ ಸುಂದರ ವಹ! ಮೆಚ್ಚಿಗೆ
ನನ್ನ ದದಕೆ, ತಕ್ಕುದಯ್ಯ ಅದೇ ನಿನ್ನ ಹುಚ್ಚಿಗೆ.
ಬಿಟ್ಟುಬಿಡು ನನ್ನ ಮಾತ್ರ ನನ್ನ ಎದೆಯ ನೆಚ್ಚಿಗೆ.
ನನ್ನನಲ್ಲಿ ಸೆರೆದೊಡಲು ಮಾಡಬೇಡ ಸಂಚನು,
ಹಾಕಬೇಡ ಹೊಂಚನು.

ನನ್ನ ಮನವು ಹಾಯಬೇಕು ದಿಗ್ದಿಗಂತದಾಚೆಗೂ,
ಏರಬೇಕು ಮುಗಿಲಿನಾಚೆ ತಾರೆಯಾಚೆಯಾಚೆಗೂ,
ಇಳಿಯಬೇಕು ಪಾತಾಳದ ಗಹನ ತಿಮಿರದಾಳಕು,
ಇನ್ನು ಇನ್ನು ಅಗಲಕೂ, ಮೇಲಕೂ, ಆಳಕೂ!

ನುಚ್ಚುನೂರು ನಾನು ನಿನ್ನ ಒಂದೆ ಪದಾಘಾತಕೆ,
ನಿನ್ನ ನಿಶ್ವಾಸದೊಂದು ವೀಬಿಘಾತಮಾತ್ರಕೆ;
ತಳುವು ಕೊಂಚ; ನೀರಗುಳ್ಳೆ ಕುಣಿದು ಕುಣದು ಒಡೆಯಲಿ;
ಒಡೆವ ಮೊದಲು ಅದರ ಬಣ್ಣದಾಟ ವನಿತು ತೀರಲಿ.

ತಳುವು ಕೊಂಚ, ಓ ಭೈರವ, ಏತಕಿನಿತು ಅವಸರ?
ಬಂದ ಯಾತ್ರಿ ನಿಲ್ಲಲಾರ—ಅವನೂ ಗಮನಕಾತರ!

ಸುವರ್ಣಸಂಪುಟ/೩೮೩

ಅಣುವಿನಲ್ಲೂ ಆ ಮಹತ್ತು ಚಿತ್ತದಂತು ಮಲಗಿದೆ;
ಅದುಮು ಬೇಡ ಅದನು; ಗಾಳಿ ಬೆಳಕು ಮಳೆಗೆ, ಬಿಸಿಲಿಗೆ

ತೆರವಾಗಲಿ ಅದು ಯಥೇಚ್ಛ: ಪೊಳೆವ ಕಾಲ ಬಂದರೆ
ಪೊಳೆಯು ಲೇಳು ಅದು ಅಬಾಧೆ, ನಿನಗೇನಿದೆ ತೊಂದರೆ?
ಆ ಹೆಸರೂ ಸೇರದೇನು ನಿನ್ನ ಯಶೋಮಾಲೆಗೆ?

ಹುಲ್ಲಿಗಿಲ್ಲ, ಕಳ್ಳಿಗಿಲ್ಲ,
ಹೂವಿಗೇಕೆ ಸೌಸವ?
ಎಂದು ಹಿಸುಕಬೇಡವದನು.
ಅದನು ಅದರ ಲಸನಕೆ,
ತನ್ನ ತನದ ತನನಕೆ
ಬಿಟ್ಟುಬಿಡು, ಬಿಟ್ಟುಬಿಡು,
ಓ, ಸಮಾಜ ಭೈರವ!

ಓ ನನ್ನ ಜನವೇ!

೧

ಓ ಬನ್ನಿ ಜನವೆ, ಕನ್ನಡ ಹೊಲದ ತೆನೆತೆನೆಯೆ,
ಕೊಡುತಿಹ ಕನ್ನಡದ ಹಾಲ ಕೆನೆಯೇ,
ಬಿರುಗಾಳಿ ಗೊಗ್ಗೂಡಿ ಬಹ ಮೇಘ ಕಣ ಕಣವೆ,
ಓ ನನ್ನ ಜನವೇ.
ಬನ್ನಿರೋ ಬನ್ನಿ ಕನ್ನಡನಾಡ ಗಡಿಮೂಲೆ
ಮೂಲೆಯಿಂದ,
ಹಳ್ಳಿ ಪಟ್ಟಣಗಳಿಂದ.
ಸುಗ್ಗಿಗಾಳಿಗೆ ಹಿಗ್ಗಿ ಬೆಳ್ಗೊಡೆಗಳನು ನೆಗ್ಗಿ
ನುಗ್ಗಿ ಬಹ ಬೂರಲದ
ಮಾಲೆಯಂದ;
ಅಗೆದ ಬಾವಿಗೆ ದಿಕ್ಕುದಿಕ್ಕಿನಿಂದಲೂ ನೆಗೆದು
ಚಿಮ್ಮಿ ಬಹ ಚಿಲುಮೆಗಳ ಚಳುಕಿನಿಂದ.

೨

ತೆಂಗು ಕೈಯೆತ್ತಿ ಕರೆಕರೆವ ಪಡುಗಡಲ ಕರೆ
ಮುರಿವ ತೆರೆತೆರೆ ರುಬ್ಬು ಮೊರೆಗಳಿಂದ,

ಮುಂಗಾರು ಕೊಪ್ಪರಿಗೆ ಧುಮುಕಿ ಮಳೆಹನಿ ಒನಕೆ
ಬಡಿದು ಪಳಗದ ಮೊಂಡ ಮಣ್ಣಿನಿಂದ,
ಪರಶುರಾಮನ ಕೃಪಣ ಭೂಮಿಯಿಂದ;
ದುಡಿತ ದೈತ್ಯನ ಬೂಟು ಕಾಲಿನಡಿ ಹುಡಿಯಿಂದ,
ಬಾಡಿದಾಸೆಯ ಬಳ್ಳಿ ಮಾಡೆದಿಂದ;
ಕೈ ಕೆಸರು, ಬಾಯಿಯೂ ಕೆಸರು, ಹೊಗೆ ಹಬೆ ಉಸುರು-
ಮಡವುಗಟ್ಟಿದ ಬೆವರು ಜವುಗಿನಿಂದ,
ಮೇಲುಬಾಳಿನ ಆಸೆ ಹೊತ್ತು ತನ್ನಿರಿ, ಅಣ್ಣ,
ಆಷಾಢದಲಿ ಕೊಳ್ಳಿ ದೆವ್ವದಂದ,
ಪಡುಕಿನಾರೆಯ ಮಚ್ಚೆಲಗಗಳಿಂದ.

೩

ಮರಮರದ ಮರ್ಮರದ ಗುಡ್ಡದೇರಿನ ಮನೆಯ,
ಅಡಿಕೆ ಸೋಗೆಯು ಸುಗಿವ, ಮಾವು ಮಾರ್ಮಲೆವ,
ಹಲಸು ನೇರಿಳೆ ನಿಂಬೆ ಕಿತ್ತಳೆಯ ಪೇರಳೆಯ
ಸುತ್ತಭತ್ತದ ಕಾಫಿ ಮೆಣಸು ಯಾಲಕ್ಕಿಗಳ
ಉಕ್ಕು ಬೆಳೆಗಳ ಹಸುರು ತೆಕ್ಕೆಯಿಂದ;
ಕಬ್ಬುನೆಲದೆದೆ ಹಾಲಿನುಕ್ಕಂದದಿಂದ
ಅರೆ ಗುಟುಕು ಪಡೆವ ಬಡಕರುಗಳಿಂದ;
ಜಡಿಯ ಸೋನೆಯ ಚಳಿಯ ಕುಲುಕಿನಿಂದ,
ಮಲೆ ಜ್ವರದ ಪೈಶಾಚ ಗಾಣದಿಂದ
ನೆತ್ತರಡಗಿದ ಬೆಳರು ಬಾಳಿನಿಂದ;
ಹುಲಿ ಆನೆ ಚಿರತೆ ಕಾಡೆಮ್ಮೆಗಳ ಬೀಡಿಂದ,
ಮಲೆನಾಡಿನಿಂದ.

೪

ಕಬ್ಬಿಣದ ಕರಿಮಣ್ಣ ಎದೆಯ ಕದವೊಡೆದೊಗೆದು
ಪಾತಾಳದಲಿ ಪುಟಿವ ನೀರ ಮೊಗೆದು,
ಬಾಳು ಸಾವಿನ ಮೇಲೆ ಕೋಟಿ ಕೆರಳಿದ ಹಾಗೆ
ಹಸುರು ತೆಪ್ಪದಿ ಜೀವ ಜೀಕುತಿರುವ,
ದುಡಿತ ಉರಿದಾರಿಯಲಿ ಏದುತಿರುವ,
ಬೆವರ ಹೊಳೆ ತಣಿವು ಕರೆ ಮುಟ್ಟದಿರುವ,
ಮಹಲ ಅಂಗಡಿಯ ಗೋದಾಮು ಹೆಗ್ಗಣವುಂಡು
ಬಿಸುಟ ಜಳ್ಳಿನ ಚೀಲ ಚೀಲದಂದ;

ಸೇಂಗಾ ಉಳ್ಳಾಗಡ್ಡಿ ಜೋಳಗಳ ಬಣಬೆಗಳ
ಹತ್ತಿ ಮೆದೆಮೆದೆ ಹೊದೆದ ಬೀಡಿನಿಂದ;
ಕಬ್ಬಿಣದ ಮೈಯ ಬಂಗಾರದದು ರೆದೆಯಿಂದ,
ಬಯಲು ನಾಡಿಂದ.
ಬನ್ನಿರೋ ಬನ್ನಿ ನನ್ನೆದೆಗೆ ಬನ್ನಿ!

೫

ಬೆಟ್ಟದೆರೆ ತೊರೆ ನಾನು; ತರಿತರಿವ ಕಗ್ಗಲು
ಬಂಡೆ ಬಂಡೆಗೆ ಧುಮುಕಿ ಬಿದ್ದು ಸಿಗಿದು;
ಕಗ್ಗವಿಯ ಕತ್ತಲಲ್ಲಿ ಕೆಟ್ಟು ಮಮ್ಮಲ ಮರುಗಿ
ಕೊಳ್ಳೆಗಳ ಕಚಗುಳಿಗೆ ನಕ್ಕು ನೆಗೆದು;
ಕೆಸರಲ್ಲಿ ಕುಸಿದು ಕುಂಟಿದೆ; ಕೊಳೆವ ತರಗಲಲಿ
ಉಸಿರು ಕಟ್ಟಿದೆ ಹೊಟ್ಟೆ ಹೊಸೆದು ಬಸಿದು.
ಓ ಅಲ್ಲಿ ಕಾಣತಿದೆ ಜನದ ಜೀವ ಸಮುದ್ರ;
ಅಳಿವೆಬಳಿ ಮರಳಲ್ಲಿ ಇಂಗುತಿಹೆನು;
ಬನ್ನಿರೋ ಬನ್ನಿ, ತೆರೆತೆರೆಯಾಗಿ ಭೋರ್ಗರೆದು
ನುಗ್ಗಿ ಕೊಚ್ಚಿರಿ ಹೊಯಿಗೆ ಕೊತ್ತಳಗಳ;
ತಬ್ಬಿಕೊಳ್ಳಿರಿ ನಿಮ್ಮ ಕೂಸ; ಹಾಡುವೆನಾಗ:
ಅದ್ರಿಭಾವಕೆ ಈ ಸಮುದ್ರ–ತಾಳ,
ಮಲೆಯ ಬಯಲಿನ ಸಾನುಕೂಲ ಮೇಳ.

೬

ತನ್ನಿರೋ ತನ್ನಿ ನನ್ನೆದೆಗೆ ತನ್ನಿ;
ತನ್ನಿ ನಿಮ್ಮ ಅಬೋಧಭಾವ ಅಂಬೋಧಗಳ
ವಿದ್ಯುದಾಸೆಯ ಮುಗ್ಧ ನಾಲಗೆಗಳ,
ಒಳ ತಳದಿ ಮಲಗಿ ಕಾಯುವ, ನೋಯುವಾಸೆಗಳ
ಮಂದಾರ ಬೀಜಗಳ ಕೊಳಗ, ಕೊಳಗ.
ಶತಮಾನಗಳು ಕೆತ್ತಿ ಕಡೆದು ಗುಡಿ ಕಟ್ಟಿರುವ
ನುಡಿಯ ಗುಮ್ಮಟ, ಶಿಲಾಬಾಲಿಕೆಯರ,
ಋಷಿ ಮುನಿಗಳೆದೆಯ ಸುಧೆ ನಿಂತು ಗುಳುಗುಳಿಸುತಿಹ
ಕನಸುಗಳ ಒಳ ತೊರೆಯ ಮರ್ಮರಗಳ;
ಕಲ್ಲು ಮಣ್ಣಲಿ ಹೂತ ಹಾಳು ಹಂಪೆಯ ಮರೆತ
ನವರತ್ನಭಂಡಾರ, ಹೊನ್ನ ಗಣಿಯ;
ಹೆಜ್ಜೆಹೆಜ್ಜೆಗೆ ಕುಣಿವ. ಮಣಿವ ಬದಲುವ ಭಂಗಿ-
ದನಿಯ ಏರಿಳಿತಗಳ, ನಗೆಯ ಬಗೆಯ.

೭

ಓ ಬನ್ನಿ ಜನವೆ, ಕನ್ನಡನಾಡ ಗಡಿಮೂಲೆ
ಮೂಲೆಯಿಂದ,
ಹಳ್ಳಿ ಪಟ್ಟಣಗಳಿಂದ;
ಮೈಸೂರೋ ಮಂಗಳೂರೋ ಧಾರವಾಡವೋ
ರಾಯಚೂರೋ-ಎಂಟು ದಿಕ್ಕಿನಿಂದ.
ಮುಳುಗಿದೀ ಕನ್ನಡವನೆತ್ತುವೊಮ್ಮನ ಮಿಣಿಯ
ಬಿಗಿವ, ಎಳೆಯುವ, ಗೆಲುವ ಭಾವದಿಂದ,
ಬನ್ನಿರೋ ಬನ್ನಿ, ನನ್ನೆದೆಗೆ ಬನ್ನಿ !

ಹೊಸ ಗಾಳಿ

ಎತ್ತುತಿದೆ ಮನವು ಮತ್ತೂ ಮತ್ತು ಹೊಸ ಗಾಳಿ:
ಹಾಯಿ ಪಟ ಪಟಿಸುತಿದೆ; ಕೊವೆಮರ ಬಿಲ್ಲಾಗಿ
ಬಾಗುತಿದೆ; ನೀಲ ಸಾಗರದ ತುಂಗ ತರಂಗ.
'ಅತ್ಯತಿಷ್ಠದ್ದಶಾಂಗುಲ'; ಜಲದ ಉದ್ವಿಗ್ನ
ಉಸಿರು ಬುಸುಗುಟ್ಟುತಿದೆ; ಮೊಗಬಿಗಿದ ಕಾರ್ಮುಗಿಲು
ಹುಬ್ಬು ಗಂಟಿಕ್ಕುತಿದೆ; ಕಡಲ ಕಾಕಸಮೂಹ
ಸೊಕ್ಕಿ ಕಾಕಾ ಎಂದು ಪಟದ ಕಣ್ಣಿಯ ಕಣ್ಣ
ಕುಕ್ಕುತಿವೆ-ಹೂವು ಬಿತ್ತೋ ಬಿತ್ತು, ಆಗಸದ
ಮುತ್ತು, ಸವಿಮುತ್ತು-ಉದ್ದಂಡ ಬಂಡೆಯ ಚಂಡೆ
ಬಾರಿಸುತ್ತಿದೆ ಸುತ್ತುಮುತ್ತು, ಅಬ್ಬರತಾಳ
ಹಾಕಿ ಹೋಯೆಂದು ಭೋಯೆಂದು ಹೊಯ್ದಾಡುತಿವೆ
ಹೆದ್ದೆರೆಯ ಹೆಗಲಿನುದ್ವಿಗ್ನ ಮಕ್ಕಳು, ಅಹಾ,
ನೀರ ಕನ್ಯೆಯರು, ಜಲದೇವ ಕನ್ಯೆಯರು; ಅಲ
ಕಾಳಿ ಕಾಳಿಮೆ ಬೆರೆತ ನೊರೆಯ ಕುಕ್ಕುದಿಯಲ್ಲಿ
ಉಕ್ಕುತಿದೆ ತಳದ ತಳವೂರಿದುರಿನಗೆ; ಮೇಲೆ
ಮುಗಿಲ ಗುಮ್ಮನ ಮುಸುಕನಗಗೊ ನಸುವೇ ಸರಿಸಿ
ನೋಡುವರು ನಕ್ಷತ್ರಕನ್ಯೆಯರು; ಕಡಲಾಚೆ
ಕೂಗಿ ಕರೆವರು ನೀಲ ಮಂಚಕ್ಕೆ: ಬಾ ಅಣ್ಣ,
ಬಾ ತಮ್ಮ! ಹರಿಯಿತೇ ಪಟ? ಅಹಹ, ಕೂವೆಮರ
ಮುರಿಯಿತೇ? ಕೈತಟ್ಟಿ ನಕ್ಕವೇ ದಿಕ್ತಟ?
ಆಂಜಲೇತಕೆ-ಸಾವು ಬದುಕಿಗಿಂತಲೂ ಬೀಳೆ?

ಮೊನ್ನೆ ಹೇಗಿತ್ತು ಈ ಪಟ? ಮುದುರಿ ಜೋತಾಡಿ
ಗಾಳಿಯೂದದ ಬೆಲೂನಿನ ಸುಕ್ಕು ಸೋಬಾನೆ.
ಮುಸುಗುಟ್ಟುತಿತ್ತು; ಹೆಣ ಬಟ್ಟೆ ಮುಪ್ಪುರಿಸುತ್ತ
ನಾರಿತ್ತು; ಬೈಲ ಬೆಚ್ಚಿನ ತಲೆಯ ರೂಮಾಲು
ಕಾಗೆ ಹಿಕ್ಕೆಯ ಕುಕ್ಕೆಯಾಗಿ ಬಿಕ್ಕುತಲಿತ್ತು.
ಇಂದೆ ಹೋ ಹೊಸಗಾಳಿ ಒತ್ತುತಿದೆ ತಿದಿ ತುದಿಯ;
ಉರಿದು ಹಣ್ಣಾಗಿಹುದು ಕೆಂಡ; ಉಬ್ಬಿದೆ ಹಾಯಿ.
ಅಬ್ಬಬ್ಬ ಎಂದು ತಬ್ಬಿಬ್ಬಾಗಿ ಆಕಾಶ
ನೆಲವು ಕಡಲೂ ದಿಗ್ದಿಗಂತ ಕಂಭಿಸಿ ನಿಂತು
ಕ್ರೋಶ ಕ್ರೋಶಗಳಾಚೆ ಮೂಕ ಕೋಕಿಲ ಕಂಠ
ತುಂಬ ಹರಿಯುತ್ತಲಿದೆ. ಬಾ, ಬಾರೊ ಈ ಎಡೆಗೆ;
ಕೆಸರು ಗುಮ್ಮಿಯ ಕೊಳಚೆ ಬಾಳು ಬೇಡೋ ಬೇಡ.
ಮಲಗಿದರು ಸರಿಯೆ ಶರನಿಧಿಯ ತಳತಲ್ಪದಲಿ
ನಡೆದು ಬಿಡು ಸತತ ಸಂಚಾರ ಸಂಕಲ್ಪದಲಿ.

ಭೂತ

೧

ಕಾಡುತ್ತಿವೆ ಭೂತ ಕಾಲದ ಭ್ರೂಣಗೂಢಗಳು:
ಹುಗಿದ ಹಳಬಾವಿಯೊಳ ಕತ್ತಲ ಹಳಸುಗಾಳಿ
ಅಂಬೆಗಾಲಿಟ್ಟು ತಲೆಕೆಳಗು ತೆವಳುತ್ತೇರಿ
ಅಳ್ಳಳ್ಳಾಯಿ ಜಪಿಸುವ ಬಿಸಿಲ ಕೋಲಿಗೆಗರಿ ತೆಕ್ಕಾಮುಕ್ಕಿ
ಹಾಯುತ್ತಿದೆ ತುಳಸಿ ವೃಂದಾವನದ ಹೊದರಿಗೂ.

ತೊಟ್ಟು ಕಳಚಿದ ಹೊಕ್ಕಳಿನ ಬಳ್ಳಿ ದಡದಲ್ಲಿ
ಕತ್ತರಿಸಿದಿಲಿಬಾಲ ಮಿಡುಕುತ್ತದೆ.
ಕತ್ತಲಲ್ಲೇ ಕಣ್ಣನೆಟ್ಟು ತಡಕುವ ನನಗೆ
ಹೊಳೆವುದು ಹಠಾತ್ತನೊಂದೊಂದು ಚಿನ್ನದ ಗೆರೆ,
ಅಮವಾಸ್ಯೆ ಕಂದಕಗಳಲ್ಲಿ ಹೇಗೋ ಬಿದ್ದು ಒದ್ದಾಡುತಿರುವ ಗರಿಸುಟ್ಟುತಾರೆ.

೨

ವರ್ತಮಾನ ಪತ್ರಿಕೆಯ ತುಂಬ ಭೂತದ ಸುದ್ದಿ:
ನೀರ ಮೇಲಕ್ಕೊಂದು ಮಡಿ, ಕೆಳಕ್ಕೇಳು ಮಂಜಿನ ಶಿಖರಿ;
ಇದ್ದಕ್ಕಿದ್ದಂತಕಸ್ಮಾತ್ತಗ್ನಿನುಡಿಯುಗಿವ

ಮಂಜು ಮುಸುಕಿದ ಮುಗ್ಧ ಜ್ವಾಲಾಮುಖಿ.
ಪತ್ರಿಕೆಯ ಮುಚ್ಚಿದರು—
ಸದ್ದಿರದ ಖಾಲಿ ಕಂಕಾಲ ಕೋಣೆಗಳಲ್ಲಿ
ತಾಳವಿಲ್ಲದ ಮೂಕಸನ್ನೆ ಮುಲುಕುವ ತಿರುಗುಮುರುಗು ಪಾದದ ಪರಿಷೆ

ಅಂತರಾಳಗಳಲ್ಲಿ ನಿಂತ ನೀರುಗಳಲ್ಲಿ
ಕಂತಿ ಕೈ ಬಡಿವ ಬೀಜಾಣಿ ಜಾಲ;
ಕಾಳ ರಂಗಸ್ಥಳದ ಥರದೆ ಮುರಿಮುರೆಯಲ್ಲಿ
ಮಾತುಹೆಕ್ಕುವ ಮಿಣುಕು ಮೊನೆಯ ಬಾಲ,—ಇವು
ಬಯಸವೆ ಹೊರಂಗಳದ ರಂಗುರಂಗಿನ ಬಳ್ಳಿ ಹೂವು ಹೊದೆರ?

೩

ನೀರು ನೆಲೆಯಿಲ್ಲದವರು ಪಿತೃ ಪಿತಾಮಹರು,
ಗಾಳಿ ಹೆದ್ದರೆ ಲಾಳಿ ಗಂಟೆ ನೆಲ ಸಿಕ್ಕಿಯೂ ದಕ್ಕದವರು.
ಉಚ್ಚಾಟನೆಯ, ತರ್ಪಣದ ತಂತ್ರ ಬಲ್ಲೆ. ಆದರೂ ಮಂತ್ರ ಮರೆತೆ;
ಬರಿದೇ ಹೇಗೆ ಆಡಿಸುತ್ತಿದ್ದೇನೆ ಮಂತ್ರದಂಡ.
ಪುರೋಹಿತರ ನೆಚ್ಚಿ ಪಶ್ಚಿಮ ಬುದ್ಧಿಯಾದೆವೋ;
ಇನ್ನಾದರೂ ಪೂರ್ವ ಮೀಮಾಂಸೆ ಕರ್ಮ ಕಾಂಡಗಳನ್ನು ಬಗೆಯಬೇಕು.

ಅಗೆವಾಗ್ಗೆ ಮೊದಲು ಕೋಶಾವಸ್ಥೆ ಮಣ್ಣೆ;
ಕೆಳಕ್ಕೆ, ತಳಕ್ಕೆ ಗುದ್ದಲಿಯೊತ್ತಿ ಕುಕ್ಕಿದರೆ
ಕಂಡೀತು ಗೆರೆಮಿರಿವ ಚಿನ್ನದದಿರು.
ಹೊರತೆಗೆದು ಸುಟ್ಟು ಸೋಸುವಪರಂಜಿ ವಿದ್ಯೆಗಳ
ಇನ್ನಾದರೂ ಕೊಂಚ ಕಲಿಯಬೇಕು:
ಹೊನ್ನ ಕಾಯಿಸಿ ಹಿಡಿದು ಬಡಿದಿಷ್ಟದೇವತಾ
ವಿಗ್ರಹಕ್ಕೊಗ್ಗಿಸುವ ಅಸಲು ಕಸುಬು.

೪

ಬಾವಿಯೊಳಗಡೆ ಕೊಳೆವ ನೀರು; ಮೇಲಕ್ಕಾವಿ;
ಆಕಾಶದುದ್ದಕೂ ಅದರ ಕಾರಣ ಬೀದಿ;
ಕಾಮುರ್ಗಿಲ ಖಾಲಿ ಕೋಣೆಯ ಅಗೋಚರ ಬಿಂದು
ನವಮಾಸವೂ ಕಾವ ಭ್ರೂಣರೂಪಿ—
ಅಂತರಪಿಶಾಚಿ ಗುಡುಗಾಟ, ಸಿಡಿಲಿನ ಕಾಟ-
ಭೂತರೂಪಕ್ಕೆ ಮಳೆ ವರ್ತಮಾನ.
ಅಗೆದುತ್ತಗದ್ದೆಗಳ ಕರ್ಮ ಭೂಮಿಯ ವರಣ;

ಛಿತ್ರಗೋಧುವೆ ಹಣ್ಣಬಿಟ್ಟ ವೃಂದಾವನ,
ಗುಡಿಗೋಪುರಗಳ ಬಂಗಾರ ಶಿಖರ

ಭೂಮಿ ಗೀತ

೧

ಹುಟ್ಟು !
ಮೇಲೆ ಘಟ್ಟ ಸೋಪಾನಕೆಳಪಟ್ಟಿಯಲಿ;
ಉರುಳು,—ಮೂರೇ ಉರುಳು,—ಕಡಲ ಕುದಿತದಿ ಎಣ್ಣೆಕೊಪ್ಪರಿಗೆ.
ತೆಂಗುಗರಿಗಳ ಬೀಸಿ ಕೈಚಾಚಿ ಕರೆದಳು;
ಅಡಿಕೆಗೊನೆಗಿಲಕಿ ಹಿಡಿದಾಡಿದಳು.
ಕಬ್ಬಿನಾಲೆಯ ತಿರುಪಿನಲ್ಲಿ ಕುಳಿ ತೆರೆದಳು ಅಜಸ್ರಧಾರೆಯ ಕರುಳು ತುಡಿಯುನ್ನು;
ಭತ್ತ ಗೋಧುವೆ ರಾಗಿ ಜೋಳ ಮೊರ ಮೊರ ಮೌರಿಯಲ್ಲಿ ಮಾಂಸದ ಹಾಡ ನುಡಿಸಿದಳು;
ಗಂಟೆ ಗೋರಟೆ ಜಾಜಿ ಮಂದಾರ ಮಲ್ಲಿಗೆಯ ಗಂಧಗಿರಿ—ಶಿಖರದಲಿ ಮಲಗಿಸಿದಳು;
ಹಕ್ಕಿ ಗೊರಳಿಂದುಗುವ, ತುಂಬಿ ಮರ್ಮರ ಮೊರೆವ, ಜೌಮೂನುನಾದದಲಿ ಜಾಳಿಸಿದಳು;
ಆಕಾಶದಲ್ಲಿ ಮೋಡದ ವಿಶ್ವರೂಪಕ್ಕೆ ಕೆಳಗೆ ಜೀವ ಜ್ಯೋತಿ ಕೂಡಿಸಿದಳು. ವಿಳಪರೆಯ
ಹಾಡಿಯಲಿ ಮರಮರದ ಕೆಳಗೆ ಧೂಪದ ದಟ್ಟಕಾಯಿ
ಚಿಗಿತೆಳಮೊಳಕೆ, ನರಳು, ಕೇಕೆ;
ಮಳೆಮಂತ್ರದಂಡ ಮುಟ್ಟಿದ ತಿಟ್ಟುನಿಟ್ಟಿನಲಿ ನೆಲವಲ್ಲ ಮೊಳೆ—
ಮೊಳಕೆ, ಕೊನರು, ಸಸಿ, ಗಿಡ, ಹುಲ್ಲು
ತೋಟ ಗೋರಟಗೆ ಮೈಯೆಲ್ಲ ಕಾಮನ ಬಿಲ್ಲ ಬಲ್ಬುಮಾದಕ—
ದೀಪ ಚೆಲ್ಲು. ಗುಲ್ಲು.
ನಂದಬಟ್ಟಲನೆತ್ತಿ ತುಟಿಗಿಟ್ಟು ನರ್ತಿಸಿತು ಅಂದುಗೆಯನಾಡಿಸುತ ಬಂದ ಭೃಂಗ;
ಹಿತ್ತಲ ಜಗಲಿ ಮೇಲೆ ಕುಳಿತು ಧಮ್ಮಿಕ್ಕಿದೆನು ಕೆಳಗೆ ಮತ್ತೂ ಕೆಳಗೆ, ತಳಕೆ ಕುಂಗ.
ಹೆಸುರು ತೆರೆ ಅಪ್ಪಳಿಸುತಿರೆ ಮೇಲೆ ನೊರೆಕಾರಿ, ಬೀಸುತಿರೆ ಬಿರುಗಾಳಿ, ಗುಡುಗು ಮೊಳಗೆ;
ತಳದಾಣಿ ಮುತ್ತುಗಳ ಮತ್ರದೀಪ್ತಿಗೆ ಕಣ್ಣಕುಕ್ಕಿ ಕುರುಡಾಡಿದೆನು ಸಂಜೆವರೆಗೆ-
ಬುಂಡೆಗಂಟಿದ್ದ ತುಟಿ ಕಿತ್ತರೂ ಕಲ್ಪನೆ ಹೆಂಡ ಹೊಂಡದ ಸೆಲೆಯ ಹುಡುಕುತಿತ್ತು.
ಬೇಲಿ ಮೇಗಡೆ, ಗದ್ದೆಯಂಚಲ್ಲಿ, ತೋಪುಗಳ ಅಂಗುಲಂಗುಲದಲ್ಲಿ ತೋಟದೊಳಗೆ

ಎಲ್ಲೆಲ್ಲು ಹೆರಿಗೆ ಮನೆ: ಬೇನೆ, ಸಂಕಟ, ನಗೆ; ಕೊರಡು ಚಿಗುರಿದ ಚೆಲುವು, ಚೀರು, ಕೇಕೆ.
ನರ್ಸುಗಳು ಡಾಕ್ಟರರು ಹೆರಿಗೆ ಮನೆಯೊಳಹೊರಗೆ
ಅವರ ಬೆನ್ನಿಗೆ ಸದಾ ನಾಲ್ಕು ಮಂದಿ;
ತೊಟ್ಟಿಲಂಗಡಿಯಲ್ಲಿ ಬೊಂಬು ತುಂಬಾ ಅಗ್ಗ;
ಜಾತಕರ್ಮಾದಿ ನಿರತ ಈ ಪುರೋಹಿತಭಟ್ಟ ಅಪರ ಪ್ರಯೋಗದಲಿ ಪಾರಂಗತ.

ಮರಿ ಮರಿಯ ಹೊರೆ ಹೊರೆಗಳಾಡಿದುವು ಮಣ್ಣಿನಲಿ,
ಹೊಟ್ಟೆಹೊಸೆದುವು ಜಾರುತೊಗಟೆಯಲ್ಲಿ;
ರೆಕ್ಕೆ ಬಡಿದುವು ಶೂನ್ಯ ಬೀದಿಯಲಿ, ಚಪ್ಪಾಳೆಯಿಕ್ಕಿ ಕುಣಿದುವು ಮೋರಿ ಮೋರಿಯಲ್ಲಿ-
ಮಧ್ಯಾಹ್ನದುರಿಬಿಸಿಲು ಹೆತ್ತ ಹೆಣ ಒಣಬೆಗೂ ಪಾಚಿಗಟ್ಟಿದ ಜಿಗಣೆ ಜೀವ ಹಲವು.
ಆಹ, ಪ್ರಾತಃಕಾಲದಲ್ಲಿ ಬೆಳಕಿನ ದಾಹಃ
ಯಮುನಾಂಭದಲ್ಲಿ ಕಾಳಿಂದಿ ಹೆಡೆ ಮಣಿಯಾಟ.
ಕದಕದಕೆ ಕಿಟಕಿ ಕಿಟಕಿಗೆ ಕಣ್ಣೆ, ಮನೆಕಣ್ಣೆ, ಊರೆಲ್ಲ ಕಣ್ಣೆ, ಕಾಡೆಲ್ಲ ಕಣ್ಣೆ:
ತಿರುಗಿತ್ತು ಮಗು ಮಾದರಿಯ ಕ್ಯಾಮರಾ ಕಣ್ಣೆ;
ರೀಲು ರೀಲನು ಜಡಿದು ಗಿಡದ ಕತ್ತೆಲೆ ಕೊಠಡಿ ಮೇಲೆ ಮಸ್ಲಿನ್‌ಫರದೆ ಹಾಸುತಿತ್ತು.
ಒಳ ಹೊರೆಗುಗಳ ಅಳಿವೆಯಲ್ಲಿ ಮೊರೆವ ತರಂಗ ಮಾಲೆಯಲಿ
ಮುತ್ತು, ಬಂಗಾರ, ಹೀರಕ, ಪುಷ್ಯರಾಗ, ಗೋಮೇಧಿಕ, ಕೆಂಪು, ಹಳದಿ.
ಎಲ್ಲಿ ಬಿದ್ದರೆ ಅಲ್ಲಿ ಅಲ್ಲಿ ನಾಗರ ಬಂಧ; ತುಟಿಗಗಸ್ಯಾಧರನ ತುರುಸು–ಕೋಟಿ;
ಕಣ್ಣಬಿಟ್ಟರೆ ಬಣ್ಣ ಬಣ್ಣ ಗೊಗ್ಗರು ಗಲಭೆ; ಕಿವಿತುಂಬ; ಕಿವಿತುಂಬ ಹಸುರು, ಬಿಳಿ, ಹಳದಿ, ಕೆಂಪು.
ಹಣೆಗೆ ತುಪ್ಪವ ಪಚ್ಚೆ ಬಿಟ್ಟ ಬೆಕ್ಕಿನ ತರಹೆ ಬುಗುರಿ ತಿರುಗಿದೆ ಬಾಲ ನಿಮಿರಿಸುತ್ತ:
ತಾಯಿಗು ಮಿಗಿಲಾಗಿ ಎದೆಗವಚಿಕೊಂಡಳೋ;
ತಿರುಗಿ ತಿರುಗಿ ತನ್ನ ಬಸಿರಲ್ಲಿಟ್ಟು ನವೆದಳೋ;
ಹಕ್ಕಿ ಕೊರಳೆನು ಹಿಚುಕಿ ಲಾಲಿ ಹಾಡಿದಳು;
ಸಸಿ ಕೊರಳೆ ಕೊಯ್ದು ತಿಂಡಿಯನು ತಿನಿಸಿದಳು.
ಪ್ರೇಮ ಧೃತರಾಷ್ಟ್ರನಪ್ಪಿಗೆ ಭಗ್ನ ಬಲಭೀಮ: ಎಲ್ಲು ಕೃಷ್ಣನ ಕಾಪು ಕಾಣಲಿಲ್ಲ.
ಇವಳೆದೆಗೆ ಬೇರಿಳಿದ ಕಾಲು ನನ್ನದು; ಬರಿದೆ ನಕ್ಷತ್ರಲೋಕಕ್ಕು ರೈಲು ಬಿಟ್ಟೆ.
ಹೆಂಕುಳಿಯ ಹಾಗೆ ನರಸತ್ತು ಹುಡುಕಿದೆ ಮನದ ಬಚ್ಚಲಲಿ ಕೊನೆಯಿರದ ಕೊನೆಯ ಬಟ್ಟೆ.

ಈಡಿಪಸ್ಸಿನ ಗೂಢ ಪಾಪಲೇಪಿತ ನಾನು;
ಟ್ರ್ಯಾಕ್ಟರನ್ನೇರಿದೆನು; ಉತ್ತೆ, ಸಿಗಿದೆ.

ಬಿತ್ತಿದೆನು, ಬೆಳೆದೆ ಆಟಂಬಾಂಬು ಕಾಳುಗಳ;
ಮಾರಕ ಕ್ರಿಮಿ ಪೈರ ಗೋರಿ ನಲಿದೆ.
ಕರೆಯುವುವು ಮತ್ತು ಮತ್ತೂ ಬಾನ ಹಕ್ಕಿಗಳು;
ಗಾಳಿದರ ಬಾರಿಗರುವತ್ತು ಕರೆಯೋಲೆ;
ಕಿವಿಸುತ್ತ ಬಂದು ಕರ್ಣ ಪಿಶಾಚಿ ಪಿಸುಗುಟ್ಟಿ ಕಾಡಿದುವು ಮೇಲೆ, ಮೇಲೆ.
ಮಂತ್ರವಾದಿಯ ಕುತಂತ್ರದಿಂದ ರಗಳೆ ಜೋರಾಗಿ ರೇಗಿದೆನು ನಾ ಬರಿದೆ ನನ್ನ ಮೇಲೆ;
ಢಿಕ್ಕಿ ಹೊಡೆದೆನು ಪಂಜರದ ಕಂಭ, ಮಾಡಕ್ಕೆ;
ಚೀರಿ ಬಡಿದೆನು ರೆಕ್ಕೆ, ಕುಕ್ಕಿ ಪುಕ್ಕದ, ಕಿತ್ತು ರಾಶಿ ಹಾಕಿದೆ ತಿಂಡಿ ತಟ್ಟೆಯೊಳಗೆ.

೨

ಮರಿ ಕುದುರೆ ಕೆನೆದು ಕುಣಿದಿತ್ತು; ಸುತ್ತಲು ಹುಲ್ಲು, ಹುರುಳಿ;
ಬಂಗಾರದ ಕಡಿವಾಣ, ರನ್ನ ಲಗಾಮು;
ತಲೆ ಮೇಲೆ ಮೂರು ಬಣ್ಣದ ಮಕುಟಗಿರಿ ಬೆಡಗು;
ಹಿಂದೆ ಕರಕರಕಟರು ಷಾಃಪಸಂದಿನ ತೊಡವು.
ನಡ ಮುರಿವ ತನಕ ನಡದದ್ದೆ ಸುಗ್ಗಿಯ ಕುಣತ.
ಆ ಬಳಿಕ!
'ಮೈಯ್ಯ ಭಾರ, ಮನವೆ ಭಾರ'
ತ್ಯಾತ್ರಿಕಿಟೋ ತಿಮ್ಮಣ್ಣಾ,
ಅತ್ತೆ ಮನೆಗೆ ಸೊಸೆ ಹೋಗುವುದ್ಹ್ಯಾಂಗೋ ತಿಮ್ಮಣ್ಣಾ?
ತಿರುಪತಿ ತಿಮ್ಮಪ್ಪನ ಪಾದವೇ ಗತಿ ಅಣ್ಣಾ.
'ಕಾಸು ಕೊಟ್ಟವರಿಗೆ ಕೈಲಾಸ ತೋರ್ಪಳು ಈಚಲ ಮರದವ್ವ, ನಮ್ಮವ್ವ'.
ವೇದ, ಶಾಸ್ತ್ರ, ಪುರಾಣ, ಭಜನೆ, ಹರಿಕಥೆ–ಪೂಜೆ.
ಆಗಲೂ ಬಿಡಳವಳು ತಾಯಿ; ಮೆಣಸಿನಕಾಯಿ ಹೊಗೆ ಹಾಕಿ ತುರಿಯುವಳು ಎದೆಯ ಗರಟೆ,
ಬಿದಿರು ಮೇಣೆಯ ಮೇಲೆ ಕುಳಿತು ಸಾಗುವ ವೇಳೆ–ಹೊರಬರಳು; ಅವಳಿಗಿನ್ನೊಂದು ಹೆರಿಗೆ.

೩

ನೆಲತಾಯ ಮಾಯಕದ ಅರಗಿನರಮನೆಯಲ್ಲಿ
ಹಸ್ತಿನಾಪುರದ ಸ್ಮೃತಿ ಹೊತ್ತಲಿಲ್ಲ.
ಮಯನಿರ್ಮಿತವೊ, ಸುಯೋಧನರಚಿತವೋ ಅಂತು ಕಡ್ಡಿಗೀರುವ ತನಕ ಶಂಕೆ ಇಲ್ಲ.
ನಾನಲ್ಲಿ ನಲಿದೆ; ನುಣ್ಣನೆ ನೆಲದಿ ಜಾರಿದೆನು;—
ಹೊರ ಜಗಲಿಯಿಂದ ಒಳ ಮನೆಯ ಕತ್ತಲೆವರೆಗೆ.

“ಯಾರು ನಿಂದವರಲ್ಲಿ ? ತಾಯಿ ?” ಎಂದೆ
“ ತಾಯಿ ? ಏನೀ ಭ್ರಾಂತಿ ? ಹೋಗು, ಪೆದ್ದೆ !”
“ ಚಂಡಿ, ಚಾಮುಂಡಿ ಪೇಳ್, ಬೇಕಾದುದೇನು ?”
“ ಗಂಡುಸಾದರೆ ನನ್ನ ಬಲಿಕೊಡುವೆಯೇನು ?”
ಇವಳ ಹೊಟ್ಟೆ ಚರಂಡಿಗಾರು ಕುಕ್ಕಿದರಯ್ಯ, ಕಳ್ಳಬಸುರಿನ ಯಾವ ಜಾಣರಂಭೆ ?
ಗಂಗೆಯಲಿ ತೇಲಿ ಬಂದನು ಕರ್ಣ, ರಾಧೇಯ; ಸಾಯಿಸಲಿಕಲ್ಲದೇ ಬರಳು ಕುಂತಿ.
ಮೈಯೆಲ್ಲ ಹೆರಿಗೆ ಮನೆ ಮಸಣ ಇವಳಿಗೆ, ಸ್ವರತಿಸಂಪ್ರೀತೆ;
ಹುಲಿ, ಚಿರತೆ, ಆನೆ, ಹಸು, ಆಡು, ಕೋಡಗ, ಕತ್ತೆ;
ಮಾವು, ನೇರಳೆ, ಹಲಸು, ಜಾಲಿ, ಜಾಜಿ-
ಇವು ಇವಳ ಸಹಜ ಸಂತಾನ;
ಈ ಪೆಡಂಭೂತ ನಾ ಬರುವ ಗಳಿಗೆಯೊಳೀಕೆಗೇಕೆ ಹುಟ್ಟಿತೊ ವಿಷಮ ರತಿ ದುರಾಶೆ !

ಬಿಟ್ಟರೋ ಕಾಡಲ್ಲಿ ಕಣ್ಣುಕಟ್ಟಿ;
ಸುತ್ತಲೂ ಬಿಗಿದಿಟ್ಟು ಮುಳ್ಳು–ತಂತಿ.
ಕುಡಿಯಲುಪ್ಪಿನ ನೀರು; ತಿನಲು ಬೆಂಕಿಯ ಚೂರು;
ಕುಣಿಯಲೆಂದೇ ಬೇಡಿ ಕಾಲ ತೊಡವು.
ಆಗಂತುಕನು ನಾನು ಅತಿಥಿಸತ್ಕಾರಕ್ಕೆ ಸಾಗಿ ಬಂದರು ಆರು ಮಂದಿ ಸಖರು;
ಉರಿವ ಮೇಣದ ಬತ್ತಿ; ಸುತ್ತ ಮೇಣದ ಗದ್ದೆ ಹೊಳೆ;
ಬತ್ತಿಯೂ ಕೊನೆಗೆ ಕರಕು, ಕರಕು.

ನೆಲ ತಾಯಿ ಮಲತಾಯಿ.
ಉತ್ತಾನ ಪಾದನಿಗೆ ಸುರುಚಿ; ಧ್ರುವನಕ್ಷತ್ರಕ್ಕೆ
ಕಾಡ ಮೂಲಕವೇ ಪಥ ಆಗಸಕೆ.
ಆರಣ್ಯಕರ ಮೌನ ಮಂತ್ರ ಬಿಚ್ಚಿದ ಬಟ್ಟೆ.
ತೆಗೆದುಕೋ ನೀ ಕೊಟ್ಟ ಎಲ್ಲ ವಸ್ತ್ರ ವಿಲಾಸ:
ಈ ಕೋಟು, ಈ ಶರಟು, ಈ ಶರಾಯಿ;
ಈ ಭಗ್ನ ಜೋಪಡಿಯು ನಿನ್ನದೇ; ತೆಗೆದುಕೋ;
ಬತ್ತಲಾಗದೆ ಬಯಲು ಸಿಕ್ಕದಿಲ್ಲಿ.
ಅಲ್ಲದಿರೆ ಬೀದಿಯಲಿ ನಾ ಸರೀಕರ ಕೂಡೆ ತಲೆಯೆತ್ತಿ ನಡೆಯಲಾರೆ;
ಬತ್ತಲಾಗದೆ ಕತ್ತಿ ಕಿತ್ತೆಸೆಯು ಬಲ್ಲುದೇ ಕವಚ ಕುಂಡಲ ಹೃದಯುದಮೃತ ಕಲಶ ?

೪

ವಿಶ್ವಾಮಿತ್ರ ಹೇಳಿದ: “ ತ್ರಿಶಂಕು, ನಡೆ ಸ್ವರ್ಗಕ್ಕೆ.”
ತೊಗಲು ಬಾವಲಿ ಮರದ ಜೋಲು ತೊಗಟೆ.

ಕೆಸರಲ್ಲಿ ಹುಗಿದ ಕಾಲನ್ನು ಕೀಳುವುದೆಷ್ಟು ಕಷ್ಟ ಅಷ್ಟೇ ಕಷ್ಟ—
ಆಕಾಶ ಪಂಜರದ ಹೊನ್ನ ಸರಿಗೆಯು ನಡುವೆ ಸಡವ ಹಗರಣ ಕೂಡ.

ಕೆಸರೋ ಅಸಹ್ಯ: ಹುಟ್ಟಿದ ಕೂಡಲೇ ಕೊಳೆವ ಎಳಕಸದಪಸ್ಮಾರ ಬಾಲ
ಲೀಲೆಯ ಚಟ್ಟ—
ಮಣ್ಣೆ, ಪೂರಾ ಮಣ್ಣೆ ಬೊಂಬೆಯಾಗಿದ್ದರದು ಒಂದು ತೆರೆ;
ಈ ಬೊಂಬೆಯಲ್ಲು ಉಸುರಿನ ತಂತ್ರ;
ತಂತ್ರದಾಚೆಗೆ ಶುದ್ಧ ಬೆಳಕು ಮಂತ್ರ–ಫಿತೂರಿ.
ಹೆಜ್ಜೆ ಮೂಡದ ಹಾದಿ ಗಾಳಿ ಬೀದಿ.

ಇದು ನೋಡು, ಇದು ಕಷ್ಟ: ಧೂಳು ಧೂಳಿಗೆ ಸೇರಿ,
ಗಾಳಿ ಗಾಳಿಗೆ ಕೂಡಿ,
ಬೆಂಕಿ ಬೆಂಕಿಯು ಕೂಡಿ,
ಗಾಳಿಯಲ್ಲುಲುಹು, ಆಕಾಶದಲ್ಲಾಕಾಶ ಬೆರೆತು ಹೋದರೆ ಇದಕ್ಕೇನು ಧಾಡಿ?
ಏನೂ ಉಳಿವುದು ಮತ್ತೆ:
ಒಂದು ವಿದ್ಯುತ್ತಂತಿ—

ತಾರೆ ನೀಹಾರಿಕೆಗಳಾಚೆಯ ಸಮಾಚಾರ;
ಪಾತಾಳದಾಳ ದಿಂದೆದ್ದು ಬರುವ ವಿಕಾರ;
ಒಂದನೊಂದಕೆ ಕೂಡಿಸಾಡಿಸುವ, ಕುಣಿಸುವ ಚಮತ್ಕಾರ.

ಕೆಲರು ಹೇಳುವರು ಸ್ವಿಚ್ಚೆಲ್ಲೋ ತಿಳಿಯದೆಂದು;
ಮೂಲದ ಕಛೇರಿಯ ವಿಳಾಸ ಮರೆತಿದೆ ಎಂದು;
ಇಲ್ಲೆ ಎಲ್ಲೋ ಇರುವುದೆನ್ನುವರು ಉಳಿದವರು.
ಕತ್ತಲಲ್ಲಿ, ಕಣ್ಣು ಕಾಣದ ಬೀದಿಯಿಕ್ಕಟ್ಟಿನಲಿ
ಗೋಡೆ ತಡಕುತ ಇನ್ನು ತೆವಳಬೇಕು.
ಹೆಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ;
ದಾರಿ ಸಾಗುವುದೆಂತೋ ನೋಡಬೇಕು.

ನೀರಡಿಸಿದ ನೆಲ

೧

ಬಿಸಿಲು ...ಬಿಸಿಲೇ ...ಬಿಸಿಲು
ಹರಡಿತ್ತು ತಲೆ ಮೇಲೆ ಕೆಂಡ ಕೆದರಿ
ಹದಿನೆಂಟು ಚಿತ್ರಗಳ ದಾಟಿ ಬಂದಿಹಳಿವಳು
ತಿರುಗಿ ನೋಡಿದಳೊಮ್ಮೆ ಬಂದ ದಾರಿ
ಮನದ ಪರದೆಯ ಮೇಲೆ ರಂಗುರಂಗಿನ ಚಿತ್ರ
ನೆನಪು ಬಿಚ್ಚುತ್ತಿತ್ತು ಸುರುಳಿ ಸುರುಳಿ
ನಿಟ್ಟುಸಿರು ನರಳಿತ್ತು ಸಂಜೆ ನೆರಳಾಗಿತ್ತು
ನಡೆದ ದಾರಿಯ ಮೈಲುಗಲ್ಲನೆಣಿಸಿ
ಮನದೊಳೇನೋ ಮತ್ತೆ ಗುಣಿಸಿ ಗುಣಿಸಿ
ಮನಸು ಗರಗರ ತಿರುಗಿ
ಉರಿಯ ಕುದುರೆಯನೇರಿ
ಹೌಹಾರಿ ...ಗಂಟಲಾರಿ !

೨

ಎದೆಯೊಳಗೆ ಕುಣಿದಿತ್ತು ಹರಯ ಹದಿನೆಂಟು ವರುಷ
ಕಂಡವರ ಕಣ್ಗೆ ಹರುಷ !
ಚೈತ್ರದಲಿ ಮರ ಮರಕೆ
ಚಿಗುರು ಹೂ ಕಾಯಿ ಹಣ್ಣು
ನೋಡಲಿದ ಸಾಕೇನು
ಬರಿ ಎರಡು ಕಣ್ಣು ?
ಕಣ್ಣು ಕುಡಿ ಬೆಳಕು ಲಕಲಕ ಹೊಳೆದು ಜಾರಿತ್ತು
ರೆಪ್ಪೊಲಿ ಹೊಡೆದುರುಳಿತ್ತು
ಹಾದಿ ಬೀದಿ !
ಓ ಇದು ಎಂಥ ಮೋಡಿ !
ಹಗುರಾಗಿ ಬೀಸಿ ಬಂದಿಹ ಗಾಳಿ–ರತಿಗಾರ
ಇವಳ ಕೂದಲಿನಲ್ಲಿ ಬೆರಳಾಡಿಸಿ
ಒಳಸೇರಿ ತೆಳುವಾದ ಸೆರಗ ಸರಿಸಿ
ಎದೆಗಿಳಿದು ರಮಿಸಿ !

೩

ಇಂಥ ಚೈತ್ರದ ಸುಗ್ಗಿ ಸಂಪತ್ತು ಸಿಂತಿಹುದು
ತನ್ನೊಲವ ಬಯಕೆಯನು ಎದೆ ತುಂಬಿಸಿ
ಈ ನೆಲದ ಪದರು ಪದರಿನ ಕೆಳಗೆ
ಅತೃಪ್ತ ಲಾವ ಕುದಿಸಿ
ಬರಿಯೊಡಲ ಬಯಕೆ ಬಂಗಾರ ಮರಿ ಚಿಗರಿಯಾಗಿ
ನೀರಡಿಸಿ ಹುಡುಕಿಹುದು ಸುತ್ತು ತಿರುಗಿ.

೪

ಓ… …
ಇದು ಎಂಥ ಬೇಗೆ ಒಳ ಹೊರಗು ತಾಯಿ
ಬರಲಾರೆನೆ ಒಮ್ಮೆ ಕರುಣಾಮಯಿ
ಒಮ್ಮೆ ಕಾಮನ ಕಾಲ ಹಿಡಿಯಲೇನು
ಚಂದ್ರಮಗೆ ಸೆರಗೊಡ್ಡಿ ಬೇಡಲೇನು

*   *   *

ಶೂನ್ಯಾಕಾಶದಲಿ ಮೋಡ ಸಾಗಿಹವು
ನೂರಾರು ಸಾಲು ಸಾಲು
ಒಂದಾದರೂ ಇಳಿದು ಸುರಿಸಬಾರದೆ ನೀರು
ನೋಡಬಾರದೆ ನಿಂತು ನೆಲದ ಗೋಳು !

ಕಾಶಿ ವಿಶ್ವನಾಥ ಶೆಟ್ಟಿ

ರಾಧೆ ಶ್ಯಾಮ

ಕಲ್ಲು ಕೊನರಿ ಕಲೆಯಾಗಿ ಅರಳಿ ಫಲವಾಗಿ ನಿಂತ ಮಾಟ
ರಾಧೆ ಶ್ಯಾಮ ಸೆಳೆಯುವರು ನಮ್ಮ ಕಣ್ಣುಗಳಿಗಿತ್ತು ಊಟ
ಕೇಳಿ ಕೊಳಲಿನುಲಿ ಕಾಲಗೆಜ್ಜೆ ಗುಲು ಕೆನಿಸಿ ಅಡಿಯ ನಿಡುತ
ಬಂದ ರಾಧೆ ಗೋವಿಂದ ನಡಿಗೆ ತುಟಿಯರಳ ನಗೆಯ ಕೊಡುತ.

ಎನಿತು ಮೋಹ ಅವನೂದುವಾಗ ಗೋಕುಲವೆ ನಾದದಲ್ಲಿ
ಮಿಂದು ಮುಳುಗೆ ಅವನಂತರಂಗದಾ ರಾಧೆ ಭಂಗಿಯಲ್ಲಿ
ಲತೆಯ ತೆರದಿ ಕಟಿ ಕಂಠ ಊರು ಮೊಣ ಕಾಲು ಪಾದ ಕೀಲು
ಬಳುಕಿ ಬಾಗಿ ಕೈಮೂಲ ಕುಲುಕಿ ಬರೆ ನೃತ್ಯ ನವಿಲಿನೋಲು.

ಕೇಳದಿಹುದೆ ಮನಸೆಳೆವ ಕೊಳಲಿನುಲಿಯಂತೆ ಕಾಲಗೆಜ್ಜೆ
ಕಂಡರಿಸೆ ಕಲ್ಲ ಬರಿ ಕಾಣ್ಕೆಯಲ್ಲ ಕವಿಯ ಅಮರ ಬಿಜ್ಜೆ
ಕೇಳ್ವಗಾನ ಸಿಹಿಯಿಂಪು ಕೇಳದಿಹ ಮಧುರಗಾನ ಹಿರಿದು
ಭಾವ ಬಧಿರ ಕಿವಿಯಿದ್ದರೇನು ಅಂದ ಕಿಟ್ಟಂತಿಹುದು.

ಯಾವ ಶಿಲ್ಪದೊಳ ಅಕ್ಷಿ ಕಂಡಿತೋ ಸಾಕ್ಷಾತ್ತಾಗಿ ಬೇಡಿ
ಕುಕ್ಷಿಯೊಳಗಿನಾನಂದ ಬಿಡಿಸೆ ಶಿಲೆಯಲ್ಲಿ ಬಂತು ಮೂಡಿ
ರಾಧೆಯಿಟ್ಟು ಅಡಿ ನಾಟ್ಯವಾಡೆ ರೂವಾರಿ ಗಿವಿಯಗೊಟ್ಟು
ಉಳಿಯಪೆಟ್ಟು ಶ್ರುತಿಗೊಟ್ಟು ನಡೆಸೆ ಆಲಿಸಿದನೇನೋ ಗುಟ್ಟು.

ಪ್ರಣಯ ಮಿಥುನ ಮನ ಮೋಹ ಕಥನ ಏಕಾಂತ ನೃತ್ಯಗಾನ
ಅಳಿಸದಂತೆ ಚಿರವಾಗಿ ನಿಂತು ಕಿವಿ ಕಣ್ಣಿಗೀಯ ಪಾನ
ತನ್ನ ತಪವ ಜೀವಿತದ ಶ್ರಮ ಇದು ಪುಣ್ಯ ಕಾರ್ಯವೆಂದು
ಬೆವರ ಜಲದಿ ಮೈ ಕೈಯ ತೊಳೆದು ಮನಸಾರೆ ಧಾರೆಯೆರೆದು.

ಜಡದಿ ತೃಣದಿ ಪರಿಪೂರ್ಣ ಬ್ರಹ್ಮ ತುಂಬಿರುವುದೆಂಬುದನ್ನು...
ರೂವಾರಿ ತೆರೆದು ತೋರಿಸಲು ಕಳೆಯೆ ನಮ್ಮ ಅಜ್ಞತೆಯನ್ನು
ಕೊಳಲ ಶ್ಯಾಮ ಆ ರಾಧೆ ತಮ್ಮ ನಿಜರೂಪದಿಂದ ಇದು—
ಎಂದೆಂದು ನಮ್ಮ ಕಣ್ ಕಿವಿಯ ತುಂಬಿ ಇಲ್ಲಿಹರು ಭಕ್ತಿಗೊಲಿದು.

ಸುವರ್ಣ ಸಂಪುಟ/೩೯೭

ತುಂಬುದಿಂಗಳು

ಮೊನ್ನೆ ದೀಪಾವಳಿಗೆ ಒಂದು ತಿಂಗಳು ದಣೀ
ತುಂಬಿಹುದು; ಆಗಲೇ ಸುಳಿವು ಹಿಡಿಯುವ ಮೋಡಿ!
ತೆರೆದು ಬಟ್ಟಲಗಣ್ಣ ಬಿಟ್ಟೂ ಬಿಡದೆ ನೋಡಿ
ಮಿಟ್ಟು ಮಿಸುಕದೆ ಇರುವ (ನಾನು ಅಪರಿಚಿತನೇ?)
ಎತ್ತಿಕೊಂಡರೆ ತುಸುವೆ ಅತ್ತಂತೆ ಮಾಡಿ, ಮರು-
ಗಳಿಗೆಯಲಿ ಬೆಚ್ಚಗೆ ಬಟ್ಟೆ ತೊಯ್ಸಿ ಗೊತ್ತಿಲ್ಲ-
ದವರಂತೆ ಸುಮ್ಮನಿರೆ (ಇದನಾರು ಕಲಿಸಿಲ್ಲ!)
ಬೇರೆ ಬೇಕೇ ಶಿಕ್ಷೆ? ಹಗಲು ನಿದ್ದೆಯ ಹೊಡೆದು
ದೀಪ ಹೊಚ್ಚುವ ಹೊತ್ತಿಗಾಗಲೇ ಕಣ್ದೆರೆದು
ಇರುಳೆಲ್ಲ ತಂತಿ ಮೀಟಿದ ದನಿ ತೆಗೆದು
ಪಹರೆ ಮಾಡುವನೀತ. ಮುಟ್ಟಿಗೆಯ ಬಿಗಿ ಹಿಡಿದು
ಕುಟ್ಟಿ ಗಾಳಿಯ ಒಂಟಿ ಕುಸ್ತಿಯಾಡುವ ಜಟ್ಟಿ!
'ಹಸಿವೆಯಾದರೆ ಒಂದು ನಿಮಿಷ ತಡೆಯಲು ಬಲ್ಲ'
ಇರಬಹುದು; (ಅದು ಮಾತ್ರ ನನ್ನ ಖಾತೆಯದಲ್ಲ.)

ಉಪ್ಪು ನೀರು

ಜಗದ ಕಡಲನು ಸುತ್ತುತಿದೆ ಹಗಲಿರುಳ ಹಡಗು
ನಿಮಿ ನಿಮಿಷದೊಂದು ತೆರೆ ತೆರೆವ ಅನಿಮಿಷ–ಮಿಣುಕು.
ಗಾಳಿ–ಬಿರುಗಾಳಿ–ಸುಳಿ ಕರುಣೆ–ಕ್ರೌರ್ಯದ ತೊಡಕು.
(ರಟ್ಟೆ ಸೋತರು ಮತ್ತೆ ಹುಟ್ಟು ಹಾಕುವ ಬೆಡಗು!)
ಮೂಡ ಪಡುವಣ ಮುಖಕೆ ರಕ್ತ ಚಿಮುಮ್ಮ ಹೊತ್ತು
ಜೀವ ಜೀವದ ನೀರು ಪುಟಿದು ಸಾಗರವರಿದು
ಒಡಲ ಕಡೆವುದು, ದಂಡೆಗಪ್ಪಳಿಸಿ ಮೊರೆಯುವುದು.
ಹಿಮಗಿರಿ ತಿಮಿಂಗಿಲಗಳಜ್ಜಗಾವಲು ಸುತ್ತು!
ಮಳಲಿನಂಚಿಗೆ ಬಾಯಿ ಬಿಡುವ ಭಾವದ ಸಿಂಪು.
ತಳೆದ ಕತ್ತಲ ಗವಿಯ ತೊಳೆವ ಜೀವದ ಮುತ್ತು.
ನಡುವೆ ಅಪರಂಪಾರ ಮುಳುಗಿ ಏಳುವ ಬದುಕು.

ಸಂತತ ಸ್ವತಂತ್ರವಿದು ಯಾರೆ ಹೊಡಲಿ ಸಂಪು-
ತಪ್ಪುಯಾರದು?—ಎಲ್ಲಿ ಉಪ್ಪು ನೀರಿಗೆ ಗೊತ್ತು;
ಈ ಸರಕು ಬಂದರಿಗೆ ಒಯ್ದು ಒಗೆದರೆ ಸಾಕು.

ಕಾಲ ಪುರುಷನಲ್ಲಿ ಕವಿಗಳ ಕೋರಿಕೆ

ಏನಯ್ಯ, ಕಾಲ ಪುರುಷ
ನಿನ್ನ ಮುಖದರುಶನವನೊಮ್ಮೆ ದಯಪಾಲಿಸಯ್ಯ.
ಕಣ್ತುಂಬ ನೋಡಿ, ನಿನ್ನ ರೂಪವನೊಮ್ಮೆ ಅಚ್ಚೊತ್ತಿಕೊಳ್ಳುವೆವು
ಹಣೆಯ ಪಾದಕೆ ಹಚ್ಚಿ ನಮಿಸುವೆವು
ಸಾಷ್ಟಾಂಗ ವೆರಗುವೆವು, ಆಯಿತೋ?

ಈ ಸೃಷ್ಟಿ ಜೊತೆಗೇ ನಿನ್ನ ರಥವೂ ಹೊರಟು ಬಂದಿಹುದು—
(ಉರುಳುತಿದೆ ಕುರುಡು ಚಕ್ರ)
ನಮ್ಮಜ್ಜಿ ಮುತ್ತಜ್ಜರ ಕೈಗೆ ಕೋಲು ಕೊಟ್ಟು
ಕಣ್ಗೆ ಕನ್ನಡಕ ಹಚ್ಚಿ,
ಬೆನ್ನಿನಲಿ ಹೆಣಭಾರವಿಟ್ಟು
ಈಗ ನಮ್ಮ ಹೆಗಲಿಗೇ ಕೈ ಹಾಕಿ ನಡೆದಿರುವೆಯಲ್ಲ,
ಏನಯ್ಯ ಸಮಾಚಾರ?
ಇನ್ನೂ ಎಷ್ಟು ದೂರವಿದೆಯೋ ನಿನ್ನ ಪಾದಗಟ್ಟಿ?

ನೀನೇನು ತುಳಿದೆಯೋ, ಏನೇನು ಬೆಳೆದೆಯೋ
ಏನೆಲ್ಲ ಕೂಡಿಸಿ ಕೂಡಿಸಿ ಕಳೆದೆಯೊ
ಯಾರು ಎಲ್ಲ ಲೆಕ್ಕವ ಬರೆದು ಇಟ್ಟವರು?
ಹೊಳೆವ ನಕ್ಷತ್ರಗಳ ಕಣ್ ಬೆಳಕಿನಲ್ಲಿ
ನೀನಿಟ್ಟ ಖಾತೆ-ಕಿರ್ದಿಯನೊಮ್ಮೆ ತೆರೆಯಬೇಕು:
ಎಷ್ಟೊ ತಾರಗೆ ಇದ್ದಕಿದ್ದಂತೆ ಆರಿದವು,
ಇನ್ನೆಷ್ಟೊ ತಮ್ಮ ಬೆಳಕನು ಇಳೆಗೆ ಮುಟ್ಟಿಸಲು ಪಣ ತೊಟ್ಟವು.
ಆಕಾಶ ಗಂಗೆಯಲಿ ಕಿಕ್ಕಿರಿದು ತಿಕ್ಕಿ ಮುಕ್ಕಿದವು ಕೆಲವು.
ಇಂಥದರಲ್ಲಿ-
ನಮ್ಮ ಕೃತಿಗಳು ನಿನ್ನ ಒರೆಗಲ್ಲಿನಲಿ ನಿಂತು ಬದುಕ ಬೇಕಂತೆ!
ಎಲ್ಲಾ ವಿಮರ್ಶಕರ ತಲೆ ಮೇಲೆ ಹತ್ತಿ
'ಅತ್ಯತಿಷ್ಠದ್ದಶಾಂಗುಲಂ' ಆಗಿರುವೆಯಂತೆ.
ಬೇಡ ಮಹರಾಯಾ

ನಿನ್ನ ಒರೆಗಲ್ಲನ್ನು ಹೊರಗೆ ತೆಗೆಯಬೇಡ.
'ಕಾಲ ಪುರುಷಂಗೆ ಗುಣಮಣಮಿಲ್ಲಂಗಡ!'
ಎಂದು ನಮ್ಮಜ್ಜ ಮೊದಲೇ ಹೆದರಿಸಿದ್ದಾನೆ.
ಅದ ಕೇಳಿ ನಮ್ಮೊಡಲೊಳೊ 'ಗುಡುಗುಟ್ಟುಗುಂ ಗಡ'!

ಚೊಕ್ಕ ಬಂಗಾರವೇ ಬೇಕೆಂಬ ಹಟವೇಕೆ ನಿನಗೆ
ಈ ಲೋಕದಲಿ ನಾನಾ ನಮೂನೆ ಲೋಹವಿರುವಾಗ?
ಗಟ್ಟಿ ಕಾಳುಗಳನ್ನೆ ಮುಟ್ಟಿಗೆಯಲ್ಲಿ ಹಿಡಿಯಬೇಕೆಂದೇಕೆ ಚಪಲ
ಎಲ್ಲವೂ ಹೊಟ್ಟೆಗೆ ಹೋಗುವಾಗ?

ಇಗೋ
ನಮ್ಮ ಮನದಂಗಳದಿ ಬೆಳೆದಷ್ಟು ಕವಿತೆಗಳ
'ನಿನ್ನ ಮಡಿಲೊಳಗಿಡಲು ತಂದಿರುವೆವು'—
ತುಂಬಿ ಹರಿಯುವ ಹೊಳೆಯ ನೀರಿನಲಿ
ಇವುಗಳನು ಹಾಯಾಗಿ ತೇಲಿಸಪ್ಪ
ಸ್ವಾಮಿ ನಮ್ಮಪ್ಪ.
ನಮ್ಮ ಕಣ್ಮರೆಯಲ್ಲಿ ಬೇಕಾದ್ದು ಮಾಡಿಕೊ
ನಾವಂತು ಪಾರಾದೆವು.
ಸರಿ, ನೀನಿಷ್ಟು ಮಾಡಿದರೆ, ನಿನ್ನ ಮೇಲೊಂದು
ಪದ್ಯವ ಬರೆದು, ಕನ್ನಡಿ ಕಟ್ಟು ಹಾಕಿ
ತುಂಬು ಸಭೆಯೊಳು ಮಾನ ಪತ್ರ ಸಲಿಸುವೆವು.
ಇಲ್ಲದಿದ್ದರೆ ವೃಥಾ ತಲೆದಂಡ
ಅಲ್ಲವೆ? ಅದಕಾಗಿ ಆಯುಷ್ಯದುದ್ದಕೂ ಚಿಂತೆ ಬೇಡ.
ಕಾಲಾಯ ತುಭ್ಯಂ ನಮಃ.

ಧಾರವಾಡದಲ್ಲಿ ಮಳೆಗಾಲ

ಏನಿದೀ ಹನಿಹನಿಯ ತೆನೆತೆನೆ ಸಿವುಡುಗಟ್ಟುತ ಒಗೆವುದು!
ಗುಡ್ಡ ಗುಡ್ಡಕೆ ಗೂಡು ಒಡೆಯುತ ಬೇರೆ ಸುಗ್ಗಿಯ ಬಗೆವುದು
ಸೆಳ ಸೆಳಕು ಬಳೆ ಕೊಯಿದರೂ ಆ ಮೋಡದೊಕ್ಕಲು ತಂಗದು
ಬಾನ ಮೇಟಿಗೆ ಸೋನೆ ತೂರುತ ರಾಶಿ ಮಾಡದೆ ಹಿಂಗದು.

ಏನು ಬೆಳ್ಳಗೆ ಎಷ್ಟು ತೆಳ್ಳಗೆ ಮಳೆಯು ಮಸ್ಲಿನ್ ಪರದೆಯು!
ಒಳಗೆ ಸುಮ್ಮನೆ ಕುಳಿತು ನೋಡುವಳಾರು ಹೇಳಾ ಮುಗುದೆಯು?

ಹೂ ಬಿಸಿಲ ಕರವಸ್ತ್ರದಲಿ ತರತರದ ಹೆಣಿಕೆಯು ನಕ್ಷೆಯು
ದೂರ ಹೋದವರಿಂದು ಬರುವರೆ, ಎಂದು ಬರುವ ನಿರೀಕ್ಷೆಯು?

ನೋಡು ಮೋಡದ ಬಸ್ಸು ಭರ ಭರ ತುಂಬಿಕೊಂಡೇ ಸಾಗಿವೆ
ಯಾವ ಗಿರಿ ಶಿಖರದಲಿ ಜಾತ್ರೆಯೂ, ಪಳುಕೊಳ್ಳಕೆ ಬಾಗಿವೆ.
ದೂರ ದೇಶದ ಯಾತ್ರಿಕರು ತಾ ಬೇರೆ ದೇಶಕೆ ಬಂದರು
ಕಂಡ ಗುಡಿ ಗೋಪುರಕೆ ಕೈ ಮುಗಿಯುತ್ತ ಅಲ್ಲಿಯೆ ನಿಂದರು.

ಏನು ಕಳಕೊಂಡಿರುವೆ ಗಾಳಿಯ ಏಕೆ ಈ ಪರಿ ಹುಡುಕುವೆ?
ಕಿಡಕಿ ಬಾಗಿಲು ಮುಚ್ಚಿರಲು ಕಿರು ಬಿರುಕಿನಲಿ ಬಿಸುಸುಯ್ಯುವೆ.
ಆ ಹಿಮಾಲಯದಿಂದ ನಿನ್ನನು ಬೀಸಿ ಒಗೆದರೆ ಇಲ್ಲಿಗೆ?
ಸಪ್ತಸಾಗರ ಸುತ್ತಿ ಬಂದೆಯ, ಮತ್ತೆ ಹೋಗುವುದೆಲ್ಲಿಗೆ!

ಮೋಡ ನೂತೇ ನೂಲುವದು ಬಿಳಿ ದಾರ ಧಾರಾಕಾರದಿ
ಗುಡ್ಡ ಮರದಿಗೆ ಸುತ್ತಿ ಕುಕ್ಕಡಿ ಮಾಡಿ ತುಂಬಿದೆ ಕೊಳ್ಳದಿ,
ಹಳ್ಳ–ಹೊಳೆ ಮಗ್ಗದಲಿ ನೇಯುತ ಹೊರಗೆ ಕಳಿಸಿದೆ ಮಾಲನು
ಗದ್ದೆ ಹೊಲ ತೋಟಕ್ಕೆ ಹೊಚ್ಚಿದೆ ಕೆಂಪು ಖಾದಿಯ ಶಾಲನು.

ಹಗಲು ಇರುಳು ಕೆಲಸವೇನಿದೆ ಮಳೆಗೆ?—ಬಂದೇ ಬರುವದು,
ನಡುವೆ ಚಕ್ಕನೆ ಹಸುರ ಮಧ್ಯಕೆ ಸೂರ್ಯ ಸರ್ಚ್‌ಲೈಟ್ ಕೆಡವಲು
ಹನುಮನೆದೆಯೊಳು ರಾಮ ಸೀತೆಯರಂತೆ ಕಣ್ಣಿಗೆ ಹೊಳೆವುದು
ಮರು ಚಣವೆ ಆಕಾಶವೆಲ್ಲವು ಹರಿದು ಬಿದ್ದೊಲು ಸುರಿವುದು.

ಕಾರೆ ಹುಣ್ಣಿಮೆ ಕರಿ ಹರಿದು ಮಣ್ಣೆತ್ತು ನೀರನು ಕುಡಿದವು.
ಬಂತು ಪಂಚಮಿ ಬೋಲಬಗರಿಗೆ, ಹೆಣ್ಣಿತವರಿಗೆ ಮಿಡಿದವು.
'ಅರಳು–ಮರಳಿ'ನ ಕವಿಯು ಕರೆದನು 'ಬಾರೊ ಸಾಧನ ಕೇರಿಗೆ'
ಬಂತು ಶ್ರಾವಣ ಬಳಗದೊಂದಿಗೆ 'ಮಳೆಯು ಎಳೆಯುವ ತೇರಿಗೆ'.

ಗಣಪತಿಯು ಇಲಿಯೇರಿ ಭರ್ಜರಿ ವೇಷದಲ್ಲಿಯೆ ಬಂದನು
ಕರಿಗೆ ಪತ್ರೆಯು ಪೂಜೆ ಸಂದಿತು, ಕಡಬು ಹೋಳಿಗೆ ತಿಂದನು.
ಘಟಸ್ಥಾಪನೆಯಾಯ್ತು; ಮೋಡದ ಕೊಡವು ಬುಡಮೇಲಾಯಿತು.
ಸೀಗೆ ಹುಣ್ಣಿವೆಗಾ ಮಸಾರಿಯು ಹಸುರು ಪುಚ್ಚವ ತೆರೆಯಿತು.

ಗೌರಿ ಹುಣ್ಣಿವೆ ಹಾಲ್ಗುಡಿದು ಬಿಳಿ ಜೋಳ ಧ್ವಜವನ್ನೆತ್ತಿತು.
ಗೋದಿ ಹೊಡೆಗೆಚ್ಚಿರಲು ಕಡಲೆಯು ಮಡಿಲು ಹೂಮಿಡಿ ತುಂಬಿತು;

ಕುಸುಬೆ ಹೂಗಳ ಜರದ ಪೀತಾಂಬರವ ಹಬ್ಬಕೆ ಉಟ್ಟಿತು
ಮೊದಲೆ ದೀಪಾವಳಿಗೆ ಒಲುಮೆಯು ದೀಪ ಬೆಳಗಿಸಿಕೊಂಡಿತು.

ಏನು ಈ ಗಿಡ ಬಳ್ಳಿ ಮರಗಳಿಗೆಲ್ಲ ಎಂತಹ ಜಳಕವು!
ಹಸುರು ಹಚ್ಚನೆ ನಿಮಿರಿ ನಿಂತಿಹ ನೆಲಕೆ ಹರ್ಷದ ಪುಳಕವು,
ಎಲ್ಲಿಯಾದರು ಕಸರು ಕಡ್ಡಿಯು ಹುಡುಕಿ ತೆಗೆಯಿರಿ ನೋಡುವ
ಕೆಸರೊ ಬೇಕಾದಷ್ಟು-ನಡೆಯಿರಿ ನಗರ ಸಭೆಗೇ ತೂರುವ.

ಕೊಡೆ ಹಿಡಿದು ಕಾಯ್‌ಪಲ್ಲೆ ತಂದರೆ ಪ್ಯಾಂಟು ಕೂಡಲೆ ಪಚಡಿಯು.
ಕಾರು ಹಾಯ್ದರೆ ಬಾಯ್ಗೆ ಸಿಡಿವುದು ಕೆಂಪು ಗೋದಿಯ ಕಿಚಡಿಯು.
ಮಳೆಯ ಪಂಜರದಲ್ಲಿ ಸೆರೆಯಾಗಿಹೆವು ಸರ್ಕಸ್ ಹುಲಿಗಳು,
ಅಲ್ಲಿ ಹೊಲ ಗದ್ದೆಯಲಿ ಕೊಪ್ಪೆಯು ಹೊತ್ತು ಗೆಯ್ವರೆ ಕಲಿಗಳು.

ಬೂಟು ಚಪ್ಪಲು ಮಾಡದಲ್ಲಿಯೆ ಬುರುಸುಗಟ್ಟಿವೆ ಥಂಡಿಗೆ—
ಕೋಟು ಸ್ವೆಟರಿನ ಮೇಲೆ ಸ್ಕಾರ್ಫನು ಸುತ್ತಿ ಹೊರಟಿರ ದಂಡಿಗೆ?
ಬಿಸಿಲ ಮೋರೆಯು ಕಾಂಬುದಾಯಿತು ಬರಿಯ ಮನಸಿನ ಮಂಡಿಗೆ
ಜೀವ ಬೇಡಿದೆ ಕಾಫಿ ದೋಸೆಯ ಕರಿದ ಹಪ್ಪಳ ಸಂಡಿಗೆ.

ಒಲೆಯ ಬದಿಯಲಿ ತಲೆಯ ಹುದುಗಿಸಿ ಮಲಗಿಕೊಂಡಿಹ ಬೆಕ್ಕಿಗೆ
ಕನಸಿನಲ್ಲಿಯೂ ಇಲಿಯು ಬಾರದು, ಹಕ್ಕಿ ಗೂಡೊಳು ತೆಪ್ಪಗೆ.
ಮೈಯುಡುಗಿ ನಡುಗುತ್ತ ದನಕರು ಮೇದು ಬರುತಿವೆ ಒಟ್ಟಿಗೆ
ಮನೆಯ ಒಳಗೇ ಕುಳಿತು ಕಾತರಿಸಿಹೆನು ಗೆಳೆಯರ ಭೆಟ್ಟಿಗೆ.

ಬಿಸ್ಸೀ ಚುರುಮುರಿ ಕಡಲೆ ಮಾರುವ ಮುದುಕಿ ಬಂದರೆ ಕರೆಯಿರಿ
ಮಕ್ಕಳೊಂದಿಗೆ ಕುಳಿತು, ಕುರುಕುರು ತಿಂದು ಹೊರಜಗ ಮರೆಯಿರಿ.
ಅಷ್ಟು ಮಿಕ್ಕೀ ಬೇಸರಾದರೆ ರೇಡಿಯೊ ಕಿವಿ ತಿರುವಿರಿ.
ರಾತ್ರಿಯಾಗಲು ಊಟ ತೀರಿಸಿ ಜೊತೆಗೆ ಬೆಚ್ಚಗೆ ಮಲಗಿರಿ.

ಶತಾಯುಷಿ ವಿಶ್ವೇಶ್ವರಯ್ಯನವರು

ಘನತೆ—ಗೌರವ—ಸಮತೆಗಿಷ್ಟಗಲ ತೆರೆದ ಕಿವಿ.
ಕ್ಷಿತಿಜದಂಚಿಗೆ ತಾಗಿ ಆಚೆ ಹೊಳೆಯುವ ದೃಷ್ಟಿ.
ಯೋಜನೆಯ ಮೋಜು ಹಣೆ, ತುಟಿ—ವಿನಯ—ಸಂತುಷ್ಟಿ.
ನೇರ ಬಾಳಿದ ಮೂಗು. ದುಡಿಮೆ—ದೀಕ್ಷಾ—ತಪಸಿ.

ಶುಭ್ರ ಜರಿಪೇಟ: ಮೇಧಾಕಿರೀಟ; ಶಾಂತರಸ.
ಓರಣಕೆ ತೋರಣ ಕಟ್ಟಿದುಡುತೊಡುಗೆ. ನಡಿಗೆ-
ನೂರು ಸಂವತ್ಸರದ ಕೊಡುಗೆ; ಕನ್ನಡ ಗುಡಿಗೆ
ಚಂದನದ ತೇರು, ಕೋಲಾರ ಚಿನ್ನದ ಕಳಸ.
ಸಂಕಲ್ಪ ಮಾತ್ರದಲಿ ಶತಮಾನಗಳ ಕಳಸ.
ಕಡೆದು ನಿಲಿಸುವ ಶಿಲ್ಪಿ; ಯಂತ್ರ ಗಡಗಡಗಾಲಿ
ಉಕ್ಕು–ಕಬ್ಬಿಣ–ಸೊಕ್ಕು, ವಿದ್ಯುಚ್ಛಕ್ತಿ ಮೈಲಿ!
ವೃಂದಾವನದಿ ಮತ್ತೆ ಜೀವ ಪುಟಿಯುವ ರಾಸ.
ಅಜ್ಜನದ್ಭುತ ಕಥೆಗೆ ಮೊಮ್ಮಗನ ಮೈನವಿರು
ಉಜ್ಜು ಭಾರತವಜ್ರ! ಜಂಗುತಿಂದವರಿವರು.

ಹೆಚ್. ತಿಪ್ಪೇರುದ್ರಸ್ವಾಮಿ

ಯಾತ್ರೆ

"ಎತ್ತಣ ಮಾಮರ, ಎತ್ತಣ ಕೋಗಿಲೆ,
ಎತ್ತಣಿಂದೆತ್ತ ಸಂಬಂಧವಯ್ಯ!"
ಜೀವನದ ಪಯಣದಲಿ ದೊರೆವ ಅನುಭವದಲ್ಲಿ
ಈ ಉದ್ಗಾರಕುತ್ತರವ ಕಾಣಬಹುದು;
ಉತ್ತರವು ಕಾಣದಿರಲೂ ಬಹುದು.
ಎತ್ತಣದು ಮೈಸೂರು, ಎತ್ತಣದು ಎಲ್ಲೋರ!
ದೌಲತಾಬಾದಿನೀ ನೆತ್ತಿಯಲಿ ನಿಂತು
ಈ ಸಂಗಡಿಗರೊಡನಾಡುತ್ತ ನೋಡುತಿಹುದೆತ್ತ!
ಅದು ಹೇಗೊ ಲಭಿಸಿತ್ತು ಆ ಯೋಗ.

* * * *

ನಾವೆಲ್ಲ ಒಟ್ಟಾಗಿ ಒಂದೆ ದಿನ ರೈಲಿನಲಿ
ಹೊರಟಿದ್ದೆವಿಲ್ಲಿಂದ ಯಾತ್ರೆಗಾಗಿ.
ಅಜಂತ, ಎಲ್ಲೋರ, ಎಲಿಫೆಂಟ, ಬಾದಾಮಿ, ಹಂಪೆ;
ಈ ಕಲೆಯ ಕಾವ್ಯಗಳ ಕಾಣುವಾಸೆಯನು
ಕಂಠಪೂರ್ತಿಯೆ ಕುಡಿದು ನುಗ್ಗಿದೆವು.
ಎಲ್ಲಿಯೋ ಇಳಿದೆವು, ಮತ್ತೆಲ್ಲೊ ಹತ್ತಿದೆವು
ಎಲ್ಲಿಯೂ ಕೊಳ್ಳಲಿಲ್ಲ ಟಿಕೆಟ್ಟು.
ಮೈಸೂರಿನಿಂದ ಮತ್ತೆ ಮೈಸೂರಿಗೆ
ನಿರ್ಧಾರವಾಗಿತ್ತೆಮ್ಮ "ಬಡ್ಜೆಟ್ಟು"
ಅದಕ್ಕೆ ತಕ್ಕಂತೆ "ರೌಂಡು ಟೂರು ಟಿಕ್ಕೆಟ್ಟು"

* * * *

ಜೀವನದ ಯಾತ್ರೆಯಲ್ಲಿಯು ನಮಗೆ ಇರಬಹುದು
ಒಂದು "ರೌಂಡು ಟೂರು ಟಿಕೆಟ್ಟು".
ಯಾವ ಕ್ಷೇತ್ರಗಳಿಹವೊ ಅದರಲ್ಲಿ
ಯಾವ ಗುಹೆಗಳ ಭಿತ್ತಿಚಿತ್ರ ದರ್ಶನವಿಹುದೊ?
ಯಾವ ಮಾತಂಗ ಪರ್ವತದ ಏರುವಿಕೆಯೋ?
ಸಾಲಾರು ಜಂಗು ಮ್ಯೂಸಿಯುಮ್ಮಂತು ಇರಲೇಬೇಕು;
ಜೀವನದ ವೈವಿಧ್ಯ ದರ್ಶನಕೆ ಅದು ಬೇಕು.

"ನೋಡುತ್ತ ನಡೆಯುತಿರಿ
   ಒಂದೆ ಕಡೆ ನಿಂತು ಬಿಡಬೇಡಿ"
"ಚಿಕ್ಕ ಗುಹೆಗಳ ಬಿಟ್ಟು ಬೇಗ ಬೇಗನೆ ಬನ್ನಿ
ಮುಂದಿಹುದು ಕೈಲಾಸ ಹೋಗುವ ಬನ್ನಿ"
ನಿಮ್ಮ ಎಡಪಕ್ಕದಲಿ ಹಳ್ಳತಿಟ್ಟುಗಳಿಹವು
   ಜಾರಿ ಬಿದ್ದೀರಿ ಜೋಕೆ"—

ಜೀವನದ ಯಾತ್ರೆಯಲ್ಲಿಯು ನಮಗೆ
ಹೇಳುವವರಿದ್ದಾರೆ ಈ ಮಾತು.
ಗುರುಗಳೋ, ಗ್ರಂಥಗಳೋ, ಘಟನೆಗಳೋ!
ಯಾವ ರೂಪದಿ ಮೂಡಿ ಮೈ ತಳೆದು ಬರುವುದೋ ಆ ಮಾತು!
ಬಂದಾಗ ಕಿವುಡಾಗದಿದ್ದರೆ ಸಾಕು,
ಯಾತ್ರೆಯಲ್ಲಿ ಎಲ್ಲವೂ ಸುಖಕರವೆ ಆಗುವುದು.
ನೋಡುವುದ ನೋಡಲಿಲ್ಲವೆ—ಎಂಬ
ಸಂಕಟವು ತಪ್ಪುವುದು.
ಪಟ್ಟಿಯಲಿ ಇಲ್ಲದಿದ್ದರು ಕೂಡ
ಹಂಪೆ ಹೊಸದಾಗಿ ಸೇರುವುದು.
ನಮ್ಮ ಕೈಯಲೆ ಇಹುದು ನಮ್ಮ "ಟೂರು ಟಿಕೆಟ್ಟು"
ಹುಡುಕುವೆವು ಪರರ ಕೈಗದನಿಟ್ಟು.

* * * *

ಬಹುದೂರ ಎಲ್ಲೋರದಲ್ಲಿರುವ ಕೈಲಾಸ
   ಕೈಬೀಸಿ ಕರೆವುದೇಕೆ?
ಗುಹೆಯ ಗೋಡೆಯಲಿ ಮೂಡಿರುವ ಪದ್ಮಪಾಣಿಗು
   ನಮಗು ನಂಟುತನವೇಕೆ?
ಗಿರಿಯನೆತ್ತಿಯ ಮೆಟ್ಟಿ ನಿಂತಿರುವ ಗೊಮ್ಮಟಗೆ
   ತಲೆಬಾಗಿ ಮಣಿವುದೇಕೆ?
"ಬೆಟ್ಟದ ನೆಲ್ಲಿಯಕಾಯಿ, ಸಮುದ್ರದೊಳಗಣ ಉಪ್ಪು
   ಎತ್ತಣಿಂದೆತ್ತ ಸಂಬಂಧವಯ್ಯ?"
   -ಇಲ್ಲಿಹುದು ಸಂಬಂಧ.
ಬಿಗಿದಿಹುದು ಯಾವುದೋ ಕಾಣಲಾಗದ ಬಂಧ,
   ಸ್ವಚ್ಛಂದ ಛಂದ.
   ಎಲ್ಲಿಂದಲೋ ತಂದು ಎಲ್ಲಿಗೋ ಎಸೆಯುವುದು
ಯಾರನ್ನು ಯಾರೊಡನೆ ಸೇರಿಸುವುದೋ!

ಕಟ್ಟಿನೋಡುವುದಿಲ್ಲಿ, ಮುರಿದು ಮುಕ್ಕುವುದಲ್ಲಿ,
ಕೆರಳಿರುವ ಆಸೆಯನು ಕೆಣಕಿ ಬೆಳೆಸುವುದು.
ನಮ್ಮರಿವಿನರಮನೆಗೆ ಅತಿಥಿಗಳು ಕೆಲವು;
ಅರಮನೆಯ ಗೋಪುರಕು ಕಾಣದಿಹ
ರೆಕ್ಕೆಗಳು ಹಲವು.
ನಮ್ಮ ತಿಳಿವಿಗೆ ಬರುವ ಭಾವ ಒಂದು
ತಿಳಿವಿನಾಚೆಗೆ ನಿಂತ ಭಾವಗಳು ನೂರಒಂದು.

* * * *

ಭಾವಗಂಗೋತ್ರಿಯಲಿ ಮೀನಾಗಿ ಬದುಕುತಿಹ
ಈ ನಿಲುವು, ಕೊನೆಯ ನಿಲ್ದಾಣವಲ್ಲ.
ಪಯಣದಾರಂಭವಿದು. ಈಗಲೇ
ಸರಕುಗಳ ನೋಡಿ ಬಿಡಿ, ಮುಂದೆ ಗಡಿಬಿಡಿ ಬೇಡ.
"ಗೈಡೊ"ಬ್ಬ ಜೊತೆಗಿದ್ದರೊಳಿತು; ಹೊರಗಿನವನಲ್ಲ,
ಎಲ್ಲವನು ಬಲ್ಲವನು, ಒಳಗಿನವನು;
ಆಗಾಗ ಎಚ್ಚರಿಕೆ ನೀಡುವವನು.

ಸಿದ್ಧತೆಯು ಮುಗಿಯಿತೇ?
ಯಾತ್ರೆ ಹೊರಡಿರಿ ಇನ್ನು.
'ನೀವು ನಡೆದುದೆ ಮಾರ್ಗ, ನೀವು ನುಡಿದುದೆ ಮಂತ್ರ
ನೀವು ಅಡಿಯಿಟ್ಟ ಧರೆ, ಅದೆ ಅವಿಮುಕ್ತ ಕ್ಷೇತ್ರ,
-ಆಗುವಂದ ಅರಿತು ಯಾತ್ರೆಯನು ಕೈಕೊಳ್ಳಿ
ಗಂಗೋತ್ರಿಯಲಿ ಮಿಂದು, ಗಂಗಾಮೃತವ ಕೊಂಡು
ಗಂಗೆಯಂತೆಯೆ ಹರಿದು
ಹಚ್ಚಹಸುರಾಗಿಸಿರಿ ನಾಡುಗಳನು;
ಜೀವನಾಡಿಗಳನು.

ಎ. ಕೆ. ಪುಟ್ಟರಾಮು

ಹಕ್ಕಿಗೆ

ಮನದಿ ಬೇಸರಗೊಂಡು ನಿನ್ನೆಡೆಗೆ ಬಂದಿಹೆನು
ಸವಿನುಡಿಯನಾಡೆಲ್ಲವೊ ಸಣ್ಣ ಹಕ್ಕಿ.
ಕೆಟ್ಟ ಮಾತನು ಕೇಳಿ ನೊಂದು ಬಂದಿಹೆನ ನಾನು
ರಾಗದಲಿ ಹಾಡೆಲವೊ ಪುಟ್ಟ ಹಕ್ಕಿ.
ಏತಕೀಪರಿ ನೀನು ಸುಮ್ಮನೆಯೆ ಕುಳಿತಿರುವೆ?
ಕೊರಳ ಕೊಂಕಿಸುತಾರ ನೆನೆಯುತಿರುವೆ?
ಗಗನಚಾರಿಯೆ ನಿನಗೆ ಜೀವನದಿ ಬೇಸರವೆ?
ಹೇಳೆಲವೊ ನನ್ನಲ್ಲಿ ನಿನ್ನ ಮನವ.

ಹಸಿದಿಹೆಯ? ಬಿಸಿಲಲ್ಲಿ ಹಾರಾಡಿ ಬಳಲಿಹೆಯ?
ಬಳಲಿಕೆಯು ಮೊಗದಲ್ಲಿ ತೋರುತಿಲ್ಲ.
ಕೋಪ ಬಂದಿತೆ ಹಕ್ಕಿ?-ನಿನ್ನಾಲಿ ಕೆಂಪೇರಿ
ಕಿರುಗಿಡಿಯು ಕಾರುವುದು ಕಾಣುತಿಲ್ಲ.
ರಾಗದಲಿ ನನಗೆಣೆಯು ಮತ್ತೊಬ್ಬರಿಲ್ಲೆನುತ
ಬೀಗಿಹೆಯ ಬಿಂಕದಲಿ ಬೆಡಗುಗಾರ?
ನನ್ನಂತೆಯೇ ನಿನಗೆ ಕೋಪತಾಪಗಳುಂಟೆ?
ನನ್ನಲ್ಲಿ ಹೇಳಿಬಿಡು, ಬೆದರಬೇಡ.

ಸಂಪಗೆಯ ಹೂವಿನೊಲು ಸೊಂಪಾದ ನುಣ್ಗೊರಳ
ನೀನಾವ ಕಾರಣದಿ ಕೊಂಕಿಸಿರುವೆ?
ಉಪ್ಪೆಗಚೆ ಮೆಳೆಯಲ್ಲಿ ಮುತ್ತುಗಳ ಬಿಗಿದಂತೆ
ಹಣ್ಣುಗಳು ತುಂಬಿಹುವು, ತಿರುಗಿ ನೋಡು.
ಸಣ್ಣ ಪಂಜರಗಳನ್ನು ಹಿಡಿದೆತ್ತಿ ತೋರುವೀ
ಹೂಬಿಟ್ಟ ದಾಳಿಂಬೆ ಮರವ ನೋಡು
ನೀನಿರುವ ಸುರಹೊನ್ನೆ ಕೊನೆಯಲ್ಲೆ ಹೂವೆಂದು
ಅರೆವಿರಿದು ನಸುನಗುತಲಿಹುದು ನೋಡು.

ಕೊರಳೊಳಗೆ ತುಂಬಿರುವ ಸಂಗೀತರಸವನ್ನು
ಕಿವಿಗೆರೆದು ಮನದಳಲ ತಂಪುಗೊಳಿಸು.
ನಿನ್ನಂಗದೀ ಸೊಬಗನೆಲ್ಲಿಂದ ತಂದಿರುವೆ?

ಹಾಡುತ್ತ ಹೇಳಿದನು ಮುದ್ದು ಹಕ್ಕಿ.
ತುಂಬಿರುವ ಹರುಷದಲಿ ನೀಸಿಂತು ಮಾತುಳಿದು
ಮೈಮರೆತು ಕುಳಿತಿರುವೆ; ತಿಳಿಯಿತೀಗ.
ರಾಗದಲಿ ಹಾಡೆಲವೊ ಬಲುಸರಳ, ಸವಿಗೊರಳ,–
ಜೀವನವ ಸವಿ ಮಾಡಿ ನಲಿವುದೆಂತು?

ನಸುವಿರಿದು ಮುಗಮುಗಿಪ ಮಲ್ಲಿಗೆಯ ಸೌರಭವ
ಕಿವಿಯೆಂತು ಸವಿನೋಳ್ಪುದದನು ತಿಳಿಸು
ಹರಳುಗಲ್ಲಿನ ಮೇಲೆ ಹರಿವ ಹೊನಲಿನ ನೀರ
ನಿನದವನ್ನನುಕರಿಸು ಕೇಳ್ವೆ ನಾನು.
ಬೆಳುದಿಂಗಳಲಿ ಹೂವ ಮುಡಿದಿರುವ ಹಂಬಿನಾ
ಚೆಂದವನು ಹಾಡಿನಲಿ ತೋರು ನನಗೆ.
ಸವಿ ಹಾಡ ಮಳೆಗರೆದು ನುಣ್ಚರದ ಹೊಳೆಯಲ್ಲಿ
ತೇಲಿಸೆನ್ನನು ಮುದದಿ ಮುದ್ದು ಹಕ್ಕಿ.

ಕಾನನದೊಳರಳಿರುವ ಹೂವುಗಳು ಪರಿಮಳವ
ಮಾರುತಗೆ ಬೀರದೆಯೆ ಸುಮ್ಮನಿಹವೆ?
ಬನದ ಬಳ್ಳಿಯು ತನ್ನ ಕೆಂದಳಿರ ಮರೆಮಾಡಿ
ಚೆಂದವನು ಜನಗಳಿಗೆ ತೋರದಿಹುದೆ?
ಮಕರಂದವನು ಹೂವು ದುಂಬಿಗೀಯದೆ ತಾನೆ
ಪಾನ ಮಾಡಿದುದನ್ನು ನೋಡಿರುವೆಯಾ?
ನಿನ್ನೊಳಗೆ ತುಂಬಿರುವ ಸಂಗೀತವನು ನೀನು
ಬಿಡದಿಂತು ನುಂಗುವುದು ತರವೆ ಹೇಳು.

ಜತೆಯವರು ನಲವಿಂದ ಹಾಡುತಿರೆ ನೀನೇಕೆ
ದೂರದಲಿ ಮೌನದಲಿ ತಪಿಸುತಿರುವೆ?
ಹಾಲು ಬತ್ತದ ತೆನೆಯ ಕೊಕ್ಕಿನಲಿ ಬಿಗಿಹಿಡಿದು
ಘರಘರನೆ ಬರುತಿಹಳು ನಿನ್ನ ಗೆಳತಿ.
ನೋಡಿಲ್ಲಿ ನಿನ್ನೆಡೆಯೆ ನಿಂತಿರುವ ನಲ್ಲೆಯನು
ಮಾತನಾಡಿಸು ಬೇಗ ಬಳಲಿರುವಳು.
ಇನ್ನು ತೊರೆ ಮೌನವನು, ಮನವನ್ನು ಹೇಳಿಬಿಡು;
ಕೇಳ್ವುದಕೆ ಕೌತುಕದಿ ಕುದಿಯುತಿಹಳು.
ಸುಖಿಗಳಿರ ನಿಮ್ಮ ನುಡಿಗಳನು ಕೇಳಿ
ಬೇಸರವ ತೊರೆದು ಸಂತಸವ ತಾಳಿ
ನೀವಿತ್ತ ಮುದವ ಜನಕೆಲ್ಲ ಸಾರಿ
ನಲಿವೆ ನಾಂ ನಿಮ್ಮನ್ನೆ ನೆನೆದು ನೆನೆದು.

Democracy ಯ ಜನನ

ಮುಗಿಯಲಿಲ್ಲ ಗಲಾಟೆ, ಆಯ್ತು ಪೌಣೇ ಐದು;
ನೊಂದಪ್ಪ; ಬೆಂದಪ್ಪ; ಕರೆದಾಗ ಬಂದಪ್ಪ;
ಕರೆಯದಿದ್ದರು ಬಂದೆ ಉಶ್ಶೆಂದು ಅಂದಪ್ಪ;
ಕಾಲು ಮುಂದಾಗಿಹುದು ತೆಗೆಬೇಕು ಪೊಡೆಕೊಯ್ದು
ಎಂಬ ಖಂಡೇರಾಯ; ಹರಳೆಣ್ಣೆಯನು ಹುಯ್ದು-
ದಷ್ಟೆ ಸಾಕೆಂದೆಂಬ ವೃದ್ಧ ನಡೆಹಿಂದಪ್ಪ;
ಒಂದೆ ಸುತ್ತಿನ ಮಾತ್ರೆ-ಮೂಲಿಕೆಯ ತಂದಪ್ಪ;
ಅಪ್ಪ ಬಂದರೂ ಗರ್ಭ ಬೀಳದು ಯಾಸುಯ್ದು ... !

ಶಾಪ ಗರ್ಭವ ಹೊತ್ತು ಕುಬುಸ ಮಾಡಿಸಿಕೊಂಡು
ದಪ್ಪ ಒನಿಕೆಯ ಹೆತ್ತ ಈ ಗಂಡಗಬರುವಿಕೆಗೆ
ಎಣ್ಣೆ ಅಗ್ಗಿಷ್ಟಿಕೆಯೆ? ಧೂಪವೇ? ಸುಡಿರೊಯ್ದು,
ಅದನೊ ತಣ್ಣೀರಿಟ್ಟು ಹಿಟ್ಟು ಮಾಡಿರಿ ತೆಯ್ದು
ಮುಂದೆ? ಯಮುನಿಹ; ಇಲ್ಲ, ಯಮುನೆಯಾದರೂ ಬಂದು
ಕಣ್ಣಡ್ಡ ಮಾಡುವಳು—ಗಲಗು ಬೆಳಯುವವರೆಗೆ!
(ಆ ವರೆಗೆ ದಿನಗಳೆವ ಬೈದರ* ನಿಬರ ಬೈದು!)

ಮಾಯಿಯ ಮೂರು ಮುಖಗಳು

(ನಾಲ್ಕನೆಯ ಮುಖವನ್ನು ಕಂಡಿಲ್ಲ)

ಮಾಯಿ! ಮಹಾ ಮಾಯಿ!
ಮೂರು ವಿಧದಿಂದ ನೀನೆಮ್ಮ ತಾಯಿ!
(ಸಾಕು ತಾಯಿ; ದತ್ತ ತಾಯಿ; ಹೆತ್ತತಾಯಿ)
ಮೊಟ್ಟ ಮೊದಲಿಗೆ ಬರುವಿ ಸಾಕು ತಾಯಾಗಿ
ಬೆಳಸುತ್ತ ಬಳಸುವಿಯೊ ಬಾಳ, ಹಾಯಾಗಿ.
ಕರುಳಿಗೊಂದು ಹೊಸ ಕರುಳ ಪ್ರಾರಂಬಿ

* ಬೈದ: ದ್ಭ: ವೈದ್ಯ: ಅಥವಾ ಬೈದನ.

ಇಳಿಬಿಟ್ಟು ನೆಲವ ನಿನ್ನದೆ ಮಾಡಿಕೊಂಬಿ.
ಮುಟ್ಟಿದರೆ ಮಾಸುವಾ ಸುಳಿಗೆಂಪು ಕಂಬಿ
ಒಂದೊಂದು ಎತ್ತಿ ಹಿಡಿದಿವೆ ಸೊಟ್ಟ ರೆಂಬಿ
ನಿನ್ನ ಅಚ್ಚೆಯು ಕೈಯ ತುತ್ತನುಂಡವರು
ತಮ್ಮ ಮುಂಗೈಬಲವ ಕಳೆದು ಕೊಂಡಿಹರು
ಕಣ್ಣು ಬೊಂಬೆಯೆ ಆಗಿ ಕುರುಡು ಗೊಳಿಸುವೆಯಾ?
ನೆರಳು ನೀಡುವ ಸಸಿಯ ಬರಡುಗೊಳಿಸುವೆಯಾ?

ಇನ್ನೊಮ್ಮೆ ಬರುವಿ ನೀ ದತ್ತಕಾಯಾಗಿ
ಕರ್ತವ್ಯಗಳ ತೂಗುಹಲಗೆಗಳನೇ ತೂಗಿ.
ಆಕಾಂಕ್ಷೆ ಅಭಿಮಾನ ಕರ್ತವ್ಯ ಕಾಯಾಸ
ಆದರ್ಶ ಆವೇಶ ಆಕ್ರೋಶ ಅಪಹಾಸ
ಚಾಣಕ್ಯ ಚಂದ್ರಗುಪ್ತರ ಜತೆಯ ರೀತಿ.
ವಿದುಲೆಯಂಥ ಕಠೋರ ಪುತ್ರ ಪ್ರೀತಿ.
ಮಾತುಮಾತಿಗೂ ಈರ್ಷೆ, ಆಶೆ, ಕೆಚ್ಚು.
ಕೊಟ್ಟ ಸಾಲಕು ಕೇಳ್ವ ಬಡ್ಡಿಯೋ ಹೆಚ್ಚು.
ಕುಳಿತವನ ಕಿವಿ ಹಿಂಡಿ ಮೇಲಕೆಚ್ಚರಿಸಿ
ಲೆಕ್ಕ ಕೇಳುವೆ ಪೈಗೆ ಪೈಯ ಸವಕರಿಸಿ.
'ನುಗ್ಗಿ ನಡೆ' ಯೆಂಬ ನಿನ್ನೀ ಪಾಂಚಜನ್ಯ
ಕೇಳಿ ನಡೆಯಲು ತ್ರಾಣ ಉಳಿದವನೆ ಧನ್ಯ!
ಕೊನೆಗಾಲ ಬರುವಿ ನೀ ಹೆತ್ತ ತಾಯಾಗಿ
ಕನಸ ಹಿಂದಿನ ಕನಸ ಬೊಗಳುನಾಯಾಗಿ.
ಮುಗಿಲ ಮೂವಟ್ಟೆಗಳ ಮೂದಲಿಸುವಂತೆ
ನಡೆದಿರಲು ಹೊಕ್ಕುಳಲಿ ವ್ಯಾಕುಲತೆ ಚಿಂತೆ;
ಮರಣವನು ಗೆದ್ದವರು ರಣದಿ ಓಡಿದರು.
ಯದ್ವಾಜಯೇಮ ಯದಿ ವಾನೋ ಜಯೇ ಯು
ಎಂದು ಮಿಡುಕಿತ್ತು ನರ, ಬಿಗಿದಿರಲು ಸ್ನಾಯು.
ರಟ್ಟೆಯೊಳಗಿತ್ತು, ಕಿಪೊಟ್ಟೆಯೊಳಗಿಲ್ಲ.
ಬಿಲ್ಲಿನೊಳಗಿದ್ದ ಎದೆ ರಟ್ಟೆಯೊಳಗಿಲ್ಲ.
ಹೇಡಿ ಮಾಂಸವು ಮನದ ಮಾತ ಜರೆದಿತ್ತು.
ಮುಗಿಲಿಗಾನಿಸಿದ ನಿಚ್ಚಣಿಕೆ ಮುರಿದಿತ್ತು.
ಒಡಲು ಒಡ್ಡುವ ಬಲೆಯ ಕಣ್ಣೆ ನೋಡೀತೆ?
ಬಸಿರು ಬರೆದಿರುವ ಗೆರೆ ಬಾಳು ದಾಟೀತೆ?

ಈ ಹಾಡು ತಿರುಳನ್ನು ಕುರಿತು ಅರಿತವನು
ತಾಯ ಇನ್ನೊಂದು ಮೊಗವನ್ನು ಅರಸುವನು.

ಸಿದ್ಧಾ!

ಸಿದ್ಧಾ!...ಸಿದ್ಧಾ!
ಸ್ವಯಂ ಸಿದ್ಧಾ...ಅರ್ಧಪ್ರಬುದ್ಧಾ...ಸ್ವಸ್ಥಾನಚ್ಯುತಿವಿದ್ಧಾ
ಸಿದ್ಧಾ ಹೊರಟಿದ್ದ
ಕವಲೂರಿಗೆ...

ದಾರಿಯೊ ಬಯಲಾ ನಿರ್ವಯಲಾ.
ಕವಲೇ ಇರಲಿಲ್ಲಾ, ಉದ್ದೋ ಉದ್ದ.
ಹೊರಟಿದ್ದೊ ನೆನಪಿರಲಿಲ್ಲಾ, ಹೋಗುವುದೂ ಅರಿವಿರಲಿಲ್ಲಾ,
ಹೋದದ್ದೇ ದಾರಿ.
ಗತಾನುಗತಿಕ ಪಥಿಕಾ ಅರಸಿದ್ದಾ ಹಿರಿಯರ್ ಕಾಲ್ ಹೆಜ್ಜೆ
ನೆನೆಸಿದ್ದಾ ಅಪ್ಪ ಅವ್ವ ಅಜ್ಜಿ.
ಲುಟುಲುಟನೇ ದಟ್ಟಡಿಯಿಡುವಾ.
ಹೆಜ್ಜೆಯು ಸಾಲದೆ ದಪ್ಪಡಿ ನಡೆವಾ.
ತಿಳಿ ಹರಿಯದ ದಿಗಿಲಲಿ ಹಳಿದಿದ್ದಾ ಅಪ್ರಬುದ್ಧ ಪ್ರಮಾದಾ,
ಹೊರಟಿದ್ದಾ ಕವಲೂರಿಗೆ.

ಕೈಯಲಿ ಕಟ್ಟಿದ ಕರ್ಮದ ಬುತ್ತೀಗಂಟು;
ಹಸಿವೇರಿಸಿ ಬಳಸುತ್ತಿದ್ದಿತು ಭೂಮಿಯನಂಟು.
ಉಂಡರೆ ನೀರಡಿಕೆ.
ಭುಂಜಿಸಿದರು ಮುಗಿಯದ ಚಡಪಡಿಕೆ.
ನೆತ್ತಿಯ ಮೇಲಕೆ ಮೂಡದ ಮುಳುಗದ ಮಧ್ಯಸ್ಥನ ತರಣಿ.
ಕಾಲ್ಬದಿಯಲೆ ಮಾಯಾಜಲದಲೆಗಳ ವೈತರಣಿ.
ಗೊಳಗೊಳಕೆಯ ಫಲಗಳು ಇಬ್ಬದಿಗುಂಟಾ
ಕರೆದವು, "ಬಾ, ಬಾರಲೆ ತುಂಟಾ".

ನೀರಡಿಸಿರುವವನಿಗೆ ಹೆದ್ದಾರಿಯು ಹಂಗೇ?
(ತೃಷ್ಣಾ ದೇವಿಯೆ ಕಾಯಳೆ ತೃಷ್ಣಾಸಂಗೆ?)
ಕುಡಿದಿದ್ದಾ ವೈತರಣಿಯ ನೀರು, ತುಂಟಾ

ಹರಿದಿದ್ದಾ ಹಣ್ಣ.
ಕೈ ಹರಿದಿತ್ತಾದರು ಹಾದರದೊಲು ಮಧುರಾ
ನೋಡೇ ನೋಡುತ್ತಿರೆ ರವಿ
ಹಗಲೇ ಹಾಡಿನ ಪ್ರತಿಭಟನೆಗೆ ಗೊಳಗೊಳಕೆಯು ನೆರಳು.
ಬಲು ಆಸರೆ, ಬಲು ಹಿತಕರ, ವ್ಯಾತ್ಯಾಸವದ ಸವಿ.

ಕರ್ಮವು ಕಟ್ಟಿದ ಬುತ್ತಿ.
ಅನುಭವವೆಂಬುದು ಜೀವಾಣುವು ತಿಂದುಳಿದಿಹ ಒಡಕಲು ತತ್ತಿ.
ಎರಡೂ ತೀರಲು ಜೀವನು ಎಂದಿನೊಲೇಕಾಕಿ.
ಕವಲೇ ಇರದಿಹ ದಾರಿಯೊಳೇನೇನೋ ಸಾಕಿ
ಮುನ್ನಡೆದಿರೆ ಜಗಕಿಡುವನು ಟೊಕಳೆಯು ನೆನಪಿನ ಬಾಕಿ.
ಕವಲೇ ಇರದಿಹ ದಾರಿಯು ಉದ್ದೋ ಉದ್ದಾ.
ಒಬ್ಬೊಂಟಿಗ ನಡೆದಿದ್ದಾ ಅಂತರ್ಮುಖಿ ಸಿದ್ಧಾ.

ಗುಡ್ಡವ ಬಳಸುತ ತೆಗ್ಗಿನ ಬದಿಯುಲಿ ಸಾಗಿತ್ತೋ ಹಾದಿ.
ಏನೋ ಗುರುತಾ! ಎಲ್ಲೊ ಉಪಾಧಿ!
ನಡೆದವ ತಾನೇ ಎಂದರಿವಷ್ಟೇ ಸ್ಮೃತಿಯು.
ಏನೋ ಕಳಕೊಂಡುದ ಹುಡುಕುವ ಕಾತರ ನಯನದ ವ್ಯಥೆಯು.
ಕಾಣತಲಿದ್ದವು-ಕಾಣಕೆ–ಕನಸು–ಬ್ರಮಂತಿಯು ಕಲಬೆರಕೆ.
ಅದೆ ಹಿರಿಯರ ಹರಕೆ.
ಮುಸುಕಾಗಿಯೆ ಕೇಳುತಲಿದ್ದವು ಕವಲೂರಿನ ಮಾತು;
ಕಲ-ಬೆರಕೆಯು ವಿಷಯಾ, ಅರಿಯದ ಭಾಷಾ,
ಸುಳಿಸುಳಿಯುಲಿ ಬರುತಿದ್ದೆವು ಬಾನುಲಿಯುಲಿ ಮಾತು.
ಯಾರೋ ಅಂದರು ಜನನಾ ; ಯಾರೋ ಅಂದರು ಮರಣಾ. . . .
ಇನ್ನಾರೋ ಬಡಿದರು ತಮ್ಮಟೆ; ಯಾರೋ ತಾಶಾ.
ಮದುವೆಯೊ ಮುಂಜಿಯೊ ಮರಣವೊ ಒಂದೇ ಆವೇಶಾ.
ಮರಣೇಚ್ಛೆಯು ನರವೇ ಬದುಕಿನ ಮೆರವಣಿಗೆಗೆ ಪಂಜು.
ಬದುಕಲು ಹಾಕಿದ ಹೊಂಚಾಗಿತ್ತ್ಯೆ ಬದುಕಿಗೆ ಸಂಜು.
ಸ್ಥಿತಿಯುಳಿಸಲು ಮಾಡಿದ ಹವಣಾ ಸ್ಥಿತ್ಯಂತರಕಾಯಿತು ಲವಣಾ. . .
ಕಡಿದಿಹ ಮರ ಚಿಗಿತಿತ್ತೊ. ಕಡಿಯದ ಮರ ಸಿಗಿದಿತ್ತು.
ಸುಖಕೆಂದೇ ಗೈದರು ಭೋಗಾ
ತಮಗರಿಯದೆ ಪಡೆದರು ಬ್ರಸ್ಮೈಸ್ಥಿತಪಃ ಷಡ್ಭಾಗಾ.

ಅಂತಃಕರಣದ ಬುದ್ಧಿ ಭ್ರಮಂತಿ
ಅಳಿದಿದ್ದಿತು ಸಿದ್ಧನ ಮನಸಿನ ಶಾಂತಿ.

ಕೊರಗೆಂಬುದು ಬೆರಗಿನ ಬಳಿ ಕರೆದೊಯ್ಯುವ ಸಾರಿಗೆಯು.
ಬೆರಗೆಂಬುದು ನಿಬ್ಬೆರಗಿನ ಬೇಸಾಯದ ಕೊರಿಗೆಯು.
ಹರಗಿದ ಹೊಲ ಬೇಡಿತು ಅಪರೋಕ್ಷದ ಬೀಜಾ.
ಬೇಡಿತು ಅಂತಃಕರಣವು ಅನುಭಾವದ ಸಂವೇದಾ.
ಸಾಕಾಯಿತು ಅಂತರ್‌ವಾಗ್ವಾದಾ,
ನಡೆದಾ ಕವಲೂರಿಗೆ. . . .

ಕವಲಿಲ್ಲದ ದಾರಿಯೊಳೆಲ್ಲೊ ಒಡಮೂಡಿತು ಕವಲು.
ಕುಣಿದಿತು ನವಿಲು.
ಕಂಡಿತು ಪ್ರಾಸಾದಾ, ಸುತ್ತಲು ತೋಟಾ,
ಪುಟಿ ಪುಟಿಯುವ ಕಾರಂಜಿ
ಎತ್ತೆತ್ತಲು ಹುರಿ ಮಂಜಿನ ಸಂಜೆ.
ಗುರುತಿಲ್ಲದೆ ಸ್ವಾಗತಿಸುವ ಜನಜಂಗುಳಿ ಜಾತ್ರಿ
ಭೋರ್ಗರೆಯುವ ತಾಶೆಬಜಂತ್ರಿ.
ಅಳುವಂತೆಯೆ ನಗುತ್ತಿದ್ದರು, ನಗುವಂತೆಯೆ ಅಳುತಿದ್ದರು
ಹಂದರ ಮೇಲ್ ಹಂದರು, ಬಿದ್ದಿದ್ದವು ಬಿದಿರು.
ಕಂಬನಿಗರೆವರು ಕೂಡಲು ನೆದರಿಗೆ ನೆದರು.
ತೀವಿದ ಕೈಯ್ಯಂದಪ್ಪಿರೆ ಒಂದಾಗುವವೈ
ತುಂಬಿದ ಮೈ ಮೈ,
ಬೇಡೆನೆ ಬಿಡಿಗೊಳ್ಳುವವೈ.
ಬೆಂಬಳಸುವ ವಿಶಾಲಾ ಆಲಾ ಊರ್ಧ್ವ ಮೂಲಾ:
ಒಂದಾಗಿಸಿ ವಿಂಗಡಿಸುವ ನೆಳಲಿನ ಜಾಲಾ. . . .
“ಇದೆ ಖಂಡಿತ ಕವಲೂರೆಂ”ದೆನುತಿರೆ ಸಿದ್ಧಾ
ದೇಹವೆ “ಸೈ” ಯೆಂದಿತೊ ಎನೆ ರೋಮಾಂಚನ-ದ್ಧಾ.
ಕುಣಿದಾಡಿದ ತೊದಲಾಡಿದ ಏನೇನೂ ತಿಳಿಯದಲೆ:
“ಬಾ ಮಾವಾ, ಬಾ ಅಣ್ಣಾ, ನಾ ಸಿದ್ಧಾ, ನಡೆದಿಹೆ ದಾರಿ,
ತಂದಿಹೆ ವಾರ್ತಾ;

ಕೇಳಿರಿ ನನ್ನಯ ಮಾತು; ನೀಡಿರಿ ಪ್ರಾತಿ ಪದಾರ್ಥ;
ಹೊಂದಿಕೆಗಾಗಿಯೆ ತಂದಿಹೆ ಕುಶಲಸಮಾಚಾರಾ.
ಹೇಳುವೆ ವಾರಂ ವಾರಾ. . . .
ತಂದಿಹೆ ನಡೆ ನುಡಿಗಳ ಹರಮುರುಕಾಗಿಪ ಸ್ಮೃತಿ ವಿಸ್ಮೃತಿ ಕರೆಯು;
ಇಡಿಗೊಳಿಸಿರಿ ನನ್ನಯ ಕಥೆಯ.
ಈ ಹಳೆ ಬೀಡಲು ಪಾರಂಬಿಗಳಸ್ತವ್ಯಸ್ತಾ ನನ್ನಯ ಮಸ್ತಕ ಜಟಿಲಾ
ಬಾಚಿರಿ ತೊಡಕಾ; ನೇವರಿಸಿರಿ ಸುಟಿ ಸುಟಿಲಾ.

ತಿಳಿಗೊಳಿಸಿರಿ ಪ್ರಜ್ಞಾಪಟಲಾ."
ಬಿಗಿದಪ್ಪಿದರೆಲ್ಲರು ಬಳಗಾ.
ಕೈ ಮೈ ಚುಂಬಿಸಿ ಅಂಜನ ತುಂಬಿಸಿ ಮಾಯಿಸಿದರು ಗಾಯಾ.
ಕೈಮುಸೆಯ ಬಾಯೆಂಜಲ ತೊಳೆದರು; ಕಾಯಾ
ಹುಣ್ಣಿಮೆಹಾಲ್ತೊರೆಯೊಳು ಎರೆಯುತ ತಂದರು ಚಿರಪ್ರಾಯಾ.
ನೆತ್ತಿಗೆ ಬ್ರಾಹ್ಮೀರಸ ಉಣ್ಣಿಸಿ ತೊಳೆದರು ತರ್ಕವಿತರ್ಕಾ
ತಿನ್ನಿಸಿದರು ಮಧುಪರ್ಕಾ.
ಉಂಡಾ, ಕೈತೊಳಕೊಂಡಾ, ಸಿದ್ಧಾ,
ಪುಷ್ಪಾಚ್ಛಾದಿತಸೆಜ್ಜೆಗೆ ಮೈನೀಡುತ ಮಲಕೊಂಡಾ.
ಕನಸಾಯಿತು ಹುಟ್ಟಿದ ಊರು.
ಮುಂದಿನ ನನಸಾಯಿತು ಕವಲೂರು.

ಕೌದಿ

ಲಕ್ಷಗಟ್ಟಲೆ ನವಿರ ನಾಲಗೆಯ
ಜೊಲ್ಲು ಸೇವಿಸಿದ
ಹಳೆಯ ಸೀರೆ
ನೂರು ತೆರ ವಾಸನೆಯ ರುಚಿನೋಡಿ
ಬಳಿದು ಬಿಳುಪಿಗೆ ಮಸಿಯ
ಪಿಂಜೆದ್ದ ಹರಕುಪಂಜೆ.
ಮಾಲಿನ್ಯದಲಿ ಏಸೋ ಮಾತುಗಳ ಹುದುಗಿಟ್ಟ-
ಲಂಗ, ಲುಂಗಿ, ಶಲ್ಯೆ, ಚಡ್ಡಿ, ಕೋಟು
ಎದೆಯ ಬಡಿತಕೆ ಯಾವಾಗಲೂ ಕಿವಿಗೊಟ್ಟು
ಆಕಾರ ಗೆಟ್ಟ
ಎದೆಕಟ್ಟು
ಎಳೆತನದ ಹಾಲುಂಡ ಕುಲಾಯಿ ಕುಂಚಿಗಿ
ಮುಪ್ಪಿನ ಒಪ್ಪಗೇಡಿತನ ಮೈಗೆ ಬಳಿದುಕೊಂಡ
ಮುದುಕಿಯ ದಾವಳಿ
ತನ್ನಷ್ಟಕ್ಕೆ ತಾನೇ ಚಿಂದಿಯಾಗಿ ಮೈಯಿಂದ
ಹೊರಬಂದ ಅಜ್ಜನ ಅಂಗಿ
ಬಾಸಿಂಗ ಬಿಗಿದು ಕಟ್ಟಿದ ಅಪ್ಪನ
ಎಳೆಯೆಳೆ ಬಿಚ್ಚಿದ ರುಮಾಲು
ಮೊದಲಗಿತ್ತಿಯಾಗಿ ಮೆರೆದ ಅಮ್ಮನ
ಬಣ್ಣಗೆಟ್ಟ ಸೇಸೆ ಸೀರೆ
ಗಾಳಿಯೊಡನೆ ಸಲಿಗೆ ಬೆಳಿಸಿ ಎಷ್ಟು ಸರಿಸಿದರೂ
ಎದೆ ಮೇಲೆ ನಿಲ್ಲದೆ ಜಾರಿ ಹುಡುಗೆಯನ್ನು
ಪೀಡಿಸಿದ ಮೇಲುದ
ನುಚ್ಚುನೂರಾದ ಬನೀನು
ಬೆಳೆದ ಮಗುವಿಗೆ ಸಣ್ಣದಾದ ಗೌನು
ಕಂಕುಳ ಬೆವರಿನಲ್ಲಿ ಮಿಂದು
ಎದೆಯ ಭಾರಕ್ಕೆ ತನ್ನೆದೆ ಸೀಳಿಕೊಂಡ
ಕುಪ್ಪಸ

ರವಿಕೆ, ಜಾಕೀಟು, ಷರ್ಟು ಪರಕಾರ-
(ಸಮ್ಮಿಶ್ರ ಸರಕಾರ)
ಹದಗೆಟ್ಟ ಹಳತೆಲ್ಲ ಸೇರಿ ಹೊಸ ರೂಪಾಗಿ
ಗೈದ ಅವತಾರ
ಮೈತುಂಬ ಜನಿವಾರ
ಒಡಲಲ್ಲಿ ಅಂಗೈಯಗಲದ ಹಂಡಬಂಡ
ಪಟ್ಟಿಗಳು
ನೂರಾರು ಆಶೆಆಕಾಂಕ್ಷೆಗಳ
ಗೋರಿಗಳು
ಇದರ ಉದ್ದಗಲಕ್ಕೆ ಅಂಟಿಹವು
ಆಕಾರ ಕಳಕೊಂಡ ಏಸೋ ಬಿಂಬಗಳ
ಪ್ರತಿಬಿಂಬ
ಇದು–
ಕೌದಿ
ಮೇಲೊಂದು–
ಚುಕ್ಕೆಚಂದ್ರಾಮ ಸೂರ್ಯಸೌರವ್ಯೂಹ
ಮೋಡಮಿಂಚು ಮಳೆಬಿಲ್ಲುಗಳನ್ನೊಳಗೊಂಡ
ತಿಳಿನೀಲ ಬಾನು–
ಕೌದಿ
ಕೆಳಗೆ—
ಹೊಲ ಜಲ ಪೈರು ಬೆಟ್ಟ ಹೊಳೆ
ಕಾಡು ಕಾಲುವೆ ತೋಟಗಳನ್ನೊಳಗೊಂಡ
ದುಂಡು ಭೂಮಿ–
ಕೌದಿ
ಕೌದಿ
?
ಹಳೆಬಟ್ಟೆಯ ಹೊಸ ಹೊದಿಕೆ.

ಜಾಹೀರಾತಿನ ತೇರು

ಕಾಸೀಮ ಟೇಲರನ ಸವಾರಿ
ಕುತ್ತಿಗೆಯ ಮೇಲೆ
ಕಾಲಲ್ಲಿ ಕಾನ್‌ಪೂರ್ ಗದಗ್

ಬಾಟಾ ಕಾರವಾನ್
ಸುತ್ತಿಕೊಂಡಿವೆ ಮೈಗೆ ಬಿನ್ನಿ ಬೆಂಗಳೂರ್
ಬೊಂಬಾಯಿ ಅಹಮದಾಬಾದ
ಕಣ್ಣಿನ ಮೇಲೆ ಗಾಜಿನ ಚಪ್ಪರಹಾಕಿ
ಕುಳಿತಿರುವನು ಡಾ. ಮೋದಿ
ತಲೆಯ ಮೇಲೆ ಶಿವಪ್ಪ ಅಂಡ್ ಸನ್ಸ್
ಕ್ಯಾಪ್ ಮಾರ್ಟ
ಬಾಯಲ್ಲಿ—555, ಮಂಗಳೂರು
ಗಣೇಶ
ಹೊಟ್ಟೆ-ಸಹಕಾರಿ ಗೋದಾಮು
(ಕಂಡವರಿಗೆಲ್ಲ ಸಲಾಮು)
ಜಿಬ್ರಾಡೇರೆ ಹೊಡೆದಿದೆ ಮೇಲೆ-
ಇದು ಜಾಹೀರಾತಿನ
ತೇರು
ಆದರೂ ನಾನು ನನ್ನದೆಂಬ
ಜಂಬದ ಮೇರು.

ಅವಳ ಕಾಗದ

ಹೊಸ ಹುರುಪು ಸಂಸಾರ
ಹೊಸದಾಗಿ ಹೂಡಿದ್ದೆ
ನಾನು ಪ್ರತಿಭಾ ಮನೆಯೊಳಿಬ್ಬರೇನೆ.
ನಿತ್ಯವೂ ನೂತನವು
ಬಾಳುವೆಯು ಸೊಗಸೆಲ್ಲ
ಬಾಳುವೆಯು ನಮಗಾಗ ಮಧುರ ಜೇನೆ.

ಒಂದು ದಿನ ಕಣ್ಮುಚ್ಚಿ
ಮಲಗಿದವರೊಲು ಇದ್ದೆ
ಪ್ರತಿಭೆ ಬರೆಯುತಲಿದ್ದಳೇನೊ ಏನೊ
ಮಲಗಿರುವೆನೆಂದವಳು
ಗುಣಗುಡುತ ಬರೆಯುತಿರೆ
ನಗೆಯ ತಡೆ ಹಿಡಿದೆ ನಾನೆಂತೊ ಏನೊ.

ಕವನಿಸಿದ್ದಳು ತನ್ನ
ತಾಯಿಗೊಂದೋಲೆಯನು
ನಮ್ಮ ಜೀವನವನು ಚಿತ್ರಿಸುತ್ತ.
ನನ್ನ ಹೃದಯವು ಅದನು
ಅವಳಿಗರಿಯದ ಹಾಗೆ
ಜೊಂಪಿನಲಿ ಮಿಂದಿತ್ತು ಮೆಲಕಿಸುತ್ತ.

“ ತಾಯಿ ಬರೆಯುವದೇನು
ಎಂಥವರು ನನ್ನವರು !
ಒಲವವರ ಹೃದಯ ಗಂಗೋತ್ರಿಯಲ್ಲಿ.
ಹುಟ್ಟಿಹುದು, ಕೊಳೆಯಿಲ್ಲ
ಕೊರಗಿಲ್ಲ. ತುಂಬಿಯೇ
ಹರಿಯುವದು ಹನ್ನೆರಡು ತಿಂಗಳಲ್ಲಿ.”

“ ಅವರ ಮೈಕಟ್ಟಿನಲಿ
ದಣಿವು ಎಂಬುದೆ ಇಲ್ಲ
ಎಷ್ಟು ದುಡಿದರು ಏನು ನಗುವರವರು.

ಆದರಮ್ಮಾ ಅವರ
ಕರುಳು ಹುರಿಗೊಳ್ಳುವುದು
ನನ್ನ ಹಣೆಯಲಿ ತೋರೆನಸುವೆ ಬೆವರು."

"ಅವರ ರಸಿಕತೆಯನ್ನು
ನಾನು ಬಣ್ಣಿಸಲೇಕೆ?
ನೀ ಮೊದಲಿನಿಂದಲೂ ಬಲ್ಲೆಯಲ್ಲ.
ದಿನದಿನವು ಹೊಸ ಕವನ
ಹೊಸ ಕತೆಯು ಹೊಸ ಆಟ
ಯಕ್ಷ ಕಲ್ಪನೆಗಳಿಗೆ ಮಿತಿಯೆ ಇಲ್ಲ."

"ನಿನ್ನ ಮನೆಯೊಲು ನನ್ನ
ಮನೆಯು ಹರವಾಗಿಲ್ಲ
ಆದರೂ ನನಗಿಲ್ಲ ತುಸುವು ಕೊರಗು.
ಅವರ ಮನ ಅಗಲಕ್ಕೆ
ಏನು ಸರಿಯಿಹುದಮ್ಮ!
ತೊಳೆದ ಮುತ್ತಿನಹಾಗೆ ಒಳಗು ಹೊರಗು."

"ವಿಶ್ವವಿದ್ಯಾಲಯದ
ಹಾಗೆ ಇದೆ ನಮ್ಮ ಮನೆ
ಅಳಿಯ ಬಡವನು ಎಂದು ಚಿಂತೆ ಬೇಡ.
ಅಪ್ಪನಿಗೆ ಹೇಳಮ್ಮ
ನಾನು ಋಣಿಯಾಗಿರುವೆ
ನಿಮಗೆಲ್ಲವೂ ಸಾಯುವನಕ ನೋಡಾ."

"ಹೆಚ್ಚು ಬರೆಯುವದೇನು
ಒಂದೆರಡು ದಿನ ಬಂದು
ನಮ್ಮ ಸಂಸಾರವನು ನೋಡಿ ಸುಖಿಸು.
ಮಗಳ ಗತಿ ನೆನೆನೆನೆಸಿ
ಕೊರಗ ಬೇಡಿರಿ ಅಮ್ಮ
ಸುಮ್ಮಸುಮ್ಮನೆ ಮನದಿ ಏನೋ ಮುಳಿಸಿ."

ತಡೆದು ಹಿಡಿದಿಹ ನಗೆಯು
ಕಟ್ಟೊಡೆದು ಹೊರಬಿತ್ತು
ಖಿಕ್ಕೆಂದೆ ತುಟಿಕಚ್ಚಿ ಕಣ್ಣ ಬಿಚ್ಚಿ.

ಬೆಚ್ಚಿ ಹುಸಿ ಕೋಪದಲಿ
ನುಂಗುವಲು ನೋಡಿದಳು
ಲಜ್ಜೆಯಿಂದಲಿ ಕೆನ್ನೆ ಕೆಂಪು ಹೆಚ್ಚಿ.

ಹೃತ್ಕುಮುದ ದಲದಲ್ಲಿ
ಬಾಳುವೆಯ ಕುಂಡಲಿಯು
ಪ್ರೇಮಚಂದ್ರಿಕೆಯಲ್ಲಿ ತೊಳಗುತ್ತಿತ್ತು.
ಅವಳ ಬೆರಳುಂಗುರದ
ಕಿರುಹರಳು ನಗೆಸೂಸಿ
ಅನುರಾಗದೈಸಿರಿಯ ಬೆಳಗುತಿತ್ತು.

"ಇಂತಹವೆ ನಿಮ್ಮ ಕವನ?"

ಮೂಡಣಕೆ ಮುದ್ದಿಡುತ ಲಲ್ಲೆಯಲಿ ತೊಡಗಿತ್ತು
ಬಾನ್ದಲೆಗೆ ಹಣೆಯ ಹಚ್ಚಿ
ಮಳೆಬಿಲ್ಲು. ಹಸುಳೆಗಳು ಆಡುತಿರೆ, ನೋಡುತಿವೆ
ಹೂವುಗಳು ಕಣ್ಣ ಬಿಚ್ಚಿ.

ಹುಸಿ ಕೋಪದಲಿ ಬಂದು ಕೇಳಿದಳು ನನ್ನವಳು
"ಇಂತಹವೆ ನಿಮ್ಮ ಕವನ?
ರಾಮಕೃಷ್ಣರ ಹೆಸರು ಅಳಿಸಿ ಹೋಯಿತೆ ಹೇಳಿ
ಸಾಕಿನ್ನು ಹುಚ್ಚು ಕವನ."

"ಮಳೆಯಲ್ಲಿ ಬಂದದ್ದು ಹೆತ್ತದ್ದು ಹೊತ್ತಾಗಿ
ಬಂದದ್ದು ಹಾಡ ಬರೆದು,
ಮನೆಯ ಮಾತನ್ನೆಲ್ಲ ಬಯಲಿಗಿಟ್ಟಿಹಿರಲ್ಲ
ಮುಚ್ಚುವದೆನೆಲ್ಲ ತೆರೆದು."

"ಬುದ್ಧಿಯನು ಕೊಟ್ಟವನು ಏತಕ್ಕೆ ಬಳಸುವದು
ಎಂಬುದನು ತಿಳಿಸಲಿಲ್ಲ.
ನೀವು ದಿನದಿನ ಬರೆದು ಹಾಡಿನಲಿ ಮನೆಮಾತ
ಒಂದನೂ ಉಳಿಸಲಿಲ್ಲ."

"ಹೊರಗೆ ಹೋದರೆ ಏನು ಗೆಳತಿಯರ ಅಣಕು ನುಡಿ
ನಾಚಿಕೆಯು ನನ್ನ ಮುತ್ತಿ
ಹೊರಗೆ ಹೋಗಿಸಗೊಡದು ಹಾಸಿನಲಿ ಮುದುರುವೆನು
ಅಂಗಳದಿ ನಸುವೆ ಸುತ್ತಿ."

"ನಾನು ಹೇಳಿದುದೆಲ್ಲ ಮತ್ತೊಂದು ಹಾಡಾಗಿ
ಬಂದೀತು ಎದೆಯು ಬಗೆದು.
ನಡೆಸಿಕೊಡುವಿರಿ ಒಂದು ಮಾತನ್ನು ದಯವಿಟ್ಟು
ಬೇಡುವೆನು ಬಾಯಿ ತೆಗೆದು."

*   *   *   *

ಕಣ್ಣಿನಲಿ ತಂಬೆಳಕ ಸೂಸುತ್ತ ಕವನಗಳ
ಹಾಡುವಳು ಗೆಳತಿಯರಲಿ
ಪಾಕವಾಗುವದವಳ ದನಿಗೆ ಭಾವದ ಲಹರಿ
ಮೆರೆಯುವದು ಬೆಳತಿಗೆಯಲಿ.

ಮನದಲ್ಲಿ ಮೆಚ್ಚಿಹಳು ನನ್ನ ಹಾಡುಗಳನ್ನು
ಬಾಯಿಂದ ಆಡಬೇಕೆ?
ಮುಂದೆ ಮೆಚ್ಚಿಕೆಯಾದ ಸೋಗು ಹಾಕುವದೇಕೆ?
ಬೆನ್ನಿನಲಿ ನಿಂದೆ ಏಕೆ?

ಬೇರೆ ಸಿಂಗಾರಗಳು

"ನೆರೆಮನೆಯ ಸಾವಿತ್ರಿ ಹಬ್ಬ ಬಂದಿತು ಎಂದು
ಬಂಗಾರ ಕೊಂಡಿರುವಳೆಂದು ನಾನು
ಕೊರಗಬೇಕೆ? ಹೇಳಿ ಏನು ಮಾತಿದು ಹುಚ್ಚು
ಬಂಗಾರ ತಂದರೆಯೆ ಹಬ್ಬವೇನು?"

"ಮನೆಯಲ್ಲಿ ನಿಮಗಾನು ಕರಕರೆಯ ಮಾಡಿದೆನೆ?
ಹೊಸಬಟ್ಟೆಗೆಂದಾರೆ ಪೀಡಿಸಿದೆನೆ?
ನಿಮ್ಮ ಕುಲುಕುಲು ಮೊಗವು ಮಾತ್ರ ಒಂದೇ ಸಾಕು
ಬಂಗಾರ ಬೇಕೆಂದು ಕಾಡಿರುವೆನೆ?"

“ನನ್ನ ಸುಖದೊಳಗಿಡಲು ಹಗಲಿರುಳು ನೀವಿನ್ನು
ತಲೆ ಒಡೆದುಕೊಳ್ಳುವದು ಬೇಡ ನೋಡಿ.
ಮೊದಲಿನಂತೆಯೇ ಮತ್ತೆ ವೇಗದಲಿ ಗೆಲುವಾಗಿ,
ಹೇಳುವೆನು ಈ ಮಾತು ಎದೆಯ ತೋಡಿ.”

“ಸಂಜೆಯಲಿ ದಣಿದವರು ಕಾಸು ಬರುವದು ಎಂದು
ಹತ್ತು ಹುಡುಗರ ತಂದು ಕಲಿಸಲೇಕೆ?
ಬೆಳಗಿನಲು ಅದೆ ಹಾಡು! ನೀವಿಂತು ಬಡವಾಗಿ
ನಮಗೆ ಕಣ್ಣೀರನು ಉಣಿಸಬೇಕೆ?”

ವಿಜಯ ದಶಮಿಯು ಬರಲು ನಾನಿಂತು ಕೊರಗಿರಲು
ಪ್ರತಿಭೆ ತಿಳಿಹೇಳಿದಳು ಇಂತು ನನಗೆ!
ಇಲ್ಲವಳಿಗೆಳ್ಳಷ್ಟು ಹೊನ್ನಾಸೆ! ಹೇಳಿದಳು
ಬೇರೆ ಸಿಂಗಾರಗಳು ಬೇಡ ತನಗೆ.

ಬೇರೆ ಸಿಂಗಾರಗಳು ಬೇಕು ನಮಗೇತಕ್ಕೆ?
ಬಾಳಿನಲಿ ನಮಗೇನು ಕೊರತೆಯುಂಟು?
ಪ್ರೇಮ ನಂದಾದೀಪ ಸವಿಮಾತೆ ಪಕ್ವಾನ್ನ
ಪ್ರೀತಿದಶೆ ಇಹ ಬಾಳ್ಗೆ ಭಾಗ್ಯವುಂಟು.

ನಾನವಳಿಗಾಭರಣ! ನನಗವಳು ಭೂಷಣವು
ಹಸುಳೆಗಳು ಇಬ್ಬರಿಗು ರನ್ನದೊಡವು
ನಮ್ಮ ಮನೆಯೊಳಗಿಹುದು ಬೆಲೆಯು ಕಟ್ಟಲು ಬರದ
ಒಲವು ಹೊನ್ ತುಂಬಿರುವ ರನ್ನಗೊಡವು.

ಪಾರಿಜಾತಕೆ ಮತ್ತೆ ಬೇರೆ ಬಣ್ಣವು ಬೇಕೆ?
ಸಂಪಗೆಗೆ ಸೌರಭದ ಸಾಲ ಬೇಕೆ?
ಒಲವು ಮಲ್ಲಿಗೆ ಮುಡಿದ ಬಾಳಹೆಣ್ಣಿನ ಮುಡಿಗೆ
ಇನ್ನುಳಿದ ಹೂವುಗಳ ಆಸೆಯೇಕೆ?

*　　　*　　　*

ಬಾನ ಕೆಚ್ಚಲು ಕರೆಯುತಿತ್ತು ಬೆಳದಿಂಗಳವ
ಇಳೆಯು ಹಾಲ್ಗಡಲಿನಲ್ಲಿ ತೇಲುತಿತ್ತು.
ಶಾರದ ವಿಭಾವರೀ ಸೌಭಾಗ್ಯ ಮೌನದಲಿ
ಪ್ರೇಮ ಸೂತ್ರಕೆ ಭಾಷ್ಯ ಬರೆಯುತಿತ್ತು.

ಎ. ಚಿಕ್ಕವೀರಯ್ಯ

ಸುಖವೇ!

ಸುಖವೇ !
ಸುಖವೇ !
ಎತ್ತೆತ ಲು ಸೌಂದರ್ಯದ ಮುಖವೆ !
ಹಾ ! ಅನುಭವವೆ !
ಬಾನೊಳು ಬೈಗಿಳಿದಾಟವನಾಡಿರೆ
ಕಠಿಣತೆ ಸುಳಿವಿಲ್ಲ.
ಮರವೊಂದನು ಮುಗಿಲಾಶೀರ್ವದಿಸಿರೆ
ತಲೆ ಬಾಗಿಹುದಲ್ಲ.
ಅರಿಸಿನ ಕುಂಕುಮ ಶೋಭಿತೆಯಾದರು
ದಿಙ್ನಾರಿಯರೆಲ್ಲ.
ಸ್ವರ್ಣಸರೋವರದೆದೆಯಲಿ ಬಣ್ಣದ
ಮುಗಿಲಿನ ಮಂಜುಳ ಕಮಲಗಳು.
ಪಶ್ಚಿಮ ದಿಗ್ಭಾಗದ ಮೇಲ್ಭಾಗದಿ
ತೇಲಿವೆ ಅರಳಿವೆ ರಂಜಿಸಿವೆ.
ಮೌನ ಮಹತ್ತರ ವೇಳೆಯಲಿ,
ಸಂಜೆಯ ಈ ಸುಳಿಗಾಳಿಯಲಿ,
ಸುಖವೇ,
ಸುಖವೇ,
ಎತ್ತೆತ್ತಲು ಸೌಂದರ್ಯದ ಮುಖವೇ !

ನಾರಾಯಣಶೆಟ್ಟಿ, ಸುಜ

ವಿಳಾಸ ತಪ್ಪಿದ ಕಾಗದ

ತಪ್ಪುವಿಳಾಸವನು ಹೊತ್ತ ಅಂಚೆಯ ಲಕೋಟೆ-
ಅದರ ಮೈತುಂಬ ಮುದ್ರೆಯೋ ಮುದ್ರೆ
ಈ ಊರು ಆ ಊರು, ಆ ಹೆಸರು ಈ ಹೆಸರು
ಎಲ್ಲವೂ ಧಿಕ್ಕರಿಸಿ ಗೊಟ್ಟಕೆಸೆಯುತಿರಲು
ಬೇಸರಿಲ್ಲದ ಅಂಚೆ ಅದನಿನ್ನು ಹೊತ್ತು ಸಾಗುತಿರಲು
ಸಾಗಿಹುದು ಪತ್ರ ಆ ಊರು ಏ ಊರ ಯಾತ್ರೆ !
ಪ್ಯಾರಿಸ್ಸು ಬೊಂಬಾಯಿ ಮಧ್ಯ ಜಲಧಿಯಲಿ ಮಿಂದು
ಹಾಲಿವುಡ್ ತಾರಾಸಮೇತ ಜಲಕ್ರೀಡೆಯಾಡಿ
ತಿರುಪತಿಯ ಪುಣ್ಯ ಕ್ಷೇತ್ರದಲಿ ತಲೆ ಕ್ಷೌರಮಾಡಿ
ಕಾಶಿ ರಾಮೇಶ್ವರಾ ಸಾಂಚಿ ಬೃಂದಾವನಾ
ಸರ್ವತೀರ್ಥಗಳ ಸ್ನಾನ ಪಾನವನು ಮಾಡಿ
ಮೇಲುಕೋಟೆಯ ನಾಮ, ನಂಜುಂಡನ ವಿಭೂತಿ
ಎಲ್ಲವನು ಭಯಭಕ್ತಿಯಲಿ ಮೈತುಂಬ ಧರಿಸಿ
ಯಾತ್ರೆ ಹೊರಟಿದೆ ಮುಂದೆ, ಕಂಡುಕಾಣದ ವಿಶ್ವದೆಡೆಗೆ.

ವಿಳಾಸ ತಪ್ಪಿದ ಕಾಗದ
ಯಾರಿಗೂ ಬೇಡದ
ನಾಟ್‌ಪೆಯ್ಡು ಕಾಗದ !

ಕೆಳಗೆ ಉಕ್ಕುವ ಕಡಲು
ಮೇಲೆ ಸುರಿಯುವ ಮಳೆಯು
ಸುತ್ತಲೂ ಅಪ್ಪಳಿಸುತಿರಲು ಗಾಳಿ

ಸಂಜೆಯಾಗಿರಲಂದು
ಮುಂದೆ ಸಾಗಿರೆ ಹಿಂಡು
ಹಾರುತಿದೆ ತೂರಾಡಿ ಒಂಟಿ ಪರವೆ:
ಬಿರುಗಾಳಿ ಮಳೆಯೊಳಗೆ ತೊಪ್ಪು ಒಂಟಿ ಪರವೆ !

ಕುರುಡು ಕರು ತಾಯ ಕೆಚ್ಚಲನರಸಿ
　ತುರುಮಂದೆಯಲಿ ನುಗ್ಗುತ್ತಿರೆ,
ತೊಂಡೆದನಗಳ ಕಾಲ ಒದೆತಗಳ ಮಳೆ
　ಒಂದೆ ಸಮ ಮುಖದಿ ಸುರಿಯುತ್ತಿರೆ
ರಕ್ತಕಣ್ಣೀರು ಕೊಚ್ಚೆರೊಚ್ಚೆಯಲಿ
　ತೊಟ್ಟ ತೊಟ್ಟಿಟ್ಟು ಕರಗುತ್ತಿದೆ.

ಪಾತ್ರತಪ್ಪಿದ ತೊರೆಯು
　ಸಹರ ಮರುಭೂಮಿಯೆಡೆ
　　　ತನ್ನ ಕೂಡುನದಿಯನು ಅರಸುತ್ತಿದೆ.

ಹರಿದ ಮೈ ಲಕೋಟೆಯ ಹೊರಗೆ
　ಇಣಕುತಿರೆ ವಿಲಿಗುಡುತೆ ಒಳಗಿರುವ ಪತ್ರ,
ಹೊತ್ತು ಸಾಗುತಲಿಹನು ಅಂಚೆಯಾಳದನು
　ಕರ್ಮಬದ್ಧ; ಪತ್ರಲೇಖನ ನಿರಾಸಕ್ತ.

ಬರೆದವಗೆ ಅದನು ಹಿಂದೆ ಕಳುಹಿಸಲೆ
ಮೇಲೆ ಅದ ಬರೆದವರ ಕುಲಗೋತ್ರ ಒಂದು ಇಲ್ಲ.
ಇನ್ನೇನು ಸತ್ತಕಾಗದಗಳ ಕಚೇರಿ ಗತಿಯದಕೆ ಎಲ್ಲ.
"ಯಾರು ಕೈ ಬಿಟ್ಟರೂ ನೀ ಕೈಯ ಬಿಡದಿರೊ ರಂಗಾ!"

ಗಾಂಧಿ

'ಇವನೊಬ್ಬ ಎದ್ದ':
ಮುಗಿಲುದ್ದ ನಿಮಿರಿ ಬೆಳೆದ.
ನೆಲದ ನೆಲಗಟ್ಟನೊದೆದೆಲ್ಲೊ ಮುಗಿಲ ಮರೆ ಬಿದ್ದ
ಆಕಾಶ ಕ್ಷಿಪಣಿಯಂತಲ್ಲ;
ಪಾತಾಳದಿಂದೆದ್ದು ನೆಲದೊಳಕ್ಕೆ ಕಾಲೂರಿ
ಬಾನ ಮುಡಿಯೊಳು ಧರಿಸಿ ನಿಂತಂತೆ ಮಂದರಾದ್ರಿ.

ಈ ಹಿಮಾಲಯ ಕಲ್ಪವೃಕ್ಷಕ್ಕೆ
ಮೇಲೆಷ್ಟೊ
ಅದಕ್ಕೂ ಸರಿಮಿಗಿಲು ಬೇರುಂಟು ಕೆಳಗೆ.

ದೇವರ ಮೊಗಕ್ಕೆ ಮೊಗವಿಟ್ಟು ನೋಡಿದ ನೆಲದಮಗ,
ಇವನಿಗೂ ಉಂಟು ರತಿ ಕಾಮ ಮೈಥುನವೆಲ್ಲ:
ಅಷ್ಟೆ ಇವನಿಗೂ ನಮಗು ಸಾಮು!
ಹಾಗೆ ನೋಡಿದರೆ ನಾವೇ ಮೇಲು:
ಅಪ್ಪ ಸಾಯುವವೇಳೆ ಸತಿಯುಪ್ಪಿದ್ದನಿವ
-ಹದಿನಾಲ್ಕರಲ್ಲೆ.
ನಾವೊ ಮುವ್ವತ್ತರಲ್ಲೂ ಬಾಲಬ್ರಹ್ಮಚಾರಿಗಳು,
ಸದಾ ಆತ್ಮರತರು!
ಮಹಲುಗಳ ಸೂರಲ್ಲಿ ತೂಗುಬಿಟ್ಟಂಥ
ಕುಂಡದ ಕಲ್ಪವಲ್ಲರಿಗಳು!
ನಮಗಿಲ್ಲ ನೆಲದಂಟು, ನಾವು ಊರ್ಧ್ವಮೂಲ!
ಹಾಗೆ ನೋಡಿದರೆ ಇವಗಿಂತ ನಾವೆ ಮೇಲು!

ಅಂಬರತಲಕ್ಕೆಗರಿದರೂ,
ಸಾಗರವ ದಾಟಿ ಬಂದರೂ
ಈ ಕಪಿಗೆ ಬಾಲವೊಂದುಂಟು ಇನ್ನೂ.
ಅದನ್ನಿವ ಮುಚ್ಚಿಕೊಳ್ಳಬೇಕೆಂಬ ನಾಗರಿಕ ಬುದ್ಧಿಯೂ ಇಲ್ಲ;
ಅಲ್ಲಿ, ಸಾಗರದಾಚೆ ದೈತ್ಯಸಭೆಯಲ್ಲದನ್ನೆ ಬೆಳಸಿದನಿವನು.
ಸಿಂಬೆ ಸುರುಳಿಯ ಸುತ್ತಿ ಮೇಲೆಗರಿ ಕುಳಿತ:
ತನ್ನ ಬಾಲದ ಮುದ್ದು ಕೆಣಕಲವರು
ಊರೆಲ್ಲ ಉರಿಯಿಂದ ಬೆಳಗಿದನು.
ಬಾಲಸುಟ್ಟಿತೆ?
ಏನೊ!
ಆದರೂ ಎಗ್ಗಿಲ್ಲ ಇವಗೆ;
ಅದ ಕಳಚಿಬಿಡಲೂ ಇಲ್ಲ.
ಬೆಣೆ ಕಳಚ ಹೋಗಿ ಬಾಲ ಮೋಟಾದ
ನಾವೆ, ಮೇಲಿವಗಿಂತ!

ನಮ್ಮಲ್ಲಿ ಕೆಲವರಿಗೆ,
ಲಂಕೆ ಅಯೋಧ್ಯೆಗಳ ನಾಗರಿಕ ಮಂದಿ ಕಂಡು
ಬೆಳೆದುಕೊಂಡಿದೆ ಪ್ರಬಲೇಚ್ಛೆಯೊಂದು:

ನಾವೂ.
ನಾವೂ, ಅವರಂತೆ ಬಟ್ಟೆಬರೆ ಪೋಷಾಕ ಧರಿಸಿದರೆ
ಬಾಲ ಮರೆಸಿಕೊಳ್ಳಬಹುದಲ್ಲ!

ಅಹುದಲ್ಲ ! ಸರಿಯಲ್ಲ !
ಆದರಿವನೊಬ್ಬ ಮುದಿಕಪಿ ಒಪ್ಪನಲ್ಲ !
ಇವನಿಂದ ನಮಗೆ ಪ್ರಗತಿಯೆ ಇಲ್ಲ !
ತಥ್ ! ಹಾಳು ಶನಿ ! !
ಇದನ್ನೆ ಪೂರೈಸಿಬಿಡುವ ?
ಅಹುದು, ಅದೂ ಸರಿಯೆ ! . . . . . .

ಏನಾದರೂ ಸರಿ, ನಮ್ಮಂಥ ಬಾಲರಿಗೆ
ಇವನಿಂದ ಸ್ಫೂರ್ತಿ:
ನಾವೂ ಸಹ ಬಾಲ ಬಿಡಬಹುದು;
ಮೈಲು ಮೈಲುದ್ದ ಬಿಟ್ಟೆಳೆದಾಡಬಹುದು.
ಇವನಿಂದ, ನಮ್ಮ ಕುಲಕ್ಕೆಲ್ಲ ಒಂದು
ವಿನಾಯಿತಿ, ರಹದಾರಿ, ಮಾಫಿ.
ನಾವೆಲ್ಲೆ ಚಿಗಿದರೂ, ಯಾವ ಮರ ಮುರಿದರೂ
ಯಾರ ಮನೆ ಹೆಂಚನಿಳುಕಿದರೂ ನಮಗಿಲ್ಲ ಭೀತಿ !

ಹೆಣ್ಣು

ವಾತ್ಸಲ್ಯದ ದೇವಾಲಯ
ಪ್ರಣಯದ ಭೋಗಾಲಯ
ನಿನ್ನೀ ತುಂಬಿದೆದೆ !
ಕಂದಮ್ಮಗೆ ಬತ್ತದ ಸೊದೆ
ಒಲದಿನಿಯಗೆ ಸೊಗದ ಮೆದೆ
ನಿನ್ನೀ ತುಂಬಿದೆದೆ !

ಆ ಎಡೆ ಕಂದಗೆ ಈ ಎಡೆ ನಲ್ಲಗೆ
ಹಾಲೂಡುವೆ ಎದೆತೆರವೇ !
ರತಿಯಾಗುವೆ ನೀ
ಒಂದೆ ಮುಹೂರ್ತದಿ
ತಾಯಾಗುವೆ !

ಜೀವಾಗಮನದ್ವಾರವೆ
ಹೋಮಾಗ್ನಿಯ ಅಗ್ನಿಷ್ಟಿಕೆಯೆ,

ದ್ವೈಧೀ ಭಾವವನಿದ ನೀ
ತಾಳುವೆಯೆಂತಹ ಬಾಳುವೆಯೆಂತು ?

ಗಂಡನ ನೀ ಮಗುಮಾಡಿದೆ
ನಮಿಸುವೆ ನಾ ನಿನಗದಕೆ
ನಿನ್ನ ವಿಲಕ್ಷಣ ಅಭಿನಯಕೆ
ಆ ಸೃಷ್ಟಿ ವಿಚಿತ್ರ ವಿಸ್ಮಯಕೆ !

ಅರವಿಂದ ನಾಡಕರ್ಣಿ

ನಾವಿಗನ ಹಾಡು

ಕಡಲ ತೆರೆಯ ಜೋಕಾಲಿಯಾಟ ಆಡುವದೊ ಬಾಳದೋಣಿ.
ಪೂರ ಬರಲಿ ಬಿರುಗಾಳಿ ಬರಲಿ ನಾವಿಗನದೊಂದೆ ವಾಣಿ.

ಬೆಳ್ಳಿನೊರೆಯು ನೂಪುರದ ಕಿಂಕಿಣಿ ನಿನಾದ ಕಾಲಿನಲ್ಲಿ
ದಣಿದ ಮೈಗೆ ಮೆಲುಗಾಳಿ ಮುದ್ದು ಅಲೆ ತುಮುರ ಹಾಲಿನಲ್ಲಿ.

ರತ್ನ ಕಿರಣ ಕೈಹುಟ್ಟು, ಮಿಸುನಿ ಮೀನುಗಳ ಕೂಟ ಮುರಿದು,
ನಾವೆ ದೂಡುತಿರೆ ದೂರ ಬರುವದೋ ಮೋಡ ಹಿಂಡು ಒಂದು.

ಅದರ ಹಿಂದೆ ಸುಳಿಗಾಳಿ ಹಿಂದೆ ಅಭ್ರಾಳಿ ಹಿಂದೆ ಗಾಳಿ
ಹೆಳಲ ಹಿಸಿದು ಕಿಡಿಗಣ್ಣ ಕಿಸಿದು ನಿಲ್ಲುವಳೊ ರುದ್ರ ಕಾಳಿ.

ನನ್ನ ಬಾಳ ಹರಗೋಲನುಳಿಸೆ ನಾನೊಬ್ಬನಿಂದು ಧೀರ.
ಅಲೆಯ ಪ್ರಳಯದಲಿ ಯಾರು ಬರುವರೋ ತೊರೆದು ಕಡಲತೀರ.

ಸಾಗುತಿರಲಿ ಮುಂದಾಗುತಿರಲಿ ಹರಗೋಲು ತೆರೆಯಮೇಲೆ.
ಅದುವೆ ನನ್ನುಸಿರು ಉಳಿವು ಅಳಿವು ಇವು ಎಲ್ಲ ದೊರೆಯ ಮೇಲೆ

ಆರ್. ಜಿ. ಕುಲಕರ್ಣಿ

ಬಲ್ಲವರು

೧

ಕಾಲಿನ ಕಣಿವ್ಯಾಗ ಕಳ್ಳರ ಕೈಸೆರೆ
ಬಿಡಿಸುವರಾರಾರ ?
ಟೊಂಕದ ಸುಂಕದ ಕಟ್ಯಾಗ ಸಿಕ್ಕರ
ಉಳಿಸುವರಾರಾರ ?

೨

ಒಡಲಿನರಣ್ಯದಿ ಒರಲುವ ಹಸುವನು
ಪೊರೆಯುವರಾರಾರ ?
ಎದೆಯಾಗ್ಬುದುಗಿದ ಬಿದಿಗಿಯ ಚಂದ್ರನ
ತೋರುವರಾರಾರ ?

೩

ಬಿದಿಗಿಯ ಚಂದ್ರನ ಬೆಳಸುವ ಸೂರ್ಯನ
ತಿಳಿಸುವರಾರಾರ ?
ಜಾನಕಿ ಜೀವನ ರಾಜಾರಾಮರೆ
ಅಲ್ಲದೆ ಇನ್ಯಾರ ?

ಬಿರುದು ಹೊತ್ತಾನ

ಬಿರಿದು ಹೊತ್ತಾನ
ನಮ್ಮ ಸ್ವಾಮೀ
ಬಿರುದು ಹೊತ್ತಾನ
ಬಿರಿದು ಹೊತ್ತಾನ. . . .॥

ಮಣ್ಣಿನ್ಯಾಗ ಬೀಜ ಬಿತ್ತಿ
ಹಣ್ಣಮ್ಯಾಲ ತರತೀನಂತ ॥

ಬಿರುದು ಹೊತ್ತಾನ
ನಮ್ಮ ಸ್ವಾಮೀ
ಬಿರುದು ಹೊತ್ತಾನ
ಬಿರುದು ಹೊತ್ತಾನ

ನಿಂತ ನೀರ ಮೇಲಕೆತ್ತೀ
ಮಳೆಯ ಮರಕ ಕರೆವೇನಂತ ॥

ಬಿರುದು ಹೊತ್ತಾನ
ನಮ್ಮ ಸ್ವಾಮೀ
ಬಿರುದು ಹೊತ್ತಾನ
ಬಿರುದು ಹೊತ್ತಾನ

ಮರದ ಹಸಿರ ತೋಳಿನ್ಯಾಗ
ಕೆಂಪುಗಿಣಿಯ ನಿಟ್ಟೇನಂತ . . . .

ಬಿರುದು ಹೊತ್ತಾನ
ನಮ್ಮ ಸ್ವಾಮೀ
ಬಿರುದು ಹೊತ್ತಾನ
ಬಿರುದು ಹೊತ್ತಾನ

ಮುದ್ದುಗಿಣಿಯ ಮುಂದ ನಿಂತೂ
ನುಡಿಸತೇನೀ ರಾಮನಂತಾ. . . .

ಬಿರುದು ಹೊತ್ತಾನ
ನಮ್ಮ ಸ್ವಾಮೀ
ಬಿರುದು ಹೊತ್ತಾನ
ಬಿರುದು ಹೊತ್ತಾನ.

ಚಂದ್ರಕಾಂತ ಕುಸುನೂರ

ನೊಣ

ಕ್ಷಣ-ಒಂದು ನೊಣ
ಕೊಡುವದು-ಆಯುಷ್ಯದ
ಅನ್ನದ ಮೇಲೆ
ಅದು ಇಟ್ಟ
ಕೊಳೆ ತಿಂದು
ಬದುಕುವರು
ಯಾರಿಲ್ಲಿ?
ಹತ್ತಾರು ರೋಗಗಳಿಗೆ
ಒಂದು ನೊಣ
ಒಂದು ಕ್ಷಣ
ತಾಯಿ–ತಂದೆ
ಇದ್ದವರು ಹೇಳುವರು
ಕ್ಷಣ (ನೊಣ) ದ ಮಹಾತ್ಮೆ
ಕ್ಷುದ್ರ ರೆಕ್ಕೆಯ ಕೀಟ
ಇಷ್ಟೊಂದು ಬಲಶಾಲಿ
ಎಂದು ಕೊಂಡಾಡುವರು
ಕೀಟ ಜಾತಿಯನು
ಬಂದು ಅಂಗೈಮೇಲೆ
ಕುಳಿತಿರುವ ಕ್ಷಣ (ನೊಣ) ವನ್ನು
ಮತ್ತೊಂದು ಕೈಯಿಂದ
ಬಡಿದರಾಯಿತು ಎಂದು
ಫಟ್ಟನೆ ಬಡಿದೆನು
ಹಾರಿ ಹೋಯಿತು ಕ್ಷಣ
ಸತ್ತು ಬಿದ್ದಿತು ನೊಣ
“ಸತ್ತವನ ಆತ್ಮಕ್ಕೆ ಶಾಂತಿಸಿಗಲಿ.”

ಸುಗ್ಗಿ

ಸಮಯ ನೇಗಿಲು
ಹಗಲು ರಾತ್ರಿಗಳ–ಜೋಡೆತ್ತುಗಳು–
ಜನ್ಮ, ಮರಣದ–ಸುಗ್ಗಿ ಎರಡು–
ಸಾಗುವಳಿ ನಡೆದಿದೆ–ನಿರಂತರ–
        ನಾವು? ಬೀಜಗಳು–
ಜನ್ಮ–ಮರಣದ ಸುಗ್ಗಿಯಲ್ಲಿ–ಬಿದ್ದು
ಬೆಳೆದು,
ಅಳಿದು,
ಹೋಗೋಣ.

ದೇವೇಂದ್ರಕುಮಾರ ಹಕಾರಿ

ಬೇಡ ನಿನ್ನಯ ಕರುಣೆ

ಮೂರಾಗ ಬಯಸುವೆನು ಮುಕ್ಕಾಗ ಬಯಸುವೆನು
ಸಿಕ್ಕು ನಿನ್ನಯ ಪಾದತುಳಿತದಲ್ಲಿ!
ನೂರಾಗ ಬಯಸುವೆನು ನುಗ್ಗಾಗ ಬಯಸುವೆನು
ಸಿಕ್ಕು ನಿನ್ನಯ ಕೊನೆಯ ಕುಣಿತದಲ್ಲಿ!
ಪರಪರನೆ ಸುಲಿಯೆ ನಾ ತೊಗಲಾಗ ಬಯಸುವೆನು
ಸಿಕ್ಕು ನಖಗಳ ಕರುಣ ಸುಲಿತದಲ್ಲಿ!
ಕರಕರನೆ ಉರಿದು ಮೈಬೂದಿ ನಿನಗಾಗುವೆನು
ಪಕ್ಕಾಗಿ ಹಣೆಗಣ್ಣ ಬೆಂಕಿಯಲ್ಲಿ!
ಮಿರುಮಿರುಗುತಿಹ ಹಾವ ಹೆಡೆಯಾಗ ಬಯಸುವೆನು
ಹೆಕ್ಕಿ ನಂಜನು, ಕೊರಲ ಚೆಲುವಿನಲ್ಲಿ!
ನೂರುನೋವುಗಳೊಡನೆ ಮೌನಗರತಿಗೆ ತುಡಿಸಿ
ನಂದಿಯಾಗುವೆ ನಿನ್ನ ಸೇವೆಯಲ್ಲಿ!
ಹರಿದು ಬರುತಿಹ ಕರುಣ ತೊರೆಯಾಗ ಬಯಸುವೆನು
ಏರಿ ನಿನ್ನಯ ಜಟಾಜೂಟದಲ್ಲಿ!
ಎಳನಗೆಯ ಸಿಂಗಾರ, ಪೆರೆಯಾಗ ಬಯಸುವೆನು
ಸೇರಿ ನಿನ್ನಯ ಮುಡಿಯ ಜಡೆಗಳಲ್ಲಿ!
ಬೇಡ ನಿನ್ನಯ ಕರುಣೆ ಕೋಟಿ ಸಲ ತುಳಿದರೂ
ಬಿಡದೆ ಮೂಡುವೆ ಬಯಲ ಭಾವದಲ್ಲಿ!
ಈ ಬಾಳ ಬಿತ್ತರದಿ ಮತ್ತೆ ನಾನಳಿದರೂ
ಕೂಡಿಬರುವೆನು ಪ್ರಾಣತೇಜದಲ್ಲಿ!

ಗೀತ-ಪ್ರಭಾತ

ಋತುಚಕ್ರದಂತರದ ಶ್ರುತಿ ಸಂಚು ಹೂಡಿ
ಬೀಸಿರಲು ಇಂದ್ರಜಾಲ,
ಬಾನಗೂಡೊಳು ಕುಳಿತು ಕಣ್ಬಿಟ್ಟು ನೋಡುತಿವೆ
ಚಿಕ್ಕೆ-ಹಕ್ಕಿಗಳೆಲ್ಲ ಜೋಡಿ ಜೋಡಿ.

ಮೆಲ್ಲಮೆಲ್ಲನೆ ಗುಟುರು ಗುಟುರುಗೂಂ ಗುಟುರುಗೂಂ
ಸಿಂಬಿ ಸುಳಿ ಬಿಚ್ಚಿ,
ಉಲಿವ ತುಪ್ಪುಳನವುರು ಮೈಗೆ ಸೋಕಿ,
ಚುಂಚಿನಿಂಚರದಲ್ಲಿ ಹೊಂಚು ಹಾಕಿ
ಮತ್ತೆ . . . . .
ಮತ್ತೆ ಬೆಚ್ಚನೆ ಮೌನ; ಬಿಚ್ಚಿಹೊದೆದು,
ತಂದ್ರಿ ಬಿಚ್ಚಿಹೊದೆದು,
ದಿಟ್ಟಿಸುತ, ಹಕಿಯು ಟಿಕಿ ಟಿಕ್ಕಿಯನು ಹಚ್ಚಿ;
. . . .
ಇರುಳ-ಬೇಡನು ಬಿಟ್ಟ ಬಾಣ ಕೊರಳಿಗೆ ನಟ್ಟು
ದೊಪ್ಪೆಂದು ಕೆಡೆಕೆಡೆದು ಕೊರಗಿ ಕೊರಗಿ
ನೆಲದ ತೊಡೆ ಮೇಲೊರಗಿ
ಹೊರಳುತಿರೆ; ಕರಗಿ,
ಕ್ಷಿತಿಜವಾಲ್ಮೀಕಿಯೆದೆಯಿಂದ ಚಿಮ್ಮಿದ ಗೀತ,
ಸುಪ್ರಭಾತ.

ಎಚ್. ಎಂ. ಮರುಳಸಿದ್ಧಯ್ಯ

೨. ನಾಗಕನ್ಯೆಯರು

ಚಳಿಯ ಗಾಳಿಯ ನವುರಾದ ಸುಳಿವು
ಹಣ್ಣಾದ ಗೋದಿ ಬಣ್ಣದ ಹುಲ್ಲ ಬಾಗು, ಬಳುಕು,
ಹದವಾದ ಹೂಬಿಸಿಲು.

ಒಳಗೊಳಗೆ ಸತ್ತು, ಸಾಯಿಸಿ, ಬೇಸತ್ತು
ಬಂದಿರಬೇಕು ಮೈದಾನಕೆ
ಹತ್ತಾರು ನಾಗಕನ್ಯೆಯರು
ಮಿಂಚು ಮೈ ಕಣ್ಣು ಕೈಯವರು.

ಸಳಸಳನೆ ಹರಿದಾಡಿ
ಮೈ ಮುರಿದು, ನೆಟಿಕೆ ಮುರಿದು
ತಂಗುಳನೆ ತಿರುತಿರುವಿ ಮೆಲುಕಾಡಿ
ಬಾಯಿಯಲೆ ಅವರಿವರ ಹಲ್ಲು ಮುರಿದು
ಹೆಡೆಯ ತೂಗುವ ಸೊಗಸು
(ಬಿಡುಗಡೆಯ ಹೊಚ್ಚ ಹೊಸತು)
ಕದ್ದಾದರೂ ಹತ್ತಿರವೆ ನೋಡಬೇಕು.

ನಾನತ್ತ ಸುಳಿದೆ
ಅದಕೆಂದೆ:
ಅಡಗಿಬಿಟ್ಟರು ಸರಿದು ಸರಸರನೆ
ಅಲ್ಲಲ್ಲೆ ಕಂಡ, ಕಂಡುಂಡ ಬಿಲಗಳಲೆ
ಶರಣು ಶರಣಾಗಿ ಸಂಪ್ರದಾಯಕ್ಕೆ.

ನಾನು ಬಲ್ಲೆನು ಅವರ ಕುಲವನ್ನು
ಮತ್ತವರ ವೃತ್ತಿಯನ್ನು;
ನನ್ನಂಥ ನೂರಾರು ಜನರನ್ನು
ಕಚ್ಚಿ ಹೀರಿದ ಚರಿತೆಯನ್ನು.

ಆದರೂ ಅಂಜಿದರು
ನನ್ನ ಕಣ್ಣಲಿ
ಗರುಡಗೆರೆಯನು ಕಂಡರೇನು?

೧. ಪ್ರವಾಸ

ಮೈತುಂಬ ತರು, ನಿಮಿರಿ
ನಿಂತಿರೆ ತುರುಗಿ,
ಬಟ್ಟ ಮಲೆಗಳಲಿ
ಹಾವು ಸುತ್ತಿನ ಹಾದಿಯಲಿ
ಹರಿದಾಡಿದೆನು,
ಟ್ರಕ್ಕು ಬಂದಪ್ಪಳಿಸುವ
ಹೆದರಿಕೆಯು
ಇದ್ದರೂ ಒಳಗೊಳಗೆ.

ಒಂದೆ ಗೇರಿನಲಿ ಏರುತಿಹ ಬಸ್ಸು
ತಲೆ ತಿರುಗಿಸಿತು, ಧಿಮ್ಮೆನಿಸಿ:
ದೂರದೂರದಲಿ ಮಂಜುಮುಸಕಿದ ಸಾಗರ
ಕಟ್ಟೊಡೆದ ಎದೆಯ ಹರವು.

ಬಸ್ಸಿಳಿದು
ಮಣ್ಣಿನಲಿ ಮಣ್ಣಾಗಿ
ಮಂಡಿಯೂರಿದೆ ಕಾರಿನಲಿ:

ಮಣ್ಣ ಮಾಂಸವನುಂಡೆ
ಮಾಡಿ, ಕೊರೆದು ಇಟ್ಟಿಗೆ
ಇಟ್ಟ ಗೋಡೆಯ ಕಟ್ಟು
ಹೊಲವ ರಕ್ಷಿಪ ಪಾಗಾರ
ಅದರೊಳಲ್ಲಲ್ಲಿ ದಣಪೆ
ಸಜ್ಜನರಿಗಷ್ಟೇ ದಾರಿ
ಒಳಹೊಕ್ಕ ಮೇಲೆಂತಿದ್ದೊಡೇನು !

ದಾರಿಯಕ್ಕಪಕ್ಕಗಳಲ್ಲಿ
ತೋಲಾಂಡೆಯಿಂದೆತ್ತಿ ಬೆಳೆದ ಗರಿ
ಬೆದೆ ನಿಮಿರಿ,
ಬೆಮರ ಹನಿ ಬೆಳಗುವುದು ಗದ್ದೆಯಲ್ಲಿ.

ಅಲ್ಲೆಲ್ಲೊ ದೂರದಲಿ
ಹಸುರುಗುವ ಮನೆಯಿಹುದು,
ಗುಹಾಂತರಾಳದಲಿ;
ದಾರಿ ಬಳಸು.
ಅವರಿವರ ಕೇಳಬೇಕು,
ಅಪ್ಪಅಣ್ಣರ ಒಪ್ಪಿಗೆಯು ಬೇಕು,
ಕಾರಿನಲಿ ಬುರ್ರನೇ ಹೋದಡೇನು
ಸುತ್ತಬೇಕು:
ಮುಂದು ಹಿಂದಕೆ,
ಹಿಂದು ಮುಂದಕೆ,
ಅಷ್ಟಷ್ಟೆ ಸರಿಸಬೇಕು, ಸರಿಯಬೇಕು.

ಎದ್ದ ಧೂಳೆಲ್ಲ ಮೂಗುಬಾಯಿಯ ತುಂಬಿ
ತಕಪಕನೆ ಕುದಿವ ರಕ್ತ
ಮುದ್ದೆಯಾದೊಡೆ ಏನು ತಣ್ಣನೆ
ಮನೆ ಸೇರಿದೊಂದಾನಂದ
ಏರಿಳಿದು, ಸುತ್ತಿ ಬಂದುದಕೆ ಸಾರ್ಥಕ:
ಬಾಳೆಸೀರೆಯ ಕಳೆದು ನುಂಗಬಹುದು,
ಹೆಣ್ಣಕಡಿಯಿಂದ ಸೀಯಾಳ ಹೀರಬಹುದು.

* * * *

ಉತ್ತರ ಕನ್ನಡ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಕೆಲವು ಶಬ್ದಗಳ ಅರ್ಥ:

೧. ಪಾಗಾರ = ಪ್ರಾಕಾರ
೨. ದಣಪೆ = ಪಾಗಾರದಲ್ಲ ಒಳಗೆ ಹೋಗಿಬರಲು ಮಾಡಿರುವ ಬಾಗಿಲು
೩. ತೋಲಾಂಡೆ = ಏತ
೪. ಬಾಳೆಸೀರೆ = ಬಾಳೆಹಣ್ಣಿನ ಸಿಪ್ಪೆ
೫. ಸೀಯಾಳ = ಎಳೆತೆಂಗಿನಕಾಯಿ
೬. ಹೆಣ್ಣಕಡಿ = ತೆಂಗಿನಕಾಯಿಯನ್ನು ಒಡೆದಾಗ ಆಗುವ ಎರಡುಭಾಗಗಳಲ್ಲಿ ಮೂರು ಕಣ್ಣು ಗಳಿರುವ ಭಾಗಕ್ಕೆ ಹೆಣ್ಣುಕಡಿ ಎಂತಲೂ, ಇನ್ನೊಂದಕ್ಕೆ ಗಂಡುಕಡಿ ಎಂತಲೂ ಕರೆಯ ಲಾಗುತ್ತದೆ.

ಯು. ಆರ್. ಅನಂತಮೂರ್ತಿ

ರಾಜನ ಕಳವಳದ ಪದ್ಯ

ಬಳಲಿ ಬಾಯಾರಿಕೆ ತರಳ
ಜನ್ಮದಾಚೆಯ ಕೊನೆಯ ನೆನಪು-ಯಕ್ಷನ ಕಾಟ.
ದಾಹಾಂಧದಾತುರದಿ
ಬೊಗಬೊಗಸೆ ಜೀವನದಿ ನೀರನೆತ್ತಿ ಕುಡಿದರೆ ನನ್ನ ಕಣ್ಣು ಕಂಗಾಲು.
ನಚಿಕೇತ ಶಿಶುಪ್ರಶ್ನೆಗೊಲಿದು ಬಾಗಿದ ದೈತ್ಯ
ಪ್ರಾರಬ್ಧ ಕರ್ಮಯಮ ಕೈಯೊಡ್ಡಿ ನಿಂತಿರಲು
ಎದೆಯಂದತಮ ಬೆದಕಿ ಆಳದಾಳದ ಕೊಳದಿ
ಜೀವ ಹಂಸದ ಗೀತೆ, ಮುರಲಿ ದನಿ.
ಭ್ರೂಣ ನಿದ್ರೆಗೆ ಜಾರಲದರ ನೆನವರಿಕೆ ಕನವರಿಕೆ.
ಮಾಂಸಮೆತ್ತುತ ಮರಸುವಮ್ಮನೆದೆ ಲಾಲಿಯಲಿ
ಎಲಬುಗೇರಿದೆ ನಾನು.
(ಶಿಲುಬೆಗೇರಿದ ಕ್ರಿಸ್ತ.)
ಮೈಯ ನರನರದ ಸಿಕ್ಕಿನಲಿ ಬೋಧಿಸಸಿ ಬೇರು ನಾಟಿರಲು
ತತ್ತರಿಸಿ.
ಕುಡಿಕುಡಿಯ ಚಿವುಟಿದೆನು ಬುದ್ಧನೊಲವಿಗೆ ಬೆದರಿ.
ಯಕ್ಷಪ್ರಶ್ನೆಯ ನೆನೆದು ಥರಥರನೆ ನಡುಗೆ ಎದೆ
ಮೋಹ ಮಧುವೀಂಟಲೆತ್ತಿದೆನು ಬಯಕೆ ಬಟ್ಟಲ-
ತುಟಿಗೆ-
(ಎತ್ತಿದನು ಸಾಕ್ರಟೀಸ್ ಹೆಮ್ಲಾಕನು.)
ಮೋಹಮಧುಮತ್ತ ನಿದ್ರಾಲೋಲದಾಳದಲಾಗ ಬೋಧಿ ಎಲೆ
ಒಣಗಿ ಉದುರಿರಲು
ಎದಿರೆ ಹಾಜರು ಸಾವು.
ಬೆದರಿ ರಾಮಾ ಎಂದೆ.
('ಹಾರಾಮ' ಎನೆ ಬಾಪು ಯುಗ ಜಿಗಿದ-ಯುಗಪುರುಷ !)
ನಾನೊ ?
ಬಯಕೆ ಕವಣೆಗೆ ಸಿಕ್ಕು
ಒಡನೆ ಜನನಿಯ ಜಠರ ಹುಡುಕಿ ಹೊರಟೆನು ಮತ್ತೆ.
ಜನುಮ ಜನುಮಕು ಬೆಳೆದ ನೆನಪು ಕಿಚ್ಚಾಗಿರಲು

ಎದೆಯ ಕಗ್ಗವಿಯಲ್ಲು ಜ್ವಲಿಪ ಜ್ಯೋತಿರ್ಲಿಂಗ.
ಬಯಕೆಯುರಮನೆಯಲ್ಲು ಬೋಧಿವೃಕ್ಷದ ಸುಯ್ಲು.
ಮಿದುಳ ತಳಮಳದಲ್ಲಿ ಕಳವಳದ ದನಿಯೊಂದು:
ದಿನಮಪಿ ರಜನೀ ಸಾಯಂಪ್ರಾತಃ
ಶಿಶಿರ ವಸಂತೌ ಪುನರಾಯಾತಃ
ಕಾಲಃಕ್ರೀಡತಿ ಗಚ್ಛಾತ್ಯಾಯುಃ
ತದಪಿ ನಮುಂಚತ್ಯಾಶಾವಾಯುಃ.

ಕೆ. ವಿ. ಸುಬ್ಬಣ್ಣ

ಎನ್ನ ಮುದ್ದಿನದಲ್ಲದಿನ್ನಾರವು

ಹಿಂದಿನಿಂದಲೆ ಬಂದು ಕಣ್ಣಿಗೊತ್ತಿದ ಕೈಯಿ-
    ದೆನ್ನ ಮುದ್ದಿನದಲ್ಲದಿನ್ನಾರವು?

ಮೂಕ ವೀಣೆಯ ಮಿಡಿದು ಕೊರಡ ಕುಡಿಯೊಡೆಸಿರುವ
    ವೀಣಾಪ್ರವೀಣೆ, ನಿಡು ಬೆರಳುಗಳಿವು.
ನುಡಿಯಿಸಿದ ತಾನತಾನದ ಗುಂಗು ಮೆಯ್‌ದುಂಬಿ
ಬೆರಳ ನಾಡಿಯ ರಕ್ತವದರ ಸರಿಗಮಪದನಿ-
    ಯನು ಗುಣಿಸಿ ಗುಣುಗುಣಿಸಿ ಸಾಗಿನಡೆದಿರಲು
ಹಿಂದಿನಿಂದಲೆ ಬಂದು ಕಣ್ಣಿಗೊತ್ತಿದ ಕೈಯಿ-
    ದೆನ್ನ ಮುದ್ದಿನದಲ್ಲದಿನ್ನಾರವು?

ನಿನ್ನ ದೇಹದ ಚೆಲುವ ಮುತ್ತಿಡುವ ಕಣ್ಣುಗಳ-
    ನೊತ್ತಿ ಅಲ್ಲಿಯು ಮತ್ತೆ ಚೆಲುವ ಕೈಗಳನು
ಮುಚ್ಚುಗಣ್ಣಿಗೆ ಹಚ್ಚಿ ಮೆಯ್‌ರಕ್ತ ಜಂಗುಟ್ಟ-
ಲದರ ಬಿಸಿ ತಾಕಿಹುದು; ಹರಳುಂಗುರದ ಬೆರಳು
    ಪುಳಕಗೊಂಡದಿರುತಿರೆ ಮಿಲನಕಾತರದಿ
ಹಿಂದಿನಿಂದಲೆ ಬಂದು ಕಣ್ಣುಮುಚ್ಚಿದ ಕೈಯಿ-
    ದೆನ್ನ ಮುದ್ದಿನದಲ್ಲದಿನ್ನಾರವು?

ಕೆನ್ನೆ ತಾಕಿರುವ ಕೈಬಳೆಗಳುಸಿರಿವೆ ಕಿವಿಗೆ
    ತನಗೆ ಸೌಂದರ್ಯಚೇತನವನಿತ್ತ
ತನ್ನ ಒಡತಿಯ ಹೆಸರ; ಅಬ್ಬಬ್ಬ, ಎಲೆ ಜಾಣೆ!
ಗಾಳಿ ತಡೆದೀತೇನೆ ಹೆರಳ ಮಲ್ಲಿಗೆ ಮುಗುಳ-
    ಗಂಪನೆನ್ನೆಡೆತರದೆ? ಇದು ಹೊಸದೆ ನನಗೆ?
ಹಿಂದಿನಿಂದಲೆ ಬಂದು ಕಣ್ಣುಮುಚ್ಚಿದ ಕೈಯಿ-
    ದೆನ್ನ ಮುದ್ದಿನದಲ್ಲದಿನ್ನಾರವು?

ಹಹ್ಹಹಹ! ಹೇಗಾಯ್ತು? ನೀನೆ ಸೋತುದು ಮೊದಲು!
    ಕೈಜಾರಿ ಕೊರಳಿನಲಿ ಮಾಲೆಯಾಯ್ತೇಕೆ?
ಹೂಗಲ್ಲವೆನ್ನ ಭುಜವೇರಲೆಂದಪ್ಪಣೆಯ

ನಾನು ಕೊಟ್ಟೆನೆ ನಿನಗೆ? ಎಲ್ಲಿ ಕೈ, ಇಲ್ಲಿ ತಾ. . . .
ಕೆಂಪು ಚಿಮ್ಮುವ ಹೂವಿದೆಷ್ಟು ಕೋಮಲವೆ!

ಬ್ಯಾರಲ್ಲ ಇದು ಒಲವಿನ ಭಾವಗಣಿತ

ನಡೆದರೆ ಹರೆಯದ ದಿಬ್ಬಣವೊ
ಆಕೆ–ನಿಂತರೆ ಚೆಲುವಿನ ಸಿಂಗಾರವೊ
ಅಹ–ಕುಂತರೆ ಕನಸಿನ ಚಪ್ಪರವೊ!

ತಿಂಗಳ ತೆರೆಯಾಗಿ ಸರಿದವೊ ಸೆರಗು
ನೆಳಲಾಗೆ ಬೆಳಕಾಗೆ ಹರಿದವೊ ಬೆರಗು
ಬಾನಿನುಗುವ ಹಾಲ ಕುಡಿದವೊ ಕಣ್ಣು
ಹಸಿರಾಗಿ ಹೂವಾಗಿ ಮಿಡುಕ್ಯಾವೊ ಮಣ್ಣು
ತುಂಬುಮೆಯ್ ಗರುವಕೆ ನವಿರೆಲ್ಲ ನಿಗುರಿ
ಮಿರಮಿರ ನಡುಗ್ಯಾವೊ ಆರಿಲ ಬುಗುರಿ

ಅಣ್ಣ-ಮುಗಿಲಲ್ಲ ಕಡಲಲ್ಲ ಹಾಡಲ್ಲವೊ
ಇಲ್ಲೆ-ಏನೋ ಆದಂಥ ಅದ್ಭುತವೊ!
ಹೇಳುವುದೆಂತದ ನುಡಿ ಸಣ್ಣವೊ
ಆಕೆ—ನಡೆದರೆ ಮಿಂಚಿನ ದಿಬ್ಬಣವೊ!
ಗುಡ್ಡದ ಮ್ಯಾಲೊಂದು ಗುಡ್ಡಮೂಡಿ
ಗುಡ್ಡದ ಹಿಂದೆ ಚಂದ್ರಮ ಮೂಡಿ
ಇಲ್ಲಿ-ಕಣ್ ಗರಿಯಾಡಿಸಿ ನಿಂತಾಳೆ ಹುಡುಗಿ

ನೆಲಕ್ಯಾಂಗೆ ಇಳಿದಳೊ ಬಾನಿನ ಬೆಡಗಿ?
ಈ ಒಂದು ಥಾಟಿಗೆ ಎಲ್ಲಿ ಸರಿಸಾಟಿ?
ಚುಂಗೆದ್ದ ಚಿಗರಿಯೊ-ನಿಂತದ್ದು ಬೆದರಿ!
ಹೂವಿನ ಬಳ್ಳಿಯೊ—ಚಪಲದ ಮಳ್ಳಿ!
ಸುಂದರ ಶಿಲ್ಪವೊ—ನಿರ್ಜೀವ ಜಲ್ಪ!

—ಒಂದೇ ಮಾತಂದೇನು: ಬಂಗಾರವೊ
ಆಕೆ–ನಿಂತರೆ ತೆಂಗಿನ ತೇರಂದವೊ!
ಅಂಕಣ ಚಪ್ಪರ ಸೀರೆಯು ನೆರಿ ನೆರಿ
ಉರಿಯುವ ಕಣ್ಣು, ಕೈಮೊಗದಾರತಿ
ಪಕ್ಕನೆ ಕಂಡರೆ ಖಿನ್ನಗೆ ಬಿನ್ನಗೆ
ನೋಡುತ್ತ ನಿಂತರೆ. . . . ಕ. . . ಣ್ಣೀ. . . . ಗೆ. . . .

' ತಾವರೆ ಕೆರೆಯಾಚೆ ತಾವರೆ ಕೆರೆಯಂತೆ
ಕೆರೆಯಾಚೆ ಕಾನು ಕಾನಾಚೆ ಬೆಟ್ಟಂತೆ

ಬೆಟ್ಟದ ಮುಡಿಯಾಗೆ ಹಾಲ್‌ಗಲ್ಲ ಗುಡಿಯಂತೆ. .. .'
ಆ—ಯಕ್ಷಲೋಕದ ಕಥೆಗೆ ಕಾಲ್ ಮೂಡಿದಂತೆ
ಕಾಣುವ ಕಣ್ಣೇ ಬೆಪ್ಪಾದವೊ
ಆಕೆ-ಕುಂತರೆ ಮಲ್ಲಿಗೆ ಚಪ್ಪರವೊ !

ಹರೆಯದ ಕುಣಿತಕೆ ಚೆಲುವಿನ ಮಣಿತ
ಚೆಲುವಿನ ಮಣಿತಕೆ ಕನಸಿನ ತಣಿತ
ಬ್ಯಾರಲ್ಲ, ಇದು ಒಲವಿನ ಭಾವ-ಗಣಿತ !

ಆಕೆ-ನಡೆದರೆ ಮಿಂಚಿನ ದಿಬ್ಬಣವೊ
ಆಹ-ನಿಂತರೆ ತೆಂಗಿನ ತೇರಂದವೊ
ಹೀಂಗೆ–ಕುಂತರೆ ಮಲ್ಲಿಗೆ ಚಪ್ಪರವೊ !

ಜೀ. ಶಂ. ಪರಮಶಿವಯ್ಯ

ಮಗಳೆನಿತು ಜಾಣ ಒಡವೆ !

ಅರೆನಿದ್ದೆ ಬುವಿಗೆ, ಮುಗಿಲೆದ್ದ ಬಗೆಗೆ ನಿಮಿರಿತ್ತು ಚಿಕ್ಕೆಯುಡಿಗೆ !
ತಂಬೆಲರೆ ತರುಣೆ-ಚಿಗಿಚಿಗಿವ ಪರಿಮೆ ಬೆವರಿತ್ತು ಸೊಕ್ಕು ನಡಿಗೆ !
ಬಾನಟ್ಟದಿಂದ ಶಶಿಶೈಲದಿಂದ ಬೆಳುಬೆಳ್ಳಗಿಳಿದನಾರೊ !
ವಸುಮತಿಯ ಮೈಯ—ಮೇಲವನ ಕೈಯ ಚಾಚಿದ್ದ ಒಲುಮೆಗಾರೊ !
ಅದೊ ಶಾಲಿವನದ-ಮೇಲವಳ ಬಿಸದ ನಸುನಕ್ಕಳೇಕೊ ಏನೊ !
ತೆನೆಗೊನೆಯ ಮೌನ-ತೊನೆದಂತೆ ಬಾನ ಉಲಿದಿತ್ತು. ತೇನೆಯೇನೊ !
ಶೃಂಗಾರ ಗೀತ-ಬಳಿಗೆಳೆದನಾತ, ಸುಳಿಗಾಳಿಗಯ್ಯೊ ಪುಳಕ !
ಕಡುಮೋಹಜಾಲ ಬೆಸದಿದ್ದಿತೊಲವ, ಪ್ರಣಯಿಗಳ ಕೈಯ ಜಳಕ !
ಪ್ರೇಮಾಂಕುರಕ್ಕೆ-ಒಲವಿಂಗೆ ರೆಂಕೆ ಕಡುಮೌನಕೇಕೆ ವ್ಯಂಗ್ಯ !
ಕೊಕೊಕೋಕೊ ಎಂದು, ಕಲಿಹುಂಜವೊಂದು ಕೂಗಿದುದೆ—ಪ್ರಣಯ ಭಂಗ !
ಓಡಿದ್ದನಲ್ಲ-ಬಾಡಿದಳು ನಲ್ಲೆ ಭೂತಾಯಿ ಎದ್ದಳಾಗ !
‘ ಬೆಳಗಾಗುವೇಳೆ-ಎದ್ದೇಳೆ ಮಗಳೆ ’ ಎನುವಾಗಲೆಲರರಾಗ:
ತಾಳಮ್ಮ ನಿದ್ದೆ ಬಲು ಓದುತಿದ್ದೆ—ಅರೆಗಳಿಗೆ ಮಲಗಿಬಿಡುವೆ !
ಮಲಗೆಂದಳಾಕೆ—ನಗುತಿದ್ದಳೇಕೆ ಮಗಳೆನಿತು ಜಾಣ ಒಡವೆ !

ಯರ್ಮುಂಜ ರಾಮಚಂದ್ರ

ಯಾರಿಲ್ಲಿಗೆ ಬಂದರು ಕಳೆದಿರುಳು

ಯಾರಿಲ್ಲಿಗೆ ಬಂದರು ಕಳೆದಿರುಳು
ಏ ಗಾಳಿ,

ಆ ಕಥೆಯನೊರೆದು ಮುಂದಕೆ ತೆರಳು
ನೆನೆದು ನೆನೆದು ತನು ಪುಳಕಗೊಳ್ಳುತಿದೆ
ನುಡಿವೆನೆ ದನಿ ನಡಗುತಿದೆ.
ಸ್ಮೃತಿ ವಿಸ್ಮೃತಿಗಳ ಕಂಬನಿ ಮಾಲೆ
ಎಲ್ಲೆಲ್ಲೂ ತೂಗುತಿದೆ
ಕಳೆದಿರುಳಿನ ಬೆಳದಿಂಗಳ ಮರೆಯಲಿ
ಏನೂ ಅರಿಯದ ಮುಗ್ಧೆಯ ಕಿವಿಯಲಿ
ಯಾರೇನನು ಪಿಸು ನುಡಿದರು ಹೇಳು
ಏ ಗಾಳಿ,

ಆ ಕಥೆಯನೊರೆದು ಮುಂದಕೆ ತೆರಳು.
ನಸುಕಿನ ಬೆಳಕಿನೊಳೆಂಥ ಬಳಲಿಕೆ
ಮೂಡಲ ಹಣೆ ಕಡುಗೆಂಪು !
ಮರ ಮರದೆಡೆಯಲಿ ಕೂಕು ಆಟ
ಭೂಮಿಗೆ ಮೈಮರೆವು
ಅಲ್ಲಿ ಇಲ್ಲಿ ಗಿಡ ಬಳ್ಳಿ ಮರಗಳು
ಯಾವ ನೆನಪಿನಲೊ ಮೈಮರೆತಿಹವು
ಹೃದಯದೊಳೇನನು ಎರೆದರು ಕೊರೆದರು ?
ಏ ಗಾಳಿ,

ಆ ಕಥೆಯನೊರೆದು ಮುಂದಕೆ ತೆರಳು.
ಮೈಯೆಲ್ಲಾ ಗಡಗುಟ್ಟುತಲಿದೆಯೇ
ಬೆದರಿಸಿದವರಾರು ?
ಮುಖ ತೊಯ್ದಿದೆ, ಕಣ್ಣೀರಿನ ಹನಿಯನು
ಹರಿಯಿಸಿದವರಾರು ?
ಯಾರೂ ಕಾಣದ ಆ ಮರೆಯೊಳಗೆ

ಕುಲುಕುಲು ಎನುತಿದೆ ಮೇಲುನಗೆಯ ನೊರೆ
ನಿನ್ನೆಯ ಹಾಡಿನ ದನಿಯಿನ್ನೂ ಗುಣು-
ಗುಣಿಸುವ ಮಾಯೆಯಿದೆಂಥದು ಹೇಳು
ಏ ಗಾಳಿ,
ಆ ಕಥೆಯನೊರೆದು ಮುಂದಕೆ ತೆರಳು.

ಬಿ. ಎ. ಸನದಿ

ಇಬ್ಬನಿಯ ಹಾಡು

ಹೊತ್ತು ಏರುವ ಮೊದಲೆ
ಹಸಿರು ಹುಲ್ಲಿನ ಮೇಲೆ
ಕಂಡಿರುವಿರಾ ನೀವು ನನ್ನ ಲೀಲೆ?
ಎಸಳು ಎಸಳಿನ ಬೆರಳು
ಹರಳಿನುಂಗುರವಿಟ್ಟು
ಮೆರೆವಂತೆ ಕಾಣುವುದು ನನ್ನಿಂದಲೆ!

ಮೂಗು ಬೊಟ್ಟಿನ ಹರಳು
ನನ್ನ ಹೊಳಪನು ಕಂಡು
ಮೂಗು ಮುರಿದರು ನನಗೆ ಕೋಪವಿಲ್ಲ;
ಬಿಸಿಲು ಸುರಿಯುವ ರವಿಯೆ
ನನ್ನೆದೆಯೊಳಾಶ್ರಯುವ
ಪಡೆಯಬಂದರು ನನಗೆ ತಾಪವಿಲ್ಲ!

ನನಗೆ ಬಣ್ಣದ ಬದುಕು
ಬೇಡವೆಂದರು ಕೂಡ
ಇಂದ್ರಚಾಪವೆ ನನಗೆ ಶರಣಾಗತ!
ಮುಗಿಲೊಲವೆ ಮಧುವಾಗಿ
ಇಳೆಗಿಳಿದು ಬಂದಿರಲು
ರಸಿಕರೆದೆ ತುಂಬಿಸುವುದೆನಗಿಹವ್ರತ!

ಕಿರಿಯ ಆಕಾರದೊಳೆ
ಆಕಾಶವಡಗಿಸುವ
ಮಹದಾಸೆಯೆನ್ನೆದೆಯ ಉಸಿರಾಗಿದೆ!
ಇರುವೊಂದೆಗಳಿಗೆಯೊಳು
ರಸಸಿದ್ಧಿ ಪಡೆಯುವೊಲು
ನಾನಿರಲು ನೆಲದೆದೆಯು ಹಸಿರಾಗಿದೆ!

ಬಂದು ಹೋದ ಬೆಳಕು

ಬರುವೆನೆಂದಿತು ಬೆಳಕು
ಬಾ ಎಂದೆ ನಾನೂ;
ಬಂದಂತೆಯೇ ಹೋಯ್ತು
ಸುಮ್ಮನಿರೆ ಬಾನೂ!

ಮನ ಸುಮನವಾಗಿತ್ತು
ಒಂದೆರಡು ಗಳಿಗೆ;
ಮಾತು ಮಧುವಾಗಿತ್ತು
ಕಿವಿದುಂಬಿಗಳಿಗೆ!

ಮಳೆಯಾಗಿ ಸುರಿದಿತ್ತು
ಮೇಲಿಂದ ಬೆಳಕೇ
ಕೊಚ್ಚಿ ಒಯ್ದಿತು ಹೊಳೆಯು
ಬದಿಯೆಲ್ಲ ಮೊಳಕೇ!

ಬೆಳಕು ಕತ್ತಲೆಯಾಯ್ತು
ಸುಮ್ಮನಿರೆ ಬಾನೂ!
ಮುನ್ನೆಲೆಯನರಸುತಿಹೆ
ಮರಗುತಲೆ ನಾನೂ!

ಮಣ್ಣು

ನಾನು ಮಣ್ಣಿನ ಮಗನ ಮಗನಾಗಿ ಬೆಳೆದವನು
ಮಣ್ಣಿನಿಂದಲೆ ಬದುಕು ಕಂಡಿರುವೆನು;
ನನ್ನ ತಾಯಿಯು ತಬ್ಬಿಕೊಂಡಿರುವ ಮಣ್ಣನೊಳೆ
ತಾಯಿಯೊಲವಿನ ಸೊಗವನುಂಡಿರುವೆನು!

ಮಣ್ಣಿನಿಂದಲೆ ನೆಲವು, ಮಣ್ಣನೊಡನಿದೆ ಜಲವು
ಮಣ್ಣಿನಿಂದಲೆ ಮಲಯ-ಮಧುರ ವಲಯ;

ಮಣ್ಣಿನಿಂದಲೆ ಅನ್ನ, ಮಣ್ಣಿನಿಂದಲೆ ಬಣ್ಣ
ಮಣ್ಣಿಲ್ಲದೀ ಬದುಕಿಗೆಲ್ಲಿ ನಿಲಯು?

ಇಳೆಯೆದೆಯು ಹಸಿರುಸಿರೆ ಬೆಳೆಯಾಗಿ ತಲೆದೂಗೆ
ಮಣ್ಣ ಪ್ರಕೃತಿಯ ಶ್ರುತಿಯ ಅನುವಾದವು;
ಕಾರ್ಮೋಡಗಳ ಕಂಡು ಕುಣಿಯೆ ಬಣ್ಣದ ಸೋಗೆ
ಅರಳಿದಂತೆರೆ ಮಣ್ಣ ಸಂಮೋದವು!

ಮಣ್ಣ ಕನಸನ್ನುಂಡು ಕುಡಿಯೊಡೆದ ತರುಲತೆಗೆ
ಬಿರಿವ ಸುಮಕೇಳರವು ಮಣ್ಣಿನೊಲವು;
ಮಣ್ಣಿ ಬಣ್ಣದ ಭೃಂಗ ಸುಮನಸಂಗದಿ ಪಡೆವ
ಮಧು ಕೂಡ ಮಣ್ಣೆದೆಯ ಸ್ವಪ್ನಫಲವು!

ಮಣ್ಣನರಿದೊಡೆ ಸೊಗವು, ಮಣ್ಣಿ ಪೃಥ್ವಿವಿಯ ಮೊಗವು
ಮಣ್ಣಿ ಮನುಜನ ಆದಿ-ಅಂತ-ರಂಗ!
ಮಣ್ಣಿನಾರಾಧನೆಯ ತಂತ್ರ ತಿಳಿದರೆ ಜಗಕೆ
ಮಣ್ಣಿನೊಳೆ ಕಂಡೀತು ಸುಖದ ಶೃಂಗ!

ಎಲ್. ಜಿ. ಸುಮಿತ್ರ

ಚಿತ್ರದುರ್ಗ

ಬೈಗುವಾಗಿದೆ, ಬಾನ ನೇರುತ
ನೆಲೆಗೆ ನಿಂತಿದೆ ಈ ನಿಶೆ.
ದೆಸೆಯು ತಬ್ಬಿದೆ, ಹಬ್ಬಿ ಹರಡಿದೆ
ಕುಗ್ಗುತಿದೆ ಬಯಲಿನ ಬಗೆ.
ಕುರುಬನಿಲ್ಲದ ಹಿಂಡಿನಂತಿದೆ.
ದುರ್ಗದಲಿ ಕಲ್ಲುಬಂಡೆಯುಡೆ.

ಅತ್ತ ಗುಡ್ಡದ ಮುಕ್ತ ಮೂಲೆಗೆ
ಕಪ್ಪು ತೊಡೆದಿದೆ, ಕೆಟ್ಟಿದೆ.
ಗಾಳಿ ಬೀಸಿದೆ, 'ಹೋ' ಎನ್ನುತ
ಯಾರು ಯಾರನೊ ಕರೆದಿದೆ.
ಎದ್ದು ಮೊರೆಯುತ ಸದ್ದ ಕಾರುತ
ವೀರಗತೆಗಳನೊರೆದಿದೆ.
ಕಡುಗಲಿಗಳನು ನೆನೆನೆನೆದು ಇಂದಿನ
ಯುವಕ ವೃಂದವ ಕರೆದಿದೆ.

ಹಿಂದೆ ದುರ್ಗದಿ ತಾನು ಸುಳಿಯಲು
ಊರ ಮನೆಗಳ ತೋರಣ
ಮುತ್ತು ರತ್ನದ ಗೊಂಚಲುಡೆಯಲಿ
ತೊನೆದು ಉಲಿದುದ ನೆನೆದಿದೆ.
ಅಹುದು, ಅಂದಿನ ಅಂದವನೆ ನೆನೆ
ದಿಂದು ಗಾಳಿಯು ಕೂಗಿದೆ.
ಕೂಗಿ ಆಲುತ ನನ್ನ ನೂಕುತ
ಬಂಡೆ ಬಂಡೆಗು ತಾಕಿದೆ.

ಬಂಡೆಯೇರುತ ನಿಂತೆ, ಕಂಡಿತು
ಸುತ್ತಮುತ್ತಣ ಹಳ್ಳಿಯು.
ವಿದ್ಯುಚ್ಛಕ್ತಿಯ ದೀಪದುರಿಯಲಿ
ದಹಿಸಿತೇನಿದೆರರ್ತ್ತಿಯು?

ಕೂಗಿ ಕೂಗುತ, ಕೂಗಿ ಕರೆಯುತ
ರೇಗುತಿದೆ ಈ ಗಾಳಿಯು-
'ಏಳಿರೇಳಿರಿ, ಏಳಿರಣ್ಣಾ!
ಏಕೆ ಇಂದೀ ಜಡತನ?'

ಸುತ್ತಮುತ್ತಣ ಬರಡು ಬಯಲು,
ಅತ್ತ ನಿಂದಿಹ ದುರ್ಗವು,
ಎಲ್ಲ ನಿರ್ಜನವಾಗಿ ಭೀಕರ
ರೂಪತಾಳಿದೆ, ಕೆರಳಿದೆ.
ಬಾಗಿಲಿಗೆ ಕಾಳುಗಳ ಬೀಸುತ
ಜನವು ಮೈಮರೆ ತೊರಗಿದೆ;
ನಿದ್ದೆಯಲಿ ನಾಳೆಗಳ ಕೋಟೆನು
ಕದನವನು ಕನವರಿಸಿದೆ.

ಇಲ್ಲಿ ನಿಂತಿಹ ನಾನು, ಇಂದಿನ
ರೋಷವಾಂತಿಹ ಗಾಳಿಯು,
ಕುಗ್ಗಿ ಮುಮ್ಮೂಲ ಮರುಗಿ ಹಿಂದಿನ
ವೀರಗತೆಗಳ ನೆನೆವೆವು.

ನಮ್ಮೂರು

ಸಹ್ಯಾದ್ರಿ ಸಿಂಹಾದ್ರಿ ಶೃಂಗಗಳ ಸುಳಿವಿಲ್ಲ,
ಇಲ್ಲ, ನಮ್ಮೂರಿನಲಿ ಹಿರಿಯ ಗಿರಿಯು.
ಬೆಳಗಿನಲಿ ಬೈಗಿನಲಿ ಮೇಲೆ ಮಧ್ಯಾಹ್ನದಲಿ
ಬೆಳಗುವನು ದಿನಕರನು ಬಯಲುಗಳನು.

ದೂರದಲಿ ಬಾನಿನಲಿ ಮೇಘಮಾಲೆಯು ತೇಲೆ
ಅದನು ಮರುಬಿಂಬಿಸಲು ಕೊಳಗಳಿಲ್ಲಿಲ್ಲ.
ಸೋಪಾನದೊಡ್ಯಾಣಗಳನಲ್ಲಿ ಕಂಡಿಲ್ಲ;
ಇಲ್ಲ, ನಮ್ಮೂರಿನಲಿ ಹೊಳೆಗಳಿಲ್ಲ.

ತೆಂಗುಗಳ ಕೌರಿಗುಗಳ ತುಂಬು ತೋಟಗಳಿಲ್ಲ;
ಬಾಳೆಗಳ ಮಲ್ಲಿಗೆಯ ಬನಗಳಿಲ್ಲ;

ಗದ್ದೆ ಬದು ಸಾಲಿನದು ಶೃಂಗಾರವಿದಕಿಲ್ಲ;
ಇಲ್ಲ ನಮ್ಮೂರಿಗದರರಿವೆ ಇಲ್ಲ.

ಹುಲ್ಲು ಮೆದೆ ತುಂಬದಿದೆ ನಮ್ಮೂರ ಬಯಲುಗಳ;
ಕೊಳಲುಲಿಯ ಕೇಳರಿಯುವೆಮ್ಮ ತುರುವಿಂಡು;
ಹಕ್ಕಿಗಳ ಕುಕಿಲುಗಳು ಕೇಳಲಾರೆವು ನಾವು;
ಇಲ್ಲ, ನಮ್ಮೂರಿನೊಳಗಂಥ ಚೆಲುವು.

ಬೆಳಗಿನಲಿ ರಾಗಿ ಕಲ್ಲನು ಬೀಸುವವರಿಲ್ಲ;
ಕೈ ಬಳೆಗಳಿನಿದನಿಯ ತಾಳಗಳ ಮೇಳಕ್ಕೆ
ಕೊರಳೆತ್ತಿ ದನಿಗೂಡಿ ಹಾಡುವವರಿಲ್ಲ,
ಇಲ್ಲ, ನಮ್ಮೂರಿನಲಿ ಇಂಥವೆಲ್ಲ.

ಬೈಗಿನಲಿ ಬಾಗಿಲಲಿ ಹಸೆಯನಿಡುವವರಿಲ್ಲ;
ಗೆಜ್ಜೆದನಿ ಹಾಡ ಖನಿ ಕೋಲಾಟವಿಲ್ಲ;
ಗಾಡಿಗಳ ಎತ್ತುಗಳ ಕೊರಳ ಗಂಟೆಯ ದನಿಯು
ಇಲ್ಲ, ನಮ್ಮೂರಿನಲಿ ಸಂಜೆಯಲ್ಲಿ.

ನಮ್ಮೂರ ಬಳಿ ಬಾರ, ಬಾರ, ಕೇಳುವೆ ನೀನು-
ಬಲು ಘೋರ ಭೂ ಭಾರ ಯಂತ್ರಗಾನವನು;
ಭೋರ್ಗರೆವ ಯಶತರುವ ಯಂತ್ರ ಘೋಷವನು
ಇಲ್ಲ, ನಮ್ಮೂರಿನಲಿ ಚೆಲುವಿಗಿರವು.

ಪುಟ್ಟ ಬಾಲೆ

ಬಂದಳು ಆ ಬಾಲೆ ನೀರ ತಡಿಗೆ,
ನೋಡೆನಿತು ಚೆಲುವವಳ ಕುರುಳ ತೊಡಿಗೆ.

ತಂದಿತ್ತು ಜಲಸಿರಿಯ ಮಳೆಯು ಹೊಳೆಗೆ.
ಜಾರು ಹೊಳೆ ಚಿಮ್ಮುತ್ತ ಬಡಿದು ಕರೆಗೆ
ಜಳಜಳನೆ ದನಿಗೈಯೆ ಒಳಗೆ ಹೊರಗೆ
ಕಳಕಳಿಸಿ ಹೊಳೆದಿತ್ತು ಬೆಳ್ಳಿ ಹಲಗೆ.

ಕೊಡವನತ್ತಲೆ ಬಿಟ್ಟು ದಡದ ಮೇಲೆ
ಉಟ್ಟ ಲಂಗದ ನಿರಿಗೆ ಬಳುಕಿ ಜೋಲೆ
ಹುಡುಗು ಮನದುಲ್ಲಸಕೆ ಮನವು ಸೋಲೆ
ಆಟಕ್ಕೆ ತೊಡಗಿದಳು ಪುಟ್ಟ ಬಾಲೆ.

ಎಳೆ ಮನವ ಸೆರೆಹಿಡಿಯೆ ಹೊಳೆಯು ಮೋಡಿ
ಪುಟ್ಟಬಾಲೆಯು ನಿಂತು ನಲಿದು ನೋಡಿ
ದುಂಡುಗಣ್ಣಿನ ಚಪಲದಿಟ್ಟಿಯಾಡಿ
ನಿಂತಾಗ ಅಲ್ಲಾಯ್ತು ಸೊಗದ ಜೋಡಿ.

ನೆರಿಗೆಯಂಚಾಗಿತ್ತು ಅಲೆಗೆ ಜೋಡಿ.
ಕುರುಳು ನರ್ತಿಸುತಿತ್ತು ಗಾಳಿ ಗಾಡಿ.
ಅಲೆಯು ಹೊಳಪಿಗೆ ಸಾಟಿ ಕಣ್ಣ ಗಾಡಿ.
ಆರ ಮಗಳಿವಳಾರ ಬಾಳ ಬಾನಾಡಿ?

ಎಳನಗೆಯ ಕೇಳು ಮೈಯ್ಯ ಚಿಕ್ಕ ಹುಡುಗಿ
ಆಟವನು ತೊರೆದಿಂತು ನೀರಿಗಾಗಿ
ಬರಬಹುದೆ ಕೊಡ ಹೊತ್ತು ದೊಡ್ಡದಾಗಿ?
ಈ ಬವಣೆಯೇಕಮ್ಮ? ಹೇಳು ನನಗಾಗಿ.

ಹೊಳೆಯು ದಡದಲಿ ನಿಂತು ನಲಿದ ಆ ಬಾಲೆ
ತೆರಳುತಿರೆ ಸೊಗಕೆಂಥ ಬಲು ಭಾರಿ ಸೋಲೆ!
ಹೊರೆ ಭಾರ ಹೊರಿಸುತ್ತ ಮುಗುಮನದ ಮೇಲೆ
ತಾಯೆ ನೀ ತೆರಳಿದೆಯ ಹರಿದೊಲುಮೆ ಮಾಲೆ?

ಎಚ್. ಎಂ. ಚನ್ನಯ್ಯ

ಆಮೆ

ಹೊರಲಾರದ ಹೊರೆಹೊತ್ತು, ಕತ್ತನ್ನು ನಿಧಾನ
ಹೊರಚಾಚಿ, ಗಾಳಿಯನ್ನು ಮೂಸುತ್ತಾ
ಹೊಟ್ಟೆ ಹೊಸೆದು ಜೀಕಿ, ಗರಿಕೆ ಒಂದೊಂದನ್ನೇ
ಕಿತ್ತು ಜಿಗಿದು ಮೆಲುಕಾಡಿಸುತ್ತೇನೆ;
ತೆವಳಿ ಧೂಳಲ್ಲಿ, ನನ್ನ ಮಲದಲ್ಲೇ ಜೀಕಿ
ನಾಲ್ಕೂ ಕಾಲೂರಿ, ಉಸಿರೆಳೆದು ಕುಂಭಿಸಿ, ಸೆಟೆದು
ದೇಹವನ್ನೆತ್ತಿ ಒಂದಿಂಚು ಜರಗಿಸುತ್ತೇನೆ;
ವಿಶಾಲವಾಗಿದೆ ನನ್ನ ಜಗತ್ತು; ಸುತ್ತುವರಿದಿರುವ
ತಂತಿಯ ಮುಳ್ಳುಬೇಲಿ. ನಾಲ್ಕೇ ಹೆಜ್ಜೆ ದೂರದದೆಲ್ಲಿ
ಕೃತಕ ಕೊಳದ ನೀರು; ತೆವಳುತ್ತೇನೆ.
ಧೂಳಲ್ಲಿ; ಮೇಲಿನಿಂದ ಸೂರ್ಯನೆಸೆದ ಬಿಸಿಲಿನ ಭರ್ಜಿ
ತಲೆ ಚುಚ್ಚಿದಾಗ ಕತ್ತಿನಲ್ಲಿ
ನಗುವ ಮಗು ಬೀಸಿ ಬಿದ್ದ ಕಲ್ಲೇಟಿನ ಯಾತನೆ.
ಕೃತಕ ಕೊಳದ ನೀರಿಗೆ ಬಾಯಾರಿ,
ಬೇಯುತ್ತಿದ್ದೇನೆ: ಅತ್ತ ತೆವಳಲೆತ್ನಿಸಿದರೆ ಸಾಕು
ಅಳೆಯಲಾರದ ದಾಳದಿಂದ ಹೆಸರರಿಯದದು ಬಂದು
ನಾಲ್ಕು ಬದಿಯಿಂದ ತನ್ನ ನಳಿಗೆಗಳ ನಿಧಾನ
ತೂರಿ, ಆಲಂಗಿಸಿ ಹಿಡಿತ ಬಿಗಿಮಾಡಿ,
ಬಂದಿಸುತ್ತದೆ. ಬಂಧನದಲ್ಲಿ ಸಿಕ್ಕ ನಾನು
ಒದ್ದಾಡಲೂ ಆರದೆ ನಿಶ್ಶಕ್ತನಾಗಿ ಮೈಮುದುಡಿ
ತರಗು ಕೈಕಾಲು ಮುಖಕತ್ತನ್ನೆಲ್ಲಾ
ಚಿಪ್ಪೊಳಕ್ಕೆಳೆದು ಬಿದ್ದುಕೊಳ್ಳುತ್ತೇನೆ: ಬಿರಿಯಲಾರದ
ಕವಚ ಸಿಡಿವಂತೆ ಅವಚುತ್ತದೆ. ನಾನು ಚಿಪ್ಪೊಳಗೇ
ಬದುಕು ಸಾವಿನ ಕೂದಲೆಳೆಗಡಿಯಲ್ಲಿ
ಕೃತಕ ಕೊಳದ ನೀರಿಗಾಗಿ ಕನಸ ಕಾಣುತ್ತೇನೆ.

ಕೆಂಪು ಕತ್ತಲು

ಕಿಟಕಿಯಿಂದಾಚೆ ಬೆಳಕಾರಿ ಕತ್ತಲು ಘನಿಸಿದೆ;
ಮೈ ತಿರುವು ಮುರಿದು ಬೆನ್ನಹುರಿ ಲಟಕೆ ಮುರಿದಾಗ
ನಗರಕ್ಕೆ ನಗರವೇ ಕಣ್ಣು ಕತ್ತಲಿಸಿ ಬಂತು
ಕಿಟಕಿಯಲ್ಲಿಟ್ಟ ಮೇಣದ ಬತ್ತಿ ಮಿನುಗಿ
ಮಬ್ಬೆಳಕ ಹರಿಸಿದ್ದು
ಬೀಸಿದ ಗಾಳಿಗಾರಿ
ಹೊರಕತ್ತಲೊತ್ತರಿಸಿ ಪ್ರವಾಹ ನುಗ್ಗಿ ಬಂದು
ಎಲ್ಲ ಎಲ್ಲ ಮುಚ್ಚಿ
ಕಮರು ವಾಸನೆ ಸಮ ಸವರಿತು.

ಓ ಕತ್ತಲ ಹಿಡಿದು ಗೋಲಿಸಿ ಮುಟ್ಟಿ ಮೂಸಿ ನೇವರಿಸಿ
ಅಪ್ಪಿ ಮುತ್ತಿಟ್ಟು ಆ ಅದನ ಈ ಇದನ,
ಕತ್ತಲಂಜೂರ ಸೀಳಿ ತುಟಿಯಿಟ್ಟು
ಚಪ್ಪರಿಸಿ ಕತ್ತಲನುಭವಿಸಿ
ದೇಹವಿಡೀ ಕತ್ತಲಲೆಯಲ್ಲಿ ತರಂಗಿಸಿ
ತಂತಿಯಲಿ ಕತ್ತಲು ಹರಿದು
ಬೆತ್ತಲೆ ತಲೆ ಸುತ್ತಿ
ಬಿಚ್ಚಿ ಜುಮ್ಮೃದಟ್ಟಿಸಿತು
ಕತ್ತಲಲ್ಲಿಳಿದ ಪದ್ಮರಾಗದ ಬೆಚ್ಚನೆ
ಮಾಂಸ ತರಂಗಕ್ಕೆ ಒದ್ದೆತುಟಿ ಪರಿಧಿ ಕೂದಲ ಮಿಂಚು
ಕೇಂದ್ರದೊಳಕ್ಕೆ
ಒಳಾಭಿಮುಖವಾಗಿ ಗುಹ್ಯ ಗಹನ ಗರ್ಭಕೋಶದ ಕಡೆಗೆ
ಮೆಲ್ಲನೆ ಕೆಂಪರಿಳಿತು
ಮಣ್ಣು ಬಿಸಿ ಬೆಚ್ಚನೊತ್ತಲ್ಲಿ ಬೀಜ ಮಿಸುಗಿ
ಕತ್ತಲಮಿಂಚು ಉಂಗುಷ್ಠದಿಂದ ನೆತ್ತಿಯವರೆಗೆ ಮಸೆಯಿತು.

ಅಬ್ದುಲ್ ಮಜೀದ್‌ಖಾನ್

ಒಂದು ನವ್ಯ ಚಿತ್ರ

ನೆತ್ತಿಯಲಿ ಕಣ್ಣು, ಕಿವಿಯು ಬಳಿ ಮೂಗು
ಸುರಟಿಕೊಂಡಿಹ ತುಟಿ ಅದುಮಿ ಹಿಡಿದಿದೆ
ಯೂಲಿಸಿಸ್ಸನು ಮೊಳಗಲೆಳಸಿಹ ಕೂಗು
ಕಿವಿ ಮೂಸಿ ನೋಡುತಿವೆ
ಮೂಗು ಕೇಳುತಿದೆ ಕಣ್ಣು? . . .
. . . ಮಣ್ಣು.

ಮೇಲ್ದುಟಿಯು ಮೇಲೆ ಎಡಕೊಂದು
ಬಲಕೊಂದು ಕೊಂಬು. ಅವು ಮೀಸೆಗಳು,
ಚಿತ್ರದಲಿ ಇಲ್ಲದಿರುವ ತಲೆ-ಬೋಳು
ಹುಬ್ಬು-ಕುರುಚಲು ಗಿಡ ದಿಕ್ಕು ದಿಕ್ಕಿಗೆ
ಚದುರಿಸಿಹ ಮುಳ್ಳುಗಳು
ಹಣೆ-ಗುರಾಣಿಯು ಹಿಂದೆ
ನಾಚಿ ನಿಂತಿಹ ಮೆದುಳು ನೂರು ಹೋಳು.
ಮುಖಕ್ಕೆ ಚರ್ಮವಿಲ್ಲ; ಒಳ ಪದರಗಳು
ಮೇಲೆ ಕಾಣಿತಿವೆ-ಸ್ನಾಯು ನರಗಳು:
ಬೇರುಗಟ್ಟಿವೆ ಒಳಗೆಲ್ಲ. ಭಯ
ನೋವು, ಚಿಂತೆ, ಜ್ವರಗಳು.

ಪುಣೆ-ಬೆಂಗಳೂರು ದಾರಿಯಲ್ಲಿ
ಸರದಾರಜೀಯ ಭಾರಿ ಟ್ರಕ್ಕಿಗೆ ಸಿಕ್ಕು
ಗಬಿ ಬಿಜಿಯಾದ ದೇಹವೊಂದಕ್ಕೆ
ಹಿಂದಿರುಗಿದಂತೆ ಪ್ರಾಣ.
ಕುಂಚ ತಿರುವಿದ ಕೈಗೆ ಗೊತ್ತು ಪ್ರಮಾಣ

ಇದು ಕಲೆಯಲ್ಲ ವಾಸ್ತವತೆ
(ಅದರ ತಲೆ ಬರಹವೇ ಹಾಗೆ ಇದೆ)
ಇದು ನವ ಮಾನವನ ಮಾನಸಿಕ ರೂಪ
ಭವ್ಯ ನಾಗರೀಕತೆಯ ತದ್ರೂಪ.

ದಾರಿ

ನನ್ನ ಮನೆ ಜಗಲಿಯುಲಿ ನೀ ಜನ್ಮತಾಳಿ
ನಾ ಹೊಸ್ತಿಲಲಿ ಕಾಲಿಡಲು ನೀ ಜಾರಿ ಮುಂದೆ
ಹಾದು ಅಂಗಳವ ದಾರಿ ತೋರುವೆ ನನಗೆ
ಗುರಿಯೊಂದು ನಾ ಮುಟ್ಟಿ ನಿಲ್ಲೆ ನಿಶ್ಚಿತ ಕೊನೆಗೆ
ನೀನಗಲಿ ಮುಂಬರಿವೆ ಗೆಳೆಯು ಬೀಳ್ಕೊಂಡಂತೆ.
ದಿನವೆಲ್ಲ ನಾ ದಣಿದು ಮನೆಸೇರೆ ಮರಳಿ
ನನ್ನ ಹಿಂಬಾಲಿಸುತ ನೀ ಹೆಜ್ಜೆಯಿಡುತ
ಮರಳಿ ಹೊಸ್ತಿಲಲಿ ನಿದ್ರಿಸುವೆ ಮಲಗಿ.

ನಮ್ಮೂರ ಗಡಿಯಾಚೆ ಹಳ್ಳ-ತೊರೆ ಹಾದು
ಸೀಳಿ ವನದೆದೆಯು ಮುನ್ನುಗ್ಗಿ ಮೈಮರೆತು
ಏರಿಗಳನೇದುತ್ತ, ಟಂಕಗಳ ಜಾರಿ
ತುದಿ ಎನದೆ ಗುರಿ ಎನದೆ ನೀ ಧುಮುಕಿ ಹಾರಿ
ಪಯಣಿಗರ ಪರವಾಗಿ ನೀ ಬಲು ಮರುಗಿ
ಬೀಸಿ ಸಾಲುಮರಗಳ ಇಕ್ಕೆಲದಿ ಚಾಮರವ
ಯಾತ್ರಿಕರ ಆಯಾಸ ನೀ ಶಾಂತಗೊಳಿಸಿ
ಕಡೆಗೆಲ್ಲರನು ನೀನಗಲಿ ಮುಂಬರಿವೆ ದಾರಿ.

ಬಳುಕುತ್ತ ಸೆಟೆಯುತ್ತ ನೀನಡೆವ ಪರಿಯೊ
ಸಮಯ ಸರ್ಪವು ಭರದಿ ತೆವಳಿರುವ ತೆರವೊ?
ಜಗದೆಲ್ಲೆ ಬೇಸರಿಸಿ ಬಿಟ್ಟ ನಿಟ್ಟುಸಿರೊ?
ಸಾಲು ಮರಗಳ ಸಂಗ ಸ್ಪರ್ಧೆ ನಡೆಸಿಹೆಯೊ
ಆರು ಬಲ್ಲರು ನಿನ್ನ ನಿತ್ಯ ಪಯಣದ ಗುಟ್ಟು
ತಂತಮ್ಮ ಕಲ್ಪನೆ, ಚಿಂತೆಗಳ ಬಿಟ್ಟು.

ಕಣಿವೆ ಮಡಿಲಿಳಿದು ಗುಡ್ಡಗಳನೇರಿ
ಕವಲೊಡೆದು ನಿದ್ರಿಸುವೆ ಗುಡ್ಡ-ಗುಡಿ ಸೇರಿ
ಒಮ್ಮೊಮ್ಮೆ ಸಾಗರದ ದಡದೆಡೆಗೆ ಓಡಿ
ರೂಪ ಬದಲಿಸುವೆ ಅಲೆಗಳನು ಕೂಡಿ

ಕಾಲ್ನಡಿಗೆ ವಾಹನಗಳ ಬಿಟ್ಟು ಪಯಣಿಗನಾಗ
ನಿನ್ನೆಚ್ಚಿ ಹುಟ್ಟಿಡುತ ತೀಡುವನು ರಾಗ.

ನಿಶೆರಾಣಿ ನಸುನಗುತ ಬೆಳ್ದಿಂಗಳ ತರಲು
ಹಾಯಾಗಿ ನೀ ಹರಿವೆ ಹಾಲುಹೊಳೆ ತೆರದಿ
ಉರಗನಂತೊಮ್ಮೆ ಡೊಂಕು ಡೊಂಕಾಗಿ
ಬಾಣದಂತೊಮ್ಮೆ ಬಲು ಸೆಟೆದು ಸಾಗಿ
ಸೋಮಾರಿಗಳಿಗೊಂದು ನೀ ನೀತಿಯುತ ಪಾಠ
ಬಲ್ಲವಗೆ ಬಹಳವಿದೆ, ಮೂರ್ಖನಿಗೆ ಹುಡುಗಾಟ.

ಇಲ್ಲಿ ಮಲೆಯೊಂದರ ನೀ ಕೊರಳ ಮಾಲೆ
ಅಲ್ಲೊಂದು ಬೆಟ್ಟದೆದೆ ಸೀಳಿರುವ ಭಾಲೆ
ದಿನದಿ ಮುಗಿಲುಗಳು ಆಗಸವನೀಸೆ
ತರುಣ-ರವಿ ಜಗವೆಲ್ಲ ಗೆಲ್ಲ ತಾ ಬಯಸೆ
ನೀ ಭಯದಿ ಬನದೇವಿ ಮಡಿಲಲ್ಲಿ ಮೊಗವಿಟ್ಟು
ಪಡೆಯಲಾಶ್ರಯ ಬಯಸಿ, ಸೋತು ಸಿಗ್ಗಾಗಿ
ಮತ್ತೆ ಮನನೊಂದು ಮುಂದೆಸಾಗುವೆ ದೂರ
ದೂರ ಈ ಜಗದಿಂದ ಕ್ಷಿತಿಜದೆಡೆ ಮೈಚಾಚಿ
ಸ್ವರ್ಗ ಸೇರಲು ಹವಣಿಸಿಹ ಭಲೆ ನಿನ್ನ ಬಯಕೆ
ನಿನ್ನಿರವಿನ ಲಾಭ ಪರಿಪರಿಯು ಜಗಕೆ.

ದಾರಿ ನಿನ್ನಂತೆ ದೂರ ನನ್ನಯ ಪಯಣ
ನಶ್ವರವ ಜಯಿಸಿ ನಿತ್ಯನೆನಿಸುವ ಯತ್ನ.

ರಘುರಾಮರಾವ್ ಬೈಕಂಪಾಡಿ

ಗರಬಡಿದ ಮೀನು

ಕೊಳದ ಕಣ್ಣಿನ ತುಂಬ ಹೊಸೆದ ಹಾವಸೆ ಹಾಸು
ಈಸಾಡುತಿದೆ ಒಳಗೆ
ಕೆಸರ ಬಸಿರಲಿ ಮೀನು
ಪಕ್ಕ ಮಸೆಮಸೆದು, ಸವಿದು ಜಳಕದ ಸೊಗಸು.
ಒಮ್ಮೊಮ್ಮೆ
ಸರಕ್ಕನೆ ಎರಗಿ ಸೆಳೆವುದುಂಟು
ಈ ದಟ್ಟ ಹಚ್ಚಡದ ಮುಸುಕನ್ನು
ಸುಂಟರ ಗಾಳಿಯು ಸೀಳು ಚಂಚು !
ಆಗ
ಕೆಳಗೆ
ನೀರ ಸುಳಿಯೊಳಗಲೆವ ಮೀನ ಕಣ್ಣೊಳು ಮಿಂಚು ! ಮಿನುಗು !
ಬಾನ ಕಣ್ಣಿನ ಥಳಕು ! ಅರೆಕ್ಷಣ
ತಾರೆ ನೀ ಹಾರಿಕೆಯಾಚೆ ಅಪರಂಪಾರ ಅಬ್ಧಿಗರ್ಭಕ್ಕಿಣುಕು !
ಮನದ ತುಂಬ
ನಭದ ನೀಲಿಮೆ ಹೀರಿ ಆ ಕಂಠ ಕುಡಿವ ಬಯಕೆಯು ತುಳುಕು.

ಒಂದೇ ನಿಮಿಷ,
ಮರುಗಳಿಗೆ
ಎದ್ದ ಬುರುಗೊಳು
ತೆರೆದ ಬಾನಿನ ಬೆರಗೆಲ್ಲ ನುಚ್ಚುನೂರು.
ಮುಚ್ಚಿಕೊಳುವುದು
ನವುರಾಗಿ ಮತ್ತೆ
ಆ ಪಾಚಿ ಪದರು;
ನುಸುಳುವುದು
ಯಥಾವತ್ತಾಗಿ ಕೆಸರೊಳಗೆ
ಮೈಕೊಡಹಿ ಸಾವರಿಸಿಕೊಂಡ
ಗರಬಡಿದ ಮೀನು.

ಪಿ. ಲಂಕೇಶ

ಅವ್ವ

ನನ್ನವ್ವ ಫಲವತ್ತಾದ ಕಪ್ಪು ನೆಲ
ಅಲ್ಲಿ ಹಸಿರು ಪತ್ರದ ಪರವು, ಬಿಳಿಯ ಹೂ ಹಬ್ಬ;
ಸುಟ್ಟಷ್ಟು ಕಸುವು, ನೊಂದಷ್ಟು ಹೂ ಹಣ್ಣು
ಮಕ್ಕೊಳೊದ್ದರೆ ಅವಳ ಅಂಗಾಂಗ ಪುಲಕ;
ಹೊತ್ತ ಬುಟ್ಟಿಯ ಇಟ್ಟು ಸರಳಿ ಎವೆ ಮುಚ್ಚಿದಳು ತೆರೆಯದಂತೆ.

ಪಲ್ಲ ಜೋಳವ ಎತ್ತಿ ಅಪ್ಪನ್ನ ಮೆಚ್ಚಿಸಿ ತೋಳಬಂದಿಯ ಗೆದ್ದು,
ಹೆಂಟೆಗೊಂದು ಮೊಗೆ ನೀರು ಹಿಗ್ಗಿ;
ಮೆಣಸು, ಅವರೆ, ಜೋಳ, ತೊಗರಿಯ ಹೊಲವ ಕೈಯಲ್ಲಿ ಉತ್ತು,
ಹೂವಲ್ಲಿ ಹೂವಾಗಿ ಕಾಯಲ್ಲಿ ಕಾಯಾಗಿ
ಹೆಸರು ಗದ್ದೆಯ ನೋಡಿಕೊಂಡು,
ಯೌವನವ ಕಳೆದವಳು ಚಿಂದಿಯ ಸೀರೆ ಉಟ್ಟುಕೊಂಡು.

ಸತ್ತಳು ಈಕೆ:
ಬಾಗು ಬೆನ್ನಿನ ಮುದುಕಿಗೆಷ್ಟು ಪ್ರಾಯ?
ಎಷ್ಟು ಗಾದಿಯ ಚಂದ್ರ, ಒಲೆಯೆದುರು ಹೋಳಿಗೆಯ ಸಂಭ್ರಮ?
ಎಷ್ಟು ಸಲ ಈ ಮುದುಕಿ ಅತ್ತಳು
ಕಾಸಿಗೆ, ಕೆಟ್ಟ ಪೈರಿಗೆ, ಸತ್ತ ಕರುವಿಗೆ;
ಎಷ್ಟು ಸಲ ಹುಡುಕುತ್ತ ಊರೂರು ಅಲೆದಳು
ತಪ್ಪಿಸಿಕೊಂಡ ಮುದಿಯ ಎಮ್ಮೆಗೆ?

ಸತಿ ಸಾವಿತ್ರಿ, ಜಾನಕಿ, ಊರ್ಮಿಳೆಯಲ್ಲ;
ಚರಿತ್ರೆ ಪುಸ್ತಕದ ಶಾಂತ. ಶ್ವೇತ, ಗಂಭೀರೆಯುಲ್ಲ;
ಗಾಂಧೀಜಿ, ರಾಮಕೃಷ್ಣರ ಸತಿಯರಂತಲ್ಲ;
ದೇವರ ಪೂಜಿಸಲಿಲ್ಲ; ಹರಿಕತೆ ಕೇಳಲಿಲ್ಲ;
ಮುತ್ತೈದೆಯಾಗಿ ಕುಂಕುಮ ಕೂಡ ಇಡಲಿಲ್ಲ.

ಬನದ ಕರಡಿಯ ಹಾಗೆ
ಚಿಕ್ಕಮಕ್ಕಳ ಹೊತ್ತು

ಗಂಡನ್ನ ಸಾಕಿದಳು ಕಾಸು ಗಂಟಿಕ್ಕಿದಳು.
ನೊಂದ ನಾಯಿಯ ಹಾಗೆ ಬೈದು, ಗೊಣಗಿ, ಗುದ್ದಾಡಿದಳು;

ಸಣ್ಣತನ, ಕೊಂಕು, ಕೆರೆದಾಟ ಕೋತಿಯ ಹಾಗೆ:
ಎಲ್ಲಕ್ಕೆ ಮನೆತನದ ಉದ್ಧಾರ ಸೂತ್ರ.
ಈಕೆ ಉರಿದೆದ್ದಾಳು
ಮಗ ಕೆಟ್ಟರೆ, ಗಂಡ ಬೇರೆ ಕಡೆ ಹೋದಾಗ ಮಾತ್ರ.

ಬನದ ಕರಡಿಗೆ ನಿಮ್ಮ ಭಗವದ್ಗೀತೆ ಬೇಡ;
ನನ್ನವ್ವ ಬದುಕಿದ್ದು
ಕಾಳುಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ;
ಮೇಲೊಂದು ಸೂರು, ಅನ್ನ, ರೊಟ್ಟಿ, ಹಚಡಕ್ಕೆ;
ಸರೀಕರ ಎದುರು ತಲೆಯೆತ್ತಿ ನಡೆಯಲಿಕ್ಕೆ.

ಇವಳಿಗೆ ಮೆಚ್ಚುಗೆ, ಕೃತಜ್ಞತೆಯ ಕಣ್ಣೀರು:
ಹೆತ್ತದ್ದಕ್ಕೆ ಸಾಕಿದ್ದಕ್ಕೆ; ಮಣ್ಣಲ್ಲಿ ಬದುಕಿ,
ಮನೆಯಿಂದ ಹೊಲಕ್ಕೆ ಹೋದಂತೆ
ತಣ್ಣಗೆ ಮಾತಾಡುತ್ತಲೇ ಹೊರಟು ಹೋದದ್ದಕ್ಕೆ.

ಸುಮತೀಂದ್ರ ನಾಡಿಗ

ನಿಮ್ಮ ಪ್ರೇಮಕುಮಾರಿಯ ಜಾತಕ

ರಾಯರೆ, ಲಗ್ನ ಕುಂಡಲಿ ಮತ್ತು ಅಂಶಕುಂಡಲಿ ಹಾಕಿ
ಹಿಂದು ಮುಂದಿನದೆಲ್ಲ ವಿಷದವಾಗಿ
ಬರೆದಿಟ್ಟಿರುವೆ ಕೇಳಿ ದೃಗ್‌ಸಿದ್ಧಾಂತ ಮುಂತಾದ
ಮಹಮಹಾಗ್ರಂಥಗಳ ಆಧಾರದಿಂದ,
ಇದು ನಿಮ್ಮ ಪ್ರೇಮಕುಮಾರಿಯ ಜಾತಕ.
ಎಷ್ಟೋ ಮಕ್ಕಳ ಹಾಗೆ ಇವಳಲ್ಲಿ ಋಣಪಾತಕ

ಬಿದ್ದ ಕೂಡಲೆ ಕೆಳಗೆ ಅತ್ತು, ಅಂಗಾತಮಲಗಿಸಲು
ಮೊಗ್ಗೆ ನಗು ನಕ್ಕವಳು ನಿಮಿಷದೆಲ್ಲೆ. ತೊಟ್ಟಿಲಲ್ಲಿದ್ದಂತೆ
ಬಳಿಕ ಹಾಸಿಗೆಯಲ್ಲು ಹಗುರಾಗಿ ಮಲಗುವಳು ಈಕೆ ಅಂಗಾತ.
ಆ ಹೊತ್ತು ಖಾಲಿಸೀಸೆಯತುಂಬ ಗಾಳಿಹರಡಿದ್ದಂತೆ
ಮೈಯೆಲ್ಲ ನಕ್ಕಳಿವಳು, ರೋಜಪಕಳೆಯ ಬಣ್ಣ ತೂಕದವಳು.
ಆಲಿಕೆಯು ಸೀಸೆಯೊಳಗಿಟ್ಟು ಸುರುವಿದ ಹಾಗೆ
ತುಂಬಿಕೊಳ್ಳುವುದಿವಳ ಮೂಲಪ್ರವೃತ್ತಿ.
ನೆಲ ಬಿಲ ಗೂಡು ಮನೆ ನೀರಿಗೂ ಇಂಥ
ಸ್ವಾರಾಧನೆಯ ಕೊಟ್ಟವಳು ತಾಯಿ ಪ್ರಕೃತಿ.

ವರ್ಷತುಂಬಿರಲಿಲ್ಲ ಅಲ್ಲವೇ ರಾಯರೆ,
ಕೇಳಿ ನಕ್ಕಿರಿ ಇವಳ ಪುಟ್ಟತೊದಲು,
ನಾಲ್ಕನೆಯ ವರ್ಷಕ್ಕೆ ಮೊಣಕಾಲ ಕೆಳಗೆಳೆದು
ಲಂಗಸುಕ್ಕನ್ನೊರೆಸಿ ಮುದ್ದುಮಾತಿಗೆ ಬಂತು ರೆಕ್ಕೆಮೊದಲು.
ಸೀರೆಯುನ್ನುಟ್ಟಾಗ ಸಿಲ್ಕಿನ ಸೀರೆ ಹರಿದಂತೆ,
ಎದೆಮುಚ್ಚಿ ಸೆರಗೆಳೆದು ಕಟ್ಟಿದರೆ
ಅಲಕಾವತಿಯ ವಿಧಿಯು ಭಾಂಡ ಬೈತಿಟ್ಟಂತೆ,
ಕಣ್ಣುಗಳು ಹೊರಳಿದರೆ ವಿದ್ಯುಲ್ಲತೆ ಲಕಲಕಿಸಿದಂತೆ.
ಕ್ರಮೇಣ ಅರಳುತ್ತ ಹೂವುಗಳ ತೋಟಕ್ಕೆ
ಇವಳ ಆರೋಗ್ಯ ಸವಾಲು. ಇದೆಲ್ಲ ಮಾಮೂಲು:
ದುಂಬಿಗಳಿಗೂ ಅಲ್ಲಿ ಹರಿವ ವಿದ್ಯುತ್ತಂತಿ
ಹಗಲಿರುಳು ಕಾವಲು. ಆದರೂ ದುಂಬಿದುಂಬಾಲು.

ಹುಟ್ಟಿದ್ದೆ ತಡ, ಇತ್ತನೋಡೆನ್ನುವುದೆ ಮುಖ್ಯಮಂತ್ರ
ಉಚ್ಛ್ವಾಸ ನಿಶ್ವಾಸವೂ ಒಂದು ಕಣ್ಸೆಳೆವ ತಂತ್ರ.
ಹುಟ್ಟಿದ್ದ ಹಾಗೆ ಮೆರೆಯುವವರೆಗೆ ಕಾತರ
ಬೆಳೆಯುಲಿ ಬಿಡಿ, ಫಲಬಿಟ್ಟರೂ ನಿಮಗೆ ಫಲವಿಲ್ಲ.

ಇವಳ ಬದುಕಲ್ಲಿ, ಚಿಗುರಲ್ಲಿ, ಹಸುರಲ್ಲಿ
ಸುಗ್ಗಿ ಕಾಲಿಟ್ಟಾಗ, ಜುಮುಜುಮು ಜುಮುಜುಮು
ಏನೊ ಯಾತನೆಯಲ್ಲಿ ಕಿರಿಕಿರಿಯಪಟ್ಟಾಗ
ಮೊಗ್ಗುಪಟ್ಟನೆ ಹೂವು ಗಾಳಿಗಮ್ಮೆಂದಾಗ
ಈ ಸುಭಗೆ ಫುಲ್ಲನೆ ಒಮ್ಮೆ ಲಜ್ಜಾನ್ವಿತೆ
ಅನಂಗನಾರೋಗಣೆಗೆ ಕಾದ ಪೂತೆ.
ಶನಿಮುಹಾರಾಯ ದೃಷ್ಟಿಯಿಟ್ಟಿದಾನೆ ಇವಳ ಮೇಲೆ
ಕುಜರಾಹುಸಂಧಿಗೂ ಕ್ರೂರಸಂಧಿಯ ಕಾಲ, ಸ್ವಲ್ಪಕಾಲ.
ಸಂದಿ ಸಂದಿಯನೋವು, ಬಿಗಿತ ಮೈಭಾರ,
ಇವಳ ಸಿಡಿಮಿಡಿಕಂಡು ಮಿಡುಕಬೇಡಿ.
ಇಲ್ಲ ಏನೂ ಅಪಾಯ, ಗುರುವಿನಿಂದ ಸಹಾಯ.
ಕ್ರೂರವಿದ್ದರು ಕೂಡ ಸಂಧಿಪರಿಹರಿಸುವನು ಒಬ್ಬ ಸರದಾರ
ಹದಿನಾರ ಹದಿನೆಂಟ ಕಾದುಕುಳಿತಿರಬೇಕು ಒಪ್ಪಿಸಲು ತನ್ನಪ್ರವರ.

ಅಮವಾಸ್ಯೆ ಹುಣ್ಣಿಮೆಗೊಮ್ಮೆ ಪತ್ತನೆಯಗ್ರಹ ತನ್ನ
ಭ್ರಮಣ ಪಥ ತಪ್ಪಿದರೆ ಈ ನಿತಂಬನಿಯ ಕಣ್ಣುಕೆಂಪಾದಾವು
ಗಾಳಿ ಮೈಕೈ ಸೆಟೆದು ಮಿಡುಕೀತು, ಆಗ ಆದರೆ ಮತ್ತೆ ಅಂಗಾತ
ಸ್ವಾಮಿ, ಸಲೀಸು ನಿಮ್ಮ ಪ್ರೇಮಕುಮಾರಿಯ ಜಾತಕ
ನವಮಾಸ ಕಳೆದರೆ ಸಾಕು ಹತ್ತುದಿನ ರಿದ್ಧಿ,
ಸಂತಾನ ಕುಡಿವರೆದು ವಂಶವೃದ್ಧಿ.

ಇವಳು ಮೀನಿನ ಹಾಗೆ. ಓಡಾಡುವ ನೀರಪರಿಧಿಯ
ಬಿಟ್ಟು ಚಲಿಸದಿದ್ದರು ಕೂಡ, ಕಾಯಿಸುವುದೇನು ಸರಿಯಲ್ಲ.
ನೀರ ಮೇಲೇ ನನ್ನು ಮುಚ್ಚುವುದು ಕೂಡ ತರವಲ್ಲ.
ಪ್ರಣಯದುಸಿರಾಟ ನೀರಲ್ಲಿ ಕರಗಿದ ಗಾಳಿ.
ಗಾಳಿ ಕಡಿಮೆಯಾದರೆ ಇವಳು ಸತ್ತಂತೆ
(ಕ್ಷಮಿಸಿ ಗ್ರಾಮ್ಯಕ್ಕೆ)
ಆಮೇಲೆ ಒಗೆದುಬಿಡಿ ಹಳೆಯ ಕಂತೆ.

ಇದಕ್ಕೆ ಪರಿಹಾರ ಬಹಳ ಸುಲಭ. ಎಷ್ಟೆ ಆದರು ವಯಸ್ಸು
ವರ್ಷಗಳ ಕಡಿಮೆ ಎಣಿಸಿದರೇನೆ ಇವಳ ಶ್ರೇಯಸ್ಸು.
ಸಾಕು ಸಾಕೆನ್ನುವುದು ಇಲ್ಲದಿದ್ದರುಸ್ವಾಮಿ, ಬೇಕು ಬೇಕೆನ್ನುವುದ
ಪೂರೈಸುತಿರಿ ಸಾಕು ಖಂಡಿತಾ ಹೆಚ್ಚುವುದು ಇವಳ ಆಯುಸ್ಸು.

ರಾಯರೇ ಇದು ನಿಮ್ಮ ಪ್ರೇಮಕುಮಾರಿಯ ಜಾತಕ
ಈ ಗೆರೆಯಮೀರಿದರೆ ಹತ್ತುದಿನ ಸೂತಕ.

ಗುಂಡ್ಮಿ ಚಂದ್ರಶೇಖರ ಐತಾಳ

ಬೆಳಗಾಯಿತು

'ಏಳು ಮಗುವೆ' ಎಂಬ ಉದಯರಾಗವನಜ್ಜ
ಹಾಡಿ ಆಕಳಿಪಾಗ ಬೆಳಗಾಯಿತು
ಮನೆಯ ಹೆಂಗುಸರೆಲ್ಲ ನಡುಬಾಗಿ ನೀರಿಟ್ಟು
ಹೊಸ್ತಿಲಿಗೆ ಹೂವಿಟ್ಟು ಬೆಳಗಾಯಿತು.

ಮನೆಯಾಕೆ ದರಬರನೆ ಮೊಸರನ್ನು ಕಡೆವಾಗ
ಕಂಕಣದ ಕಿಂಕಿಣಿಗೆ ಬೆಳಗಾಯಿತು
ಹೂ ತುಂಬ ಮಧುತುಂಬಿ ತುಂಬಿಗರ್ಪಿಸಲೆಂದು
ಹೂವು 'ಹ್ಞೂ' ಎಂದಾಗ ಬೆಳಗಾಯಿತು

ಹಸುವು 'ಅಂಬಾ' ಎಂದು ಕೋಳಿ 'ಕೊಕ್ಕೋ' ಎಂದು
ನಾಯಿ 'ಬಕ್ ಬವ್' ಎಂದು ಬೆಳಗಾಯಿತು
ಹಕ್ಕಿ ಚಿಲಿಪಿಲಿಗುಟ್ಟಿ ಮಕ್ಕಳಮ್ಮನ ಕರೆದು
ನೂರಾರು ರಾಗದಲಿ ಬೆಳಗಾಯಿತು.

ಅಳುವ ಕಂದನ ತಾಯಿ ಮಗನ ಮೀಯಿಸಿದಾಗ
ತೊಳೆದ ನಡು ಹೊಳೆಹೊಳೆದು ಬೆಳಗಾಯಿತು
ದೃಷ್ಟಿತಾಗುವುದೆಂದು ಮುದ್ದಿಟ್ಟು ಬೊಟ್ಟಿಟ್ಟು
ಕಿಲಕಿಲನೆ ನಕ್ಕಾಗ ಬೆಳಗಾಯಿತು.

ನೇಗಿಲಿನ ಯೋಗಿ ತಾ ಹೊಲದ ಹೊತ್ತಗೆಯಲ್ಲಿ
ನೂರಾರು ಗೀರೆಳೆದು ಬೆಳಗಾಯಿತು
ಸಾಲು ಸಾವಿರ ಕಾವ್ಯ ಕರ್ಮಯೋಗವ ಹಾಡಿ
'ಓ, ಓ' ರಾಗದಲಿ ಬೆಳಗಾಯಿತು.

ಇಬ್ಬನಿಗಳೊಬ್ಬುಳಿಯು ತಿರೆಯ ತಾರೆಗಳಂತೆ
ಮಿನುಗಿ ಮಾತಾಡಿದುವು: 'ಬೆಳಗಾಯಿತು'
ತಂಬೆಲರ ಬೀಸಣಿಗೆ 'ಬನ್ನಿ, ಬನ್ನೀ' ಎಂದು
ಹೂವುಗಳನುಪಚರಿಸಿ ಬೆಳಗಾಯಿತು.

ಸುವರ್ಣಸಂಪುಟ/೪೬೫

ಬಾನುಲಿಯ ಸುಪ್ರಭಾತವನು ಸಾರುವ ಮೊದಲೆ
ಜಗಕ್ಕೆಲ್ಲ ಬೆಳ್ಳನೆಯ ಬೆಳಗಾಯಿತು
ವೃತ್ತಪತ್ರಿಕೆಯೆಲ್ಲ ದಿನವಾರ ಪಂಚಾಂಗ
ಹೊತ್ತು ಹೇಳುವ ಮೊದಲೆ ಬೆಳಗಾಯಿತು.

ಎನಿತು ಜನ ಎನಿತು ಮನ ಎನಿತೆನಿತು ಇನಿದನಿ
ಎನಿತು ವೈಭವ ! ಈ 'ಬೆಳಗಾಯಿತು' !
ದಿನದಿನವು ಬೆಳಕೊಂದೆ, ದಿನದಿನವು ಇನನೊಂದೆ
ಎನಿತು ತರತರದ ಈ 'ಬೆಳಗಾಯಿತು' !

ಕೆ. ಎಸ್. ನಿಸಾರ್ ಅಹಮದ್

ಪಂಜರದ ಗಿಣಿ

ಅರಮನೆಯ ಒಳಕೋಣೆ:
ದೀಪ, ಅಗರಿನ ಧೂಪ, ಹೂವು, ವೀಣೆ-
ಮೈಮರೆಸಬಹುದಿಲ್ಲಿ ನಿದ್ರೆ, ಹಾಸಿನ ಮೇಲೆ ಒರಗಿದ್ದರೆ;
ಮರಿಗಿಳಿಗೆ ಎಲ್ಲವೂ ಬಹಳ ಚೆನ್ನಾಗಿತ್ತು,
ಹೊನ್ನಪಂಜರ ಮಾತ್ರ ಇರದಿದ್ದರೆ.

ಹುಟ್ಟಿದ್ದು ಕಾಡೂರು; ಬೆಳೆದದ್ದು ಈ ಊರು
ತೊದಲಂಬೆಗಾಲುಗಳ ದಿನದ ನೆನಪಿಗೆ ನನ್ನ ಮನಸು ತವರು:
ಹೆಮ್ಮರನ ಗೂಡಿನಲಿ ತಾಯ ಕೊರಳನು ಬಳಸಿ
ಚಳಿಯಲ್ಲಿ ಮಲಗಿದಾಗ,
ಪ್ರಪ್ರಥಮ ರವಿಕಿರಣ ಉಗುರು ಬೆಚ್ಚನೆ ಬೆಳಕ
ತಂದು ಚಿಮುಕಿಸಿದಾಗ,
ಕಣ್ಣರಳಿ, ನೋಡಿದ್ದೆ: ಬಣ್ಣಗಳ ಮೆರವಣಿಗೆ
ಹಾರಿದ್ದೆ ಅದರೊಡನೆ ಬೇಗ, ಬೇಗ.
ತಾಯಿ ಕೊಟ್ಟ ತಯಾರಿಗೆದೆ ಉಬ್ಬಿ ಹಾಡಿದ್ದೆ
ಬೆರೆಸಿ ಹರಯದ ಮದವನೆನ್ನ ದನಿಗೆ;
ಮೈಕಾವನಾರಿಸಲು ಕೆಣಕಿದ್ದೆ ಚೆಲುವನ್ನು
ಮರಗದೆಯೆ ಯಾತನೆಗೆ, ಕಣ್ಣಹನಿಗೆ.
ಕುಟುಕ ಚಾಳಿಗೆ ಬೇಟೆ, ಕೀಟ, ಹುಳುಹುಪ್ಪಟೆ-
ಇದ್ದರಲ್ಲವೆ ಅಲ್ಲಿ ಅಂಕೆ ನನಗೆ!

ಬೇಸಗೆಯ ದಾಹಕ್ಕೆ ಬಲಿಯಾದ ಹೊಳೆ ನಾನು:
ಮಳೆ ಮಾಂತ್ರಿಕನ ಹೆಜ್ಜೆದನಿಗೆ ಕಾದಿರುವವನು.
ಅವನಿನ್ನು ನನ್ನೆಡಗೆ ಬಾರನೇನು?
ಬತ್ತಿದೆದೆಯಲಿ ಮತ್ತೆ ನಗುವ ನೀರನು ಬಿತ್ತಿ
ಕಡಲೆಡೆಗೆ ಕೈ ಹಿಡಿದು ನಡೆಸನೇನು?

ನಾನೀಗ ಮರಿಜಿಂಕೆ
ಹೆಜ್ಜೆ ಹೆಜ್ಜೆಗು ಶಂಕೆ
ಹುಲಿಯ ನೋಟದ ಬೆಂಕಿ ಹೊದರಿನಲ್ಲಿ.

ಶುಭ್ರಕಾಸಾರ ಜಲ
ಹೊಳೆ ಹೊಳೆದು ಎಷ್ಟೊ ಸಲ
ಸೆಳೆಯುತಿದೆ, ಆ ಬೆಟ್ಟದೆದುರಿನಲ್ಲಿ.

ಬಳಗವಗಲಿದ ತಿರುಕಿ
ಕತ್ತಲಲಿ ಏಕಾಕಿ
ಬಳಕೆಯಿಲ್ಲದ ದಾರಿ ನೂಕಬೇಕು.
ಪ್ರಾಯ ತುಳುಕುವ ಕಾಯ
ತಪ್ಪಿ ನಡೆದರಪಾಯ
ತಲೆವಾರ ಗೌರವವನುಳಿಸಬೇಕು !

ಅರಸನಾತಿಥ್ಯಕ್ಕೆ ಪಾದ ಬೆಳೆಸುವುದುಂಟು
ರಾಜಧಾನಿಗೆ ರಾಯಭಾರಿ ಬಳಗ:
ತಿಂದಾದ ಮೇಲೊಂದು ಗಳಿಗೆ ಮನರಂಜನೆ,
ಕಲಿತ ವಿದ್ಯೆಯ ಮೆರೆವ ಸಮಯವಾಗ
ಜಾಣ ಮಾತಿನ ಸರಣಿಗೆಲ್ಲರೂ ತಲೆದೂಗಿ ಹರಸುವವರೆ:
“ ಎಲ್ಲಿ ಕಲಿತೆಯೊ ಕಂದ, ನಾಲಗೆಯ ಚುರುಕನ್ನು
ಆನಂದವಾಗುವುದು, ಹೇಳೊ ಮುಂದೆ ”
ಮುತ್ತಿಟ್ಟು ಮೈದಡವಿ ಮುಗಿಲಿಗೇರಿಸುವವರೆ—
ನಗುವಿನಮಲಿಗೆ, ಮಾತು ಕಳ್ಳ ಬುಡೆ !
ಎಲ್ಲ ಚೆನ್ನಾಗೆ ಇದೆ:
ಈ ನುಡಿಯ ಔದಾರ್ಯ, ಮುಖಸ್ತುತಿಯ ಮಾಧುರ್ಯ, ಈ
ರಾಜ ಮರ್ಯಾದೆ,
ಎಲ್ಲೆಲ್ಲ ಬಲು ಸೊಗಸು: ಬದುಕು ಹೂವಿನ ಹಾಸು
ಪಂಜರದ ಬಾಗಿಲನು ತೆರೆದಿದ್ದರೆ !
ಸಿಂಗರದ ನೆಪದಲ್ಲಿ ಕಾಲು ಬಿಗಿದಿರುವಂಥ
ನಕಲಿ ಚಿನ್ನದ ದಾರ ಇರದಿದ್ದರೆ !

ಕುರಿಗಳು, ಸಾರ್, ಕುರಿಗಳು

ಕುರಿಗಳು, ಸಾರ್, ಕುರಿಗಳು:
ಸಾಗಿದ್ದೇ
ಗುರಿಗಳು.
ಮನೆಯಲ್ಲಿ ಒಂದಾಗಿ, ಸ್ವಂತತೆಯ ಬಂದಾಗಿ

ಇದರ ಬಾಲ ಅದು ಮತ್ತೆ ಅದರ ಬಾಲ ಇದು ಮೂಸಿ,
ದನಿಕುಗ್ಗಿಸಿ, ತಲೆತಗ್ಗಿಸಿ
ಹುಡುಕಿ ಹುಲ್ಲು ಕಡ್ಡಿ ಮೇವು, ಅಂಡಲೆಯುವ ನಾವು, ನೀವು,
ಕುರಿಗಳು, ಸಾರ್, ಕುರಿಗಳು:
ನಮಗೊ ನೂರು ಗುರಿಗಳು.
ಎಡದಿಕ್ಕಿಗೆ, ಬಲದಿಕ್ಕಿಗೆ, ಒಮ್ಮೆ ದಿಕ್ಕು ಪಾಲಾಗಿ,
ಒಮ್ಮೆ ಅದೂ ಕಳೆದುಕೊಂಡು ತಾಟಸ್ಥ್ಯದಿ ದಿಕ್ಕೆಟ್ಟು
ಹೇಗೆ ಹೇಗೊ ಏಗುತಿರುವ,
ಬರೀ ಕಿರುಚಿ ರೇಗುತಿರುವ,
ನೊಣ ಕೂತರೆ ಬಾಗುತಿರುವ,
ತಿನದಿದ್ದರು ತೇಗುತಿರುವ,
ಹಿಂದೆ ಬಂದರೊದೆಯದ, ಮುಂದೆ ಬರಲು ಹಾಯದ
ಅವರು, ಇವರು, ನಾವುಗಳು
ಕುರಿಗಳು, ಸಾರ್, ಕುರಿಗಳು.

ಮಂದೆಯಲ್ಲಿ ಎಲ್ಲವೊಂದೆ ಆದಾಗಲೆ ಸ್ವರ್ಗ ಮುಂದೆ
ಅದಕಿಲ್ಲವೆ ನಾವುತ್ತರ?
ಮೆದುಳಿನಲ್ಲಿ ತಗ್ಗೆತ್ತರ,
ಹಿರಿದು, ಕಿರಿದು ಮಾಯಿಸಿ,
ಒಬ್ಬೊಬ್ಬರಿಗಿರುವ ಮೆದುಳ ಸ್ವಾರ್ಥದ ಉಪಯೋಗದಿಂದ
ಇಡಿ ಮಂದೆಗೆ ಹಾಯಿಸಿ,
ಹೊಟ್ಟೆ ಬಟ್ಟೆಗೊಗ್ಗದಂಥ ಕಲೆಯು ಕರ್ಮ ಕಳಿಯದಂತೆ
ತಲೆಬೆಲೆಯ ಸುಧಾರಿಸಿ,
ಬಿಳಿ ಕಪ್ಪಿನ ದ್ವಂದ್ವಗಳಿಗೆ ಮಾಡಿಸಿ ಸಮಜಾಯಿಷಿ,
ನಮ್ಮ ಮೆದುಳು ಶುದ್ಧಿಯಾಗಿ, ಬುದ್ಧಿ ನಿರ್ಬುದ್ಧಿಯಾಗಿ,
ಕೆಂಬಣ್ಣವನೊಂದೆ ಪೂಸಿ,
ಅದರ ಬಾಲ ಇದು ಮತ್ತೆ ಇದರ ಬಾಲ ಅದು ಮೂಸಿ
ನಡೆವ ನಮ್ಮೊಳೆಲ್ಲಿ ಬಿರುಕು?

ನಮ್ಮ ಕಾಯ್ವ ಕುರುಬರು:
ಪುಟಗೋಸಿಯು ಮೊನ್ನೆತಾನೆ ಕಿತ್ತು ಪಂಚೆಯುಟ್ಟವರು
ಶಾನುಭೋಗ ಗೀಚಿದಕ್ಕೆ ಹೆಬ್ಬೆಟ್ಟನು ಒತ್ತುವವರು.
ಜಮಾಬಂದಿಗಮಲ್ದಾರ ಬರಲು ನಮ್ಮೊಳೊಬ್ಬನನ್ನ
ಮೆಚ್ಚಿ. ಮಸೆದ ಮಚ್ಚ ಹಿರಿದು ಕಚಕ್ಕೆಂದು ಕೊಚ್ಚಿ ಕತ್ತ,

ಬಿರಿಯಾನಿಯ ಮೆಹರುಬಾನಿ ಮಾಡಿ ಕೈಯ್ಯ ಜೋಡಿಸುತ್ತ
ಕಿಸೆಗೆ ಹಸಿರುನೋಟು ತುರುಕಿ, ನುಡಿಗೆ ಬೆಣ್ಣೆ ಹಚ್ಚುವವರು.

ಬಿಸಿಲಿನಲ್ಲಿ ನಮ್ಮ ದೂಡಿ, ಮರದಡಿಯಲ್ಲಿ ತಾವು ಕೂತು
ಮಾತು, ಮಾತು, ಮಾತು, ಮಾತು
ಮಾತಿನ ಗೈರತ್ತಿನಲ್ಲೆ ಕರಾಮತ್ತು ನಡೆಸುವವರು.
ನಮ್ಮ ಮೈಯ ತುಪ್ಪಟವ ರವಷ್ಟು ಬಿಡದಹಾಗೆ ಸವರಿ
ಕಂಬಳಿಗಳ ನೇಯುವಂಥ ಯೋಜನೆಗಳ ಹಾಕುವವರು.
ಮಾರಮ್ಮನ ಮುಡಿಗೆ ಕೆಂಪು ದಾಸವಾಳ ಆಯುವವರು
ಬೆಟ್ಟದಾಟಿ ಕಿರುಬ ನುಗ್ಗಿ, ನಮ್ಮೊಳಿಬ್ಬರನ್ನ ಮುಗಿಸಿ
ನಾವು 'ಬ್ಯಾ, ಬ್ಯಾ' ಎಂದು ಬಾಯಿಬಾಯಿ ಬಡಿದುಕೊಂಡು
ಬೊಬ್ಬೆ ಹಾಕುತಿದ್ದರೂ
ಚಕ್ಕಭಾರ ಆಟದಲ್ಲೆ ಮಗ್ನರು ಇವರೆಲ್ಲರು
ನಮ್ಮ ಕಾಯ್ವ ಗೊಲ್ಲರು.

ದೊಡ್ಡಿಯಲ್ಲಿ ಕೂಡಿಹಾಕಿ ನಿಲ್ಲಲಿಲ್ಲ, ಕೂರಲಿಲ್ಲ,
ಎದ್ದರೆ ಸರಿದಾಡಲಿಲ್ಲ, ಬಿದ್ದರೆ ಹರಿದಾಡಲಿಲ್ಲ,
ದೀಪದ ದೌಲತ್ತು ಇಲ್ಲ,
ಗಾಳಿಯ ಗಮ್ಮತ್ತು ಇಲ್ಲ,
ಕಿಂಡಿಯಿಂದ ತೆವಳಿಬಂದ ಗಾಳಿಕೂಡ ನಮ್ಮದೇನೆ:
ನಮ್ಮ ಮುಂದೆ ಕುರಿಯ ಸುಲಿದು ಆಚೆ ಅಲ್ಲಿ ಉಪ್ಪುಸವರಿ
ಒಣಗಲಿಟ್ಟ ಹಸಿತೊಗಲಿನ ಬಿಸಿ ಬಿಸಿ ಹಬೆವಾಸನೆ,
ಇರಿಯುತಿಹುದು ಮೂಗನೆ!
ಕೊಬ್ಬಿರುವೀ ಮಬ್ಬಿನಲ್ಲಿ, ಮೈನಾತದ ಗಬ್ಬಿನಲ್ಲಿ
ಇದರ ಉಸಿರು ಅದು ಮತ್ತೆ ಅದರ ಉಸಿರು ಇದು ಮೂಸಿ
ಹೇಸಿದರು ನಿಭಾಯಿಸಿ,
ತಾಳ್ಮೆಯನೆ ದಬಾಯಿಸಿ,
ನಮ್ಮನಾವೆ ಅಂದುಕೊಂಡೊ, ಉಗುಳುಂಗಿ ನೋದುಕೊಂಡೊ,
ನಂಬಿಕೊಂಡು ಏಗುತಿರುವ ನಾವು, ನೀವು, ಇಡೀ ಹಿಂಡು
ಕುರಿಗಳು, ಸಾರ್, ಕುರಿಗಳು.

ತಳವೂರಿದ ಕುರುಬ ಕಟುಕನಾದ; ಅವನ ಮೆಚ್ಚೋ ಅಹ!
ಏನು ರಥುಳಪು, ಏನು ಹೊಳಪು, ಏನು ಜಾದು, ಏನು ಮೋಹ!
ಆ ಹೊಳಪಿಗೆ ದಂಗಾಗಿ ಕಣ್ಣೆಗದೇ ರಂಗಾಗಿ,
ಒಳಗೊಳಗೇ ಜಂಗಾಗಿ

ಕಣ್ಣು ಕುಕ್ಕಿ, ಸೊಕ್ಕಿರುವ, ಹೋಗಿ ಹೋಗಿ ನೆಕ್ಕಿರುವ,
ಕತ್ತನದಕೆ ತಿಕ್ಕಿರುವ
ನಾವು, ನೀವು, ಅವರು, ಇವರು
ಕುರಿಗಳು, ಸಾರ್, ಕುರಿಗಳು !
ಮಚ್ಚಿನ ಆ ಮೆಚ್ಚದಲ್ಲಿ ಅದರಾಳದ ಕಿಚ್ಚಿನಲ್ಲಿ
ಮನೆ ಮಾಡಿವೆ ಹುಚ್ಚಿನಲ್ಲಿ
ನಮ್ಮೆಲ್ಲರ ಗುರಿಗಳು !
ಕುರಿಗಳು, ಸಾರ್, ಕುರಿಗಳು . . . . .

ಕಾರವಾರದ ಕಡಲ ದಂಡೆಯಲ್ಲಿ

ಅಮೃತ ಮಂಥನ ಮುಗಿಯೆ ಆಯಾಸ ಪರಿಹಾರ
ಕೆಂದು ಶರದಿಯನುಳಿದು ಮಿಲುಗಾಡದೊರಗಿರುವ
ವಾಸುಕಿಯು ತೆರೆದೊಳಿದೆ ದಡದ ಮೇಲಿನ ರಸ್ತೆ.
ಹಿನ್ನೆಲೆಗೆ ಗಂಭೀರ ಮಲಯು ಮಹಿಧರ ವಿಹುದು
ಮಂದರ ತೆರದಲ್ಲಿ: ಕಡೆಹದಲಿ ಅಂಟಿರುವ
ಅಮೃತ ಬಿಂದುಗಳಂತೆ ಬೆಳ್ಳಗಿನ ಸೌಧಗಳು
ಮೇಲೆ ಕಂಗೊಳಿಸುತಿವೆ ಕಿರಿದಾಗಿ.

ಕಾಳಿನದಿ ಸಂಗಮದವರೆಗು ಹಾಸಿದೆ ಮರಳು
ಶಂಖದಾಕಾರದಲಿ; ಸಾಗರದ ಅಂಚಿನಲಿ
ನಿಂತು ಸೀರೆಯನೆತ್ತಿ ಕೈಯಲ್ಲಿ ಹಿಡಿದಿರುವ
ಚೆಲುವೆ ಕೊಂಕಣಿ ಹೆಣ್ಣ ನುಣ್ದೊಡೆಯ ಬಣ್ಣವಿದೆ.
ಉಪಯೋಗಿಸದೆ ಕೆಡದ ಮುರುಕುದೋಣಿಯು ತಳದ ಹಾಗೆ,
ಮೀನ ನಾಯುತಲಿರುವ ಬೆಸ್ತ ಹೆಣ್ಣಿನ ಕಿವಿಯ ಓಲೆ ಹಾಗೆ,
ಕೈಯ ಕುಕ್ಕೆಯು ಬಿದುರ ಕಪ್ಪು ಬೆತ್ತದ ಹಾಗೆ,
ಮರಳಿಹುದು ಸಮೆ ಸಮೆದು ನುಣುಪಾಗಿ.

ಸಾಮು ಮಾಡುತ ಕಡಲಿನೊಡಲ ಹೆಗ್ಗರುಡಿಯಲಿ
ಅಲೆಯ ಮೇಲಲೆ ಹಾಯ್ದು ಹೋರುತಿರುವೆ;
ರುದ್ರಾಟ್ಟ ಹಾಸದಲಿ ಚೀರುತಿವೆ.
ದೂರದಲ್ಲಗೊ ಅಲ್ಲಿ, ರಾಜಘಡದ ದ್ವೀಪ
ಆಳದಿಂದೆದ್ದಿರುವ ಜಲ ಕನ್ಯೆಯಂತಿಹುದು:

ಅಲ್ಲಿ ಬೆಳೆದಿಹದ ವೃಕ್ಷ ಸ್ಪಷ್ಟ ರೇಖೆಗಳು
ಬಾಸೆಯುಂತಿವೆ: ಮೇಲೆ ನೆಟ್ಟ ದೀಪಸ್ತಂಭ,
ಹದಿಬದೆಯು ಹಣೆಯಲ್ಲಿ ನೆಲಸಿ ಶೀಲವ ಕಾಯ್ವ
ತಿಲಕದೆಚ್ಚರಿನಂತೆ ಸುತ್ತಲೂ ನಿಟ್ಟಿಸಿದೆ
ತನ್ನ ಬೆಳಕಿನ ದಿಟ್ಟಿಯಿಂದ ಗಂಧದ ಚಕ್ಕೆ
ಉರಿದುರಿದು ಬರಿ ಬೂದಿಯಾದರೂ ಸೌಗಂಧ
ಸುತ್ತ ಹರಡಿರುವಂತೆ: ಅನುಭವವು ಮುಗಿದರೂ
ಅದರ ಸಂವೇದನೆಯೆ ಸ್ಮೃತಿಯಾಗಿ ಉಳಿವಂತೆ;
ಕಾವ್ಯದ ಧ್ವನಿಯಂತೆ, ರವಿಯುಸ್ತಮಿಸಿದರೂ
ನಭಕೆ ಮೆತ್ತಿದೆ ರಾಗವೈಭವ ಶ್ರೀ ಶೋಭೆ.

ಹೆದ್ದೆರೆಯನೇರೇರಿ ತೂಗಿ ಬರುತಿವೆ ದೋಣಿ:
ಬೆಸ್ತಹೆಣ್ಣಿನ ಬತ್ತಲೆದೆಯು ಬಳುಕಿನ ತೆರದಿ;
ಮೊಹರಮ್ಮಿನಲಿ ಊರ ಮೆರವಣಿಗೆ ಹೊರಟಿರುವ
ತಾಬೂತಿನಗ್ರದಲಿ ಒಲೆವ ಗೋಪುರದಂತೆ.
ಬೆಸ್ತರಿಗೊ ಹರಡಿದರು ದಡದಲ್ಲಿ ಬಲೆಯನ್ನು
ಬೆಳ್ಳಿನಾಣ್ಯಗಳಂಥ ಕಿರುಮೀನು ಪುಟಿಯುತಿವೆ
ಕಾದ ಕಾವಲಿಯಲ್ಲಿ ಸುರಿದ ಕಾಳಿನ ಹಾಗೆ—
ಗೂಢ ಚಿತ್ತ ಸಮುದ್ರ, ಸ್ವಪ್ರತಿಭೆ ಹಿರಿಯ ಬಲೆ
ಭಾವಗಳೆ ಮೀನುಗಳು ಎನಿಸಿಹುದು ನನಗೆ.
ಮುನ್ನೀರಿನಗಲಕ್ಕೆ, ಆಳಕ್ಕೆ, ಧೀರತೆಗೆ
ಅಲ್ಪತೆಯು ಪರಿಸರವೆ? ಅರಮನೆಯ ಪಕ್ಕದಲಿ
ಇರಬಹುದೆ ಹೊಲಗೇರಿ? ತಕ್ಕ ಸಾನ್ನಿಧ್ಯವಿದೆ
ಸಲಿಲ ನಿರ್ಘೋಷಕ್ಕೆ! ಮೇಲೆ ನೀಲಾಕಾಶ,
ಬಲಕೆ ಮಲಯಾವೇಶ, ಬದಿಗೆ ಅದ್ಭುತ ರಮ್ಯ
ಪ್ರಕೃತಿಮಾತೆಯ ಹಚ್ಚಹಸಿರು ವೇಷ.

ನವೋದಯ

೧

ಕೊ ಕ್ಕೊ ಕ್ಕೋ: ನವೋದಯ. ಹೊಸ ನಗಾರಿ:
ಕದಲಿತು ಪರಂಪರೆ ಒಂದೆರಡು ಡಿಗ್ರಿ.
ಕಂದ ವಾರ್ಧಿಕ ರಗಳೆ ವೃತ್ತಗಳ ದಟ್ಟಡವಿ

ನುಗ್ಗಿ ನಡೆದರೆ ಮುಂದೆ ಶತಮಾನಗಳ ಮರುಭೂಮಿ;
ಉಸುಬಿನಲ್ಲಿ ಅಲ್ಲಲ್ಲಿ ಪೊದರು, ಕುರುಚಲು, ಕಳ್ಳಿ
ತಲೆಯೆತ್ತಿದರೆ ಮೇಲಕ್ಕೆ ಕಾದ ಕೆಂಪನೆ ಕೊಳ್ಳಿ.
ಸುತ್ತ ಮರಳೇ ಮರಳು: ಮರುಳು ಮನಸಿನ ತುಂಬ
ದೆವ್ವಗಳ ನೆರಳು;
ದಾಪುಗಾಲಲಿ ದಾಟಿ ಮುನ್ನಡೆಯುತಿದ್ದೆವೋ ಮಬ್ಬಿನಲಿ
ಕೊ ಕ್ಕೊ ಕ್ಕೋ—
ಉದಯಾನುಭವದಲ್ಲೆ ಹೊಸ ನೆಲೆಯ ಚೆಲುನೋಟ
ಸಿಹಿನೀರ ತಿಳಿಭಾವಿ, ತೆಂಗು, ಬಾಳೆಯ ತೋಟ.

೨

ಅತಿ ಪುರಾತನನಲ್ಲ, ಬದುಕಿದ್ದರೀವೊತ್ತು ನಿನಗೆ ತೊಂಬತ್ತೇಳು:
"ಅಜ್ಜ, ಅಜ್ಜಾ ಹೇಳು, ಲವಕುಶರ ಕತೆ ಹೇಳು"
ಎನ್ನುತಿದ್ದೆವು ನಾವು, ನೀನು ಮುಟ್ಟಲು ಕಾಯುತಿರಲು
ದೂರದ ರೇವು.
ನಡೆಯುತಿದ್ದೆಯೊ ಹೇಗೊ ಹೇಳಲಾರೆ:
ಹಗಲಲ್ಲಿ ಹಾಸಿಗೆಯನೊರಗದಿದ್ದರು ರಾತ್ರಿಯೆಲ್ಲ ಕೂತಿರುತಿದ್ದೆ;
ಬೆಳಕು ಇಂಗಿದ ಮಂಜುಗಣ್ಣಿಂದ ಬಾಲಕರ ಜೂಟಾಟ
ನೋಡುತ್ತ, ನಡುನಡುವೆ ಮಾಡುತ್ತ ಸಣ್ಣ ನಿದ್ದೆ
ಮಧ್ಯಾಹ್ನ ಕಳೆಯುತಿದ್ದೆ.
ಲಾಂಕೋಟು ಪೇಟಗಳ ನೆಳೆದೆಳೆದು ಜಗ್ಗಿಸುತ,
ಚಶ್ಮವನು ಹಾರಿಸುತ, ಪದಕವಗಲದ ನಿನ್ನ ಹಳೆ ನಮೂನೆಯ
ಕಿಸೆಯ ಗಡಿಯಾರ ವೆಗರಿಸುತ 'ಅಜ್ಜ ಟೈಮೆಷ್ಟಜ್ಜ?' ಎಂದು
ಅಣಕಿಸುತಿರಲು, ನಡೆಗೋಲ ಬಚ್ಚಿಟ್ಟು ನೀನು ತಡವುತ್ತಿರಲು
ಚಪ್ಪಾಳೆ ತಟ್ಟಿ ಹೋ, ಅಹಹ ಎಂದರಚಿರಲು, ಹಲ್ಲಿರದ
ಒಸಡುಗಳ ಕಚ್ಚಿ ಕೂಗುತ್ತಿದ್ದೆ;
ಕಾಲ ಕೆಟ್ಟಿತು, ವಯಸಿಗಿಲ್ಲ ಗೌರವವೆಂದು ವ್ಯರ್ಥ ರೇಗುತ್ತಿದ್ದೆ.

೩

ಇದ್ದಿದ್ದರೀವೊತ್ತು ನಿನಗೆ ತೊಂಬತ್ತೇಳು:
"ಅಜ್ಜ, ಅಜ್ಜಾ ಹೇಳು, ರಾಮಾಯಣದ ಕತೆ ಹೇಳು"
ಪದ್ಯ ವಧ್ಯವೆ? ಗದ್ಯ ಹೃದ್ಯವೆ ಅಜ್ಜ?
ವ್ಯಾಕರಣದಾರೋಗ್ಯಕಾರಿಯಲ್ಲದ ಬೊಜ್ಜ
ನೀಗಿಸಲು ಕಾವ್ಯದಿಂದೀ ಮಾತ ಪ್ರಕಟಿಸಿದೆಯಾ?

ಕಾಲಕ್ಕೆತಕ್ಕಂತೆ ನಟಿಸಿದೆಯಾ?
ಶಾಸ್ತ್ರೀಯ ಸಂಗೀತ, ಪ್ರಾಸ ಛಂದೋಬಂಧ
ನೀಡಲಿಲ್ಲವೆ ನಿನಗೆ ಚಿಕ್ಕಂದಿನಲಿ ಆನಂದ?
ಯಕ್ಷಗಾನದ ಹೊಚ್ಚ ಹೊಸತಾದ ಪೋಷಾಕು ನಿನ್ನ ಕಾವ್ಯಕೆ ಧರಿಸಿ
ಮೆರವಣಿಗೆ ಹೊರಟಾಗ
ಬಿಡಿಸಲಿಲ್ಲವೆ ಭೂತ ಗೊಡ್ಡು ಪಂಡಿತರೆಲ್ಲ ಸೊಕ್ಕಿನಲಿ ನಕ್ಕು?
ಇಂಗ್ಲಿಷಿನಭ್ಯಾಸ ಹೇಗೆ ಸಾಗಿತು ಅಜ್ಜ?
ಎ ಬಿ ಸಿ ಡಿ ಯ ದಾಟಿ ವೈಜಡ್ಡಿಗೇರಿತೆ?
ಇಲ್ಲ ಬಿಸಿಯುತ್ಸಾಹ ದಾರಿಯಲೆ ಆರಿತೆ?
ಹುಚ್ಚಜ್ಜ, ನಿನಗೆಲ್ಲೊ ಹುಚ್ಚು:
ನಿನ್ನಂಥ ಮಂದಿ ಈಗಿಲ್ಲ ಹೆಚ್ಚು.
ನೀರಿಳಿಯದ ಗಂಟಲಲಿ ಕಡುಬ ತುರುಕಿದ ಹಾಗೆ
ಅನ್ನಿಸಿತು ಬರವಣಿಗೆ ನಿನಗಾಗ, ಬಲು ಬೇಗ-
ನಮಗಿನ್ನು ಹೋಗಿಲ್ಲ ಹಳೆಯ ರೋಗ: ಅರವತ್ತರಲು ಕೂಡ
ಬೆಳಸಿಕೊಂಡಿದ್ದೇವೆ ಸಕ್ಕದದ ಸೋಗ.
ಒಂದಂತು ಒಳ್ಳೆಯದೇ:
ಅದೆ ನಮ್ಮ ತಾಖತ್ತು: ಗದೆ-
ಕಿಟಲ್ ಡಿಕ್ಷನರಿಯ ಹೊಡೆಯದಿದ್ದರು ಕೊಳ್ಳೆ
ನಿನ್ನಂತೆ, ಹೊಡೆದಿದ್ದೇವೆ ಹಳಗನ್ನಡದ ಗಂಟು ಗಂಟಾದ ಶಬ್ದಗಳ ಸೊಳ್ಳೆ.
ರಾಮಾಶ್ವಮೇಧ:
ನಿನ್ನ ಹಾಗೂ ನಿನ್ನ ಧರ್ಮಪತ್ನಿಯ ವಾದ ಸಂವಾದಗಳ ಗೋದಾ—
ಚಾಲಾಕಿ ನಾಲಗೆಯ ಪಟ್ಟುಗಳು,
ಸವಾಲೆತ್ತಿ ಸೋಲಿಸಲು ಹಾಸ್ಯದಲಿ ಇಬ್ಬರೂ ಬಡಿದ ತೊಡೆತಟ್ಟುಗಳು,
ತಿಳಿವ್ಯಂಗ್ಯದಾಳದಲಿ ತತ್ತ್ವಗಳ ಹುಟ್ಟುಗಳು, ಏನೇನೊ ಗುಟ್ಟುಗಳು.
ಶಾಲೆಯಲಿ ಮಾಸ್ತರಿಕೆ ಹೇಗಿತ್ತು?
ಮೆಹನತ್ತು ಮೂಡಿಸುತ ಹೊಮ್ಮಿತೇ ಆಜ್ಞೆಯ ಸೊಲ್ಲು?
ಬಡಿದಿದ್ದರೂ ಬೆಲ್ಲು ನಿಲ್ಲಿಸಲಿಲ್ಲವೆ ಡ್ರಿಲ್ಲು?
ಇತ್ತೆ ಆಗ ಅಶಿಸ್ತು, ಗಲಭೆ, ಮುಷ್ಕರ, ಗುಲ್ಲು?
ಸಾಘಾದ ಮೈದಾನದತಿ ಸಣ್ಣ ನೆಲೆಯಲ್ಲಿ
ಗಾಣದೆತ್ತಿನ ಕರ್ಮದೆಡಬಲದ ಬಲೆಯಲ್ಲಿ
ತೊಳಲಾಡುತಿದ್ದೇನೆ ನಾನು ಸಹ ನಿನ್ನಂತೆ;
ಅಧಿಕಾರಿ ಬಂದೊಡನೆ ನನಗರಿಯದಂತೆಯೇ ಸಾರುವುದು
ಬಲಗೈ ಸಲಾಮು; ಪರತಂತ್ರ ನಾನಿನ್ನೂ,
ಹೊಟ್ಟೆಪಾಡ ಗುಲಾಮು.

ಸಪ್ತಾಕ್ಷರೀ ಮಂತ್ರ ಜಪಿಸುತ್ತಲೇ
ಕೊನೆವರೆಗು ನೆಮ್ಮದಿಗೆ ತಪಿಸುತ್ತಲೇ ನಡೆದಾತ—
ಗ್ರಾಸಕ್ಕೆ ಬದಲಾಗಿ ಹಾಸ
ಸಿರಿವಂತಿಕೆಯು ಬದಲು ರಸಿಕತೆಯು ಪಡೆದಾತ—
ಹಳೆಯ ನೆನಪುಗಳ ಕೆದಕಿ ಘಾಸಿಗೊಳಿಸಿದೆ ಅಜ್ಜ,
ಕ್ಷಮಿಸು;
ಸಧ್ಯಕ್ಕೆ ಇಷ್ಟು ಸಾಕು.

೪

ನೀನಿಲ್ಲವೀಗ ದೇಹವ ಹೊತ್ತು,
ಬಂದ ನೇಪಥ್ಯಕ್ಕೆ ಸಂದು ಆಗಿದೆ ಬಹಳ ಹೊತ್ತು;
ತಮವ ನೋಡಿಸಲೆಂದು ಹಚ್ಚಿದ್ದ ಕಂದೀಲು
ಉರಿಯುತಿದೆ ಹಗಲಲ್ಲು.
ನೀ ನೆಟ್ಟು, ಫಲವುಣದೆ ನಡೆದ ಮರ ಮರದಲ್ಲಿ ನೂರು ಸಿಹಿ ಎಳನೀರು,
ದಾರಿಹೋಕರ ತೃಪ್ತಿ, ತಣ್ಣೆಳಲ ಸೂರು.
ಕೇಳು, ಒಳಗೊಳಗೆ ನಕ್ಕು,
ಕೊನೆಯ ವಾಕ್ಕು:
ಕಪ್ಪೆಗೆ ಹೊಂಡವೇ ಬ್ರಹ್ಮಾಂಡ;
ಅರಬ್ಬೀ ಸಮುದ್ರ ಬಯಸುವುದು ತಿಮಿಂಗಿಲ, ಷಾರ್ಕು.
ಹೆಂಬೇಡಿಯಲ್ಲ, ಬಹದ್ದೂರ್ ಗಂಡ;
ಅಮರತೆ ನಿನ್ನ ಟ್ರೇಡ್ ಮಾರ್ಕು.

ಪಿ. ವಿ. ವಜ್ರಮಟ್ಟಿ

ಬುದ್ಧನ ಶ್ರಾದ್ಧೋತ್ಸವ

ಎರಡು ಸಾವಿರ ಐದುನೂರನೆಯ ಉತ್ಸವ !
ಬುದ್ಧನದು ಮೆರವಣಿಗೆ ನಡೆಯಿತಿಂದು !
ಮೇನು ರೋಡಿನಗುಂಟ ವೈಭವದ ಮೇಳ !
ಮಂತ್ರಿ ಹಿರಿತನದಲ್ಲಿ ಎಲ್ಲ ನೇತಾರುಗಳು
ಆಜಿಗಳು ಮಾಜಿಗಳು ಕಾಜಿ ಪೂಜಾರಿಗಳು !

ಬುದ್ಧಮೂರ್ತಿಗೆ ಶ್ರದ್ಧೆ ಅರ್ಪಿಸುತ್ತ
ಗಂಭೀರ ಭಕ್ತಿಯಲಿ ನಡೆದ ಸಂತೆ !

ಜಾತಿ ಇಲ್ಲದ ಒಂದು ಸರಕಾರದಾಜ್ಞೆ !
ಧರ್ಮ ಮತ ತತ್ವಗಳು ಬೇರೆಯೇ ಇರಲಿ !
ಎಲ್ಲ ಧರ್ಮಕು ಕೈಯ ಮುಗಿಯಬೇಕು !
ಎನುವ ಜಾತ್ಯಾತೀತ ಘಟನೆ ಪಾಲಿಸಲಿಕ್ಕೆ
ಎಲ್ಲ ಜಾತಿಗಳವರು ನಡೆದರುತ್ಸವದಲ್ಲಿ !
ಯಾರಿಗೂ ಬುದ್ಧನದು ಸಂಬಂಧ ಇರಬೇಕೆ?
ಅವನ ತತ್ವದ ಗೊಡವೆ ಇವರಿಗೂ ಬೇಕೆ?
ಆಜ್ಞೆಪಾಲಿಸಲಿಕ್ಕೆ ಆಟ ಮಾಡುವದಿತ್ತು
ಹೊರಟ ಮೆರವಣಿಗೆ ಇದು ಭವ್ಯವಿತ್ತು !

ಫುಟ್‌ಪಾಥ ಮೇಲೆಯೇ ಬಿದ್ದಿರುವ ಭಿಕ್ಷುಕರು
ದೂರ-ನೂಕಲು ಬಂತು ಲಾರಿಗಳ ಚಾರ್ಜು
ಪಿಡುಗು ಇಲ್ಲದ ರಸ್ತೆಯಲ್ಲಿ ಸಾಗಿತು ದಂಡು
ಬಯಲು ಮೈದಾನದಲ್ಲಿ ಸಾಗಿರುವ ಕುರಿಹಿಂಡು
ಒಬ್ಬ ಮುಪ್ಪಿನ ಮುದುಕ ದೀನ ಭಿಕ್ಷುಕ ಕಂಡು
ಅಂದು ಬುದ್ಧನ ಕಣ್ಣು ನೀರು ಹರಿದವು ಕೋಡಿ
ಮನುಜಜಾತಿಯ ದುಃಖ ದೂರಗೊಳಿಸುವೆನೆಂದು
ರಾಜ್ಯ-ಸಿರಿ ಸಂಪತ್ತು ಸಿಂಗಾರಗಳ ತೊರೆದು;
ಬೋಧಿವೃಕ್ಷದ ಬುದ್ಧನಾಗಿ ಜಗದೋದ್ಧಾರ-
ಗೈದ: ನಿರ್ವಾಣದಲಿ; ಇಂದಿಗೂ ಸಾಕಾರ !

ನೂರು ಸಾಸಿರ ಅಸ್ಥಿಪಂಜರಗಳುಸಿರಾಟ !
ಕಾಲ ಕೆಳಗೆಯೇ ಬಿದ್ದು ಗೋಳಾಡುವೀ ಆಟ
ಇವರ ಕಣ್ಣುಗಳೇನು ಕಾಜಿನವು ಗುಂಡುಗಳೆ ?
ಎದೆಯು ಗೂಡುಗಳೇನು ಭೂತ ಬಂಗಲೆಗಳೆ ?

ದಿನವು ನೈಟ್ ಕ್ಲಬ್ಬಿನಲಿ ರತಿಕ್ರೀಡೆಯಾಟ !
ಅಧಿಕಾರದಲಿ ತುಂಬ ಎಂಥ ರಕ್ಕಸನಾಟ !
ಇವರ ದುರ್ವಾಸಕ್ಕೆ ಸಾತಿಲ್ಲ ಕಾವಟಾಟ !
ಆದರೂ ಈ ಜನಕೆ ಯಾರದು ಕಾಡಾಟ ! ?

ಅಂತೆಯೇ ಬುದ್ಧನಿಗೆ ಉತ್ತರಧಿಕಾರಿಗಳು
ನಿತ್ಯವೂ ಧರ್ಮಗಳ ಮೆರವಣಿಗೆ ಮಾಡಿದರು !
ನೂರಾರು ಅಧಿಕಾರ ಕೈಯಲ್ಲಿ ಧರಿಸಿದರು
ಪಡೆದ ಭಸ್ಮಾಸುರನ ಹಾಗೆ ಕುಣಿದಾಡಿದರು !

ಬೆಳೆದ ಬುದ್ಧನ ಮಧ್ಯೆ ಅಳಿದ ಇವರದು ಶ್ರದ್ಧೆ !
ನಡೆವ ಹೆಣಗಳ ನಡುವೆ ಬುದ ಗಾಯಿತು ಶ್ರಾದ್ಧ !

ಕೆ. ವಿರೂಪಾಕ್ಷಗೌಡ

ಈ ಯುದ್ಧ

ಒಳ್ಳೆಣ್ಣೆ, ಡಾಲ್ಡಾ ಹಾಕಿ ಅಡಿಗೆ ಮಾಡಿದರೂ
ಈ ತರದ ಸೊಡರು ಬರಲಿಕ್ಕಿಲ್ಲ
ನಳರಾಜ ಹುಟ್ಟಿ ಮಾಣಿ ಭಟ್ಟನಾದರೂ
ಕರಿದು ಈ ಸುವಾಸನೆಯು ತರಲಿಕ್ಕಿಲ್ಲ.
ಹೊಡೆಯುತ್ತಿದೆ ಘಮ ಘಮನೆ ಹೊಡೆ ಹೊತ್ತ ಜೋಳ
ಹೆಸರು-ಮಡಿಕೆಯು ಬಳ್ಳಿ ಬೂಟು ಹೊದಿಕೆ
ಬಯೊನಟ್ ಸಹಿತ ಬಂದೂಕ ಹೊತ್ತಂತೆ ಸಾಲು
ಡಿವಿಜನ್ನಿಗೊಬ್ಬೊಬ್ಬ ತೆನೆಯು ಕಮಾಂಡರು
ಅಲ್ಲೊಂದು ಇಲ್ಲೊಂದು ನಿಶಾನೆ ಹಿಡಿದಿದೆ ತೈರು
ಕೋಟೆಯನು ಕಟ್ಟಿದೊಲು ನಾಲ್ಕು ಕಡೆ ವಡ್ಡು
ಕಂದಕವ ಕಡಿದಂತೆ ಬಳಿಯೆ ಬದುವು
ಕರಿಕೆ ಹೂ ಬಿಟ್ಟಿಹುದು ಗರಿ ಮೇಲೆ ಮಂಜು
ಮಕಮಲ್ಲು ಬಟ್ಟೆಯೊಲು ಮಿದುವು ಮಿಂಚು
ಗುಬ್ಬಿ ಕಾಯುವ ಕವಣೆ
ಎತ್ತರದ ಛಾವಣಿ ಪ್ಯಾಟನ್ ಟ್ಯಾಂಕು
ದೇಶದ ಆಹಾರ ಸಮಸ್ಯೆ ಜೊತೆ ಯುದ್ಧ ಸಾರಿ
ಹೊಲಗದ್ದೆಯಲ್ಲಿರುವ ಬಾಕಿ ಡ್ರೆಸ್ಸಿನ ಸೈನ್ಯ
ಹಗಲಿರುಳು ದುಡಿಯುತಿದೆ. ಮದ್ದು, ಗುಂಡು
ಹಿಟ್ಟು, ಬಟ್ಟೆ, ಉತ್ಪತ್ತಿಸುವ ಜನ್ನಿನಂತೆ
ವಿಶ್ರಾಂತಿ ಪಡೆದೀತು ಮುಂದಾರು ತಿಂಗಳು
ಈಗಂತು ಶಿಸ್ತಿನಲಿ ಅಣಿಯಾಗಿದೆ
ಚೈನ ಪಾಕಿಸ್ತಾನಕ್ಕಿಟ್ಟು ಭಟ್ಟಂಗಿ
ಜಯತು ಜಯ ಹಾಡಿದೆ
ಗಿಡ ಮರದ ರೇಡಿಯೋ
(ಗುಬ್ಬಿ ಗಿಣಿಗಳ ಬ್ಯಾಂಡು)
ಬಯಕೆ ಬಾಳುವೆಯಲ್ಲಿ ಮೈಗೂಡಲಿ
ಹೊಲಗದ್ದೆಯಲ್ಲಿರುವ ಈ ಯುದ್ಧ
ಸದ್ದು, ಗದ್ದಲ ಮುಗಿಸಿ ಸಂತೃಪ್ತಿ ತರಲಿ.

ಸ್ವಾಹಾಕಾರಿ

ಸಂಜೆ ಮುಗಿಲಿಗೆ ಸೂರ್ಯ ವಸೂಲಿಯು ಹಚ್ಚಿ
ಲಂಚ ಕೊಟ್ಟನೋ ? ಮಂಚ ಏರಿಸಿದ ಮೋಡಗಳ
ಕೆಡುಗಾಲ ಬರುವಾಗ ಕೂಡಿದೊಲು ದುರ್ಬುದ್ಧಿ
ಕುಂಕುಮದ ಕೆಂಬಣ್ಣ, ಮಾಂಸ ತೊಳೆ ಮಾಡಿ
ಕುಲಗೆಡಿಸಿ ಒಳ ಹೊರಗು ಬ್ರೇಕು ಹಾಕಿ
ಚರ್ಚಿಲ್ ಹಿಟ್ಲರರಂತೆ ನಡೆಸಿದ್ದ ದರ್ಬಾರು
ಇಲ್ಲ ದರಕಾರು
ಹೊಲದ ಹೊಂಡದಿ ನೀರು ಕುಡಿಯಲೋಡಿದ ಕರು
ಕೊಳಕು ರಕ್ತಕೆ ಬೆದರಿ ' ಅಂಬಾ ' ಎಂದು
ಹಿಂದೆ ಸರಿದು
ದಾಹ ಕುಡಿದೋಡಿದೆ ಕರೆಯಿಂದ ಕೆರೆಗೆ
ವಿವಿಧ ವರ್ಣದ ನೀರು ಮರಣವಾಗಿದೆ ಕರುಗೆ
ನೋಡಿ ಕಿಲ ಕಿಲ ನಕ್ಕು, ಉರಿದ ನಿಗಿ ನಿಗಿ ಕೆಂಡ
ತಣ್ಣಗಾಯಿತು ತಾಸು ತಡೆದು
ಹೋದ ಉರಿದು, ಮೆರೆದು, ದುರುಗವ್ವಗಾಳಾಗಿ
ನೆಲದ ಸಂಕಟ ಕುದಿತ ಕಂಡರಿಯದ
ನಿರಂಕುಶ ಪ್ರಭು ಕ್ರೂರಿ ಸೂರ್ಯ.
ತಳಕೆ ಕುಳಿತಿತು ತ್ರಾಸು ಏರು ಪೇರಾಗಿ
ಎಲ್ಲ ಕಾಲಕು ಅಕಾಲಿಕವೆಂಬ ಮೋಡಿ
ಕೆ.ಜಿ, ಗ್ರಾಮ್, ಹಿತ್ತಾಳೆ ಕಲ್ಲು, ಕಣ್ಣಿಗೆ ಹಬ್ಬ
ಕಣ್ಣು ಹೊಡೆದಿವೆ ಮಿನುಗಿ.
ಸೀಲುಹಾಕಿದ ಚಂದ್ರ ತಕ್ಕಡಿಯನೇರಿ
ನಡೆಸಿರುವ ಸರಿಯಾಗಿ ಇರುವೆ ಎಂಭತ್ತು ಕೋಟಿ
ಕೆಂಪುಬಣ್ಣದ ದೀಪ ಉರಿದು ಎಣ್ಣೆಯು ಮುಗಿಯೆ
ಶಕುನಿ ಚಾಣಕ್ಯರಪ್ಪನಂತೆ
' ಸಲಾಮ್ ' ಎಂದಿತು ಅರಳಿ ಹಿಂಜಿದ ಹತ್ತಿ,
ಸುಟ್ಟ ಊದಿನಕಡ್ಡಿ ಬೂದಿ ಬಣ್ಣಾಗಿ.
ಚಂದ್ರಗೆಲ್ಲಾ ಗೊತ್ತು ಯಾರು ? ಎಂತೆಂದು ?
ಎಷ್ಟಾದರೂ ನಮ್ಮ ಬಳ್ಳಿಯು ಕುಡಿ

ಸೌಮ್ಯ ಸುಂದರ ಬಂಧು
ಯಾವುದೋ ಕಾರಣಕೆ ಆಲೂರು ಬಳ್ಳಾರಿ ಬಿಟ್ಟಂತೆ
ಬಿಟ್ಟು ಹೋದವನು
ಹಡೆದ ಭೂದೇವಿ ಜೊತೆ ಸಾಗಿರುವ ಸಹಕಾರಿ
ಸ್ವಾಹಾಕಾರಿಯೇ ಅಲ್ಲ, ಶಾಂತಿ ಸಿಂಧು.

ಕೆ. ಎನ್. ಶಿವಪ್ಪ

ಸಂತೆ

ನಾ ಹುಟ್ಟಿದ್ದು ನಮ್ಮೂರ ಸಂತೆಯಲೆ,
ತಾತ ಮುತ್ತಾತರ ಕಾಲದ
ಹೆಮ್ಮರಗಳ ದಪ್ಪ ಬುಡ ದಟ್ಟನೆರಳು ಗಟ್ಟಿ ಎಲುಬಿನ ಹಂದರದಲ್ಲೆ
ಅಂಬೆಗಾಲಿಕ್ಕಿ ಬೆಳೆದದ್ದು, ನಾ ನಡೆದದ್ದು.
ಹತ್ತು ಶತಮಾನಗಳ ಹಿಂದೆ ಅಡಿಯಿಟ್ಟ ಹಳೆ ಸಂತೆಯಲಿ
ತರತರದ ಭಾವಗಳ ಬಗೆಬಗೆಯ ನೋಟಗಳ
ಹಳತು ಹೊಸತರದ ತೂರಾಟ ಹಾರಾಟ.
ಅಲ್ಲಿ, ಮಟ್ಟಿ ತೀಡುವ ಜಟ್ಟಿಪಟ್ಟುಗಳ ಉಸಿರುಕಟ್ಟುವ ಬಿಗಿತ
ಇಲ್ಲಿ, ಹಾವಾಡಿಗರು ಬಸವನೊಡನಾಡಿಗರು
ತಕಪಕನೆ ಕುಣಿಸುವರು ತಂಬೂರಿ ಹಿಡಿದವರು
ಜೋಳಿಗೆಯ ಹೊತ್ತವರು
ಸೊಗಸು ಬಲು ಸೊಗಸು ತಲೆಯ ತೂಗಲೆಬೇಕು.
ಸಾಕೆ?
ಮತ್ತಷ್ಟು ಬೇಕು.
ಹೊಸ ಹೊಸದೆ ಬೇಕೆಂದು ಅತ್ತಿತ್ತ ನೋಡಿದೆವು
ಹೊಸ ಬಗೆಯ ಹೊಸ ವೇಷ ಹೊತ್ತ ಪೈಲ್ವಾನ
ಕೂಗಿಕೊಂಡ—
'ನಮ್ಮವಿದು ಹಳತಲ್ಲ ಹೊಸತರದ ಸಾಧನೆ
ಬನ್ನಿ, ಕೊಳೆತ ತಿಪ್ಪೆಯಿದಲ್ಲ,'
ಹೊಸ ಆಟ ಕಾಟ
ಕೂಡಿಕೊಂಡೆವು.

ಕಿರುಬಳೆಯ ತೋರಿಸಿದ ಆ ಕಡ್ಡಿ ಪೈಲ್ವಾನ
ಬಟ್ಟೆ ತೆಗೆದಾಗ ಲಂಗೋಟಿ ಮಾತ್ರ—ವಾಸ್ತವಿಕ,
ಪುಟ್ಟಬಳೆ, ತೊಡೆತೂರುವಷ್ಟೆ ಸುತ್ತಳತೆ
'ಇಲ್ಲೇನ ಮಾಡುವನು—ಸರ್ಕಸ್ಸು'
ಕೋಳಿ ಕಾಲೊಂದ ಅಡಿಬಳೆಗೆ ತೂರಿದ
ಇಂಗಿತವನರಿತು ಚಪ್ಪಾಳೆ ತಟ್ಟಿದೆವು
ಮತ್ತೊಂದು ಕಾಲು . . . ಅದಕು ಅದೆ ಮದ್ದು

ತುಸುಜಾಗದಲ್ಲಿ ತಲೆಸಿಕ್ಕಿಸಿಕೊಂಡ
ಅಯ್ಯೋ ಪಾಪ,
ಒದ್ದಾಟ, ಏದುಸಿರು
ನುಸಿಯಲಾರದೆ ಕುಳಿತ ತಾಯ್‌ಬಸಿರ ಮಗು
ಹೊಟ್ಟೆ ಮೇಲಾಗಿ ಉರುಳಿ ಬೀಳುವ ಹಾವು
ಸೊಂಟ ದಾಟಲೆಯಿಲ್ಲ
ಎಷ್ಟೊಂದು ಸಂಕಟ
'ಬಿಸುಡಬಾರದೆ ಉಸಿರು ಕಟ್ಟುವ ಹೊಸತನವ
ಮೂಳೆ ಇರಬಾರದಿತ್ತಿವಗೆ'
'ಕೆಟ್ಟ ಸಂಸ್ಕಾರ
ನೋಡುವರ ತಲೆಭಾರ
ಹಿರಿಯ ಆಲವಿದಲ್ಲ ಕಿರಿಕುಂಡ ಮಾತ್ರ' ಎಂದ ಸುಸಂಸ್ಕೃತರು
ಮೆಚ್ಚಬೇಕೇಕೆಂಬ ಹಮ್ಮಿನಲೆ ನೋಡಿದರು
[ಪಾಪ, ಹೋಗಲಾರರು, ಇದ್ದು ನೋಡಲಾರರು].
ತುಸುಹೊತ್ತು ಕಳೆದಿತ್ತು
ಓ! ಬಿತ್ತು, ಬಿತ್ತೇ ಬಿತ್ತು
ಸೊಂಟ ತೀಡಿಯೆ ಬಿಟ್ಟ, ಪೊರೆ ಉರುಚಿ ಬಿಟ್ಟ
ಕಿರುಬಳಿಯ ತೆಗೆದತ್ತ ಈಡಾಡಿಬಿಟ್ಟ
ಸೊಗಸು ಸೊಗಸೆಂದ ಚಪ್ಪಾಳೆ
ಮೂಲೆಮೂಲೆಯನು ಮೊಳಗಿದಾಗ
ಕತ್ತಿಹೊಳಪಿನ ತೋಳು ತೊಡೆತಟ್ಟಿ
ಜಿಗಿದೆದ್ದ ಹೊಚ್ಚ ಹೊಸ ಪೈಲ್ವಾನ.

ನೀನು-ನಾನು

ಅಣೆಯಲಿ ಮಾತಾಡಿ ಭರವಸೆಯನುಸಿರಾಡಿ
ತೆಕ್ಕೆಗೆಟುಕದ ತೆರೆಯ ನೆರಳು ನೀನು;
ನಂಬಿರುವ ಬರಿ ತೋಳ ಹುಂಬ ನಾನು.

ಗೀಸಿ ಅಗಲಿಸಿದ ತುಟಿ, ಅದರೊಳಚ್ಚೇರು ಬೆಳ-
ದಿಂಗಳನು ಸುರಿವ ಹುಸಿನಗೆಯು ನೀನು;
ಎರಡು ಕಣ್ಣುಳ್ಳ ಬಿಕನೇಸಿ ನಾನು.

ಮಲೆನಾಡ ಸಿರಿಮೈಗೆ ಹಸಿರೊರಸಿ, ಹೂ ಮೆತ್ತಿ
ಮುದ್ದಿಡುವ ಮುನ್ನೂನ ಮಳೆಯು ನೀನು;
ಬೆಳವಲದ ಉಸುಬಿನ ಮುಸಾರಿ ನಾನು.

ಬ್ರಹ್ಮ ಮಗುವಿದ್ದಾಗ ಥೇಟು ಹೆಣ್ಣಿನ ಹಾಗೆ
ಪಾಟಿಯಲಿ ಬರೆದ ಹುಸಿ ಚಿತ್ರ ನೀನು;
ಅಂಕಲಿಪಿ ಓದಿರುವ ಜ್ಞಾನಿ ನಾನು.

ಇದ್ದಿಲ್ಲ, ಈಗಿಲ್ಲ, ಹಗಲೆಲ್ಲ ವರ್ಣಿಸಿದ
ಹಳೆಯ ಕಾವ್ಯಗಳ ಕವಿ ಸಮಯ ನೀನು;
ಏನೆ ಆದರು ಹೌದು ರಸಿಕ ನಾನು.

ಈಗಿದ್ದ ನದಿ ಮತ್ತೆ ಇನ್ನೊಂದು ಕ್ಷಣಕುಂಟೆ?
ಓ ಅದರ ಜೀವಂತ ವ್ಯಾಖ್ಯೆ ನೀನು;
ಅದ ಬರೆದ ಇಷ್ಟಗಲ ಹಾಳೆ ನಾನು.

ತುಟಿ ನೀಡಿ, ಮೈಸವರಿ, ನವಿರು ನವಿರಿಗೆ ಹೊಸೆದು,
ಮಾತಾಡಿ, ಮಟಾಮಾಯ-ಕನಸು ನೀನು;
ತುಟಿನೆಕ್ಕಿ ತುರುಸುತಿಹ ಪ್ರಾಯ ನಾನು.

ನೀ ಯಾರೊ, ಎಂತೊ. ಹೆಸರೇನೊ, ಸರಿ ಇತ್ತೀಚೆ
ನಾನೂನು ಅರಿತೆ: ಮೃತ ಸ್ಮರಣೆ ನೀನು;
ಅದ ಹುಗಿದು ಕಟ್ಟಿರುವ ಗೋರಿ ನಾನು.

ಶ್ರಾವಣದ ಒಂದು ದಿನ

ಮುಗಿಲ ಮುತ್ತುಗಳನ್ನು ಕರಿಮೋಡ ಚಾಣಿಸಿತು,
ನೆಲದ ಚಿಪ್ಪೊಳು ಬಿತ್ತು, ಅಲ್ಲಿ ಇಲ್ಲಿ.
ಧರೆಯೆದ್ದು ಹಸಿರ ಕಣ್ಣರಳಿಸಿತು ಬಯಲಿನಲಿ,
ಬೀಳು, ಆ ಈ ಕಂಟಿ, ಟೊಂಗೆಗಳಲಿ

ಮನೆಯ ಕೈ ತೋಟದಲಿ ನಂದನವು ತೊದಲಿತೋ
ಮಳೆಬಿಲ್ಲು ಅರಳಿದುವು ಬೇಲಿಯಲ್ಲಿ.
ಹಸಿರೆಲೆಯ ತುದಿಗೆ ಹೂ ಬಣ್ಣ, ಬತ್ತಿಯು ಬೆಳಕು;
ಜೋಕಾಲಿ ಜೀಕಿತೋ ದೀಪಾವಳಿ.

ತೊಯ್ದು ಗದ್ದೆಯ ತಯಲೆ ಬಾಚಿ ಹೆಣೆಯಿತು ಗಾಳಿ,
ಕುಣಿದಾಡಿತೋ ಬಿದಿರ ಮೈಯು ತುಂಬಿ.
ಹರೆ ಬಂತು ಝರಿತೊರೆಗು, ಹರಿಗೂ, ಚರಂಡಿಗೂ,
ಬಿಳಿಮೋಡ ನಕ್ಕವೋ ಬುರುಗು ತುಂಬಿ.

ಗುಳ್ಳವ್ವ ಉರುಳಾಡಿ ಊರೊಳಗೆ ಬಂದಳೋ;
ಹುಲುಸು ಕನವರಿಸಿಹುದು ಹೊಲವ ತೂಗಿ.
ಒರಟು ಮೂಗನು ತಿರುವಿ ರಂಗೋಲಿ ಬಿಡಿಸಿತೋ
ಚದುರಂಗಿ ಅಲ್ಲಲ್ಲಿ ಕೆಂಪು ಹಳದಿ.

ಬದಿಯ ಗುಡಿಸಲಿನಲ್ಲಿ ಅಳುವ ತೊಟ್ಟಿಲವೇಕೊ
ಚಿಗುರುನಗೆ ನಕ್ಕು ಚಿಲಿಪಿಲಿಸಿ ತಂದ.
ಮೊಲೆಯೂಡಿ ಅಂಗಾಲ ತೊಳೆದ ತಾಯೆದೆಯೊಲವು
ಜೋಗುಳವ ಹಾಡಿತ್ತು: ಕುಡಿಯೊ ಕಂದ!

ಹೋರಿ

೧

ಕಟ್ಟಿರುವ ಕಣ್ಣಿ ಹರಕೊಂಡು, ಘುರಕೀ ಹೊಡೆದು,
ಹಿಡಿಯು ಬಂದಣ್ಣಗಳ ಕೊಸರಿ, ಕೈ ಮೀರಿ,
ಉದ್ಗಾರ ಕೊರೆ ಬೇಲಿ ಹಾರಿ ಹೋ ಹೋ
ಬಂತು ಹಂಡ ಹೋರಿ.
ಮುಸಮುಸನೆ ಮುಸಮುಸನೆ ತೇಗುವುದು;
ಕಿಸಮೂಗಿಂದ ಬಸಿಯುವುದು ಸೊಕ್ಕು, ಹುಣ್ಣಿಮೆಯ
ಜೇನು ಹುಟ್ಟಿನ ತೊಟಕು ತೊಟಕು.
ಮಡುಗೊಂಡ ಗಾಳಿಯನು ಬೀಸು ಕಿವಿಗಳ ಚಾಚಿ
ಎದುರು ಈಸುವ ಹಮ್ಮು.
ಮುಂದೆ ಬಂದವರ ತುಟಿ ಕಂಟಕ್ಕೆ ಬಾಯಿಕ್ಕಿ
ಇಡಿಯ ಕೊಡವನ್ನೆಲ್ಲ ಬರಿದು ಮಾಡುವ ಆಸೆ.
ಬೆಂಕಿ ಮೈ, ಮೈ ತುಂಬ ಬಾಯಿ; ಸಿಕ್ಕಷ್ಟನ್ನು,
ಸಿಕ್ಕಲ್ಲಿ ಗಪಗಪಾ ತಿಂಬಾಸೆ.
ದೃಷ್ಟಿ ಕಡೆಗೋಲಿಂದ ದಿಕ್ಕ ಕಡೆಯುವ ಮೋಡಿ.
ಕರಣಗಳ ಕಳವಳಕೆ ಕಾಲ ಕೆದುರುತ್ತಲಿದೆ
ಎದ್ದ ಧೂಳಲಿ ನಾನು ನೀನು ಯಾರೊ!
ಇನಿಯಲುಗಿ ಬೆನ್ನ ಹುರಿಯುಬ್ಬಿನಲಿ ಒಡಮುರಿತ;
ಒಳಗೆ ಗಲ್ಫಸ್ಟ್ರೀಮು, ತಿರುಗಣೆಯ ಮಡುಸುತ್ತಿ
ತೊಡೆಯ ನಾಡಿಯು ಬೇರ ಕೀಳಲೆಳಸುವದು.
ಮತ ಮತ್ತ ಬೆರಳ ತುದಿಯಲ್ಲಿ ಮುಡಿಯನು ಮುಟ್ಟಿ
ಸಲಕೊಮ್ಮೆ ಒಡಪನಾಡುವ ಎಲಗ ಏ ಬಾಲಿ,
ಮುನ್ನೋಡೆ ಸರಿ ಅತ್ತ; ಇಲದಿರಕ
ತುಟಿ ಕೆನ್ನೆಯಲಿ ಬೆಳೆದ ಚೆಂಗುಲಾಬಿಗಳನ್ನು
ಜತನವಾಗಿಟ್ಟುಕೋ ಜ್ವಾಕಿ!

೨

ಒಂದೆ ಬಿಳಿಯಲ್ಲೀಗ ಏಳು ಬಣ್ಣದ ಸೃಷ್ಟಿ.
ಹಳೆ ಹಸಿರು ಪಡಿಕಿಯನು ಹಚ್ಚಿಕೊಂಡಿದೆ ಬಿಡೋ ಭೂಮಿ,

ಹರಕಿನಲಿ ಕಂಡದ್ದು ಬಿಳಿಯ ತೊಗಲು !
ಆಕಾಶಕಾದರೂ ಎಂಥ ಕೆಂಪು !
ಘಟ್ಟದಲ್ಲಿನ ಭಟ್ಟಿಸೆರೆ ಹರಿವಿ ತೂತಾಗಿ
ಸೋರಿ, ಒಸರುತ್ತಲಿದೆ ಹೊಳೆಯಾಗಿ: ದಂಡೆಯಲಿ
ತೆರೆ ನಿರಿಯನೊದ್ದಾಡಿ ದೀಡಿಯಾಡುವ ಮುರುಕ.
ಈ ಗಾಳಿ, ಹೂವ ಹುಡಿಯಲ್ಲಿ ಹುಡದಿಯನಾಡಿ,
ಬಿದಿರ ಹರೆ ಹದಿನೆಂಟರಲ್ಲಿ ಕಚಗುಳಿಯಿಟ್ಟು,
ಹಾಕುವುದು ಗವಿಯೊಳಗೆ ಸಿಳ್ಳು-ತುಡುಗು ಸಂಕೇತ.
ಯಾಸಿ ಕಣ್ಣಿನ ಹಾಗೆ ಬೇಲಿಯಲಿ ಹೂ ಚಿಗುರು.
ಮುಗ್ಗಿ ತಗಿಸಿದ ಕುಬಸ ಬಳ್ಳಿ.
ಕಂಡ ಹೆಣ್ಣಿನ ಕತೆಗೆ ನಾನೆ ನಾಯಕನೀಗ
ಸೀರೆಯುಟ್ಟದ್ದೆಲ್ಲ ಜೀವಂತ ಉದ್ರೇಕ.
ಹಸಿರು ಐಸಿರಿಯಿಂದ ಮೂರ್ಛೆ ಹೋಗುವ ಹಳದಿ
ಹೇಳು ' ಚೆಲುವನು ಸಿಕ್ಕ
ನನಗೆ ಮದುವೆಯೆಂದು ? '

೩

ಬಿಸಿಯೆಂಬುದುಂಟೆಂದು ನನಗೆ ಗೊತ್ತಾದದ್ದೆ ಈಗ,
ಇದೆ ಮೊದಲ ಸಲ.
ಸಸಿಯು ಒಳಗಡೆ ಹೂತ ಚಿಗುರು,
ಚೈತ್ರಗಳ ಆರೈಕೆಯಲ್ಲಿ ಆಗಲೆ ಬೆಳೆದು,
ಹೊಳೆಯ ದಂಡೆಯ ಕರಿಕಿಯಾಗಿ ಆವರಿಸಿತೋ
ಇದ್ದಬಿದ್ದಿರುವೆಲ್ಲ ಅವಕಾಶವ
ಮೀಸಲದ ಬಯಕೆಯಲಿ ಬಾಯಿ ಬಿಟ್ಟಿದೆ ಭೂಮಿ.
ತನ್ನ ಅಸ್ತಿತ್ವಕ್ಕೆ ಸಾರ್ಥಕತೆ ಬರುವ ಕ್ಷಣ
ಮೋಡ ತೊಡೆಯಾಳದಲಿ ಮಿಂಚಿನಾಟ.
ಸಾವುಗಳ ಸತ್ತ ಬೆರಗಿನಲಿ ಹಸುರಿನನಂತ,
ಲೀಲೆಯಿದು, ಹುಡುಗಿ ಬಾ ಒಡೆದೆನೊಡಪ !

ಕೆ. ಪಿ. ಪೂರ್ಣಚಂದ್ರ ತೇಜಸ್ವಿ

ಬಚ್ಚಲ ಜಗತ್ತು

ಮಂಜಿಳಿವ ಚಳಿಗಾಲದಲ್ಲಿ
ನಮ್ಮೂರ ಬಚ್ಚಲಸ್ನಾನ ಎಂಥ ಸುಖ ಅಂತಿ—
ಆವಿ ಬಹ ಬಿಸಿನೀರ ವಾಸನೆಯಲ್ಲಿ
ಕೆಂಪುತಾಮ್ರದ ಚಂದ್ರಮುಖ ಚೆಂಬು
ಹಲ್ಲ ಕಿರಿವುದುರಿವ ಬೆಂಕಿಕಡೆಗೆ.
ಹದನೀರ ಮೊಗೆಮೊಗೆದು ಸುರಿದಾಗ
ಬಾಳು ಸಾರ್ಥಕವೆನಿಸಿ
ಅಟ್ಟಕ್ಕು ಏರುವುದು ಬೋಧಿವೃಕ್ಷದ ಪಿತ್ಥ

ನಸುಗತ್ತಲಲ್ಲಿ ಬಿಸಿನೀರ ಬಾಲೆ
ನನ್ನ ಬೆತ್ತಲು ಮೈಯ್ಯ ತಬ್ಬಿದರೋ:
ಕಾಣದಂತೆ ಹೊರಜಗ ಮುಸುಗಿದ್ದರೂ ಮಂಜು;
ಮುತ್ತದಸ್ಪಷ್ಟ ಕೇವಲ ಜ್ಞಾನ
ಈ ಚೆಂಬು ಬಿಂದಿಗಿ ಹಂಡೆ ನಡುವೆ.

ಹೀಗಿದ್ದರೂ ಏನಾಯ್ತು ಒಮ್ಮೆ
ಈ ಬಚ್ಚಲ ಜಗತ್ತಿನಲ್ಲಿ
ತಲೆಗೇರಿದ್ದ ಸೋಪು
ಉಜ್ಜಿದಾಗುಕ್ಕಿ ಆವರಿಸಿತ್ತು ಕಣ್ಣ.
ನಾನಾದೆ ತಡವರಿಸಿ ಗೋಡೆ
ಮುಕ್ತಿ ಪತ್ತೆ ಹಚ್ಚುವ ಚಿಣ್ಣ,
ನನಗಾಗ ಎರಡೇ ಎರಡರರಿವು.
ಮೇಲಾಕಾಶ ಕೆಳಗೀ ತಾಯಿ ಪೃಥಿವೀ.
ಇಕ್ಕಟ್ಟಿನಲ್ಲಿ ಚಾಚಿ ಕಯ್ಯ
ತಡವರಿಸಿದಾಗ ಸುಟ್ಟಿತ್ತು ಬಿಸಿ ಹಂಡೆ.
ಚೀಕು ಹೊಕ್ಕಿತ್ತೆಡಗೈಗೆ
ತಂಬಿಗಿ ಎಂದು ತಡವಿ ಕುಂಟೆ.

ಅವತಾರ ಪರಂಪರೆಯ ಮಂಪರಿನಲ್ಲಿ
ನಾ ತಿಳಿದಿದ್ದೆ ಕ್ರಿಸ್ತ ಬುದ್ಧರ ಪಡೆ ಎಲ್ಲ

ಕ್ಯೂ ಹಚ್ಚಿ ಕಾದಿದ್ದಾರೆಂದು.
ಎತ್ತಲಿದ್ದಾನೆಂದು ಅಧಃ ಪಾತಾಳಕ್ಕೆ
ಧುಮುಕಬೇಕೆ?

'ಅಯ್ಯ ಮಹರಾಯಾ,
ನೀ ಯಾವ ಕೋತಪ್ಪ ನಾಯ್ಕ?
ಬದಲು ಪ್ರೆಸೆಂಟೆನ್ನುವ ವಿದ್ಯಾ
ನಿಷ್ಣಾತ ಪ್ರಭೃತಿಗಳೋ
ಮುಕ್ಕಿದರು ಮಣ್ಣ,
ಇದು ಯಾವೂರ ಶಿಸ್ತೊ?
ನೀ ಹೆಳವನಾದುದಕ್ಕವ
ಕುಂಟಲಾರ ಕಣೋ'
ಓ ಎಲ್ಲಿಗೋ ಬಂದೆ.
ಆ ಮೇಲೆ ತಂಬಾಳಿಗೆ ತುಂಬ ನೀರ
ಸುರಿದು ತಲೆ ಮೇಲೆ ಬಿಡುಗಡೆಗೊಂಡೆ.
ಆ ಬದಿ ಆಕಾಶಕ್ಕೇರೇ ಇತ್ತು ಹೊಗೆ.
ತಿಳಿಹಸುರು ಕೆಸುವಿನೆಲೆ
ಥಂಡಿ ಕೊಚ್ಚೆಗೆ ಬಾಗೆ,
ಲೊಚ್ಚೆಂದ ಹಲ್ಲಿ ಸರಿದಿತ್ತು
ಮಾಡ ಮರೆಗೆ.

ಗಡಿಯಾರದಂಗಡಿ

ಗಂಟೆಯನು ನೋಡಲಿಕೆ ಗಡಿಯಾರದಂಗಡಿಗೆ
ಬಂದವನು ದಿಗ್ಭ್ರಾಂತ !
ಹತ್ತೆಂಟು ರಸ್ತೆಗಳ ಸೂಚಿಸುವ ಹಲವಾರು
ಕೈಮರವ ಕಂಡು ಕಣ್ ಕಣ್ ಬಿಡುವವೊಲು ಪಾಂಥ !
ಈ ಪರೀಕ್ಷೆಯೊಳಗಾರ ನಂಬುವುದು ?
ಪ್ರಾಮಾಣಿಕತೆಯ ಸಂಶೋಧಿಸಿದ ಪಂಡಿತಗೆ
ಸಲಬೇಕು ಡಾಕ್ಟರೇಟ್ ಬಿರುದು !

ಒಂದೊಂದು ಮುಳ್ಳಿಗೂ ಒಂದೋದು ದಿಕ್ಕು ;
ಸ್ವಾತಂತ್ರ್ಯ ಆಜನ್ಮಸಿದ್ಧ ಹಕ್ಕು !
ಮನಬಂದ ಹಾಗೆ ವರ್ತಿಸುತಿಹವು ಗಡಿಯಾರ
ಕಿಕ್ಕಿರಿದು ಶತ, ಸಾಸಿರ !
(ಎಷ್ಟೆಂದು ಸರಿಮಾಡಬಲ್ಲನಾ ವ್ಯಾಪಾರಿ !)
ಹೇಳಿದರೆ ಕೇಳುವಂತಹ ವಂಶವೇನು ಇದು ?
ಪ್ರತಿಯೊಂದಕೂ ತಾನು ನಡೆದುದೇ ದಾರಿ !
ಎಷ್ಟಾದರೂ ಇದು ಪ್ರಜಾಪ್ರಭುತ್ವ ;
ಎಂತಲೇ ತಲೆಗೊಂದು ತತ್ವ !

ದಕ್ಷಿಣ ಧ್ರುವಕೆ ಕೈಯನು ಚಾಚಿರುವುದೊಂದು,
ಉತ್ತರ ಧ್ರುವಕೆ ಮತ್ತೊಂದು ;
ಒಂದಕೊಂದು ವಿರುದ್ಧ, ಅಸಂಬದ್ಧ
ಸ್ವಚ್ಛಂದವಾಗಿ ಬೇಕಾಬಿಟ್ಟಿ ಓಡುತಿಹ
ರಭಸ ಜೀವಿಗಳು ಹಲವು ;
ಎಡವುತ್ತ, ಕುಂಟುತ್ತ, ತೂಕಡಿಸುತಲೆ ನಡೆವ
ಆಲಸಿಗಳುಂಟು ಕೆಲವು—
ಗಡಿಯಾರ ಸಾಮ್ರಾಜ್ಯದಲಿ ಪ್ರಗತಿಯಿರಲಿಂತು,
ಮತ್ತೆ ಕೆಲವಂತು ನಿಂತಲೆ ನಿಂತು
ಮೌನತಪದಾಚರಣೆ ಗೈಯುತಿಹವು !
ಎಂದು ಕೊನೆ ಗೊಳ್ಳುವುದೊ ಇವರ ನಿದ್ರಾವಸ್ಥೆ ;
ಈ ಎಲ್ಲ ಅವ್ಯವಸ್ಥೆ !

(ಕಾಗೆಗಳ ಬಳಗದಲಿ ಕೋಗಿಲೆಗಳಿರಬಹುದು,
ಎಲ್ಲ ಕಾಗೆಗಳೆಂಬ ತೀರ್ಪು ಬೇಡ !
ನೂರರಲಿ ತೊಂಬತ್ತು ಭ್ರಷ್ಟಗಡಿಯಾರ, ದಿಟ—
ಬಾಕಿ ಹತ್ತನು ಪತ್ತೆಮಾಡಿ ನೋಡ !)
ಯುಗಯುಗದಿ ಹುಟ್ಟಿ ಬಂದರು ಏಸಿತೊ ತಾಂತ್ರಿಕರು;
ಸರಿಮಾಡಲೆಂದೆ ಬಂದೆವು ಎಂದ ಮಾಂತ್ರಿಕರು,—
ಯಾವ ಪುಂಗಿಗು ಹಾವು ಮಣಿಯಲಿಲ್ಲ !
ಆಯಿತೆನು ರಿಪೇರಿ ?
ಎಂದಿನಂತುಳಿಯಿತೀ ಗಡಿಯಾರ ಹಠಮಾರಿ !
ಎಲೆಲೆ ಗಡಿಯಾರಗಳೆ,
ಜನ್ಮ ಜನ್ಮಾಂತರದನಿಷ್ಟ ನಿಮಗೆ !
ಮತ್ತೆ ಕೆಡದಂತೆ ಸರಿಪಡಿಸಬಹುದೇ ನಿಮ್ಮ
ಯಾವುದಾದರು ಒಂದು ಕುಶಲ ಬೆರಳು ?
ಅಥವಾ ' ಎಂದೆಂದಿಗು ನಿಮಗಿದೆ ಗತಿಯೇನು '
ಹಗಲು ಇರುಳು ?

ಗಿರಡ್ಡಿ ಗೋವಿಂದರಾಜ

ಅರೆಬೈಲು ಘಟ್ಟಗಳಲ್ಲಿ

ಗುಂಪು ಗುಂಪು ಬೆಳೆದ ಮರ
ಬಳಿಯೊಳಿರುವ ಘಟ್ಟವೇರಿ
ಎದುರು ಬದುರು ನಿಂತು ಮುಖ
ನೋಡಿಕೊಂಡವು.

ಆಳವಾದ ಕೊಳ್ಳಗಳನು
ಬಿದಿರು ಮೆಳೆಗಳಿಳಿದು ಹೋಗಿ
ಸುಳಿಯುತಿರುವ ಗಾಳಿಯಲ್ಲಿ
ಹಾಡಿಕೊಂಡವು.

ಉಂಗುರುಂಗುರಾದ ಕುರುಳಿ—
ನಂತೆ ಬೆಟ್ಟ ಕಡಲ ಬಳಸಿ
ಮಾಲೆ ಮಾಲೆಯಾಗಿ ಮೈಯ
ನೀಡಿಕೊಂಡವು.

ಹಿಂಡುಗಟ್ಟಿ ಬಂದ ಮೋಡ
ಮುಂದೆ ಹೋಗಲಾರೆವೆಂದು
ಬಾನ ತೊಟ್ಟಿಲಲ್ಲಿ ತಾವೆ
ತೂಗಿಕೊಂಡವು.

ಬೆಟ್ಟಗಳನು ದಾಟಿ ಬಂದು
ಹಸಿರು ನಾಡೊಳಾಡಿಕೊಂಡು
ತೊರೆಗಳಿಲ್ಲಿ ನುಗ್ಗಿ ದಾರಿ
ಮಾಡಿಕೊಂಡವು.

ಅಲ್ಲಿ, ಇಲ್ಲಿ ನಿಂತ ನೀರು
ಸೋಗಲಾಡಿ ಹೆಣ್ಣಿನಂತೆ
ತೆರೆಯ ನಿರಿಯ ಚಿಮ್ಮಿ ಮತ್ತೆ
ತೀಡಿಕೊಂಡವು.

ಹಕ್ಕಿಬಳಗ ರೆಕ್ಕೆ ಬೀಸಿ
ನಭವ ಸುತ್ತಿ, ಹಾಡಿ ಹಾಡಿ
ದಣಿದು ಬಂದು ಇವುಗಳೊಡನೆ
ಕೂಡಿಕೊಂಡವು.

ಆಚೆ, ಈಚೆ ಬಯಲಿನಲ್ಲಿ
ತಲೆಯ ತೂಗುತ್ತಿದ್ದ ಶಾಲಿ
ಎಲ್ಲ ಆಟ ನೋಡಿ ಪಿಸುಣ—
ನಾಡಿಕೊಂಡವು.

ದಿವ್ಯಲೋಕವೊಂದ ಕಟ್ಟಿ
ಸ್ವಪ್ನಮಾಯೆಯಿಂದ ಸುತ್ತಿ
ಕವಿಯ ಎದೆಯೊಳೇನೊ ಕನಸು
ಮೂಡಿಕೊಂಡವು.

‘ಪ್ರೀತಿ’ ಅಂತೇನೇನೊ . . . !

‘ಪ್ರೀತಿ’ ಅಂತೇನೇನೊ ಬೆಳತನಕ ಬಡಬಡಿಕಿ;
ಗಾಸಿಬೀಸಿ ಮನಸು.
ಎಲ್ಲೆಲ್ಲೊ ಹೊಂಚಿ ಮುಗಿಬೀಳತಿರತಾವ
ಏನೊ ಹಾಳು ಕನಸು.

ಕಣಗಾಡು ಸುಗ್ಗ್ಯಾಗ ಕೂಳು-ನೀರೂ ಕೊಡದ
ಹಂಗ್ಯ ಸಾಯಬಿಟ್ಟು
ಆ ಎಲ್ಲ ಕನಸೂನು ಕುಣಿಗಿಟ್ಟು ಬಂದೀನಿ,
ಮ್ಯಾಲ ಮಣ್ಣು ಕೊಟ್ಟು.

ಆ ಕನಸುಗಳ ಬೂತ ಈಗೆದ್ದು ಬರತಾವ
ಕಣ್ಣ ಹೆಂಗೊ ಮಾಡಿ,
ಕೀಚುನಗಿ ನಗತಾವ, ಏನೊ ವಟಗುಡತಾವ
ನನ್ನ ಹೀಂಗ ನೋಡಿ.

ಒಮ್ಮೆ ನಿದ್ದ್ಯಾಗಿಂದ ಎದ್ದು ಕೈ ಬೀಸಿದರ
ಎಲ್ಲ ಹೆಂಗೊ ಮಾಯ !
ಹೊರಗ ಬೆಳಗಿರತೈತಿ. ಸೆನಿಸಿ ನಗಿ ಬರತೈತಿ :
ಮರಿಯುತೈತಿ ಗಾಯ !

ಬುದ್ಧನೂ ನಾನೂ

ಇಲ್ಲಿ ಮಲಗಿದ್ದಾಳೆ
ಬುಗುರಿ ಗಿರಿಗಿರಿ ತಿರುಗಿ ತೆಪಗೊಂಡು ಬಿದ್ದಂತೆ
ನನ್ನವಳು. ಬೆಂಕಿಯ ಎದುರು
ನನ್ನ ಕೈ ಹಿಡಿದವಳು.

ನಾನು ಬೂದಿಯ ಗುಂಪಿ. ಕಣ್ಣೆಣ್ಣೆಯು ಇಳಿದು
ಮೈ ತುಂಬ ಬಸಿದು ಬರಿ ಬೆವರಾಗಿದೆ.
ಒಂದು ಮಿನಿಟಿನ ಹಿಂದೆ ನರನಾಡಿ ಗಿಂವ್‌ಗುಟ್ಟಿ
ಇಂಚು ಇಂಚಿಗೆ ಚಿಗಿತ ಎಲುಬೀಗ
ಲಿಕಿ ಲಿಕಿ.

ಮೈಯ ತೊಗಲನ್ನಾರೊ ಮಡಿಮಡಿಚಿ ಇಟ್ಟಂತೆ
ಹೆಣಗಣ್ಣೆದುರಿಗೆ ಹಿಮಾಲಯದ ಬಿಳಿಗನಸು.
ಇದರರ್ಥವಿದೆ ಸಿದ್ಧ :
ನಾನೊಬ್ಬ ಸಿದ್ಧಾರ್ಥ.

ಆಗಲಾರೆನೆ ನಾನು ಮತ್ತೊಬ್ಬ ಬುದ್ಧ ?
ರಥದ ಕಿಂಡಿಯೊಳಿಂದ ಏನೇನೊ ಕಂಡನವ
ಬಳಿಯ ಸಾರಥಿಯಿಂದ ಅರ್ಥ ಪಡಕೊಂಡನವ
ನಿಂತ ಕಾಲಿನ ಮೇಲೆ ಎದ್ದು ಹೊರ ಹೊಂಟನವ
ಮುಗ್ಧ ರಾಜಕುಮಾರ.

ಬೇಡ ನನಗಾರದೂ ಸ್ಫೂರ್ತಿ, ಶಿಫಾರಸ್ಸು,
ನಾ ಪ್ರಬುದ್ಧ.
ನನಗೆ ನನ್ನದೆ ಕಣ್ಣು; ನನ್ನ ಕಾಣೆಗೆ ನಾನೆ
ಎಲ್ಲ ಕಾಲದ ಎಲ್ಲ ಕತೆಯ ಸಾರಾಂಶ.
ಒಮ್ಮೆಲೇ ಮೈ ಕೊಡವಿ
ಹೊರಡಲಾರೆನೆ ನಾನು ಇವಳ ಮೈದಡವಿ ?
ಬೀಳಲಾರೆನೆ ಬೋಧಿವೃಕ್ಷದಡವಿ ?

ಇವಳು ನನ್ನ ಯಶೋದೆ. ಈ ಮನೆಯ ತುಂಬೆಲ್ಲ
ನಾವೆ ಗುಂಡಾಗುಂಡಿ, ಬೇರೆ ಹುಳವಿಲ್ಲ.
ಈ ಇವಳು ನನ್ನ ಬೆನ್ನತ್ತಿ ಬಂದವಳು.
ಉಡಿತುಂಬ ವರದಕ್ಷಿಣೆಯ ಹೊತ್ತು ತಂದವಳು.
ನಾನಿವಳ ಬಿಟ್ಟರೆ,

ಕೈಹಿಡಿದವಳ ಕೈಗೆ ಕೈ ಕೊಟ್ಟರೆ
ಯಾರು ನೋಡುವರಿವಳ ಹೊಟ್ಟೆನೆತ್ತಿ ?
ಅಂತು ಇಂತೂ ನಾನು ಹೋದೆನೋ, ಮರುದಿನವೆ
ವೃತ್ತಪತ್ರಿಕೆಯಲ್ಲಿ ಚಿತ್ರ ಬರುವುದು. ಕೆಳಗೆ
ಹಿಡಿದು ತಂದೊಪ್ಪಿಸಿದವರ ಕೈಗೆ ಬಹುಮಾನ.
ಸಿಕ್ಕರೋ ಅವಮಾನ. ಸಿಗದಿದ್ದರೂ, ಮುಂದೆ
ಹದಿನೈದೆ ದಿನದಲ್ಲಿ ನನ್ನ ಮಡದಿ ಯಶೋದೆ
ಕೊಡಬಹುದು ಈ ಪತಿಗೆ ಸೋಡಚೀಟಿ.
ನಾ ಬುದ್ಧನಾದಾಗ ನನ್ನ ಬುದ್ಧಿಯ ಮಾತು
ಆಲಿಸಲು ಹೆಂಡತಿಯೆ ಇಲ್ಲದಿದ್ದರೆ ಹೇಗೆ ?
ನಾನೇನೊ ಹೊರಡಲಿಕ್ಕೀಗಲೇ ತೈಯಾರಿ.

ಅದು ಸರಿ, ಇರ-
ಬಹುದೆ ನಾ ಬುದ್ಧನಾಗುವ ಜರೂರಿ !
ನಾನು ? ಹಾಗೂ
ಬುದ್ಧ ?
ಬಿಚ್ಚಿ ಹೊರಡಲು ಅವಗೆ ಹಾಸಿಗೆಯು ಕಟ್ಟಿತ್ತು.
ಚಿವುಟಿ ಹೊರಡಲು ಮನೆಯ ಎಳೆಯ ಕುಡಿಯಿತ್ತು.
ನನಗೆ ?

ಏ ಯಶೋದೆ,
ಏಳು ಮಾರಾಯಳೆ, ನಿನ್ನ ಗ್ರಹಚಾರ !
ಹೇಳು, ಎಲ್ಲಿಗೆ ಬಂತು
ರಾಹುಲ-ಸಮಾಚಾರ ?

ಶುಭವಾಗುತ್ತೈತಿ

ಇರುಳ-ಕ್ಲೋರೋಫಾರ್ಮು ನೆತ್ತಿಗೇರಿರುವಾಗ
ಒಳಗು ಹೊರಗೂ ಬರೀ ನಸುಗತ್ತಲೆ.
ಮೂಲೆಯಲ್ಲುರಿಯುತಿಹ ಮುದಿಬಲ್ಬಿನಾ ಜೋಲು-
ಮುಖದಲ್ಲಿ ಸುರಿಯುತಿದೆ ರೋಗಿಕಳೆ.
ಕ್ಷಿತಿಜದಂಚಿನ ಮೇಲೆ ಒಂದು ಕೊಳ್ಳಿಯು ದೆವ್ವ
ತೋರುತಿದೆ ಯಾರಿಗೋ ಕೆಂಬಾವುಟ.
ಮುಖವು ಬಿಳುಚಿದ ಚಿಕ್ಕ ವಿಕಟನಗೆ ನಕ್ಕಿವೆ
ಕಣ್ಣುಗಳ ಬೆಳ್ಳಗೇ ಮಾಡಿಕೊಂಡು.
ಮಾಡದಲಿ ಗುಬ್ಬಿಗಳು ಮುದುಡಿ ಕುಳಿತಿವೆ. ಹೊರಗೆ
ಗೂಗೆ ಜೋಗುಳ ಹಾಡಿ ನಲಿಯುತ್ತಿದೆ.
ತುಟಿಯು ಬಿಮ್ಮನೆ ಬಿಗಿದು ಮೌನದಾ ನೆಲಗುಮ್ಮ
ಸುಮ್ಮನೇ ಸೋಬಾನ ಹಾಡುತ್ತಿದೆ.

ಹಗಲಿನಲಿ ತಲೆಕೆಳಗು ಮಾಡಿ ಜೋತಾಡಿರುವ
ಬಾವಲಿಯು ಹಾರಿವೆ ರೆಕ್ಕೆ ಬಡಿದು.
ಮನದ ಗೊಂಡಾರಣ್ಯದಲಿ ಕನಸು-ತುಡುಗುದನ
ಸಿಕ್ಕಲ್ಲಿ ಸಿಕ್ಕದ್ದು ಮೇಯುತ್ತಿವೆ.
ಕದದ ಬಿರುಕೊಳಗಿಂದ ಇರುಳಗಾಳಿಯು ಬಾಣ
ಸೊಂಯೆಂದು ನುಗ್ಗಿದೆ ಮನೆಯ ಒಳಗೆ.
ಆಚೆ ಗೋಡೆಯ ಬದಿಗೆ ಹೆಣ್ಣೊಂದು ನರಳುತಿದೆ,
ಯುಗ ಯುಗದ ವೇದನೆಯ ಸಹಿಸಿಕೊಂಡು.

ಮೂಡುತಿದೆ, ಅಂತ್ಯವೇ ಗೊತ್ತಿರದ ಸಿನೆಮಾ,
ಗಳಿಗೆ ಗಳಿಗೆಗೆ ಸೀನು ಬದಲಾಯಿಸಿ.
ಕಂಗಳಲಿ ರೇಡಿಯಂ-ನಗೆ ಬೀರಿ ಟೈಂಪೀಸು
ಕಾಲಹೊಳೆಯಲಿ ಮಾರು ಹಾಕುತ್ತಿರೆ.
ಹೆಂಗೆಯಾಯಿತು ಅಲ್ಲಿ, ಮೂಡಣದ ಮನೆಯಲ್ಲಿ.
ನೆಲದ ಮೈ ತುಂಬೆಲ್ಲ ರಕ್ತ ಸಿಡಿದು.
ಗೋಣು ಪಟಪಟ ಕೊಡವಿ ನಾಯಿ ಬಾರಿಸಿತದೋ
ಬುಡು ಬಡಿಕೆ, ' ಶುಭವಾಗುತ್ತೈತಿ ' ಎಂದು.

ಸಿದ್ಧಲಿಂಗ ಪಟ್ಟಣಶೆಟ್ಟಿ

ಚಿತ್ರಕಾರ

ನಿನ್ನ ಎದೆಯೂರಲ್ಲಿ ಬರಗಾಲ ಬಿದ್ದಾಗ
ಗುಳೆ ಹೊರಟ ದರಿದ್ರ ಚಿತ್ರಕಾರನು ನಾನು !

ನನ್ನ ಭಾವ ಕುಂಚವನು
ನಿನ್ನ ಕಣ್ಣ-ಬಟ್ಟಲದಿ. ದಿಟ್ಟಿ-ಬಣ್ಣದಲದ್ದಿ
ನಾ ತೆಗೆದ ಚಿತ್ರಗಳನಲ್ಲಿಯೇ ಬಿಟ್ಟಿರುವೆ,
ಚಿತ್ರಗಳ ಛಾಯೆಯನು ಹೊತ್ತು ತಂದಿರುವೆ
ಛಾಯೆಗಳ ಆಭಾಸ ನುಂಗಿ ನಿಂದಿರುವೆ !

ಬೆಳದಿಂಗಳಿನ ಬಿಳಿಯ ಕ್ಯಾನವಾಸಿನ ಮೇಲೆ
ಚಂದ್ರನಲಿ ನಮ್ಮೆರಡು ಬಿಂಬಗಳ ನೋಡಿ
ಅಂದು ನಾ ಚಿತ್ರಿಸಿದ ಆ ಎರಡು ಗೊಂಬೆಗಳು
ನಿಮ್ಮ ಪಡಸಾಲೆಯಲಿ
ನಿನ್ನ ಏಕಾಂತದಲಿ
ಇಂದಿಗೂ ಗುನುಗುನಿಸುತಿರಬಹುದು ನೋಡು,
ಈ ವಿಜನ ಅಡವಿಯಲೂ
ಅದರ ದನಿಯೇ ದನಿಯು ನನ್ನ ಕಿವಿ ತುಂಬ !

ದೀವಳಿಗೆಯಮವಾಸ್ಯೆ,
ಅಶ್ರು-ಅಭ್ಯಂಜನವ ಮುಗಿಸಿಕೊಂಡು
ನಿನ್ನ ಸ್ಮರಣೆಯ ಮಧುವ ಮನವಾರೆ ಕುಡಿದು
ಶಬ್ದಗಳ ಸ್ಟ್ಯಾಂಡು, ಟೇಬಲ್ಲು ಹೊಂದಿಸಿ,
ಮೈಯೆಲ್ಲ ಹಣ್ಣಾಗಿ, ಸಣ್ಣಾಗಿ ಹೋದರೂ
ನೀನಿತ್ತ ಯಾವುದೋ ಆಸರೆಯ ಹೊಂದಿ
ನಾ ತೆಗೆದ ತೈಲ ಚಿತ್ರಗಳು.
ಈ ಕೊಳದಿ ನಾನು ಕಾಲನಿಳಿಬಿಟ್ಟು ಕುಳಿತಾಗ
ಏಕೆ ತಿರುತಿರುಗಿ ನೆನಪ ಕೆತ್ತುತಲಿಹವು ?

ಈಗೀಗ ಇತ್ತೀಚೆ ಮತ್ತೆ ಕೆಲದಿದಿನಂದ
ನಿಮ್ಮೂರ ಬರಗಾಲ ಬೇಕಿ-ಬಿಸಿಲುಗಳಾಗಿ
ನಿನ್ನ ಕಣ್ಣಲಿ ಧೂಳಂ-ಬೂದಿಗಳ ಹರವಿ
ನಿನ್ನ ನೆತ್ತಿಯು ಕುಕ್ಕಿ ಹೆದರಿಸುತಲಿರಬಹುದೆ
ಎಂದು ಯೋಚಿಸುತಿಲ್ಲಿ ಕೊಳದ ನಿರ್ಮಲ ಜಲದಿ
ಕಾಂತಿ-ಕುಂಚವ ಹಿಡಿದು ನಿನ್ನ ಚಿತ್ರವ ಬರೆವ
ಹುಚ್ಚು ಹಂಬಲವನ್ನೆ ಮೆಲುಕು ಹಾಕುತಲಿರುವ
ಗುಳೆ ಹೊರಟ ದರಿದ್ರ ಚಿತ್ರಕಾರನು ನಾನು !

ಭಾರ

ನಿನ್ನ ಕಣ್ಣುಗಳೆರಡರಿಕ್ಕಳದಿ ಸಿಲುಕಿ
ನಾನು ರಿಂಗಣಗುಣಿವ
ನೂರು ಸುತ್ತಿನ ಅಡಿಕೆ ಬೆಟ್ಟ ನೋಡು !

ನಿನ್ನ ಮಾತಿನ ಮಂಜು
ನನ್ನ ಮೆದುಳನು ಕವಿದು
ಎದೆಯ ಜೋಳದ ತೆನೆಯ ಹಾಲು ಸೋರಿತ್ತು !

ನಿನ್ನನ್ನೇ ತಿರುತಿರುಗಿ ತಲೆಯೊಳಗೆ ಹಾಕಿ
ಒಂದೆ ಕಪ್ಪನು ತೊಳೆದು
ಯುಗ-ಯುಗಾಂತರವು ಚಹಕುಡಿದ ಹಾಗೆ.
ನಾನು ತಿಪ್ಪರಲಾಗ ಹಾಕಿ ಸಾಯುತಲಿರುವೆ,
ಮಜ್ಜೆ ಕೊಳೆಯುತಿದೆ,
ಮನಸು ಮುದುಡುತಿದೆ,
ದೇಹ ಬಾಡುತಿದೆ
ಬದುಕೊಂದು ಹೊರಲಾರದಂಥ ಭಾರವೆ ಆಗಿ !

ಸಂಜೆ

ಬುಟ್ಟಿ ತುಂಬಿರುವ ಕವಳೆ ಹಣ್ಣುಗಳನ್ನು ಸುರುವಿದಂತೆ
ಕೆಳಗೆ ಇಳಿವ ಮಳೆ
ನಕ್ಷೆಯಲಿ ಭಾರತದ ರಾಜ್ಯಗಳ ಬರೆದಂತೆ
ಚೆಲ್ಲುವರೆದಿಹ ಮೋಡ,

ಆಚೆ ಮನೆ ಚಿಕ್ಕ ಮಗು
ಅಕಾರಣವೇ ಸಂತತವು ನಕ್ಕಂತೆ
ಇಳಿಜಾರಿನಲಿ ಆಟವಾಡುವ ಬಿಸಿಲು,
ಅನ್ನದಲಿ ಮಜ್ಜಿಗೆಯು ಸಿಹಿ ಸಾರನುಂಡಂತೆ
ತೊಯ್ದ ನೆಲ !

ಇಲ್ಲಿ ಪೃಥಿವಿಯನೆ
ಬಿಕ್ಕೊ ಹಣ್ಣನೆರಡು ಹೋಳು ಮಾಡಿದ ಹಾಗೆ
ಒಂದು ಪರಡೆಯಲಿ ತೂಗುತಿಹ ಶಾಂತಿ
ಅತ್ತ ಕೋಲಾಹಲದ ತೂಗು-ಕಲ್ಲು !

ಇಲ್ಲಿಯೇ ನಿಲ್ಲು,
ಈ ಅದ್ಭುತ ವಿಚಿತ್ರವನು ನೋಡು
ಎಲೆ ಖೋಡಿ
ನಿನ್ನ ವೇದನೆಯ ಮುಳಿಹುಳವ ಕೊಲ್ಲು !

ಈ ರಜತ-ರೇಖೆಯನು ದಾಟಬೇಡ,
ನೀ ತಾಳ್ಮೆಗೆಡದಲೇ
ಚಿಂತೆಗಳ ಚಪ್ಪಲ್ಲು ಮೆಟ್ಟಿ
ಇಲ್ಲಿಯೇ ನಿಲ್ಲು !

ಒಂಟಿ

ತಲೆ ಪಕಾಲಿಯಲ್ಲಿ ನೆನಪ-ಸಿಂದಿ ತುಂಬಿ
ಗೋಣಿ ಹಾಕುತ್ತ ಸಾಗಿ ನಡೆದಿದ್ದೇನೆ
ಒಂಟಿ.
ನೂರು ಗಾವುದ ನಡೆದು ಸಾವಿರದ ದಾಟಿ ಮತ್ತೆ
ಕತ್ತೆ ಮನಸಿನ ಮುಚ್ಚು ಹಂಬಲದ ಹಿರಿಯುಸುಬು
ಕಾಲ ತಳಕ್ಕೆ ಹಾಕಿ
ರಾಜಗುವರನ ಠೀವಿಯಲ್ಲಿ ನಡೆಯುತ್ತ
ಸೈಕತ-ಲೋಕದ ರಾಜಮಾರ್ಗದ ಮೇಲೆ
ಬಾಗಿ ನಡೆದಿದ್ದೇನೆ.

ಡಾಯರಿಯಲ್ಲಿ ಸಂಗ್ರಹಿಸಿ ಇಟ್ಟುಕೊಂಡಿದ್ದೇನೆ
ಭವಿಷ್ಯದ ಹವಿಷ್ಯಕ್ಕೆಂದು
ನಾ
ಪಟ್ಟಿದ್ದ, ಉಂಡಿದ್ದ, ಕಂಡಿದ್ದ
ನಿರಾಶೆ, ದುಃಖ. ನಿರುಪಾಯಕೆ ಅಸಹಾಯ ಪ್ರಾಣಾಧಾರ.
ಇನ್ನೂರು ಮುನ್ನೂರು
ವರ್ಷಗಳವರೆಗೆ ಸಂಶೋಧನೆ ಮಾಡಬಯಸುವ ಜನರು
ದುಃಖ-
ದ ಮೂಲ ಪ್ರವೃತ್ತಿಗಳನರಿಯಬೇಕೆನ್ನುವವರು
ನನ್ನ ಬೆನ್ನಿನ ಮೇಲೆ ಹತ್ತಿ
ಬನ್ನಿ.

ಔರಂಗಜೇಬ

ನಾನು ತಳ-ಊರಿರದ ಔರಂಗಜೇಬ

ನನ್ನ ಇಲ್ಲಣವಿಡಿದ ಮನಸಿನೊಂದೊಂದು ಭಾಗಕ್ಕೆ
ನೂರು ಮಹಾನಾಗಗಳಡರಿ ಜೋತಾಡುತಿವೆ:
ಹತ್ತಿದ್ದ ನೆತ್ತರದ ಹತ್ಯೆ, ರಾಜಬಂಧನ . . . ಓಹ್ ದಾಹ . . .
ಅಧಿಕಾರ ಮೋಹ, ನಂಬಿದರ ವಿಶ್ವಾಸ ದ್ರೋಹ,
ಚಾಚುತ್ತಿವೆ ಚೂಪು ವಿದ್ರೂಪ ನಾಲಗೆ
ಎಂಥ ಹಗೆ.
ಹದಗೆಟ್ಟ ನನ್ನೊಡನೆ ಸಾಧಿಸುತ್ತಿವೆ?
ನಾ ಪ್ರಕಂಪಿತ ದೇಹ.

ಮೈತುಂಬ ನೆನಪ-ಬರೆ-ಗೆರೆ ಮೂಡಿ
ಮಟ ಮಾಯವಾಗಿ ಮಾಟವಾಡುತ್ತಿರುವ
ನೋವುಗಳು. ತಾಜಮಹಲಿನ ಗರ್ಭ-
ದಲ್ಲಿನ್ನೊಂದು ಸಮಾಧಿಯೊಳಹೊಕ್ಕು
ಉಸಿರುಬಿಡುತ್ತಿದೆ ನನ್ನ ಸ್ನೇಹ.

ಅಲ್ಲಿ ನಕ್ಕಿದೆ ಕಲೆ.
ಇಲ್ಲಿ ಹೊಯ್ದಾಟ ಕಳವಳದ ರಂಗು,
ಇಂದು ಮೈದುಂಬಿರುವ ಗುಂಗು.

ಯಾರಿಲ್ಲಿ ಈಸಿದರು ತಿಳಿಭಾವ-ಕೊಳದಲ್ಲಿ?
ನೀರಲ್ಲಿ ಮೂಡಿದ್ದ ಕುಂಕುಮದ ಹೆಜ್ಜೆ
ನಾನು ಗುರುತಿಸಿದಾಗ ಮನದಲ್ಲಿ ಗೆಜ್ಜೆ
ಬಜಾಯಿಸಿ, ಆಗಲೇ ಯಾರೋ ಹಾಡಿದ್ದರು. ದೂರ
ಯಾವುದೊ, ಕೆರೆಗೆ ಸಾಗಿದ್ದರು. ಮತ್ತೆ
ಹೊತ್ತಿನ ಮೆತ್ತನೆದೆ ಮೇಲೆ
ಎತ್ತೆತ್ತಾರ ಮತ್ತೆ ಹೆಜ್ಜೆ ಮೂಡಿ ಮಾಯುವಾಗಿಲ್ಲ ಪೂರ.

ನನ್ನನ್ನು, ನಿನ್ನನ್ನು, ಅವಳನ್ನು
ಹವಳ-ಮುತ್ತುಗಳನ್ನು, ಧವಳ
ಪಾಪಗಳನ್ನು, ಮರುಳ ಮುತ್ತುಗಳನ್ನು
ಕತ್ತು ಹಿಸುಕಿದೆ ಕಣೋ
ನಾನೆ ಸಂಗ್ರಹಿಸಿದ್ದೆ. ಸಂರಕ್ಷಿಸಿದ್ದಿ ಶಂಕೆಸೈನ್ಯ.
ಇದರ ಧಾರೆಯು ತಳಕ್ಕೆ ಸಿಕ್ಕು ನರಳುತ್ತಿದೆ
ನನ್ನ ದೈನ್ಯ.
ಒಂದು ಕಾಲಕ್ಕೆ ಸ್ಪರ್ದೆಯಲ್ಲಿ ಕಚ್ಚಾಡಿದಿಚ್ಚೆಗಳು
ಮಚ್ಚಿ ಮೂರು ಪಾಲಾಗಿ ಬಿದ್ದಿವೆ ಇಲ್ಲಿ.
ಕಸವುಳ್ಳ ಕಟುಕರಿಗೆ ನಾನು ದಯಪಾಲಿಸಿದ ಕತ್ತಿ
ನನ್ನ ಜೀವದ ಒತ್ತಿ
ಕತ್ತರಿಸಬೇಕೆಂದು ನನ್ನ ಕತ್ತಿನ ಮೇಲೆ ತೂಗುತ್ತಿದೆ.
ಯಾರನ್ನು ನಂಬಲೋ? ಏನನ್ನು ನಂಬಲೋ?
ಯಾರು ನನ್ನವರಿಲ್ಲ.

ಪ್ರಶ್ನೆಗಳ ನುಂಗಿ, ಬೆಂಕಿ-ಬರ-ಸಿಡಿಲುಗಳನುಗುಳಿ
ಧರ್ಮವನ್ನುಸುರಿದ ನನ್ನ ಸುತ್ತಲೂ ಮಿತ್ತು
ಕುಣಿಯುತ್ತ ನಿಂತು
ಆಳ ಕುಣಿ ಕಡಿದು
ನನಗೆ ಕೊನೆ ಪಂಚಾರತಿ ಬೆಳಗಬೇಕೆಂದು
ಕಾದಿದೆ. ನನ್ನ ಹಳವಂಡ-ಭಂಡಾರಗಳ
ತುಂಬಿದೆ ಭಂಡತನದೆಲ್ಲ ಗತ್ತು.
ನಾನೆತ್ತ ಸಾಗಲಿ? ಬದುಕಲಿ?
ಮತ್ತೆ ಅ-
ಸಂಭವದ ಸಮುದ್ರಗರ್ಭದೊಳಹೊಕ್ಕು ನಿರ್ನಾಮ-
ವಾಗುವತನಕ ಚಿನ್ನಾಟವಾಡಿದವ. ಮಳೆಯು ಎಳೆ-

ಎಳೆ ಗಂಟು ಪಾತಾಳದಾಳ ಸೇರಿ ತೊಳಲಾಡಿದವ.
ನೂರೆಂಟನೆಯ ಆಕಾಶವನ್ನೇರಿ ನೇತಾಡಿ, ಹಗ್ಗ-
ಹರಿದೆಲ್ಲೋ ಬಿದ್ದು ಚಿಂದಿ-ಚಿಪ್ಪಾಡಿಯಾದವ.
ನಾನು ಏನಾಗಿಲ್ಲ? ನನ್ನ-
ಬದುಕೆಲ್ಲ ಗಡಿಬಿಡಿ, ತಳಮಳ. ಥಳಥಳ
ಹೊಳೆವ ಬೆಳ್ಳಿಯ ಮೇಲೆ ಕೋಟಿ ಕೀಚಕ-ಕಲೆ.
ಯಾವ ಹಾವಿನ ಹೆಡೆ ನನ್ನ ತಲೆ?

ನಾನೆದ್ದು ಬಲೆಯಲ್ಲಿ ಬಿದ್ದು ವಿಲಿವಿಲಿ ನಾನು.
ರಾಜ್ಯವಾಳಿದ್ದೇನೆ, ಸ್ವತಃ ದುಡಿದಿದ್ದೇನೆ, ಪ್ರಜರ
ಸಲಹಿದ್ದೇನೆ. ಪ್ರಖರ ಸಂಯಮದಿಂದ
ದಿನವೂ ಕುರಾನು ನೂರುಬಾರಿ ಓದಿದ್ದೇನೆ.
ವರ್ಷವಿಡಿ ರೋಜ, ರಮಜಾನು.
ಮಹಾಫಕೀರ-
ನಂತೆ ಬದುಕಿದ್ದೇನೆ. ನಿಟ್ಟುಸಿರ ಬುಟ್ಟಿಯಲ್ಲಿ
ಜಪೋ-ಫಲ ತುಂಬಿದ್ದೇನೆ. ಆದರೂ . . .
ಆದರೂ ಯಾವುದೋ ಸಂದೇಹದಂಗಡಿಯ
ಸಾವಿರದ ಗೊಂಬೆಗಳಲ್ಲಿ ನಾನೂನು ನಿಂತಿರುವೆ.
ಹೆದರಿ ಹೈರಾಣಾಗಿ, ಕಂಗಾಲಾಗಿ ಕೈ-ಮೈ ಸೋತು
ಕೂಗತೊಡಗಿದ್ದೇನೆ. ಯಮುನೆಯ ಕರೇ ನೀರ
ನೋಡತೊಡಗಿದ್ದೇನೆ. ಕಣ್ಣಲ್ಲಿ, ಮುಖದಲ್ಲಿ ಮೊಹರ್ರಂ
ಸಿಕ್ಕಾಪಟ್ಟೆ ಹಾಡತೊಡಗಿದೆ ಈಗ.
ನಾನು-
ಹೌದು, ನಾನು ತಳ ತಳ. ಊರಿರದ ಔರಂಗಜೇಬ.

ನಿರ್ಗಮನ

ನಾ ಬಂಜೆ, ಬಯಲಾಗಿ ಅಂಗಾತ ಬಿದ್ದಿದ್ದೆ.
ಸಾವರಿಸಿ ನಿನ್ನನ್ನೆ ಅಪ್ಪಬೇಕೆಂದಿದ್ದೆ
ನದಿಯಾಗಿ ಬಂದಿ, ಹರದಿ.
ನನ್ನ ಬದುಕಿನ ನಿನ್ನೆ-ನಾಳೆ ಇಕ್ಕೆಲದಲ್ಲಿ
ಇಂದಿನಕ್ಕರೆಯಲ್ಲಿ
ರೇವೆ ಚಿಮ್ಮಿದ್ದಿ.

ನೆನಪು ಮಡುಮಡುಗಟ್ಟಿ ನಿಂತಿರುವೆ
ನೀ ಹರಿದು ಹೋದಿ.
ನನ್ನ ದುಃಖ ನಿನ್ನ ಗತಿಯೊಡನೆ ಹರಿದು
ಇಂದು ಕಾಣದ ಎರಡು ತೋಳ ತಬ್ಬಿ
ಉಬ್ಬಿ
ಅಲ್ಲಲ್ಲಿ ಮಿಡಿದು ಚಿಗುರು ಹಸುರಲ್ಲಿ ನಕ್ಕು
ಹಾಯಾಗಿ ಎಳೆಬಿಸಿಲ ಪುಚ್ಚ ರೆಕ್ಕೆ
ಮಿದುವಾಗಿ ತೊಳೆಯುತ್ತಲಿದ್ದೇನೆ ಕಣ್ಣ.

ಸೋಮಶೇಖರ ಇಮ್ರಾಪೂರ

ಜೀವಂತ ಹೆಣಕೆ

ಏ! ಹೆಣಾ ಸುಮ್ ಸುಮ್ನ್ಯಾಕ
ಜೀವಕ ಬಡಿದಾಡ್ತಿ.

ಇದ್ದದ್ದಂತೂ ಇಲ್ದಾಂಗಾತು,
ಹಣೆಯಾಗ ಬರೆದದ್ದು ಬಂದ್ಹಾಂಗಾತು,
ಯಮನ ಕೂಡ ರಮ್ಮಿಲ್ ಆಟ,
ನಿನ್ನರತೀ ಬಾಯ್ತೆರದಂಗಾತು,
ಸಾವಿನ ಸಂತಿ ಸನೇಕ ಬಂತು,
ಆದೀ ಗಾಳಿ ಧೂಳಿ ಮಾಟ,
ಏ! ಹೆಣಾ ಸುಮ್ ಸುಮ್ನ್ಯಾಕ
ಜೀವಕ ಬಡಿದಾಡ್ತಿ.

ಹುಟ್ಟಿದ್ದಾತು ಬೆಳೆದಿದ್ದಾತು,
ಮದುವಿ ಮಕ್ಕಳ ಎಲ್ಲಾ ಆತು,
ಬೆಳಗಾತು ಬೇಗೊ ಆತು,
ಸೂರ್ಯಾ-ಚಂದ್ರಾ ಭೆಟ್ಟಿಯಾತು,
ಮುಂದಿರು ಮೆಟ್ಲುಯಮನ ಪಟ್ಟ,
ದುಃಖ ದುಂಡಿ ದೊಡ್ಡ ಘಟ್ಟ,
ಏ! ಹೆಣಾ ಸುಮ್ ಸುಮ್ನ್ಯಾನ
ಜೀವಕ ಬಡಿದಾಡ್ತಿ.

ಎಣ್ಣ್ಯಾಗಿ ಇಂಜಿನ್ ನಿಂತ್ಯು,
ನೀರಿಲ್ದ ಗಿಡಾ ಹೋತು.
ಗಾಲಿಲ್ದಗಾಡಿ ಬಿತ್ತು,
ಹೊಟ್ಟೆ ಕೊಳು ಹೊಲಾ ನುಂಗಿತು,
ಮೊಟ್ಟೆ ಹೊನ್ನು ಮನಿ ಕಿಂತು,
ಇಟ್ಟಿದ್ದೆಲ್ಲಾ ಇಲಿಗಾತು,
ಏ! ಹೆಣಾ ಸುಮ್ ಸುಮ್ನ್ಯಾಕ
ಜೀವಕ ಬಡಿದಾಡ್ತಿ.

ಮೋಡದಿಂದಾ ಮಳಿ ಆತು,
ಕೆರಿ ತುಂಬಿ ಹೊಳಿ ಹರಿತು,
ನೀರಂ ಮತ್ತ ಮ್ಯಾಗ್ಯ ಹೋತು,
ಘಮ್ ಘಮ್ ಆಹಾ ಮಸಾಲಿ ದೋಸಿ,
ಏನು ಕಂಪು ಹೊಟ್ಗೆ ಸಂಪು,
ರೋಖ ಕೊಟ್ರೆ ಉದ್ರಿ ಮಾಪು,
ಏ! ಹೆಣಾ ಸುಮ್ ಸುಮ್ನ್ಯಾಕ
ಜೀವಕ ಬಡಿದಾಡ್ತಿ.

ಭರ್ ಭರ್ ಕಾರ್ ಗಾಡಿ,
ಗಿರ್‍ರ್ ಗಿರ್‍ರ್ ಗಾಲಿ ಓಡಿ,
ಕಣ್ ಬಡಿ ರೆಪ್ಪೆ ಹಿಡಿ,
ಒಂದು ಎರಡು ಮೂರು,
ಮುಂಬೈ ಲಂಡನ್ ಪ್ಯಾರಿಸಿನಲ್ಲೆ,
ಅಗ್ಲಿ ಚೈನೀ ಸಲೀಸ್,
ಏ! ಹೆಣಾ ಸುಮ್ ಸುಮ್ನ್ಯಾಕ
ಜೀವಕ ಬಡಿದಾಡ್ತಿ.

ಇಲಿ ತಿಂದು ಬೆಕ್ಕಿನ ಜೀವ,
ಜೀವಾ ತಿಂದು ಮತ್ತೊಂದು ಜೀವಾ,
ಬೀಜ ಹೋಗಿ ಹೂವಾತು,
ಹೂ ಸತ್ತು ಹಣ್ಣಾತು,
ಹಣ್ಣು ಬಿದ್ದು ಮಣ್ಣಾತು,
ಮಣ್ಣೇ ಪೈರ್ ಕಣ್ಣಾತು,
ಏ! ಹೆಣಾ ಸುಮ್ ಸುಮ್ನ್ಯಾಕ
ಜೀವಕ ಬಡಿದಾಡ್ತಿ.

ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ

"ಏಳ ಹೊತ್ತು ಹೊಡೆಮರಳಿ ಬಂತು
ಕಸ ಹೊತ್ತು ಹಾಕು ಹೊರಗೆ
ದೊಡ್ಡೆಮ್ಮ ಎಲ್ಲಿ ಹೋಗ್ಯೆತಿ ಹ್ಯಾಂಗ
ಕರ ಕಟ್ಟ್ಬಿ. ಹಿತ್ತಲೊಳಗ."

“ಕಟ್ಟ್ಯಾರ ಕಟ್ಟು ಬಿಟ್ಟಾರ ಬಿಟಗೊ
ಒಟ್ಟೈತಿ ಕೆಲಸ ನನಗ
ಕುಟ್ಟಾಕ ಮತ್ತ ಬೀಸಾಕ ಇದಕ
ಕೊಟ್ಟಿಲ್ಲ ನನ್ನ ನಿನಗ”

“ಏಳೇಳ ಊರ ಎತ್ತೆಲ್ಲಾ ಹೊಲಕ
ಹೊಂಟಾವ ತಿಳಿಯಿತೇನ?
ಮಠಾರೀಯು ಗಂಟು ಹಾಕೀದಿ ಯಾಕ
ನಿಟ್ಟಿಲುವು ಮುರಿಯು ಲೇನ?”

“ಹೆಣ್ಣಾಗಿ ಯಾಕ ಬಂದೇನ ಎವ್ವಾ
ಈ ಜೀವ ಸಾಕು ಸಾಕ
ನಮ್ಮಪ್ಪ ಅವ್ವ ಕೊಟ್ಟಾರ ಇಲ್ಲಿ
ಇನ್ನೇಟು ಬದುಕಬೇಕ.”

“ನಿಮ್ಮಪ್ಪ ಸತ್ತು ಪಾರಾದ ಇದ್ರೆ
ಅವನೆದೆಯು ಸೀಳುತಿದ್ದ್ಯಾ
ನಿಮ್ಮವ್ವ ಅಂದ್ರು ನಮ್ಮಕ್ಕ ಅಂತ
ಬಿಟ್ಟೇನಿ ಹುಗಿಯುತಿದ್ದ್ಯಾ.”

“ನಮ್ಮಪ್ಪ ಅವ್ವ ಮಾಡ್ಯಾರ ಏನ
ಸುಮ್ ಸುಮಕ ಬೆಯ್ಯಬ್ಯಾಡ
ಉಟ್ಟರವಿವಸ್ಯಾಗ ಬದುಕಿದ್ದ ನಿನ್ನ
ಸಲುಹಿದ್ದು ಮರಿಯಬ್ಯಾಡಾ.”

“ಎಲ್ಲಿದ್ದಿ ಏನೊ ಛೀವಠಾರಿ ನಿನ್ನ
ಕಟ್ಟ್ಯಾರ ಗುದ್ದಿ ಹಾಂಗ
ಸೊಸಿ ಅಂತ ಕೈಯು ತಡದೀನಿ ಜ್ವಾಕಿ
ಹೀಂಗಾದ್ರು ಮುಂದ ಹ್ಯಾಂಗ?”

“ಮುಂದೇನು ಏನ ಹೋಗ್ತೀನಿ ಇಂದ
ನಾ ಬೆಳೆದ ತವರಿಗೀಗ
ಹೊಗಿ ಬಿಡದು ಬುದ್ಧಿ ಮಬ್ಬಾದವಸ್ಯಾಗ
ಬರತೀನಿ ಇಲ್ಲಿಗಾಗ.”

“ ಎಂಥ ಚೆಂಡಿ ನೀ ಗಂಟು ಬಿದ್ದಿ
ಹೇಳಿದ್ದು ಕೇಳಲೊಲ್ಲಿ
ಶಾರಾ ಬಿಟ್ಟು ಹಳ್ಳ್ಯಾಗ ಬಂದಿ
ಆಯ್ತೇನ ಹೇಳಲೊಲ್ಲಿ.”

“ ಮದುವೀಯ ಸಿರಿ ಹರಿದ್ಹೋಗಿ ಮತ್ತ
ಹೊಲಿದದ್ದು ಪಿಸಿದು ಹೋಯ್ತು
ನಿನ ಕೈಯ ಹಿಡಿದು ಮೂಗುತಿಗೆ ಹೊರತು
ನನ ಜೀವ ಕಾಣದಾಯ್ತು.”

“ ನೈಲಾನ ಸೀರಿ ಬಂದೈತಿ ಅಂತ
ಒಂದೆಮ್ಮಿ ಮಾರಿ ತರಲೆ !
ಧಾರ್ವಾಡದಾಗ ಹುಡಿ ಬಾಳ ಅಂತ
ಪೌಡರಕ ಹೇಳಿಬರಲೆ.”

“ ಪುಂಡೀಯ ಪಲ್ಲೆಗೊಂದಿಷ್ಟು ನುಚ್ಚು
ಐತೇನ ನೋಡ ಒಳಗ
ಒಣ ಟಿಬರು ಯಾಕ ತೆಲಿಗಿಲ್ಲ ಎಣ್ಣಿ
ನಾನಾದೆ ಮನೆಗೆ ಸೋಣಗ.”

“ ಪ್ಯಾಟೀಯ ನೀರಿಗಿಳಿಬ್ಯಾಡ ನಿಲ್ಲ
ಸ್ವಾಟೀಯ ತಿರುವಬ್ಯಾಡಾ
ಒಂದೋದು ಹಲ್ಲು ಉದುರ್ಯಾವು ನೋಡ
ನನಗ್ವಾದ ಮಾಡಬ್ಯಾಡಾ.”

“ ಮನಿ ತುಂಬಾ ಎಲ್ಲ ಮಣ್ಣ್ಯಾನ ಗಡಿಗಿ
ಒಂದಾದ್ರು ಗಟ್ಟಿ ಇಲ್ಲಾ
ನನ ತವರು ಮನೆಯ ಕೊಡ ನೆಗ್ಗಿದ್ದನ್ನ
ಮಾಡ್ಯೂದು ಆಗಲಿಲ್ಲಾ.”

“ ನಿಮ್ಮಪ್ಪನ್ಹ್ಯಾಂಗ ನಾ ಸೋಗು ಮಾಡಿ
ಜೋಗಪ್ಪನಾಗಲೇನ
ಹಾಕಿದಷ್ಟರಲಿ ಕಾಲುಂಜಾತಿ ನೀ
ಬಾಳಲಾರಿಯೇನ.”

" ಎಲ್ಲೈತಿ ಬಾಳು ಸುಡುಗಾಡಿಗಿಟ್ಟು ಬಾ
ಹಾಳು ಜಲುಮು ಹೊತ್ತು
ನಮ್ಮಪ್ಪ ಅವ್ವ ಕೊಟ್ಟಾರ ನಿನಗ
ಕೈತುಂಬ ರೊಕ್ಕ ತೆತ್ತು."

" ಜನ ತುಂಬಿ ನಿಂತ ಹಂದರದ ಒಳಗ
ನಿಮ್ಮಪ್ಪ ಕೈಯ ಕೊಟ್ಟಾ
ಕಡೆಗೆ ಎಲ್ಲಾ ಕೊಡತೀನಿ ಅಂತ
ಕೊಡಲಿಲ್ಲ ಒಂದು ಚುಟ್ಟಾ."

" ಸಾಕವ್ವಾ ಸಾಕು ಕೆರೆಭಾವಿ ಪಾಲು
ನಾನಾಗಿ ಹೋಗಲೇನ
ದಿನ ಗಳಿಗೆಗೂನು ಕಟಿಪಿಟಿಯ ತಿಂದು
ಉಪವಾಸ ಸಾಯಲೇನ."

" ಹ್ಯಾಂಗಾರ ಮಾಡಿ ಆ ಭಾವಿಗ್ಹೋಗು
ಇದರಾಗ ಇಲ್ಲ ನೀರ್‍ಯ
ಹೊಟ್ಟೆತುಂಬ ನೀ ನೀರು ಹಿಗ್ಗಿ
ನನಮ್ಯಾಲ ಕರುಣ ತೋರ."

" ನನಗೆಂತ ಗಂಡ ಜತಿಯಾದ ಇಸಾ
ಕುಡಿಲಾಕ ಇಲ್ಲ ಕಾಸ್ಯ
ಸುಡಿಗಾಡಿನ್ಯಾಗ ಸುಖ ಐತಿ ಅಂತ
ಹೋಗೂದು ನನಗ ಲೇಸ."

" ಹೋಗ್ತಿದ್ದಿ ಅಂದ್ರು ವಿಮಾ ಇಳಿಸತಿದ್ದ್ಯಾ
ಮೊದಲ್ಯನ ತಿಳಿಸಬಾರ್‍ದ
ಸುಗಾಡಿಗ್ಯಾಕ ಬೇಕೇನು ಇಲ್ಲೆ
ತರತೀನಿ ಸಾಯಬಾರ್‍ದ."

" ಹೊಟ್ಟ್ಯಾನ ಕಿಚ್ಚು ಎಷ್ಟಂತ ಹಿಡಿದು
ಕಟ್ಟೀನ ಕಳ್ಳಿನೊಳಗ
ಕಳ್ಳೀಯ ಹಾಲು ಕುಡಿದ್ಹಾಂಗ ಆತು
ಸೊಗಸಿಲ್ಲ ಮನಸಿನೊಳಗ."

“ ನಿನ್ನ ಕೈಯು ಹಿಡಿದು ಮುಳಜಾಲಿ ಗಿಡವ-
ಏರೀದ ಹಾಂಗ ಆಯ್ತು
ತೆಲಿ ಕೆಡಿಸಬ್ಯಾಡ ನಾ ಹೊಂಟಿ ಹೊರಗ
ಈ ಜೀವ ಬ್ಯಾಸರಾಯ್ತು.”

“ ಮಹಾರಾಯ ನಿನ್ನ ಕಾಲ್ಮುಗಿಯತೀನಿ
ಸಾಕೀಳ ಸೆಟಗೊಬ್ಯಾಡಾ
ಕಸಮುಸುರಿ ತೊಳೆದು ಬಿಸಿಬುತ್ತಿ ಕಟ್ಟಿ
ಕಳುಸ್ತೀನಿ ನಿನ್ನ ಕೂಡ.”

“ ಅಳಬ್ಯಾಡ ಮಳ್ಳಿ ಬಾಬಾರ ಇಲ್ಲಿ
ಅಳತಾರ ಏನ ಹೀಂಗ
ಗಂಡ ಹೆಂಡ್ರು ಜಗಳಂದ್ರ ನೋಡ ಏ
ಗಂಧ ತೀಡಿದ್ಹಾಂಗ.”

ಪ್ರೀತಿ

ಈ ಪ್ರೀತಿ ಹರಿದು ಹರಿಪಲ್ಲೆ ಮಾಡಿ
ಗಾಳ್ಯಾಗ ತೂರಲೇನ
ಗಾಳೀಯು ಹಿಡಿದು ಗಡಿಗ್ಯಾಗ ತುಂಬಿ
ಕಲ್ಲೀಗೆ ಹೇರಲೇನ.

ಚೀಲಕ್ಕ ಹಾಕಿ ಕಚಪಚೆನ ತುಳಿದು
ಬಾಯೀಯು ಬಿಗಿಯಲೇನ
ಎಣ್ಣೀಯು ಉಗ್ಗಿ ಉರಿಯ್ಯಾಗ ಒಗೆದೆ
ಸುಡಲಿಲ್ಲ ಮಾಡಲೇನ.

ಏನಾದರೂನು ಏನಿಲ್ಲ ನೋಡ
ಏನೈತಿ ಹೇಳ ನೀನ
ಏನಾರ ಆಗಿ ಏನೇನೊ ಮಾಗಿ
ಪಿರುತಿಯೊ ತಾನ ತಾನ.

ಹಿರೇತನ

ಸುಂಟ್ರುರ ಗಾಳ್ಯಾಗಿ ಸುಳಿಯಾಕ ಮನಸಿಲ್ಲ
ಸವಳುಪ್ಪು ತಿಂದು ಸಾಕಾತು
ಮಂದೀಯ ಮಜಲೀಗೆ ಮಣಕಾಲು ಮುರಕೊಂಡು
ಬಗಲೀಗೆ ಕೋಲೆರಡು ಬೇಕಾತು.

ಅಮ್ಮ್ಯಾನ ಸೀರ್‍ಯಾಗ ನಮ್ಮಾಕಿ ಮದುವ್ಯಾತು
ಸಾಪಳಕಿ ತಿಂದು ರಗಡಾತು
ಬುತ್ತೀಯ ಕಟ್ಟಿಲ್ಲ, ಬಾಳೇವು ಮಾಡ್ಲಿಲ್ಲ
ಇಷ್ಟ್ಯಾಕ ಈ ದಾರಿ ಬರಡಾತು.

ಅಂತು ಅಂತೂ ನಡದೈತಿ ಬಾಳುವಿ
ಎಂಥಾದೊ ಏನೋ ಗೊತ್ತಿಲ್ಲ
ಹುಟ್ಟೀದ ತಪ್ಪಿಗೆ ಹುಲ್ಲಾದ್ರೂ ಸಿಕ್ಕೀತು
ಹಾಂಗಂತ ತಿಳಿದಿನ್ನೂ ಸತ್ತಿಲ್ಲ.

ಕವಿ ಚಾತಕ

೧

ಎಲ್ಲಿರುವೆ ಎಲ್ಲಿರುವೆ ಎಲ್ಲಿರುವೆ ಚಾತಕವೆ?
ಯಾವ ಮರದಲ್ಲಡಗಿ ಕುಳಿತು ಕಾಯುತ್ತಿರುವೆ?
ಶ್ರಾವಣದ ಮಳೆಗಾಗಿ ಬಾಯಾರಿ ಕುಳಿತಿಹೆಯು,
ಮಧುಮಾಸದಾಗಮಕೆ ಕಾದಿರುವೆಯು?

೨

ಇಲ್ಲಿರುವೆ ಇಲ್ಲಿರುವೆ ಇಲ್ಲಿರುವೆನೋ ಕವಿಯೆ
ನಿನ್ನೆದೆಯ ಗೂಡಿನಲಿ ಕುಳಿತು ಕಾಯುತ್ತಿರುವೆ
ಬಾಳಸವಿಯಮೃತಕ್ಕೆ ಬಾಯ್ದೆರೆದು ಕುಳಿತಿರುವೆ!
ಹೊಂಗನಸು ಹನಿಗೆಂದು ಅರಸುತಿರುವೆ.

ನನ್ನೆಡೆಗೆ ಬರುವಾಗ

ಎಳೆಯ ರವಿಕಾಂತಿಯಲಿ ಇಳೆಯು ಸಿಂಗರವಾಗಿ
ನಿನ್ನ ಮನಕಾನಂದವೀಯುತಿರಲಿ
ನಿನ್ನ ನಡೆಯನು ಹರಸಿ ನಡೆವ ನೆಲ ಮಿದುವಾಗಿ
ನಿನ್ನ ದಾರಿಯನನುವಗೊಳಿಸುತಿರಲಿ.

ಮಲ್ಲಿಗೆಯು ಮೈತುಂಬ ಹೂವುಗಳು ಮುಡಿದಿರಲಿ
ನಿನ್ನ ಕಣ್ಣಿಗೆ ಸೊಂಪು ತುಂಬುತಿರಲಿ
ಹುಲ್ಲೆ ಸಾರಂಗಗಳು ನಾಟ್ಯವಾಡುತಲಿರಲಿ
ನವಿಲುಗಳು ಸ್ತುತಿಪಾಠಗೆಯ್ಯುತಿರಲಿ.

ಮಾಮರನ ತೆಕ್ಕೆಯಲಿ ಕುಳಿತುಲಿವ ಕೋಗಿಲೆಯು
ಗಾನದಲಿ ನಿನ್ನೆದೆಯ ಹಣಿಸುತಿರಲಿ
ಆಲಗಳ ತೋಳ್ಗಳಲಿ ತೂಗುತಿಹ ಗಿಳಿಬಳಗ
ನಿನ್ನ ಹಾದಿಗೆ ಶುಭವ ಬಯಸುತಿರಲಿ.

ಪಕ್ಷಿಗಳ ಪಲುಕುಗಳು ದುಂಬಿಗಳ ಝೇಂಕೃತಿಯು
ನಿನಗೆ ಮಂಗಳವಾದ್ಯವಾಗುತಿರಲಿ
ನನ್ನೆದೆಯ ದೇಗುಲಕೆ ದೇವಿ ನೀ ಬರುವಾಗ
ದಾರಿಯಲಿ ಶುಭಶಕುನವಾಗುತಿರಲಿ.

ಪ್ರೇಮ ಪ್ರಣತಿ

ನಿನ್ನ ನನ್ನ ಬಾಳಿಗೊಂದು
ಆದಿಯುಂಟೆ ಚೆನ್ನೆ
ಆದಿಯುಂಟೆ ಅಂತ್ಯವುಂಟೆ
ಹೇಳು ಮುಗುದ ಕನ್ನೆ.

ಐದುಸುತ್ತ ಕೋಟೆಯಲ್ಲಿ
ಮಧ್ಯೆ ಮಹಾಸ್ತೂಪ
ಸತತ ಬೆಳಕ ಚೆಲ್ಲುತಿಹುದು
ಅಲ್ಲಿ ರತ್ನದೀಪ.

ಸುಟ್ಟುಹೋದನಲ್ಲಿ ಕಾಮ
ತಟ್ಟಿ ಶಿವನ ಶಾಪ
ಬೆಂದ ಕಾಮನನ್ನು ಕುರಿತು
ಕೇಳು ರತಿವಿಲಾಪ.

ಮರುಕದಿಂದ ಮಮತೆಯಿಂದ
ಆರುತಿರಲು ಕೋಪ
ಸುತ್ತ ಕಂಪ ಹರಡುತಿರಲು
ಅಮರಪ್ರೇಮ ಧೂಪ.

ಅಗ್ನಿಯಿಂದ ಶುದ್ಧನಾಗಿ
ಎದ್ದುಬಂದ ಕಾಮ
ಗಿರಿಜೆ ಶಿವರು ಒಂದಾಗಲು
ಪೂತವಾಯ್ತು ಪ್ರೇಮ.

ಅಮೃತರಸವ ನೊಸರುವಂಥ
ನಿನ್ನ ಚೆಲುವು ಬೇಟ
ಬೆಳುದಿಂಗಳ ಚೆಲ್ಲುವಂಥ
ಚಿಗರಿ ಕಣ್ಣನೋಟ.

ಅರಳುತಿರಲು ಅಲ್ಲಿ ಎದೆಯು
ತೆರೆಯುತಿರಲು ಚಕ್ಷು
ನಿನ್ನೊಡನೆಯೆ ನಾನಿರುವೆನು
ಸತತ ಪ್ರೇಮಭಿಕ್ಷು.

ನೂರು ನೂರು ಜನುಮದಿಂದ
ನೀನೆ ನನ್ನ ಗೆಳತಿ
ಇಂದು ಮುಂದು ಎಂದೆಂದಿಗು
ನನ್ನ ಎದೆಯ ಪ್ರಣತಿ.

ರಾಮೇಗೌಡ

ಆಹ್ವಾನ

ಯಾರವರು ? ಏಕೆ ಬಂದವರು ?
ವಿಚಾರವೇನು ಹೇಳಿ,
ಬಿರುಗಾಳಿಯಂತೆ ನುಗ್ಗಿ ಬರುವ ನೀವು-
ಸದ್ದು ಮಾಡಬೇಡಿ ತಾಳಿ;
ತಮದೆದೆಯ ಇರುಳ ತೆಗೆವವರೊ, ನೀವು-
ಕದತೆರೆವೆ ಬಂದು ಬಾಳಿ !

ಬಾಳಿನಲ್ಲಿ ಮಂದಾರ ಬೆಳೆವ
ದೇವತನಯರೇನೊ !
ಆಕಾಶದಿಂದ ಹಾಲ್ಜೇನ ತಂದು
ಪೋಷಿಸುವರೇನೊ !
ಎದೆಯೊಲವ ಹಿಡಿದು ಇಳಿದು ಬರುವ-
ನಾಕದರ್ಶಿಗಳೇನೊ !

ಒಂದೊಂದ ಹನಿಯ ತಂದೆನ್ನ ಮನದಿ
ಹೊಸ ಚೈತ್ರಋತುವ ನಡುವರೇನೊ !
ಹೊಸ ಬಾಳಿಗಿವರು ಮುಂಗೋಳಿಯಾಗಿ
ಸುರ ಸುಗ್ಗಿಯನ್ನೆ ಕರೆವರೇನೊ !
ಬಂಗಾರ ಬದುಕ ಹರಿಕಾರರಾಗಿ
ಬೆಳ್ಳಿ ಬೆಳಸನ್ನೆ ಬೆಳೆವರೇನೊ !

ಆಹ್ವಾನ ಬನ್ನಿ, ಒಲವನ್ನೆ ತನ್ನಿ-
ಮೂಕರಾಗ ಬೇಡಿ,
ಹೊತ್ತಾರೆಯಲ್ಲಿ ಐತರುವ ನೀವು-
ಕಯ್ಯಲ್ಲಿ ಕಿರಣಗಿಂಡಿ !
ಎದೆ ಹೊಲದ ಮೇಲೆ ಬರುತಿರುವ ನೀವು-
ಬದುಕನ್ನೆ, ಬನ್ನಿ ಬಂಗಾರಮಾಡಿ !

ತಿರೆ ಮುಗಿಲ ಬೆಸೆವವರೊ, ನೀವು-
ಇರಬೇಕು ಬಾಂದಳದ ಭಕುತರು !
ಎದೆ ಎದೆಯ ಮಿಡಿವ ಜಾಗೃತವ ಕೊಡುವ
ನಿತಾಂತ ಅನಂತ ಯಾತ್ರಿಕರು !

ತೆರೆದಿದೆ ಬಾಗಿಲು ನಿಮಗೆ ನಿತ್ಯ
ನಿಮ್ಮಿಂದೆ ಹೃದಯ ಸತ್ಯಸ್ಯಸತ್ಯ !
ನೀವು ಬೆಳಗಲು ಎದೆಯು-ಗುಡಿಯು
ಆಗದಿರಲಿ ಇದು ತಮದ ಗವಿಯು !

ವಿಷಕಾಲ ವೈರಾಗ್ಯ

ಕನ್ನಡ ಕುಲದವ್ವ ತವಕ್ಯಾದಿ ಕೂತಾಳ
ತವರೂರ ಭಾಗ್ಯ ತನಗಿಲ್ಲವೆಂದ್ಯ
ತೆಪ್ಪಗೆ ಮುಖಮಾಡಿ ಗಪ್ಪಗೆ ನೋಡ್ಯಾಳ
ಕಣ್ಣೀರ ಹರಿಸ್ಯಾಳ ಮಕ್ಕಳ ನೆನೆದ

ಬೆಡಗಿನ ಮಕ್ಕಳ ಬಯಲಾಟ ನೋಡ್ಯ
ಮೇಲಾಟ ಕೆಳಿಸ್ಯಾವ ತಾಯಿಯ ಮರೆದ್ಯ
ತಾಳಿಲ್ಲ ತಂತಿಲ್ಲ ಕುಣಿಯಾಕ ನಿಂತಾವ
ತಾಯಿಗದೆಂತ ಬಡಿಸ್ಯಾವ ಊಣಲಾಕ.

ಆಗೊಂದು ಈಗೊಂದು ಮರಪೆಟ್ಟು ಬಿದ್ದಾಗ
ಮೊಗಬಾಡಿ ನಿಂತಾಗ ಯಾರು ಕೇಳ್ಬೇಕ
ಬಹುಕಾಲ ಸಹಿಸ್ಯಾಳ ಕನ್ನಡ ತಾಯಮ್ಮ
ಗತಕಾಲ ಸೌಭಾಗ್ಯ ಉಸಿರಿಟ್ಟು ನೆನಿಸ್ಯಾಳ.

ಕನ್ನಡ ತಾಯಮ್ಮ ಹೆತ್ತಾಳ ನೆನಿಯಾಕ
ಹೊಯ್ಸಳ ಪುಲಿಕೇಶಿ ಗಂಡ್ಯಗಳ
ಯಾಕಿಲ್ಲ, ಎಷ್ಟಿಲ್ಲ, ಕಲಿಗಳ ಸಂಗ್ರಾಮ
ತಾಯಿಯ ಮಾನಾ ಉಳಿಸಾಕ ಬೆಳಸಾಕ.

ಕಲಿಗಳ ಬೀಡಾಗಿ ಕಲೆಗಾಗಿ ಹೊರತೇನ
ಕಲ್ಲಿನ ಹೊಯಾಗ ಸಂಗೀತ ಮಿಡಿದಾನ
ಜಕ್ಕಣ ಶಿಲ್ಪದ ಜಯಭೇರಿ ಹೊಡೆದಾನ
ಜಯಮಾಲಿ ಇಡಿಸ್ಯಾನ ತಾಯಿಯ ಕೊರಳಿಗೆ.

ಶಿಲ್ಪಿಯ ಕೈಯಾಗ ಕಲ್ಲೆಲ್ಲ ಮೇಣ್ಯವ
ದಳದಳ ಬಿಡಿಸ್ಯಾನ ತನುಮನ ಒಂದಾಗಿ
ಕಳೆತುಂಬಿ ನಿಂತಾವ ವಿಧ ವಿಧ ಮೂರ್ತಿಗಳು
ಸೆಳೆದಾವ ಬಲವಾಗಿ ಲೋಕದ ಕಣ್ಣ.

ಕವಿಗ್ಯಳ ಇಂಪ್ಯಿನ ಹಾಡ್ಯಿನ ಮಂಜುಳಕೆ
ನಾಡೆಲ್ಲ ಆನಂದ ಕಡಲ್ಯಲಿ ಮುಳುಗೀತ
ಕವಿ ವೀರ ರಸವೆಲ್ಲ ನಾಡೊಂದ ಮಾಡಾಕ
ಗೂಡೊಂದ ಕಟ್ಟ್ಯಾಕ ಚಿಲ್ಲೆಂದು ಚಿಮ್ಮ್ಯತ.

ಕಾವೇರಿ ನರ್ಮದೆ ಗಡಿಗ್ಯಳ ಕಾಯ್ದ್ಯಾರ
ಹಿರಿಕ್ಯೆರಿ ಮಲೆಗಳು ತಲೆಯೆತ್ತಿ ನಿಂತಾವ
ಕಡಲ್ಯಿನ ತೀರ್‍ಯದ ಸೌಭಾಗ್ಯ ಪಡದಾಳ
ಬೆಡಗ್ಯಿನ ನಾಡ್ಯಿನ ಹಿರಿಯೊಡತಿ ಅನಿಸ್ಯಾಳ.

ಅದುಕಾಲ ಹಿಂದೊಮ್ಮೆ ಚೆಂದಾಗಿ ಹೋತ್ಯ
ತಾಯಮ್ಮ ಅದನೆಂತ ಮರೆಯಲಿ ಬೇಕ್ಯ
ಕಡುತಾಪ ಬಡತಾಳ ಕನ್ನ್ಯಡ ಕುಲದವ್ವ
ವಿಷಕಾಲ ವೈರಾಗ್ಯ ತಾಳ್ಯಲು ಬೇಕ್ಯ.

ಭಕ್ತಿ

ನನ್ನ ಮೌನವೆ ನಿನಗೆ ಪ್ರಿಯವಾದ ಪಕ್ಷದಲಿ
ಒಪ್ಪಿಸಿಕೊ ಅದನೆ ನೀನು.
ಹಾಡಬೇಕೆನ್ನುವೀ ಮೂಕ ನಾಲಗೆಯನು
ಅರ್ಪಿಸುವೆನು ಹರಿದು ನಾನು.

ನನ್ನ ದುಃಖವೆ ನಿನಗೆ ಪ್ರಿಯವಾದ ಪಕ್ಷದಲಿ
ಒಪ್ಪಿಸಿಕೊ ಅದನೆ ನೀನು.
ನಗೆಯ ಕಂದನ ಕೊರಳ ಕಡಿದು ನಿನ್ನಡಿಗಳಿಗೆ
ಅರ್ಪಿಸುವೆನು ಅಳುತ ನಾನು.

ನನ್ನ ನಾಶವೇ ನಿನಗೆ ಪ್ರಿಯವಾದ ಪಕ್ಷದಲಿ
ಬಂದು ಸಿಡಿಲಾಗಿ ಎರಗು.
ನನ್ನ ಹೃದಯದ ಹಸಿರು ವನವೆಲ್ಲ ಒಡ್ಡುವೆನು
ನಿನ್ನ ಕಣ್ಣುರಿವವರೆಗು.

ನನ್ನ ಮಸಣದ ಬೂದಿಯೇ ನಿನಗೆ ಪ್ರಿಯವಾಗೆ
ಬಂದು ಕುಣಿದಾಡು ಶಿವನೆ.
ಶ್ರೀಮಂತ ಆತ್ಮದೀ ಕನಸಿನೈಶ್ವರ್ಯಗಳ
ಸುಟ್ಟು ಕೋ ವಿಭೂತಿಯನೆ.

ನೀನೊಲಿದು ಹೂ ನಲಿದು ನಕ್ಕರದು ನಿನ್ನ ಮುಡಿಗೆ;
ನೀ ಮುನಿದು ನೆಲವುರಿದು ಸುಟ್ಟರದು ನಿನ್ನ ಹಣೆಗೆ.

ಯಾವ ದುಃಖಕೆ ಯಾವ ಅನುಕಂಪ?

ಕ್ರೋಧಾಗ್ನಿ ಕೆಂಪು ನೇತ್ರರು ಚೆಲ್ಲಿ, ಅವಮಾನ-
ದುರಿವೋಡಗಳು ಕಾದು ಕೈ ಸೆಟೆದು ಹಾದಿಯಲಿ
ಪಾಪ ಮೊದಲನು ಹೊತ್ತು ಪಿತೃಗೃಹವನೆ ಅರಸಿ
ಬಹ ಸಂಜೆ ವೆಣ್ಣನಾಗಮನಕ್ಕೆ ಅಪಹಾಸ್ಯ-
ದೋಲಗವನೂದುವುವು ಗೋ ಕೊರಳ ಗಂಟೆಗಳು.

ಮನೆಯ ಸೂರಿನ ನೇರದೆದುರು ಕೊಂಬೆಯ ಮೇಲೆ,
ಕರಿಮುಗಿಲುಗಳ ಕಂಬಳಿಯ ಹೊದ್ದಂತೆ ಚಳಿಗೆ,
ಕುಳಿತೊಂದೆ ತಾರೆ, ಮುದಿಯೌವನದ ಹುಚ್ಚಿನಲಿ
ಚಲುವೆಯೋರ್ವಳ ಕಂಡು ದಿಟ್ಟಿಸುವ ಕಾಮಿಯೊಲು,
ರೆಪ್ಪೆಯಿಕ್ಕದೆ ನೋಡುತಿದೆ;

ಇರುಳೆಲ್ಲ ಅಲ್ಲಿ
ನೂರು ಸಾವಿರ ಭಗ್ನ ಹೃದಯಗಳ ಬೆಂಕಿಯುರಿ
ಪ್ರಜ್ವಲಿಸುತದೆ ಒಂದೊಂದು ಉರಿವ ಮನೆ ಕಂಡು
ಅಂಗಳದೊಳಾಡುತಿಹ ಮಗು, ಹತ್ತಿದುವು ದೀಪ,
ಎನ್ನುತ್ತದೆ. ಯಾವ ದುಃಖಕೆ ಯಾವ ಅನುಕಂಪ.

ಶಾಮಸುಂದರ ಬಿದರಕುಂದಿ

ಹುಟ್ಟು

ಬೆಳಕು ಹರಿಯುವ ಮುಂಚೆ,
ಕಣ್ಣುಕಿರಿದುಮಾಡಿ, ನಿದ್ದೆಗುಹೆಯಿಂದೀಚೆ
ಸುತ್ತಲ್ಲ ನಿಟ್ಟಿಸಿದಾಗ ಕಂಡದ್ದು:
ಬರಿ ಬಾವಿ-ಕೆರೆ;
ಅನತಿದೂರದಲ್ಲೇ:

ಕೈಮಾಡಿ ಕರೆವ ಜೋಡುಪರ್ವತಸಾಲು
ಹಬ್ಬಿತ್ತು:
ಪ್ರಕೃತಿ ಕನ್ಯೆಯ ಹಚ್ಚ ಹಳೆಯ ರೂಪು.
ನಿದ್ದೆಬಿಟ್ಟೆದ್ದವಗೆ ಗಂಟಲಲ್ಲಿರಿವ ದಾಹ;
ಮೈಕೊರೆವ ಚಳಿ.
ಪೇಟಿಸಾಲಲ್ಲಿದ್ದರೆ 'ರೆಸ್ಟುರಾ' ಹೊಕ್ಕು ಈಂಟ ಬಹು-
ದಿತ್ತು ಚಹಾ.

ಆದರಿಲ್ಲಿ,
ದಟ್ಟಡವಿ ಕ್ರೂರ ಮೃಗಜಂತುಗಳರಮನೆಯಲ್ಲಿ,
ರಾಜಾತಿಥ್ಯಕ್ಕಾಗಮಿಸಿ ಬಂದಿವಾಸವನ್ನನುಭವಿಸುವಗೆ,
ಗಂಟಲಾರಿ, ಎದೆಬತ್ತಿ, ನಾಲಗೆ ಮಂಕಾಗಿ,
ದನಿ ಇಲ್ಲವಾಗಿದೆ ಕೂಗಿ ಕರೆಯಲಿಕ್ಕೆ.
ಗಟ್ಟಿತನ-ಗಡಸುತನ ಎದೆಬಿಟ್ಟೋಡಿವೆ, ಎಲ್ಲಿಗೋ.

ದೀನನಾಗಿ, ಆರ್ತಸ್ವರವನ್ನುಚ್ಚರಿಸುತ್ತ ನಿಂತೆ
ಮೂಡಣದ ಕಿರುಸಂದಿಯಲ್ಲಿ
ಅರುಣಕಾಂತಿಯ ನಿತ್ಯ ಸೂರ್ಯೋದಯ.
ಕಣ್ಣಗಲಿಸಿದೆ:
ಬಾವಿ-ಕೆರೆ ಸುತ್ತಲೂ ಹಸುರುಕೆಂಪಿನ ಹೂ ಹಣ್ಣು ತೋಟ.
ವರ್ಣರಂಜಿತ ನೀರು ಚುಮುಕಿಸುವ ಕಾರಂಜಿ.
ಜೋಡುಪರ್ವತ ಸಾಲು ಹಿಮುವಂತೆಯಾಗಿ,
ಶ್ವೇತವಸ್ತ್ರವನುಟ್ಟು ಮೌನತಪಗೈಯ್ಯುತಿದೆ

ಕ್ಷಿತಿಜದಂಚಿಂದ ತೂರಿ ಬಂದ ಬೆಳಕು
ಅಪ್ಪಿಕೊಂಡಿತು ಮೈ ಬೆಚ್ಚಗೇ
ಮೆಲ್ಲಮೆಲ್ಲನೆ ಬಲಿತು ಕಾದಕೆಂಡವಾಗುತಲಿದ್ದೆ
ಕ್ಷಣಿಕ ಬದುಕನು ದಾಟಿ, ಸಾವಿನಂಚಿಗೆ ಸಾಗಿ,
ಉಗಿಯುಗುತಲಿತ್ತು ಮಂಜು-
ಹನಿಗಳ ನಿತ್ಯಮುತ್ತಿನ ಮಾಲೆ.

ಅಂಥಗಳಿಗೆಯಲ್ಲಿ,
ಕುರುಡ, ಅರಸುತಲಿದ್ದೆ ಕಳೆದು ಹೋಗಿದ್ದ
ಗಂಟು ಮೂಟೆಗಳನ್ನು.
ಸಿಕ್ಕಿದ್ದು : ಅಲ್ಲೊಂದು-ಇಲ್ಲೊಂದು, ದಿನಮಣಿ ಎಸೆದ
ಹೊನ್ನಬಣ್ಣದ ಹಲವು ಹರಳ ರಾಶಿ.

ನಾಟ್ಯೋತ್ಸವ

ಲೋರೆನ್ಸೊ ಇಲ್ ಮನ್ನೀಫಿಡೊ
ಹಾಡನರ್ಪಿಸಿಹೆನು ತಕೊ !
ಇಂದಿನೆಮ್ಮ ಉತ್ಸವದಲಿ
ಯೌವನದೀ ಸಂಭ್ರಮದಲಿ
ಹರಯವಿದರ ಯಾಗದಲ್ಲಿ
ಜೀವಿತಗಳ ಭೋಗದಲ್ಲಿ
ಗುರುವೆ ನಿನಗೆ ಅಗ್ರಪೀಠ
ಕಲಿತೆವಿಂದು ನಿನ್ನ ಪಾಠ !
ತೇಲಿ ಬರುವ ಬಾಸ್ ಗಾನ
ನಮ್ಮ ಕುಣಿತಕಲ್ಲವೇನ !
ಅದೊ ದ್ರಾಕ್ಷೆರಸದ ಪಾನ-
ನಮ್ಮ ಕುಡಿತಕಲ್ಲವೇನ !
ವೆನೇತ್ಸಿಯದ ಕಡೆದ ಗಾಜು
ಸಾರ್ದೇಯದ ಸುರೆಯ ಮೋಜು
ಮುತ್ತಿರುವರೆ ಕತ್ತಲು:
ಹಾಡಿನೊಡನೆ ಮೂಡಿ ಬರುವ
ಬೇರೆ ನಾಡ ಕನಸ ತರುವ
ಸೌರಭದಲಿ ಎತ್ತಲು;
ಯೌವನವನು ಸೂಸುತಿರುವ
ಬಯಕೆಯನು ಬೀಸುತಿರುವ
ಸುಂದರಿಯರು ಸುತ್ತಲು !
ಯಾರೆ ನೀನು ? ನಾನು ಸ್ಪಾನ್ಯ
ಅದು ಇತಾಲ್ಯ ಇದು ಜರ್ಮಾನ್ಯ.
ಯಾರೆ ನೀನು ? ನಾನು ಫ್ರಾಂಚ.
ಮತ್ತೆ ನೀನೊ ? ನಾನು ಗ್ರೇಚ.
ಮಿಂಚುತಿರುವ ರೇಶ್ಮೆಯಲ್ಲಿ
ಅರ್ಧ ಮುಚ್ಚಿ ಅರ್ಧ ಬಿಚ್ಚಿ
ಜಘನ ಧ್ವಜವ ಗಗನದಲ್ಲಿ

ವಿಜಯುದಾಸೆಯಿಂದ ಚುಚ್ಚಿ
ಗಂಡಿಗಾಗಿ ಕಾದುತಿರುವ
ಹಿಂಡು ಎದುರಿದೆ !
ಕಾಯುದಲ್ಲಿ ಕದನದಿಚ್ಛೆ
ಆದರದನು ಕೊಂಚ ಮುಚ್ಚೆ
ಅರಳುತಿರುವ ಮರುಳು ನಗೆ
ಸಾವಿರ ಸಿಗರೇಟ ಹೊಗೆ;
ಮಧುವಿನಲ್ಲಿ ಮಿಂದ ಮುದವು
ಮನಸ ಕೆದರಿದೆ !
ಹಾಡಿನೊಂದು ತೆರೆಯು ಮೇಲೆ
ನರ್ತನಗಳ ತೆಪ್ಪ ತೇಲೆ
ಧೀವರಿಯುರು ಬಲೆಯು ಬೀಸಿ
ಮತ್ಸ್ಯಕಾಗಿ ಕಾಯ್ದರೆ,
ಮೀಂಗಳಿವೂ ಗುಣಿಸಿ ಗುಣಿಸಿ
ಅವಳ ನೆನೆಸಿ ಇವಳ ಕುಣಿಸಿ
ಮುಗುಳುನಗುತ ಮೆಲ್ಲನೀಸಿ
ಬಲೆಯು ಹಾಯ್ದರೆ !
ಜೀವನಕ್ಕೆ ಎರಡು ಮುಖ-
ಒಂದು ಸುಖ ಒಂದು ದುಃಖ;
ನಾಳಿನರಿವು ಯಾಕೆ ಸಖಾ ?
ಇಂದಿಗಿಹುದು ತುಂಬ ಸುಖ !
ನೋಡು ಗಾನವೇರುತಿಹುದು !
ದೀಪವೆಲ್ಲ ಆರುತಿಹುದು !
ಕುರುಡು ನೀಲ ಬೆಳಕಿನಲ್ಲಿ
ಕೊಳ್ಳೊ ಅವಳ ಬಾಹುಗಳಲಿ.
ಒಟ್ಟಿನಲ್ಲಿ ಗುಟ್ಟನಾಡೆ
ಮೊಗವನಿರಿಸೆ ಹೆಗಲ ಕೊಡು.
ಬಳ್ಳಿಗೊಂದು ಬಲವ ನೀಡೆ
ಕಟಿಗೆ ಕೈಯ ಇಂಬನಿಡು.
ತಾಳದೊಡನೆ ಮೇಳವಿಸುವ
ಎರಡು ಮಧುರ ನುಡಿಯಲಿ
ಜೀವನಗಳ ಜೀವರಸವ
ಅಧರಕೆಧರ ಕುಡಿಯಲಿ !
ಮುತ್ತಿರುವರೆ ಕತ್ತಲು

ಸೌರಭವಿದೆ ಎತ್ತಲು
ಸುಂದರಿಯರು ಸುತ್ತಲು !
ಒಂದು ರಾತ್ರಿ ಒಮ್ಮೆ ಸೊಕ್ಕಿ
ಶಾಸ್ತ್ರಗಳ ದೂಡ್ಯೇನ !
ಇಂದು ರಾತ್ರಿ ಬಂದ ಹಾಗೆ
ನನ್ನ ಬಾಳ ಮಾಡ್ಯೇನ !
ಪೃಥಿವಿಯಿದರ ಮಡಿಲನೊಕ್ಕಿ
ಸಾರವನ್ನು ನೋಡೇನ !
ಮಿಂಚಿನೊಡನೆ ಮಿಂಚುತೊಮ್ಮೆ
ಕತ್ತಲೆಯನೆ ಕೂಡ್ಯೇನ !

ಪಿ. ಧೂಲಾ

ಅಂತರಾರಾಮ

ಹೃದಯದಾಕಾಶವಿದು ಅದುರಿಗಡಗದ್ದರಿಸಿ
ಪ್ರೇಮವಂಕುರಿಸಿ ಸೌರಭವು ಹಾರಿ
ಭೇದಿಸುತ ಸಪ್ತತಲ ಇಂದ್ರು ಚಂದ್ರುರ ಲೋಕ-
ಪಾರ ಅಪರಂಪಾರ ದೂರ ಸೇರಿ.

ಆವಲೋಕವ ಕಾಣೆ-ದಿವ್ಯಜ್ಯೋತಿಯ ಕಂಡೆ
ಕಣ್ಣರಳಿ ನಿಂತಾಗ ಭವ್ಯದೃಷ್ಟಿ
ಆವ ಆಶೆಯ ಪಾಶವೆನಗಿಲ್ಲ ಬಿರುಗಾಳಿ
ಬೀಸಿ ಸೂಸಿತು ಈ ಪ್ರಕಾಶವೃಷ್ಟಿ.

ನಲ್ಲನಲ್ಲೆಯ ಪ್ರೇಮ ಒಲ್ಲೆನೆಂಬುವ ಬಿರುದು
ಹದಿನಾಲ್ಕು ಲೋಕಕ್ಕೆ ತಟ್ಟಿ ಮುಟ್ಟಿ
ಎಲ್ಲೆಡೆಗೆ ವ್ಯಾಪಿಸಿತು ಬೆಳ್ಳಬೆಳು ಬೆಳಕಾಗಿ
ನನ್ನಲ್ಲೆ ಆ ಕಳೆಯು ಮೊಳಕೆ ಹುಟ್ಟಿ.

ಉರಿದುರಿದು ಉರಿದೆದ್ದ ಆ ಊರ್ಮಿಯುರಿಯಲ್ಲಿ
ಒಂದಾಗಿ ಸತ್ಯದಾ ಸವಿಯನುಂಡೆ
ಸುರರು ಸುರಗುರು ಸೂರ್ಯಚಂದ್ರರೂ ಕಾಣದಾ
ಬೆಳಕಿನುನ್ಮಾದದಾ ಕಾಂತಿ ಕಂಡೆ.

ಪ್ರೇಮದಾಚೆಯ ಊರ್ಮಿ ಪ್ರೇಮಕ್ಕೆ ಬೀಜವದು
ಪ್ರೇಮದಾ ಫಲವಾಗಿ ಫಲಿಸಿನಿಂದು
ಉಮ್ಮಳಿಸಿ ತನ್ಮಯತೆ ಪಾವಿತ್ರ್ಯ ಪರವಶತೆ
ಪರದೆಗಳ ಹರಿಹರಿದು ಸುಳಿದು ಬಂದು.

ವೇದಶಾಸ್ತ್ರಪುರಾಣ ವರಕುರಾನಗಳೆಲ್ಲ
ಕುಣಿಕುಣಿದು ನನ್ನ ಊರ್ಮಿಯೊಳೆಹುಟ್ಟಿ
ಅಡಗಿಹವು ಇಡಗಿಹವು ಎಲ್ಲೆಡೆಗೆ ನುಡಿಯುವವು
ಊರ್ಮಿ ಕೂರ್ಮಿಯೆ ಭವ್ಯದಿವ್ಯ ಸೃಷ್ಟಿ.

ಮರವು ಮತ್ಸರಕರಗಿ ಕಷ್ಟನಷ್ಟವು ಸುಟ್ಟು
ಭರದಿ ಭಸ್ಮೀಭೂತವಾಗಿ ಹಾರಿ
ಅರವು ಆಗಲಾಗಿ ಅದ್ಭುತದ ಅಘಟಿತ ಶಕ್ತಿ
ಹೊಡಕರಿಸಿ ಹೊಳೆದು ಕುಡಿಮಿಂಚುದೋರಿ

ಘನಸಿರಿಯ ಚಿನ್ಮಯ ಚಿದಾನಂದವನು ಕಂಡೆ
ಹೊರಮರೆದು ಒಳ ಊರ್ಮಿ ಕುದುರೆ ಏರಿ
ನೆನಪುದೋರಿತು ಇತ್ತಕನಸು ಹರಿಯಿತು ಅತ್ತ
ಹತ್ತು ತಾಸಿನ ಹಿಗ್ಗು ಹಾಡನೇರಿ.

ಎಂ. ಆರ್. ಶಾಸ್ತ್ರಿ

ಮಲೆನಾಡಿನ ಹಳ್ಳಿ

ಪಡುವಣ ಗಟ್ಟದ
ಹಸುರಿನ ಸೀರೆಯ
ನಿರಿಯಲಿ ನಿಂತಿದೆ ನಾವೂರು,
ಮಂಜಿನ ಕಂಬಳಿ
ಮಲೆಗಳ ಉಂಬಳಿ
ಪಡೆದಿಹ ಶಿಶಿರನು ನೆಲೆಯೂರು.

ಕಂಗಿನ ತೋಟದ
ಕಳವೆಯ ಪೈರಿನ
ಹಸುರನು ಹೊದ್ದಿಹ ಮಲೆನಾಡು;
ಬಿಸಿಲಿನ ಮೋರೆಯ
ಚಂದ್ರನ ಚಲನೆಯ
ಕಾಣದ ಕತ್ತಲ ಕಗ್ಗಾಡು.

ಕಿರಿಕಿರಿಗುಟ್ಟುತ
ಕಿವಿ ಕಿವುಡಾಗಿಸಿ
ದಿನವಿಡಿ ಕೂಗುವ ಕೀಟಗಳು;
ನಾಡನು ಆಳುವ
ನಿರ್ಭರ ನೀರವ
ದೊಡೆನಾಡುವ ಸೆಣಸಾಟಗಳು.

ಮಾನವನೆದೆಯು
ತ್ಸಾಹದ ತನಿರಸ
ಸೋರುವ ತೆರದಲಿ ಕಿರುಸೋನೆ
ತೆಂಗಿನ ಕಂಗಿನ
ಮಡಲಿನ ಎಡೆಯಲಿ
ಜಿರ್ ಜಿರ್ರೆನುತಲಿ ಸುರಿಯುತಿದೆ.

ನೀರಿನ ಒರತೆಯು,
ಕಲ್ಲಿನ ಕೊರೆತವು
ಜಲಪಾತವು ಚೆಲ್ಲಿದ ಚೆಲುವು!
ಏನಿದು ಮಲೆಯೇ?
ಜಲದೇವಿಯು ಹಿಮ
ರಾಜನ ವರಿಸಿದ ಹಂದರವೆ?

ತರುಗಳ ಮರೆಯಲಿ
ಹಾವಿನ ನಡೆಯಲಿ
ಕೊಂಕಿಸಿ ಜಂಕಿಸಿ ನುಸುಳುತಿಹ
ಬೆಳ್ಳಿಯ ಬಣ್ಣದ
ಬೆಡಗಿನ ತೊರೆಯಿದು-
ಸೌಂದರ್ಯದ ರಸವಾಹಿನಿಯು!

ಶಂಖರ ಸರವೇ?
ಬಿಂಕದ ಅಬ್ಬಿಯೆ?
ಬೋರಿಡುವಬ್ಧಿಯು ಬಂದಿಹುದೆ?
ಗಾನವಿನೋದನ
ಮಂಗಳ ಗೀತಕೆ
ಸೃಷ್ಟಿಯು ಮೇಳಯಿಪಾ ಶ್ರುತಿಯೆ?

ಚೆಲುವಿನ ಗಟ್ಟವೊ!
ಬೆಳ್ಳಿಯ ಬೆಟ್ಟವೊ!
ಮೂಡಣ ದೆಸೆಯನು ನೋಡಲ್ಲಿ-
ತಿಂಗಳ ಬೆಳಕನು
ಮಂಜಿನ ಮುಸುಕನು
ಹೊದ್ದಿಹ ಗಿರಿಗಳ ಸಾಲಲ್ಲಿ!

ಪಡುವಣ ಗಟ್ಟದ
ಹಸುರಿನ ಸೀರೆಯ
ನಿರಿಯಲಿ ನಿಂತಿದೆ ನಾವೂರು,
ಮಂಜಿನ ಕಂಬಳಿ
ಮಳೆಗಳ ಉಂಬಳಿ
ಪಡೆದಿಹ ಶಿಶಿರನ ನೆಲೆಯೂರು.

ಶಿವೇಶ್ವರ ದೊಡ್ಡಮನಿ

ಕುರುಡು ಬೆಳಕಿಗೆ—೧

೧

ಏಟು ಏಟು ಎದೆಬೆನ್ನಿಗೇಟು, ವಿಧಿಮಾಟಗೈಯು ಏಟು
ಕುರುಡು ಪೆಟ್ಟು ತಲೆಯೊಡೆದು ಹೋಳು ಸೀಳಾಗಲೆಂದು ಕೆಟ್ಟು;
ತಲೆಮಾರ ಪಯಣ ಗುಣದಂಥತನದ ಋಣ ಡೊಂಬರಾಟ ಹೂಡಿ-
ಮನದಟ್ಟ ಮುರಿಯಿತೋ ಬಗೆಬೆಟ್ಟ ಅದುರಿತೊ ಹಾಳುಹೃದಯ ಮೋಡಿ,
ಏನೇನೊ ಭಿಕ್ಷಬೇಡಿ.

೨

ಇಳೆಯೆದೆಯು ಮೇಲೆ ತಿಳಿಜೊನ್ನಲೀಲೆ ಕಣ್ಣಿಲ್ಲ ಕಾಣಲೊಲ್ಲೆ
ಬಹುಸನಿಹ ತೀರ ಸೌಂದರ್ಯಸಾರ ನಾನೆಂತು ನೋಡಬಲ್ಲೆ ?
ಇದು ಯಾವ ದೀಕ್ಷೆ, ಇದು ಎಂಥ ಶಿಕ್ಷೆ, ಇದು ಯಾವ ಪೀಡೆ ಪಿಡುಗು
ಅಲ್ಲೊಂದು ಶಕ್ತಿ-ಇದು ಅದರ ಸೂಕ್ತಿ, ನಿನಗಿಲ್ಲ ಬಾಳು ಬೆಡಗು
ಕಡೆಗು ಕಡೆಗು ಕಡೆಗೂ

೩

ಕಿರುಗಾಳಿಯೊಡನೆ ಬರಿಧೂಳಿಯೊಡನೆ ಹಿರಿ ಕಾಳು ಬಾಳಿನೊಡನೆ
ಮಿಡುಮಿಡುಕಿ ದುಡುಕಿ ಹುರುಳಿಲ್ಲದಂಥ ಕಿರಿಬೆಳಕನೋದ ಮುಡುಕಿ
ಬಾಯಿ ಬಿಡುವ ಬವಣೆ;
ಈ ನೋವಿನುರಿಯ ನಾಲಿಗೆಗೆ ಸಿಲುಕಿ ಕರಿಕಾಗಲೆಲ್ಲ ಕೊರತೆ
ಬಚ್ಚಬಯಲ ಸೆಣಸಿನಲಿ ತುಂಬಿ ಹರಿಸಿತ್ತು ತಮದ ಒರತೆ
ಆದಕನಂತ ಚರಿತೆ.

ವಾತ್ಸಲ್ಯ ವಾರಿಧಿಯ ನಗೆಮುಗಳು ನರ್ಸು!

ರೋಗ ರುಜಿನದ ಹುಟ್ಟು ಹುಣ್ಣು ಘಾಯದ ಪೆಟ್ಟು
ತನುಮನವ ಘಾಸಿಸಲು ಗೋಗರೆದು ತಲೆಕೆಟ್ಟು
ಆಸ್ಪತ್ರೆಯಾಸರಕೆ—ಉಲ್ಬಣದ ಉರಿಸೋಂಕೆ
ತರ್ಪಣವ ಕೊಡುವಾಸೆ ಚಿಂತೆ ಚಿತೆ ಬೇಸರಕೆ.
ಕೇಣಕೇಕೆಯ ನಿಡಲು ಬವಣೆ ಗರ್ಜನೆ ಸಿಡಿಲು

ಬೆಂದೆದೆಯ ಹೋಳುಗೈದಂದಗೆಡುತಿರೆ ಬಾಳು-
ತಂಗುವವು ಜೀವಿಗಳು ಬಳಗ–ಮನೆ–ನೆಲೆಬಿಟ್ಟು
ಅಂಗಾಂಗ ಬಲಬಯಕೆ ಬೆಂಬಳಿಸೆ ಬಾಯ್‌ಬಿಟ್ಟು.

ಸರ್ಜನನೆ, ಡಾಕ್ಟರರೆ?-ಬರಿಯ ಸಂಚಾಲಕರು;
ತಾಯ್ತನದ ಕರುಣೆಯುಪಚಾರದಾ ಸವಿನುಡಿಯ
ಪಡೆದ ಕಲೆ ದುಡಿತದೊಳೆ ಸಂತೃಪ್ತಿಯೆಂದಿಡಿಯ
ಬದುಕುಗೆಲ್ಲುವ ಹವಣ, ಹೃದಯ ಹಂಬಲ ತೇರು
ಎಳೆವ ಗುಣ ಸಮ್ಮಿಳನ ಸಂಭಾವ ಸಂದರ್ಶ-
ನಿಧಿ ವಾತ್ಸಲ್ಯ ವಾರಿಧಿಯ ನಗೆಮುಗಳು ನರ್ಸು.

ಧೂಮಕೇತು

ಯಾವ ರಾಕ್ಷಸ ರತಿಯು
ಕ್ರೂರ ಸಂಭೋಗಕ್ಕೆ
ಹೂತ ವಿಕೃತಿಯ ಪುಷ್ಪ ಉರಿಯ ಕುವರ
ಬಾನ ಯೋನಿಯ ಸೀಳಿ
ಬಂದೆ ನೀ ಮೈದಾಳಿ
ಹೇಳು ಯಾವುದು ನಿನ್ನ ಗೋತ್ರ ಪ್ರವರ?

ಇರುಳು ಕಳೆಯುವ ಮುನ್ನ
ಕ್ಷಿತಿಜದಂಚನ್ನೇರಿ
ಚಿಕ್ಕೆಗಳ ಬೆದರಿಸುತ ಬಂದು ನಿಲುವೆ
ಬೆಂಕಿ ಬಾಲವ ಬೀಸಿ
ಕೆಂಪು ಹೆಡೆಯನ್ನೆತ್ತಿ
ಕತ್ತು ಕೊಲ್ಲುವ ಕತ್ತಿ ಹೊಳೆದು ನಿಂತಂತೆ.
ಕಾಲಸರ್ಪವು ತನ್ನ ಮೈ ಬಿಚ್ಚಿದಂತೆ!

ಯಾವ ಚಿಕ್ಕೆಯು ಕನಸ
        ಮುರಿದು ಬಂದಿರುವೆ?
ಯಾವ ಬಾನಿನ ಬೆಳಸ
        ತುಳಿದು ನಿಂದಿರುವೆ?
ನವಗ್ರಹಗಳು ಹಾಕಿದಂಥ ಯಾವ ಯೋಜನೆಗಳಿಗೆ
            ಕೊನೆಯ ಮಂಗಳವನ್ನು
            ಬರೆಯ ಬಂದಿರುವೆ?

ದೇವಪಥದಲಿ ಅಡ್ಡ ನಿಂತಿರುವ ಬೇತಾಳ
ಮನುಕುಲದ ಗರ್ಭದಲಿ ಬೆಳೆಯುತಿಹ ಭ್ರೂಣಗಳ
ಹಿಸುಕಲಿಕೆ ಬಂದಿರುವೆ.
ಕಂಸಕ್ರೋಧದ ಅಗ್ನಿ ಜಿಹ್ವೆಯಂತೆ-
ಮುಗಿಲಿನಾ ಹಣೆಯಲ್ಲಿ
ಸಹಿಸದೊಳವೇದನೆಗೆ
ಸ್ಪಂದಿಸುವ ನಾಳದಂತೆ!

ತಿಳಿಯದಾಗಿದೆ ನಿನ್ನ
ಅಂತರಂಗದ ಆಳ
ನಿನ್ನ ರೀತಿಯ ಬಲ್ಲ
ಒಬ್ಬನೇ ಒಬ್ಬ ಆ ಕೃತಾಂತ ಕಾಳ.
ಬೆಳಕು ಒಳಹೊರ ಕಂಡರೂನು
ನಿನ್ನ ಕಂಡೀ ಕರುಳು
ಇರುಳು ಇರುಳು
ನಿನ್ನ ಕಣ್ಣಿನ ಒಳಗೆ
ಸಾವಿನಾ ನೆರಳು
ಯಾವ ಭೀಕರ ಪ್ರಳಯ ಕರೆದು ತೋರಿಸುತಿಹುದಃ
ಮೇಲಕೆತ್ತಿದ ನಿನ್ನ
ಉರಿಯ ಬೆರಳು ?

ಜಿ ವಿ ಕುಲಕರ್ಣಿ

ಮಗು ಕಂಡ ಝೂ

೧

ಮುಂಬೈ ನಗರದಿ ಅಪ್ಪನ ಜೊತೆಯಲಿ
ನಾನೂ 'ಝೂ' ಕಂಡ್‌ಬಂದೆ—
ಚಿತ್ರವಿಚಿತ್ರದ ಪ್ರಾಣಿಯ ಬಳಗಾ
ನೋಡುತ ನಾ ಬೆರಗಾದೆ.

೨

ನೆರೆಮನೆ ರಂಗನ ತೆರದಲಿ ಮಂಗವು
ಅಣಕಿಸಿ ನನ್ನೆಡೆ ನೋಡಿತ್ತು—
ಹಣಿಕಿ ಹಾಕಿರಲು ಸಂಗನ ತೆರದಲಿ
ಟೊಪ್ಪಿಗೆಯನ್ನೆ ಕಸಿದಿತ್ತು.

೩

ಚಿಕ್ಕಮ್ಮನ ಗುಡುಗಿನ ಸಪ್ಪಳ
ಹುಲಿ ಪಂಜರದಲಿ ತೋರಿತ್ತು—
ಪುಟ್ಟ ಕಿಸೆಗಳನು ಅಜ್ಜಿಯ ತೆರದಲಿ
ಕರಡಿಯು 'ಮುಸುಮುಸು' ಮೂಸಿತ್ತು.

೪

ಬಿಳಿಯ ಕುದುರೆಗೋ ಪಟ್ಟೆಯ ಬರೆದು—
'ಮೊಹರಂ ಹುಲಿಯನು' ಮಾಡಿಹರು
ಸುಳ್ಳೇಪಳ್ಳೇ ಅದಕ್ಕೆ 'ರಿಝಬ್ರಾ'—
ಎಂಬ ಹೆಸರನು ಕೊಟ್ಟಿಹರು.

೫

ಉದ್ದ ಮೋರೆಯಾ 'ಜಿರಾಫು' ನೋಡಿದೆ
ಒಂಟೆಗಿಂತಲೂ ಉದ್ದ ವಿದೆ—
ಊರಿಗೆ ತರುತಲಿ ಏರಿದೆನಾದರೆ
ಆಗಸಮಲ್ಲಿಗೆ ಕೈಯೊಳಿದೆ.

೬

ಕೂದಲುಃ ಕೆದರಿದ ನೆರವುನೆ ಹೆಣ್ಣೋ
    ದುರುದುರು ನನ್ನನ್ನು ನೋಡಿದೊಲು—
ಸಿಂಹವೆಂಬುದೋ ನೋಡಿತು ನನ್ನೆಡೆ
    ಅದರ ಗಂಟನೇ ಕಸಿದವೊಲು.

೭

ಒಬ್ಬನೆ ವುಗನೆಂದೊಂದಕೆ ನನಗೋ
    ಅಪ್ಪನು ಸಮ್ಮತಿ ಕೊಡಲಿಲ್ಲ—
ಅತ್ತೂ—ಕರೆದೂ ಕೊನೆಯಲಿ ನಾನು
    ಆನೆ—ಸವಾರಿಯ ಬಿಡಲಿಲ್ಲ.

ಅಮೃತಶಿಲ್ಪ

೧

ಮಂಗಲ ಗಂಗೆ ತರಂಗ ಪುನೀತ
ಸುಕೋಮಲ ಶ್ಯಾಮಲ ವೇಲೆಯಲಿ;
ಅಮಂಗಲ ಹಾರಿಣಿ
ಶ್ರೀ ಭವತಾರಿಣಿ
ನೆರಪಿದ ಓಲಗ ಸಾಲೆಯಲಿ,
ಕುಳಿತವನೆದ್ದನೊ
ಚಾಣವ ಹಿಡಿದನೊ
ದಿವ್ಯೋನ್ಮಾದದಲಿ !

ಟಕ್ಕ ಟಕ್ಕ ಟಕ ಟಕ್ಕ ಟಕ್ಕ ಟಕ
ಕೊರೆದ ಹಾಲುಗಲ್ಲ.
ಉಷೆಯು ಬಂದಳೋ ನಿಶೆಯು ಸಂದಳೋ
ಅವನಿಗರಿವೆ ಇಲ್ಲ !
ಭಾರತ ವರ್ಷದ ಅನಂತ ಹರ್ಷದ
ಚೇತನವನೆ ಕಡೆದ,
ಅರಿವಿನುನ್ಮತ್ತ ಕಲೆಯ ಮೂಡಿಸುತ
ಸುತ್ತ ಸುತ್ತಿ ನಡೆದ !

ಪದ ವಿನ್ಯಾಸಕೆ ವಿಶ್ವಭೇರಿಯದೊ
ಧಿಂ ಧಿಮಿ ಧಿಮಿ ಧಿಮಿ ಧಿಂ,
ಹೊಮ್ಮಿಸಿ ನಾದವ ಪುಳಕಗೊಂಡಿತೋ
ಧೋಂ ಧೋಂ ಧೋಂ ಧೋಂ ಧೋಂ !

ಕಂಡು ನಲಿದ ರವಿ, ಕಂಡು ನಲಿದ ಶಶಿ
ಕಂಡು ನಲಿಯೆ ತಾರೆ,
ಕಂಡು ಲಾಸ್ಯದಲಿ ಬೆರೆದು ನಿಂದಳೋ
ಹರಿವ ಗಂಗೆ ನೀರೆ !

ಸನಿಯದ ಸಾಗರ ದೂರದ ಹಿಮಗಿರಿ
ಹಾಡಿದವೋ ಹಿಮ್ಮೇಳವನು,
ಪೂರ್ವ ಪಶ್ಚಿಮದ ಎರಡು ಗೋಳಗಳು
ಬಾಜಿಸಿದವೊ ಜಯತಾಳವನು !

ರಾಮ ಬಂದನೋ
ಬುದ್ಧ ಬಂದನೋ
ಬಂದನೇಸುಕ್ರಿಸ್ತ,
ಬಾನ ಭಿತ್ತಿಯೊಲು
ಹರಹಿ ನಿಂದಿತ್ತು
ತಾಯ ಅಭಯ ಹಸ್ತ !

೨

ವಿಶ್ವ ಮಹಾಮೌನದಲ್ಲಿ
ಚಾಣದೊಂದೆ ಬಾಜನ !
ದೇವ ಮಹಾ ಮನವು ಸಲಿಸು-
ತಿತ್ತು ದಿವ್ಯ ಪೂಜನ !

ಹೃದಯದಗ್ನಿ ಜಲಧಿಯಿಂದ
ಸೆಳೆಯುತ್ತಿದ್ದ ಸ್ಫೂರ್ತಿಯ !
ಎದೆಯ ಅಮೃತ ಕಳಶದಿಂದ
ಎರೆಯುತಿದ್ದನರ್ತಿಯ !

ಯುಗವುರುಳಿತು, ಯುಗಮೂಡಿತು
ನಡೆಯುತಿತ್ತು ಸೃಷ್ಟಿಯು !
ಗಳಿಗೆ ಗಳಿಗೆ ರಕ್ಷಿಸಿತ್ತು
ಜಗದಂಬೆಯ ದೃಷ್ಟಿಯು !

ದೇವಶಿಲ್ಪಿ ಭಾವ ಶಿಲ್ಪಿ
ಕುಣಿದೆ ಕುಣಿದೆ ಕುಣಿದನೋ,
ಕಲ್ಪ ಕಲ್ಪ ಕಲ್ಪವುರುಳೆ
ದಣಿಯದೆಯೇ ದಣಿದನೋ !

ವರ್ತಮಾನ ನೃತ್ಯರಚಿಸೆ
ಭವಿಷತ್ತಿನ ಮಹಲನು,

ಕಡೆಯುತ್ತಿತ್ತು ಕೋಟಿಹಸ್ತ
ಆತ್ಮ ತೇಜ ಮಹಲನು !

ಮೂಡಿ ಮೂಡಿ ಬೆಳೆಯುತಿತ್ತು
ದಿವ್ಯ ಭವನವು,
ಅಲ್ಪ ಅಲ್ಪವಾಗುತಿರಲು
ಅದನು ಕಂಡು ಭುವನವು !

ಕಾಲ ದೇಶ ಕೋಶಗಳನು
ಪುಡಿಗೈಯುತ ನಡೆಯಿತೋ,
ಕಾಣದೆನಿತೊ ವಿಶ್ವಗಳನು
ಅಡಿಪಾಯಕೆ ಪಡೆಯಿತೋ !

ಹಿಮಾಚಲವೆ ಹೊಸ್ತಿಲಾಯ್ತು
ಜಲಧಿ ಕೇಳಿ ಬುಗ್ಗೆಯು,
ಎನಿತೊ ಮುಗಿಲ ಮಾಲೆಯಾಯ್ತು
ತೋರಣ ಸಿರಿವೊಗ್ಗೆಯು !

೨

ಮುಗಿಯಿತದೋ ಭವ್ಯ ಭವನ
ಧ್ಯಾನದಕ್ಷಿ ಗೋಚರ !
ಪರಮಹಂಸ ಪರಮ ಧವಳ
ಮನದವಿರತ ಸಹಚರ !

ಕಣ್ಣ ಮುಚ್ಚು ಕಣ್ಣ ತೆರೆ
ಕಾಣು ಕ್ಷೀರ ಮಂದಿರ,
ಬಾಗಿಲಿಲ್ಲ, ಬಾಗಿಲೆಲ್ಲ
ಅದುವೆ ದೇವ ಸುಂದರ !

ರಾಮ ಕೃಷ್ಣ ಬುದ್ಧ ಕ್ರಿಸ್ತ
ಬಸವ ಚೈತನ್ಯರು,
ರಾಮಾನುಜ ಶ್ರೀ ಶಂಕರ
ಮಧ್ವಗೋಮಟೇಶರು

ತಾವಾದರೊ ದಶದಿಕ್ಕಿನ
ಒಂದೊಂದೂ ದ್ವಾರವು;
ಪುಣ್ಯತೀರ್ಥ ಸ್ನಾತನಾಗಿ
ನಡೆಯೆ ಕಾಂಬೆ ಪಾರವು !

ಏನಿದೇನು ಏನಿದೇನು
ಒಳಗೇನೂ ಇಲ್ಲವೋ !
ಇಲ್ಲ ನಡೆ ಕಾಂಬೆ ನೀನು
ಇರುವುದಲ್ಲಿ ಎಲ್ಲವೂ !

ಅತ್ತ ಇತ್ತ ಸುತ್ತಲೆತ್ತ
ಅದೋ ಅಗ್ನಿ ಜ್ವಾಲೆಯು !
ಮೂಡಿ ಬಂದು ತುಂಬುತಿಹುದು
ಕೇಳು ನಾದ ಮಾಲೆಯು !

ತೇರು ಬಂತು ತೌರಿಗೆ

ಮೂಡಣ ಪಡುವಣ ದಿಕ್ಕುದೆಸೆಗಳನೆಲ್ಲ
ತುಂಬೇ ತುಂಬಿರೆ ಕತ್ತಲು,
ಅಂದುಗೆ ಕೈಬಳೆ ನಾದದ ಮಿಂಚನು
ತುಳುಕುತ ಅತ್ತಲು ಇತ್ತಲು,

ಬೆಮೆಗೊಂಡು ಸುಳಿಗಾಳಿ ಸುಳಿಯುವ ತೆರದಲ್ಲಿ
ನಮ್ಮಮ್ಮ ಮನೆಯೆಲ್ಲ ಸುತ್ತಲು,
ಮನದಿ ಕೌತುಕ ತುಂಬಿ, ಮೊಗದಲ್ಲಿ ನಗೆ ತುಂಬಿ
ನಿಲ್ಲಿಸಿ ಕೇಳಿದೆ ಅರಗಳಿಗೆ:

ನಡು ರಾತ್ರಿಯೊಳಗೆದ್ದು ಹೊತ್ತೆ ಮೂಡಿಲ್ಲೆಂದು
ಹತ್ತು ದಿಕ್ಕನು ನೋಡಿ ಹಲುಬ್ಯೂವೆ ।
ಹತ್ತು ದಿಕ್ಕನು ನೋಡಿ ಹಲುಬುವೆ ಎಲೆ ಅವ್ವ
ಮತ್ತೇ ನುಡಿಯದೆ ನಡೆಯ್ಯೂವೆ ॥

ಗಂಗೆಯ ನೀರಿಂದ ಮನೆಗೆ ಜಳಕವ ಮಾಡಿ
ಚಿಕ್ಕೆಯ ತಂದಿರುವೆ ಅಂಗಳಕೆ ।
ಚಿಕ್ಕೆಯ ತಂದಿರುವೆ ಅಂಗಳಕೆ ಮುಗಿಲಿಂದ
ರಂಗೋಲಿ ಚಿತ್ತಾರ ಬರೆದಿರುವೆ ॥

ಸಾರಣೆ ಕಾರಣೆ ಓರಣವಾಗಿದೆ
ಅಂಗಳದಲಿ ಜಾಜಿ ಹರಡಿದೆ ।
ಅಂಗಳದಲಿ ಜಾಜಿ ಹರಡಿದೆ ಹೇಳವ್ವ
ದೇವರ ತರುವರೆ ನಮ್ಮನೆಗೆ ॥

ಹಂಗಿನ ನುಡಿಯಾಡಿ ಕಾಡದಿರೊ ದಮ್ಮಯ್ಯ
ತೌರಿಗೆ ಬರುತಾಳೆ ತಂಗಮ್ಮ ।
ತೌರಿಗೆ ಬರುತ್ತಾಳೆ ತಂಗಮ್ಮ ತರುತಾಳೆ
ಕಾಶಿ ಕೈಲಾಸವನಿಲ್ಲಿಗೆ ॥

ರಾಗಿಯ ಕಲ್ಲಿನ ರಾಗಕೆ ದನಿಗೂಡಿ
ಮನೆ ಮನೆ ಕೋಗಿಲೆ ಕೂಗ್ಯಾವೆ ।
ಮನೆ ಮನೆ ಕೋಗಿಲ ಕೂಗ್ಯಾವೆ ಕೇಳುತ್ತ
ಗಿಡ ಮರ ಬಳ್ಳಿ ತೂಗ್ಯಾವೆ ॥

ಮೂಡನೇಕೋ ಇನ್ನು ಮೂಡಣ ಕಂದಯ್ಯ,
ಮೂಡುವ ಹೊತ್ತಿನ್ನು ಆಗಿಲ್ಲೆ,
ಮೂಡುವ ಹೊತ್ತಿನ್ನು ಆಗಿಲ್ಲೆ ತಮ್ಮಯ್ಯ
ಮೂಡಲಲಿ ಆರತಿ ಬೆಳಗೀದೆ ॥

ಅರಿಸಿನವನು ಮಿಂದ ಮಗಳ ಮೈಯಿನ ಬಣ್ಣ
ಮೂಡಣ ದಿಕ್ಕನು ತುಂಬ್ಯಿತೊ,
ಮೂಡಣ ದಿಕ್ಕನು ತುಂಬಿತೊ ತಮ್ಮಯ್ಯ
ತಂಗಿಯ ಮನಸಿಗೆ ತಂದೀತೋ ॥

ಮುಂಜಾವಿಗೇ ಎದ್ದು ಮಿಂದು ಪಟ್ಟೆಯನುಟ್ಟು
ಸಡಗರದಿಂದಲ್ಲಿ ನಲಿದಾಳೊ ।
ಸಡಗರದಿಂದಲ್ಲಿ ನಲಿದಾಳೊ ತಮ್ಮಯ್ಯ
ಅತ್ತೆಮಾವನ ಪಾದಕೆರಗ್ಯಾಳೊ ॥

ಹೆತ್ತವ್ವಗಿಂತ ಎದೆ ಪ್ರೀತೀಲಿ ಹತ್ತುಮಡಿ
ಅತ್ಯವ್ವ ಸೊಸೆಯ ಹರಸ್ಯಾಳೆ ।

ಅತ್ಯವ್ವ ಸೊಸೆಯು ಹರಸ್ಯಾಳೆ ನೆತ್ತೀಯ
ಮುತ್ತಿಟ್ಟು ಮಡಿಲನ್ನು ತುಂಬ್ಯಾಳೆ ॥

ಭಾಗ್ಯದ ಲಕ್ಷ್ಮಿ ನೀ ಭತ್ತದ ತೆನೆಯುನೀ
ನಿನ್ನಿಂದ ವಂಶ ಬೆಳೆದೀತು ।
ನಿನ್ನಿಂದ ವಂಶ ಬೆಳೆದೀತು ಕಂದಮ್ಮ
ಹೊನ್ನ ಹರಿವಾಣದಲಿ ಉಂಡೇವು ॥

ಹುಲ್ಲಿನ ಜೋಪಡಿ ಬೆಳಕನೆ ಮುಡಿದಾವ
ಮಿರುಮಿರುಗಿ ಅರಮನೆ ಆಗ್ಯಾವ
ಮಿರುಮಿರುಗಿ ಅರಮನೆಯಾಗ್ಯವ ಇದಕಂಡು
ಬಾನವರು ಕುಣಿಕುಣಿದು ಬಂದಾರ ॥

ಅದೊ ನೋಡು ಕಂದಯ್ಯ ಬಂದನೋ ಸೂರ್ಯಾಮ
ಥಳ ಥಳ ಬೆಳಗಿದ ಗಂಗಾಳ ।
ಥಳ ಥಳ ಬೆಳಗಿದ ಗಂಗಾಳ ತಮ್ಮಯ್ಯ
ಬೆಳಕಿನ ಹೊಳೆಯಾನೆ ಹರಿಸ್ಯಾನ ॥

ಕಣ್ಣೀರ ಹೊಳೆಯಾನೆ ಹರಿಸ್ಯಾಳ ತಂಗವ್ವ
ಮತ್ತೆ ಮತ್ತೆರಗ್ಯಾಳ ಪಾದಕೆ ।
ಮತ್ತೆ ಮತ್ತೆರಗ್ಯಾಳ ಪಾದಾಕೆ ನುಡಿದಾಳ
ಹೆತ್ತವ್ನ ಬಿಟ್ಟೆಂತು ನಡೆದೇನ ॥

ಝಣ ಝಣ ದನಿಮಾಡಿ ಜೋಡೆತ್ತಿನ ಗಾಡಿ
ಹಟ್ಟಿಯ ಮುಂಗಡೆ ನಿಂತಾದ ।
ಹಟ್ಟಿಯ ಮುಂಗಡೆ ನಿಂತಾದ ಶಿವನಂತ
ಅಳಿಯಾನೆ ಸೂತ್ರವ ಹಿಡಿದಾರ ॥

ಕಣ್ಣೀರ ಮಿಡಿಯುತ ಅತ್ಯವ್ವ ಹೇಳ್ಯಾರ
ಹೋಗಿ ಬಾ ತಂಗವ್ವ ತವರೀಗೆ ।
ಹೋಗಿ ಬಾ ತಂಗವ್ವ ತವರೀಗೆ ದಾರಿಯಲಿ
ಮಲ್ಲಿಗೆಯ ಹೂವು ಅರಳ್ಯಲಿ ॥

ತುಂಜ್ಯಿದ್ಯ ಹಳ್ಳಗಳು ತಂಗಿಯ ಗಾಡಿಗೆ
ಮೆಲ್ಲನೆಯ ದಾರಿಯ ಬಿಡುತಿರಲಿ ।
ಮೆಲ್ಲನೆಯ ದಾರಿಯ ಬಿಡುತಿರಲಿ ಎಲೆ ಅವ್ವ
ನಿನ್ನ ಕೈ ಪೂಜೆಯ ಕೊಳುತಿರಲಿ ॥

ತವರಿನ ಚಂದ್ರಮ ಬಹು ತಂಪು ಕಂದವ್ವ
ಅದಕೋತು ಅಲ್ಲಿಯೆ ನಿಲಬ್ಯಾಡ ।
ಅದಕೋತು ಅಲ್ಲಿಯೇ ನಿಲಬ್ಯಾಡ ಬೇಗನೆ
ನಮ್ಮನೆ ಬೆಳಗಲು ಬಾರಮ್ಮ ॥

ಬರುವಾಗ ತಾರಮ್ಮ ಕಂದ ಶ್ರೀಕೃಷ್ಣನು
ಎರಡು ತೋಳನು ತುಂಬಿ ನಲಿವಾನ ।
ಎರಡು ತೋಳನು ತುಂಬಿ ನಲಿವಾನ ಹಾವೀನ
ಮೆತ್ತೆಯೇ ಸುಖವೆಂದು ನಗುವಾನ ।

ತುಂತುರು ಮಳೆಯಂತೆ ಎಳೆಯ ಹೊಂಬಿಸಿಲಂತೆ
ಅಳುತಲಿ ನಗುತಲಿ ನಗಿಸುವನ ।
ಅಳುತಲಿ ನಗುತಲಿ ನಗಿಸುವನ ಮನೆತುಂಬ
ಹೆಜ್ಜೆಯ ಗೆಜ್ಜೆಯ ದನಿಸುವನ ॥

ನಕ್ಕರೇ ಹಾಲುಕ್ಕಿ ಹರಿದೀತು ಕಂದಯ್ಯ
ಕುಣಿದ್ಯರೆ ಮನೆಯೆದ್ದು ಕುಣಿದೀತು ॥
ಕುಣಿದರೆ ಮನೆಯೆದ್ದು ಕುಣಿದೀತು ಹೂಬಳ್ಳಿ
ಬೆಳೆದರೆ ಕೀರುತಿ ಬೆಳೆದೀತು ॥

ಹೊತ್ತು ಏರುವ ಮುನ್ನ ಹೋಗಿ ಬಾ ಕಂದವ್ವ
ಮತ್ತೊಮ್ಮೆ ಮಂಗಳವ ಹೇಳೇನು ।
ಮತ್ತೊಮ್ಮೆ ಮಂಗಳವ ಹೇಳೇನು ಎಂದೆನುತ
ಅತ್ಯಮ್ಮ ಮತ್ತೆ ಹರಸ್ಯಾಳ ॥

ಕಾಶೀಯ ವಿಶ್ವೇಶ ತಿರುಪತಿ ವೆಂಕ್ಟೇಶ ॥
ಇದೊ ನಿಮಗೆ ಕಾಣಿಕೆಯು ಮುಡಿಪಾಯ್ತು ॥
ಇದೊ ನಿಮಗೆ ಕಾಣಿಕೆಯು ಮುಡಿಪಾಯ್ತು ಮಗಳೀಗೆ
ಹಾದೀಯು ನಂಟು ನೀವಾಯ್ತು ॥

ಹೊತ್ತು ನೆತ್ತಿಗೆ ಬಂತು ಕಾಣೆ ಕಂದವ್ವನನು
ಮೂರು ತಾಸಿನ ಹಾದಿ ಮುಗಿಯದೆ ।
ಮೂರು ತಾಸಿನ ಹಾದಿ ಮುಗಿಯದೆ ಹೊಳೆಯ
ಮಳಲಲ್ಲಿ ಗಾಡಿ ಹೂತೀತೆ ॥

ಅರಿಸಿನ ಕುಂಕುಮ ಧರಿಸಿ ಸಿಂಗರವಾಗಿ
ಕೊರಳಿನ ಗಂಟೆಯು ದನಿಮಾಡಿ ।
ಕೊರಳಿನ ಗಂಟೆಯು ದನಿಮಾಡಿ ಅದೊ ನೋಡ
ಭೃಂಗಿ ನಂದಿಯರು ಬಂದ್ವರ ॥

ಹಳ್ಳಿ ಹೆಂಗೆಳೆಯರು ಹಾದಿ ತಿರುವಲಿ ನಿಂತು
ಗಾಡಿಯನಲ್ಲೆ ತಡೆದಾರ ।
ಗಾಡಿಯನಲ್ಲೆ ತಡೆದಾರ ತಂಗಿಯು
ಸುತ್ತ ನಾಚಿಸಿ ಘೊಳ್ಳೆಂದಾರ ॥

ತಂಗಿಯು ಮುಂಗಡೆ ಮುತ್ತಿನಾರತಿಯೆತ್ತಿ
ಸುವ್ವಿ ಸೋಬಾನೆಯ ಹಾಡ್ಯಾರ ।
ಸುವ್ವಿ ಸೋಬಾನೆಯ ಹಾಡ್ಯಾರ ಅಳಿಯುನ
ಓರೆಗಣ್ಣಲಿ ನೋಡಿ ನಕ್ಕಾರ ॥

ನಮ್ಮೂರು ಕೊಳದಲ್ಲಿ ವೆಂಕಟರಮಣನ
ತೆಪ್ಪ ಮೆಲ್ಲನೆ ತೇಲಿ ಬರುವಂತೆ ।
ತೆಪ್ಪ ಮೆಲ್ಲನೆ ತೇಲಿ ಬರುವಂತೆ ಕಂದಮ್ಮ
ಮೆಲ್ಲ ಮೆಲ್ಲನೆ ನಡೆದು ಬಂದಾಳ ॥

ನೀರು ತುಂಬಿದ ಮೋಡ ಗುಡ್ಡ ನೆತ್ತಿಯಮೇಲೆ
ಮೆಲ್ಲ ಮೆಲ್ಲನೆ ತೇಲಿ ಬರುವಂತೆ ।
ಮೆಲ್ಲ ಮೆಲ್ಲನೆ ತೇಲಿ ಬರುವಂತೆ ಕಂದಮ್ಮ
ಮೆಲ್ಲ ಮೆಲ್ಲನೆ ನಡೆದು ಬಂದ್ವಳ ॥

ಮಾವಿನ ಹಸಿರೆಲೆಯ ಸಿಂಗಾರ ತೋರಣದ
ದೇವಿ ಚಾಮುಂಡಿಯ ಸಿರಿ ತೇರು ।
ದೇವಿ ಚಾಮುಂಡಿಯ ಸಿರಿ ತೇರು ಬರುವಂತೆ
ಹಸಿರು ನಿರಿಗೆಯ ಚಿಮ್ಮಿ ಬರುವಳು ॥

ಮೈತುಂಬಿ ಬರುತಿಹ ಕಂದನ ಕಂಡೆನು
ಕಂಗಳ ಬರ ಇಂದು ಹಿಂಗಿತು ।
ಕಂಗಳ ಬರವಿಂದು ಹಿಂಗಿತು ದೇವಿಯ
ಕರುಣೆಯು ಎದೆಯಲ್ಲಿ ತಂಗಿತು ॥

ಅನುಬಂಧ ೧

ಕವಿತೆಗಳ ಶೀರ್ಷಿಕೆಗಳ ಅಕಾರಾದಿ

[ಸಂಖ್ಯೆಯು ಪುಟವನ್ನು ಸೂಚಿಸುತ್ತದೆ.]

ಅನುಬಂಧ ೨

ಕವಿತೆಗಳ ಮೊದಲ ಸಾಲುಗಳ ಅಕಾರಾದಿ

[ಸಂಖ್ಯೆಯು ಪುಟವನ್ನು ಸೂಚಿಸುತ್ತದೆ]

ಅನುಬಂಧ ೩

ಈ ಸಂಪುಟದ ಕವಿಗಳ ಕಿರುಪರಿಚಯ

ಅಕಬರ ಅಲಿ ಎಂ 1925 ಮುಂಬಯಿ ವಿಶ್ವವಿದ್ಯಾನಿಲಯದಿಂದ ಬಿ.ಎ. (ಆನರ್ಸ್) ಹಾಗೂ ಪುಣೆ ವಿಶ್ವವಿದ್ಯಾನಿಲಯದಿಂದ ಎಂ.ಎ., ಪದವಿಗಳನ್ನು ಪಡೆದು ಕೆಲವು ವರ್ಷ ಕಾರವಾರದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದು ಈಗ ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ. 'ಸುಮನ ಸೌರಭ' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ (1967). 'ಗಂಧಕೇಶರ'ಕ್ಕೆ ಕೇಂದ್ರ ಸರಕಾರದ ಶಿಕ್ಷಣ ಇಲಾಖೆಯ ಬಹುಮಾನ (1974) ದೊರೆತಿದೆ. ಇನ್ನೊಂದು ಕೃತಿ ತಮಸಾನದಿ ಎಡಬಲದಿ.

ಅಡಿಗ, ಮೊಗೇರಿ ಗೋಪಾಲಕೃಷ್ಣ 1918 ಇಂಗ್ಲಿಷಿನಲ್ಲಿ ಎಂ.ಎ., ಪದವೀಧರರು. ಇಂಗ್ಲಿಷ್ ಅಧ್ಯಾಪಕರಾಗಿ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲರಾಗಿ ನಿವೃತ್ತರಾದರು. ಸಿಮ್ಲಾದ 'ಸೆಂಟರ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್'ನಲ್ಲಿ ಕೆಲವು ಕಾಲ ಕೆಲಸ ಮಾಡಿದರು, ನವ್ಯಕಾವ್ಯಪಂಥದ ಪ್ರಸಿದ್ಧ ಕವಿಗಳು. ಕೇಂದ್ರಸಾಹಿತ್ಯ ಅಕಾಡಮಿ ಪ್ರಶಸ್ತಿ (1974). ಧರ್ಮಸ್ಥಳದಲ್ಲಿ 1979 ರಲ್ಲಿನಡೆದ ಅಖಿಲ ಭಾರತ 51 ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಮುಖ್ಯಕೃತಿಗಳು: ಕಟ್ಟುವೆವು ನಾವು, ಭಾವತರಂಗ, ಚಂಡೆಮದ್ದಳೆ, ಭೂಮಿಗೀತ, ವರ್ಧಮಾನ ಇತ್ಯಾದಿ.

ಅನಂತನಾರಾಯಣ, ಸದಾಶಿವಯ್ಯ [ಉಷಾಪ್ರಿಯ, ವಸಂತ] 3.1.1926 ಹುಟ್ಟಿದ್ದು ಮೈಸೂರಿನಲ್ಲಿ. ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್ ಬಿ.ಎ. ಆನರ್ಸ್ ಮತ್ತು ಎಂ.ಎ., ಪದವಿ ಪಡೆದಿದ್ದಾರೆ. ಇಪ್ಪತ್ತಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಈಗ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದಾರೆ. ಕೃತಿಗಳು : ಜಯಂತಿ, ಮುತ್ತುಹವಳ, ಆಧುನಿಕ ಚೀನಾ, ಬಾಡದ ಹೂವು, ಉಷಾ ಸ್ವಪ್ನ, ಅತ್ತಿಗೆ, ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ ಇತ್ಯಾದಿ.

ಅನಂತಪದ್ಮನಾಭರಾವ್, ಮೈ ಶೇ [ಕಲ್ಕಿ, ಮೈಶೇಅ] 6. 9. 1903 ಅರಣ್ಯ ಇಲಾಖೆಯಲ್ಲಿ ಸೂಪರಿಂಟೆಂಡೆಂಟ್ ಆಗಿದ್ದು ನಿವೃತ್ತರಾಗಿದ್ದಾರೆ. ಮುಖ್ಯಕೃತಿಗಳು : ಶ್ರೀ ಕಾವೇರಿ ಕಥಾಮೃತಂ, ಕರ್ಣ, ಶ್ರೀಕೃಷ್ಣ ಚರಿತಾಮೃತಂ ಇತ್ಯಾದಿ.

ಅನಂತಮೂರ್ತಿ, ಯು ಆರ್ 21. 12. 1932 ಇಂಗ್ಲಿಷಿನಲ್ಲಿ ಎಂ.ಎ., ಪದವೀಧರರಾಗಿ ಬರ್ಮಿಂಗಂ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪದವಿ ಪಡೆದರು. ಕಾಮನ್‌ವೆಲ್ತ್ ವೇತನ ಪಡೆದು ಇಂಗ್ಲೆಂಡಿನಲ್ಲಿ ಉನ್ನತ ವ್ಯಾಸಂಗ ಮಾಡಿದರು. ಸೃಜನಶೀಲ ಬರವಣಿಗೆಗಾಗಿ

ಹೋಮಿಭಾಭಾ ಫೆಲೋಶಿಪ್ ಪಡೆದರು. ಅಮೆರಿಕಾದ ಅಯೋವಾದಲ್ಲಿ ಹಾಗೂ ಟಫ್ಟ್ಸನಲ್ಲಿ ಸಂದರ್ಶಕ ಲೇಖಕರೂ ಪ್ರಾಧ್ಯಾಪಕರೂ ಆಗಿದ್ದರು. ಈಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ರೀಡರ್ ಆಗಿದ್ದಾರೆ. ಮುಖ್ಯಕೃತಿಗಳು: ಸಂಸ್ಕಾರ, ಭಾರತೀಪುರ, ಅವಸ್ಥೆ, ಪ್ರಶ್ನೆ, ಪ್ರಜ್ಞೆ ಮತ್ತು ಪರಿಸರ ಇತ್ಯಾದಿ.

ಅಬ್ದುಲ್ ಮಜೀದ್‌ಖಾನ್ ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ಎಂ.ಎ., ಪದವಿ ಪಡೆದು (1961) ಕೆ. ಎಲ್. ಇ. ಸಂಜೆ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಮುಖ್ಯಕೃತಿಗಳು : ದಾರಿ, ಗುರುತು, ಆಳು, ತಲೆಯಿಲ್ಲದ ಗೌತಮ, ಮಿರ್ಜಾ ಘಾಲಿಬ್ ಇತ್ಯಾದಿ.

ಅರ್ಚಿಕ ವೆಂಕಟೇಶ 5.7.1916 ಧಾರವಾಡ. ಪೂರ್ತಿ ಹೆಸರು ಗೋಪಾಲಕೃಷ್ಣ ಅರ್ಚಿಕ ವೆಂಕಟೇಶ. ಕವಿ, ಭಾಷಣಕಾರರು. ಸಂಯುಕ್ತಕರ್ನಾಟಕದಲ್ಲಿ ಉಪಸಂಪಾದಕರಾಗಿದ್ದರು. ಹಾಗೆಯೇ ಕೆಲಕಾಲ ಶರಣ ಸಾಹಿತ್ಯ, ಸ್ವತಂತ್ರ ಕರ್ನಾಟಕ, ಉಷಾ, ವಿಶ್ವಕರ್ನಾಟಕಗಳಲ್ಲಿ ಕೆಲಸ ಮಾಡಿದರು. ಮುಖ್ಯಕೃತಿಗಳು : ಸಂಧ್ಯಾರಾಗ, ಪೂರ್ಣಚಂದ್ರ, ಶಿಲಾಪಕ್ಷಿ, ಶಬ್ದಶಿಲ್ಪಿ, ಪ್ರಹ್ಲಾದನ ಪಾಣಿಪತ್ತು ಇತ್ಯಾದಿ.

ಅರವಿಂದ ನಾಡಕರ್ಣಿ 1.1.1931 ಮುಖ್ಯಕೃತಿಗಳು : ಕಾವ್ಯಾರ್ಪಣ, ಮಾಯಾವಿ, ನಗರಾಯಣ ಇತ್ಯಾದಿ. ಈಗ ಮುಂಬಯಿಯಲ್ಲಿದ್ದಾರೆ.

ಆಚಾರ್ಯ, ಪಾ ವೆಂ [ಲಾಂಗೂಲಾಚಾರ್ಯ, ಪಾ. ವೆಂ, ವಿಚಾರಿ] 1915 ಉಡುಪಿ. ಎಸ್. ಎಸ್. ಎಲ್. ಸಿ. ಮತ್ತು ಹಿಂದೀ ರಾಷ್ಟ್ರಭಾಷಾ ಶಿಕ್ಷಣ. ಕವಿ, ಲಲಿತ ಪ್ರಬಂಧಕಾರ, ರಾಜಕೀಯ ಬರಹಗಾರ; ಮುಖ್ಯವಾಗಿ ಪತ್ರಿಕೋದ್ಯೋಗಿ. ಕಸ್ತೂರಿಗೆ ಸಂಪಾದಕರಾಗಿದ್ದರು. ನವನೀರದ ಕವನ ಸಂಗ್ರಹಕ್ಕೆ ಮುಂಬಯಿ ಸರಕಾರದ ಬಹುಮಾನ ದೊರೆಶಿದೆ. ಪಿ. ಆರ್. ರಾಮಯ್ಯ ಪ್ರಶಸ್ತಿ ದೊರೆತಿದೆ. ನವನೀರದ, ಕೆಲವು ಪದ್ಯಗಳು, ರಶಿಯದ ರಾಜ್ಯಕ್ರಾಂತಿ, ಪ್ರಹಾರ, ಲೋಕದ ಡೊಂಕು, ವಿಪರೀತ ಇತ್ಯಾದಿ ಕೃತಿಗಳು. ವಿಳಾಸ : 82 ಕೆ. ಎಚ್. ಬಿ. ಕಾಲನಿ ಹುಬ್ಬಳ್ಳಿ-32.

ಇಟಗಿ, ರಾಘವೇಂದ್ರ [ಇ ರಾ] ಉಸ್ಮಾನಿಯಾ ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಎಂ.ಎ., ಪದವಿ ಪಡೆದು (1952) ಈಗ ಆಕಾಶವಾಣಿಯಲ್ಲಿ ಕೇಂದ್ರ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಮುಖ್ಯಕೃತಿಗಳು : ವಸುಂಧರಾ ಗೀತೆಗಳು, ಕ್ಷಿತಿಜ ಕೋದಂಡ, ಸನ್ನದ್ಧ ಭಾರತ, ಕವೀಂದ್ರ ರವೀಂದ್ರ ಇತ್ಯಾದಿ. ವಿಳಾಸ : ಸ್ಟೇಷನ್ ಡೈರೆಕ್ಟರ್ ಆಲ್ ಇಂಡಿಯ ರೇಡಿಯೋ, ಜಗದಲಪುರ, ಬಸ್ತರ್, ಮಧ್ಯಪ್ರದೇಶ.

ಇಮ್ರಾಪೂರ, ಶೇಖರಪ್ಪ ಗುರಪ [ಸೋಮಶೇಖರ ಇಮ್ರಾಪೂರ] 14.2.1940 ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಎಂ.ಎ., ಪದವಿ ಪಡೆದು ಕನ್ನಡ ಅಧ್ಯಾಪಕರಾಗಿದ್ದಾರೆ. 12 ಕೃತಿಗಳನ್ನು ರಚಿಸಿದ್ದಾರೆ. ಮುಖ್ಯವಾದವು : ಗಂಡ ಹೆಂಡಿರ ಜಗಳ ಗಂಧ ತೀಡೀಧ್ಹಾಂಗ, ಬಿಸಿಲಹೂ, ಜನಪದ ಸಾವಿರದ ಒಗಟುಗಳು ಇತ್ಯಾದಿ.

ಎಕ್ಕುಂಡಿ, ಸುಬ್ಬಣ್ಣ ರಂಗನಾಥ 20.1.1923 ರಾಣೆಬೆನ್ನೂರು. ಬಂಕಿಕೊಡ್ಲದ ಆನಂದಾಶ್ರಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದಾರೆ. 13 ಕೃತಿಗಳನ್ನು ರಚಿಸಿದ್ದಾರೆ. ಮುಖ್ಯವಾದವು: ಸಂತಾನ, ಪ್ರತಿಬಿಂಬಗಳು, ಕಾವ್ಯವಿಮರ್ಶೆ ಇತ್ಯಾದಿ.

ಐತಾಳ, ಗುಂಡ್ಮಿ ಚಂದ್ರಶೇಖರ 20.1.1936 ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಎಂ.ಎ., ಪದವಿ ಪಡೆದು ಈಗ ಮಂಗಳ ಗಂಗೋತ್ರಿ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ. 20 ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಮುಖ್ಯವಾದವು: ಬೆಳಗಾಯಿತು, ಗುಂಡುಸೂಜಿ, ಕೈಲಿಯ ಕರೆದ ನೊರೆಹಾಲು ಇತ್ಯಾದಿ.

ಕಂಬಾರ, ಚಂದ್ರಶೇಖರ 2.1.1938 ಘೋಡಗೇರಿ. ಕನ್ನಡ ಎಂ.ಎ., ಪದವಿ ಪಡೆದು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ. ಕವಿ, ನಾಟಕಕಾರ ಮತ್ತು ವಿಮರ್ಶಕ. ಮುಖ್ಯಕೃತಿಗಳು: ಮುಗುಳು, ಹೇಳತೇನ ಕೇಳ, ಸಂಗ್ಯಾ ಬಾಳ್ಯಾ, ಕರಿಮಾಯಿ ಇತ್ಯಾದಿ.

ಕಡೆಂಗೋಡ್ಲು ಶಂಕರಭಟ್ಟ [ಬಾಲಕವಿ, ತ್ರಿಯಂಬಕ, ಪಶುಪತಿ] 9.8.1904-17.5.1968 ಮದರಾಸು ವಿಶ್ವವಿದ್ಯಾನಿಲಯದ ವಿದ್ವಾನ್ ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಉತ್ತೀರ್ಣರಾಗಿ 35 ವರ್ಷ ಮಂಗಳೂರಿನ ಸೇಂಟ್ ಆಗ್ನೆಸ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರು. 1953 ರ ವರೆಗೆ ರಾಷ್ಟ್ರಬಂಧು ಪತ್ರಿಕೆಗೆ ಆಮೇಲೆ ರಾಷ್ಟ್ರಮತ ವಾರ ಪತ್ರಿಕೆಗೆ ಸಂಪಾದಕರಾಗಿದ್ದರು. 1923 ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷರೂ, 1965 ರ ಸಮ್ಮೇಳನದ ಅಧ್ಯಕ್ಷರೂ ಆದರು (ಕಾರವಾರ). ಮುಖ್ಯಕೃತಿಗಳು: ಘೋಷಯಾತ್ರೆ, ಕಾಣಿಕೆ, ನಲ್ಮೆ, ಹಣ್ಣುಕಾಯಿ, ದೇವತಾ ಮನುಷ್ಯ, ವಾಙ್ಮಯ ತಪಸ್ಸು ಇತ್ಯಾದಿ.

ಕಣವಿ, ಚೆನ್ನವೀರ ಸಕ್ರಪ್ಪ 28.6.1928 ಕನ್ನಡದಲ್ಲಿ ಎಂ.ಎ., ಪದವೀಧರರು. ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರಾಗಿದ್ದಾರೆ. ಪ್ರಖ್ಯಾತ ಕವಿಗಳಾದ ಇವರು ಕಾವ್ಯಾಕ್ಷಿ, ಭಾವಜೀವಿ, ಸಾಹಿತ್ಯ ಚಿಂತನ ಮೊದಲಾಗಿ ಹದಿನೈದಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.

ಕಯ್ಯಾರ ಕಿಞ್ಞಣ್ಣ ರೈ [ದುರ್ಗಾದಾಸ] 8. 6. 1915 ಎಂ.ಎ., ಮತ್ತು ಅಧ್ಯಾಪಕ ತರಬೇತಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಕೆಲಕಾಲ ಪತ್ರಿಕೋದ್ಯೋಗಿಯಾಗಿದ್ದರು. ಆಮೇಲೆ ಅಧ್ಯಾಪಕರಾಗಿದ್ದು ನಿವೃತ್ತರಾಗಿದ್ದಾರೆ. ಶ್ರೀಮುಖ, ಪದ್ಯಮಂಜರಿ, ಐಕ್ಯಗಾನ ಮೊದಲಾದ 15 ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಕರ್ಕಿ, ದುಂಡಪ್ಪ ಸಿದ್ದಪ್ಪ 15.10.1907 ಭಾಗೋಜಿಕೊಪ್ಪ. ಮುಂಬಯಿ ವಿಶ್ವವಿದ್ಯಾನಿಲಯದಿಂದ ಎಂ.ಎ., ಪದವಿ ಪಡೆದರು. ಹುಬ್ಬಳ್ಳಿಯ ಕಾಡಸಿದ್ಧೇಶ್ವರ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಮುಖ್ಯಕೃತಿಗಳು: ನಕ್ಷತ್ರಗಾನ, ಭಾವತೀರ್ಥ, ನಾಲ್ದೆಸೆಯ ನೋಟ, ಕನ್ನಡ ಛಂದೋವಿಕಾಸ, ಇತ್ಯಾದಿ. ವಿಳಾಸ: ಸಿದ್ಧೇಶ್ವರ ಬಿಲ್ಡಿಂಗ್, ಹೊಸೂರ, ಹುಬ್ಬಳ್ಳಿ.

ಸುವರ್ಣಸಂಪುಟ/೫೫೭

ಕಸ್ತೂರಿ, ನಾ 25.12.1897 ತೃಪ್ತಿಣಿತ್ತುರೈ, ಕೇರಳ. ಎರ್ನಾಕುಲಂ ಮಹಾರಾಜಾ ಕಾಲೇಜಿನಲ್ಲಿ ಹಾಗೂ ತಿರುವನಂತಪುರಂ ಮಹಾರಾಜಾ ಕಾಲೇಜಿನಲ್ಲಿ ಎಂ.ಎ., (1921) ಮತ್ತು ಬಿ.ಎಲ್ (1921) ಗಳ ಶಿಕ್ಷಣ. ಏಳು ವರ್ಷ ಮೈಸೂರಿನ ಬನುಮಯ್ಯ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಆಮೇಲೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚರಿತ್ರೆಯ ಅಧ್ಯಾಪಕರಾಗಿದ್ದರು. ದಾವಣಗೆರೆಯ ಕಾಲೇಜಿನ ಸೂಪರಿಂಟೆಂಡೆಂಟ್ ಆಗಿದ್ದರು (1949-54). ಈಗ 'ಸನಾತನ ಸಾರಥಿ' (ಇಂಗ್ಲಿಷ್-ತೆಲುಗು) ಮಾಸಪತ್ರಿಕೆಗಳ ಸಂಪಾದಕರಾಗಿದ್ದಾರೆ. ಮುಖ್ಯಕೃತಿಗಳು: ಪಾತಾಳದಲ್ಲಿ ಪಾಪಚ್ಚಿ, **ಅಣಕು ವಿಣಕು,** ದಿಲ್ಲೀಶ್ವರನ ದಿನಚರಿ, ಕಲ್ಲೋಲ ಇತ್ಯಾದಿ. ವಿಳಾಸ: ಸತ್ಯಸಾಯಿ ಸನ್ನಿಧಿ, ಸಂತೋಷನಗರ, ಆಡುಗೋಡಿ, ಬೆಂಗಳೂರು-30.

ಕಾಶಿ ವಿಶ್ವನಾಥಶೆಟ್ಟಿ ಕನ್ನಡದಲ್ಲಿ ಎಂ.ಎ., ಪದವಿ ಪಡೆದು ಈಗ ಚಿಕ್ಕಮಗಳೂರಿನ ಸರಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ. ಐವತ್ತೆರಡು ಕೃತಿಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಮುಖ್ಯವಾದವು: ಕಾಶಿಕಾವೇರಿ, ಮಾವುಮಲ್ಲಿಗೆ, ಮೇಘಮಾಲೆ, ಸೀತಕ್ಕನ ಸವತಿ, ಕನ್ನಡ ಶತಕ ಸಾಹಿತ್ಯ, ಇತ್ಯಾದಿ.

ಕುಲಕರ್ಣಿ, ಆರ್ ಜಿ [ಸಾಕ್ಷಿ] ಪ್ರಸ್ತುತ ಆಡುಗೋಡಿಯ ಶ್ರೀ ಸತ್ಯಸಾಯಿ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯರೂ, ಪ್ರಾಧ್ಯಾಪಕರೂ ಆಗಿದ್ದಾರೆ. ವಿಮರ್ಶಕರು ಮತ್ತು ಕವಿ. ಮುಖ್ಯಕೃತಿಗಳು: ಮಂತ್ರಪುಷ್ಪ, ನಾಕುಹೆಜ್ಜೆ-ಮೂರು ಮೆಟ್ಟಿಲು, ಚತುರ್ಮುಖಿ ಕುವೆಂಪು ಕಮಲ ಮುಖ ಇತ್ಯಾದಿ.

ಕುಲಕರ್ಣಿ, ಜಿ ವಿ 10. 6. 1937 ದೊಮ್ನಾಳ, ಬಿಜಾಪುರ ತಾ. ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಎಂ.ಎ., ಪದವಿಯನ್ನೂ (1958), ಎಲ್‌ಎಲ್‌ಬಿ (1960), ಯನ್ನೂ ಪಡೆದರು. ಆನೇಲೆ ಮುಂಬಯಿ ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್ ಎಂ.ಎ., (1976) ಪದವಿಯನ್ನು ಪಡೆದರು. ಅನೇಕ ಸಭೆ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ಮುಂಬಯಿಯ ಸರ್ ಎಂ. ಪಿ ಮತ್ತು ಸೇಠ್ ಎಲ್ ವಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ. ಮುಖ್ಯಕೃತಿಗಳು: **ಮಧುಸಂಚಯ,** ಧೃತರಾಷ್ಟ್ರ ಸಂತಾನ, ಹುಚ್ಚಹುಚ್ಚಿ, ತಿರುಗಣಿ ಮಡುವು ಇತ್ಯಾದಿ.

ಕುಲಕರ್ಣಿ ಶೇಷಗಿರಿರಾವ್ ಗೋವಿಂದರಾವ್ [ಗೀತಾಪ್ರಿಯ] 13.6.1908 ಧಾರವಾಡ. ವಿಕ್ಟರ್ ಸ್ಕೂಲು ವಿದ್ಯಾಭ್ಯಾಸದನಂತರ ಕರ್ನಾಟಕದಿಂದ, ಶಾಂತಿನಿಕೇತನಕ್ಕೆ ಅಭ್ಯಾಸಕ್ಕೆ ಹೋದವರಲ್ಲಿ ಮೊದಲಿಗರು—ಬಂಗಾಲಿ ಅಭ್ಯಾಸ, 'ಗೆಳೆಯರ ಗುಂಪು' ಸದಸ್ಯರಲ್ಲಿ ಪ್ರಮುಖರು. 'ಜಯಕರ್ನಾಟಕ'ದ ಪ್ರಕಾಶಕರಾಗಿ ನಿಂತರು. ಮಹಾಪೂರ ಮತ್ತು ಬೆಳವಲದ ಭಾಗ್ಯಲಕ್ಷ್ಮಿ ಕಾದಂಬರಿಗಳು. ನನ್ನ ಗೀತಗಳು ಕವನಸಂಕಲನ, ನಾ ಕಂಡ ಗೆಳೆಯರ ಗುಂಪು ಆತ್ಮವೃತ್ತ.

ಕುಲಕರ್ಣಿ, ಹನುಮಂತ ಬಲವಂತರಾವ್ [ಹೇಮಂತ] 25.11.1916 ಕಾದಾಪುರ, ಬೆಳಗಾವಿ. ಪುಣೆ ವಿಶ್ವವಿದ್ಯಾನಿಲಯದಿಂದ ಎಂ.ಎ., ಪದವಿ ಪಡೆದು ಕೆಲಕಾಲ ಶಾಲಾ

ಧ್ಯಾಪಕರಾಗಿದ್ದು ಹೈದರಾಬಾದ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾದರು. ಸ್ನೇಹಸೂಕ್ತ ಇತರ ಕವನ ಸಂಕಲನ, ಭಗ್ನ ಮಂದಿರ ಕಾದಂಬರಿ.

ಕುಸುಮಾಕರ ದೇವರಗೆಣ್ಣೂರ 15.2.1930 ನಿಜನಾಮ ವಸಂತ ಅನಂತ ದಿವಾಣಜಿ. ಸೊಲ್ಲಾಪುರದಲ್ಲಿದ್ದಾರೆ. ಮುಖ್ಯಕೃತಿಗಳು: ಸ್ವಪ್ನನೌಕೆ, ಮುಗಿಯದಕತೆ ಮತ್ತು ನಾಲ್ಕನೆಯ ಆಯಾಮ. ವಿಳಾಸ: ಕೇಶವ ನಿವಾಸ, ಆದರ್ಶನಗರ, ಸೊಲ್ಲಾಪುರ-3.

ಕೃಷ್ಣಕುಮಾರ್, ಸಿ ಪಿ [ಸಿ ಪಿ ಕೆ] 8. 4. 1939 ಚಿಕ್ಕನಾಯಕನ ಹಳ್ಳಿ. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಎಂ.ಎ., ಪದವಿಯನ್ನು ಪಡೆದರು. ಖ್ಯಾತ ವಿಮರ್ಶಕರು ಮತ್ತು ಕವಿ. ಈಗ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ರೀಡರ್ ಆಗಿದ್ದಾರೆ. ಅಂತರತಮ, ಬೆಳಕಿನ ಹನಿಗಳು, ನೂರಾರು ವಿಮರ್ಶೆಗಳು ಇತ್ಯಾದಿ ತೊಂಬತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.

ಕೊಟ್ಟಲಗಿ ರಾಮಚಂದ್ರ ರಾಘವೇಂದ್ರ 16.5.1918—20.9.1975 ಮನಗೋಳಿ, ಬಿಜಾಪುರ ಜಿಲ್ಲೆ. ಅಧ್ಯಾಪಕನವೃತ್ತಿ. ಪಿಪಾಸೆ (ಕವನ ಸಂಗ್ರಹ) ದೀಪನಿರ್ವಾಣ ಮತ್ತು ದೀಪಹತ್ತಿತು ಕಾದಂಬರಿಗಳು.

ಗಂಗಪ್ಪವಾಲಿ 1912 [ಸಾರಜ್ಞ, ಸುಪ್ರಭಾತಕವಿ] ಪ್ರೌಢಶಾಲೆಯವರೆಗೆ ಶಿಕ್ಷಣ. ಸ್ವಂತ ಅಧ್ಯಯನದಿಂದ ಬೇಕಾದಷ್ಟು ಅನುಭವ ಪಡೆದು ಗಿಡಮೂಲಿಕೆಯ ವ್ಯಾಪಾರವನ್ನು ನಿರ್ವಹಿಸುತ್ತಿದ್ದಾರೆ. ಪ್ರವೃತ್ತಿ ಕಾವ್ಯ, ಸಾಹಿತ್ಯ. ಕಾವ್ಯವಾಚನದಲ್ಲಿ ಅನುಭವವುಂಟು. ಮುಖ್ಯಕೃತಿಗಳು: ಕಲ್ಯಾಣಕ್ರಾಂತಿ, ಚಂದ್ರಮಾಯೆ, ಕಾವ್ಯಕಿನ್ನರಿ ಇತ್ಯಾದಿ. ವಿಳಾಸ: ಗಂಗಪ್ಪ ವೀರಪ್ಪ ವಾಲಿ, ದುರ್ಗದ ಬಯಲು, ಹುಬ್ಬಳ್ಳಿ.

ಗಲಗಲಿ, ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ [ಮಧುರಚೆನ್ನ] 1903-1953 ಹಲಸಂಗಿ. ಮುಲಕೀ ಪರೀಕ್ಷೆಯವರೆಗೆ ಶಿಕ್ಷಣ. ಆದರೆ ಸ್ವಂತ ಪರಿಶ್ರಮದಿಂದ 22 ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದರು. ಶಾಸನಗಳ ಅಧ್ಯಯನ, ಜಾನಪದ ಸಂಗ್ರಹಗಳಲ್ಲಿ ಆಸಕ್ತಿ ಅಭಿರುಚಿ. ಅನುಭಾವಿ ಕವಿ. ಮುಖ್ಯಕೃತಿಗಳು: ನನ್ನನಲ್ಲ, ಪೂರ್ವರಂಗ, ಪೂರ್ಣಯೋಗಪಥದಲ್ಲಿ ಇತ್ಯಾದಿ.

ಗಾಂವಕರ, ಸಣ್ಣಪ್ಪ ಪರಮೇಶ್ವರ ತೊರ್ಕೆಯಲ್ಲಿ ಜನನ. ಬಿ.ಎ. ಪದವೀಧರರು. ಮುಖ್ಯ ಕೃತಿಗಳು: ಮುಗಿಲು, ಪ್ರಕೃತಿ-ಪ್ರೀತಿ, ಪ್ರೇರಣೆ-ಶೋಧನೆ ಇತ್ಯಾದಿ.

ಗಿರಡ್ಡಿ ಗೋವಿಂದರಾಜ 8.1.1939 ಇಂಗ್ಲಿಷಿನಲ್ಲಿ ಎಂ.ಎ., ಪದವಿ ಪಡೆದು ಕಲಬುರ್ಗಿಯಲ್ಲಿರುವ ಕರ್ನಾಟಕ ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದಾರೆ. ಮುಖ್ಯಕೃತಿಗಳು: ಶಾರದಾಲಹರಿ, ರಸವಂತಿ, ಜನಪದ ಕಾವ್ಯ ಇತ್ಯಾದಿ.

ಗುಂಡಪ್ಪ, ಎಲ್ 8.1.1903 ಖ್ಯಾತ ಸಾಹಿತಿ ಮತ್ತು ಕವಿ. ಅನೇಕ ತಮಿಳು ಕಾವ್ಯಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ. ಒಟ್ಟು 51 ಕೃತಿಗಳನ್ನು ಈವರೆಗೆ ರಚಿಸಿದ್ದಾರೆ. ಆದಿಪುರಾಣ ಸಂಗ್ರಹ, ತಿರುಕ್ಕುರಳ್, ಭಾಸನ ನಾಟಕಚಕ್ರ, ಚಟಾಕಿ ಇತ್ಯಾದಿ.

ಗುಂಡಪ್ಪ, ದೇವನಹಳ್ಳಿ ವೆಂಕಟರಮಣಯ್ಯ [ಡಿ ವಿ ಜಿ] 1889—1975 ಕನ್ನಡದ ಖ್ಯಾತ ಕವಿಗಳು ಮತ್ತು ವಿಮರ್ಶಕರು. ಪತ್ರಿಕೋದ್ಯಮ ಹಾಗೂ ರಾಜ್ಯ ಶಾಸ್ತ್ರಗಳಲ್ಲಿ ಅಭಿರುಚಿ ಆಸಕ್ತಿಗಳನ್ನು ಹೊಂದಿ ಆ ರಂಗಗಳಲ್ಲಿ ಕೆಲಸಮಾಡಿದರು. 1932 ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಬೆಂಗಳೂರಿನಲ್ಲಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಸ್ಥಾಪಿಸಿದರು. 25 ಕ್ಕಿಂತ ಹೆಚ್ಚು ಕೃತಿಗಳನ್ನು ರಚಿಸಿದರು. ಮುಖ್ಯವಾದವು: ಮಂಕುತಿಮ್ಮನ ಕಗ್ಗ, ಉಮರನ ಒಸಗೆ, ಅಂತಃಪುರ ಗೀತೆ, ಶ್ರೀರಾಮ ಪರೀಕ್ಷಣಂ, ಭಗವದ್ಗೀತಾ ತಾತ್ಪರ್ಯ, ಜ್ಞಾಪಕ ಚಿತ್ರಶಾಲೆ, ಸಂಸ್ಕೃತಿ, ನಿವೇದನ ಇತ್ಯಾದಿ.

ಗುಂಡಣ್ಣ, ಜಿ [ಕುಮುದ] 8.4.1922 ಚಿತ್ರದುರ್ಗ ಜಿಲ್ಲೆಯ ಜಂಜರಗುಂಟೆಯಲ್ಲಿ ಜನನ. ಕನ್ನಡದಲ್ಲಿ ಎಂ.ಎ., ಪದವಿ ಪಡೆದು ವಿವಿಧ ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದರು. ಶಿವಮೊಗ್ಗ ಸರಕಾರಿ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿ ಈಗ ನಿವೃತ್ತರಾಗಿದ್ದಾರೆ. ವಾಣಿಯ ಕೃಪೆ, ಶಿಲ್ಪಗಂಗೋತ್ರಿ, ಕಾಯಕರ್ಪೂರ, ಜೈಮಿನಿಭಾರತ ಸಂಗ್ರಹ ಮುಂತಾದ ಹತ್ತು ಕೃತಿಗಳನ್ನು ರಚಿಸಿದ್ದಾರೆ. ವಿಳಾಸ: 243 12 ನೇ ಮೇನ್ ಸರಸ್ವತಿಪುರಂ ಮೈಸೂರು-570 009.

ಗೋಕಾಕ, ವಿನಾಯಕ ಕೃಷ್ಣ [ವಿನಾಯಕ] 9.8.1909 ಎಂ.ಎ., ಪದವಿ ಪಡೆದು ಇಂಗ್ಲಿಷ್ ಅಧ್ಯಾಪಕರಾಗಿ ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ ನಿವೃತ್ತರಾಗಿದ್ದಾರೆ. ಖ್ಯಾತ ಕವಿ. ಮುಖ್ಯಕೃತಿಗಳು: ಬಾಳದೇಗುಲದಲ್ಲಿ, ಕಲೋಪಾಸಕ, ಸಮರಸವೇ ಜೀವನ, ಸಮುದ್ರಗೀತೆಗಳು ಇತ್ಯಾದಿ. ವಿಳಾಸ: ಬೃಂದಾವನ, ವೈಟ್‌ಫೀಲ್ಡ್, ಬೆಂಗಳೂರು.

ಗೋವಿಂದ ಪೈ, ಎಂ 1883–1963 ಕನ್ನಡದ ಹಿರಿಯ ಕವಿ, ಸಂಶೋಧಕ, ವಿಮರ್ಶಕರಲ್ಲಿ ಒಬ್ಬರು. ಮದರಾಸಿನ ಕ್ರಿಶ್ಚನ್ ಕಾಲೇಜಿನಲ್ಲಿ ಎಫ್. ಎ., ಪದವಿ ಪಡೆದರು. 1949 ರಲ್ಲಿ ಮದರಾಸು ಸರಕಾರವು 'ರಾಷ್ಟ್ರಕವಿ' ಪ್ರಶಸ್ತಿಯನ್ನು ನೀಡಿತು. 1950 ರಲ್ಲಿ ಮುಂಬಯಿಯಲ್ಲಿ ನಡೆದ 34 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಮುಖ್ಯಕೃತಿಗಳು: ಗಿಳಿವಿಂಡು, ಗೊಲ್ಗೊಥಾ ಮತ್ತು ವೈಶಾಖಿ, ನಂದಾದೀಪ, ಹೃದಯರಂಗ, ಚಿತ್ರಭಾನು, ಸಂಶೋಧನ ಲೇಖನಗಳು, ಹೆಬ್ಬೆರಳು, ಇತ್ಯಾದಿ.

ಚಂದ್ರಕಾಂತ ಕುಸನೂರ ಹಿಂದಿಯಲ್ಲಿ ಎಂ.ಎ., ಮತ್ತು ಬಿ.ಇಡಿ ಪದವಿ. ಕನ್ನಡ, ಹಿಂದಿ, ಮರಾಠಿ, ಉರ್ದು, ಇಂಗ್ಲಿಷ್ ಭಾಷೆಗಳ ಪರಿಚಯ ಚೆನ್ನಾಗಿಉಳ್ಳ ಇವರು ಕನ್ನಡದಿಂದ ಹಿಂದಿಗೆ ಅನುವಾದಗಳನ್ನು ಮಾಡಿದ್ದಾರೆ. 'ಹಾಯಕು' ಕವನ ರೂಪವನ್ನು ಕನ್ನಡದಲ್ಲಿ ಪ್ರಚುರಪಡಿಸಿದವರು. ರಂಗಚಟುವಟಿಕೆಗೆ ಮೀಸಲಾದ 'ರಂಗ ಮಾಧ್ಯಮ'ವೆಂಬ ಸಂಸ್ಥೆಯ ಸಂಸ್ಥಾಪಕ ಸದಸ್ಯರು. ಮಹಾಗಾಂವದಲ್ಲಿರುವ ಸರಕಾರಿ ಜೂನಿಯರ್ ಕಾಲೇಜಿನಲ್ಲಿ ಹಿಂದಿ ಅಧ್ಯಾಪಕರು. ಮುಖ್ಯಕೃತಿಗಳು: ನಾಲ್ಕು ಅಸಂಗತ ನಾಟಕಗಳು (ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ), ಹಳ್ಳಾಕೊಳ್ಳಾ ನೀರು, ನಂದಿಕೋಲು, ಕನಸು ಇತ್ಯಾದಿ.

ಚನ್ನಬಸಪ್ಪ, ಕೋಣನ [ಪ್ರಕಾಶ] 27.2.1922 ವಕೀಲವೃತ್ತಿ. 1965 ರಿಂದ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು. ಇದುವರೆಗೆ 44 ಕೃತಿಗಳನ್ನು ರಚಿಸಿದ್ದಾರೆ. ಈಗ ಬೆಂಗಳೂರಿನಲ್ಲಿದ್ದಾರೆ. ಮುಖ್ಯಕೃತಿಗಳು: ಶ್ರೀ ರಾಮಾಯಣದರ್ಶನಂ ಮಹಾಕಾವ್ಯ ಸಮೀಕ್ಷೆ, ಶ್ರೀ ಅರವಿಂದರು, ನನ್ನ ಮನಸ್ಸು ನನ್ನ ನಂಬುಗೆ, ಹಿಂದಿರುಗಿ ಬರಲಿಲ್ಲ, ರಕ್ತತರ್ಪಣ ಇತ್ಯಾದಿ.

ಚನ್ನಯ್ಯ, ಎಚ್ ಎಂ ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ., ಪದವೀಧರರಾಗಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ರೀಡರ್ ಆಗಿ ಕೆಲಸ ಮಾಡುತ್ತಿದ್ದಾರೆ. ಐದು ಕೃತಿಗಳನ್ನು ರಚಿಸಿದ್ದಾರೆ. ಕಾವಿ, ಆವೆ, ಎಲ್ಲರಂಥವನಲ್ಲ ನನ ಗಂಡ, ಅಯಾಸ್, ಜಿಜ್ಞಾಸೆ.

ಚಿಕ್ಕವೀರಯ್ಯ, ವೀರಭದ್ರಯ್ಯ [ವೀ ಚಿ] 5.11.1930 ಇಂಟರ್ ಮೀಡಿಯೆಟ್‌ವರೆಗೆ ಶಿಕ್ಷಣ. 1956 ರಿಂದ ತುಮಕೂರು ಪುರಸಭಾ ಸದಸ್ಯರಾಗಿ ಸೇವೆ. 1971 ರಿಂದ ಎರಡು ವರ್ಷ ತುಮಕೂರು ಪುರಸಭಾಧ್ಯಕ್ಷರಾಗಿದ್ದರು. ಬೇಸಾಯದಲ್ಲಿ ಪರಿಶ್ರಮವಿದೆ. ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ವ್ಯವಹರಣೆಯಿದೆ. ಮುಖ್ಯಕೃತಿಗಳು: **ಪ್ರಣಯಚೈತ್ರ,** ವಿಷಾದ ನಕ್ಷೆ, ಸಂಕರ ತಳಿ, ಸಲ್ಲಾಪ. ವಿಳಾಸ: ಮಾಜಿ ಪುರ ಸಭಾಧ್ಯಕ್ಷ, ಚಿಕ್ಕವೀರಯ್ಯನ ಪಾಳ್ಯ, ತುಮಕೂರು.

ಚಿತ್ತಾಲ, ಗಂಗಾಧರ ವಿಠೋಬಾ [ಗಂಗಾಧರ ಚಿತ್ತಾಲ] 12.11.1923 ಹುಟ್ಟಿದ್ದು ಕಾರವಾರ ಜಿಲ್ಲೆಯ ಹನೇಹಟ್ಟಿಯಲ್ಲಿ. ಬಿ.ಎ. ಆನರ್ಸ್ ಹಾಗೂ ಅಕೌಂಟ್ಸ್‌ಸರ್ವಿಸ್ ಪರೀಕ್ಷೆಗಳಲ್ಲಿ ಉತ್ತೀರ್ಣ. ವಿದೇಶಗಳಲ್ಲಿ ಪ್ರವಾಸ (1955-68). ಮೂರು ಕೃತಿಗಳು: ಕಾಲದ ಕರೆ, ಮನುಕುಲದ ಹಾಡು, ಹರಿವ ನೀರಿದು.

ಚಿದಂಬರ ಕೃಷ್ಣ ರಾವ್ ದೀಕ್ಷಿತ [ಚಿದಂಬರ] 14.7.1922 ದೇವಿ ಹೊಸೂರು. ಕರ್ನಾಟಕ ಕಾಲೇಜಿನಲ್ಲಿ ಎಂ.ಎ., ಪದವಿ. ಮುಂಬೆಳಗು ಕವನಸಂಕಲನ, ಪುತ್ರೋತ್ಸವ ಸಣ್ಣ ಕತೆಗಳು. ಸೆರೆಯಾಳು ಇನ್ನೊಂದು ಕವನಸಂಕಲನ, ಈಗ ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ.

ಜಗದ್ಗುರು ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ನಿಡುಮಾಮಿಡಿ [ಜಚನಿ] 28.9.1911 1939 ರಲ್ಲಿ ಶ್ರೀಶೈಲ ನಿಡುಮಾಮಿಡಿ ಮಠಕ್ಕೆ ಅಧಿಕಾರಿಗಳಾದರು. ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಿಲಿಟ್ ಪ್ರಶಸ್ತಿ. 140 ಕೃತಿಗಳು: ಮಣಿಮಾಲೆ, ನಿರ್ವಚನ, ಚಾದಗೆ, ಮಿಡಿವಚನ, ಚನ್ನ ಚೇತನ ಇತ್ಯಾದಿ.

ಜಯದೇವಿ ತಾಯಿ ಲಿಗಾಡೆ [ಜಯಸಿದ್ಧರಾಮ] 23.6.1912 ಸೊಲ್ಲಾಪುರ ಮೆಟ್ರಿಕ್ ವರೆಗೆ ವಿದ್ಯಾಭ್ಯಾಸ. ಜಯಗೀತ, ತಾರಕ ತಂಬೂರಿ, ಸಿದ್ಧರಾಮ ಇತ್ಯಾದಿ 5 ಕೃತಿಗಳು.

ಜೋಳದರಾಶಿ ಕೆ ದೊಡ್ಡನಗೌಡ 27.2.1910 ಜೋಳದ ರಾಶಿ ತೆಲುಗು-ಕನ್ನಡ ಎರಡರಲ್ಲೂ ವ್ಯಾಸಂಗ. ವೃತ್ತಿ ವ್ಯವಸಾಯವಾದರೂ ಪ್ರವೃತ್ತಿ ಕಲೋಪಾಸನೆ. ನಾಟಕ, ಗಮಕ ಕಲೆಗಳಲ್ಲಿ ಅತೀವ ಆಸಕ್ತಿ. ಸುಮಾರು 30 ವರ್ಷಗಳಿಂದ ಗಮಕವಾಚನ ನಡೆಸು

ತ್ತಿದ್ದಾರೆ. 1943 ರಲ್ಲಿ 'ಗಮಕಕಲಾಪ್ರವೀಣ' ಎಂಬ ಬಿರುದು. ಮುಖ್ಯಕೃತಿಗಳು: ನಮ್ಮ ಹಂಪೆ, ರಸವರ್ಷ, ಬಯಲ ಗಳಿಕೆ, ರಾಮೇಶವಚನಗಳು ಇತ್ಯಾದಿ. ಇತ್ತೀಚಿನ ಕೃತಿ ಆತ್ಮಕಥನ ನಂದೇ ನಾನೋದಿದೆ.

ತಿಪ್ಪೇರುದ್ರಸ್ವಾಮಿ, ಎಚ್ 3. 2. 1928 ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ., ಪ್ರಥಮ ರ್‍ಯಾಂಕ್ (1952) ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪದವಿ (1962). ಹಾಸನದ ಕಾಲೇಜಿನಲ್ಲಿ ತರುವಾಯ ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಈಗ ಬಿ ಆರ್ ಪ್ರಾಜೆಕ್ಟ್‌ನಲ್ಲಿರುವ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಪರಿಪೂರ್ಣದೆಡೆಗೆ ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1959). ಕರ್ನಾಟಕ ಸಂಸ್ಕೃತಿ ಸಮೀಕ್ಷೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಇತರ ಮುಖ್ಯಕೃತಿಗಳು: ಕದಳಿಯ ಕರ್ಪೂರ, ಕರ್ತಾರನ ಕಮ್ಮಟ, ಶೂನ್ಯಸಂಪಾದನೆ ವಿವರಣಾತ್ಮಕ ಪರಿಚಯ, ಶರಣರ ಅನುಭಾವ ಸಾಹಿತ್ಯ ಇತ್ಯಾದಿ.

ದಿನಕರ ದೇಸಾಯಿ 10.9.1909 ಬೆಂಗಳೂರು ಮೈಸೂರುಗಳಲ್ಲಿ ಪದವಿ ಶಿಕ್ಷಣವನ್ನೂ ಮುಂಬಯಿಯಲ್ಲಿ ಸ್ನಾತಕೋತ್ತರ ಶಿಕ್ಷಣವನ್ನೂ ಪಡೆದರು. ಆಮೇಲೆ ಎಲ್. ಎಲ್. ಬಿ. ಪದವೀಧರರಾದರು. ಗೋಪಾಲಕೃಷ್ಣ ಗೋಖಲೆಯವರು ಸ್ಥಾಪಿಸಿದ 'ಭಾರತ ಸೇವಕ ಸಮಾಜ'ದಿಂದ ಆಕರ್ಷಿತರಾಗಿ ಅದರ ಸದಸ್ಯರೂ, ಮುಂಬಯಿ ಶಾಖೆಯ ಅಧ್ಯಕ್ಷರೂ ಆದರು. ಚುಟುಕಗಳನ್ನು ಬರೆದು ಪ್ರಕಟಿಸಿ 'ಚುಟುಕ ಕವಿ' ಎಂದೇ ಪ್ರಸಿದ್ಧರಾಗುವಷ್ಟು ಮಟ್ಟಿಗೆ ಜನಪ್ರಿಯರಾಗಿದ್ದಾರೆ. ಮುಖ್ಯಕೃತಿಗಳು: ಹೂಗೊಂಚಲು, ಮಕ್ಕಳ ಪದ್ಯಗಳು, ದಿನಕರನ ಚೌಪದಿ (1978) ನಾ ಕಂಡ ಪಡುವಣ ಇತ್ಯಾದಿ.

ದತ್ತಮೂರ್ತಿ ದೇಸಾಯಿ, [ದೇವದತ್ತ] 2.10.1912—1.9.1979 ಧಾರವಾಡ. ಕನ್ನಡ, ಮರಾಠಿ ಹಾಗೂ ಇಂಗ್ಲಿಷ್‌ನಲ್ಲಿ ವಿದ್ವಾಂಸರೆಂದು ಹೆಸರಾದವರು. ಹೂಬಳ್ಳಿ ಕವನ ಸಂಕಲನ ಮತ್ತು ಖಲೀಲ್ ಜಿಬ್ರಾನನ ಮಾನವಪುತ್ರ ಜೀಸಸ್, ಪ್ರವಾದಿಯ ತೋಟ ಮುಂತಾದುವುಗಳ ಅನುವಾದಕರು. ಅಲ್ಲದೆ ಬೇರೆ ಎರಡು ಕವನ ಸಂಗ್ರಹಗಳನ್ನೂ ಪ್ರಕಟಿಸಿದ್ದಾರೆ.

ದೇಸಾಯಿ, ಗೋವಿಂದಮೂರ್ತಿ 19.9.1926 ಹುಟ್ಟಿದ ಸ್ಥಳ ಧಾರವಾಡ ಜಿಲ್ಲೆಯ ಶಿರಹಟ್ಟಿ. ಬಿ.ಎ. ಆನರ್ಸ್ ಪದವಿ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಅಧಿಕಾರಿ. 6 ಕೃತಿಗಳು: ಶಿಲಾಮುಖ, ಸಂಸ್ಥಾನಿಕರು, ಬಾಪೂಜಿಯ ಬದುಕು ಇತ್ಯಾದಿ.

ಧೂಲಾ, ಪಿ [ಪಟೇಲ ಕಾಶೀಮಸಾಬ] 1901–1940 ಕನ್ನಡ ಮುಲಕೀ ಪರೀಕ್ಷೆಯಲ್ಲಿ ಪ್ರಾಸಂಗ. ಹಲಸಂಗಿಯ ಗೌಡಿಕೆ. 'ಜೀವನ ಸಂಗೀತ'ದ ಸಂಪಾದಕರಲ್ಲಿ ಒಬ್ಬರು. ಹಲಸಂಗಿಯ ಗೆಳೆಯರ ಬಳಗಕ್ಕೆ ಸೇರಿದವರು. ವೀರಪಥಿಕ ಇವರ ಕವಿತಾ ಸಂಗ್ರಹ.

ನರಸಿಂಹಸ್ವಾಮಿ, ಕೆ ಎಸ್ 26.1.1915 1933 ರಲ್ಲಿ ಇಂಟರ್‌ಮೀಡಿಯೆಟ್ ಪರೀಕ್ಷೆ (ಎಂಜಿನಿಯರಿಂಗ್)ಯಲ್ಲಿ ಉತ್ತೀರ್ಣರಾದರು. ಪ್ರಸಿದ್ಧ ಕವಿ. 'ಮೈಸೂರ ಮಲ್ಲಿಗೆ'ಗೆ ದೇವರಾಜ ಬಹದ್ದೂರ್ ಬಹುಮಾನ (1942), ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ

ಮಹೋತ್ಸವ ಪ್ರಶಸ್ತಿ (1970) ಸಂಭಾವನಾ ಗ್ರಂಥ 'ಚಂದನ' ಪ್ರಕಟಣೆ (1972), ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, (1973) ಕನ್ನಡ ರಾಜ್ಯೋತ್ಸವ ಪ್ರಶಸ್ತಿ (1972), 'ತೆರೆದ ಬಾಗಿಲು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1978) ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಯ ವಿಶೇಷ ಬಹುಮಾನ (1979)—ಈ ಪುರಸ್ಕಾರಗಳು ಸಂದಿವೆ. ಮುಖ್ಯ ಕೃತಿಗಳು: **ಮೈಸೂರ ಮಲ್ಲಿಗೆ,** ಇರುವಂತಿಗೆ, ಉಂಗುರ, ತೆರೆದ ಬಾಗಿಲು ಇತ್ಯಾದಿ.

ನರಸಿಂಹಾಚಾರ್, ಪುರೋಹಿತ ತಿರುನಾರಣಯ್ಯಂಗಾರ್ [ಪು ತಿ ನ] 1905 ಮೇಲುಕೋಟೆ. ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ., ಪದವೀಧರರು. ಖ್ಯಾತ ಕವಿ. ಇಂಗ್ಲಿಷ್ ಸಂಸ್ಕೃತ ಕನ್ನಡಗಳಲ್ಲಿ ಪಾಂಡಿತ್ಯವುಳ್ಳವರು. 25 ವರ್ಷ ಸೈನ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿದರು. ಅಲ್ಲಿಂದ ನಿವೃತ್ತರಾಗಿ ಮೂರುವರ್ಷ ಕನ್ನಡ ವಿಶ್ವಕೋಶ ವಿಭಾಗದಲ್ಲೂ ಐದುವರ್ಷ ಇಂಗ್ಲಿಷ್-ಕನ್ನಡ ನಿಘಂಟು ಪರಿಷ್ಕರಣದ ಸಂಪಾದಕರಾಗಿಯೂ ಕೆಲಸ ಮಾಡಿದರು. ಮುಖ್ಯಕೃತಿಗಳು: ಹಣತೆ, ಮಾಂದಳಿರು, ಗಣೇಶ ದರ್ಶನ, ಇರುಳ ಮೆರಗು ಇತ್ಯಾದಿ.

ನರೇಗಲ್ಲ, ಪ್ರಹ್ಲಾದ [ವತ್ಸ] 30.5.1907 ಹುಟ್ಟಿದ್ದು ಜಾವೂರು, ಧಾರವಾಡ ಜಿಲ್ಲೆ. ಎಂ.ಎ., ಬಿ.ಟಿ. ಪ್ರಾಧ್ಯಾಪಕ ಹಾಗೂ ಸಹ ಸಂಪಾದಕನಾಗಿ ನಿವೃತ್ತಿ. ಪ್ರಬಂಧ ಪುಷ್ಪಾಂಜಲಿ, ನಸುಕು, ಸಾವಿತ್ರಿ ಇತ್ಯಾದಿ 16 ಕೃತಿಗಳು.

ನಾಗಯ್ಯ, ಹಿ ಮ [ಹಿ ಮ ನಾ] 1924 ಹಿರೇ ಕುಂಬಳ ಗುಂಟೆ. ಪತ್ರಿಕೋದ್ಯಮಿ 'ವಿಶ್ವ ಕರ್ನಾಟಕದ' ಉಪಸಂಪಾದಕರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗುವ ಪಕ್ಷ ಪತ್ರಿಕೆ 'ಕನ್ನಡ ನುಡಿ'ಯ ಸಂಪಾದಕರಾಗಿದ್ದರು. ಈಗ ಬೆಂಗಳೂರಿನಲ್ಲಿದ್ದಾರೆ. ಮುಖ್ಯಕೃತಿಗಳು: ಬಳ್ಳಾರಿಯ ಬೆಳಗು, ಕಾಣಿಕೆ.

ನಾಗರಾಜರಾವ್, ಹ ವೆಂ. 1926 ಕೆಲಕಾಲ ಮೈಸಿಂಡಿಯಾ ಮತ್ತು ಜನಪ್ರಗತಿ ಪತ್ರಿಕೆಗಳಲ್ಲಿ ಕೆಲಸ ಮಾಡಿದ ನಂತರ 1953ರಿಂದ ಪ್ರಜಾಮತ ವಾರಪತ್ರಿಕೆಯ ಬಳಗದಲ್ಲಿದ್ದಾರೆ. ಈಗ ಅದರ ಮುಖ್ಯ ಸಂಪಾದಕರು. ಕವಿ, ಕತ್ತಲ ಬೆಳಕು ಕಥಾಸಂಗ್ರಹ, **ಐದುದೀಪದ ಕೆಂಬ** ಕವನ ಸಂಕಲನ. 1973ರಲ್ಲಿ ಸೋವಿಯತ್ ದೇಶಕ್ಕೂ, 1979ರಲ್ಲಿ ಪಶ್ಚಿಮ ಜರ್ಮನಿ ಮತ್ತು ಇಂಗ್ಲೆಂಡುಗಳಿಗೂ ಭೇಟಿ. ಇತರ ಕೃತಿಗಳು: ಸೃಜನಶೀಲ, ಶ್ರೀಪಾದರಾಜರು, ದಾದಾಭಾಯಿ ನವರೋಜಿ ಇತ್ಯಾದಿ. ವಿಳಾಸ: 310, ಸಾರಕ್ಕಿ ಲೇಔಟ್ ಮೂರನೆ ಹಂತ ಜಯಪ್ರಕಾಶನಗರ, ಬೆಂಗಳೂರು 560 069.

ನಾರಾಯಣಶೆಟ್ಟಿ, ಸು ಜ [ಸು ಜ ನಾ]: ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಎಂ.ಎ., ಪದವಿ ಪಡೆದು ಈಗ ಕನ್ನಡ ಪ್ರಾಧ್ಯಾಪಕರಾಗಿ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಸೇವೆಸಲ್ಲಿಸುತ್ತಿದ್ದಾರೆ. ಮುಖ್ಯಕೃತಿಗಳು: ಮಂಗಳಾರತಿ, ನಾಟ್ಯಯಾತ್ರೆ, ಸಹೃದಯ ಸ್ಪಂದನ ಇತ್ಯಾದಿ.

ನಿಸಾರ್ ಅಹಮದ್, ಕೆ ಎಸ್ 5.2.1936 ಹುಟ್ಟಿದ್ದು ದೇವನಹಳ್ಳಿ, ಬೆಂಗಳೂರು ಜಿಲ್ಲೆ. ಎಂ. ಎಸ್ ಸಿ. ಪದವಿ. ರೀಡರ್, ಗೌರ್ನಮೆಂಟ್ ಕಾಲೇಜ್, ಬೆಂಗಳೂರು. ನೆನೆದವರ ಮನದಲ್ಲಿ, ನಾನೆಂಬ ಪರಕೀಯ, ಸಂಜೆ ಐದರ ಮಳೆ ಇತ್ಯಾದಿ 10 ಕೃತಿಗಳು.

ಪಂಜೆ ಮಂಗೇಶರಾವ್ [ಕವಿ ಶಿಷ್ಯ] 22.2.1874—25.10.1937 ಬಂಟವಾಳ. ಬಿ.ಎ. ಎಲ್.ಟಿ., ಪದವೀಧರರು. ಕನ್ನಡ ಅಧ್ಯಾಪಕರಾಗಿ, ಶಾಲಾ ಇನ್ಸ್‌ಪೆಕ್ಟರ್ ಆಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಶ್ರಮಿಸಿ ಅನೇಕ ಸುಧಾರಣೆಗಳನ್ನು ತಂದರು. ಮಕ್ಕಳಿಗಾಗಿ ಹಲವು ಪದ್ಯಗಳು ಮತ್ತು ಕಥೆಗಳನ್ನೂ ಪಠ್ಯಪುಸ್ತಕಗಳನ್ನೂ ರಚಿಸಿದರು. 'ಬಾಲಸಾಹಿತ್ಯ ಮಂಡಲ'ವನ್ನು ಸ್ಥಾಪಿಸಿದರು. 1934ರಲ್ಲಿ ರಾಯಚೂರಿನಲ್ಲಿ ನಡೆದ 20ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಈಚೆಗೆ ಅವರ ಕೃತಿಗಳೆಲ್ಲ ಅಡಕವಾದ ಮೂರುಸಂಪುಟಗಳಲ್ಲಿ ಓರಿಯೆಂಟಲ್ ಲಾಂಗ್‌ಮನ್ಸ್ ಕಂಪೆನಿಯವರಿಂದ ಪ್ರಕಟವಾಗಿವೆ.

ಪರಮಶಿವಯ್ಯ, ಜೀ ಶಂ [ಜೀ ಶಂ ಪ] 12.11.1933. ಹುಟ್ಟೂರು ಜೀರಹಳ್ಳಿ, ಮಂಡ್ಯ ಜಿಲ್ಲೆ. ಎಂ.ಎ., ಪಿಎಚ್.ಡಿ. ಪದವೀಧರರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಪ್ರಾಧ್ಯಾಪಕರು. ಜೀವನಗೀತ, ಮಬ್ಬುಜಾರಿದ ಕಣಿವೆಯಲ್ಲಿ ಇತ್ಯಾದಿ 30 ಕೃತಿಗಳನ್ನು ರಚಿಸಿದ್ದಾರೆ.

ಪರಮೇಶ್ವರ ಭಟ್ಟ, ಸದಾಶಿವರಾವ್ ವಿದ್ಯಾರಣ್ಯಪುರ 8.2.1914 ಮಾಳೂರು. ಕನ್ನಡದಲ್ಲಿ ಎಂ.ಎ., ಪದವೀಧರರಾಗಿ ಕನ್ನಡ ಅಧ್ಯಾಪಕರಾಗಿ ಪ್ರಾಧ್ಯಾಪಕರಾಗಿ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಮಂಗಳ ಗಂಗೋತ್ರಿಯಲ್ಲಿ ನಿರ್ದೇಶಕರಾಗಿ ನಿವೃತ್ತರಾದರು (1974). ರಾಜ್ಯಸಾಹಿತ್ಯ ಅಕಾಡಮಿಯಿಂದ ಹಾಗೂ ಕೇಂದ್ರ ಸಾಹಿತ್ಯ ಅಕಾಡಮಿಯಿಂದ ಪುರಸ್ಕೃತರಾಗಿದ್ದಾರೆ. ಈಗ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಯು. ಜಿ. ಸಿ. ಅಧ್ಯಾಪಕರಾಗಿದ್ದಾರೆ. ವಚನ, ಸಾಂಗತ್ಯ, ಏಳೆ ಮೊದಲಾದ ಹಲವು ಪ್ರಕಾರಗಳಲ್ಲಿ ಕವಿತೆಗಳನ್ನು ರಚಿಸಿದ್ದಾರೆ. ಸಂಸ್ಕೃತದಿಂದ ಕಾಳಿದಾಸ, ಭಾಸರ ಸಮಗ್ರ ಕೃತಿಗಳನ್ನು ಅನುವಾದ ಮಾಡಿದ್ದಾರೆ. ಮುಖ್ಯಕೃತಿಗಳು : ಗಗನಚುಕ್ಕಿ, ಜಹನಾರಾ, ಪಾಮರ, ಕನ್ನಡ ಕಾಳಿದಾಸ ಮಹಾ ಸಂಪುಟ ಇತ್ಯಾದಿ. ವಿಳಾಸ : 'ಕಲ್ಪನಾ' ರಾಮಯ್ಯರ್ ರಸ್ತೆ ಮೈಸೂರು-4

ಪ್ರಭುಶಂಕರ 15.2.1929 ಚಾಮರಾಜನಗರ. ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ., ಹಾಗೂ ಪಿಎಚ್. ಡಿ., ಪದವಿಗಳನ್ನು ಪಡೆದರು. 1950 ರಿಂದ 1964ರ ವರೆಗೆ ಕನ್ನಡ ಅಧ್ಯಾಪಕರಾಗಿದ್ದರು. ಈಗ ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗದ ನಿರ್ದೇಶಕರಾಗಿಯೂ, ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ರೀಡರ್ ಆಗಿಯೂ ಸೇವೆಸಲ್ಲಿಸುತ್ತಿದ್ದಾರೆ. ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕನ್ನಡ ಪೀಠದ ಸಂದರ್ಶನ ಪ್ರಾಧ್ಯಾಪಕರಾಗಿದ್ದರು. ಅಮೆರಿಕಾ ದೇಶದ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಉಪನ್ಯಾಸ ಪ್ರವಾಸ ಮಾಡಿದರು. ಮುಖ್ಯ ಕೃತಿಗಳು : ಕನ್ನಡದಲ್ಲಿ ಭಾವಗೀತೆ, ಅಂಗುಲೀಮಾಲ, ಆಮ್ರಪಾಲಿ, ಖಲೀಲ್ ಗಿಬ್ರಾನ್, ಕಾವ್ಯಯೋಗ, ಅಮೆರಿಕದಲ್ಲಿ ನಾನು ಶಾಂತಿ, ನಿವೇದಿತಾ, ಜನ-ಮನ, ಚಿಂತೆ-ಚಿಂತನೆ ಇತ್ಯಾದಿ.

ಪಾಂಡೇಶ್ವರ, ಗಣಪತಿರಾವ್ 23.7.1908 ಬ್ರಹ್ಮಾವರ. ಇಂಟರ್‌ಮೀಡಿಯೆಟ್‌ವರೆಗೆ ಶಿಕ್ಷಣ. ವೀರಕೇಸರಿ ದಿನ ಪತ್ರಿಕೆ, ಲೋಕಮತ ದಿನಪತ್ರಿಕೆ, Unified Karnataka ವಾರ

ಪತ್ರಿಕೆಗೆ ಸಂಪಾದಕರಾಗಿದ್ದರು. ವಾಗ್ಭೂಷಣಕ್ಕೂ ಸಂಪಾದಕರಾಗಿದ್ದರು. ಕರ್ನಾಟಕ ಹರಿಜನ ಸೇವಕ ಸಂಘದ ಪ್ರಧಾನ ಕಾರ್ಯದರ್ಶಿ (1940-42). ಪ್ರಥಮ ಕರ್ನಾಟಕ ಯಕ್ಷಗಾನ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕೆಲಕಾಲ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ಕನ್ನಡ ವಿಭಾಗಕ್ಕೆ ಸಂಪಾದಕರಾಗಿದ್ದರು. ಪಿ ಆರ್ ರಾಮಯ್ಯ ಪ್ರಶಸ್ತಿ, ಮುಖ್ಯ ಕೃತಿಗಳು: ವಿವೇಕಾನಂದ ಚರಿತಂ, ಕೊಳಲು ಕೃಷ್ಣ, ಚೆಂಗಲನೆ, ಸುಪಂಥ, ಯಕ್ಷಗಾನ ಕಲಾಲೋಕ ಇತ್ಯಾದಿ. ವಿಳಾಸ: ಸಂಪಾದಕ, ನಾಗರಿಕ ಹೊನ್ನಾವರ ವಾರಪತ್ರಿಕೆ (ಉ. ಕ.).

ಪಾಟೀಲ, ಚಂದ್ರಶೇಖರ 18.6 39 ಹುಟ್ಟೂರು ಹತ್ತೀಮತ್ತೂರು, ಧಾರವಾಡ ಜಿಲ್ಲೆ. ಎಂ.ಎ., ಪದವಿ ಪಡೆದು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಅಧ್ಯಾಪಕರು, 'ಸಂಕ್ರಮಣ' ಪತ್ರಿಕೆಯ ಸಂಪಾದಕರು. ಬಾನುಲಿ, ಮಧ್ಯಬಿಂದು, ಕೊಡೆಗಳು ಇತ್ಯಾದಿ 10 ಕೃತಿಗಳು.

ಪುಟ್ಟಪ್ಪ, ಕುಪ್ಪಳಿ ವೆಂಕಟಪ್ಪ [ಕುವೆಂಪು] 29.12.1904 ಹುಟ್ಟಿದ್ದು ಹಿರೇಕೊಡುಗೆ ಶಿವಮೊಗ್ಗ ಜಿಲ್ಲೆ. ಕನ್ನಡ ಎಂ.ಎ., ಪದವಿ. ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನಿವೃತ್ತರಾದರು. ಖ್ಯಾತ ಕವಿಗಳು ಕಾದಂಬರಿಕಾರರು. ಶ್ರೀ ರಾಮಾಯಣದರ್ಶನಂ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಜ್ಞಾನ ಪೀಠ ಪ್ರಶಸ್ತಿ; ಪದ್ಮ ಭೂಷಣ ಪ್ರಶಸ್ತಿ. ರಾಷ್ಟ್ರಕವಿಯೆಂದು ಪುರಸ್ಕೃತರಾಗಿದ್ದಾರೆ. ಭಾರತೀಯ ಸಾಹಿತ್ಯ ಅಕಾಡೆಮಿಯ ಫೆಲೋ ಆಗಿದ್ದಾರೆ. ಚಿತ್ರಾಂಗದಾ, ಕೊಳಲು, ನವಿಲು, ಪಾಂಚಜನ್ಯ, ನಿರಂಕುಶಮತಿಗಳಾಗಿ, ರಸೋ ವೈ ಸಃ, ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು ಇತ್ಯಾದಿ 75 ಕೃತಿಗಳನ್ನು ಪ್ರಕಟಿಸಿದ್ದಾರೆ. ವಿಳಾಸ: ಉದಯರವಿ, ವಾಣೀವಿಲಾಸಪುರಂ, ಮೈಸೂರು 570 002.

ಪುಣೇಕರ, ಶಂಕರ ಮೊಕಾಶಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ರೀಡರ್ ಆಗಿದ್ದಾರೆ. ಸುಪ್ರಸಿದ್ಧ ಕವಿ ಮತ್ತು ವಿಮರ್ಶಕ. ಇವರ ಕಾದಂಬರಿ 'ಗಂಗವ್ವ ಗಂಗಾಮಾಯಿ'ಯನ್ನು ಭಾರತದ ಇತರ ಭಾಷೆಗಳಿಗೆ ಅನುವಾದ ಮಾಡಿಸಿ ಪ್ರಕಟಿಸಲು ನ್ಯಾಷನಲ್ ಬುಕ್‌ಟ್ರಸ್ಟ್ ಆಯ್ಕೆ ಮಾಡಿದೆ.

ಪುಟ್ಟರಾಮು, ಎ. ಕೆ. ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದರು.

ಪೂರ್ಣಚಂದ್ರ ತೇಜಸ್ವಿ, ಕುಪ್ಪಳಿ ಪುಟ್ಟಪ್ಪ [ಪೂಚಂತೇ] ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಎಂ.ಎ., ಪದವಿ ಪಡೆದರು (1961). ಕವಿ, ಸಣ್ಣಕತೆಗಾರರು. ಬೇಸಾಯ ಪ್ರಧಾನವೃತ್ತಿ. ಬೇಟೆ, ಛಾಯಾಚಿತ್ರಗ್ರಹಣ ಪ್ರಧಾನ ಆಸಕ್ತಿಗಳಾಗಿವೆ. ಬೃಹನ್ನಳೆ ಸೋಮುವಿನ ಸ್ವಗತಲಹರಿ, ಯಮಳ ಪ್ರಶ್ನೆ ಇತ್ಯಾದಿ ಕೃತಿಗಳು. ವಿಳಾಸ: ಶೈಲಶಾಯಿ ಮೂಡಿಗೆರೆ ಅಂಚೆ, ಚಿಕ್ಕಮಗಳೂರು ತಾಲೂಕು.

ಪೇಜಾವರ ಸದಾಶಿವರಾಯರು 8.3.1913-18.10.1939 ಬನಾರಸ್ ಹಿಂದೂ ವಿಶ್ವ ವಿದ್ಯಾನಿಲಯದಲ್ಲಿ ಎಂಜನಿಯರಿಂಗ್ ಪ್ರೌಢ ಶಿಕ್ಷಣ ಪಡೆದು ಶಿಲ್ಪ ಶಾಸ್ತ್ರ ಅಧ್ಯಯನಕ್ಕಾಗಿ ಇಟಲಿಗೆ ಹೋದರು, ಅಲ್ಲಿ ಪಿಎಚ್.ಡಿ. ವ್ಯಾಸಂಗ ಮಾಡುತ್ತಿದ್ದಾಗಲೆ ತೀರಿಕೊಂಡರು. ಮರಣೋತ್ತರ ಪ್ರಕಟಣೆ ತರುಣ (ಕವನ ಸಂಕಲನ) ಇನ್ನೊಂದು ಸಂಪಾದಿತ ಕೃತಿ ಅಲರು.

ಬಿಳಿಗಿರಿ, ಎಚ್ ಎಸ್ 1925 ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ., ಪದವಿ ಪಡೆದು ನಂತರ ಪುಣೆ ವಿಶ್ವವಿದ್ಯಾನಿಲಯದಿಂದ ಭಾಷಾವಿಜ್ಞಾನದಲ್ಲಿ ಪಿಎಚ್.ಡಿ. ಪದವೀಧರ ರಾದರು. ಬರ್ಕ್ಲಿಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ವಿಶೇಷ ಶಿಕ್ಷಣ ಪಡೆದರು. ಉತ್ತಮ ಕವಿತೆಗಾಗಿ ರಜತಮಹೋತ್ಸವ ಸ್ವರ್ಣಪದಕ ಪಡೆದರು. ಮುಖ್ಯಕೃತಿಗಳು : **ನಂದನ,** ನಾಯಿಕೊಡೆ, ಆಲೋಕ ಇತ್ಯಾದಿ. ವಿಳಾಸ : ಪ್ರಾಧ್ಯಾಪಕರು ಮತ್ತು ವಿಭಾಗ ಮುಖ್ಯರು, ಭಾಷಾವಿಜ್ಞಾನ ವಿಭಾಗ, ಮುಂಬಯಿ ವಿಶ್ವವಿದ್ಯಾನಿಲಯ ಮುಂಬಯಿ-32.

ಬೆಟಗೇರಿ ಕೃಷ್ಣಶರ್ಮ [ಆನಂದಕಂದ] 16.4.1900 ಬೆಟಗೇರಿ. ಸ್ವತಂತ್ರ ಅಭ್ಯಾಸ ದಿಂದ ಶಿಕ್ಷಣ ಪಡೆದರು. 'ಜಯಂತಿ' ಮಾಸಪತ್ರಿಕೆಗೆ 24 ವರ್ಷ ಸತತವಾಗಿ ಸಂಪಾದಕ ರಾಗಿದ್ದರು. ಕರ್ನಾಟಕ ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿ ನೀಡಿದೆ (1972). ಕಾದಂಬರಿಗಳು, ಸಣ್ಣ ಕತೆಗಳು, ಕವನ ಸಂಕಲನಗಳು, ಸಂಪಾದನೆಗಳು, ನಾಟಕ ಗಳು, ಸಾಹಿತ್ಯ ಸಂಸ್ಕೃತಿಗಳನ್ನು ಕುರಿತ ಬರಹಗಳ ರಚನೆ. 47 ಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ. ರಾಜಯೋಗಿ, ಮಲ್ಲಿಕಾರ್ಜುನ (ಕಾದಂಬರಿಗಳು), ಬಡತನದ ಬಾಳು, ನಮ್ಮ ಬದುಕು, ಕಳ್ಳರ ಗುರು (ಸಣ್ಣಕತೆ), **ಮುದ್ದಿನ ಮಾತು,** ಅರುಣೋದಯ, **ಒಡನಾಡಿ,** (ಕಾವ್ಯ), ಬೆಳವಡಿಮಲ್ಲಮ್ಮ, ಪಂಚಗಂಗಾ (ರೂಪಕ), ಕರ್ನಾಟಕ ಜನಜೀವನ ಇತ್ಯಾದಿ ಕೃತಿಗಳು. ವಿಳಾಸ : 195 ಮಾಳಮಡ್ಡಿ, ಧಾರವಾಡ 580 007.

ಬೆಳಗೆರೆ ಕೃಷ್ಣಶಾಸ್ತ್ರೀ ಇವರ ಕವಿತಾ ಸಂಕಲನ ತುಂಬಿ.

ಬೇಂದ್ರೆ, ದ ರಾ [ಅಂಬಿಕಾತನಯದತ್ತ] 31.1.1896 ಧಾರವಾಡ. 1935 ರಲ್ಲಿ ಎಂ.ಎ., ಪದವಿಗಳಿಸಿದ ಬೇಂದ್ರೆಯವರನ್ನು ಮೈಸೂರು (1966) ಹಾಗೂ ಕರ್ನಾಟಕ (1968) ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿವೆ. 'ಅರಳುಮರುಳು' ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ (1958). ಪದ್ಮಶ್ರೀ ಪ್ರಶಸ್ತಿ (1968). ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋ ಆಗಿದ್ದಾರೆ. 'ನಾಕುತಂತಿ' ಕವನ ಸಂಗ್ರಹಕ್ಕೆ ಭಾರತೀಯ ಜ್ಞಾನಪೀಠ ಪುರಸ್ಕಾರ (1974) ದೊರೆತಿದೆ. ಸುಪ್ರಸಿದ್ಧ ಕವಿಯೂ, ನಾಟಕಕಾರರೂ ಆದ ಬೇಂದ್ರೆಯವರ ಮುಖ್ಯಕೃತಿಗಳು ಐವತ್ತನ್ನೂ ಮೀರಿವೆ. ನಾದಲೀಲೆ, ಗರಿ, ಸಖಿಗೀತ, ಗಂಗಾವತರಣ, ಸೂರ್ಯಪಾನ, ನಾಕುತಂತಿ, ಮರ್ಯಾದೆ ಇತ್ಯಾದಿ. ಚತುರೋಕ್ತಿ ಮತ್ತು ಇತರ ಕವನಗಳು ಈಚಿನಕೃತಿ (1978). ಈಗಿನ ವಿಳಾಸ 13, ಶ್ರೀಮಾತಾ, ಸಾಧನಕೇರಿ ಧಾರವಾಡ. 580 008.

ಭಟ್ಟ, ವಿ ಜಿ ಮುಂಬಯಿ ವಿಶ್ವವಿದ್ಯಾನಿಲಯದಿಂದ ಎಂ. ಎ., ಪದವಿ ಪಡೆದು (1947) ಈಗ ಮುಂಬಯಿಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ನಿರ್ದೇಶಕರಾಗಿದ್ದಾರೆ.

ಒಂಬತ್ತು ಕವಿತಾ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಚುಟುಕಗಳು, ಕಾವ್ಯವೇದನೆ, ಕಿಷ್ಕಿಂಧೆ ಇತ್ಯಾದಿ.

ಮರುಳಸಿದ್ಧಯ್ಯ, ಎಚ್ ಎಂ ಮೈಸೂರು ವಿಶ್ವವಿದ್ಯಾನಿಲಯದಿಂದ ಸಮಾಜಶಾಸ್ತ್ರದಲ್ಲಿ ಎಂ ಎ., ಪದವೀಧರರಾದರು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಮಾಜಸೇವಾ ವಿಭಾಗ ದಲ್ಲಿ ಕೆಲಸಮಾಡುತ್ತಿದ್ದಾರೆ.

ಮಹೀಶವಾಡಿ, ಭುಜೇಂದ್ರ ಬನಪ್ಪ [ಭುಜೇಂದ್ರ, ಭುಜಬಲಿ] ಬೆಳಗಾವಿಯ ಲಿಂಗರಾಜ ಕಾಲೇಜಿನಿಂದ ಬಿ.ಎ. ಆನರ್ಸ್ ಪದವಿ (1954) ಪಡೆದು ಆಮೇಲೆ ಬಿ.ಎಡ್ ಪದವಿ ಗಳಿಸಿದರು. ಪುಣೆ ವಿಶ್ವವಿದ್ಯಾನಿಲಯದಿಂದ ಎಂ.ಎ., ಪದವಿ (1957) ಪಡೆದರು. ಈಗ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದಲ್ಲಿ ಜೈನವಿಭಾಗದಲ್ಲಿ ರೀಡರ್ ಆಗಿದ್ದಾರೆ. ಅದಕ್ಕಿಂತ ಮುಂಚೆ 15 ವರ್ಷಗಳ ಕಾಲ ಬೆಳಗಾಂ, ಗದಗು ಮುಂತಾದ ಕಡೆ ಕನ್ನಡ ಅಧ್ಯಾಪಕರಾಗಿದ್ದರು. ಮುಖ್ಯಕೃತಿಗಳು : **ಮಾಯಾಮಂದಿರ,** ಹಾಲು ಹಣ್ಣು, ಬೆರಕೇಮಂದಿ, ಪ್ರಬಂಧ ಶ್ರೀಗಂಧ, ಇತ್ಯಾದಿ 22 ಕೃತಿಗಳು.

ಮಾಸ್ತಿ ವೆಂಕಟೇಶ ಅಯ್ಯಂಗಾರ್ [ಶ್ರೀನಿವಾಸ] 6.6.1891 ಮಾಸ್ತಿ, ಕೋಲಾರಜಿಲ್ಲೆ. ಸೆಂಟ್ರಲ್ ಕಾಲೇಜು ಅನಂತರ ಮದ್ರಾಸ್ ವಿಶ್ವವಿದ್ಯಾನಿಲಯಗಳಿಂದ ಎಂ.ಎ., ಪದವಿ. ಸರ್ಕಾರದಲ್ಲಿ ಡೆಪ್ಯೂಟಿಕಮಿಷನರ್, ರೆವಿನ್ಯೂ ಕಮಿಷನರ್ ಆಗಿ ಕೆಲಸ. ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರು, ಸಮ್ಮೇಳನದ ಬೆಳಗಾಂವಿ ಅಧಿವೇಶನದ ಅಧ್ಯಕ್ಷರು (1937) ಸಣ್ಣಕತೆಗಾರರೆಂದೇ ಪ್ರಸಿದ್ಧಿ. 14 ಸಂಪುಟಗಳಲ್ಲಿ ಸಣ್ಣಕತೆಗಳು, ಸುಬ್ಬಣ್ಣ (ನೀಳ್ಗತೆ) ಚೆನ್ನಬಸವನಾಯಕ (ಕಾದಂಬರಿ) ಯಶೋಧರಾ, ಕಾಕನಕೋಟೆ (ನಾಟಕ), ನವರಾತ್ರಿ 10 ಸಂಪುಟಗಳ ಕಥನಕವನ, ರವೀಂದ್ರನಾಥಠಾಕೂರ್, ಆದಿಕವಿ ವಾಲ್ಮೀಕಿ (ವಿಮರ್ಶಾ ಕೃತಿ) ಸಣ್ಣಕತೆಗೆ ಕೇಂದ್ರ ಸಾಹಿತ್ಯ ಅಕೆಡಮಿಯ ಬಹುಮಾನ.

ಮುಗಳಿ, ರಂಗನಾಥ ಶ್ರೀನಿವಾಸ [ರಸಿಕ ರಂಗ] 15.7.1906 ಹೊಳೆ ಆಲೂರು. ಧಾರವಾಡದ ಕರ್ನಾಟಕ ಕಾಲೇಜು, ಸಾಂಗ್ಲಿಯ ವಿಲಿಂಗ್ಡನ್ ಕಾಲೇಜುಗಳಲ್ಲಿ ಶಿಕ್ಷಣ. ಎಂ.ಎ., ಡಿ. ಲಿಟ್ ಪದವಿ. ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರು. ಕನ್ನಡ ಸಾಹಿತ್ಯ ಚರಿತ್ರೆ, ಬಾಸಿಗ, ಓಂ ಅಶಾಂತಿ, ಕಾರಣಪುರುಷ ಇತ್ಯಾದಿ ಕೃತಿಗಳು. ವಿಳಾಸ : ಕಮಲಾಲಯ, ರಾಜಾಜಿನಗರ 1 ನೇ ಬ್ಲಾಕ್ ಬೆಂಗಳೂರು-10.

ಯಮರ್ಕುಂಜ ರಾಮಚಂದ್ರ 9.2.1933—10.1.1955 ಕ ಬ ಕ. ಮುಖ್ಯಕೃತಿಗಳು : ವಿದಾಯ ಮತ್ತು ಚಿಕಿತ್ಸೆಯ ಹುಚ್ಚು ಮತ್ತು ಇತರ ಕತೆಗಳು.

ಯಲ್ಲಟ್ಟಿ, ಬ ಗಿ, ಬನಹಟ್ಟಿ. ಕನ್ನಡದಲ್ಲಿ ಎಂ.ಎ., ಪದವಿ ಪಡೆದು ರಬಕವಿಯ ಪ್ರೌಢಶಾಲೆಯಲ್ಲೂ ಶ್ರೀ ಶರಣಬಸವೇಶ್ವರ ಆರ್ಟ್ಸ್ ಕಾಲೇಜಿನಲ್ಲಿಯೂ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತ ರಾಗಿದ್ದಾರೆ. ಈಗ ಗುಲ್ಬರ್ಗದ ಶ್ರೀ ಶರಣಬಸವೇಶ್ವರ ರೆಸಿಡೆನ್ಸಿಯಲ್ ಶಾಲೆಯಲ್ಲಿ ಗೌರವ ಶಿಕ್ಷಕರಾಗಿದ್ದಾರೆ. ಮುಖ್ಯಕೃತಿಗಳು : **ನನ್ನ ಹಾಡು,** ರಸಿಕ ಪಕ್ಷಿ, ಅಗ್ನಿದೀಕ್ಷೆ ಇತ್ಯಾದಿ.

ರಘುರಾಮರಾವ್ ಬೈಕಂಪಾಡಿ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ., ಪದವೀಧರರಾಗಿ ಈಗ ಕುಂದಾಪುರದ ಭಂಡಾರ್ಕರ್ಸ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದಾರೆ. ಕವಿತಾ ಸಂಕಲನ: ನನ್ನ ಪಯಣ.

ರಾಜಗೋಪಾಲ, ಕ ವೆಂ ಬೆಂಗಳೂರಿನ ಎಂ ಇ ಎಸ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರು ಮತ್ತು ವಿಭಾಗ ಮುಖ್ಯರು. ಮುಖ್ಯಕೃತಿಗಳು: ನದಿಯ ಮೇಲಿನ ಗಾಳಿ, ಅಂಜೂರ.

ರಾಜರತ್ನಂ, ಗುಂಡ್ಲು ಪಂಡಿತ 1909-1979 ಮೈಸೂರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ವಿಜ್ಞಾನದಲ್ಲಿ ಬಿ.ಎ. ಪದವೀಧರರಾಗಿ ಆ ಮೇಲೆ ಮೈಸೂರು ಮಹಾರಾಜಾ ಕಾಲೇಜಿನಿಂದ ಕನ್ನಡ ಎಂ.ಎ., ಪದವಿ ಗಳಿಸಿದರು (1931). ಮೈಸೂರು ವಿಶ್ವವಿದ್ಯಾನಿಲಯ ದಲ್ಲಿ ಗೌರವ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. 250 ಕ್ಕಿಂತಲೂ ಹೆಚ್ಚು ಬಗೆಬಗೆಯ ಪುಸ್ತಕಗಳನ್ನು ಪ್ರಕಟಿಸಿದರು. ಶ್ರೇಷ್ಠ ವಾಗ್ಮಿ, ಕವಿ, ವಿಮರ್ಶಕರು. ದೆಹಲಿಯಲ್ಲಿ ನಡೆದ ಅಖಿಲ ಭಾರತ 50 ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ರಾಜ್ಯಸಾಹಿತ್ಯ ಅಕಾಡೆಮಿಯ ಬಹುಮಾನ (1969) ರಾಜ್ಯೋತ್ಸವ ಪ್ರಶಸ್ತಿ (1970)ಗಳನ್ನು ಪಡೆದರು. ರತ್ನನ ಪದಗಳು, ನಾಗನ ಪದಗಳು, ಕಂದನ ಕಾವ್ಯಮಾಲೆ ಅವರ ಮುಖ್ಯ ಕವಿತಾ ಸಂಕಲನಗಳು.

ರಾಜಶೇಖರಯ್ಯ, ಟಿ ಆರ್ [ರಾಜಶೇಖರ] ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ ಎ., (1946) ನಾಗಪುರ ವಿಶ್ವವಿದ್ಯಾನಿಲಯದಿಂದ ಎಂ.ಎ., (1956) ಪದವೀಧರರಾಗಿದ್ದಾರೆ. 1946 ರಿಂದ 1958 ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಅಧ್ಯಾಪಕ ರಾಗಿದ್ದು, ಈಗ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರೂ ವಿಭಾಗ ಮುಖ್ಯರೂ ಆಗಿದ್ದಾರೆ. ಸ್ವಪ್ನಮಂಗಳ ಮತ್ತು ಇತರ ಕತೆಗಳು ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1961). ರುದ್ರಾಕ್ಷಿ ಇವರ ಕವಿತಾ ಸಂಕಲನ.

ರಾಮಚಂದ್ರ ಇವರ ಕವಿತಾ ಸಂಕಲನ ಬಿದ್ದಗಂ.

ರಾಮಚಂದ್ರಶರ್ಮ, ಬಿ ಸಿ 28.11.1975 ಬೆಂಗಳೂರಿನಲ್ಲಿ ಜನನ. 1946 ಬಿ. ಎಸ್ ಸಿ ಪದವಿ. ಹೃದಯಗೀತ ಏಳುಸುತ್ತಿನ ಕೋಟೆ ಕವನ ಸಂಕಲನಗಳು. ಸೆರಗಿನ ಕೆಂಡ ಬಾನುಲಿನಾಟಕ ಅಖಿಲ ಭಾರತ ಬಾನುಲಿ ನಾಟಕ ಸ್ಪರ್ಧೆಯಲ್ಲಿ ಮೊದಲ ಬಹುಮಾನಗಳಿಸಿತು (1957) ಏಳನೆಯ ಜೀವ ಸಣ್ಣಕತೆಗಳು. ನೈಜೀರಿಯಾದಲ್ಲಿ ವಿದ್ಯಾಭ್ಯಾಸದ ಅಧಿಕಾರಿಯಾಗಿದ್ದಾರೆ.

ರಾಮರಾವ್, ಎಂ ಇಂಗ್ಲಿಷ್ ಎಂ.ಎ., ಮತ್ತು ಬಿ.ಟಿ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿಯೂ ಇಂಗ್ಲಿಷ್-ಕನ್ನಡ ನಿಘಂಟು ಪರಿಷ್ಕರಣದ ಪ್ರಧಾನ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದರು. ಮುಖ್ಯಕೃತಿಗಳು : ಸೈಲಾಸ್‌ಮಾರ್ನರ್, ಪಾದಯಾತ್ರೆ, ನಮ್ಮ ಅರಣ್ಯಯಾತ್ರೆ, ನನ್ನ ಕನಸಿನ ದೋಣಿ, ಹರಪಾರ್ವತಿ ಇತ್ಯಾದಿ.

ರಾಮೇಗೌಡ [ರಾಗೌ] 3.4.1942 ಕನ್ನಡ ಎಂ.ಎ., ಪದವಿ. ಮಾನಸಗಂಗೋತ್ರಿಯಲ್ಲಿ ಅಧ್ಯಾಪಕರಾಗಿದ್ದಾರೆ. ಯಾತ್ರೆ, ರಾಘವಾಂಕ, ಅವಗಾಹನ ಇತ್ಯಾದಿ 20 ಕೃತಿಗಳು.

ಲಂಕೇಶ, ಪಾಳೇಗಾರ 8.3.1935 ಹುಟ್ಟಿದ್ದು ಕೊನಗವಳ್ಳಿ, ಶಿವಮೊಗ್ಗ ಜಿಲ್ಲೆ. ಇಂಗ್ಲಿಷ್ ಎಂ.ಎ., (1959). 16 ಕೃತಿಗಳು. ಬಿರುಕು, ಪ್ರಸ್ತುತ, ಅಕ್ಷರ ಹೊಸಕಾವ್ಯ, ಇತ್ಯಾದಿ.

ಲೂಯಿಸ್, ಯೋಹಾನ ಶ್ರೀಮಂತ 23.2.1921 ಹುಟ್ಟುಸ್ಥಳ ಕೋಲಾರ. ಬನಾರಸ್ ವಿಶ್ವವಿದ್ಯಾನಿಲಯದಿಂದ ರಸಾಯನ ಶಾಸ್ತ್ರದಲ್ಲಿ ಎಂ. ಎಸ್‌ಸಿ. ಪದವಿ. ಷಿಕಾಗೋದಲ್ಲಿ ಎಂ. ಎಸ್. ಪದವಿ (1950). ಮೈಸೂರು ವಿಶ್ವವಿದ್ಯಾನಿಲಯದ ಪಿಎಚ್.ಡಿ. (1970). ಈಗ ಮೈಸೂರಿನಲ್ಲಿ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ವಿಜ್ಞಾನಿ. ಗಾನಲಹರಿ, ಸುಗಂಧ ದ್ರವ್ಯಗಳು ಇತ್ಯಾದಿ. 4 ಕೃತಿಗಳು.

ವಜ್ರಮಟ್ಟಿ, ಪಾಂಡಪ್ಪ ವೆಂಕಪ್ಪ [ಮೇಘಮಿತ್ರ] 11.3.1936 ಎಂ.ಎ., ಸಾಹಿತ್ಯ ರತ್ನ ಪದವೀಧರರು. ಕನ್ನಡ ಹಾಗೂ ಹಿಂದಿ ಭಾಷಾ ಸಾಹಿತ್ಯಗಳಲ್ಲಿ ವಿದ್ವಾಂಸರು. ಜಮಖಂಡಿಯ ಕಲೆ ಹಾಗೂ ವಿಜ್ಞಾನ ಕಾಲೇಜಿನಲ್ಲಿ ರೀಡರ್ ಆಗಿದ್ದಾರೆ. ಅನುಭವ ಮಂಟಪ ಹಾಗೂ ಸಹಕಾರ ಸಂಜೀವಿನಿ ಎಂಬ ಪತ್ರಿಕೆಗಳ ಸಂಪಾದಕರಾಗಿ ಅನುಭವ ಪಡೆದಿದ್ದಾರೆ. ನಾಟಕ ನಿರ್ದೇಶನ ಹಾಗೂ ವರ್ಣಚಿತ್ರ ಸಂಗ್ರಹಗಳಲ್ಲಿ ಆಸಕ್ತಿ ಹೊಂದಿದ್ದಾರೆ. ಮುಖ್ಯಕೃತಿಗಳು: **ಅಗ್ನಿತುಷಾರ,** ಮಣ್ಣುಮಲ್ಲಿಗೆ, ಹಕ್ಕಿನೊಡೆಯರ ಹಾಡು ಇತ್ಯಾದಿ.

ವಸುದೇವ ಭೂಪಾಳಂ 1.1.1926 ಶಿವಮೊಗ್ಗ ಮಹಾರಾಜಾ ಕಾಲೇಜಿನಲ್ಲಿ 1945ರಲ್ಲಿ ಬಿ.ಎ., 1948ರಲ್ಲಿ ಎಂ.ಎ., ಅನಂತರ ಪುಸ್ತಕ ಪ್ರಕಟಣೆ ಮತ್ತು ವ್ಯಾಪಾರದಲ್ಲಿ ತೊಡಗಿದ್ದರು. ರಂಜನೆ (ಕವನ ಸಂಕಲನ) ಮತ್ತು ಆಂದೋಳನ (ಕಾದಂಬರಿ) ಗೊಂಚಲುಮಿಂಚು (ವ್ಯಕ್ತಿಚಿತ್ರ) ಮಕ್ಕಳಿಗಾಗಿ ಭೂಗೋಳದ ಪಾಠಗಳು. ವಿಳಾಸ: ವಸುದೇವ ಭೂಪಾಳಂ C/o ಭೂಪಾಳಂ ಚಂದ್ರಶೇಖರಯ್ಯ, ಶಿವಮೊಗ್ಗ.

ವರದರಾಜರಾವ್, ಗುಂಡಮರಾಜು 3.1.1918 ಬೆಂಗಳೂರು. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಎಂ.ಎ., ಹಾಗೂ ಪಿಎಚ್.ಡಿ. ಪದವಿಗಳನ್ನು ಪಡೆದರು. ಕನ್ನಡ ಅಧ್ಯಾಪಕರಾಗಿದ್ದು ಮಾನಸಗಂಗೋತ್ರಿ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿಯೂ, ಹರಿದಾಸ ಸಾಹಿತ್ಯ ಸಂಶೋಧನೆಯ ಮುಖ್ಯಸ್ಥರಾಗಿಯೂ ಕೆಲಸಮಾಡಿದರು. ಈಗ ಯು ಜಿ ಸಿ ಅಧ್ಯಾಪಕರಾಗಿದ್ದಾರೆ. ಓಬವ್ವೆ ಕೃತಿಗೆ ಚಿನ್ನದ ಪದಕ. ತೋರಣ, ಶ್ರೀ ಪುರಂದರದಾಸರು ಮತ್ತು ಅವರ ಕೀರ್ತನೆಗಳು ಮುಂತಾದುವು ಅವರ ಕೃತಿಗಳು.

ವಿನೀತ ರಾಮಚಂದ್ರರಾಯ 29.1.1905 ಪ್ರಥಮ ಶ್ರೇಣಿಯಲ್ಲಿ ಪ್ರೌಢಶಾಲಾ ಶಿಕ್ಷಣ. ಧಾರವಾಡದ ಕರ್ನಾಟಕ ಆರ್ಟ್ಸ್ ಕಾಲೇಜಿನಲ್ಲಿ ಪದವಿ ಶಿಕ್ಷಣ. ತತ್ವಶಾಸ್ತ್ರ, ಕಾವ್ಯ, ಸಂಸ್ಕೃತಿಗಳಲ್ಲಿ ಆಸಕ್ತಿ, ಅಭಿರುಚಿ. ಗೆಳೆಯರ ಗುಂಪಿನ ಸದಸ್ಯರಾಗಿ, ದ. ರಾ. ಬೇಂದ್ರೆಯವರ ಮುಂದಾಳತ್ವದಲ್ಲಿ ಪರಿಚಯವಾದ ಜಯ ಕರ್ನಾಟಕದ ಸಂಪಾದಕರಾಗಿ 13 ವರ್ಷ ಸೇವೆ. ಒಂದು ವರ್ಷ ಸ್ವಧರ್ಮ ಎಂಬ ಹೊಸ ಪತ್ರಿಕೆಯ ಸಂಪಾದನೆ. ಕರ್ನಾಟಕ

ಏಕೀಕರಣ ಚಳುವಳಿಯಲ್ಲಿ ಪ್ರಧಾನ ಪಾತ್ರ. 1955 ರಲ್ಲಿ ಪ್ರದೀಪ ಮಾಸ ಪತ್ರಿಕೆಯ ಸ್ಥಾಪನೆ. ಆಧ್ಯಾತ್ಮ, ಧರ್ಮ, ಸಂಸ್ಕೃತಿಗಳ ಪ್ರಸಾರಕ್ಕಾಗಿ ಉದ್ದೇಶಿತವಾದ ಈ ಪತ್ರಿಕೆಗೆ ಈಗಲೂ ಸಂಪಾದಕರು. ಕೃತಿಗಳು : ಪ್ರತಿಭಾ, ಪ್ರಜ್ಞಾ, ಶ್ರುತಾಶ್ರುತ ಇತ್ಯಾದಿ.

ವಿರೂಪಾಕ್ಷಗೌಡ, ಕೆ 1.7.1935 ಬಾಚಿಗೊಂಡನಹಳ್ಳಿ. ಕರ್ನಾಟಕ ವಿಶ್ವವಿದ್ಯಾನಿಲಯದ ಕಾಮರ್ಸ್ ಪದವೀಧರರು (1958). ಕವಿ, ಸಾಹಿತಿ, ಜಾನಪದ ಸಂಕಲನಗಳ ಸಂಪಾದಕರು. ಬಳ್ಳಾರಿ ಜಿಲ್ಲೆಯ ಸಾಹಿತ್ಯಕ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ಇವರದು. ಮುಖ್ಯ ಕೃತಿಗಳು : ಸುಗ್ಗಿಯ ಕಣ, ಆಕಾಶಮಲ್ಲಿಗೆ, ದರ್ಶನ ಇತ್ಯಾದಿ. ವಿಳಾಸ : ಬಾಚಿ ಗೊಂಡನಹಳ್ಳಿ ಅಂಚೆ, ಹಗರಿ ಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ವೆಂಕಟರಾಜ. ಎಸ್ 24.6.1914 ಉಡುಪಿ. ಮದರಾಸು ವಿಶ್ವವಿದ್ಯಾನಿಲಯದಿಂದ ಸಂಸ್ಕೃತ ಹಾಗೂ ಕನ್ನಡದಲ್ಲಿ ವಿದ್ವಾನ್ ಪದವಿ. ಮಂಗಳೂರು, ಉಡುಪಿ, ಕುಂದಾಪುರಗಳಲ್ಲಿ ಶಾಲಾಧ್ಯಾಪಕರು. ಮುಖ್ಯಕೃತಿಗಳು : ವೀರಭೂಮಿ, ಕವಿತಾಕಾಮಿನಿ, ಆಕಾಶಗಂಗೆ ಇತ್ಯಾದಿ.

ಶಾಂತರಸ 1926 ಎಂ.ಎ., ಬಿ.ಎಡ್. ಪದವಿ ಪಡೆದು ಈಗ ರಾಯಚೂರಿನ ಜಿ.ಎಂ.ಎ. ಜ್ಯೂನಿಯರ್ ಕಾಲೇಜಿನಲ್ಲಿ ಪ್ರಾಚಾರ್ಯರಾಗಿದ್ದಾರೆ. ಕವಿ, ಪ್ರಬಂಧಕಾರರು ಮತ್ತು ವಿಮರ್ಶಕರು. ಸತ್ಯಸ್ನೇಹಿ ನಾಟಕಕ್ಕೆ ರಾಜ್ಯ ಸರಕಾರ ಪ್ರಶಸ್ತಿ (1962). ಉರ್ದು ಭಾಷೆ ಯಿಂದ ಅನುವಾದಗಳನ್ನು ಮಾಡಿದ್ದಾರೆ. ಮುಖ್ಯಕೃತಿಗಳು : ಮುಸುಕುತೆರೆ, ನಂಜು-ನೊರೆ ವಾಲು, ಸತ್ಯಸ್ನೇಹಿ, ಮಾನಸಗಳ್ಳಿ, ತೋರಣ ಹರಿಯಲಿಲ್ಲ, ಬಹುರೂಪ ಇತ್ಯಾದಿ.

ಶಾಮಸುಂದರ ಬಿದರಕುಂದಿ 18.5.1947 ಹುಬ್ಬಳ್ಳಿ. ಕರ್ನಾಟಕ ವಿಶ್ವವಿದ್ಯಾನಿಲಯ ದಿಂದ ಎಂ.ಎ., ಪದವಿ. ಪ್ರಸ್ತುತ ಗದುಗಿನ ಆದರ್ಶ ಶಿಕ್ಷಣ ಸಮಿತಿ ಕಾಮರ್ಸ್ ಕಾಲೇಜಿನಲ್ಲಿ ಕನ್ನಡ ಭಾಷೆ-ಸಾಹಿತ್ಯದ ಅಧ್ಯಾಪಕ. ಮುಖ್ಯಕೃತಿಗಳು : ಅಜ್ಞಗಾನಲು, ಅಲ್ಲಮಪ್ರಭುವಾದ ಮತ್ತು ಇತರ ಪದ್ಯಗಳು.

ಶಾಸ್ತ್ರಿ, ಎಂ ಆರ್ ಮದರಾಸು ವಿಶ್ವವಿದ್ಯಾನಿಲಯದಿಂದ ಎಂ.ಎ., ಬಿ.ಟಿ., ಮತ್ತು ಕನ್ನಡ, ಮತ್ತು ಸಂಸ್ಕೃತ ವಿದ್ವಾನ್ ಪದವಿಗಳನ್ನು ಪಡೆದರು. ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ (1951-1957) ಸೇವೆಸಲ್ಲಿಸಿದರು. ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲರಾಗಿ ನಿವೃತ್ತರಾಗಿದ್ದಾರೆ. ಮುಖ್ಯಕೃತಿಗಳು : ಭಾರತ ಗೀತೆ, ಮಿಲನ ಇತ್ಯಾದಿ. ವಿಳಾಸ : 937, ಜೋಸೆಫ್ ನಗರ ಶಿವಮೊಗ್ಗ, 577 201.

ಶಾಸ್ತ್ರೀ ಲ ನ [ಜಾನಕೀತನಯ] ಇಂಟರ್‌ಮೀಡಿಯೆಟ್ ಶಿಕ್ಷಣ. ಈಗ ಮೈಸೂರಿನಲ್ಲಿ ಪೋಸ್ಟ್‌ಮಾಸ್ಟರ್ ಆಗಿ ಕೆಲಸಮಾಡುತ್ತಿದ್ದಾರೆ. ಆಳಸಿಂಗ ಪೆರುಮಾಳ್ ಎಂಬ ಪುಸ್ತಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಬಹುಮಾನ. ಮುಖ್ಯಕೃತಿಗಳು : ಪೂರ್ವರಾಗ, ತುಂಗೆಯ ಮಡಿಲ ತಪಸ್ವಿ, ಸಂತ ಶ್ರೀ ರಾಮಾನುಜ, ಸಂಭಾಷಣ ತರಂಗಿಣಿ, ಶ್ರೀ ಜಗದ್ಗುರು ಇತ್ಯಾದಿ 25 ಕೃತಿಗಳು. ವಿಳಾಸ : 30, ದೇವೀರಮ್ಮಣ್ಣಿ ಅಗ್ರಹಾರ, ಮೈಸೂರು 570 004.

ಶಿವಪ್ಪ, ಕೆ ಎಸ್ [ಶಿವಪ್ಪ] ಎಂ.ಎ., ಬಿ.ಇಡಿ. ಈಗ ಮೈಸೂರಿನ ಮಹಾರಾಣಿ ಆರ್ಟ್ಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು. ಎರಡು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಏಕಾಂತ ಮತ್ತು ಉತ್ತರಧ್ರುವ.

ಶಿವರುದ್ರಪ್ಪ, ಗುಗ್ಗರಿ ಶಾಂತವೀರಪ್ಪ. 7.2.1926 ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ., ಹಾಗೂ ಪಿಎಚ್.ಡಿ. ಪದವಿ ಪಡೆದರು. ಕನ್ನಡ ಅಧ್ಯಾಪಕರಾಗಿದ್ದು ಈಗ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರೂ, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರೂ ಆಗಿದ್ದಾರೆ. ಖ್ಯಾತ ಕವಿ ಮತ್ತು ವಿಮರ್ಶಕರು. ಮುಖ್ಯಕೃತಿಗಳು : ಸೌಂದರ್ಯ ಸಮೀಕ್ಷೆ, ಕರ್ಮಯೋಗಿ, ಸಾಮಗಾನ, ಚೆಲುವು ಒಲವು, ಕಾರ್ತೀಕ, ದೀಪದ ಹೆಜ್ಜೆ ಇತ್ಯಾದಿ.

ಶಿವೇಶ್ವರ ದೊಡ್ಡಮನಿ 7.5.1915—26.3.1950 ಹೈಸ್ಕೂಲು ವಿದ್ಯಾಭ್ಯಾಸ. ಕೆಲವು ದಿನ ಬ್ಯಾಂಕಿನಲ್ಲಿ ಗುಮಾಸ್ತರಾಗಿದ್ದರು. ನವಿಲೂರ ಮನೆಯಿಂದ ಇವರ ಕವಿತಾ ಸಂಕಲನ (ಮರಣೋತ್ತರ ಪ್ರಕಟನೆ).

ಶ್ರೀಕಂಠಯ್ಯ, ತೀರ್ಥಪುರ ನಂಜುಂಡಯ್ಯ [ತೀ ನಂ ಶ್ರೀ] 26.11.1906—7.9.1966 ಜನನ ತೀರ್ಥಪುರದಲ್ಲಿ. ಇಂಗ್ಲಿಷ್ ಮತ್ತು ಕನ್ನಡಗಳಲ್ಲಿ ಎಂ.ಎ., ಪ್ರಥಮ ಸ್ಥಾನ. ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದು 1962 ರಲ್ಲಿ ನಿವೃತ್ತರಾದರು. ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಸಂದರ್ಶಕ ಪ್ರಾಧ್ಯಾಪಕರೂ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಮಿತಿಯ ಅಧ್ಯಕ್ಷರೂ ಆಗಿದ್ದರು. 1955-56 ರಲ್ಲಿ ರಾಕಿಫೆಲರ್ ಪ್ರತಿಷ್ಠಾನದ ಗೌರವ ವೇತನದ ಮೇರೆಗೆ ಅಮೆರಿಕಾ ಇಂಗ್ಲೆಂಡ್ ಮತ್ತಿತರ ಪಶ್ಚಿಮದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಭಾಷಾಶಾಸ್ತ್ರದ ಉನ್ನತ ವ್ಯಾಸಂಗ ಪ್ರವಾಸ ಮಾಡಿದ್ದರು. ಆಚಾರ್ಯ ಕೃತಿ ಭಾರತೀಯ ಕಾವ್ಯಮೀಮಾಂಸೆ (1953). **ಒಲುಮೆ,** ಕನ್ನಡ ಮಧ್ಯಮ ವ್ಯಾಕರಣ, ರಾಕ್ಷಸನ ಮುದ್ರಿಕೆ, ಕಾವ್ಯ ಸಮೀಕ್ಷೆ, ಸಮಾಲೋಕನ, ನಂಟರು ಇತ್ಯಾದಿ ಇತರ ಕೃತಿಗಳು.

ಶ್ರೀಧರ ಖಾನೋಳ್ಕರ [ಶ್ರೀಧರ] 1896. 1919ರಲ್ಲಿ ಬಿ.ಎ. ಪದವಿ ಪಡೆದು ಧಾರವಾಡದ ರಾಷ್ಟ್ರೀಯ ಶಾಲೆಯಲ್ಲಿ ಅಧ್ಯಾಪಕರಾಗಿದ್ದರು. 1941 ರಲ್ಲಿ ನಿವೃತ್ತರಾದರು. ಮುಖ್ಯ ಕೃತಿಗಳು : ನೌಕಾ ಕ್ರೀಡನ, ಸಮರ ಸನ್ಯಾಸ ಮತ್ತು ಹೂಗಂಪು.

ಶ್ರೀಧರ, ಬವಲಾಡಿ ಹೆಬ್ಬಾರ 5.3.1911 ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಸ್ಕೃತದಲ್ಲಿ ಎಂ.ಎ., ಪದವಿ ಪಡೆದು ಕುಮಟಾದ ಕೆನರಾ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದರು. ಸಿದ್ಧಾಪುರದ ಕಾಲೇಜಿನ ಪ್ರಿನ್ಸಿಪಾಲರಾಗಿದ್ದು ನಿವೃತ್ತರಾದರು. ಈಗ ಕುಮಟಾದಲ್ಲಿ ವಾಸವಾಗಿದ್ದಾರೆ. ಮುಖ್ಯಕೃತಿಗಳು ಮೇಘನಾದ, ಹೊಸಗನ್ನಡ ಸಾಹಿತ್ಯ ಶೈಲಿ, ಮಂಜುಗೀತ ಇತ್ಯಾದಿ.

ಶ್ರೀನಿವಾಸಮೂರ್ತಿ, ಎಂ ಆರ್ [ಎಂ ಆರ್ ಶ್ರೀ] 28.8.1892–16.9.1953 1915 ರಲ್ಲಿ ಬಿ.ಎ., ಪದವಿ ಪಡೆದು ಶಿಕ್ಷಣ ಇಲಾಖೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದರು. 1947 ರಲ್ಲಿ ಜಿಲ್ಲಾ ವಿದ್ಯಾಧಿಕಾರಿಯಾಗಿ ನಿವೃತ್ತರಾದರು. ಮೈಸೂರು ವಿಶ್ವ ವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟಿನ ಸಹ ಸಂಪಾದಕರಾಗಿ ಆಮೇಲೆ ಮುಖ್ಯ ಸಂಪಾದಕರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. 1950 ರಲ್ಲಿ ಸೊಲ್ಲಾಪುರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಮುಖ್ಯ ಕೃತಿಗಳು : ರಂಗಣ್ಣನ ಕನಸಿನ ದಿನಗಳು, ನಾಗರಿಕ, ಧರ್ಮದುರಂತ, ಕವಿಯಸೋಲು, ಭಕ್ತಿ ಭಂಡಾರಿ ಬಸವಣ್ಣನವರು, ಮಹಾತ್ಯಾಗ ಇತ್ಯಾದಿ.

ಸಂಗಮೇಶ ಹೊಸಮನಿ: ಎಸ್‌ಎಸ್‌ಎಲ್‌ಸಿ ಹಾಗೂ ಕನ್ನಡ ಜಾಣ ಪರೀಕ್ಷೆಗಳಲ್ಲಿ ತೇರ್ಗಡೆ. ಗಾಂಧೀ ಗೀತೆಗಳು ಎಂಬ ಕವನ ಸಂಕಲನಕ್ಕೆ ರಾಜ್ಯ ಪ್ರಶಸ್ತಿ. ಪ್ರೈಮರಿ ಶಾಲಾ ಶಿಕ್ಷಕರಾಗಿ ಕೆಲಸ ಮಾಡಿ ಈಗ ನಿವೃತ್ತರು. ವ್ಯವಸಾಯ ವೃತ್ತಿ. ಇತರ ಮುಖ್ಯಕೃತಿಗಳು: **ನೊಗ್ಗುನೂಲೆ,** ಹೂವು ಹಣ್ಣು, ಬೋಲ ಬೊಗರಿ ಸಂಗಮನಾಥನ ವಚನಗಳು, ವಚನ ತೀರ್ಥ ಇತ್ಯಾದಿ. ವಿಳಾಸ: ಎಸ್ ಬಿ ಹೊಸಮನಿ, ರಾಮವಾಡಗಿ, ಹುನಗುಂದ ತಾಲ್ಲೂಕು, ಬಿಜಾಪುರ ಜಿಲ್ಲೆ.

ಸಣಕಲ್ಲ, ಈಶ್ವರ ಮಹಾರುದ್ರಪ್ಪ [ಈಶ್ವರ ಸಣಕಲ್ಲ] 20.12.1906 ಯಾದವಾಡದಲ್ಲಿ ಜನನ. ಕೊಲ್ಲಾಪುರದ ರಾಜರಾಮ ಕಾಲೇಜಿನ ಎಫ್. ವೈ. ಪರೀಕ್ಷೆ. ಪತ್ರಿಕಾವ್ಯವಸಾಯ. 15 ಕ್ಕೂ ಹೆಚ್ಚು ಕೃತಿಗಳು, ಕೋರಿಕೆ, ಬಟ್ಟೆ ಇತ್ಯಾದಿ.

ಸನದಿ, ಬಿ ಎ 18.8.1933 ಬೆಳಗಾವಿ ಜಿಲ್ಲೆಯ ಸಿಂದೊಳ್ಳಿಯಲ್ಲಿ ಜನನ. ಶಿವಾಜಿ ವಿಶ್ವ ವಿದ್ಯಾನಿಲಯದಿಂದ ಕನ್ನಡ ಮತ್ತು ಸಂಸ್ಕೃತಗಳಲ್ಲಿ ಎಂ.ಎ., ಪದವಿ (1972). ಭಾರತ ಸರಕಾರದ ವಾರ್ತಾ ಮತ್ತು ಪ್ರಸಾರ ಇಲಾಖೆಯಲ್ಲಿ ಸೇವೆ. 20 ಕೃತಿಗಳು. ತಾಜಮಹಲು, ನೆಲಸಂಪಿಗೆ ಇತ್ಯಾದಿ.

ಸಿಂಪಿ ಲಿಂಗಣ್ಣ 11.2.1905 ವಿಜಾಪುರ ಜಿಲ್ಲೆಯ ಚಡಚಣದಲ್ಲಿ ಜನನ. ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು. ವಯಸ್ಕರ ಶಿಕ್ಷಣದ ಸ್ಪೆಷಲ್ ಆಫೀಸರ್ ಆಗಿಯೂ ಸೇವೆ. ‘ಆದರ್ಶಶಿಕ್ಷಕ’ ಪುರಸ್ಕಾರ. 70 ಕೃತಿಗಳು.

ಸಿದ್ದಣ್ಣ ಮಸ 6.4.1927 ಎಂ.ಎ., ಪದವೀಧರರಾಗಿ ಸೌಂದತ್ತಿಯ ಎಸ್. ಕೆ. ಜ್ಯೂನಿಯರ್ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದಾರೆ. ಮನೆ ತುಂಬಿದ ಬೆಳಕು ಕವನ ಸಂಕಲನಕ್ಕೆ ರಾಜ್ಯ ಸರಕಾರದ ಬಹುಮಾನ (1957) ದೊರೆತಿದೆ. ಮುಖ್ಯಕೃತಿಗಳು : **ದೀಪಾವಹಾರ,** ಮನೆತುಂಬಿದ ಬೆಳಕು.

ಸಿದ್ಧಲಿಂಗ ಪಟ್ಟಣಶೆಟ್ಟಿ, 26.5.1939 ಹುಟ್ಟಿದ್ದು ಯಾದವಾಡ, ಧಾರವಾಡ ಜಿಲ್ಲೆ. ಎಂ.ಎ., ಪದವಿ. ರೀಡರ್, ಕರ್ನಾಟಕ ಕಾಲೇಜು ಧಾರವಾಡ. ಸೀನಾ, ಭಾರತಿ, ಔರಂಗಜೇಬ ಇತ್ಯಾದಿ 15 ಕೃತಿಗಳು.

ಸೀತಾರಾಮಯ್ಯ, ವೇಂಕಟರಾಮಯ್ಯ [ವಿ ಸೀ] 2.10.1899 ಬೆಂಗಳೂರು ಜಿಲ್ಲೆ ಬೂದಿಗೆರೆಯಲ್ಲಿ ಜನನ. ಅರ್ಥಶಾಸ್ತ್ರ ರಾಜ್ಯಶಾಸ್ತ್ರಗಳಲ್ಲಿ ಎಂ.ಎ., ಪದವಿ. (1952). ಅಧ್ಯಾಪಕರಾಗಿ, ಆಕಾಶವಾಣಿಯ ಕಾರ್ಯಕ್ರಮನಿಯೋಜಕರಾಗಿ, ಆಮೇಲೆ ಹೊನ್ನಾವರ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅರಲು ಬರಲು ಕವಿತಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಮುಖ್ಯಕೃತಿಗಳು : ನೆಳಲು-ಬೆಳಕು, ದ್ರಾಕ್ಷಿದಾಳಿಂಬೆ, ಗೀತಗಳು, ಪಂಪಮಹಾಕವಿ ಇತ್ಯಾದಿ. ವಿಳಾಸ : 1, ಎರಡನೆ ಮೇನ್, ಚಾಮರಾಜಪೇಟೆ, ಬೆಂಗಳೂರು 18.

ಸುಬ್ಬಣ್ಣ ಕೆ ವಿ 24.1.1932 ಮುಂಡಿಗೆಸರ, ಶಿವಮೊಗ್ಗ ಜಿಲ್ಲೆ, ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕನ್ನಡದಲ್ಲಿ ಬಿ.ಎ. (ಆನರ್ಸ್) ಹೂವು ಚೆಲ್ಲಿದ ಹಾದಿಯಲ್ಲಿ, ಅವರು ನೀಡಿದ ದೀಪ, ಚಲನಚಿತ್ರ ಮಹಾನೌಕೆ (ಅನುವಾದ) ಮುಖ್ಯಕೃತಿಗಳು : ಹೆಗ್ಗೋಡಿನಲ್ಲಿ ಶಿವರಾಮಕಾರಂತ ರಂಗಮಂಟಪದ ವ್ಯವಸ್ಥಾಪಕರು.

ಸುಮತೀಂದ್ರ ನಾಡಿಗ. 4.5.1935 ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ., ಪದವಿ ಪಡೆದು ಆಮೇಲೆ ಅಮೆರಿಕದ ಒಂದು ವಿಶ್ವವಿದ್ಯಾನಿಲಯದ ಎಂ.ಎ., ಪದವೀಧರರಾದರು. (1979). ಗೋವಾದಲ್ಲಿ ಮಾಪ್ಸಾದ ಸೇಂಟ್ ಕ್ಸೇವಿಯರ್ಸ್ ಕಾಲೇಜಿನಲ್ಲಿ ಆರು ವರ್ಷ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಪಂಜಿಂನಲ್ಲಿರುವ ಮುಂಬಯಿ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಈಗ ಪುಸ್ತಕೋದ್ಯಮದಲ್ಲಿ ನಿರತರು. ಬಾಪ್ಕೊ ಪ್ರಕಾಶನದಲ್ಲಿ ಅಧಿಕಾರಿಯಾಗಿದ್ದಾರೆ. ಮುಖ್ಯಕೃತಿಗಳು : ನಿಮ್ಮ ಪ್ರೇಮಕುಮಾರಿಯ ಜಾತಕ, ಕಪ್ಪುದೇವತೆ, ಅಡಿಗರ ಕಾವ್ಯ, ಸಾಹಸ, ಇತ್ಯಾದಿ. ವಿಳಾಸ : ಕರ್ನಾಟಕ ಬುಕ್‌ಹೌಸ್, 18, ಗಾಂಧಿ ಬಜಾರ್, ಬೆಂಗಳೂರು.

ಸುಮಿತ್ರ, ಎಲ್ ಜಿ ಆಕಾಶವಾಣಿಯಲ್ಲಿ ಕೆಲಸಮಾಡುತ್ತಿದ್ದಾರೆ. ಕಾವ್ಯ-ಕಾವೇರಿ ಇವರ ಕವಿತಾ ಸಂಕಲನ.

ಹಕಾರಿ ದೇವೇಂದ್ರಕುಮಾರ ಸಿದ್ದಪ್ಪ [ರವಿ] 1931 ಚಿಕ್ಕೋನಕೊಪ್ಪ ಉಸ್ಮಾನಿಯಾ ವಿಶ್ವವಿದ್ಯಾನಿಲಯದಿಂದ ಎಂ.ಎ., ಪದವಿ ಪಡೆದರು (1954). ಆಮೇಲೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ., ಪದವಿ (1979) ಗಳಿಸಿ ಅಲ್ಲೇ ಕನ್ನಡ ಅಧ್ಯಯನ ಪೀಠದಲ್ಲಿ ಅಧ್ಯಾಪಕರಾಗಿದ್ದಾರೆ. ಕೂಗುತಿವೆ ಕಲ್ಲು ಕಾದಂಬರಿಗಾಗಿ ರಾಜ್ಯ ಸರಕಾರದ ಪುರಸ್ಕಾರ ದೊರೆತಿದೆ (1961). ಮುಖ್ಯಕೃತಿಗಳು : **ಚಿನ್ಮಯಿ,** ಆಚೆಈಚೆ, ಚೆಲ್ವ ಕೋಗಿಲೆ, ಸಾಹಿತ್ಯಸಮ್ಮುಖ, ಇತ್ಯಾದಿ 20 ಕೃತಿಗಳು.

ಹೆಗಡೆ, ಎಲ್ ಆರ್ 2.1.1923 ಸಾಂಗ್ಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಬಿ.ಎ., ಪದವಿ ಪಡೆದರು. ಮುಂಬಯಿ ಹಾಗೂ ಪೂನಾ ವಿಶ್ವವಿದ್ಯಾನಿಲಯಗಳಿಂದ ಸಂಸ್ಕೃತ ಹಾಗೂ ಕನ್ನಡಗಳಲ್ಲಿ ಎಂ.ಎ., ಪದವೀಧರರಾದರು. ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪದವಿ (1968). ಹತ್ತು ಜನಪದ ಸಾಹಿತ್ಯ ಸಂಕಲನಗಳನ್ನು ಪ್ರಕಟಿಸಿದ್ದಾರೆ. ತಿಮ್ಮಕ್ಕನ ಪದಗಳು, ಗೊಂಡರ ಪದಗಳು, ಗುಮಟೆಯ ಪದಗಳು ಇತ್ಯಾದಿ ಒಟ್ಟು 30 ಗ್ರಂಥಗಳನ್ನು ಪ್ರಕಟಿಸಿದ್ದಾರೆ. ವಿಳಾಸ : ಹೆಗಡೆ ಅಂಚೆ, ಉ.ಕ. 581 330.

ಕೆಲವು ಮಹತ್ವದ ಪ್ರಕಟಣೆಗಳು

1. ಯುಗಯಾತ್ರೀ ಭಾರತೀಯ ಸಂಸ್ಕೃತಿ (ಮೂರು ಸಂಪುಟಗಳು)

2. ತೋಟಗಾರಿಕೆ (ಎರಡು ಸಂಪುಟಗಳು)

3. ಕನ್ನಡ ಛಂದಸ್ಸಿನ ಚರಿತ್ರೆ (ಎರಡು ಸಂಪುಟಗಳಲ್ಲಿ)

4. ಕನ್ನಡ ಸಾಹಿತ್ಯ ಚರಿತ್ರೆ (ನಾಲ್ಕನೆಯ ಸಂಪುಟ ಪ್ರಕಟವಾಗಿದೆ)

5. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು

6. ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ

7. ಸಾಹಿತ್ಯಾಲೋಕ—ಎಂ ಆರ್ ಶ್ರೀನಿವಾಸಮೂರ್ತಿ

8. ಕನ್ನಡ ಗ್ರಂಥಸೂಚಿ—6ನೆಯ ಸಂಪುಟ: ಬಾಲಸಾಹಿತ್ಯ.

ಪ್ರತಿಗಳಿಗೆ
ನಿರ್ದೇಶಕರು, ಪ್ರಸಾರಾಂಗ
ಮೈಸೂರು
570 012

'ಗೋಲ್ಡನ್ ಟ್ರೆಜರಿ' ಎಂದರೆ ಚಿನ್ನದ ಭಂಡಾರ. ನಿಜವಾಗಿಯೂ ಇಂಗ್ಲಿಷ್ ಭಾಷೆಯಲ್ಲಿ ರಚಿತವಾಗಿರುವ ಶ್ರೇಷ್ಠವಾದ ಅನೇಕ ಕವನಗಳನ್ನು ಒಳಗೊಂಡ ಚಿನ್ನದ ಸಂಪುಟ ಅದು. ಆ ಸಂಪುಟದಲ್ಲಿ 280 ಕವನಗಳಿವೆ.

ಅನಾಮಧೇಯರೂ, ಅಪ್ರಸಿದ್ಧರೂ ಆದ ಕವಿಗಳಿಂದ ಮೊದಲುಗೊಂಡು ಸುಪ್ರಸಿದ್ಧರಾದ ಕವಿಗಳ ಕವನಗಳ ಪೈಕಿ ತಮಗೆ ಉತ್ತಮವೆಂದು ತೋರಿದ ಕವನಗಳನ್ನು ಪಾಲ್‌ಗ್ರೇವ್ ಆರಿಸಿ ಇಲ್ಲಿ ಸಂಕಲಿಸಿದ್ದಾರೆ.

ಈ ಶತಮಾನದಲ್ಲಿ ರಚಿತವಾದ ಕವನಗಳ ಸುಗ್ಗಿಯನ್ನು ಕಂಡು ಹೆಮ್ಮೆಯನ್ನೂ ಸಂತೋಷವನ್ನೂ ಪಡುತ್ತಿರುವ ಅನೇಕ ರಸಾಸ್ವಾದಕರ ಹೆಬ್ಬಯಕೆ ಕನ್ನಡದಲ್ಲಿ ಇಂಥದೊಂದು 'ಚಿನ್ನದ ಸಂಪುಟವನ್ನು' ಕಾಣಬೇಕು ಎನ್ನುವುದು. ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ನೆನಪಿಗಾಗಿ ಪ್ರಸಾರಾಂಗವು 1966ನೆಯ ಇಸವಿಯಲ್ಲಿ ಇಂಥದೊಂದು ಯೋಜನೆಯನ್ನು ರೂಪಿಸಿತು. ಆಧುನಿಕ ಕನ್ನಡ ಸಾಹಿತ್ಯ, ಅದರಲ್ಲೂ ಕಾವ್ಯ ಉತ್ಕರ್ಷವನ್ನು ಮುಟ್ಟುವುದರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ವಹಿಸಿದ ಪಾತ್ರವು ಅತ್ಯಂತ ಮಹತ್ವದ್ದು. ಆದ್ದರಿಂದ ಈ ವಿಶ್ವವಿದ್ಯಾನಿಲಯದ ಐವತ್ತನೆಯ ಹುಟ್ಟುಹಬ್ಬದ ಹೊತ್ತಿಗೆ ಇಂಥದೊಂದು ಯೋಜನೆಯನ್ನು ಕೈಗೊಂಡದ್ದು ತುಂಬ ಉಚಿತವಾಗಿದೆ, ಅರ್ಥವತ್ತಾಗಿದೆ.

119 ಜನ ಕವಿಗಳ ಒಟ್ಟು 361 ಕವನಗಳು ಇಲ್ಲಿ ಸೇರಿವೆ. ಸಂಪಾದಕರ ತಿಳುವಳಿಕೆಗೆ ಬಂದಂತೆ ಸುಮಾರಾಗಿ ಕನ್ನಡದ ಎಲ್ಲಾ ಕವಿಗಳಿಗೂ ಪ್ರಾತಿನಿಧ್ಯ ದೊರಕುವಂತೆ ನೋಡಿಕೊಳ್ಳಲಾಗಿದೆ.

ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ